ಮುಂದೆ ನಡೆಯಲಿಕ್ಕಿರುವ ಭಾರತರಾಜ್ಯಾಂಗ ಸಂಸ್ಕರಣದಲ್ಲಿ ದೇಶೀಯ ಸಂಸ್ಥಾನಗಳಿಗಿರಬೇಕಾದ ಸಂಬಂಧ ಸ್ಥಾನಗೌರವ ಇತ್ಯಾದಿ ವಿಷಯಗಳನ್ನು ಪ್ರತ್ಯಕ್ಷವಾಗಿ ಕೇಳಿ ತಿಳಿದುಕೊಂಡು ನಿರ್ಧರಿಸುವುದಕ್ಕಾಗಿ ಏರ್ಪಟ್ಟಿರುವ ಇಂಡಿಯನ್ ಸ್ಟೇಟ್ಸ್ ಎನ್ಕ್ವೈರಿ ಕಮಿಟಿಯ ಅಧ್ಯಕ್ಷರೂ ಸದಸ್ಯರೂ ರಾಜಧಾನಿಗೆ ಬಂದಿರುವುದರಿಂದ ಸಮಯೋಚಿತ ಪ್ರಶ್ನೆಯಾಗಿ ಬಂದಿರುವ ಈ ಕಮಿಟಿಯವರ ಮನಸ್ಸಿಗೆ ಹಿಡಿಸುವಂತೆ ನಮ್ಮ ಪ್ರಭುತ್ವದವರು ತಮ್ಮ ಪಕ್ಷವನ್ನು ನಿವೇದಿಸುವರೆಂದು ನಾವು ನಂಬುತ್ತೇವೆ. ಪೊಗದಿಯನ್ನು ಮತ್ತು ಬೆಂಗಳೂರು ದಂಡು ಪ್ರದೇಶವನ್ನು ಹಿಂತಿರುಗಿಸುವ ವಿಷಯಗಳು ಪ್ರಕೃತದಲ್ಲಿ [illegible] ಮುಖ್ಯವಾಗಿವೆ. ಈ ಸಮಸ್ಯೆಗಳು [illegible] ಬಹಳ [illegible] ಸರ್ ಎಂ ಮಿರ್ಜಾಯವರು ದಿವಾನರಾದ ಮೇಲೆ ಬಗೆಹರಿಸುವ ಪ್ರಯತ್ನವು ಮುಂದುವರಿಯಿತು. ಅವರ ಪ್ರಯತ್ನದ ಪ್ರಥಮ ಫಲವಾಗಿ ಪೊಗದಿಯಲ್ಲಿ ೧೦½ ಲಕ್ಷ ರೂಪಾಯಿಗಳು ವೈಸ್‌ರಾಯರಾಗಿದ್ದ ಲಾರ್ಡ್ ಅರ್ವಿನ್‌ರವರಿಂದ ಮನ್ನಿಸಲ್ಪಟ್ಟಿತು. ಹೀಗೆ ಮನ್ನಿಸಲ್ಪಟ್ಟದ್ದು ನ್ಯಾಯದೃಷ್ಟಿಯಿಂದಲೇ ಅಲ್ಲದೆ ದಕ್ಷತೆಯಿಂದಲೂ, ಸಾಮರ್ಥ್ಯದಿಂದಲೂ ರಾಜ್ಯಭಾರವು ನಿರ್ವಹಿಸಲ್ಪಡುತ್ತಿರುವುದರ ಮೆಚ್ಚುಗೆಯಿಂದ ಸಹ ಮಾಡಲ್ಪಟ್ಟದ್ದಾಗಿರುತ್ತದೆ. ಅಲ್ಲಿಂದೀಚೆಗೆ ಕಾಲಪರಿಸ್ಥಿತಿಯು ಬಹಳ ಮಟ್ಟಿಗೆ ವ್ಯತ್ಯಾಸವಾಗಿರುವುದು. ಭಾರತರಾಜ್ಯಾಂಗ ಸುಧಾರಣೆಯಲ್ಲಿ ಯಾವುದಾದರೊಂದು ಫೆಡರೇಷನ್ನೊಂದೇ ಗತ್ಯಂತರವೆಂದು ಸೈಮನ್‌ವರದಿಯಲ್ಲಿ ಭವಿಷ್ಯ ಹೇಳಲ್ಪಟ್ಟಿರುವ ಪ್ರಕಾರ ಆ ಫೆಡರೇಷನ್ನೊಂದೇ ಸದ್ಯಃಪ್ರಾಪ್ತಿಯಾಗಿ ಪರಿಣಮಿಸಿರುತ್ತದೆ. ಇವರೆಗೂ ಪೃಥಕ್ಕಾಗಿರುವ ಭಾರತ ದೇಶೀಯ ಸಂಸ್ಥಾನಗಳು ಫೆಡರೇಷನ್ನಿನಲ್ಲಿ ಸೇರುವುದಾಗಿ ನಿರ್ಧರಿಸಿರುತ್ತವೆ. ಪ್ರತಿಯೊಂದು ಸಂಸ್ಥಾನವೂ ಸಮಾನ ಪ್ರತಿಪತ್ತಿಯನ್ನು ಹೊಂದಿರುವುದು ಫೆಡರೇಷನ್ನಿನ ಮುಖ್ಯ ಷರತ್ತಾಗಿದೆ. ಫೆಡರೇಷನ್ನಿನ ವಿಚಾರವಾಗಿ ಕೆಲ ಸೂಚನೆಗಳನ್ನು ಕೊಟ್ಟು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾದ ಅಡ್ವೊಕೇಟ್ ಮ|| ಬಿ ಎಸ್ ಪುಟ್ಟಸ್ವಾಮಿಯವರು ಬರೆದಿರುವ ಲೇಖನವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟಿಸಲ್ಪಟ್ಟಿದೆ. ಅದರಲ್ಲಿ ಮ|| ಪುಟ್ಟಸ್ವಾಮಿಯವರು ಹೇಳಿರುವಂತೆ ಪೊಗದಿಯು ದಾಸ್ಯ ಚಿಹ್ನೆಯಾಗಿರುವುದು. ಈ ವಿಚಾರವಾಗಿ ಸರ್ ಎಂ ಮಿರ್ಜಾಯವರು ರೌಂಡುಟೇಬಲ್ ಕಾನ್ಫರೆನ್ಸಿನಲ್ಲಿ ವಾದಿಸಿರುವುದಕ್ಕಿಂತಲೂ, ಈಗ ಪ್ರಭುತ್ವದವರು ತಮ್ಮ ವಿಜ್ಞಾಪನಾಪತ್ರಿಕೆಯಲ್ಲಿ ಹೇಳಿರುವುದಕ್ಕಿಂತಲೂ ಹೆಚ್ಚಾಗಿ ನಾವು ಹೇಳತಕ್ಕದ್ದೇನೂ ಇಲ್ಲ. ಈಗ ಪೊಗದಿಯು ಕೊಡಲ್ಪಡುತ್ತಿರುವುದು ಅಕ್ರಮವಾಗಿರುವುದಲ್ಲದೆ ಲೇಶಮಾತ್ರ ನ್ಯಾಯಸಮ್ಮತವಾಗಿರುವುದಿಲ್ಲ. ಈ ಸಮಸ್ಯೆಯ ಜತೆಗೆ ಬೆಂಗಳೂರು ದಂಡು ಪ್ರದೇಶವನ್ನು ಬಿಟ್ಟುಕೊಡುವ ಸಮಸ್ಯೆಯೊಂದು ಸೇರಿಕೊಂಡಿರುತ್ತದೆ. ಮೈಸೂರು ಭಾರತ ಪ್ರಭುತ್ವಾಧೀನ ಸಂಸ್ಥಾನವಾಗಿರುವುದರಿಂದ ದಂಡಿನ ಸಂರಕ್ಷಣೆಗಾಗಿ ಪೊಗದಿಯೂ ವಿಧಿಸಲ್ಪಟ್ಟು ಅದರ ವಾಸಕ್ಕೆ ಸ್ಥಳವು ತೆಗೆದುಕೊಳ್ಳಲ್ಪಟ್ಟಿರುವುದು. ಈ ಪೊಗದಿಯು ತಪ್ಪಿಹೋದ ಮೇಲೆ ಸಂಸ್ಥಾನಕ್ಕೊಳಪಟ್ಟ ದಂಡು ಪ್ರದೇಶವು ಅನ್ಯರ ಯಾಜಮಾನ್ಯದಲ್ಲಿರಬೇಕಾದ ಆವಶ್ಯಕತೆಯಿರುವುದಿಲ್ಲ. ಮುಖ್ಯವಾಗಿ ದ್ವಂದ್ವ ಪಾರುಪತ್ಯವು ಪ್ರಭುತ್ವದವರಿಗಾಗಲಿ ಪ್ರಜೆಗಳಿಗಾಗಲಿ ಎಂದಿಗೂ ಉಪಕಾರವಲ್ಲ. ಸುಂಕ ಮೊದಲಾದ ಬಾಬುಗಳ ವಿಚಾರವಾಗಿ ಮ|| ಪುಟ್ಟಸ್ವಾಮಿಯವರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿರುತ್ತಾರಾದುದರಿಂದ ನಾವು ಪುನಃ ಹೇಳುವುದು ಅನಾವಶ್ಯಕವು. ಆ ವಿಚಾರಗಳು ಸರ್ವಸಮ್ಮತವಾಗಿರುವುದರಿಂದಲೂ ಸಕಾರಣವೂ, ನ್ಯಾಯಸಮ್ಮತವೂ ಆಗಿರುವುದರಿಂದಲೂ ಫಲಪ್ರದವಾಗುವುವೆಂದು ನಿರೀಕ್ಷಿಸುತ್ತೇವೆ. ಪ್ರಭುತ್ವಾಡಳಿತದ ಪದ್ಧತಿಯನ್ನು ಕುರಿತು ಪ್ರಸ್ತಾಪಿಸುವಾಗ್ಗೆ ಪ್ರಕೃತಸ್ಥಿತಿಗತಿಗಳಿಂದ ಪ್ರಜೆಗಳು ಸಂತೃಪ್ತರಾಗಿರುತ್ತಾರೆಂದು ಮ|| ಪುಟ್ಟಸ್ವಾಮಿಯವರು ಹೇಳಿರುವುದನ್ನು ನಾವು ಅಂಗೀಕರಿಸುವುದಿಲ್ಲ. ಪ್ರಕೃತ ಪ್ರಭುತ್ವವು ಎಷ್ಟೇ ಒಳ್ಳೆಯದಾಗಿಯೂ ಸಮರ್ಪಕವಾಗಿಯೂ ಇದ್ದರೂ ಜವಾಬ್ದಾರಿ ಸರ್ಕಾರಕ್ಕೆ ಸಾಟಿಯಾಗುವುದಿಲ್ಲವಾದುದರಿಂದ ಜವಾಬ್ದಾರಿ ಸರ್ಕಾರಪ್ರಾಪ್ತಿಗೆ ತಕ್ಕ ಸುಧಾರಣೆಯಾಗಬೇಕೆಂಬುದೇ ಬಹುಜನಾಭಿಪ್ರಾಯವಾಗಿರುತ್ತದೆಂದು ಮಾತ್ರ ಹೇಳಬೇಕಾಗಿದೆ. ದೇಶೀಯ ಸಂಸ್ಥಾನಗಳ ವಿಚಾರಣಾ ಕಮಿಟಿಯವರು ನಮ್ಮ ಸಂಸ್ಥಾನದಲ್ಲಿನ ಅತಿಥಿ ಸತ್ಕಾರಾದಿಗಳಿಂದ ಸಂತೃಪ್ತರಾಗಿ ಸದಭಿಪ್ರಾಯದಿಂದಲೂ ಸಂಸ್ಮರಣೆಯಿಂದಲೂ ತೆರಳುವರೆಂದು ನಿರೀಕ್ಷಿಸುತ್ತೇವೆ.

ವಿಚಾರಣಾಕಮಿಟಿಯವರ ಆಗಮನ ಮತ್ತು ನಿರ್ಗಮನ

ಭಾರತದೇಶೀಯ ಸಂಸ್ಥಾನಗಳ ವಿಚಾರಣಾ ಕಮಿಟಿಯ ಅಧ್ಯಕ್ಷರಾದ ರೈಟ್ ಆನರಬಲ್ ಡೇವಿಡ್‌ಸನ್ ದಂಪತಿಗಳೂ, ಮೆಂಬರುಗಳೂ ಬೊಂಬಾಯಿನಿಂದ ಹೈದರಾಬಾದಿಗೆ ಬಂದು ಅಲ್ಲಿಯ ಕೆಲಸವನ್ನು ಪೂರೈಸಿಕೊಂಡು ಗುಂತುಕಲ್ಲು ಮಾರ್ಗವಾಗಿ ಬೆಂಗಳೂರಿಗೆ ಕಳೆದ ಶುಕ್ರವಾರ ಬೆಳಿಗ್ಗೆ ಬಂದರು. ಅವರುಗಳನ್ನು ರೈಲ್ವೆ ಸ್ಟೇಷನ್ನಿನಲ್ಲಿ ದಿವಾನರು, ಕೌನ್ಸಿಲರುಗಳು, ಮ್ಯುನಿಸಿಪಲ್ ಪ್ರೆಸಿಡೆಂಟರು ಮೊದಲಾದವರೊಡನೆ ಇದಿರುಗೊಂಡು ಮರ್ಯಾದಿಸಿ ಮೋಟಾರು ಬಂಡಿಗಳಲ್ಲಿ ಕುಳ್ಳಿರಿಸಿಕೊಂಡು ಅರಮನೆಗೆ ಕರೆದುಕೊಂಡು ಹೋದರು. ಅಲ್ಲಿಂದ ಲಾಲ್‌ಬಾಗಿಗೆ ಕರೆದುಕೊಂಡು ಹೋಗಿ ಪುಷ್ಪಪ್ರದರ್ಶನವನ್ನು ತೋರಿಸಿಕೊಂಡು ರೆಸಿಡೆಂಟರ ಬಂಗಲೆಗೆ ಕರೆದುಕೊಂಡು ಬಂದರು. ಅಲ್ಲಿ ಉಪಾಹಾರವನ್ನು ತೀರಿಸಿಕೊಂಡು ಅಧ್ಯಕ್ಷ ದಂಪತಿಗಳೂ ಇತರರೂ ದಿವಾನರ ಸಮೇತ ಮೋಟಾರು ಬಂಡಿಗಳಲ್ಲಿ ಮೈಸೂರಿಗೆ ಪ್ರಯಾಣಮಾಡಿ ಮಧ್ಯ ಮಾರ್ಗದಲ್ಲಿ ಚನ್ನಪಟ್ಟಣದ ಮತ್ತು ಶ್ರೀರಂಗಪಟ್ಟಣದ ಮ್ಯುನಿಸಿಪಾಲಿಟಿಯವರೊಪ್ಪಿಸಿದ ವಿಜ್ಞಾಪನಾಪತ್ರಿಕೆಗಳನ್ನು ಸ್ವೀಕರಿಸಿ ಶ್ರೀರಂಗಪಟ್ಟಣದ [illegible] ದರಿಯಾ ದೌಲತ್ [illegible] ಗೋರಿಗಳಿರುವ [illegible] ಸ್ಥಳ [illegible] ಭೋಜನವನ್ನು ಮಾಡಿ ಸಾಯಂಕಾಲ ರಾಜಧಾನಿಯನ್ನು [illegible] ಅತಿಥಿಗೃಹ [illegible], ಮತ್ತೆ ಕೆಲರು [illegible] ಗೌರ್ನಮೆಂಟ್ ಹೌಸಿನಲ್ಲೂ ಇಳಿದು [illegible] ೨೮ [illegible] ಮಹಾರಾಜರ ಪ್ರೈವೇಟ್ [illegible] ಕೊಟ್ಟ [illegible] ಅವರನ್ನು [illegible] ಇತರ ವಾಹಿನಿಗಳಲ್ಲೂ ಕುಳ್ಳಿರಿಸಿಕೊಂಡು ಲಲಿತಾದ್ರಿ ಮಾರ್ಗವಾಗಿ ಚಾಮುಂಡಿ ಬೆಟ್ಟಕ್ಕೆ ಕರೆದುಕೊಂಡು ಹೋಗಿ ವಿದ್ಯುದ್ದೀಪಾವಳಿಗಳಿಂದ ಅಲಂಕೃತವಾದ ಅರಮನೆಯನ್ನು ಮತ್ತು ಪಟ್ಟಣವನ್ನು ತೋರಿಸಿಕೊಂಡುಬಂದರು. ಮಾರನೆಯ ಬೆಳಿಗ್ಗೆ ನಮ್ಮ ಸಂಸ್ಥಾನದ ಕೌನ್ಸಲರುಗಳು ಪ್ರಭುತ್ವದ ಪರವಾಗಿ ಮಾಡಿದ ಬಿನ್ನಪವನ್ನು ಕೇಳಿದರಲ್ಲದೆ ದಿವಾನ್ ಬಹದ್ದೂರ್ ಶ್ರೀಕಂಠೇಶ್ವರ ಅಯ್ಯರ್‌ರವರ ಮತ್ತು ಕೆಲರ ಹೇಳಿಕೆಯನ್ನು ಸಹ ಕೇಳಿದರು. ಆ ದಿವಸ ಸಾಯಂಕಾಲ ೪½ ಘಂಟೆಗೆ ಅರಮನೆಗೆ ಬಂದು ಶ್ರೀಮನ್ಮಹಾರಾಜರವರಿಂದ ಇದಿರುಗೊಳ್ಳಲ್ಪಟ್ಟು ದರ್ಬಾರ್ ಹಾಲು ಮೊದಲಾದ ಸ್ಥಳಗಳನ್ನು ನೋಡಿದ ಮೇಲೆ ಅವರುಗಳನ್ನು ನಾಲ್ಕು ಕುದುರೆಗಳನ್ನು ಹೂಡಿದ ರಥದಲ್ಲಿ ಕುಳ್ಳಿರಿಸಿಕೊಂಡು ಶ್ರೀಮನ್ಮಹಾರಾಜರವರು ಸ್ವತಃ ರಥವನ್ನು ನಡೆಸುತ್ತ ಚಾಮುಂಡಿ ಬಂಗಲೆಗೆ ಕರೆದುಕೊಂಡುಬಂದು ಟೆನಿಸ್ ಆಟದಿಂದಲೂ ಬ್ಯಾಂಡ್ ವಾದ್ಯಶ್ರವಣದಿಂದಲೂ ಉಪಾಹಾರದಿಂದಲೂ ಸತ್ಕರಿಸಿದರು. ಮ|| ಗಳಾದ ಡಿಸ್ಟ್ರಿಕ್ಟ್ ಜಡ್ಜ್ ಶಂಕರನಾರಾಯಣರಾಯರು, ಅಡ್ವೊಕೇಟ್ ಎ ಕೃಷ್ಣರಾಯರು, ಅಡ್ವೊಕೇಟ್ ಎಚ್ ಸಿ ದಾಸಪ್ಪನವರು ಮತ್ತೆ ಕೆಲವರ ಪರಿಚಯವನ್ನು ಪ್ರೈವೇಟ್ ಸೆಕ್ರೆಟರಿ ಸರ್ ಚಾರ್ಲ್ಸ್ ಟಾಡ್ ಹಂಟರ್‌ರವರು ಕಮಿಟಿಯ ಮೆಂಬರುಗಳಿಗೆ ಮಾಡಿಸಿದರು. ಅವರುಗಳು ಸಂಸ್ಥಾನದ ಆಡಳಿತದ ವಿಚಾರವಾಗಿ ಮೆಂಬರುಗಳ ಕೂಡ ಪ್ರಸ್ತಾಪಿಸಿದರೆಂದು ಕೇಳುತ್ತೇವೆ. ಅದೇ ರಾತ್ರಿ ಗೌರ್ನಮೆಂಟ್‌ಹೌಸಿನಲ್ಲಿ ಅತಿಥಿಗಳೆಲ್ಲರಿಗೂ ದಿವ್ಯಾತಿಥ್ಯವಾಯಿತು. ಮರುದಿವಸ ಕನ್ನಂಬಾಡಿ, ಚಾಮರಾಜೇಂದ್ರ ಕೈಗಾರಿಕೆಯ ಶಾಲೆ ಮೊದಲಾದ ಸ್ಥಳಗಳನ್ನು ಪರಾಮರ್ಶಿಸಿಕೊಂಡು ಬಂದರು. ಮತ್ತು ರಾತ್ರಿ ೯ ಘಂಟೆಯ ಮೇಲೆ ಅರಮನೆಗೆ ಬಂದು ಸಂಗೀತಶ್ರವಣಾನಂತರ ಅರಮನೆಯ ಮುಂಭಾಗದ ಬೈಲಿನಲ್ಲಿ ರಾಜಾವರದವರಿಂದ ಪ್ರದರ್ಶಿಸಲ್ಪಟ್ಟ ಪಂಜಿನ ಪರೇಡ್ ಮೊದಲಾದ ವಿನೋದಗಳನ್ನು ನೋಡಿ ಆನಂದಪಟ್ಟರು. ಈ ದಿವಸ ಬೆಳಿಗ್ಗೆ ಸಹ ಕೆಲವು ವಿಜ್ಞಾಪನೆಗಳನ್ನು ಲಾಲಿಸಿ ಭೋಜನಾನಂತರ ಮಧ್ಯಾಹ್ನ ೧½ ಘಂಟೆ ಸಮಯದಲ್ಲಿ ಶ್ರೀಮನ್ಮಹಾರಾಜರವರಿಂದಲೂ ದಿವಾನರಿಂದಲೂ ಬೀಳ್ಕೊಂಡು ಉದಕಮಂಡಲಕ್ಕೆ ಪ್ರಯಾಣ ಮಾಡಿದರು. ಇವರುಗಳ ಆಗಮನ ಸತ್ಕಾರಕ್ಕಾಗಿ ಬಹಳ ಸಮರ್ಪಕವಾದ ಏರ್ಪಾಟುಗಳು ಮಾಡಲ್ಪಟ್ಟಿದ್ದುವು.

ಪ್ರಧಾನಮಂತ್ರಿ ಮೆಕ್ಡೋನಾಲ್ಡರ ಆರೋಗ್ಯ.

ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮೆಕ್ಡೋನಾಲ್ಡರವರು ಕಣ್ಣಿನ ಬಾಧೆಗಾಗಿ ಚಿಕಿತ್ಸೆ ಮಾಡಿಸಿಕೊಂಡಿದ್ದು ಈಗ ಬಹಳ ಮಟ್ಟಿಗೆ ಗುಣಹೊಂದುತ್ತಿರುವರು.

ಶರಚ್ಚಂದ್ರಬೋಸ್‌ರವರ ಸೆರೆ

ಸುಭಾಷಚಂದ್ರಬೋಸ್‌ರವರ ಅಣ್ಣನವರಾದ ಬ್ಯಾರಿಸ್ಟರ್ ಶರಚ್ಚಂದ್ರಬೋಸ್‌ರವರು ಧನಬಾದಿಗೆ ಒಂದು ವಿವಾದದ ವಕೀಲಿಗಾಗಿ ಹೋಗಿದ್ದಾಗ್ಗೆ ಸೆರೆಹಿಡಿಯಲ್ಪಟ್ಟು ಅವರ ತಮ್ಮ ಇರುವ ಜೈಲಿನಲ್ಲಿರಿಸಲ್ಪಟ್ಟಿರುವರು.

ಭೂಕಂಪದಿಂದಾದ ಅಪಾರ ನಷ್ಟ.

ವೆಸ್ಟ್ ಇಂಡೀಸಿನಲ್ಲಿ ಕ್ಯೂಬಾಕ್ಕೆ ಸೇರಿದ ಸ್ಯಾಂಟಿಯಾಗೋ ಪಟ್ಟಣದಲ್ಲಿ ಭೂಕಂಪವಾಗಿ ೩ ೦೦ ೦೦,೦೦೦ ರೂ ಗಳವರೆಗೆ ನಷ್ಟವೂ [illegible] ದ ವರೆಗೆ ಮನುಷ್ಯ ಪ್ರಾಣಹಾನಿಯೂ ಆಗಿರುವುದು. ಊರೆಲ್ಲ ಹಾಳಾಗಿ ಶವಮಯವಾಗಿರುತ್ತದೆ.

ಕಾರಾಗೃಹವಾಸಿ ಮಹಾತ್ಮರ ಆರೋಗ್ಯ.

ಕಳೆದ ಬುಧವಾರ ಸಾಬರ್ಮತಿ ಮಿತ್ರರುಗಳು ಎರವಾಡ ಜೈಲಿಗೆ ಹೋಗಿ ಮಹಾತ್ಮರ ದರ್ಶನ ಭಾಷಣಗಳನ್ನು ಮಾಡಿಕೊಂಡು ಬಂದು ಮಹಾತ್ಮರು ಆರೋಗ್ಯವಾಗಿರುತ್ತಾರೆಂದೂ ಅವರ ಶರೀರದ ತೂಕವು 1 ಪೌಂಡಿನಷ್ಟು ಹೆಚ್ಚಿರುತ್ತದೆಂದೂ ತಿಳಿಸಿರುತ್ತಾರೆ.

ಭಂಗಾರ ಶೇಖರಣೆಯನ್ನು ನಿಲ್ಲಿಸಬೇಕು.

ಕಳೆದವರ್ಷ ಅಮೇರಿಕೆಯವರು ೫೦ ಕೋಟಿ ರೂ ಬೆಲೆಯ ಭಂಗಾರವನ್ನು ಶೇಖರಿಸಿದ್ದರು. ಹಾಗೆ ಶೇಖರಿಸುವುದರಿಂದ ಅದರ ಬೆಲೆಯು ಇಳಿದು ಮಹಾನರ್ಥದಾಯಕವಾಗುವ ಪ್ರಯುಕ್ತ ಶೇಖರಿಸಕೂಡದೆಂದು ಅಮೇರಿಕೆಯ ಪ್ರಜೆಗಳನ್ನು ಪ್ರೆಸಿಡೆಂಟ್ ಹೂವರು ಕೇಳಿಕೊಂಡಿರುತ್ತಾರೆ.

ಸಬರ್ಮತಿ ಆಶ್ರಮದ ಚರಾಸ್ತಿ ಜಪ್ತಿ.

ಅಹಮದಾಬಾದಿನ ಸಬರ್ಮತಿ ಆಶ್ರಮದ ಸೆಕ್ರೆಟರಿಯು ಭೂಕಂದಾಯದ ಬಾಬತ್ತು ೩೬೪ ರೂ ಗಳನ್ನು ಕೊಡಲು

ಸ್ಥಾಪಿಸುವದಕ್ಕಾಗಿ ಆಕ್ರಮಕ್ಕೆ ಸಂಬಂಧಪಟ್ಟ ಕೆಲ ದಿಕ್ಕಿನ ಸೈನ್ಯಗಳು ಚೀನಾದ ಪ್ರದೇಶ ಬಿಟ್ಟು ಹೋಗಿ ... ಜಪಾನ್ಯರಿಂದ ... ಶಾಲೆ ... ತ್ತದೆ.

ನವಯುವಕ ಸಂಘದವರಿಂದ ದೇಶಸೇವೆ

ಹಳ್ಳಿಯಲ್ಲಿ ಆರ್ ಮುದುಕ ಮೆರವಣಿಗೆಯು ... ಬೀದಿ ಬಂದು ಮಸೀದಿಯ ಮುಂದೆ ಹೋಗುತ್ತಿರುವಾಗ್ಗೆ, ವಾದ್ಯವನ್ನು ನಿಲ್ಲಿಸಬೇಕೆಂದು ಮುಸಲ್ಮಾನರು ಹಠ ಹಿಡಿಯಲು ... ದುಗಳು ಕೇಳದ ಮುಂದೆ ನಡೆಯಲುದ್ಯುಕ್ತರಾದರು ... ನಮೇಲೆ ಉಭಯರಿಗೂ ಕಲಹವಾಗಿ ಕೆಲ ಪುರುಷರಿಗೂ ... ಯರಿಗೂ ಅಪಾಯ ಸಂಭವಿಸಿತು.

ಸಿ ತರಗತಿಯ ಕೈದಿಗಳ ಸ್ವಂಕಿಲ ಬಂಧನ.

ಆಲಿಪುರ ಡಿಸ್ಟ್ರಿಕ್ಟ್ ಜೈಲಿನಲ್ಲಿರುವ ಸಿ ತರಗತಿಯ ಕೈದಿಗಳು ರಾತ್ರಿವೇಳೆ ಡೇರಾದಲ್ಲಿ ಮಲಗುವಾಗ್ಗೆ ಬಾಗಿಲು ಗೆ ಬೀಗಮುದ್ರೆ ಮಾಡಲು ಸಾಧ್ಯವಿಲ್ಲದಿರುವದರಿಂದ ಇವ ... ರನ್ನು ಅವರುಗಳ ಕೈಗಳಿಗೆ ಸರಪಳಿಗಳನ್ನು ಬಿಗಿದು ... ಅವರು ಪ್ರತಿಯೊಬ್ಬ ಕೈದಿಯ ಮುಂದ ... ಲನೆಗಾಗಿ ... ಕೊಟ್ಟು ತಿಳಿಸಲ್ಪಟ್ಟಿದೆ. ಬಿ ತರಗತಿಯ ಕೈದಿಗಳು ಈ ರೀತಿ ... ಬಂದಿಸಲ್ಪಡದೆ ... ಮಲಗುವ ಮಂಚಗಳಿಗೆ ಸರಪಳಿಯಿಂದ ಕಟ್ಟಲ್ಪಡುತ್ತಿವೆ.

ವಲ್ಲಭಭಾಯಿಯವರೂ ಮಹಾತ್ಮರೂ ಒಂದೇ ಕೋಣೆಯಲ್ಲಿರುವರು

ಎರ್ರಾಡಾ ಜೈಲಿನೊಳಗೆ ಮಹಾತ್ಮರು ಒಂದು ವಾರ್ಡಿನಲ್ಲಿ ಒಬ್ಬರೇ ಇರುವುದರಿಂದುಂಟಾಗುವ ಬೇಸರಿಕೆಯ ಪರಿಹಾರಕ್ಕಾಗಿ ಸರದಾರ್ ವಲ್ಲಭಭಾಯಿ ಪಟೇಲರೂ ಮಹಾತ್ಮರ ವಾರ್ಡಿನಲ್ಲೇ ಇರಿಸಲ್ಪಟ್ಟಿರುವುದಾಗಿಯೂ, ವಲ್ಲಭಭಾಯಿಯವರ ಕುಮಾರರು ತಂದೆಯವರನ್ನು ನೋಡಿಕೊಂಡು ಒಂದು ಸರದಾರರು ಆರೋಗ್ಯವಾಗಿರುತ್ತಾರೆಂದು ತಿಳಿಸಿರುವುದಾಗಿಯೂ ಪ್ರಕಟವಾಗಿದೆ.

ಗೌರ್ನರು ಗಂಡಾಂತರದಿಂದ ಪಾರಾದುದು

ಬಂಗಾಳಾಗೌರ್ನರಾದ ಸರ್ ಸ್ಟಾನ್ಲೆ ಜಾಕ್ಸನ್‌ರವರು ಆಳೆ ಶನಿವಾರ ಮಧ್ಯಾಹ್ನ ಕಲಕತ್ತಾ ವಿಶ್ವವಿದ್ಯಾಲಯದ ಪ್ರದಾನಸಮಯದಲ್ಲಿ ಭಾಷಣಮಾಡುತ್ತಿರುವಾಗ್ಗೆ ಡಯೋಸಿಸನ್ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು ಬಿ ಎ ಪ್ರಶಸ್ತಿಯನ್ನು ಪಡೆದಿರುವ ವಿನದಾಸ್ ಎಂಬ ತರುಣಿಯು ಗೌರ್ನರಿಗೆ ಗುರಿಯಿಟ್ಟು ಗುಂಡುಗಳನ್ನು ಹಾರಿಸಿದಳು. ಗೌರ್ನರು ದೈವಾನುಗ್ರಹದಿಂದ ತಪ್ಪಿಸಿಕೊಂಡು ತಮ್ಮ ಭಾಷಣವನ್ನು ಮುಗಿಸಿದರು. ಆಕೆಯು ಕೂಡಲೆ ಸೆರೆಹಿಡಿಯಲ್ಪಟ್ಟಳು.

ಕೈದಿಯ ರಕ್ಷಣೆಯಲ್ಲಿ ಪೊಲೀಸಿನವನಿಗೆ ಅಪಾಯ

ಬರ್ದವಾನ್ ಜೈಲಿನಲ್ಲಿದ್ದ 20 ಮಂದಿ ರಾಜಕೀಯ ಕೈದಿಗಳನ್ನು ರೈಲುಬಂಡಿಯಲ್ಲಿ ಕುಳ್ಳಿರಿಸಿಕೊಂಡು ಪೊಲೀಸಿನವರು ಡಂಡಮ್ ಜೈಲಿಗೆ ಕರೆದುಕೊಂಡು ಹೋಗುತ್ತಿರುವಾಗ ... ಸ್ಟೇಷನ್ನಿಗೆ ಬರುತ್ತಲೆ ಕೆಲರು ಬಂಡಿಯಿಂದ ಕೆಳಗಿಳಿದರು. ವತ್ತಿ ... ರು ಇಳಿಯುವಷ್ಟರಲ್ಲಿ ಬಂಡಿಯು ಹೊರಡಲು ಅವರುಗಳಿಗೆ ಹೆಚ್ಚು ಬಿದ್ದಿತು. ಅಪಾಯಕ್ಕೆ ಸಿಕ್ಕಿದ್ದ ಕೈದಿಯನ್ನು ರಕ್ಷಿಸುವದಕ್ಕಾಗಿ ನುಗ್ಗಿದ ಪೊಲೀಸಿನವನು ಚಕ್ರಗಳಿಗೂ ಬಂಡಿಗೂ ಸಿಕ್ಕಿ ಬಿದ್ದು ಪ್ರಾಣಾಪಾಯವನ್ನು ಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ಮಾಂಗಲ್ಯವು ಹಿಂದಿರುಗಿ ಕೊಡಲ್ಪಟ್ಟಿತು

ತಲಚೇರಿಯಲ್ಲಿ ಪ್ರಭೂಸತಿಯ ಮಾಂಗಲ್ಯವನ್ನು ತೆಗೆದುಕೊಳ್ಳಬೇಕೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಪ್ಪಣೆಯಾದುದರಿಂದ ಪೊಲೀಸಿನವರು ಅದನ್ನು ಕಿತ್ತುಕೊಳ್ಳ ಹೋಗಲು ಭಯದಿಂದ ಆಕೆಯು ಓರ್ವ ಲೇಡಿಪೋಲೀಸಿನವಳಿಂದ ಒಪ್ಪಿಸಿಕೊಟ್ಟಳಷ್ಟೆ. ಮಾಂಗಲ್ಯವನ್ನು ತತ್‌ಕ್ಷಣ ಪ್ರಭೂಸತಿಗೆ ಕೊಡಬೇಕೆಂದು ಮರನೆಯ ದಿವಸ ಮದ್ರಾಸು ಪ್ರಭುತ್ವದವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ತಂತಿ ಮೂಲಕ ಆಜ್ಞೆ ಮಾಡಿದರು. ಇದರ ಸಂಬಂಧವಾದ ವಿವರವನ್ನು ತಿಳಿದು ಅದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಮಾಡುವವರಾಗಿರುವರೆಂದು ಪ್ರಕಟವಾಗಿದೆ.

ಕಾಶ್ಮೀರ ಸ್ಥಿತಿಯು

... ಸಂಚಾರ ಶೋಧನೆಯಿಂದ ಪರಾಚ್ ಎಂಬಲ್ಲಿ ... ಕೋರಿರ ವಾಳೆಯನ್ನು ಕಡೆಯಲಾರದೆ ಜನರು ಗುಂಪು ಗುಂಪಾಗಿ ಓಡಿಹೋಗುತ್ತಿರುವರೆಂದೂ ... ಕಡೆಗಳಲ್ಲೆಲ್ಲ ಸಮಾಧಾನವಾಗಿರುತ್ತದೆಯೆಂದೂ ತಿಳಿದುಬಂದಿದೆ. ಕೋಟಿಲಿ ಎಂಬಲ್ಲಿಗೆ ಸಹಾಯವು ಕಳುಹಲ್ಪಟ್ಟಿದೆ. ... ಚ್ ಎಂಬಲ್ಲಿಗೆ ಸೈನಿಕರು ಅತಿ ತ್ವರೆಯಿಂದ ಹೋಗಲಪ್ಪಣೆ ಮಾಡಲ್ಪಟ್ಟಿದೆ. ಪ್ರಾಂತದಲ್ಲೆಲ್ಲಾ ಈಗ ಸಮಾಧಾನವುಂಟಾಗಿರುವುದಾಗಿಯೂ, ... ಸೂಚರ ವತ್ತು ಮುಜಫರಾಬಾದ್ ಎಂಬಲ್ಲಿ ಅಂಗಡಿಗಳು ತೆರೆಯಲ್ಪಟ್ಟಿರುವುದಾಗಿಯೂ ... ದಿಂದ ಬಂದ ವರ್ತಮಾನದಿಂದ ತಿಳಿಯಬರುತ್ತದೆ.

ಮಹಾತ್ಮರ ಮಗನಿಗೂ ರಾಜಗೋಪಾಲಾಚಾರ್ಯರ ಮಗಳಿಗೂ ವಿವಾಹ

ಸ್ರೀ|| ರಾಜಗೋಪಾಲಾಚಾರ್ಯರ ಮಗಳಾದ ಸ್ರೀ|| ಲಕ್ಷ್ಮಿಯವರಿಗೆ ಈ 19 ನೆಯ ವಯಸ್ಸಾಗಿದೆ. ಇವಳಿಗೂ ಈಗ ತಿರುಪತಂಗೋಡು ಆಶ್ರಮದಲ್ಲಿರುತ್ತಾರೆ. ... ಕನ್ಯೆ ಕಿಟಕ ... ಸ್ರೀ|| ದೇವದಾಸ ಗಾಂಧಿಯವರಿಗೂ ಸ್ರೀ|| ಲಕ್ಷ್ಮಿಯವರಿಗೂ ವಿವಾಹವಾಗ ... ಮಹಾತ್ಮರು ... ಒಂದ ಕೂಡಲೇ ನಿಶ್ಚಯಿಸಲ್ಪಟ್ಟಿದ್ದಿತು. ಆದರೆ ಈಗ ಮಹಾತ್ಮರೂ ಅವರ ಪತ್ನಿ ಸ್ರೀ|| ಕಸ್ತೂರಿಬಾಯಿಯವರೂ ಕಾರಾಗೃಹವಾಸಿಗಳಾಗಿರುವುದರಿಂದ ಈಗ ವಿವಾಹಮಾಡಿಕೊಳ್ಳಕೂಡದೆಂದೂ, ತಾನು ಕಾರಾಗೃಹ ವಾಸಕ್ಕೆ ಹೋಗದಿರುವುದು ಅನುಚಿತವೆಂದೂ ದೇವದಾಸ ಗಾಂಧಿಯವರು ನಿಶ್ಚಯಿಸಿ ಗುಜರಾತಿಗೆ ಪ್ರಯಾಣಮಾಡಿದರು.

ಚೈನಾ ಜಪಾನ್ ಯುದ್ಧ.

ಜಪಾನಿನಿಂದ ... ಸೇನೆಯು ಷಾಂಘೈಗೆ ಹೊರಟಿದೆ. ಈ ಯುದ್ಧದಲ್ಲಿ ಶಸ್ತ್ರಗಳುಪಯೋಗಿಸಲ್ಪಡುತ್ತಿರುವುದರಿಂದ ಅನೇಕ ಕಟ್ಟಡಗಳೂ ಚೀನೀಯರ ದೇವಾಲಯವೂ ನಾಶವಾದುವು. ಜಪಾನು ಸೇನೆಯು ವೂಸಂಗ್ ಕೋಟೆಯನ್ನು ಆಕ್ರಮಿಸಿಕೊಂಡಿರುವುದು. ಅವರ ಬಲವು ಈಗ 3,000 ಸೈನಿಕರನ್ನೂ ... ವಿಮಾನದಳವನ್ನೂ ಒಳಗೊಂಡಿದೆ. ತಾ|| 3 ರಲ್ಲಿ ಜಪಾನರು ಹಾರ್ಬಿನ್ನನ್ನು ಪ್ರವೇಶಿಸಿದರು. ಅಲ್ಲಿ ಯುದ್ಧವು ಪ್ರಬಲವಾಗಿ ನಡೆಯುತ್ತಿದೆ. ಇದರಲ್ಲಿ 40 ಮಂದಿ ಜಪಾನು ಸೈನಿಕರು ಮಡಿದರು. ಜಪಾನ್ ಸೈನಿಕರು ಚೀನರನ್ನು ಆಕ್ರಮಿಸುವುದಕ್ಕೆ ಮೊದಲು ಪಾದಾಳುವಾಗಿ ... ಚೀನಾದವರನ್ನು ಪಡಿಸಿದರು.

ಸಂಸ್ಥಾನಾಧಿಪತಿಗಳ ಸಭೆ.

ನರೇಂದ್ರಮಂಡಲದ ಸ್ಥಾಯಿಸಂಘದವರು ಜನವರಿ ತಾ|| 1 ... ರಲ್ಲಿ ದಿಲ್ಲಿಯೊಳಗೆ ಸಮಾವೇಶರಾಗಿ ತಾ|| 17 ರಿಂದ 1 ... ರ ವರೆಗೆ ಇಪ್ಪತ್ತೊಂದ್ರಿಯನ್ನು ನಡೆಯಿಸುವರು. ಪಾಟಿಯಾಲ ಮಹಾರಾಜರೂ ಅವರ ಅಭಿಪ್ರಾಯವನ್ನು ಅನುಮೋದಿಸುವ ಮತ್ತೆ ಕೆಲ ಸಂಸ್ಥಾನಾಧಿಪತಿಗಳೂ ನರೇಂದ್ರಮಂಡಲದ ಅಧ್ಯಕ್ಷರಾದ ಭೋಪಾಲಿನ ನವಾಬರನ್ನೂ ವಿಕನೀರು ಮಹಾರಾಜರನ್ನೂ ಮತ್ತೆ ಕೆಲವರನ್ನೂ ಸೇರಿಸಿಕೊಂಡು ಇದರ ರಾಜ್ಯಾಂಗನಿರ್ಮಾಣದ ಉಪಸಂಘವು ಸೂಚಿಸಿರುವ ರಾಜ್ಯಾಂಗಕ್ರಮಕ್ಕೂ ಪಾಟಿಯಾಲ ಮಹಾರಾಜರು ಬೊಂಬಾಯಿನಲ್ಲಿ ತಯಾರಿಸಿದ ರಾಜ್ಯಾಂಗಕ್ರಮಕ್ಕೂ ಸಮನ್ವಯಮಾಡಲು ಪ್ರಯತ್ನಿಸುವರು. ಸಂಸ್ಥಾನಗಳಿಗೆ ಸ್ವತಂತ್ರಗಳನ್ನು ಪ್ರತ್ಯೇಕಿಸುವ ವಿಷಯವು ಕೂಡ ಚರ್ಚಿಸಲಟ್ಟ ಈ ವಿಷಯದಲ್ಲಿ ಸಾಧಾರಣ ಮಾಡಿಕೊಳ್ಳಲೆತ್ನಿಸಲ್ಪಡುವುದು.

ಮಹಾದೇವ ದೇಸಾಯರ ಸೆರೆ

ಮಹಾದೇವ ದೇಸಾಯರು ಮೊದಲು ಸೆರೆಯಲ್ಲಿ ಟ್ಟಿದ್ದ ... ಶಾಸನೋಲ್ಲಂಘನದಲ್ಲಿ ಭಾಗಿಗಳಾಗುವದಿಲ್ಲವೆಂದೂ ಪ್ರತಿದಿನವು ಪೊಲೀಸಿಗೆ ಹಾಜರಾಗುತ್ತೇವೆಂದೂ ಒಪ್ಪಿಕೊಂಡುದರಮೇಲೆ ಬಿಡಲ್ಪಟ್ಟಿದ್ದರು. ಪೊಲೀಸಿಗೆ ಹಾಜರಾಗಿ ... ಕೊಳ್ಳಲಿಲ್ಲವೆಂಬ ಕಾರಣಕ್ಕಾಗಿ ಪುನಃ ಸೆರೆಹಿಡಿಯಲ್ಪಟ್ಟು 1 ... ತಿಂಗಳ ಸಜಾ ... ಮತ್ತು 300 ರೂ ದಂಡ ವಿಧಿಸಲ್ಪಟ್ಟರು.

ನಿಷಿದ್ಧ ಬಲಸಂಘವನ್ನು ಸೇರುತ್ತಿದ್ದುದಕ್ಕಾಗಿ ಗುಜರಾತು ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಯಾದ ಸರ್ದಾರ್ ಜವಾರಿ ... ಸಮೇತ ಎಳುಮಂದಿ ಸ್ತ್ರೀಯರೂ ಸ್ಥಿರರೂ ಸೆರೆಹಿಡಿಯಲ್ಪಟ್ಟು ಬಿಡಲ್ಪಟ್ಟರು. ಮ್ಯುನಿಸಿಪಲ್ ಕೌನ್ಸಿಲರ ... ಮೇಹತಾ ಅವರು ಸೆರೆಹಿಡಿಯಲ್ಪಟ್ಟಿದ್ದು ಇತರ ಶಾಸನೋಲ್ಲಂಘನೋದ್ಯಮದಲ್ಲಿ ಭಾಗಿಯಾಗುವದಿಲ್ಲವೆಂದೊಪ್ಪಿಕೊಂಡುದರಮೇಲೆ ಬಿಡಲ್ಪಟ್ಟರು.

ಗುಂಡಿನಿಂದ ಸುಡಲ್ಪಡುವ ಪ್ರಕಟನೆ

ಬೊಂಬಾಯಿನಲ್ಲಿ ಸಾವಿರಾರು ಜನರು ದೌರ್ಜನ್ಯಕೃತ್ಯವನ್ನು ನಡೆಯಿಸುತ್ತಿರುವುದರಿಂದ ನಗರದ ಶಾಂತಿಗೆ ಭಂಗವುಂಟಾಗಿದೆ. ಈ ವರೆಗೆ ಪೊಲೀಸಿನವರು ಬಹಳ ತಾಳ್ಮೆಯಿಂದಿದ್ದರು. ಪ್ರಜೆಗಳು ಆಜ್ಞೋಲ್ಲಂಘನಮಾಡಿದರೂ ಸಾಧ್ಯವಾದ ಮಟ್ಟಿಗೆ ... ಎಂದೂಕಗಳನ್ನುಪಯೋಗಿಸುತ್ತಿರಲಿಲ್ಲ. ... ದೌರ್ಜನ್ಯವನ್ನಡಗಿಸಲು ನ್ಯಾಯಶಾಸನದಲ್ಲಿ ನಿರ್ದೇಶಿಸಲ್ಪಟ್ಟಿರುವ ಪದ್ಧತಿಯನ್ನು ಅವಲಂಬಿಸಬೇಕಾದ ಸಮಯವು ಈಗ ಒದಗಿರುತ್ತದೆಂದು ಪೋಲೀಸಿನವರು ನಿರ್ಧರಿಸಿರುತ್ತಾರೆ. ಪ್ರಜರ ಗುಂಪುಗಳು ದೌರ್ಜನ್ಯ ಕೃತ್ಯವನ್ನು ನಡೆಸುತ್ತಿರುವಾಗ್ಗೆ ಜನರು ಹೋಗಬೇಕೆಂದು ಆಜ್ಞೆಮಾಡಿದರೂ ಅವರು ಹೋಗದಹೋದರೆ ಅವರ ಮೇಲೆ ಗುಂಡುಹಾರಿಸಲು ಪೊಲೀಸಿನವರಿಗೆ ಅಪ್ಪಣೆ ಮಾಡಲ್ಪಟ್ಟಿದೆ. ದೌರ್ಜನ್ಯನಡೆಯಿಸುವ ಗುಂಪಿಗೆ ಸೇರಿದವರೆಲ್ಲರೂ ಅದರಿಂದ ಸಂಭವಿಸುವ ನಷ್ಟಕಷ್ಟಗಳನ್ನು ಅನುಭವಿಸಲು ಸಂಸಿದ್ಧರಾಗಿರಬೇಕೆಂದು ಈ ಮೂಲಕ ತಿಳುಹಲ್ಪಟ್ಟಿದೆ ಎಂದು ಇನ್ಸ್‌ಪೆಕ್ಟರ್ ಜೆನೆರಲ್‌ರವರು ಪ್ರಕಟಿಸಿರುತ್ತಾರೆ.

ಸ್ಕಾಟ್ಲಂಡಿನ ಚರಿತ್ರೆ

ಮೊ. ಕ್ವೀನ್ ಎಲಿಜಬೆತ್ತಳ ... ಕಾಲದಲ್ಲಿ ಗ್ಲಾಸ್ಗೋ ... ಪ್ರತಿನಿಧಿಗಳ ... ಸ್ಕಾಟ್ಲೆಂಡಿನ ... ಪಂಡಿತರುಗಳು ... ನಗರದೊಳಗೆ ... ಕಾಲದಲ್ಲಿ ... ಗಳು ಇದು ಸಿಸ್ಟಿಟ್ಯೂಶನ್ ... ವರೆಗೆ ಸಂಶೋಧನೆಯ ... ನಡೆದಿರುವದರಲ್ಲಿ ... ಜನರ ಚಿಹ್ನಗಳು ಕಂಡುಬರುತ್ತಿವೆ. ಆದುದರಿಂದ ... ನು ಆದಿಯಲ್ಲಿ ಯಾವ ರೀತಿಯಿದ್ದ ... ಮತ್ತು ಹೇಗೆ ಜೀವಿಸುತ್ತಿದ್ದ ಎಂಬುದನ್ನು ನಿರ್ಧರಿಸಬೇಕೆಂಬ ಅಭಿಪ್ರಾಯದಿಂದ ಪ್ರಸಕ್ತ ಸಭೆಯು ಕೂಡತಕ್ಕುದಾಗಿದೆ. ... ಮನುಷ್ಯನ ಅಸ್ತಿಯು ದೊರಿತಿದಾಗ ಅವನು 10 ಲಕ್ಷ ವರ್ಷಗಳ ಹಿಂದೆ ಜೀವಿಸಿರಬೇಕೆಂದೂಹಿಸಲ್ಪಟ್ಟಿದ್ದಿತು. ಈಗ ಕೆಲ ... ಗಳ ಕೆಳಗೆ ನಡೆದ ಪರಿಶೋಧನೆಯಿಂದ ಅವನಿಗೆ ಕಲ್ಲಿನ ಉಪಕರಣಗಳಿದ್ದುವೆಂದೂ, ಬೆಂಕಿಯುಪಯೋಗವು ತಿಳಿದಿದ್ದಿತೆಂದೂ ಗೊತ್ತಾದುದರಿಂದ ಆವನಿಗಿದ್ದ ಕಾಲವು ... ಹಿಡಿಯಲ್ಪಡುವುದು ಆವಶ್ಯಕವಾಗಿರುವುದು. 400 ರಿಂದ 500 ವರೆಗೆ ಪ್ರತಿನಿಧಿಗಳು ಈ ಸಭೆಗೆ ಬರುವುದಾಗಿಯೂ, ಅವರುಗಳು ಸ್ಕಾಟ್‌ಲಂಡ್, ಇಂಗ್ಲೆಂಡ್ ದೇಶಗಳಲ್ಲಿ ಸಂಬಂಧ ಪರಿಶೋಧನೆ ನಡೆಸುವರಾಗಿಯೂ ನಿರೀಕ್ಷಿಸಲ್ಪಟ್ಟಿದೆ.

ಒಳದೇಶದ ವೃತ್ತಾಂತಗಳು

ರಾಜಧಾನಿಯಲ್ಲಿರುವ ಇಂಟರ್‌ಮೀಡಿಯೆಟ್ ಕಾಲೇಜ್ ದ ಮಹೋತ್ಸವವು ಇದೇ ಫೆಬ್ರುವರಿ ತಾ|| 1 ... ರಲ್ಲಿ ಕೆಲ ಅಸೋಸಿಯೇಷನ್ ... ನ ವರಣೆಯಿಂದ ನಡೆಯಲಿದೆ. ತಾ|| 16 ನೆಯ ಮಂಗಳವಾರ ನಡೆಯುವುದೆಂದು ಕಾರ್ಯನಿರ್ವಾಹಕ ಕಮಿಟಿಯ ಸೆಕ್ರೆಟರಿಗಳು ತಿಳಿಸುತ್ತಿರುತ್ತಾರೆ.

ರಾಜಧಾನಿಯಲ್ಲಿ ಸರಕಾರಿ ಪುಸ್ತಕ ವ್ಯಾಪಾರಿಗಳೂ ಮುದ್ರಾಪಕರೂ ಆದ ಮ|| ಕೆ ವಿ ರಾಮಶೆಟ್ಟಿ ಅಂಡ್ ಕೊ ಯವರು ಶ್ರೀ ಜಯಚಾಮರಾಜ ಒಡೆಯರವರ ಸುಂದರ ಛಾಯಾಚಿತ್ರದೊಡನೆ ಪ್ರಕಟಿಸಿರುವ 1932 ನೆಯ ವರ್ಷದ ಕ್ಯಾಲೆಂಡರನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸುತ್ತೇವೆ.

ಸಂಗೀತಶಾಸ್ತ್ರಜ್ಞ ಮ|| ವಾಸುದೇವಾಚಾರ್ಯರಿಗೆ ನವರತ್ನ ಕಂಠಾಭರಣ ಒರತಾಂಬರಕ್ಕಳಪ್ರದಾನೋತ್ಸವವು ಕೆಲ ದಿನಸಗಳ ಹಿಂದೆ ನಡೆಯಬೇಕಾಗಿದ್ದು ಅನಿರೀಕ್ಷಿತವಾದ ಅಡಚಣೆಯಿಂದ ನಿಂತುಹೋಗಿದ್ದುದು ಈ ದಿವಸ ಬೆಳಿಗ್ಗೆ ದಿವಾನ್ ಸರ್ ಮಿರ್ಜಾ ಎಂ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ನೆನ್ನೆಯ ಸಾಯಂಕಾಲ ರಾಜಧಾನಿಯ ಟವನ್ ಹಾಲಿನಲ್ಲಿ ಇಟಗಿಗೂಡು ವ್ಯಾಯಾಮಮಂದಿರದ ಡೈರೆಕ್ಟರಾದ ಪ್ರೊ. ಸರ್ ವಿ ಡಿ ಎಸ್ ನಾಯಿಡುಯವರು ತಮ್ಮ ಮತ್ತು ಶಿಷ್ಯರುಗಳ ಅದ್ಭುತ ಅಂಗಸಾಧನೆಗಳನ್ನು ಡಿಪ್ಯುಟಿ ಕಮಿಷನರ್ ಮ|| ಅಬ್ದುಲ್ ವಾಜಿದ್‌ರವರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಿ ಸಭಿಕರಿಗೆ ಆನಂದವನ್ನೂ ಆಶ್ಚರ್ಯವನ್ನೂ ಉಂಟುಮಾಡಿದರು.

ಕಳೆದ ತಾ|| 8 ನೆಯ ಶುಕ್ರವಾರ ಬೆಂಗಳೂರು ಲಾಲ್ಬಾಗಿನಲ್ಲಿ ಉದ್ಯಾನಗಳ ಸೂಪರಿಂಟೆಂಡೆಂಟರಾದ ಮ|| ಜವರಯ್ಯನವರಿಂದೇರ್ಪಡಿಸಲ್ಪಟ್ಟಿದ್ದ ಉದ್ಯಾನಗಳೊಳಗೆ ಬೆಳೆಯುವ ಗಿಡಗಳ ಮತ್ತು ಪುಷ್ಪಗಳ ಪ್ರದರ್ಶನವು ಬಹಳ ಸ್ವಾಗ್ಯವಾಗಿಯೂ ಸನ್ತೋಷಕರವಾಗಿಯೂ ನಡೆಯಿತು. ದೇಶೀಯ ಸಂಸ್ಥಾನಗಳ ವಿಚಾರಣಾ ಕಮಿಟಿಯ ಅಧ್ಯಕ್ಷರೂ ಮಂತ್ರಿಗಳೂ ಬಂದು ನೋಡಿ ಸಂತೋಷಿಸಿದರು.

ರಾಜಧಾನಿಯ ದೊಡ್ಡಪೇಟೆಯಲ್ಲಿರುವ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದ ಕಾರ್ಯನಿರ್ವಾಹಕ ಸಂಘದ ವಾರ್ಷಿಕ ಸಭೆಯು ಕಳೆದ ತಾ|| 31 ನೆಯ ಭಾನುವಾರ ಮ|| ಕಾವೇರಿ ಪಟ್ಟಣಂ ಸುಬ್ರಾಯಶೆಟ್ಟರ ಅಧ್ಯಕ್ಷತೆಯಲ್ಲಿ ಆವರ ಚತ್ರದೊಳಗೆ ನಡದು ಆ ದಿವಸದ ಕಾರ್ಯಕಲಾಪಗಳು ಮುಗಿಯದಿರಲಾಗಿ ಸಭೆಯು ಮತ್ತೊಂದು ವೇಳೆಗೆ ಮುಂದುವರಿಸಲ್ಪಟ್ಟುದಾಗಿ ಸಂಘದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

MYSORE AND THE ALL INDIA FEDERATION

(By Mr. B. S. ... SWAMY)

Mysore, Feb. 4

The States Enquiry Committee is due to arrive in Mysore on the 5th instant, an event which would naturally make the subjects of Mysore reflect on the financial and political implications of the intended entry of Mysore into the future federation. The question is of utmost importance to the people of the State, and what they feel and think about it, is a matter which ought to be one of no small significance to the members of the Committee. As a humble worker in the cause of the people of Mysore, I shall here attempt to indicate what I consider to be the best solution for the States joining the federation.

In expressing my view it seems to me that I should preface my remarks by making a few observations on the unique position which Mysore holds from the point of view of good and benign Government and how many of the drawbacks that are obtaining in the other Indian States are happily absent in our country. Endowed with abundant natural resources and incomparable natural beauty and blessed with a salubrity of climate, Mysore can be said to equal any part of British India. Above all, we have the supreme fortune of being ruled by a Maharaja who is constantly thinking of the welfare of his country and with almost individual eagerness looking after the welfare of his vast number of subjects.

While we are to a large extent satisfied with our existing political rights and obligations under our beloved ruler, the creation of all India federation being almost an accepted fact, makes it necessary for us to rethink our problems and revalue the old values in relation to the new constitution that is to be set up. It seems to me that when the history of India of this decade is to be written in future, by far the greatest credit will have to be assigned to the Indian States, who generously came forward to join the projected federation—a course which, had it not come to pass, would have made the solution of the Indian political problems bristle with difficulties almost insurmountable in character. In this connection we are proud of our Dewan who we hear, by his indefatigable and untiring efforts and with his matchless powers of persuasion and negotiation, won over the other unwilling Indian States and thus removed one of the biggest obstacles in the way of their participation in the future constitution.

The federal principle which has emerged out of the discussions at the R T C has no doubt evoked universal approbation. But we in Mysore feel that there is one circumstance which makes our ready participation in it [illegible] rather difficult and humiliating and that is the existence of the subsidy. The question of the immediate total abolition of the subsidy about which our Dewan made such a reasonable and irresistable appeal at the R T C is one in which we are all vitally interested. We regard it as a brand [illegible] a relic of serfdom, and an anachronism; the sooner it is removed the better [illegible] for the common weal of the subjects. It [illegible] crushing burden on the finances [illegible] the State. The taxable capacity of the [illegible] at low ebb, and under the existing [illegible] further taxation besides [illegible] practicable is [illegible] very pressing obligation [illegible] provision for Elementary [illegible] Drinking water supply in the Village [illegible] Health and sanitation [illegible] capital works of [illegible] others [illegible] resources [illegible] State are very [illegible] and financial [illegible] entirely [illegible] this the way must be [illegible] federation with the dignity [illegible]

The question [illegible] for us [illegible] the States [illegible] their [illegible] might to be [illegible] under standing before [illegible] From the trend [illegible] took place at the R T C [illegible] in [illegible] that [illegible] States [illegible] pay their quota towards the [illegible] the pre-war and post-war debt. [illegible] no justification for such an attitude in as much as the States particularly Mysore have contributed enormously both in men and money towards the prosecution of the great war. In my opinion we have to begin our united work under the new constitution with a clean slate so far as the past liabilities are concerned. The enormous profits that have been amassed by British India from Customs, Tariffs, Coinage and Currency, Post and Telegraphs from a long time to the exclusion of Indian States more than counterbalance the initial assets and past liabilities to be provided for by the federal Government. In view of the huge material sacrifice they have already made, the Indian States ought not to be made responsible either for the said assets or liabilities. The federal Government should levy only indirect taxes, as otherwise, the States will be hit hard. With regard to the emergency powers of the federal Government in regard to taxation, it seems to be that the same must be strictly defined and a schedule of taxes should be prepared before hand.

There is one other matter about which there is a general consensus of opinion among the State subjects and that is, that there should be a declaration of the fundamental rights of the State subjects in the federal constitution itself. No doubt the conditions in Mysore do not warrant the need for any such [illegible] so far as the Government is concerned; we have already the seeds of constitutional government [illegible] we are perfectly satisfied with the present order of things. But Mysore is an exception. The liberty of speech, the liberty of association, the liberty of press and the freedom of person are the very life breath of a free man and the denial of or even the uncertainty about any of these would mean the moral inadequacy of a State. There are States and States; and even in the good States circumstances might alter as time rolls on when the need for such a charter of liberties might be keenly felt in as much as it would act as a bulwark against the tyranny and oppression of a self willed and a selfish ruler.

With regard to the formation of the federal legislature, while I am in general agreement with the scheme proposed by Sir Mirza Ismail at the R.T C, so far as the Upper House is concerned, I am of opinion that the principle of election should be applied in the formation of the Lower House. Instead of the State Governments sending the nominated members to the Lower House it would be better if the people's representatives are elected to the popular house because the presence of the nominated members would result in what is called the 'Indian States Block' which would generally be under the leading strings of the Government. It would be in that case a far worse danger than the present "Official Block". After having provided for the election of members to the Lower House it is necessary to have at least one-third of the ministry of the federal Government recruited from among the States' representatives.

These are some of the suggestions to which the State subjects attach the greatest amount of importance. The claim is a very moderate and perfectly legitimate one. It is not in any spirit of distrust in our Government that I am offering these suggestions but with a desire to see that democratic principles are established and incorporated in the future constitution of India. The sense of political isolation which we, in the Indian States were feeling is disappearing with great rapidity. It is no longer possible for the Indian States to remain in the pool of placid contentment. We are being drawn into the vortex of the national current. The urge for acquiring free citizenship in the State and contributing our 'instructed judgment to the common good' is becoming more and more pronounced and irresistable. I am of opinion that wise and farsighted Statesmanship consists in satisfying this inner demand by affording us opportunities to rise to the full status of our political manhood. Only thus can greater good result to our nation and an ever abiding bond of union subsist between the Indian States and British India. May I earnestly hope that our appeal will receive that favourable response which it so justly deserves?

೩೦ ಸಾವಿರ ರೂಪಾಯಿಗೆ ದಾವಾ

ಕೋಮಿಲ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರಾಗಿದ್ದ ಸ್ಟೀವನ್ಸ್ ರವರ ಕೊಲೆಯ ವಿಚಾರವು ಮುಗಿಯುವ ವೇಳೆಯಲ್ಲಿ ಭಾರತ ಸ್ತ್ರೀಯರನ್ನು ಕುರಿತು ಅಸಂಬದ್ಧವಾಗಿ ಮಾತನಾಡಿದರೆಂದು ವಸುಮತಿ ಎಂಬ ದಿನ ಪತ್ರಿಕೆಯು ಬರೆದಿದ್ದುದಕ್ಕಾಗಿ ಬಂಗಾಳ [illegible] ಜನರಲ್ ರವರಾದ ಎಚ್ ಎಚ್ ಸರ್ಕಾರ್ ರವರು ಆ ಪತ್ರಿಕೆಯ ಮೇಲೂ ಸಂಪಾದಕರ ಮೇಲೂ 30,000 ರೂಪಾಯಿಗಳಿಗೆ ವಿವಾದವನ್ನು ಹೂಡಿರುತ್ತಾರೆ.

ಕಾಶೀಕ್ಷೇತ್ರ ಸಂರಕ್ಷಣೆ.

ಕಾಶೀಕ್ಷೇತ್ರದಲ್ಲಿ ಗಂಗಾಪ್ರವಾಹವು ಪ್ರತಿ ವರ್ಷದಲ್ಲೂ ಹೆಚ್ಚುತ್ತಿರುವುದರಿಂದ ಘಟ್ಟವು ಶಿಥಿಲವಾಗಿ ಕಾಲಕ್ರಮೇಣ ಪಟ್ಟಣವು [illegible] ನಾಶವಾಗುವ ಸಂಭವ ಉಂಟೆಂದು ಭೋಗ್ನೆರ್‌ ರಾಜ್ಯದ, ಕಾಶೀತೀರ್ಥ ಟ್ರಸ್ಟಿನವರಿಗೆ ಮಾಡಿದ್ದ [illegible] ಲಾರ್ಡ್ ಇರ್ವಿನ್ ರವರು ವೈಸ್ರಾಯರಾಗಿ [illegible] ಅವರ ಗಮನಕ್ಕೆ ತರಲ್ಪಟ್ಟಿದ್ದಿತು. ಆದರೆ ದುಡ್ಡಿನ ಕೊರತೆಯು ಎಲ್ಲದಕ್ಕೂ ತೋರುತ್ತದೆ. ಗಂಗಾ ಪ್ರವಾಹವು ಇತ್ತೀಚೆಗೆ ಪ್ರಬಲವಾಗುತ್ತಿರುವುದರಿಂದ ಘಟ್ಟವು ಶಿಥಿಲವಾಗಿ ಕಾಶೀಪಟ್ಟಣಕ್ಕೆ ಮಹಾ ಅಪಾಯವುಂಟಾಗುವ ಸಂಭವವು ಬಹಳವಾಗಿರುತ್ತದೆಂದು ಸಮರ್ಥರಾದ ಇಂಜನಿಯರುಗಳು ಪರೀಕ್ಷಿಸಿ ಹೇಳಿರುತ್ತಾರೆ. ಆದ್ದರಿಂದ ಈ ಮಹಾಕ್ಷೇತ್ರ ರಕ್ಷಣಾರ್ಥವಾಗಿ ಕ್ಷೇತ್ರದ ಟ್ರಸ್ಟಿನವರೂ ಭಾರತ ಪ್ರಭುತ್ವದವರೂ ದುಡ್ಡಿನ ಅಭಾವವನ್ನು ಮುಂದುಮಾಡದೆ ತಕ್ಕ ಏರ್ಪಾಟನ್ನು ಮಾಡುವುದು ಅಗತ್ಯವಾಗಿರುತ್ತದೆ.

OFFICE OF THE CHAIRMAN,
Mysore City Improvement Trust Board
Dated 29th January 1932

NOTICE

It is hereby notified for the information of the public that eight Model houses each costing about Rs 1,650 near New Transformer Station in Narasimharaja Mohalla, Mysore city, are available for sale, to the residents of the Mysore city who are poor and do not possess houses of their own. Intending purchasers should apply to the under signed before *12th February 1932*.

2. Information regarding the terms of sale etc, can be had at the Chairman's office during office hours.

3. In disposing of the houses, preference will be given to those who pay the value of the house in full soon after the allotment of the house.

T G RAMA IYER,
Chairman,
City Improvement Trust Board, Mysore

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟುಬೋರ್ಡು.
ತಾ|| 29-1-1932

ನೋಟೀಸು.

ಮೈಸೂರು ಸಿಟಿ ನರಸಿಂಹರಾಜಮೊಹಲ್ಲಾ ಹೊಸ ಟ್ರಾನ್ಸ್‌ಫಾರ್ಮರ್ ಹೌಸುಬಳಿ ಕಟ್ಟಿರತಕ್ಕ ಎಂಟು ಮಾದರೀ ಮನೆಗಳನ್ನು ಮೈಸೂರು ಸಿಟಿಯಲ್ಲಿ ವಾಸಮಾಡುವ ಮತ್ತು ಸ್ವಂತ ಮನೆಯಿಲ್ಲದ ಬಡವರಿಗೆ ಖರೀದಿಗೆ ಕೊಡಲಾಗುತ್ತೆ. ತೆಗೆದುಕೊಳ್ಳಲು ಅಪೇಕ್ಷಿಸುವವರು ಮೈಸೂರು ಸಿಟಿ ಇಂಪ್ರೂವ್‌ಮೆಂಟು ಟ್ರಸ್ಟುಬೋರ್ಡು ಛೇರ್ಮನ್‌ರವರಿಗೆ 1932 ನೇ ಫೆಬ್ರವರಿ 12 ನೇ ತಾರೀಖಿನ ಒಳಗೆ ಅರ್ಜಿಯನ್ನು ಕಳುಹಿಸತಕ್ಕದ್ದು.

2 ಈ ಮನೆಗಳ ಖರೀದಿ ಮೊಬಲಗು ಸುಮಾರಾಗಿ ಮನೆ 1 ಕ್ಕೆ 1,650 ರೂ ಗಳು ಆಗುತ್ತೆ. ಷರತ್ತಿನ ತಪಶೀಲು ವಗೈರೆ ಪಡ್ಡು ವಿಷಯಗಳನ್ನು ಛೇರ್ಮನ್‌ರವರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

3 ಮನೆಯನ್ನು ಅಲಾಟು ಮಾಡೋಣದರಲ್ಲಿ ಅಲಾಟ್ ಆದಕೂಡಲೆ ಮನೆಯ ಪೂರಾ ಖರೀದಿ ಮೊಬಲಗನ್ನು ವಾಪತಿಮಾಡುವವರಿಗೆ ಪ್ರಾಶಸ್ತ್ಯ ಕೊಡಲಾಗುತ್ತೆ.

T G RAMA IYER
ಛೇರ್ಮನ್,
ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟುಬೋರ್ಡು, ಮೈಸೂರು

ಪತ್ರವ್ಯವಹಾರ

ಪತ್ರವ್ಯವಹಾರರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಹೋದರರು ತಿಳಿಯತಕ್ಕದ್ದು.—ಸಂಪಾದಕ

ಹಣ್ಣಿನ ಗುಣ ಹೀಚಿನಲ್ಲಿ

ಎಂಬ ನಾಣ್ಣುಡಿಯಂತೆ ಯಾವನು ಬಾಲ್ಯದಲ್ಲಿಯೇ ವೈರಾಗ್ಯಶೀಲವನ್ನು ಆಚರಿಸಿ ಅಂತ್ಯದಲ್ಲಿ ಅಸಾಧಾರಣ [illegible]

[illegible]

ಹೋದರು, ಅವರ ... ದಶಲಕ್ಷ ... ಯನ್ನು ... ಮಾಡಿದ ಕಾರಣಗಳು ... ಪ್ರತ್ಯುತ್ತರಗಳ ...

ಶ್ರೀ ... ಕಾಶಿ ...

ಕಾಶಿಯಲ್ಲಿರುವ ಶ್ರೀ ಜಗದ್ಗುರು ಜಯದೇವ ಶ್ರೀ ವಿದ್ಯಾರ್ಥಿಗಳ ವಾರ್ಷಿಕ ಸಭೆ

ಪದ್ಧತಿ ಪ್ರಕಾರ ತಾ|| ೨೬-೧೧-೩೧ ರಲ್ಲಿ ಶ್ರೀ ಜಯದೇವ ಶ್ರೀ ಬೋರ್ಡಿಂಗಿನ ಸರಸ್ವತೀ ಭವನದಲ್ಲಿ ವಾರ್ಷಿಕ ಸಭೆಯು ಕಾರ್ಯಕ್ರಮ ಗಳ ಜರಗಿತು. ಸಮಯಕ್ಕೆ ಆಗಮಿಸಿದ ಮ|| ರ| ಬಿ ದ್ಯಾವರ್ಣ ಬಿ.ಎ. ಎಲ್.ಎಲ್.ಬಿ ... ಚಂದ್ರನಾಗಪ್ಪ ಬಿ.ಎ. ಎಲ್.ಎಲ್.ಬಿ ... ವಿದ್ಯಾರ್ಥಿಗಳೆಲ್ಲರೂ ... ಅಧ್ಯಕ್ಷ ಸ್ಥಾನವನ್ನು ... ಚಂದ್ರನಾಗಪ್ಪ ಬಿ.ಎ. ಎಲ್.ಎಲ್.ಬಿ ರವರು ... ಸ್ವೀಕರಿಸಿದರು. ಅನಂತರ ... ವಿದ್ಯಾರ್ಥಿಗಳ ...

ವರದಿ — ನಾವು ಜಯದೇವ ಬೋರ್ಡಿಂಗಿನ ವಿದ್ಯಾರ್ಥಿಗಳೆಲ್ಲರೂ ... ಕಾಶಿ ... ಸಂಗತಿಯನ್ನು ... ಅನಂತರ ... ವಿದ್ಯಾರ್ಥಿಗಳ ... ವಾರ್ಷಿಕ ಸಭೆಯು ಮುಗಿಯಿತು.

ಬಸವರಾಜಪ್ಪ ಇಟಗಿ

ಗೌತಮಾದಿ ಮಹರ್ಷಿಗಳು ವೀರಶೈವರಲ್ಲವೆ

1931 ನೇ ಅಕ್ಟೋಬರ 12 ಮತ್ತು 26 ನೇ ... ಪತ್ರಿಕೆಗಳಲ್ಲಿ ... ವೀರಶೈವ ... ಗೌತಮಾದಿ ಮಹರ್ಷಿಗಳು ... ವೀರಶೈವ ಧರ್ಮಗ್ರಂಥಗಳು ... ಗೌತಮಾದಿ ಮಹರ್ಷಿಗಳು, ಸರಸ್ವತೀ ... ವೀರಶೈವರಲ್ಲವೆಂದು ...

... ಲಿಂಗ ... ಆದರೆ 1 ಕೋಟಿ ... ಇಷ್ಟಲಿಂಗ ... ವೀರಶೈವ ... ಜಂಗಮ ... ಗುರುವನ್ನು ... ಲಿಂಗವನ್ನು ... ಶ್ರೀ ... ಮಹರ್ಷಿಗಳು ...

ಸಂಸ್ಕೃತ ... ಜಿ. ಎಸ್. ಶಿವರುದ್ರಪ್ಪ ... ಬಸವಣ್ಣ ... ಶಾಸ್ತ್ರಿ, ತಿಪಟೂರು.

ಶ್ರೀ ವೀರಶೈವ ಮಹಾಸಭೆಯು

(ಲೇಖಕ — ಎಸ್. ಜೇ. ... ಸಂಸ್ಕೃತ ಕಾಲೇಜ ...)

೩೪ ವರ್ಷಗಳಿಂದಲೂ ... ಈ ಸಭೆಯು ... ಭಾರತ ... ವೀರಶೈವ ಮಹಾಸಭೆಯು ...

"If wishes were horses all would have ridden them if wishes were crowns, all would have become kings" ಎಂಬ ಇಂಗ್ಲೀಷ ... ನಾಣ್ಣುಡಿಯಂತೆ ... ಗೌತಮ ... ನಡೆಯುವಿಕೆಗೆ ... ಮಠಗಳು ...

[illegible] "Too many men spoil the broth" [illegible]

[illegible] (Constructive work) [illegible]

[illegible] (Constitution) [illegible]

(ಸಶೇಷ)

ರಥೋತ್ಸವ ಪತ್ರಿಕೆ

ಕೃಷ್ಣರಾಜಪೇಟೆ ತಾಲ್ಲೂಕು ಕಸಬಾಹೋಬಳಿ ವ [illegible] ದಾಖಲೆ [illegible] ಗವಿಮಠದಲ್ಲಿ ನೆಲಸಿರುವ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರಸ್ವಾಮಿಯ ರಥೋತ್ಸವವು ಪದ್ಧತಿಯಂತೆ ಈ ಪ್ರಜೋತ್ಪತ್ತಿನಾಮ ಸಂವತ್ಸರದ ಮಾಘ ಶು॥ ೧೩ ಶನಿವಾರ ಮತ್ತು ೧೪ ಭಾನುವಾರ ಗಣಪತಿಪೂಜೆ ಪುಣ್ಯಾಹ ನಾಂದಿ ಪಂಚಕಲಶಸ್ಥಾಪನೆ ಮೊದಲಾದ ಕಾರ್ಯಗಳು ನಡೆದು [illegible] ಸೋಮವಾರ ಮಖಾನಕ್ಷತ್ರ [illegible] ಘಳಿಗೆಯ ಮೇಲೆ ೧೩ ಘಳಿಗೆಯೊಳಗೆ ಸಲ್ಲುವ ವೃಷಭಲಗ್ನದಲ್ಲಿ ರಥಾರೋಹಣ ಮೊದಲಾದ ಕಾರ್ಯಗಳೂ, ಮಾಘ ಬ॥ ೨ ಮಂಗಳವಾರ ಗಿರಿಜೋತ್ಸವ [illegible] ಕೋತ್ಸವವೂ, ೩ ನೇ ಬುಧವಾರ ತೆಪ್ಪೋತ್ಸವವೂ ೪ ನೇ ಗುರುವಾರ ಮಹಾಂಗುದ್ದ್ಯಾಭಿಷೇಕವೂ ನಡೆಸಲ್ಪಡುವುದರಿಂದ ತಾವು ಬಂಧುಮಿತ್ರರುಗಳೊಡನೆ ದಯಮಾಡಿಸಿ ಸ್ವಾಮಿಯ ಸೇವಾಕಾರ್ಯವನ್ನಾಗನಾಡಿಸಿ ಆತನ ಕೃಪೆಗೆ ಪಾತ್ರರಾಗಬೇಕೆಂದು ಕೋರುವ, ಸ್ಥಾನಿಕ ಸ್ವತಂತ್ರಯ್ಯ

ವಾರ್ಷಿಕೋತ್ಸವ ವಾಹ್ವಾನ

[illegible] ಮಾಘ ಶು॥ ೫ (ತಾ॥ 11-2-32) ನೇ ಗುರುವಾರ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಶ್ರೀ ಬೋರ್ಡಿಂಗ ಹಾವೇರಿಪೇಟ ಧಾರವಾಡ ಈ ಸಂಸ್ಥೆಯ 15 ನೇ ವರ್ಷದ ವಾರ್ಷಿಕ ಸಮಾರಂಭೋತ್ಸವವು ಜರಗುತ್ತದೆ. ಅದೇ ದಿವಸ ಧಾರವಾಡ ವೀರಶೈವ ಭಕ್ತಿಯಿಂದ [illegible] ಪೂಜಾವಿಧಿಗಳು ಜರುಗುತ್ತದೆ ಮತ್ತು [illegible] ಬೋರ್ಡಿಂಗ ಸಂಸ್ಥೆಯ ವತಿಯಿಂದ ವೀರಶೈವ ಅನಾಥ ಬಾಲಕರ ಸಲುವಾಗಿ ಶ್ರೀ ಬಸವಾದಿಪ್ರಮಥರ ಹೆಸರಿನಿಂದ ಒಂದು ವಿದ್ಯಾಲಯವು [illegible] ಶ್ರೀ ವೀರಭದ್ರೇಶ್ವರ ಹೆಸರಿನಿಂದ ಒಂದು [illegible] ಅಧ್ಯಕ್ಷರಾದ ವೇ॥ ಟಿ. ಎಚ್. ಎ. [illegible] ಎಂ. ಎ. ಬಿ. ಎಲ್. ಇವರ ಹಸ್ತದಿಂದ ತೆರೆಯಲ್ಪಡುತ್ತದೆ [illegible]

ಬಸಪ್ಪಾ [illegible]
ಶ್ರೀ ಜ. ಮು. ಶ್ರೀ ಬೋರ್ಡಿಂಗ.

[illegible]

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಘ ಶುದ್ಧ
8	ಸೋಮ	ಬಿದಿ	35 58	ಪಕ	37 1	26
9	(1) ಮಂಗಳ	ತದಿ	30-45	ಪೂಭಾ	43 5	27
10	ಬುಧ	ಚೌತಿ	44 20	ಉಭಾ	17 58	28
11	ಗುರು	ಪಂಚ	49 45	ರೇವ	54 25	29
12	(2) ಶುಕ್ರ	ಷಷ್ಠಿ	55 20	ಅಶ್ವಿ	60	1
13	ಶನಿ	ಸಪ್ತ	60	ಅಶ್ವಿ	0 8	2
14	(3) ಭಾನು	ಸಪ್ತ	0 26	ಭರ	7 28	3

(1) [illegible] (2) [illegible] (3) ರಥಸಪ್ತಮಿ.

ಮೈಸೂರು: [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕರಿಗೆ ಶೀಘ್ರಗುಣಕಾರಿ ಔಷಧ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ [ಸ್ಥಿರ

ಸ್ತ್ರೀಯರಿಗೂ [illegible]

[illegible]

ಸ್ತ್ರೀರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[50—8]

ಪತ್ರ ಮೂಲಕ:—ವೈದ್ಯ ವ್ಹಿ. ಎಸ್. ಕಾಪಸೆ ಮು. ಪೋ. ಮಿರಜ ಎಂ. ಎಸ್. ಎಂ.

REG. No. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವ ವರ್ತಮಾನ ಪತ್ರಿಕೆ

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೨-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸರ್ ೧೯೩೨ ನೆಯ ಇಸವಿ ಫೆಬ್ರವರಿ ತಾರೀಖು ೧೫ ನೆಯ ಸೋಮವಾರ [ಸಂಚಿಕೆ ೭

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best safest cheapest most profitable and most convenient place for insurance is the Public Branch of the Mysore State Life Insurance.

Policies are issued from Rs. 100 to Rs. 10,000 and copies of rules and forms of application can be had from all Government Treasuries, Economic Superintendents, Helpers and the Insurance Office, Public Office Buildings, Bangalore.

(Sd.) S. SHAMANNA,
Secretary, Insurance Committee.

[60—32

ಲಗ್ನಪತ್ರಿಕೆಗಳ

ಮುದ್ರಣಕ್ರಮ

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಆಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	ವಿ. ಪಿ. ಸಹ
ವೀರಶೈವ ಶಿವಪೂಜಾವಿಧಿ	೦—೧೨—೦	೧—೩—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲ [illegible]	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
ಪ್ರಭುಲಿಂಗಲೀಲೆ	೦—೪—೦	೦—೯—೦
[illegible]	೦—೧—೦	೦—೬—೦
ಬಸವೇಶ್ವರವಚನ	೦—೫—೦	೦—೧೦—೦
ಸಟೀಕ [illegible] ಮಂಜರಿ	೦—೮—೦	೦—೧೩—೦
ಸಟೀಕ [illegible]	೧—೦—೦	೧—೫—೦

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕರಿಗೆ ಕ್ಷೀಣರಾಗ ಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜ] ವಜ್ರಾಂಗ ಸುಂದರಪಾಕವ [ಸ್ವರ

ಧಿಕ್ಕಾರ ಬರೆ ಕ್ಷೀಣತೆ ಕಾಯ್ದು ಕೊಳ್ಳಿರಿ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—1]

ಚಿಕಿತ್ಸಾಮಾಲಕ.—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ ಬೀ ಯವರ

ಸುಗಂಧ ನಶ್ಯದ ಪುಡಿ.

[illegible]

(Registered Trade Mark)

[illegible]

ವಿಳಾಸ.—ಗುರುಬಸವ ಆಂಡ್ ಕಂಪೆನಿ ಲಿಮಿಟೆಡ್, ಪೋ. ಬಾ. ೫೧೧, ಮದರಾಸು.

[60—21]

ಮೈಸೂರು ಸ್ಟಾರ್

[illegible] ಹೊಸ [illegible]

KASHMIR TROUBLES

It is not without more than a passing interest that the Indian public has been watching the troubles in Kashmir which seemed at first to be of a temporary character but which now appears to be a more organised revolt on the part of the Muslim subjects of that State. The placid waters of Kashmir political life never got troubled until about 7 or 8 months ago the outside elements began to foment mischief in the State, importing the unhealthy communal feelings prevailing in North India between Hindus and Muslims. Kashmir is one of those few States where the majority of the subjects belong to the Muslim community and ruled by a Hindu prince. So far as one could see the Hindu ruler has been holding the scales evenly and carrying on his administration in an absolutely impartial manner. He has even gone to the extent of reserving 50 percent of the appointments to the Muslim community. That in spite of all this there should be such serious disturbances in various parts of the State is altogether unreasonable and unjustifiable. No doubt the Kashmir Durbar is taking effective steps to quell the disturbances and they may not have very much of difficulty in restoring peace and order. But it cannot be said that the outside public should not take an active interest in seeing that the efforts of Kashmir Durbar are supported and in trying to dissuade the troublesome elements from pursuing in their thoughtless and suicidal policy of defying authority and exhibiting lawlessness. It is quite up to the leaders in North India who can wield some effective influence—particularly Muslim leaders—to exercise their wholesome influence on the Muslim subjects of that State and stop the trouble in the early stages. Otherwise it is not only that Kashmir might suffer. The contagion may spread to other States where the majority is Hindu but which are presided over by Muslim rulers. Already we see that in the Nizam's State a Hindu agitation is afoot to secure their just rights. Though one need not anticipate a similar conduct on their part still such a display of communal feelings as is exhibited by the rebellious elements in Kashmir is sure to engender similar feelings in other States which can hardly bode good to the people. Even if things are not all that could be desired in a State there is a way to get the grievances redressed, in a perfectly legitimate and constitutional manner. But one cannot too strongly deprecate resort to lawlessness and terrorism by any section however aggrieved it might feel on any matter but when one sees that there are hardly any grounds to feel aggrieved even the slight justification vanishes and one has to look for other extraneous reasons for such a course of conduct. We hope that things will quiet themselves down soon in our sister State of Kashmir and she will be in a position to join the new federation of a greater India that is being forged.

ಕಾಶ್ಮೀರದ ತೊಂದರೆಗಳು

ಕಾಶ್ಮೀರದ ತೊಂದರೆಗಳು ಆರಂಭದಲ್ಲಿ ತಾತ್ಕಾಲಿಕ ವಾಗಿದ್ದು ಈಗ ಸಂಸ್ಥಾನದ ಮಹಮ್ಮದೀಯ ಪ್ರಜೆಗಳಿಂದ ಹೆಚ್ಚಾಗಿ ನಡೆಸಲ್ಪಡುತ್ತಿರುವ ದಂಗೆಯಾಗಿ ಪರಿಣಮಿಸಿರು ದ್ದರಿಂದ, ಇದರ ಪರಿಣಾಮವನ್ನು ಭಾರತೀಯರು ಬಹಳ ಕುತೂಹಲದಿಂದ ನಿರೀಕ್ಷಿಸುತ್ತಿರುವರು. 7–8 ತಿಂಗಳ ಹಿಂದೆ ಸಂಸ್ಥಾನದ ಹೊರಗಣ ಚಳುವಳಿಕಾರರು ಉತ್ತರ ಹಿಂದೂಸ್ಥಾನ ದಲ್ಲಿ ಹಿಂದೂ ಮಹಮ್ಮದೀಯರಿಗಿರುವ ಮತಸಂಬಂಧವಾದ ಕಲಹ ವನ್ನು ಕಾಶ್ಮೀರ ಸಂಸ್ಥಾನದಲ್ಲೂ ಹುಟ್ಟಿಸಿ ಚಳವಳಿ ಮಾಡುವ ವರೆಗೂ ಕಾಶ್ಮೀರ ರಾಜಕೀಯ ಜೀವನವು ಯಾವ ವಿಧವಾದ ತೊಂದರೆಯೂ ಇಲ್ಲದೆ ಶಾಂತವಾಗಿದ್ದಿತು. ಕೆಲವು ರಾಜ್ಯಗಳಂತೆ ಕಾಶ್ಮೀರ [illegible] ಪ್ರಜೆಗಳ ಸಂಖ್ಯೆಯು ಹೆಚ್ಚಾಗಿದ್ದು ಹಿಂದೂ ರಾಜರ ಪರಿಪಾಲನೆಗೆ ಒಳಪಟ್ಟಿರುತ್ತದೆ. ಈ ಹಿಂದೂ ದೊರೆಯು [illegible] ತಕ್ಕಡಿಯನ್ನು ಸಮವಾಗಿ ಹಿಡಿದು ಹಿಂದು ಮಹಮ್ಮದೀಯ ಪ್ರಜೆಗಳನ್ನು [illegible] ಆಡಳಿತವನ್ನು [illegible] ಪ್ರತಿಶತ 50 [illegible] ಮಹಮ್ಮದೀಯರಿಗೆ ಸರಕಾರದ ಉದ್ಯೋಗಗಳಲ್ಲಿ ಕೊಡುವ [illegible] ಸ್ಥಾನಗಳನ್ನು ಕಾದಿಟ್ಟು (ರಿಜರ್ವ್ ಮಾಡಿ) ಇಷ್ಟೆಲ್ಲಾ ಹೊಗಿ ದ್ದಾಗ್ಯೂ ಸಂಸ್ಥಾನದ ಅನೇಕ ಭಾಗಗಳಲ್ಲಿ ಭೀಕರವಾದ ತೊಂದರೆಗಳುಂಟಾಗಿರುವುದು ಬಹಳ ಅಸಂಗತವೂ ಅನ್ಯಾಯ ವೂ ಆಗಿರುತ್ತದೆ. ಕಾಶ್ಮೀರ ದರ್ಬಾರಿನವರು ಈ ಗೊಂದಲ ವನ್ನು ಅಡಗಿಸಲು ತಕ್ಕ ಪ್ರಯತ್ನ ಮಾಡಿರುತ್ತಾರೆ ಮತ್ತು ಶಾಂತಿಸಮಾಧಾನವನ್ನುಂಟುಮಾಡಲು ಅವರುಗಳಿಗೇನೂ ಕಷ್ಟ ವಾಗಿಲ್ಲ. ಆದರೆ ಈ ಗೊಂದಲವನ್ನು ಅಡಗಿಸಲು ಕಾಶ್ಮೀರ ದರ್ಬಾರಿನವರು ಮಾಡುತ್ತಿರುವ ಪ್ರಯತ್ನದಲ್ಲಿ ಹೊರಗಣ ದೇಶ ದವರು ಸಹಕರಿಸಬಾರದೆಂದೂ, ದಂಗೆಕೋರರು ಪೂರ್ವಾಪರ ಜ್ಞಾನವಿಲ್ಲದೆ ಪ್ರಭುತ್ವಾಧಿಕಾರವನ್ನು ಧಿಕ್ಕರಿಸಿ ದೊಂಬಿಯನ್ನು ನಡೆಸುವ ಆತ್ಮಘಾತಕ ಪ್ರಯತ್ನವನ್ನು ಮಾನಸಿಕವಾಗುವಂತೆ ಅವರುಗಳಿಗೆ ಬೋಧಿಸಬಾರದೆಂದೂ ಹೇಳಲಾಗುವುದಿಲ್ಲ. ಉತ್ತರ ಹಿಂದೂಸ್ಥಾನದ ಮುಖಂಡರುಗಳು ಮುಖ್ಯವಾಗಿ ಮಹಮ್ಮದೀ ಯ ವರ್ತಕುಬಾರಿ ಮುಖಂಡರುಗಳು ಸಂಸ್ಥಾನದ ಮಹಮ್ಮದೀ ಯ ಪ್ರಜೆಗಳಿಗೆ ಬೋಧಿಸಿ ಗೊಂದಲವನ್ನು ಆರಂಭದಲ್ಲೇ ನಿಲ್ಲಿಸ ಲು ಪ್ರಯತ್ನಪಡುವುದು ಅವಶ್ಯಕವಾಗಿದೆ. ಹಾಗಿಲ್ಲದಿದ್ದಲ್ಲಿ ಈ ಗೊಂದಲದಿಂದ ಕಾಶ್ಮೀರ ಸಂಸ್ಥಾನವೊಂದೇ ತೊಂದರೆಯನ್ನು ಅನುಭವಿಸುವುದಿಲ್ಲ. ಅದರ ಸೋಂಕು ಹಿಂದೂ ಪ್ರಜೆಗಳೇ ಹೆಚ್ಚಾ ಗಿದ್ದು, ಮಹಮ್ಮದೀಯ ರಾಜರುಗಳಿಂದಾಳಲ್ಪಡುವ ರಾಜ್ಯ ಗಳಿಗೆಲ್ಲ [illegible] ಸುವುದು. ಆಗಲೇ ನೈಜಾಂ ಸಂಸ್ಥಾನದಲ್ಲಿ ಹಿಂದುಗಳು ಸರಕಾರದ ಉದ್ಯೋಗ ಮೊದಲಾದ ವಿಚಾರಗಳಲ್ಲಿ ತಮಗಿರಬೇಕಾದಷ್ಟು ಹಕ್ಕು ಬಾಧ್ಯತೆಗಳನ್ನು ಹೊಂದಲು ಚಳ ವಳಿಯನ್ನು ನಡೆಸಲು ಪ್ರಯತ್ನಿಸುತ್ತಾರೆ. ಆದರೆ ಅವರು ಕಾಶ್ಮೀರದವರ ನಡವಳಿಕೆಯನ್ನು ಅನುಸರಿಸುವರೆಂದು [illegible] ಸುವ ಸಂಭವವಿಲ್ಲವಾದರೂ ಕಾಶ್ಮೀರದಲ್ಲಿ ಹೊಂಚುಕೋರರ್ [illegible] ಸಿರುವಂತಹ ಮತ [illegible] ದಿಂದ ಇತರ ಸಂಸ್ಥಾನಗಳಲ್ಲೂ ಪ್ರಜೆಗಳ ಮನಸ್ಸು ಕೆಡುವುದ [illegible] ವುದರಿಂದ [illegible] ಸಂಸ್ಥಾನ [illegible] ಪ್ರಜೆಗಳಿಗು [illegible] ಪಡಲು ಸಾಧ್ಯವಾಗುವುದಿಲ್ಲ. [illegible] ಸಂಸ್ಥಾನದಲ್ಲಿ ನಡೆಯುವ [illegible] ವಾಗಿಲ್ಲದಿದ್ದರೂ ಪ್ರಜೆಗಳು ತಮ್ಮ ಕುಂದುಕೊರತೆಗಳನ್ನು [illegible] ಸ್ವಾಯತ್ತ ವಾದ ಮತ್ತು ಸಕ್ರಮವಾದ ಮಾರ್ಗದಲ್ಲಿ [illegible] ಮಾನಸಂಗ್ರಹದವರಾಗಿ [illegible] ಗುಂಪಾಗಿ ದ್ದಾಗ್ಯೂ ಅನಾಯಿ [illegible] ನಡೆಸತಕ್ಕುದಲ್ಲ. ಮನಸ್ಸೋಭೆಗೆ ಕಾರಣವೇ ಇಲ್ಲದಿರುವಾಗ ಅತ್ಯಾಚಾರ ವರ್ತನೆಗೆ [illegible] ಬೇರೆ ಕಾರಣವಿರಬೇಕೆಂದು ತೋರುತ್ತದೆ. ಯಾವುದಾದ ರೊಂದು ಕಾರಣವನ್ನು ಹುಡುಕುವರು. ನಮ್ಮ ಸೋದರ ಕಾಶ್ಮೀರ ಸಂಸ್ಥಾನದಲ್ಲಿ ಗೊಂದಲವೆಲ್ಲವೂ ಶಾಂತವಾಗಿಯೇ ಸಮಾಧಾನವಾಗಿ ಮುಂದೆ ಏರ್ಪಡಿಸಲ್ಪಡಲಿರುವ ಸಮಾಖ್ಯ ಭಾರತಸ್ಥಾಪನೆಯಲ್ಲಿ ಭಾಗಿಯಾಗಲು ಅದು ಸಂಸಿದ್ಧವಾಗುವು ದೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು

ಕಲ್ಕತ್ತಾ [illegible] ಇನ್ಷೂರನ್ಸ್ ಕಂಪೆನಿಯು 1932 ನೆಯ ವರ್ಷದ ಮುಂದಿನ ಕಾಲಿಂಡರನ್ನು ರಾಜಧಾನಿ ಯಲ್ಲಿ ಈ ಕಂಪೆನಿಯ [illegible] ಮ|| [illegible] ಸುಬ್ಬರಾಯರಿಂದ ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ರಾಜಧಾನಿಯ ಇಟಿಗೆಗೂಡು, ವ್ಯಾಯಾಮಮಂದಿರದ ಡೈರೆಕ್ಟರಾದ [illegible] ಡಿ [illegible] ನಾಯಿಡುರವರು ಶ್ರೀ ಜಯಚಾಮರಾಜ ಒಡೆಯರವರ ವ್ಯಾಯಾಮ ಬೋಧಕ ರಾಗಿ ನಿಯಮಿಸಲ್ಪಟ್ಟಿರುತ್ತಾರೆಂದು ತಿಳಿಯಲು ಸಂತೋಷ ವಾಗುತ್ತದೆ. ಮ|| ನಾಯಿಡುರವರು ಈ ಉದ್ಯೋಗಕ್ಕೆ ತಕ್ಕ ವರಾಗಿರುತ್ತಾರೆ.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಿಯವರಿಗೆ ಸಂ ಪೂರ್ಣ ಆರೋಗ್ಯವಾದುದರ ಸಂತೋಷಪ್ರದರ್ಶನಾರ್ಥ ವಾಗಿ ರಾಜಧಾನಿಯಲ್ಲಿರುವ ಬೆಂಗಳೂರು ಸಿಲ್ಕ್ ಮತ್ತು ಜೀಪುಕ್ಲಾ ತು ಎಂಪೋರಿಯಂ ಯಜಮಾನರಾದ ಮ|| ಅರ್ವೇಟಿ ಲಕ್ಷ್ಮೀ ನಾರಾಯಣ ಶೆಟ್ಟರು ಕಳೆದ [illegible] ವಾರ ನೂರಾರು ಬಡ ಜನ ರಿಗೆ ಅನ್ನವನ್ನು ಹಾಕಿಸಿದರು.

ರಾಜಧಾನಿಯಲ್ಲಿರುವ ಸಾಹುಕಾರ್ ಚಿಬ್ಬಹಳ್ಳಿ ಚನ್ನಬಸ ಪ್ಪನವರ ವೀರಶೈವ ವಿದ್ಯಾರ್ಥಿನಿಲಯದ ನಿವಾಸಿಗಳು ಧರ್ಮ ಕರ್ತರ ವಾರ್ಷಿಕೋತ್ಸವವನ್ನು ಕಳೆದ ತಾ|| 13 ನೆಯ ಶನಿ ವಾರ ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿಜ್ಞಾನಶಾಸ್ತ್ರ ಪಂಡಿತರಾದ ಡಾ|| ಬಿ [illegible] ಮಂಜುನಾಥ, ಬಿ.ಎ., ಎಂ ಎಸ್ ಸಿ., (ಲಂಡನ್) ಡಿ ಫಿಲ್ (ಆಕ್ಸನ್) ರವರ ಅಧ್ಯಕ್ಷ ತೆಯಲ್ಲಿ ನೆರವೇರಿಸಿದರು.

ಸಂಸ್ಥಾನಗಳ ವಿಚಾರಣ ಕಮಿಟಿಯ ಮೆಂಬರುಗಳಲ್ಲಿ ಇಬ್ಬರು ಮೂವರು ಕಾರಣಾಂತರದಿಂದ ರಾಜಧಾನಿಯಲ್ಲೇ ಇದ್ದವರು [illegible] ವರುಗಳನ್ನು [illegible] ಕಳೆದ [illegible] ಮೈಸೂರು [illegible] ನ್ಯಾಯವಾದಕ್ಕೆ [illegible] [illegible] ಬೆಂಗಳೂರು [illegible] ಮೊದಲಾದ [illegible] ಚಾರಿತ್ರಿಕ ಸ್ಥಳ ಗಳನ್ನೂ [illegible] ಸ್ಥಳಗಳನ್ನೂ ನೋಡಿ [illegible] ಅವನ್ನು ನೋಡಿ [illegible] ದ್ದರು.

[illegible] ಮ|| [illegible] ಶೆಟ್ಟರು, [illegible] ಸುಬ್ರಾಮಶೆಟ್ಟರು ಮತ್ತು ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು ಅಭ್ಯರ್ಥಿಗಳಾಗಿ ನಿಂತಿದ್ದರು. ಇವ ರುಗಳಲ್ಲಿ ಸಾಲ್ ಶೆಟ್ಟರು ಅತ್ಯಧಿಕವಾಗಿಯೂ ಮ|| ಸುಬ್ರಾಮ ಶೆಟ್ಟರು ಆತನಿಗಿಂತಲೂ ಕಡಿಮೆಯಾಗಿಯೂ ಓಟುಗಳನ್ನು ಪಡೆದು ಡೈರೆಕ್ಟರುಗಳಾದುದಕ್ಕಾಗಿ ಅವರುಗಳನ್ನು ನಾವು ಅಭಿನಂದಿಸುತ್ತೇವೆ.

ಭಾರತದೇಶೀಯ ಸಂಸ್ಥಾನಗಳ ವಿಚಾರಣಾ ಕಮಿಟಿಯವರು ಕಳೆದ [illegible] ಮ [illegible] ಧಾನಿಯಿಂದ ಪ್ರಯಾಣಮಾಡಿ ಉದಕಮಂಡಲದ ಮಾರ್ಗವಾಗಿ ಕೊಚಿನ್ ಟ್ರಾವನ್ಕೂರು ಸಂಸ್ಥಾನಗಳಿಗೆ ಹೋಗಿ ಅಲ್ಲಿಯ ವಿಚಾರಣೆಯನ್ನು ಪೂರೈಸಿ ಕೊಂಡು ಪುನ ಉದಕಮಂಡಲ ಮಾರ್ಗವಾಗಿಯೇ ರಾಜಧಾನಿಗೆ ತಾ|| 18 ರಲ್ಲಿ ಬಂದು ಇಲ್ಲಿ ಯೋಜನವನ್ನು ಮಾಡಿಕೊಂಡು ಸ್ಪೆಷಲ್ ಟ್ರೇನಿನಲ್ಲಿ ಅರಸೀಕೆರೆ ಮಾರ್ಗವಾಗಿ ಮಿರಜ ಸಂಸ್ಥಾ ನದ ಮೇಲೆ ಪ್ರಯಾಣಮಾಡುವವರಾಗಿರುವರು.

ದಿವಾನರು ಕಳೆದ ಸೋಮವಾರ ಬೆಂಗಳೂರಿಗೆ ದಯಮಾ [illegible] ಕಳೆದ ಗುರುವಾರ ರಾಜಧಾನಿಗೆ ಬಂದು ಮಾರನೆಯ ದಿವಸ ಬೆಂಗಳೂರಿಗೆ ಹಿಂದಿರುಗಿ ಅದೇ ರಾತ್ರಿ ಮದ್ರಾಸಿಗೆ ಪ್ರಯಾಣ ಮಾಡಿದರು. ಅಲ್ಲಿಯ ಕಾಸ್ಮಾಪಾಲಿಟನ್ ಕ್ಲಬ್ಬಿ ನಲ್ಲಿ ಸ್ಥಾಪಿಸಲ್ಪಟ್ಟಿರುವ ಮದ್ರಾಸು ಹೈಕೋರ್ಟು ಜಡ್ಜಿಯ ವರಾಗಿದ್ದ ಸರ್ ಸಿ ವಿ ಕುಮಾರಸ್ವಾಮಿ ಶಾಸ್ತ್ರಿಗಳ ಶಿಲಾ ಪ್ರತಿಮೆಯ ಅನಾವರಣ ಮಹೋತ್ಸವವನ್ನು ನೆರವೇರಿಸಿ ನೆನ್ನೆ ಯ ದಿವಸ ಬೆಂಗಳೂರಿಗೆ ಬಂದರು ಮತ್ತು ತಾ|| 26 ರಲ್ಲಿ ವೈಸ್ರಾಯರ ಅಧ್ಯಕ್ಷತೆಯಲ್ಲಿ ನಡೆಯುವ ಆಲೋಚನಾ ಕಮಿ ಟಿಯ ಸಭಾವೇಶಕ್ಕಾಗಿ ತಾ|| 18 ರ ರಾತ್ರಿ ಗುಂತಕಲ್ ಮಾರ್ಗವಾಗಿ ದಿಲ್ಲಿಗೆ ಪ್ರಯಾಣಮಾಡುವರು.

ಮೈಸೂರು [illegible] ಫ್ಲೋರ್ ಕಂಪೆನಿಯಿಂದ ಮೈಸೂರು ಪ್ರಭುತ್ವದವರಿಗೆ 8 ಲಕ್ಷ ರೂಪಾಯಿಗಳು ಬರಬೇಕೆಂದು ಪ್ರ ಭುತ್ವದ ಪರವಾಗಿ ಮ|| ಗಳಾದ ಎ ಕೆ ಗರುಡಾಚಾರ್, [illegible] ರಾಮಲಿಂಗಂ, ಬಿ ಸೀತಾರಾಮಾಚಾರ್ ಮತ್ತು ವರ್ಧಮಾನಯ್ಯನವರ ಮಕ್ಕಳು ಇವರುಗಳ ಮೇಲೆ ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ವೈಗಾರಿ ಕೆಯ ಡೈರೆಕ್ಟರವರು [illegible] ಮಾಡಿರುವರಷ್ಟೆ. 1000 ರೂ ಪಾಯಿ ಕೊಡಬೇಕಾಗುವುದಂ ಬಿನಾ ಮತ್ತೇನನ್ನೂ ಕೊಡ ಬೇಕೆಂದುದಿಲ್ಲವೆಂದು [illegible] ಗರುಡಾಚಾರರೂ, ತಾವು ಕಾನ್ಸಾ [illegible] ವರಾಗಿ ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವ ರಿಂದ ನಿಯಮಿಸಲ್ಪಟ್ಟಿರುವ ಪ್ರಯುಕ್ತ ವೈಗಾರಿಕೆಯ ಡೈರೆ ಕ್ಟರು [illegible] ನಿಯಮಿಸಲ್ಪಟ್ಟಿರುವುದು ನ್ಯಾಯಬದ್ಧ ವಾಗಿಲ್ಲವೆಂದು ಮ|| [illegible] ರಾಮಲಿಂಗಂರವರೂ, 1926 ನೆಯ ಆಗಸ್ಟ್ ತಾ|| [illegible] ರಲ್ಲಿ ಮ|| [illegible] ವರ್ಧಮಾನಯ್ಯ ನವರು ಗತ [illegible] ಪುನರ್ಮುಕ್ತಿ ಹೊಂದಿದಾ ದುದರಿಂದ [illegible] ರರ್ಹರ ತಮ್ಮಗಳ ಮೇಲೆ ದಾವಾ ಮಾ ಡಲು ಕಾರಣವಿಲ್ಲವೆಂದು ಮ|| ಹಯಣ್ಣನವರೂ ಸ್ಟೇಟ್ ಮೆಂಟುಗಳನ್ನು [illegible] ಟ್ಟಿರುತ್ತಾರೆ.

[illegible] ಇಂಜಿನಿಯರ್ ಮ|| ಎಚ್ ಆರ್ ವೆಂಕಟಸುಬ್ಬರಾಯರು ತಮ್ಮನ್ನು ಮ|| [illegible] ಎಸ್ ಸಂಜೀವ ರಾಯರು ಅವಮಾನಪಡಿಸಿದರೆಂದು ಅವರಮೇಲೆ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾಡಿದ್ದ ವಿವಾದ ದಲ್ಲಿ ಮ|| ಸಂಜೀವರಾಯರಿಗೆ [illegible] ತಿಂಗಳ ಸಾದಾ ಸಜಾವೂ 100 ರೂ ದಂಡವೂ ಅದು ಕೊಡಲ್ಪಡದಿದ್ದಲ್ಲಿ ಇನ್ನೆರಡು ತಿಂಗ ಳ ಸಜಾವೂ ವಿಧಿಸಲ್ಪಟ್ಟಿತು. "ಅಪರಾಧಿಯು ಮನಃಪೂರ್ವಕ ವಾಗಿ ಮರ್ಯಾದೆಯನ್ನು ಅವಮಾನಪಡಿಸಿರುವುದಕ್ಕಾಗಿ ಪಶ್ಚಾ ತ್ತಾಪವನ್ನು ವ್ಯಕ್ತಪಡಿಸಿದ್ದಲ್ಲಿ ಅಪರಾಧಿಯ ವೃದ್ಧಾಪ್ಯವನ್ನು ಪರಿಗಣಿಸಿ ಬರೇ ಅರ್ಥ ದಂಡವನ್ನು ವಿಧಿಸುತ್ತಿದ್ದೆನು. ಆದರೆ [illegible] ವಿಚಾರದಲ್ಲಿ ತನಗೆ ಗೌರವ ಬರುತ್ತದೆಂದು ನಟಿಸುತ್ತ ಅವಮಾನಕರವಾದ ಶಬ್ದಗಳನ್ನೇ ಗೂಢವಾಗಿ ತನ್ನ ಲಿಖಿತ ಮೂಲಕವಾದ ಸ್ಟೇಟ್ ಮೆಂಟಿನಲ್ಲಿ ಉಪಯೋಗಿಸಿರುವುದರಿಂದ ಅಪರಾಧಿಯು ಹೆಚ್ಚಾದ ಶಿಕ್ಷೆಯನ್ನು ಹೊಂದಲು ಅರ್ಹನಾಗಿ ರುತ್ತಾನೆ" ದು ಮ್ಯಾಜಿಸ್ಟ್ರೇಟರು ತೀರ್ಪಿನಲ್ಲಿ ಬರೆದಿರುತ್ತಾರೆ. ಕಡೆ ವಿಚಾರಣೆಯ ದಿವಸ ಮ|| ಸಂಜೀವರಾಯರು ಕೋರ್ಟಿಗೆ ಬಾರದೆ ತಪ್ಪಿಸಿಕೊಂಡಿದ್ದುದರಿಂದ, ಪೋಲೀಸಿನವರು ಅವರನ್ನು ರೈಲ್ವೇ ಸ್ಟೇಷನ್ನಿನಿಂದ ಹಿಡಿದು ಕೋರ್ಟಿಗೆ ಕರೆದುಕೊಂಡು ಬಂದಿದ್ದರು.

ಬೆಂಗಳೂರು ಸಿಟಿಯಲ್ಲಿ ದೊಡ್ಡ ಮಂಡಿ ವರ್ತಕರಾದ ಮ|| ಮಲ್ಲೇಶಪ್ಪನವರ ತಂದೆಯವರಿಗೆ ಬಳ್ಳಾರಿಯಲ್ಲಿ 'ವಕೀಲ' ರಾಗಿರುವ ಸುಮಾರು 60 ವರ್ಷ ವಯಸ್ಸಿನ ಮ|| ಎಚ್. ತಿಮ್ಮಕೃಷ್ಣರಾವ್, ಬಿ ಎ., ಬಿ.ಎಲ್., ರವರಿಂದ 20000 ರೂ ಪಾಯಿಗಳಿಗೆ ಬಂದು ದೊಡ್ಡ ಸ್ವತ್ತು ವಿಕ್ರಯಿಸಲ್ಪಟ್ಟಿದ್ದಿತು. ಇದರಲ್ಲಿ ಅರ್ಧಭಾಗದ ಮೇಲೆ ವಕೀಲರ ಸಹೋದರನ ಮಗ ನಿಗೆ ಹಕ್ಕಿರುತ್ತದೆಂದು ಮೇಲೆ ಮ|| ಮಲ್ಲೇಶಪ್ಪನವರು

...ಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವ್ಯಾಜ್ಯವನ್ನು ಹೂಡಿ... [illegible] ...ಪ್ರಿವಿ ಕೌನ್ಸಿಲಿನವರೆಗೂ ಕೋರ್ಟಿನಲ್ಲಿ ... [illegible] ... ಮೈಸೂರು ಹೈಕೋರ್ಟಿನವರು ಬೆಂಗಳೂರು ... ಕೋರ್ಟಿನಲ್ಲಿ ಬಾಯರ ಮೇಲೆ ... ತಾ|| 6 ರಲ್ಲಿ ... ಪ್ರತಿವಾದಿಯ ಮೇಲೆ ವಾರಂಟನ್ನು ತೆಗೆದುಕೊಂಡು ಒಂದು ಭೂಮಿ ವ್ಯಾಜ್ಯಸಂಬಂಧವಾಗಿ ತಾ|| 1 ರಲ್ಲಿ ನಡೆದ ವಿವಾದಕ್ಕಾಗಿ ಬೆಂಗಳೂರಿಗೆ ಬಂದಿದ್ದ ಮ|| ಎಚ್. ತಿಮ್ಮಪ್ಪನವರನ್ನು ವಾರಂಟಿನಿಂದ ಹಿಡಿಸಿದರು. ಕೋರ್ಟಿನವರು ರಾಯರನ್ನು ಸ್ವಂತ ಮುಚ್ಚಳಿಕೆಯ ಮೇಲೆ ಬಿಟ್ಟುಕೊಟ್ಟರು. ಪ್ರತಿವಾದಿಯು ಕೋರ್ಟಿನ ಕೆಲಸಕ್ಕಾಗಿ ಬಂದಿರುವಾಗ್ಗೆ ವಾರಂಟಿನಿಂದ ಹಿಡಿದುದು ತಪ್ಪೆಂದೂ, ತಾವು ಬಳ್ಳಾರಿ ವಾಸಿಗಳಾದುದರಿಂದ ತಮ್ಮನ್ನು ಹಿಡಿಯಲು ಮೈಸೂರು ಕೋರ್ಟುಗಳಿಗೆ ಅಧಿಕಾರವಿಲ್ಲವೆಂದೂ ಸ್ವತಃ ವಾದಿಸಿದರು. ಇದರ ಪರಿಣಾಮವು ತಾ|| 14 ರಲ್ಲಿ ಗೊತ್ತಾಗುವುದಾಗಿದ್ದಿತು.

ಬಿಕನೀರ್ ರಾಜಕುಮಾರನ ಮರಣ

ಬಿಕನೀರು ಸಂಸ್ಥಾನದ ಮಹಾರಾಜರ ಏಕ ಮಗನಾದ ಮಹಾರಾಜಾ ಕುಮಾರ ವಿಜಯಸಿಂಗ್ ಅಕಸ್ಮಾತ್ ಮರಣ ಹೊಂದಿದನು.

ವೀಣಾಧಾರಿ ಕನ್ಯೆ.

ಬಂಗಾಳದ ಗೌರ್ನರ ಮೇಲೆ ಗುಂಡನ್ನು ಹಾರಿಸಿದುದಕ್ಕಾಗಿ ಸೆರೆಹಿಡಿಯಲ್ಪಟ್ಟಿರುವ ವೀಣಾದಾಸ್ ಕನ್ಯೆಯು ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವಲ್ಲಿ ... ದಿವಸದವರೆಗೆ ರಿಮಾಂಡು ಕೊಡಲ್ಪಟ್ಟಿದ್ದಿತು.

2 ಕೋಟಿ ರೂ ಬಂಗಾರ ಹೊರಕ್ಕೆ ಸಾಗಿತು

ಕಳೆದ ತಾ|| 6 ರಲ್ಲಿ ಕೈಜರಿಹಿಂದ್ ಎಂಬ ಹಡಗಿನ ಮೂಲಕ ಲಂಡನ್ ಪಟ್ಟಣಕ್ಕೆ 1,84 58,000 ರೂ ಗಳ ಮತ್ತು ಅಮೇರಿಕೆಯ ನ್ಯೂಯಾರ್ಕಿಗೆ 10 00,578 ರೂ ಗಳ ಬಂಗಾರವು ಇಂಡ್ಯಾದಿಂದ ಸಾಗಿಸಲ್ಪಟ್ಟಿತು.

ಅಮೇರಿಕೆಯಲ್ಲಿನಷ್ಟು ಸಿನಿಮಾಗಳು ಇನ್ನೆಲ್ಲೂ ಇಲ್ಲ.

ಅಮೇರಿಕಾ ದೇಶದಲ್ಲಿ 20 500 ಚಲನ ಚಿತ್ರಶಾಲೆಗಳಿರುವೆ. ಇವುಗಳಲ್ಲಿ 1,80 00,000 ಜನರು ಕೂತುಕೊಳ್ಳಲು ಅವಕಾಶ ಕಲ್ಪಿಸಲ್ಪಟ್ಟಿರುತ್ತವೆ. ರಷ್ಯಾ ಹೊರತಾಗಿ ಯೂರೋಪಿನೊಳಗೆಲ್ಲ 1 19,00,000 ಜನರನ್ನು ಹಿಡಿಯುವ 27 000 ಚಲನ ಚಿತ್ರಶಾಲೆಗಳಿರುತ್ತವೆ.

ಇಂಗ್ಲೆಂಡಿನಲ್ಲಿ ಮಹಾತ್ಮರ ಅಂಗರಕ್ಷಕರ ವೆಚ್ಚ

ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ಹೋದ ದಿವಸದಿಂದ ಇಟಲಿಯಲ್ಲಿ ಹಡಗನ್ನು ಹತ್ತುವವರೆಗೆ ಸಿಕ್ಕಿದ್ದ ಅವರ ಜೊತೆಗಿರಲು ಇಟ್ಟಿದ್ದ ಪೋಲೀಸು ಅಧಿಕಾರಿಗಳನ್ನು ... ನೇಮಿಸಿದ್ದರಷ್ಟೆ. ಅವರುಗಳ ಅಧಿಕಾರಕ್ಕಾಗಿ 5,400 ರೂ ಗಳು ವೆಚ್ಚ ವಾದುದಾಗಿ ಪಾರ್ಲಿಮೆಂಟು ಸಭೆಯಲ್ಲಿ ಸರ್ ಹರ್ಬರ್ಟ್ ಸ್ಯಾಮ್ಯುಯಲ್‌ರವರು ತಿಳಿಸಿದರು.

(ಐರಿಷ್ ಸ್ತ್ರೀ) ಸಾವಿತ್ರೀದೇವಿಯ ಕೇಸು

ಜಹಾರಲಿಯವರ ಪತ್ನಿ ಐರಿಷ್ ಸ್ತ್ರೀ ಸಾವಿತ್ರೀದೇವಿಯು ... ತುಪಾಕಿಯನ್ನೂ ಮದ್ದನ್ನೂ ಇಟ್ಟುಕೊಂಡಿರುವುದು ... ಸೆರೆಹಿಡಿಯಲ್ಪಟ್ಟು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟರು. ಆಕೆಯು ತನ್ನಲ್ಲಿ ತುಪಾಕಿಯಿಲ್ಲವೆಂದೂ, ತನ್ನ ಹೆಸರನ್ನು ... ಕೋರ್ಟಿನಲ್ಲಿ ಸಾವಿತ್ರೀದೇವಿ ಎಂದು ಹಿಂದಿಯೊಳಗೆ ರುಜುಮಾಡಿಕೊಟ್ಟರು.

ಬಾರ್ಡೋಲಿಯಲ್ಲಿ ಸ್ತ್ರೀಯರಿಗೆ ಶಿಕ್ಷೆ

ಶ್ರೀಮತಿ ಮಿಠಿಬೇನು ಪಟಾಯಿಯವರು ಮತ್ತೆ ಕೆಲವರು ಬಾರ್ಡೋಲಿಗೆ ಹೋಗಿರುವರು. ಗಾಂಧಿ ಆಶ್ರಮಕ್ಕೆ ಸೇರಿದ ಶ್ರೀಮತಿ ಗಂಗಾಬೇನು ವೈದ್ಯಾಯವರು ಮತ್ತೆ ಕೆಲ ಸ್ತ್ರೀಯರು ಅಲ್ಲಿ ಸೆರೆಹಿಡಿಯಲ್ಪಟ್ಟರು. ಬೇರೆ ಕೆಲ ಸ್ತ್ರೀಯರು ಕಂದಾಯವನ್ನು ಕೊಡಬೇಡವೆಂದು ರೈತರಿಗೆ ಹೇಳಿದುದಕ್ಕಾಗಿ ಶಿಕ್ಷೆ ವಿಧಿಸಲ್ಪಟ್ಟರು. ಎಲ್ಲರೂ ಬಂದು ಹಳ್ಳಿಯಲ್ಲೂ ಕಂದಾಯವನ್ನು ಕೊಡಕೂಡದೆಂದು ಬೋಧಿಸಿದುದಕ್ಕಾಗಿ ... ಸೆರೆಹಿಡಿಯಲ್ಪಟ್ಟಿರುವುದಾಗಿ ತಿಳಿದುಬಂದಿದೆ.

ಚಕ್ರವರ್ತಿಯವರು ಗುಪ್ತವಾಗಿ ಆಸ್ಪತ್ರೆಗೆ ಹೋಗಿದ್ದುದು

ಬ್ರಿಟನ್ನಿನ ಮುಖ್ಯ ಮಂತ್ರಿ ರಾಂಸೆಮೆಕ್ಡೋನಾಲ್ಡರವರು ಕಣ್ಣಿಗಾಗಿ ಚಿಕಿತ್ಸೆಯನ್ನು ಹೊಂದುತ್ತಿರುವ ಆಸ್ಪತ್ರೆಗೆ ಸಾರ್ವಭೌಮರವರು ಯಾರಿಗೂ ಗೊತ್ತಿಲ್ಲದಂತೆ ಹೋಗಿ ... ಮಂತ್ರಿಗಳ ಆರೋಗ್ಯವನ್ನು ಕುರಿತು ... ವಿಚಾರಿಸಿಕೊಂಡು ಹಿಂದಿರುಗಿ ಬರುವಾಗ್ಗೆ ಅಲ್ಲಿ ... ತಿಳಿದುಕೊಂಡರು ಮತ್ತು ಕೆಲ ಸ್ತ್ರೀಯರು ಚಕ್ರವರ್ತಿಯವರಿಗೆ ತಮ್ಮ ಸಂತೋಷವನ್ನೂ ಗೌರವವನ್ನೂ ತೋರಿಸಿದರು.

ವಿಚಿತ್ರ ಬರ್ಟನ್ ಪಾದರಕ್ಷಾ ಪ್ರಯೋಗ

... ಪಿಡುಗುಗಳು ... [illegible] ... ಸಲಕರಣೆಗಳನ್ನು ... [illegible] ... ಹೊಡೆದು ಒಂದು ಪ್ರಯೋಗ ... ಪಡಿಯಲ್ಪಟ್ಟನು.

ಶಾಸ್ತ್ರೀರದಲ್ಲಿ ಕರ್ತಾರಿಪ್ರಯೋಗ

ರಾಜ್ಯದಲ್ಲಿ ಕೆಲವನ್ನು ನಡೆಯುತ್ತಿರುವುದರಿಂದ ನ್ಯಾಯ ಭಾರವು ಹೆಚ್ಚಾಗಿರುತ್ತದೆ. ಈ ಭಾರವನ್ನು ಕಡಿಮೆಮಾಡುವುದಕ್ಕಾಗಿ 25 ರೂ ಗೆ ಮೇಲ್ಪಟ್ಟ ಸಂಬಳವನ್ನು ತೆಗೆದುಕೊಳ್ಳುವ ಸರ್ಕಾರಿಯುದ್ಯೋಗಸ್ಥರ ಸಂಬಳವು 100 ಕ್ಕೆ 10 ರೂ ನಂತೆ ಕಡಿಮೆ ಮಾಡಲ್ಪಟ್ಟಿರುತ್ತದೆ. ಈ ಕತ್ತರಿ ಪ್ರಯೋಗವು ರಾಜಸಿಂಹಾಸನದವರಿಗೂ ... ಕೊಡಲ್ಪಡುವ ಸಂಬಳಕ್ಕೂ ಅನ್ವಯಿಸುವುದು. ರಾಜರು ತಮ್ಮ ಸ್ವಂತ ಬೊಕ್ಕಸದಿಂದ ... ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ಇದರಿಂದ ... 10 ರೂ ನಂತೆ ಬಿಟ್ಟುಕೊಟ್ಟ ಹಾಗಾಯಿತು.

ಬ್ರಿಟಿಷರವರು ಸಾಲ ತೀರಿಸುವ ಕ್ರಮ.

ಬ್ರಿಟಿಷರವರು ಅಮೆರಿಕ ಮತ್ತು ಫ್ರಾನ್ಸುಗಳಿಗೆ ಕೊಡಬೇಕಾಗಿರುವ ಋಣಕ್ಕಾಗಿ 800 ಲಕ್ಷವು ಎರಡನೆಯ ವಾರದಲ್ಲಿ ಕೊಡಲ್ಪಟ್ಟಿರುವುದಾಗಿಯೂ ಒರುವ ಆಗಸ್ಟು ತಿಂಗಳಲ್ಲಿ ಫ್ರಾನ್ಸಿನವರ ಋಣಕ್ಕಾಗಿ 800 ಲಕ್ಷ ಕೊಡಲ್ಪಡುವುದಾಗಿಯೂ ಖಜಾನೆ ಸೆಕ್ರೆಟರಿಯವರು ಪಾರ್ಲಿಮೆಂಟು ಸಭೆಯಲ್ಲಿ ತಿಳಿಸಿದರು. ಫ್ರಾನ್ಸಿನಿಗೆ ಇಂಡ್ಯಾದಿಂದ ಬಂಗಾರವು ಬರುತ್ತಿರುವುದರಿಂದಲೇ ಬ್ರಿಟಿಷರವರು ... ಇಲ್ಲವಾಗಿದ್ದಲ್ಲಿ ... ಕಷ್ಟವನ್ನನುಭವಿಸಬೇಕಾಗಿದ್ದಿತೆಂದು ಈಗ ವರ್ತಮಾನ ಪತ್ರಿಕೆಗಳು ಬರೆದಿರುತ್ತವೆ. ಇಂಡ್ಯಾದಿಂದ ಚಿನ್ನವು ಬಾರದಿದ್ದಲ್ಲಿ ಬ್ರಿಟಿಷರವರು 800 ಲಕ್ಷ ಋಣವನ್ನು ತೀರಿಸಲು ಸಾಧ್ಯವಾಗುತ್ತಿರಲಿಲ್ಲ. ಹೀಗೆಯೇ ಇನ್ನು ಮುಂದೂ ಬಂಗಾರವು ಬಾರದೆ ಹೋದಲ್ಲಿ ಆಗಸ್ಟು ತಿಂಗಳಲ್ಲಿ 800 ಲಕ್ಷವನ್ನು ತೀರಿಸಲು ಬಹಳ ಕಷ್ಟವಾಗುವುದು ಎಂದು ಮತ್ತೊಂದು ಪತ್ರಿಕೆಯು ಬರೆದಿರುತ್ತದೆ.

ನಾಗಪುರದಲ್ಲಿ ಸ್ತ್ರೀಯರ ಸಭೆ

ಕಳೆದ ತಾ|| 5 ರಲ್ಲಿ ನಾಗಪುರದ ಶಾಸನ ಸಭೆಯ ... ಬರಾದ ಶ್ರೀಮತಿ ... ಪತ್ನಿ ... ಅನುಸೂಯಾಬಾಯಿ ... ಪತ್ನಿ, ... ಪತ್ನಿ ಮೊದಲಾದ ಗೌರವ ಕುಲಾಂಗನೆಯರು ... ಅಧ್ಯಕ್ಷೆಯವರು ... ವಿಶೇಷ ಭಾಷಣ ಮಾಡುವಾಗ್ಗೆ ... ಮನೋವ್ಯಥೆಯನ್ನೂ ... ಅವಕಾಶವಾಗುತ್ತದೆ ಎಂದು ಮೊದಲಾಗಿ ಅನೇಕ ಸ್ತ್ರೀಯರು ಹೇಳಿ ತಮ್ಮ ಅಸಮಾಧಾನವನ್ನು ವ್ಯಕ್ತಗೊಳಿಸಿದರು.

ಹಿಂದೂ ವಿಶ್ವವಿದ್ಯಾಲಯದ ಪಟ್ಟಪ್ರದಾನೋತ್ಸವ

ಕಾಶೀ ಕ್ಷೇತ್ರದಲ್ಲಿರುವ ಹಿಂದೂ ವಿಶ್ವವಿದ್ಯಾಲಯದ ಪಟ್ಟಪ್ರದಾನೋತ್ಸವವು ಕಳೆದ ಗುರುವಾರ ಜರುಗಿತು. ಸರ್ ಸಿ. ವಿ. ರಾಮನ್ ರವರಿಗೆ ಡಾಕ್ಟರ ಆಫ್ ಸೈನ್ಸ್ ಎಂಬ ಪ್ರಶಸ್ತಿಯು ಕೊಡಲ್ಪಟ್ಟಿತು. ಪಂಡಿತ ಮದನಮೋಹನ ಮಾಲವೀಯರವರು ... ಮಾಡುವಾಗ್ಗೆ "ಈ ವರೆಗೆ ಒಂದು ... ಸಂಸ್ಥಾನಾಧಿಪತಿಗಳಿಂದ ... 1 ಕೋಟಿ 11 ಲಕ್ಷ ರೂ ಗಳು ... ಕೊಡಲ್ಪಟ್ಟಿವೆ ... ಅಭಿವೃದ್ಧಿಗೆ 4 ಕೋಟಿ ರೂ ಗಳು ಬೇಕಾಗಿರುವುವು. ಅದು ದೇಶದ ಶ್ರೀಮಂತರು ಉದಾರವಾಗಿ ಧನಸಹಾಯವಮಾಡಬೇಕು" ಎಂದು ಪ್ರಾರ್ಥಿಸಿದರಲ್ಲದೆ ಪಾಶ್ಚಾತ್ಯ ವಿಶ್ವವಿದ್ಯಾಲಯಗಳ ... ಸ್ಥಾನವನ್ನು ... ಶಿಕ್ಷಣವನ್ನೂ ... ಮಾತೃಭಾಷೆಯಲ್ಲೇ ವಿದ್ಯೆಯನ್ನು ಕಲಿಸಲು ಸರ್ಕಾರದವರು ... ಮಾಡಬೇಕೆಂದೂ ಹೇಳಿದರು.

ಆಯುಧ ವಿಸರ್ಜನ ಸಭೆ.

60 ರಾಜ್ಯಗಳಿಂದ 2300 ರ ವರೆಗೂ ಪ್ರತಿನಿಧಿಗಳು ಈ ಸಭೆಗೆ ಬಂದು ಆಯುಧವಿಸರ್ಜನೆಯ ವಿಚಾರದಲ್ಲಿ ತಂತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುತ್ತಿರುವರು. ಈ ವಿಷಯದಲ್ಲಿ ಬ್ರಿಟನ್ನು, ಅಮೆರಿಕೆ ಮತ್ತು ಫ್ರೆಂಚು ಪ್ರತಿನಿಧಿಗಳನ್ನೆ ... "ವೈಷ್ಣೋಟಿ, ಮತ್ಸರ, ... ಸಮಸ್ಯೆಗಳು ... ನಿಜವಾಗಿ ಆಯುಧವಿಸರ್ಜನೆಯೇರ್ಪಡಲು ಅವಕಾಶವಾಗುತ್ತದೆ ... ಪ್ರಯ...

... [illegible] ... ಯುದ್ಧಕ್ಕೆ ಉಪಯೋಗಿಸುವ ... ಕೆಲ ... [illegible] ... ಭೂಮಿ ... ರಸಾಯನ ... "ಯುದ್ಧವೇ ಆಗದಂತೆ ಮಾಡಲು ಆಯುಧವಿಸರ್ಜನವೇ ತಕ್ಕುದಾಯವು. ಬಹಳ ದೂರ ಹಾರುವ ಫಿರಂಗಿಗಳು, 10,000 ಟನ್ನುಗಳಿಗೆ ಮೀರಿದ ಯುದ್ಧನಾವೆಗಳು, 10 ಅಂಗುಲಗಳಿಗೆ ಹೆಚ್ಚಿದ ನೌಕಾ ಫಿರಂಗಿಗಳು ... ವಿಮಾನಗಳು, ವಿಷವಾಯುಪ್ರಯೋಗವು, ರಸಾಯನಶಾಸ್ತ್ರ ರೀತಿಯಿಂದ ಅಗ್ನಿನಾಶಮಾಡುವುದು, ಕ್ರಿಮಿಪ್ರಯೋಗ ಇತ್ಯಾದಿ ದಾರುಣ ಕೃತ್ಯಗಳನ್ನು ... ಬಿಡಬೇಕೆಂದು 1928 ರಲ್ಲೇ ಸೋವಿಯಟ್ ಪ್ರತಿನಿಧಿಗಳು ತಿಳಿಸಿದ ಹಾಗೆ ಈ ಶಾಂತಿಸಭೆಯು ... ಅಭಿಪ್ರಾಯಪಡುತ್ತದೆ" ಎಂದು ಸೋವಿಯಟ್ ಪ್ರತಿನಿಧಿಯು ಹೇಳಿದರು.

ಸಿಟಿ ಮ್ಯುನಿಸಿಪಲ್ ಆಫೀಸು,
ಮೈಸೂರು
ತಾ|| 13 2-1932

ನೋಟೀಸು.

1932 ನೇ ಇಸವಿ ಫೆಬ್ರವರಿ ... ನೇ ತಾರೀಖು ಬೆಳಗಾಮುತು ... ಘಂಟೆಯಿಂದ 11 ಘಂಟೆಯವರೆಗೂ ಮತ್ತು ಸಾಯಂಕಾಲ ... ಘಂಟೆಯಿಂದ ರಾತ್ರಿ ... ಘಂಟೆವರೆಗೂ ನೀರು ಸರಬರಾಯಿ ಮಾಡಲ್ಪಡುತ್ತೆ ... ನೀರಿನ ಸರಬರಾಯಿ ... ಮಾಡಲ್ಪಡುತ್ತೆಂದು ಈ ಮೂಲಕ ಪ್ರಕಟಿಸಿದೆ.

T. G. RAMA IYER,
President

NOTICE.

Applications are invited for the sole agency for the sale of organic manure (Compost) prepared in the Mysore Sewage Farm. The Compost contains about 1% Nitrogen in the air dried sample. The monthly out turn is about 300 tons of manure delivered at the Farm. The Agent should sell at the price to be fixed by the Municipal Council from time to time, the price fixed for the current year being Rs 4 per ton. The Agency shall be current for a period of 5 years.

The agent should guarantee a minimum monthly sale of 300 tons or the whole quantity manufactured if it should be less than 300 tons. In case of sale of less than 300 tons in any particular month the agent will be given credit for sales of the quantity in excess of 300 tons per mensem sold in the preceding 6 months in any calendar year.

The Municipal Council will be at liberty to revoke the contract if the agent should fail to effect the minimum guarantee sales during any month.

A period of two months will be allowed to the agent from the date of commencement of the contract to advertise and make the preliminary arrangements. After this period the stipulation about minimum guaranteed sales will be strictly enforced. The applicant whose terms are accepted by the Council should execute an agreement embodying the terms of the contract and deposit a security of Rs 500 for the due performance of the contract.

Applicants should state in their applications the percentage of commission they require on the realisations of the monthly sales realised in cash and their past business experience in this line.

Each application should be sent or delivered in a sealed cover in the office of the Health Officer before 5 P.M. on the 22nd instant.

Mysore,
15th February 1932

T. G. RAMA IYER,
President,
City Municipal Council.

ಶ್ರೋಸ್ಟ್ ದ್ವಾರ ದಾಂಪತ್ಯ

ಸಿವಿಲ್ ಮ್ಯಾರೇಜ್

ದಾಂಪತ್ಯ ವಿಚ್ಛೇದನಕ್ಕೆ ಕೊಟ್ಟಿರುವ ನಿಶ್ಚಿತ ಪರಿಣಾಮ ಎಡೆಸ ಬೇಕಾಗಿರುವವುಗಳು, ತಮಗೊಳಗೆ ಸೂಚಿಸಿದ ದೇಶೀಯ [illegible] ಯನ್ನು ಈ ಬಾರಿ ಸೋವಿಯೆಟ್ ರಷ್ಯಾ ಅತ್ಯಂತ ಸುಲಭೋಪಾಯವನ್ನು ಸ್ಥಿರವಾಗಿ ಮಾಡಲ್ಪಟ್ಟಿರುತ್ತದೆ. ಇದರಿಂದ ವಿವಾಹ ವಿಚ್ಛೇದನಗಳನ್ನು ಏರ್ಪಡಿಸಿದ್ದಲ್ಲದೆ ಸುಮಾರು 511 ರೂಪಾಯಿಗಳ ನಷ್ಟವಾಗಿ ಓರ್ವ ಪುರುಷನು ವಿವಾಹ ರಜಿಸ್ಟರ್ ಮಾಡುವ ಕೋರ್ಟಿಗೆ ಕಳುಹಿಸಿಕೊಟ್ಟಲ್ಲಿ ಕೊಂಚವೂ ಸಾವಕಾಶವಿಲ್ಲದೆ ಕಡೆದಾಗಿ ವಿಚ್ಛೇದನದ ಪತ್ರವು ಅಂಚೆಯ ದ್ವಾರ ಅವರುಗಳಿಗೆ ತಿಳಿಸಲ್ಪಡುವುದು. ಈ ನೂತನ ಶಾಸನದಲ್ಲಿ ಪುರುಷನು ಕೂಡಲೆ ಬೇರೆ ಲಗ್ನ ಮಾಡಿಕೊಳ್ಳಲು ಅವಕಾಶವಿದೆ, ಆದರೆ ಸ್ತ್ರೀಯು ಮಾತ್ರ ಕೆಲ ತಿಂಗಳು ಕಳೆಯುವವರೆಗೂ ಮಾಡಿಕೊಳ್ಳಲಾಗುವುದಿಲ್ಲ. 6 ವರ್ಷದೊಳಗಿರುವ ಗಂಡು ಮಕ್ಕಳೂ, 11 ವರ್ಷದೊಳಗಿರುವ ಹೆಣ್ಣು ಮಕ್ಕಳೂ ತಾಯಿ ಪೋಷಣೆಗೊಳಪಟ್ಟಿರುವುದರಿಂದ ಬೇರೆ ಲಗ್ನವಾಗತಕ್ಕ ತಂದೆತಾಯಿಗಳು ಮಕ್ಕಳ ಪೋಷಣೆಗೆ ತಕ್ಕೇರ್ಪಾಟನ್ನು ಮಾಡಬೇಕಾದ ನಿರ್ಬಂಧ ಕಲ್ಪಿಸಲ್ಪಟ್ಟಿರುತ್ತದೆ.

7,20 000 ರೂ ಬೆಲೆಯ ವಜ್ರ

ಲಂಡನ್ ಪಟ್ಟಣದಲ್ಲಿ ಓರ್ವ ಸ್ತ್ರೀ 7,20 000 ರೂಪಾಯಿಗಳನ್ನು ಕೊಟ್ಟು ಒಂದು ಅಮೋಘವಾದ ವಜ್ರವನ್ನು ಕೊಂಡಳು. ಇದರ ತೂಕವು 60 ಕ್ಯಾರೆಟ್ಟು ಮತ್ತು ವ್ಯಾಸ ಅಂದರ ಅಡ್ಡಳತೆಯು 1 ಅಂಗುಲ ಇರುತ್ತದೆ. ಇದನ್ನು ವಿಕ್ರಯಿಸಿದ ವರ್ತಕನು "ಇದು ಭಾರತ ದೇಶದ ಒಬ್ಬ ರಾಜನದು. ನಾನು ನೋಡಿರುವ ಅತ್ಯಂತ ಶ್ರೇಷ್ಠ ವಜ್ರಗಳಲ್ಲೊಂದಾಗಿದೆ. ಇದರಂತೆ ನಿಷ್ಕಳಂಕವಾದ ವಜ್ರಗಳು ಎಲ್ಲೋ ಕೆಲವು ಮಾತ್ರ ಇರುತ್ತವೆ. ಇಂತಹ ಶ್ರೇಷ್ಠತಮವಾದ ವಜ್ರಗಳು ದೊರಕುವುದು ಅಪೂರ್ವವಾದುದರಿಂದ ಇದಕ್ಕೆ ಗಿರಾಕಿಯು ದೊರಕಿದುದೇನೂ ಆಶ್ಚರ್ಯವಲ್ಲ. ಈ ವಜ್ರವನ್ನು ಕೊಂಡ ಸ್ತ್ರೀಯ ಹೆಸರನ್ನು ತಿಳಿಸುವುದಿಲ್ಲ. ಇದು ಪಾರ್ಲಿಮೆಂಟ್ ಸಭಾರಂಭ ಕಾಲದಂತಹ ವಿಶೇಷ ಸಂದರ್ಭಗಳಲ್ಲಿ ದರಿಸಲ್ಪಡುವುದು." ಎಲೆ [illegible] ರಾಜಮನೆತನಕ್ಕೆ ಸೇರಿದ ಆಭರಣಗಳು ವಿಕ್ರಯಿಸಲ್ಪಡುವಾಗ್ಗೆ ಕ್ರಯವಾಗದೆ ನಿಂತುಹೋದ ವಜ್ರವೆಂತಲೂ ಇದು 1 [illegible] ಕ್ಯಾರಟ್ಟು ತೂಕ ಹಚ್ಚಾಗಿದೆ. [illegible] ಕ್ಯಾರಟ್ ತೂಕವುಳ್ಳ ಹೋಪ್ ಡೈಮಂಡ್ ಎಂಬ ವಜ್ರವು 10,50,000 ರೂ ಗಳಿಗೆ ವಿಕ್ರಯವಾಗಿದ್ದಿತು. ಪಂಜಾಬು ಇಂಗ್ಲೀಷರ ವಶವಾದ ಮೇಲೆ ವಿಕ್ಟೋರಿಯಾ ಚಕ್ರವರ್ತಿನಿಯವರಿಗೊಪ್ಪಿಸಲ್ಪಟ್ಟ ಕೊಹಿನೂರು ವಜ್ರವು 106 ಕ್ಯಾರೆಟ್ ತೂಕವಿದ್ದು ಪ್ರಪಂಚದಲ್ಲೆಲ್ಲ ಅತ್ಯುತ್ಕೃಷ್ಟ ವಜ್ರವಾಗಿರುತ್ತದೆ.

ಮದ್ರಾಸು ಹೈಕೋರ್ಟಿನ ತೀರ್ಪು.

2. We seize this supreme opportunity to place before you the fact that the Local Bodies of our State have taken upon themselves great responsibilities in the matter of civic progress and with the ready sympathy which Government have always been extending to them they have gradually been widening the sphere of their activities in order to elevate the economic and industrial condition of our people. While taking these duties and burdens upon themselves they have frequently been compelled to stop short owing to their extremely limited resources which are too slender for realizing their aspirations.

3. The income of the State of Mysore is mainly from Land Revenue. Thanks to the indefatigable energies of the successive and far sighted rulers the income from electricity is increasing. The item from Customs and Duties is denied to our State at present while the expenditure on education economic activities industries and irrigation have been on the increase. With all the new taxes the State is not now in a position to come to our rescue. Without the bountiful aid from the State we need not say it is impossible for us to keep pace with the advance the country should keep up.

4. Hence we take the great opportunity so luckily presented to us to day to urge the fact of the general poverty of our population, the great burdens they are made to bear and their incapacity to realize some of their cherished objects on your kind consideration. We trust that the Committee composed of such illustrious and enlightened gentlemen as have done us the honour of coming to us to day will find a solution to this vexed question by recommending the grant of our share of Customs and Duties and the abolition of the heavy Subsidy which has encumbered the finance of our State and which if abolished will release a very considerable amount for being devoted to our civic progress.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸಂಸ್ಥಾನಾಂ ಶ್ರೀಮಚ್ಚಿತ್ರದುರ್ಗ ...

ಬೃಹನ್ಮಠ ಮಹಾ॥ ॥ ಸಂಸ್ಥಾನ ಕಚೇರಿಯಿಂದ

ಈ ಮಠಕ್ಕೆ ಸಮಸ್ತ ವೀರಶೈವ ಭಕ್ತಾದಿಗಳಿಗೆ ತಿಳಿಸ ಪಡಿಸುವ ಸಂಗತಿ — ... ಕ್ಷೇತ್ರದಲ್ಲಿ ... ಜಯವಾಡಿಸಿ ... ದದ ... ಅಲ್ಲಿಂದ ಮಹಾಶಿವರಾತ್ರಿ ... 29 2 3 ಕ್ಕೆ ಶ್ರೀ ಬೃಹನ್ಮಠಕ್ಕೆ ... ಮಹಾಶಿವರಾತ್ರಿ ಪೂಜಾ ಸಮಾರಂಭ ... ಬೃಹನ್ಮಠಕ್ಕೆ ಬಂದು ... ಸನ್ನಿಧಿ ದರ್ಶನ ... ಸಾಹೇಬ್ರ ... ವರೆಗೆ ಬೃಹನ್ಮಠದಲ್ಲಿಯೆ ಮೊಕ್ಕಾಂ ಮಾಡಿ ಅನಂತರ ಹೊರಟ ... ದಯಮಾಡಿಸುತ್ತಾರದರಿಂದ ಅಲ್ಲಿಯವರೆಗೆ ... ಚಿತ್ರದುರ್ಗಕ್ಕೆ ತಿಳಿಸಿರ ಬೇಕ್ಕದ್ದು.

ಟಿ ಲಿಂಗಪ್ಪ ಏಜಂಟ್.

೧೯೩೩ ನೆಯ ಇಸವಿ ಫೆಬ್ರವರಿ ... ೨೩ರಿಂದ ಫೆಬ್ರವರಿ ತಾ॥ ... ವರೆಗೆ ... ಸಂವತ್ಸರದ ... ವರೆಗಿನ ಪಂಚಾಂಗ

ತಾ	ವಾ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ
...	1 ಸೋಮ	ಸ॥ ಉ	3 21 55 57	ಮೂಲ	20-2	11
21	ಮಂಗಳ	ಬಿದಿ	5 ..8	ಪೂರ್ವ	17 21	12
22	ಬುಧ	ತದಿ	48 10	ಉತ್ತ	14 45	13
23	ಗುರು	ಚೌ	12 20	ಶ್ರವ	9 17	14
26	ಶುಕ್ರ	ಪಂಚ	36 19	ಧನಿ	5 37	15
27	ಶನಿ	ಷಷ್ಠ	30 29	ಸ್ವಾ. ಉ	1 29 55 57	16
28	ಭಾನು	ಸಪ್ತ	..5 1	ಅಶ್ವಿ	53 54	17

(1) ... (2) ... ನೆಯವಾದ.

... ಪ್ರೆಸ್ ... ದಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGD. No. M. [illegible]

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು

[illegible]

[ಸ್ಥಳದಲ್ಲಿ ವಾರ್ಷಿಕ [illegible] | [ಪರಸ್ಥಳಗಳಿಗೆ [illegible]] [ಶೈಕ್ರಿಗೆ [illegible]]

ಸಂಪುಟ ೪೫] ಮೈಸೂರು ಸ್ಟಾರ್ ಸ[illegible] ೧೯೩೨ ನೆಯ ಇಸವಿ ಫೆಬ್ರವರಿ ತಾರೀಖು ೨೯ ನೆಯ ಸೋಮವಾರ [ಸಂಚಿಕೆ ೬

Insurance in the Mysore State Life Insurance, Public Branch.

Life Insur[illegible] and the greatest safeguard against [illegible]

The [illegible] convenient place for insurance is the Public Branch [illegible] Mysore [illegible] Insurance.

Policies [illegible] and copies of rules and forms of [illegible] Treasuries [illegible] Superintendent [illegible] Public Offices Buildings Bangalore.

(Sd.) [illegible] SHAMANNA

(59—34) Secretary, Insurance Committee.

MYSORE RAILWAYS. NOTICE.

[illegible]

1. Slight alterations [illegible] Mysore [illegible] Mysore Chamarajanagar [illegible] Section.

2. Narrow Gauge Section

		H. M.	H. M.	H. M.	H. M.	H. M.	H. M.
Bangalore City	D	8 [illegible]	14 [illegible]	[illegible]			
Chikballapur	A	[illegible]	[illegible]				
	D	11 [illegible]					
Kolar	A	11 [illegible]					
	D	11 48					17 [illegible]
Bowringpet	A	[illegible]					[illegible]
		No. [illegible]				No. 33?	No. 7?
Bowringpet	D	10 [illegible]	[illegible]			11 40	17 05?
Kolar	A	10 41	13 [illegible]			[illegible]	17 [illegible]
	D	10 [illegible]	13 45				
Chikballapur	A	14 [illegible]	[illegible]				
	D	14 [illegible]		15 [illegible]			
Bangalore City	A	18 [illegible]		[illegible]			

For detailed timings see [illegible]

ಸತ್ಯದ ಒಗಟ್ಟು] ೧೦೦೦೦ ರೂಪಾಯಿ ಇನಾಮು [illegible]

[illegible]

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] [illegible] [ಸ್ಟರ

[illegible]

ಸ್ತ್ರೀ ರೋಗ ನಿವಾರಣಾ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ರಿಕಾ ಮಾಲೀಕರು:—[illegible] ಎಂ. ಎಸ್. ಎಂ

ಲಗ್ನಪತ್ರಿಕೆಗಳ ಮುದ್ರಣಕ್ರಮ

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಆಫೀಸು, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ [illegible]

		ಕ್ರಯ	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]

[illegible]

[illegible] ನಶ್ಯದ ಪುಡಿ.

[illegible]



(Registered Trade Mark)

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್, ಪೋ. ಬಾ. ೫೧೧, ಮದರಾಸು.

ಸೂಚನೆ.

ಮಹಾಶಿವರಾತ್ರಿ ಹಬ್ಬದ ನಿಮಿತ್ತ [illegible] ಮಂಗಳವಾರ 7-3-1932 ರ ಮೈಸೂರು ಸ್ಟಾರ್ ಪತ್ರಿಕೆಯು ಹೊರಡುವುದಿಲ್ಲ — ಸಂ

ಮೈಸೂರು ಸ್ಟಾರ್

೧೯೩೨ ನೇ ಇಸವಿ ಫೆಬ್ರವರಿ ತಾ|| ೨೯ ನೆಯ ಸೋಮವಾರ

SIR MIRZA'S SUGGESTIONS

II

Sir Mirza's suggestions as regards the constitution of the Lower Chamber the Federal Executive and the fundamental rights are such as to meet with general agreement. He prefers the strength of the Lower Chamber to be 350 instead of 300 as has been recommended by the Federal Structure Committee the reason being that the addition of 50 was necessary for giving representation for several interests concerned. He considers that the allotment of 33⅓ percent of the total number of seats to the Indian States on the assumption that all States would federate is fair and reasonable. He does not favour, and very rightly too, that the States do not press for the voting strength of those States which federate being augmented in the event of a large proportion of them not joining the Federation, though he prefers to make an exception in the case of groups where the abstention of some of the groups should not act prejudicially to the interests of the rest. Sir Mirza's proposals regarding minorities are indeed equitable and thoroughly fair. He is of opinion that only Mussulmans Sikhs and Europeans should seek separate electorates though it may be subject to reconsideration after a lapse of time. As regards Depressed Classes and Anglo Indians he advocates a system of joint electorates with reservation of seats. In his opinion the Indian Christians do not stand in need of special treatment. As regards Mussulmans he subscribes to the agreed proposal that one third of the seats allotted to British India should be given to Mussulmans. But in the case of the States Sir Mirza is not in favour of any special reservation for the [illegible]. His reason [illegible] convincing. The distribution of the Mussulman population in the States is so uneven and the number of seats allotted to individual States so limited that any system of dividing these seats into Mussulman and non Mussulman would be unworkable. It would be wiser to rely upon the natural inclinations of the Moslem rulers of States and the good will of the rest to return to the House as many Mussulman members as their respective circumstances permitted. We are sure that this is a view which would commend itself to all the members. As regards Europeans Sir Mirza thinks that their claim for 12 seats is too extravagant and suggests 4 or 5 seats. Even as regards Sikhs he suggests that their claim for 10 seats is too high and would limit them to 5 or 6. He proposes a reservation of 20 seats to Depressed Classes and if the full number is not returned in general electorates the deficiency to be made good by election by recognised Associations representing them and in the last resort by nomination and holds out that such a scheme would be workable as in Mysore. Sir Mirza does not propose more than 2 seats for Anglo Indians. As regards the other equally vexed question of distribution of seats between States Sir Mirza notes that the time given for the States to arrive at a common understanding, namely, end of March 1932 was about to expire and the matter could only be settled by an impartial tribunal set up by His Majesty's Government, and he places his views on the matter in the hope that they may help a timely settlement. He suggests that the distribution should be made mainly on a population basis. The Federal Executive, according to Sir Mirza should be a [illegible] of the [illegible] or the agent of the [illegible] and Executive [illegible] and as constitutional Head of the Federal [illegible] Ministers for the administration of the Crown subjects [illegible] the Prime Minister who would be the leader that had the largest following in the Lower House. The two sections of the Federal Ministry would ordinarily deliberate apart from each other, but could jointly deliberate without prejudice. In the sphere of Federal subjects the Governor General's power of interference would be restricted only to the specific purpose of enforcing the safeguards laid down in the constitution. This proposal is only for the period of transition. Sir Mirza favours the declaration of rights in the constitution which should be really fundamental and well-recognised and should not seek to embody disputed principles or programmes of social reform. We consider that Sir Mirza has taken a very balanced and Statesmanlike view of the situation and we have no doubt that his recommendations will receive due consideration at the hands of his colleagues.

THE LATE Mr C S BALASUNDRAM IYER

It is with utmost regret that we record the untimely demise of Rajamantrapravina C. S. Balasundram Iyer, Member of Council who was on leave owing to illness on Thursday the 25th instant at his residence at Bangalore. Having entered Mysore Civil Service by taking the first place in the competitive examination he worked his way up by ability and conscientious devotion to his duty. He used to take a very balanced view of things and though it cannot be said that there was no difference of views with public, still he was remarkably free from pettiness and prejudices and his sportive behaviour used to be the admiration of his friends and colleagues in the public bodies. He earned the well-merited distinction of Rajamantrapravina at the hands of His Highness. Social and amiable in his disposition he was in every way a gentleman. He leaves behind him his wife and a large family to whom we offer our sincere condolences.

ಇರ್ವಿನ್ ನಾಲಾ ರೈತರಿಗೆ ಕಿಂಚಿತ್ಪ್ರಯೋಜನ

ಇರ್ವಿನ್ ನಾಲೆಯ ಕೆಳಗಿನ ಭೂಮಿಯಲ್ಲಿ ಮೊದಲನೆಯ ವರ್ಷ [illegible] ಎರಡನೆಯ ವರ್ಷ [illegible] ವರ್ಷ [illegible] ಅಥವಾ ಹಿಂದು ಮುಂದಾಗಿ ಬೆಳೆಯನ್ನಿಡಬೇಕೆಂ [illegible] ಎಕರೆ 15 ರೂ ಸಂತೆಯೂ, ತರಿಗೆ 10 ರೂ ಸಂತೆಯೂ, ಕಬ್ಬಿಗೆ ರೂ ಸಂತೆಯೂ ಕಂದಾಯವನ್ನು ಕೊಡಬೇಕೆಂದೂ 10 ರಿಂದ 15 ರೂ ವರೆಗೆ ಕಂಟ್ರಿಬ್ಯೂಷನ್ ಕೊಡಬೇಕೆಂದೂ ಈ ಮೊಬಲಗನ್ನು ವರ್ಷಕ್ಕೊಂದು ಕಂತಿನಂತೆ 10 ವರ್ಷಗಳಲ್ಲಿ ಬಡ್ಡಿ ಸಹಿತ ಸಲ್ಲಿಸಬೇಕೆಂದೂ 1931 ನೆಯ ಜುಲೈ ತಾ|| 8 ರಲ್ಲಿ ಪ್ರಭುತ್ವದವರು ಅಪ್ಪಣೆ ಮಾಡಿದರು. ಈ ಧಣಿಯ ಪರಿವರ್ತನದಿಂದ ಪ್ರತಿಕೂಲವೇ ತೋರಲು ಅನುಕೂಲ [illegible] ವೃದ್ಧಿ ಮತ್ತು ಒಟ್ಟಿನಲ್ಲಿ ಎಕರೆಯೊಂದಕ್ಕೆ 30 ರೂ ಕಂದಾಯ ಬಿದ್ದಂತಾಗುತ್ತದೆ. ಕಂಟ್ರಿಬ್ಯೂಷನ್ ಮೊಬಲಗು ಒಟ್ಟು ಬಾಬ್ತು ಆಗದೆ ಅದನ್ನು ಕಂತು ರೂಪವಾಗಿ ಸಲ್ಲಿಸಬೇಕಾದ [illegible] ಕನಿಷ್ಠ ಮತ್ತು ಬಡ್ಡಿ ವಿಧಿಸಲ್ಪಟ್ಟಿರುವುದು [illegible] ಆದುದರಿಂದ ಸರಕಾರದ ಕ್ರಮವನ್ನು ತಪ್ಪಿಸಿ ಕಂದಾಯವನ್ನೂ ಕಂಟ್ರಿಬ್ಯೂಷನ್ ಮೊಬಲಗನ್ನೂ ಇಳಿಸಿ [illegible] ಇದರ ಮೇಲೆ ವಿಧಿಸಿರುವ ಬಡ್ಡಿ ಮೊಬಲಗನ್ನು ತಪ್ಪಿಸಬೇಕೆಂದು ಇರ್ವಿನ್ ನಾಲೆ ಕೆಳಗಿನ ಜಮೀನ್ದಾರರುಗಳು ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಮೂಲಕ [illegible] ಮೂಲಕವೂ ಪ್ರಾರ್ಥಿಸಿಕೊಂಡಿದ್ದರು. ಇದರಿಂದ ಯಾವ ಪ್ರಯೋಜನವೂ ಆಗದಿದ್ದುದರ ಮೇಲೆ ಮಂಡ್ಯ ತಾಲ್ಲೂಕಿನ ಸುಮಾರು 1000 ರೈತರುಗಳು ಈಗ್ಗೆ 1½ ತಿಂಗಳ ಹಿಂದೆ, ಮೈಸೂರು ಸೀಮೆಗೆ ಅಪೂರ್ವವಾದ ರೀತಿಯಲ್ಲಿ ಕಾಲ್ನಡಿಗೆಯಾಗಿ ಬೆಂಗಳೂರಿಗೆ ಹೋಗಿ ದಿವಾನರಲ್ಲಿ ಬಹಳ ಭಯಭಕ್ತಿಗಳಿಂದ ತಮ್ಮ ತೊಂದರೆಗಳನ್ನು ಹೇಳಿಕೊಂಡು ಅವನ್ನು ತಪ್ಪಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳಲಾಗಿ, ದಿವಾನರು ಸಾವಧಾನದಿಂದಲೂ, ಸಾನುಭೂತಿಯಿಂದಲೂ ರೈತರುಗಳ ಹೇಳಿಕೆಯನ್ನು ಕೇಳಿ ಸಾಧ್ಯವಾದಮಟ್ಟಿಗೆ ಅನುಕೂಲ ಪಡಿಸಿಕೊಡುತ್ತೇವೆಂದು ವಾಗ್ದಾನಮಾಡಿದರು. ಅದರ ಮೇಲೆ ಪ್ರಭುತ್ವದವರು ಕೃಷ್ಣರಾಜಸಾಗರ ವರ್ಕಿಂಗ್ ಕಮಿಟಿಯವರ ಮತ್ತು ಇರ್ವಿನ್ ನಾಲೆ ಕೆಳಗಿನ ರೈತರುಗಳ ನಾಲ್ಕುರು ಪ್ರತಿನಿಧಿಗಳ [illegible] ತೀರ್ಮಾನಿಸಿ [illegible] ಹೀಗೆ [illegible] ಅದರಿಂದ [illegible] ಅಗ್ಗ [illegible] ಪ್ರಯೋಜನವಾಗುತ್ತದೆಂದು ಕೃಷ್ಣರಾಜಸಾಗರ ವರ್ಕಿಂಗ್ ಕಮಿಟಿಯವರು ಬಹಳ ಧೈರ್ಯದಿಂದ ಹೇಳಿರುತ್ತಾರಾದ ಪ್ರಯುಕ್ತ ಈ ಪರಿವರ್ತನ ಕ್ರಮವನ್ನು ತಪ್ಪಿಸಲಾಗುವುದಿಲ್ಲ. ಅಂತಹ ತೊಂದರೆಗಳು ಪ್ರಾಯಶಃ ಆದಿಯಲ್ಲಿ 2-3 ವರ್ಷಗಳವರೆಗೆ ಆಗಬಹುದು. ಅವುಗಳನ್ನು ಪರಿಹರಿಸಿ ಕೊಡುವುದಕ್ಕಾಗಿ ಮೈಸೂರು ಡೆಪ್ಯುಟಿ ಕಮಿಷನರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯೇರ್ಪಡಿಸಲ್ಪಟ್ಟು ಮಂಡ್ಯ ಇರ್ರಿಗೇಷನ್ ಡಿವಿಜನ್ನಿನ ಎಕ್ಸಿಕ್ಯುಟಿವ್ ಇಂಜಿನಿಯರು, ವ್ಯವಸಾಯ ಕಮಿಷನರು ಮತ್ತು ನಾಲ್ವರು ರೈತರ ಪ್ರತಿನಿಧಿಗಳು ಮೆಂಬರುಗಳಾಗಿ ನಿಯಮಿಸಲ್ಪಡುವರು. ಈ ನಾಲೆಯ ಕೆಳಗಿನ ಭೂಮಿಗಳಿಗೆ ಅವಿಚ್ಛಿನ್ನವಾಗಿ ನೀರೊದಗಿ ಪ್ರದೇಶವೆಲ್ಲವೂ ನೀರಾವರಿ ಭೂಮಿಯಾಗಿ ಪರಿವರ್ತಿಸಿ ಅದರ ಬೆಳೆಯೂ ಉತ್ಪನ್ನವೂ ಹೆಚ್ಚುವುದರಿಂದಲೂ, ನೀರಿನ ಭರವಸೆಯಿಲ್ಲದ ಕೆರೆ ಕೆಳಗಣ ಭೂಮಿಗಳಿಗೆ ಇದರಷ್ಟೇ ಅಥವಾ ಇದಕ್ಕಿಂತಲೂ ಹೆಚ್ಚಾಗಿಯೇ ಕಂಟ್ರಿಬ್ಯೂಷನ್ ಮೊಬಲಗು ಕೊಡಲ್ಪಡುತ್ತಿರುವುದರಿಂದಲೂ ಇರ್ವಿನ್ ನಾಲೆ ಕೆಳಗಿನ ಭೂಮಿಗಳಿಗಾಗಿ ಏರ್ಪಡಿಸಲ್ಪಟ್ಟಿರುವ ಕಂಟ್ರಿಬ್ಯೂಷನ್ ಮೊಬಲಗು ಹೆಚ್ಚಿನದಾದ ಪ್ರಯುಕ್ತ ಕಡಿಮೆ ಮಾಡಲ್ಪಡಲಾಗುವುದಿಲ್ಲ. ಆದರೆ ಈ ಮೊಬಲಗು 10 ಕಂತುಗಳಾಗಿ 10 ವರ್ಷಗಳಲ್ಲಿ ಕೊಡಲ್ಪಡುವುದರ ಬದಲು 12 ಕಂತುಗಳಾಗಿ 12 ವರ್ಷಗಳಲ್ಲಿ, ಮೊದಲನೆಯ ವರ್ಷ ೧ ಕಂತಿನಲ್ಲಿ ¼ ಭಾಗವನ್ನೂ ಮತ್ತು 2-3 ನೆಯ ವರ್ಷಗಳಲ್ಲಿ ½ ಭಾಗವನ್ನೂ, 4 ನೆಯ ವರ್ಷದಲ್ಲಿ ¾ ಭಾಗವನ್ನೂ, ಉಳಿದ ೮ ವರ್ಷಗಳಲ್ಲಿ ಪೂರ್ತಿ ಕಂತು ಮೊಬಲಗನ್ನೂ ಕೊಡುವ ಸೌಲಭ್ಯವು ಕಲ್ಪಿಸಲ್ಪಟ್ಟಿರುತ್ತದೆ ಮತ್ತು ರೈತರ ಪ್ರಾರ್ಥನೆಯಂತೆ ಕಂಟ್ರಿಬ್ಯೂಷನ್ ಮೊಬಲಗಿನ ಮೇಲೆ ವಿಧಿಸಲ್ಪಟ್ಟಿದ್ದ ಬಡ್ಡಿಯು ತಪ್ಪಿಸಲ್ಪಟ್ಟಿದೆ ಎಂದು ಕಳೆದ ಫೆಬ್ರವರಿ ತಾ|| ೭೩ ರಲ್ಲಿ ಅಪ್ಪಣೆ ಮಾಡಿರುತ್ತಾರೆ. ಬೆಳೆಯ ಪರಿವರ್ತನ ಕ್ರಮದಿಂದ ಉತ್ಪತ್ತಿಯು ಹೆಚ್ಚುವುದಲ್ಲದೆ ನಷ್ಟವೆಂದಿಗೂ ಸಂಭವಿಸುವುದಿಲ್ಲವೆಂದು ಪ್ರಭುತ್ವದವರು ಬಹಳ ಧೈರ್ಯದಿಂದ ಹೇಳಿರುತ್ತಾರಾದರೂ ಈ ಕ್ರಮವು ನಮ್ಮ ಸೀಮೆಗೆ ನವೀನವಾದುದರಿಂದಲೂ, ಈಗ ದೇಶದಲ್ಲಿ ಧಾರಣೆಯು ಬಹಳವಾಗಿ ಇಳಿದಿರುವುದರಿಂದ ಕಂದಾಯವನ್ನು ಕಟ್ಟಲು ಕಷ್ಟವಾಗಿರುವುದರಿಂದಲೂ ರೈತರಿಗೆ ಅನುಭವವುಂಟಾಗಿ ದೇಶದ ಧಾರಣೆ ಅನುಕೂಲವಾಗುವವರೆಗಾದರೂ ಕಂದಾಯವನ್ನು ಕಡಿಮೆಮಾಡಿಕೊಟ್ಟಿದ್ದರೆ ರೈತರಿಗೆ ಬಹಳ ಉಪಕಾರವಾಗುತ್ತಿದ್ದಿತು ಮತ್ತು ಅವರುಗಳು ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಪುರಸ್ಕಾರ ಮೊದಲಾದ ಅಸಾತ್ವಿಕ ಮಾರ್ಗವನ್ನನುಸರಿಸದೆ, ಮಾರ್ಗಾಯಾಸ ಮೊದಲಾದ ತೊಂದರೆಗಳನ್ನು ಲಕ್ಷ್ಯಿಸದೆ ಬಹಳ ಶಾಂತರೀತಿಯಲ್ಲಿ ೩೦ ಮೈಲುಗಳ ದೂರ ನಡೆದುಕೊಂಡು ಹೋಗಿದುದರಿಂದ ಕ್ರಮವು ಸಾರ್ಥಕವಾಗುತ್ತಿದ್ದಿತು. ಈ ಮೇಲ್ಕಂಡ ಅಪ್ಪಣೆಯಿಂದ ಇರ್ವಿನ್ ನಾಲೆ ಕೆಳಗಿನ ರೈತರುಗಳು ತೃಪ್ತರಾಗದೆ " ದೊರೆಯುತನಕ ದೂರು " ಎಂಬ ಗಾದೆಯನ್ನು ಅನುಸರಿಸುವವರಾಗಿರುವರೆಂದು ಕೇಳುತ್ತೇವೆ.

ಮ|| ಬಾಲಸುಂದರಂ ಅಯ್ಯರವರ ನಿಧನ.

ಮೊದಲನೆಯ ಕೌನ್ಸಿಲರಾಗಿದ್ದು 1931 ನೇ ಇಸವಿಯ ಅಂತ್ಯಭಾಗದಲ್ಲಿ ಹಾಸಿಗೆಗೆ ಸೇರಿದರೆ ಸಂಪೂರ್ಣವಾಗಿ ವಾರ್ಧಕ್ಯ ವ್ಯಾಯುರೋಗಗ್ರಸ್ತರಾಗಿ ರಜದಲ್ಲಿದ್ದ ರಾಜಮಂತ್ರಪ್ರವೀಣ ಸಿ. ಎಸ್. ಬಾಲಸುಂದರಂ ಅಯ್ಯರವರು ಕಳೆದ ತಾ|| ೨೫ ನೆಯ ಗುರುವಾರ ಬೆಳಿಗ್ಗೆ ಬೆಂಗಳೂರು ಬಸವನಗುಡಿಯಲ್ಲಿರುವ ಸ್ವಗೃಹದಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಲು ವಿಷಾದವಾಗುತ್ತದೆ. ಇವರು 1897 ರಲ್ಲಿ ನಡೆದ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಶ್ರೇಯಸ್ಸನ್ನು ಹೊಂದಿ ಪ್ರಬೇಷನರ್ ಅಸಿಸ್ಟೆಂಟ್ ಕಮೀಷನರಾಗಿ ಉದ್ಯೋಗಕ್ಕೆ ಸೇರಿ ಸಿಟಿ ಮುನಿಸಿಪಾಲಿಟಿ, ಅಂಡರ್ ಸೆಕ್ರೆಟರಿ, ಸೆಕ್ರೆಟರಿ ಮೊದಲಾದ ಉದ್ಯೋಗಗಳನ್ನು ನಡೆಸಿ 1914 ರಲ್ಲಿ ಡೆಪ್ಯುಟಿ ಕಮೀಷನರಾದರು. ಅಲ್ಲಿಂದ 1917 ರಲ್ಲಿ ಚೀಫ್ ಸೆಕ್ರೆಟರಿಯಾಗಿಯೂ, 1921 ರಲ್ಲಿ ವಿದ್ಯಾಭ್ಯಾಸದ ಜನರಲ್‌ರವರಾಗಿಯೂ, 1927 ರಲ್ಲಿ ಕೌನ್ಸಿಲರಾಗಿಯೂ ನಿಯಮಿತರಾಗಿ ಅಸ್ವಸ್ಥರಾಗುವವರೆಗೂ ಉದ್ಯೋಗದಲ್ಲಿದ್ದರು. ಇವರು ದಕ್ಷತೆಯಿಂದಲೂ ನಿಸ್ಪೃಹತೆಯಿಂದಲೂ ತಮ್ಮ ಉದ್ಯೋಗವನ್ನು ನಡೆಸಿದುದರಿಂದ ಶ್ರೀಮನ್ಮಹಾರಾಜರವರ ಮೆಚ್ಚಿಕೆಗೆ ಪಾತ್ರರಾಗಿ 1928 ರಲ್ಲಿ ರಾಜಮಂತ್ರಪ್ರವೀಣ ಎಂಬ ಸನ್ನದಪ್ರಶಸ್ತಿಯನ್ನು ಹೊಂದಿದರು. ಇವರ ಸ್ಮರಣಾರ್ಥವಾಗಿ ಆ ದಿವಸ ಜನರಲ್ ಸೆಕ್ರೆಟರಿಯೇಟು ಆಫೀಸು, ರೆವಿನ್ಯೂ ಕಮಿಷನರಾಫೀಸು, ವಿದ್ಯಾಭ್ಯಾಸದ ಡೈರೆಕ್ಟರಾಫೀಸು ಮತ್ತು ಸಭ್ಯ ಸಂಸ್ಥೆಗಳು ಮುಚ್ಚಲ್ಪಟ್ಟಿದ್ದುವು. ಮೃತರ ಆತ್ಮಕ್ಕೆ ನಿರಂತರ ಶಾಂತಿಯನ್ನೂ, ಅವರ ಕುಟುಂಬಕ್ಕೆ ದುಃಖಸಮಾಧಾನವನ್ನೂ ಉಂಟಾಗಲೆಂದು ಕೋರುತ್ತೇವೆ.

ಶಿವಮೊಗ್ಗೆಯಲ್ಲಿ ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿರುವ ಮ|| ಎಂ. ಕೆ. ಮರಿಯಪ್ಪನವರು ಡಿ|| ಪೋ|| ಸೂಪರಿಂಟೆಂಡೆಂಟರಾಗಿ ಸ್ಥಿರಗೊಳಿಸಲ್ಪಟ್ಟಿರುವರು.

ಜಿಲ್ಲೆಗಳ ವರ್ತಮಾನಗಳು

...ಜಿಲ್ಲೆಯಲ್ಲಿ ಕೈಗಾರಿಕೆ ... ಹವಾ ... ಈ ದಿವಸ ... ಹಳ್ಳಿಗಳಲ್ಲಿ ಹುಳಿಯು ... ಗಿರುವುದಾಗಿ ಗೊತ್ತಾಗಿದೆ

ಹೊಸದುರ್ಗ ತಾ|| ಮತ್ತೋಡು ಹೋಬಳಿ ಗುಡ್ಡದ ... ಶ್ರೀ ದಶರಥ ರಾಮಲಿಂಗೇಶ್ವರಸ್ವಾಮಿಯ ರಥೋತ್ಸವ ಕಾರ್ಯಗಳು ಬರುವ ಮಾರ್ಚಿ ತಾ|| 18 ನೆಯ ಶುಕ್ರವಾರದಿಂದ ತಾ|| 21 ನೆಯ ಸೋಮವಾರದ ವರೆಗೆ ಪದ್ಧತಿ ಪ್ರಕಾರ ನಡೆಯುವುವೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಹುಣಸೂರು ತಾ|| ಹಳೇಬೀಡು ಗ್ರಾಮದಲ್ಲಿ ಶ್ರೀಮಯಾಲೇಶ್ವರ ಸ್ವಾಮಿಯ ಜಾತ್ರೆಯು ಬರುವ ಮಾರ್ಚಿ ತಾ|| 7 ರಿಂದ 10 ವರೆಗೆ ನಡೆಯುವುದೆಂದೂ, ಆ ಕಾಲದಲ್ಲಿ ದನಗಳ ಪ್ರದರ್ಶನವೂ ಜರುಗಿ ಉತ್ತಮ ರಾಸುಗಳಿಗೆ ಬಹುಮಾನ ಕೊಡಲಾಗುವುದೆಂದೂ ಕಾರ್ಯದರ್ಶಿಗಳಾದ ಶ್ರೀಮಾನ್ ಮ|| ಪಟೇಲ್ ... ಸ್ವಾಮಿರಾಜ್ಯನವರು ತಿಳಿಸಿರುತ್ತಾರೆ

ಕಳೆದ ಗುರುವಾರ ರಾಜಧಾನಿಯಿಂದ ಹೊರಟ ಟಿ. ... ಕೃಷ್ಣ ಮೋಟಾರು ಬಂಡಿಯು ... ಬೆಟ್ಟದ ತಿರುಗಿನ ಮಧ್ಯೆ ಕಲ್ಲುಗುಣಿಕೆ ಎಂಬ ಗ್ರಾಮದ ಬಳಿ ಮಗುಚಿಕೊಂಡು ಒಳಗಡೆ ಕುಳಿತಿದ್ದ ಪ್ರಯಾಣಿಕರುಗಳಲ್ಲಿ 1–10 ಮಂದಿ ಸ್ತ್ರೀಪುರುಷರುಗಳಿಗೆ ಪೆಟ್ಟು ಬಿದ್ದಿರುವುದಾಗಿಯೂ ಇಬ್ಬರು ಅಪಾಯಸ್ಥಿತಿಯಲ್ಲಿರುವುದಾಗಿಯೂ ತಿಳಿದುಬರುತ್ತದೆ

ಬೆಂಗಳೂರು ವೈಶ್ಯರು ತಮ್ಮ ಉಪಯೋಗಕ್ಕಾಗಿ ... ಶ್ರೀ ... ಮಾಡಿಕೊಂಡಿರುವಂತೆ ರಾಜಧಾನಿಯ ವೈಶ್ಯರು ಶ್ರೀ ಕನ್ನಿಕಾಪರಮೇಶ್ವರಿ ಹೆಸರಿನಿಂದ ಪರಸ್ಪರ ಸಹಾಯ ಸಂಘವನ್ನು ಹೊಸದಾಗಿ ಸ್ಥಾಪಿಸಿಕೊಂಡಿರುವುದಾಗಿಯೂ ದೊಡ್ಡಪೇಟೆಯಲ್ಲಿರುವ ಕನ್ನಿಕಾಪರಮೇಶ್ವರೀ ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ... ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ವಿಶಾಲವೂ ಸುಂದರವೂ ಆದ ಒಂದು ಛತ್ರವನ್ನು ಕಟ್ಟಿಸಲು ಪ್ರಯತ್ನಿಸುತ್ತಿರುವುದಾಗಿಯೂ ಕೇಳುತ್ತೇವೆ

ರಾಜಧಾನಿಯಲ್ಲಿರುವ ಶ್ರೀ ರಾಮಕೃಷ್ಣಾಶ್ರಮದವರು ಸ್ವಾಮಿ ವಿವೇಕಾನಂದರವರ 70 ನೆಯ ಜಯಂತ್ಯುತ್ಸವವನ್ನು ಕಳೆದ ತಾ|| 21 ನೆಯ ಭಾನುವಾರ ಸಾಯಂಕಾಲ ... ಪ್ರಕಾಶ ಸಾಹುಕಾರ್ ಡಿ ಬನುಮಯ್ಯನವರ ವ್ಯಾಸ್ಯ ಮಂದಿರದಲ್ಲಿ ಮೈಸೂರು ರೈಲ್ವೆ ಚೀಫ್ ಇಂಜಿನಿಯರ್ ಮ|| ರಾ|| ಶ್ರೀ ರಾಮಚಂದ್ರರಾಯರವರ ಅಧ್ಯಕ್ಷತೆಯಲ್ಲಿ ನಡೆಸಿದರು ಮೈಸೂರು ಡಿ|| ಬೋರ್ಡ್ ಪ್ರೆಸಿಡೆಂಟರಾದ ಮ|| ... ಎಸ್ ಪುಟ್ಟಸ್ವಾಮಿ, ಬಿ ಎ, ಬಿ ಎಲ್, ರವರು ಸ್ವಾಮಿಯವರ ಜೀವನಚರಿತ್ರೆಯನ್ನು ಕುರಿತು ಬಹು ಮನೋಹರವಾಗಿ ಉಪನ್ಯಾಸಮಾಡಿದರು

ಮಹಾತ್ಮರ ಕುಟೀರ ಭಸ್ಮವಾಯಿತು.

...ಲಾಲಪುರ ತಾ|| ಕಂದಿಗ್ರಾಮದಲ್ಲಿರುವ ಮಹಾತ್ಮರ ... ಕುಟೀರವು ಸುಟ್ಟು ಭಸ್ಮವಾಯಿತು ಇದರ ಕಾರಣ ತಿಳಿದುಬಂದಿಲ್ಲ

ಬಂಗಾಳದಲ್ಲಿ ೧೨೧ ಅಕ್ರಮ ಸಂಘಗಳು

ಬಂಗಾಳದಲ್ಲಿ ಹೊಸದಾಗಿ 8 ಸಂಘಗಳು ಅಕ್ರಮ ಸಂಘಗಳಾಗಿ ಪ್ರಕಟಿಸಲ್ಪಟ್ಟಿರುವುವು ಸೇರಿ ಈ ವರೆಗೆ 121 ಸಂಘಗಳು ನಿಷೇಧಿಸಲ್ಪಟ್ಟಿವೆ

ಕಾಂಗ್ರೆಸ್ ಕೈದಿಯ ಮರಣ

...ಜಪುರದಲ್ಲಿ ವೃಜೇಂದ್ರಕುಮಾರ ಸರ್ಕಾರ್ ಎಂಬುವರು ತಾ|| 11 ರಲ್ಲಿ ಕೈದಿಯಾಗಿ ವಿಧಿಸಲ್ಪಟ್ಟಿದ್ದು ತಾ|| 1... ರಲ್ಲಿ ನ್ಯುಮೋನಿಯಾ ಜ್ವರದಿಂದ ಸತ್ತುಹೋದರು ಅಲ್ಲಿ ಅವರ ಬಂಧುಗಳಾರೂ ಇಲ್ಲದಿದ್ದುದರ ಮೂಲಕ ಕೆಲ ಯುವಕರು ಶವವನ್ನು ಕೇಳಿ ತೆಗೆದುಕೊಂಡು ದಹನ ಮಾಡಿದರು

ಭಂಗಾರವು ಸಮುದ್ರಪಾಲಾಯಿತು

1,60,00,000 ರೂ ಬೆಲೆಯ ಭಂಗಾರವು ತುಂಬಲ್ಪಟ್ಟಿದ್ದ 126 ಪೆಟ್ಟಿಗೆಗಳನ್ನು ಚೆರ್ಬರ್ಗ್ ಎಂಬಲ್ಲಿ ಬಿಸಂಗೇರಿಸು ಎಂಬ ಹಡಗಿನಿಂದಿಳಿಸಲ್ಪಡುತ್ತಿದ್ದಾಗ್ಗೆ ಒಂದು ಸರಪಳಿಯು ಕಿತ್ತುಹೋಗಿ 4 ಪೆಟ್ಟಿಗೆಗಳು ಸಮುದ್ರದೊಳಕ್ಕೆ ಬಿದ್ದು ಹೋಗಿ 18 ಲಕ್ಷ ರೂ ಗಳ ಭಂಗಾರವು ನೀರುಪಾಲಾಯಿತು ಇದನ್ನು ನೀರಿನಿಂದ ಮೇಲಕ್ಕೆ ತೆಗೆಯುವ ಪ್ರಯತ್ನ ನಡಿಸಲ್ಪಡಬೇಕಾಗಿದೆ

ಯುವಕನು ಯುವತಿಯಾಗುತ್ತಿರುವುದು

ಅಮೃತಸರದ ಖಾಲ್ಸಾ ಕಾಲೇಜು ವಿದ್ಯಾರ್ಥಿ 17 ವರ್ಷ ವಯಸ್ಸಿನ ಸಿಕ್ ಜಾತಿಯ ಯುವಕನು ಅಲ್ಲಿಯ ಆಸ್ಪತ್ರೆಗೆ ಹೋಗಿ ತನ್ನ ದೇಹದ ಕೆಲಭಾಗಗಳಲ್ಲಿ ಕೊಬ್ಬು ಹೆಚ್ಚಾಗಿ ಬೆಳೆಯುತ್ತಿದೆ ಎಂದು ಡಾಕ್ಟರಿಗೆ ಹೇಳಲು, ಡಾಕ್ಟರು ಅವನ ದೇಹವನ್ನೆಲ್ಲಾ ಚೆನ್ನಾಗಿ ಪರೀಕ್ಷಿಸಿ ಅವನ ಪುರುಷ ಚಿಹ್ನೆಯು ಹೋಗಿ ಸ್ತ್ರೀ ಚಿಹ್ನೆಯು ಕ್ರಮೇಣ ಬೆಳೆಯುತ್ತಿದೆ ಎಂದು ತಿಳಿಸಿರುತ್ತಾರೆ.

ಸ್ವದೇಶೀ ಉದ್ಯಮಶಾಲೆಗಳ ವಿಷಯದಲ್ಲಿ

...ದೇಶ ಸ್ವದೇಶೀ ಮಿಲ್ಲುಗಳು ... ಪ್ರಚಾರ ಅಧಿಕವಾಗುತ್ತಾ ಬಂದಿರುವುದರಿಂದ ... ಸ್ವದೇಶೀ ... ಉದ್ಯೋಗ ... ರಿಂದ ... ಹೊಸ ... ಬೇಕಾದ್ದಿಲ್ಲವೆಂಬುದಾಗಿ ... ಮೆಂಬರಾದ ಸರ್ ... ಕ್ರೀರಾರವರು ದಿಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಮ|| ಹರಿರಾಜಸ್ವರೂಪರವರ ಪ್ರಶ್ನೆಗೆ ಉತ್ತರವಾಗಿ ಹೇಳಿದರು

ಬ್ರಿಟನ್ನಿನಲ್ಲಿ ಕೂಡಿಡಲ್ಪಟ್ಟಿದ್ದ ಭಂಗಾರ.

ಇಂಗ್ಲೆಂಡಿನಲ್ಲಿ ಸವರನ್ನು ಮತ್ತು ಹಳೇ ಭಂಗಾರವನ್ನು ಮಾರಲು ಜನರು ಹುಚ್ಚುಹಿಡಿದು ನುಗ್ಗಿ ಬರುತ್ತಿರುವುದರಿಂದ ಲಂಡನ್ನಿನಲ್ಲಿ ಭಂಗಾರದ ಬೆಲೆಯು 1 ಔನ್ಸಿಗೆ 7 ಆಣೆಯಂತೆ ಇಳಿದುಹೋಗಿದೆ ಲಂಡನ್ನಿನ ಜವಾಹಿರಿವ್ಯಾಪಾರದ ಕಂಪೆನಿಯೊಂದು 36,00 000 ರೂ ಗಳಿಗೆ ಹಳೇ ಭಂಗಾರವನ್ನು ಕೊಂಡಿರುತ್ತಾರೆ ಹೀಗೆಯೇ ಇನ್ನೆಷ್ಟೋ ಕಂಪೆನಿಗಳು ಕೊಂಡಿರುತ್ತವೆ ಜನರು ಮಾರಲು ಭಂಗಾರವನ್ನು ಮಿತಿಯಿಲ್ಲದೆ ತೆಗೆದುಕೊಂಡು ಬರುತ್ತಿರುವುದನ್ನು ನೋಡಿದರೆ ಇಂಗ್ಲೀಷರ ... ಹಿಸಲು ಸಾಧ್ಯವಿಲ್ಲದಷ್ಟು ಭಂಗಾರವು ಶೇಖರಿಸಲ್ಪಟ್ಟಿರುವುದು ವ್ಯಕ್ತವಾಗುತ್ತದೆಂದು ಒಬ್ಬ ವರ್ತಕನು ಹೇಳಿರುತ್ತಾನೆ

ರಾಜಕೀಯ ಪ್ರತಿಘಟನ ಸಭೆ

ಕೋಂಕಪುರದಲ್ಲಿ ಕಮಿಷನರ್ ಹೋಮ್ಸ್ ರವರ ಅಧ್ಯಕ್ಷತೆಯಲ್ಲಿ ಮೊನ್ನೆ ಒಂದು ಸಭೆಯು ಜರುಗಿತು ಈ ಸಭೆಗೆ ಕಲೆಕ್ಟರು, ಇತರ ದೊಡ್ಡ ಉದ್ಯೋಗಸ್ಥರು ಸರ್ಕಾರಿಯುದ್ಯೋಗಸ್ಥರಲ್ಲದ ಪ್ರಮುಖರು ಬಂದಿದ್ದರು ದೇಶದಲ್ಲಿ ರಾಜಕೀಯ ಪರಿಸ್ಥಿತಿ ಮೊದಲಿಗಿಂತಲೂ ಉತ್ತಮವಾಗಿರುವುದನ್ನು ಕುರಿತು ಅಧ್ಯಕ್ಷರು ವಿವರಿಸಿದರು "ಈಗ ಕಾಂಗ್ರೆಸ್ ಮಹಾಸಭೆಯವರು ಅವಲಂಬಿಸಿರುವ ಪದ್ಧತಿಯು ಸರಿಯಲ್ಲ ಮಿತವಾದಿಗಳ ಪಕ್ಷವೊಂದು ತಲೆಯೆತ್ತುವುದಾವಶ್ಯಕವಾಗಿದೆ ಆ ಮಿತವಾದಿಗಳ ಸಹಾಯವನ್ನು ಪ್ರಭುತ್ವದವರು ಕೋರುತ್ತಾರೆ ವಿದ್ಯಾರ್ಥಿಗಳಿಗೂ, ಗ್ರಾಮಸ್ಥರಿಗೂ, ವಿವರಿಸಿ ಹೇಳಲು ಪ್ರಭುತ್ವದವರು ಉಪಾಧ್ಯಾಯರುಗಳಿಗೆ ಕೆಲ ಕರಪತ್ರಿಕೆಗಳನ್ನು ಕೊಟ್ಟಿರುವರು ಈ ವಿಷಯದಲ್ಲಿ ಉಪಾಧ್ಯಾಯರು ಸಹಾಯ ಮಾಡಬೇಕು" ಎಂದು ಅಧ್ಯಕ್ಷರು ಹೇಳಿದರು ಸಭೆಯವರ ಸೂಚನೆಗಳನ್ನು ಜಾರಿಗೆ ತರಲು ಬೇರೆ ಬೇರೆ ಸಂಘಗಳು ನಿಯೋಜಿಸಲ್ಪಟ್ಟವು

ಮಾಂಗಲ್ಯ ಪ್ರಕರಣ

ತಿರುನೆಲ್ವೇಲಿ ಸಬ್‌ಡಿವಿಜನ್ ಮೆಜಿಸ್ಟ್ರೇಟರಾದ ರಾಜಾವೇಲ್‌ರವರು ಪ್ರಧುಪತ್ನಿಯ ಮಾಂಗಲ್ಯವನ್ನು ತೆಗಿಸಿದುದು ಹಿಂದುಧರ್ಮಕ್ಕೆ ವಿರೋಧವೂ ಅವಮಾನಕರವೂ ಆದದರಿಂದ ಇದನ್ನು ವಿಚಾರಿಸಿ ಇನ್ನು ಮೇಲೆ ಇಂತಹ ಧರ್ಮವಿರುದ್ಧಾಚರಣೆಯು ನಡೆಯದಂತೆ ಅಪ್ಪಣೆಮಾಡಬೇಕೆಂದು ಮದ್ರಾಸು ಪ್ರಭುತ್ವದವರಿಗೆ ಹಿಂದುಗಳು ವಿಜ್ಞಾಪಿಸಿಕೊಂಡಿದ್ದರು ಅದರ ಮೇಲೆ "ಮಾಂಗಲ್ಯವನ್ನು ತೆಗೆಯಕೂಡದೆಂದು ಕ್ರಿಮಿನಲ್ ರೋಡಿನಲ್ಲಿ ಹೇಳಲ್ಪಟ್ಟಿಲ್ಲವಾದರೂ ಮೆಜಿಸ್ಟ್ರೇಟರು ತಪ್ಪಭಿಪ್ರಾಯದಿಂದ ತೆಗಿಸಿದುದು ಬಹಳ ಅಸಂಗತವು ಮತ್ತು ಮೆಜಿಸ್ಟ್ರೇಟರು ತಮ್ಮ ತಪ್ಪನ್ನರಿತುಕೊಂಡು ಅದಕ್ಕಾಗಿ ವ್ಯಸನವನ್ನು ಸೂಚಿಸುತ್ತಾರೆ ಡಿ|| ಮೆಜಿಸ್ಟ್ರೇಟರು ಈ ವಿಚಾರದಲ್ಲಿ ಪ್ರಭುತ್ವದವರಪ್ಪಣೆಯನ್ನು ನಿರೀಕ್ಷಿಸದೆ ಮಾಂಗಲ್ಯವನ್ನು ಪ್ರಧುಪತ್ನಿಗೆ ತತ್‌ಕ್ಷಣವೇ ಕೊಡಬೇಕೆಂದು ಅಪ್ಪಣೆ ಮಾಡಿದರು ಸ್ತ್ರೀಯರು ಅರಾಜಕಪ್ರಯತ್ನದಲ್ಲಿ ಭಾಗಿಗಳಾದರೆ ಮಾನಭಂಗಕ್ಕೂ ಕೊಲೆಗೂ ಕಾರಣರಾಗುತ್ತಾರೆಂದು ಪಾಡ್ರಿಲಾರವರು ಹೇಳಿದುದನ್ನು ಸ್ತ್ರೀಯರು ಪೋಲೀಸರ ಅವಮಾನಕ್ಕೆ ಗುರಿಯಾಗಬೇಕಾಗುತ್ತದೆಂಬುದಾಗಿ ಹೇಳಿದರೆಂದು ತಿಳಿದಿರುವುದು ತಪ್ಪು" ಎಂದು ಪ್ರಭುತ್ವದವರು ಒಂದು ಸಮಾಧಾನ ಪತ್ರಿಕೆಯನ್ನು ಪ್ರಕಟಿಸಿರುತ್ತಾರೆ.

ಚೈನಾ ಜಪಾನ್ ಯುದ್ಧ.

ಚೈನಾ ಜಪಾನ್ ರಾಜ್ಯಗಳು ಯುದ್ಧ ಪ್ರಯತ್ನವನ್ನು ನಿಲ್ಲಿಸದಿದ್ದಲ್ಲಿ ಆಯುಧ ವಿಸರ್ಜನ ಪ್ರಯತ್ನವು ಸಫಲವಾಗುವುದಿಲ್ಲವೆಂದು ಜಿನೀವಾ ಪಟ್ಟಣದಲ್ಲಿ ಕೂಡಿರುವ ಸಭಿಕರು ಉಭಯ ರಾಜ್ಯದವರಿಗೆ ಬರೆದಿದ್ದರು ಅದಕ್ಕೆ ಚೈನಾ ರಾಜ್ಯವೊಪ್ಪಿಕೊಂಡಿತಾದರೂ ಜಪಾನು ಮಾತ್ರ ಒಪ್ಪಲಿಲ್ಲವಾಗಿ ಉಭಯ ರಾಜ್ಯಗಳಿಗೂ ಯುದ್ಧವು ಬಹಳ ತೀವ್ರವಾಗಿ ನಡೆಯುತ್ತಿರುವುದು ಯುವಕ ಯುವತಿಯರು ವಿದ್ಯಾಭ್ಯಾಸ ಮೊದಲಾದವನ್ನು ಬಿಟ್ಟು ಯುದ್ಧಸಾಮಗ್ರಿಗಳನ್ನೊದಗಿಸುವುದು, ಯುದ್ಧದಲ್ಲಿ ಚೀನಿಗೆ ಸ್ವದೇಶ ಗೌರವ ಪ್ರತಿಷ್ಠೆಗಳನ್ನು ಕಾಪಾಡುವಂತೆ ಪ್ರೋತ್ಸಾಹಿಸುವುದು, ಗಾಯಪಟ್ಟವರನ್ನು ಉಪಚರಿಸುವುದು ಇತ್ಯಾದಿ ಕಾರ್ಯಗಳಲ್ಲಿ ತೊಡಗಿರುತ್ತಾರೆ ಯುದ್ಧದ ವೆಚ್ಚಕ್ಕಾಗಿ ಜಪಾನು ಪ್ರಭುತ್ವವು 3,90,00,000 ರೂ. ಗಳನ್ನು ಗೊತ್ತುಮಾಡಿರುವರು ಮತ್ತು ಸಾವಿರಾರು ಸೈನಿಕರನ್ನೂ ನೂರಾರು ಗಟ್ಟಲೆ ಫಿರಂಗಿಗಳ ಸಮೇತವಾದ ಆಕಾಶ ವಿಮಾನಗಳನ್ನೂ ಟ್ಯಾಂಕುಗಳು ಮತ್ತು ಜಹಾಜುಗಳಿಗೆ ಕಂದು ತುಂಬಿ ಬಹಳ ಭೀಕರವಾಗಿ ಯುದ್ಧ ಮಾಡುತ್ತಿರುವುದು ಚೈನೀಯರೂ ತಮ್ಮ ಸೇನೆಗಳನ್ನು ಸಿದ್ಧಪಡಿಸಿಕೊಂಡು ಬಹಳ ಧೈರ್ಯ ಸಾಹಸಗಳಿಂದ ಪ್ರತಿಭಟಿಸುತ್ತಿರುವರು. "ಈಗ ಚೈನಾದಲ್ಲಿ ನಡೆಯುತ್ತಿರುವ ಜಪಾನ್ ಯುದ್ಧವನ್ನು ... ಪ್ರಪಂಚ ಶಾಂತಿಗೆ ಭಂಗವೂ ... ನಿರಾಯುಧರ ... ಹಾಕುತ್ತಿರುವುದು ... ಸಲ್ಲದ ಕಾರ್ಯವಾಗಿದೆ ... ನೋಡಿದರೆ ... ಸಿದ್ಧವಾಗಿರುವವೆ ಮತ್ತು ಶಾಂತಿಸ್ಥಾಪನೆ ಮಾಡಿರಿ ... ಗಳು ನಮ್ಮ ಸೇನೆಗೆ ಸೇರಬೇಕೆಂದು" ಎಂದು ಮಾರ್ಷಲ್ ಚಾಂಗ್ ಕೈಷೇಕ್‌ರವರೂ, ... ವಾದ್ರಿಗಳಾದ ಎಚ್ ಆರ್. ಎಲ್ ಷೆಫರ್ಡ್‌ರವರೂ, ಪ್ರೆಸ್ಬಿಟೇರಿಯನ್ ಪಾದ್ರಿಗಳಾದ ಹೆಚ್ ಗ್ರೇಯವರೂ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ ಇವರ ಶಾಂತಿಸ್ಥಾಪನ ಪ್ರಯತ್ನವು ಎಷ್ಟರಮಟ್ಟಿಗೆ ಸಿದ್ಧಿಸುವುದೋ ನೋಡಬೇಕು.

NOTICE

The public are hereby informed that 20 house sites in Chamundi Extension, Mysore City are available for sale at Rupee one per square yard

(2) Further particulars can be had from the Office of the undersigned

T G RAMA IYER,

MYSORE — Chairman

27th Feb. 1932 — City Improvement Trust Board.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟುಬೋರ್ಡು

ನೋಟೀಸು.

ಮೈಸೂರು ಸಿಟಿ ಚಾಮುಂಡೀ ಬಡಾವಣೆಯಲ್ಲಿರುವ 20 ಸ್ಯಟುಗಳನ್ನು ಚದರ ಗಜ ಒಂದಕ್ಕೆ ಒಂದು ರೂಪಾಯಿ ಮೇರೆಗೆ ಖರೀದಿಗೆ ಕೊಡಲಾಗುತ್ತೆ.

ಹೆಚ್ಚು ವಿವರಗಳು ತಿಳಿಯಲು ಅಪೇಕ್ಷಿಸುವವರು ಈ ಆಫೀಸಿಗೆ ಬರೆದು ತಿಳಿದುಕೊಳ್ಳಬಹುದು.

ತಾ|| 27–2–1932 — ಟಿ ಜಿ. ರಾಮಯ್ಯರ್, ಛೇರ್‌ಮನ್.

ಪ್ರತಿವಾದಿಗೆ ನೋಟೀಸು

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಎಸ್ ಒ ನಂ ೧೦೧೯/೩೧ (1019/31)

ಕಮ್ಮತ್ತ ಸಿಂಗಪ್ಪ ವಾದಿ

ವ.

ಪಾತಾಳಕೊಟ್ರಪ್ಪ ಪ್ರತಿವಾದಿ

ಮೇಲ್ಕಂಡ ನಂಬರಿನಲ್ಲಿ ವಾದಿಯು ನಿನ್ನ ಮೇಲೆ ತಾ|| ೧೯–೧೨–೧೯೨೮ ರಲ್ಲಿ ೧೦೦ ರೂಪಾಯಿಗೆ ಬರೆದುಕೊಟ್ಟ ಪ್ರಾಂಸರಿ ನೋಟಿನ ಮೇಲೆ ೧೫೦ ರೂಪಾಯಿಗೆ ಬಡ್ಡಿ ಸೇರಿಸಿ ದಾವಾ ಮಾಡಿರುತ್ತಾನೆ ಸದರಿ ನಂಬರು ತಾರೀಖು ೧೦–೩–೧೯೩೨ ಕ್ಕೆ ವಾಯಿದಾ ಇರುತ್ತದೆ ಆ ದಿವಸ ನೀನು ಕೋರ್ಟಿಗೆ ಹಾಜರು ಆಗಿ ತಕರಾರು ಇದ್ದರೆ ಕೊಡಬಹುದು. ಇಲ್ಲದಿದ್ದರೆ ನಿನ್ನ ಮೇಲೆ ಎಕ್ಸ್‌ಪಾರ್ಟಿಯಾಗುತ್ತದೆಂದು ತಿಳಿಯತಕ್ಕದ್ದು

ನಂಜುಂಡಯ್ಯ ಮೋಟ್ಲೇರಿ,

ಹೊಸಪೇಟೆ — ಹಿರೇಮಠ, ಬಿ ಎ., ಬಿ ಎಲ್,

ಜಿಲ್ಲಾ ಬಳ್ಳಾರಿ, — ವಾದಿ ಪರ ವಕೀಲ್.

ತಾ|| 27–2–1932

ಶ್ರೀಶೈಲ ಕ್ಷೇತ್ರಚರಿತ್ರೆ

ಈ ಶ್ರೀಶೈಲ ಮಹಾಕ್ಷೇತ್ರ ಚರಿತ್ರೆಯು ಬಹಳ ಪುರಾತನವಾದುದು ಮತ್ತು ಮಹಾಭಾರತದಲ್ಲೂ ಸ್ಕಾಂದಪುರಾಣದಲ್ಲೂ ವರ್ಣಿಸಲ್ಪಟ್ಟಿದೆ. ಕ್ರಿಸ್ತಶಕ ಮೊದಲನೆಯ ಶತಮಾನದಲ್ಲಿ ಬೌದ್ಧ ಮಹಾತ್ಮ ನಾಗಾರ್ಜುನ ಸ್ವಾಮಿ ಎಂಬ ಯತೀಶ್ವರನು ಇಲ್ಲಿ ತಪಸ್ಸುಮಾಡಿ ಸಿದ್ಧಿಹೊಂದಿದನು 6 ನೆಯ ಶತಮಾನದಲ್ಲಿ ಕದಂಬವಂಶದ ರಾಜರು ಈ ಕ್ಷೇತ್ರವನ್ನು ಪಾಲಿಸಿ ಅಭಿವೃದ್ಧಿಗೆ ತಂದರು 14 ನೆಯ ಶತಾಬ್ದದಲ್ಲಿ ರೆಡ್ಡಿವಂಶದ ಮಹಾರಾಜನು ಶ್ರೀಶೈಲಕ್ಷೇತ್ರವನ್ನು ಪರಿಪಾಲಿಸಲು ಉಕ್ಕಶಿವಾಚಾರ್ಯರನ್ನು ಬೇರೆ ಮೂವರನ್ನು ಧರ್ಮದರ್ಶಿಗಳನ್ನಾಗಿ ನಿಯಮಿಸಿದನು. ಅವರು ದೇವಸ್ಥಾನಕ್ಕೆ ಸೇರಿದ 70 ಗ್ರಾಮಗಳನ್ನು ವಿಚಾರಿಸಿ ಅವುಗಳ ಆದಾಯದ ಲೆಕ್ಕವನ್ನು ಬರೆಯುತ್ತಿದ್ದರು ಆ ಶತಮಾನದಲ್ಲೇ ವೇಮಾರೆಡ್ಡಿ ಎಂಬ ದಾನಿಯು ಪಾತಾಳಗಂಗೆಗೆ ಮೆಟ್ಟಿಲುಗಳನ್ನು ಕಟ್ಟಿಸಿದನು, ತರುವಾಯ ಏಕಾಂತಾ ಮಹಾರಾಣಿಯು ಶಿಖರದ ಮೆಟ್ಟಿಲುಗಳನ್ನು ಕಟ್ಟಿಸಿದಳು 15 ನೆಯ ಶತಮಾನದಲ್ಲಿ ವಿಜಯನಗರದ ಮಹಾರಾಜನಾದ ಹರಿಹರರಾಯನು ಶ್ರೀ ಮಲ್ಲಿಕಾರ್ಜುನಸ್ವಾಮಿಗೆ ಮುಖಮಂಟಪವನ್ನು ಕಟ್ಟಿಸಿ ಅದರ ಸಮೀಪದಲ್ಲಿ ಕೆಲ ಕೊಳಗಳನ್ನು ತೆಗೆಸಿದನು ಆ ರಾಜ್ಯದ ಶ್ರೀ ಕೃಷ್ಣದೇವರಾಯನ ಸಹೋದರ ವೀರನರಸಿಂಹರಾಯನು ಕ್ಷೇತ್ರದರ್ಶನಮಾಡಿ ಪಾತಾಳಗಂಗೆಯ ಸಮೀಪದಲ್ಲಿ ದೇವಾಲಯಗಳನ್ನೂ, ಮಂಟಪಗಳನ್ನೂ ಕಟ್ಟಿಸಿದನು. ಇಲ್ಲಿಯ ಕೈಲಾಸದ್ವಾರದ ಶಿಲ್ಪನೈಪುಣ್ಯವು ವರ್ಣನಾತೀತವಾಗಿರುವುದು ಅಲ್ಲದೆ ಪ್ರಾಕಾರಗಳ ಮೇಲೆ ಶಿವಪುರಾಣಾಂತರ್ಗತವಾದ ಕಥೆಗಳನ್ನು ಶಿಲ್ಪರೂಪದಲ್ಲಿ ಕೆತ್ತಿಸಿದವನು ಈ ದೊರೆಯೇ ಈ ಶಿಲ್ಪನೈಪುಣ್ಯವು ಹಂಪೆಯಲ್ಲಿರುವ ಶಿಲ್ಪ ನೈಪುಣ್ಯಕ್ಕೆ ಸಮಾನವಾಗಿದೆ

ಈ ಕ್ಷೇತ್ರವು ಮೊದಲು ಒಂದು ರಾಜ್ಯಭಾಗವಾಗಿದ್ದಿತು. ಶ್ರೀ ಕೃಷ್ಣದೇವರಾಯರ ಸಹೋದರನಾಗಿ ಅಚ್ಯುತದೇವರಾಯನು ಆಳುತ್ತಿದ್ದನು, ಆತನು ಸ್ವಾಮಿಯ ಸನ್ನಿಧಿಯಲ್ಲಿರುವ ದೊಡ್ಡ ಸಂಪಿಗೆಯನ್ನು ಕಟ್ಟಿಸಿ ಬಂಗಾರದ ಕಲಶವನ್ನು

[illegible]

ಪ್ರಕಟಣೆ ನಂ. ೪

[illegible]

(1) [illegible] Constitu-tion [illegible]

[illegible]

G H. Honnapurmath, K.A Kulkarni

[illegible]

[illegible]

[illegible]

(೩) [illegible]

1 ರೂಪಾಯಿ

ಜಾಹೀರ ನೋಟೀಸು.

[illegible] ನಾಟಕ [illegible] ಸಾರ್ವಜನಿಕರಿಗೆ ತಿಳಿಸುವದೇನಂದರೆ—[illegible] (1) [illegible] (2) [illegible] (3) [illegible] 3 [illegible] ಈ ನೋಟೀಸಿನ ಮೂಲಕವಾಗಿ ತಿಳಿಯಪಡಿಸಲಾಗಿದೆ.

K Jatteppa
ಮಾಲಕ

ದೊಡ್ಡಂ ಗಡಿಗ [illegible]
ತಾ॥ 12-2-1932 [illegible] ನಾಟಕದ ಕಂಪನಿ, ಹುಬ್ಬಳ್ಳಿ
[8—1]

ನೋಟೀಸು.

ಶ್ರೀ [illegible] ನಾಟಕದ [illegible] ಈ ನೋಟೀಸಿನ ಮೂಲಕ ತಿಳಿಸುವದು.

[8—1]

K Jatteppa
ಮಾಲಕ

[illegible] ಶ್ರೀ [illegible] ನಾಟಕ ಕಂಪನಿ, ಹುಬ್ಬಳ್ಳಿ
ತಾ॥ 12-2-1932

ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡು

NOTICE.

12-2-1932

[illegible] ಕೆಲಸಗಳನ್ನು [illegible] ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡ್ [illegible] ತಾ॥ 7-3-32 ನೇ ಮಧ್ಯಾಹ್ನ 3 ಘಂಟೆ ವರೆಗೂ [illegible] ಅಂಗೀಕರಿಸಲ್ಪಡುವುವು

[illegible] ಕೆಲಸದ ದಿವಸಗಳಲ್ಲಿ ದಿವ 11 ಘಂಟೆ [illegible] ತಿಳಿದುಕೊಳ್ಳಬಹುದು.

[illegible] —1932 ನೇ ಡಿಸೆಂಬರು [illegible]

[illegible]	ಕೆಲಸಗಳ ಹೆಸರು	ಡಿಪಾಜಿಟ್ ಮಾಡುವ ಮೊಬಲಗು
	1. ಸರಸ್ವತಿಪುರ ಗ್ರಾಮದ ಭಾವಿ ಸರಿಪಡಿಸುವುದು	ರೂ. 100
	2. ಬಂದಿಹಳ್ಳಿ ಬಾವಿ ಸರಿಪಡಿಸುವುದು	ರೂ. 100
	3. ಕಂದಿಗಲ್ ಗ್ರಾಮದಲ್ಲಿ ಆದಿಕರ್ನಾಟಕರಿಗಾಗಿ ಭಾವಿ ತೆಗೆಸುವುದು	ರೂ. 100
	4. ದೊಡ್ಡ ಮಾಗಡಿ ಗ್ರಾಮದಲ್ಲಿ ಭಾವಿ ತೆಗೆಸುವುದು	ರೂ. 100
ಹರಿಹರ ಸಬ್ ತಾಲ್ಲೋಕು	5. ಹೊಟ್ಟಿಗಾನಹಳ್ಳಿಯಲ್ಲಿ ಭಾವಿ ತೆಗೆಸುವುದು	ರೂ. 100
	6. ಗುತ್ತೂರು ಗ್ರಾಮದಲ್ಲಿ ಆದಿಕರ್ನಾಟಕರಿಗಾಗಿ ಭಾವಿ ತೆಗೆಸುವುದು	ರೂ. 100

ಜಿ. ಚನ್ನಪ್ಪ
ಪ್ರೆಸಿಡೆಂಟ್.

[illegible]

[illegible] 15,00,000 [illegible] 1911 [illegible] 1911-12 [illegible] 1912 [illegible]

[illegible] 4,00,000 [illegible]

[illegible] 1911 [illegible] 430 [illegible]

[illegible]

[illegible] 1841 [illegible]

[illegible]

5 [illegible]

6 [illegible]

7. [illegible]

8 [illegible]

ಸುಬ್ರಹ್ಮಣ್ಯ [illegible]

ಶ್ರೀ ವೀರಶೈವ [illegible] ಸಭಾ [illegible]

[illegible]

[illegible] ಸೆಕ್ರೆಟರಿ

[illegible]

[illegible]	[illegible]	[illegible]	[illegible]	[illegible]	[illegible]	[illegible]

[illegible]

[illegible]

ದೀಕ್ಷಾ ವಿಧಿಯು

[illegible]

ಉತ್ಕೃಷ್ಟ ಮಹಾಮಹೋತ್ಸವವು ಶ್ರೀ ಮಹಾನಂದಿಕ್ಷೇತ್ರವು

ಭರತಖಂಡದಲ್ಲಿ ಅತ್ಯಂತ ಸುಪ್ರಸಿದ್ಧವಾದ ಪವಿತ್ರ ಸ್ಥಳಗಳಲ್ಲಿ [illegible] ಶ್ರೀ ಮಹಾನಂದಿ ಕ್ಷೇತ್ರವೊಂದಾಗಿರುತ್ತದೆ. ಇಲ್ಲಿಯ ಅವರ್ಣನೀಯವಾದ ಪ್ರಕೃತಿ ಸೌಂದರ್ಯವೂ, ಮನೋರಂಜಕವೂ [illegible] ಪವಿತ್ರವೂ ಆದ [illegible] ಈ ಕ್ಷೇತ್ರವನ್ನಾವರಿಸಿರುವ ಧಾರ್ಮಿಕ ಶಾಂತಿಯ ವಾತಾವರಣವೂ ಈ ಕ್ಷೇತ್ರಕ್ಕೆ ಪ್ರಕೃತಿಯ [illegible] ಅಲಂಕಾರ [illegible] ಕಾಲದಲ್ಲಿ ಇಲ್ಲಿ ಶ್ರೀ ಮಹಾ [illegible] ಜರುಗುವುದರಿಂದ ಎಲ್ಲಾ ಭಾಗಗಳಿಂದಲೂ ಯಾತ್ರಿಕರು ತಂಡೋಪತಂಡವಾಗಿ ನೆರೆಯುತ್ತಾರೆ. ಆಂಧ್ರ ಮತ್ತು ಕರ್ನಾಟಕ ಪ್ರಾಂತಗಳಿಂದ ಅನೇಕ ವೀರಶೈವರು ಬರುವರು, ಅವರ ಶಿವಪೂಜೆ [illegible] ಸೌಕರ್ಯಗಳ ವ್ಯವಸ್ಥೆಯನ್ನು ಶ್ರೀ ಮಹಾನಂದಿಯ [illegible] ಉದಾತ್ತ [illegible]

[illegible]

ಓರ್ವ ಸ್ವಾಮಿಭಕ್ತ

[illegible]

ವಚನ [illegible] ವಿಮರ್ಶೆಯ ಸ್ಪಷ್ಟೀಕರಣ

[illegible] ನವರಿಗೆ ಅವರ ವಿಷಯವಾಗಿ ಕೆಲವು ಪ್ರಬಲವಾದ ಸಂಶಯಗಳುಂಟಾಗಿವೆ. ಅವುಗಳಿಗೆ ಲೇಖಕರು ಉತ್ತರವನ್ನೀಯಬೇಕೆಂದು ನನ್ನ ಬೇಡಿಕೆ. ಅವುಗಳ ವಿವರ —

1. ಲೇಖಕರು ತಮ್ಮ ಲೇಖದಿಂದ ಶಿವಶರಣರೆಲ್ಲದವರು ಶಿವಶರಣರ ಹೆಸರಿನಿಂದ ಕೆಲವು ವಚನಗಳನ್ನು ಪ್ರಕಟಿಸಿದ್ದಾರೆಂದು ಧ್ವನಿ ತೋರುವುದು. ಹಾಗಾದರೆ ಅಪ್ರಾಮಾಣ್ಯವೆಂದಿರುವ ವಚನಗಳು ಯಾವುವು? ಅವನ್ನು ಯಾರು ಯಾವ ಹೆಸರಿನಿಂದ ಹೇಳಿದ್ದಾರೆ?

2. ಯಾವ ಶಿವಶರಣರ ವಚನಗಳ ಲೇಖಕರು ಬರೆದಂತೆ ವೀರಶೈವ ಸಮಾಜದಲ್ಲಿ [illegible] ಒಳಪಂಗಡಗಳಲ್ಲಿ ಪರಸ್ಪರ [illegible] ಹುಟ್ಟಿಸಿವೆ? ಆ ಅಭಿಪ್ರಾಯ ಲೇಖಕರು ಅಂಥಾ ವಚನಗಳನ್ನು ಸ್ಪಷ್ಟವಾಗಿ ಉದಾಹರಿಸಿ ಮೇಲಿನ ತಮ್ಮ ಅಭಿಪ್ರಾಯವನ್ನು ಸಮರ್ಥಿಸಬೇಕು.

3. ಯಾವ ಶಿವಶರಣರ ವಚನದಲ್ಲಿ ಲೇಖಕರು ಅನ್ನುವಂತೆ [illegible] ಬಾಧಕಗಳಾದ ವಿಷಯಗಳು ತುಂಬಿಕೊಂಡಿವೆ? ಆಯಾ ವಚನಗಳನ್ನು ಉದಾಹರಿಸಿ ತೋರಿಸಬೇಕು.

ಮೈಸೂರ್ ಸ್ಟಾರ್

ಶ್ರೀ ಕಿ ಸೋ ಪಿ ವಿ ಪ್ರ ಪ್ರತಿಷ್ಠಿತ ಸಪ್ತ ಮ ವಿ ಖ

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೧-೨] [ಪಟ್ಟಣದವರಿಗೆ ೩-೮-೦] [ಪರರಾಜ್ಯದವರಿಗೆ ೪-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಮಾರ್ಚಿ ತಾರೀಖು ೧೪ ನೆಯ ಸೋಮವಾರ [ಸಂಚಿಕೆ ೧೧

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death

The best, safest cheapest most profitable and most convenient place for insurance is the Public Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries Economic Superintendents Helpers and the Insurance Office Public Office Buildings Bangalore

(Sd) S SHAMANNA,
Secretary Insurance Committee

(50—30)

MYSORE RAILWAYS.
NOTICE.

No 58 of 17—2—32

On and from 1st March 1932 the train service will be revised as follows —

1 Slight alterations have been made in the timings of trains on the Bangalore-Mysore Mysore Chamarajnagar Chikjajur Chitaldrug and Tarikere Narasimharajapura Tramway Sections

Narrow Gauge Section

		No 32 H M	No 78 H M	No 36 H M	No 38 H M	No 34 H M	No 36 H M
Bangalore City	D	8 00	14 10	17 30			
Chikballapur	A	10 47	16 45	20 20			
	D	11 07			6 40		
Kolar	A	14 32			9 42		
	D	14 48			9 53	6 35	17 05
Bowringpet	A	15 40			10 50	7 25	17 55
		No 31	No 31	No 35	No 77	No 33	No 37
Bowringpet	D	10 00	12 40			19 40	17 05
Kolar	A	10 44	13 24			20 25	17 55
	D	10 59	13 45				
Chikballapur	A	14 26	17 05				
	D	14 46		7 45	17 20		
Bangalore City	A	18 10		10 15	20 00		

For detailed timings see Sheet time table which will be exhibited at stations shortly 2

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮೀರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಶಕ್ತರಿಗೆ ಶ್ರೀಘ್ರವಾಗಿ ಪೋಷಣೆ | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಂಗ ಸುಂದರಪಾಕದ [ಸ್ವರ | ಧಿಕ್ಕರಿಸಿದರ ಕ್ಷೇತ್ರಕೆ ಕಾಯ್ದು ಕೊಳ್ಳುವಿರಿ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು

[illegible]

ಪತ್ರ ಮೂಲಕ! — ವೈದ್ಯ ವ್ಹಿ. ಎನ್. ಕಾಪಸೆ, ಮು. ಪೋ. ಮಿರಜ ಎಂ ಎಸ್. ಎಂ

ಲಗ್ನಪತ್ರಿಕೆಗಳ
ಮುದ್ರಣಕ್ರಮ

ನಮ್ಮ ಕರ್ಸ್ಟ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

[illegible]

ಡಾಕ್ಟರ್ ಜೀ ಬೀ. ಯವರ

ಸುಗಂಧ ನಶ್ಯದ ಪುಡಿ.

(Registerd Trade Mark)

[illegible]

ವಿಳಾಸ — ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧, ಮದರಾಸು,

(60—27)

ಮೈಸೂರು ಸ್ಟಾರ್

ರಿಜಿಸ್ಟರ್ಡ್ ನಂ [illegible]

MYSORE BABIES

Blessed are Mysore babies—the poorer, rather than the rich ones! because of the efforts of the Mysore Red Cross Society aided by various philanthropic individuals and bodies including the Mysore City Municipal Council. Sir Charles Todhunter has revivified the Red Cross Society and under its auspices the week ending today has been kept busy with exhibitions of babies and opening of Maternity and Child Welfare Homes. The list is captivating, encouraging and inspiring. It began with the laying of the foundation stone of the Vani vilas Maternity and Child Welfare Home on the 7th March 1932 by His Highness the Yuvaraja of Mysore. The Maternity and Child Welfare Exhibition was opened by His Highness the Yuvaraja on the same evening. Then the opening of Subramanyam Maternity and Child Welfare Home and the laying of the foundation stone of the building for this centre in Lashker Mohalla by Lady Todhunter took place on the 11th March 1932. On the 12th March Sir Charles Todhunter opened the Railway Colony Maternity and Child Welfare Home. On Sunday the 13th March 1932 Sir Mirza M. Ismail opened Sri Mallamma Maternity and Child Welfare Home at Krishnamurtipuram and laid the foundation stone for this centre. Mr V. D. Raja Ram has donated a handsome sum of Rs 10,000 for a centre. Sahukar Dharmaprakash D. Banumaiah the great Philanthropist of Mysore, whose charities [illegible] almost every conceivable worthy object in the City and even outside has contributed a sum of Rs 10,000 the income from which to be utilised for the maintenance of the Home named after his mother Sri Mallamma and a sum of Rs 5000 for the building and a sum of Rs 500 for equipping the same. These centres will look after the expecting mothers and babies in the poorer localities in the City. The babies will grow up with healthy food and under healthy surroundings and in the words of Sir Mirza form nurseries where the future [illegible] to grow. We must join with Sir Mirza in expressing our gratitude on behalf of the [illegible] to both Sir Charles Todhunter and Lady Todhunter both of whom have been working indefatigably at the cause. It is not only that the mothers and babies who get aid in the various centres that benefit. It has a far greater value. That is the education it gives. Doubtless the full benefit of these facilities is not realised because of the ignorance of the masses and that in order that these various efforts to ameliorate their social and moral condition education must spread. But yet the ideas of hygiene, sanitation and health are sure to spread and the City will be all the better for them. Mysore can well be proud of this achievement and we hope that the enthusiasm generated under such hopeful auspices will be long maintained so that the City could have the full advantage of these institutions. We congratulate the organisers and the donors alike—the former on the success of the week and the latter on their munificent contributions.

ರಾಜಧಾನಿಯ ಮಕ್ಕಳು

ರಾಜಧಾನಿಯ ಚಿಕ್ಕಂಡಿ ಬಡ ಮಕ್ಕಳ ಪೋಷಣೆಗಾಗಿ ರಾಜಧಾನಿಯ ರೆಡ್ ಕ್ರಾಸ್ ಸಂಘದವರು ಇಲ್ಲಿಯ ದಾನಶೀಲರುಗಳ ಮತ್ತು ಮುನಿಸಿಪಲ್ ಕೌನ್ಸಿಲ್ ಅಧಿಯಾಗಿ ಕೆಲ ಸಂಸ್ಥೆಗಳ ಸಹಾಯದಿಂದ ಶಕ್ತ್ಯಾನುಸಾರ ಮಾಡುತ್ತಿರುವುದರಿಂದ ಅನ್ಯ ಕ್ಷೇತ್ರಗಳ ಮಕ್ಕಳುಗಳಿಗಿಂತಲೂ ಅದೃಷ್ಟಶಾಲಿಗಳಾಗಿರುತ್ತವೆ. ಸರ್ ಚಾರ್ಲ್ಸ್ ಟಾಡ್‌ಹಂಟರ್ ರವರು ರೆಡ್ ಕ್ರಾಸ್ ಸೊಸೈಟಿಯನ್ನು ಪುನರುಜ್ಜೀವನಗೊಳಿಸಿ ಅದರ ಪ್ರೋತ್ಸಾಹದಿಂದ ಶಿಶು ಪ್ರದರ್ಶನ ಸಪ್ತಾಹವನ್ನು ಕಳೆದ ಸೋಮವಾರ ಆರಂಭಿಸಿ ಇಂದು ಮುಕ್ತಾಯಗೊಳಿಸುವವರಾಗಿರುವುದಲ್ಲದೆ ಗರ್ಭಿಣೀ ಶಿಶು ಪೋಷಣಾಲಯಗಳನ್ನು ಸ್ಥಾಪಿಸಲುದ್ಯುಕ್ತರಾಗಿರುತ್ತಾರೆ. ಇದರ ಕಾರ್ಯಕ್ರಮದ ಪಟ್ಟಿಯು ವಿಶೇಷವಾಗಿಯೂ [illegible] ಯುವರಾಜರವರು [illegible] ಗರ್ಭಿಣೀ ಶಿಶು ಪೋಷಣಾಲಯದ [illegible] ಸ್ಥಾಪನೆಯನ್ನು [illegible] ಗರ್ಭಿಣೀ ಶಿಶು ಪೋಷಣಾ [illegible] ಸಂಜೆ [illegible] ಶಿಶು ಪ್ರದರ್ಶನವು [illegible] ಆರೋಗ್ಯ [illegible] ಪ್ರದರ್ಶನವೂ [illegible] ಶ್ರೀಮದ್ಯುವರಾಜರವರಿಂದಲೇ ಆರಂಭಿಸಲ್ಪಟ್ಟಿತು. ಆರೋಗ್ಯ ವಿಚಾರವಾಗಿ ಭಾಷಣಗಳೂ, ಚಲನಚಿತ್ರ ಪ್ರದರ್ಶನವೂ ನಡೆಸಲ್ಪಡುತ್ತಿವೆ. ಸುಬ್ರಹ್ಮಣ್ಯಂ ಗರ್ಭಿಣೀ ಶಿಶು ಪೋಷಣಾಲಯದ ಆರಂಭವೂ, ಅದರ ಕಟ್ಟಡದ ಶಂಕುಸ್ಥಾಪನೆಯೂ ಕಳೆದ ಶುಕ್ರವಾರ ಲಷ್ಕರ್ ಮೊಹಲ್ಲಾದಲ್ಲಿ ಸರ್ ಟಾಡ್‌ಹಂಟರ್ ರವರ ಪತ್ನಿಯವರಿಂದ ನಡೆಸಲ್ಪಟ್ಟವು. ನೆನ್ನೆಯ ದಿವಸ ಸಾಯಂಕಾಲ ದಿವಾನ್ ಸರ್ ಮಿರ್ಜಾ ರವರು ಕೃಷ್ಣಮೂರ್ತಿಪುರದಲ್ಲಿ ಶ್ರೀ ಮಲ್ಲಮ್ಮನವರ ಗರ್ಭಿಣೀ ಶಿಶು ಪೋಷಣಾಲಯವನ್ನು ಆರಂಭಿಸಿ ಅದರ ಕಟ್ಟಡಕ್ಕೆ ಶಂಕುಸ್ಥಾಪನೆಯನ್ನು ಮಾಡಿದರು. ಗರ್ಭಿಣೀ ಶಿಶು ಪೋಷಣಾಲಯ ಸ್ಥಾಪನೆಗಾಗಿ ಮ|| ವಿ. ಡಿ. ರಾಜಾರಾಂರವರು 10,000 ರೂಗಳನ್ನು ದಾನಮಾಡಿರುವರಲ್ಲದೆ, ರಾಜಧಾನಿಯಲ್ಲೂ ಇತರ ಕಡೆಗಳಲ್ಲೂ ಅನೇಕ ಧರ್ಮಕಾರ್ಯಗಳಿಗಾಗಿ ಲಕ್ಷಾಂತರ ರೂಗಳನ್ನು ದಾನಮಾಡಿ ಧರ್ಮಪ್ರಕಾಶ ಎಂಬ ಪ್ರಶಸ್ತಿಯನ್ನು ಪ್ರಭುವರ್ಯರಿಂದ ಪಡೆದು ಸುಪ್ರಖ್ಯಾತರಾಗಿರುವ ಮ|| ಡಿ. ಬನುಮಯ್ಯನವರು ತಮ್ಮ ಮಾತೃಶ್ರೀ ಮಲ್ಲಮ್ಮನವರ ಹೆಸರಿನಿಂದ ಗರ್ಭಿಣೀ ಶಿಶು ಪೋಷಣಾಲಯವನ್ನು ಸ್ಥಾಪಿಸಲು 10,000 ರೂ ಗಳನ್ನೂ, ಅದರ ಕಟ್ಟಡಕ್ಕಾಗಿ 5,000 ರೂ ಗಳನ್ನೂ, ಕುರ್ಚಿ ಮೇಜು ಮೊದಲಾದ ಪದಾರ್ಥಗಳಿಗಾಗಿ 500 ರೂ ಗಳನ್ನೂ ಬಹಳ ಉದಾರವಾಗಿ ಕೊಟ್ಟಿರುತ್ತಾರೆ. ಈ ಸಂಸ್ಥೆಗಳೆಲ್ಲ ಆಯಾ ಭಾಗಗಳಲ್ಲಿರುವ ಬಡವರಾದ ಗರ್ಭಿಣಿಯರ ಮತ್ತು ಶಿಶುಗಳ ಪೋಷಣೆಯ ಸೌಕರ್ಯಕ್ಕಾಗಿ ಏರ್ಪಟ್ಟಿರುತ್ತವೆ. ಶಿಶುಗಳು ಆರೋಗ್ಯ ವಾತಾವರಣದಲ್ಲಿರುವ ಪೋಷಣಾಲಯಗಳ ಆರೋಗ್ಯಕರವಾದ ಆಹಾರ ಮತ್ತು ಆರೈಕೆಗಳಿಂದ ಆರೋಗ ದೃಢಕಾಯರಾಗಿ ಬೆಳೆಯುವುವು. ಈ ಪೋಷಣಾಲಯಗಳಾದರೋ, ಸರ್ ಮಿರ್ಜಾರವರು ಅಪ್ಪಣೆಕೊಡಿಸಿರುವಂತೆ ಭಾವಿ ಪೌರಸ್ತ್ರೀಯರ ಪಾಲನ ಸ್ಥಾನಗಳಾಗಿವೆ. ಈ ಕಾರ್ಯನಿರ್ವಾಹದಲ್ಲಿ ವಿಶೇಷ ಶ್ರದ್ಧೆಯನ್ನೂ ಶ್ರಮವನ್ನೂ ವಹಿಸಿರುವುದಕ್ಕಾಗಿ ಸರ್ ಚಾರ್ಲ್ಸ್ ಟಾಡ್‌ಹಂಟರ್ ದಂಪತಿಗಳನ್ನು ಪೌರಸ್ತ್ರೀಯರ ಪರವಾಗಿ ನಾವು ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇವೆ. ಈ ಆಲಯಗಳಿಂದ ಗರ್ಭಿಣಿಯರಿಗೂ ಶಿಶುಗಳಿಗೂ ಪೋಷಣವಾಗುವುದಲ್ಲದೆ ಅವರುಗಳ ಆರೋಗ್ಯ ವಿಚಾರವಾಗಿ ಅನರ್ಘವಾದ ತಿಳುವಳಿಕೆಯೂ ಜನರಿಗೆ ಲಭ್ಯವಾಗುವುದು. ಅವುಗಳ ಪ್ರಯೋಜನವನ್ನು ಜನತೆಯು ತಿಳಿದುಕೊಳ್ಳಲಾರದಷ್ಟು ಅಜ್ಞತೆಯುಳ್ಳದ್ದಾಗಿರುವುದರಿಂದ ಜನರ ಸಾಮಾಜಿಕ ಮತ್ತು ನೈತಿಕಾಭಿವೃದ್ಧಿ ಪ್ರಯತ್ನವು ಸಫಲವಾಗಲು ವಿದ್ಯಾಭಿವೃದ್ಧಿಯು ಅತ್ಯಾವಶ್ಯಕವು. ಆದರೂ ಅವುಗಳಿಂದ ಆರೋಗ್ಯ ನೈರ್ಮಲ್ಯಗಳ ಜ್ಞಾನವು ಹರಡಿ ನಮ್ಮ ಈ ರಾಜಧಾನಿಯು ಅವರಿಗೆ ಉತ್ತಮಸ್ಥಾನವಾಗಿ ಪರಿಣಮಿಸುವುದಲ್ಲದೆ ಈ ಪ್ರಯತ್ನ ಸಾಫಲ್ಯದಿಂದ ನಮ್ಮ ನಾಡು [illegible] ವುದು. ಇಷ್ಟೊಂದು ಭರವಸೆಯಿಂದಲೂ ಉತ್ಸಾಹದಿಂದಲೂ ಆರಂಭವಾದ ಈ ಕಾರ್ಯವು ಶಾಶ್ವತವಾಗಿಯೂ ನಿರ್ವಿಘ್ನವಾಗಿಯೂ ನಡೆದು ಈ ಪೋಷಣಾಲಯಗಳ ಪ್ರಯೋಜನವನ್ನು ರಾಜಧಾನಿಯು ಸಂಪೂರ್ಣವಾಗಿ ಹೊಂದುವುದೆಂದು ಆಶಿಸುತ್ತೇವೆ. ಈ ಕಾರ್ಯಾರಂಭಮಾಡಿ ನಿರ್ವಿಘ್ನವಾಗಿ ನಡೆಸಿದವರನ್ನೂ ಇದಕ್ಕೆ ಉದಾರವಾಗಿ ದ್ರವ್ಯಸಹಾಯಮಾಡಿದ ಧರ್ಮಿಷ್ಟರುಗಳನ್ನೂ ನಾವು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ.

೨೦೦ ಕ್ರೈಸ್ತರು ಹಿಂದುಗಳಾದರು

ಅಹಮ್ಮದಾಬಾದಿನ ನೆರೆ ಗ್ರಾಮಗಳಲ್ಲಿ 200 ಕ್ರೈಸ್ತರನ್ನು ಹಿಂದು ಮಿಷನರಿಗಳು ಶುದ್ಧಿಮಾಡಿ ಹಿಂದು ಮತಕ್ಕೆ ಸೇರಿಸಿಕೊಂಡರು.

ಸ್ತ್ರೀ ಕಾನ್‌ಸ್ಟೆಬಲುಗಳು

ಇಬ್ಬರು ಕ್ರೈಸ್ತ ಸ್ತ್ರೀಯರು ಪೋಲೀಸು ಕಾನ್‌ಸ್ಟೆಬಲುಗಳಾಗಿ ನಿಯಮಿಸಲ್ಪಟ್ಟು ಬನಾರಸಿನಲ್ಲಿ ಕಾಂಗ್ರೆಸ್ ಸ್ತ್ರೀಯರನ್ನು ಸೆರೆ ಹಿಡಿಯಲು ನಿಯೋಜಿಸಲ್ಪಟ್ಟಿರುತ್ತಾರೆ.

ಸ್ತ್ರೀ ಮೆಜಿಸ್ಟ್ರೇಟರುಗಳು

ನಾಗಪುರದಲ್ಲಿ ಶ್ರೀಮತಿಯರುಗಳಾದ ಜೆ. ಎಫ್. ರೂಸ್ ಫಿರ್ಡ್, ಜೆ. ಕೆ. ಎಲ್. ಕಾಮತ್, ಸುಮತಿಬಾಯಿ ದೇಶಪಾಂಡೆ ಇವರುಗಳು ಎರಡನೇ ತರಗತಿಯ ಗೌರವ ಮೆಜಿಸ್ಟ್ರೇಟರುಗಳಾಗಿ ಗೌರ್ನರವರಿಂದ ನಿಯಮಿಸಲ್ಪಟ್ಟಿರುವರು.

ಏ. ತಿಯಾಬ್ಜಿಯವರ ಪಿಂಚನ್ನು ನಿಲ್ಲಿಸಲ್ಪಟ್ಟಿತು.

ಬರೋಡಾ ಪ್ರಭುತ್ವದವರು ತಮ್ಮ ಹೈಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದ ಅಬ್ಬಾಸ ತಿಯಾಬ್ಜಿಯವರು ಈಗ ಶಾಸನೋಲ್ಲಂಘನೋದ್ಯಮಗಳಲ್ಲಿ ಭಾಗಿಗಳಾಗಿರುವುದರ ಮೇಲೆ ಅವರಿಗೆ ಕೊಡುತ್ತಿದ್ದ ಪಿಂಚನ್ನನ್ನು ನಿಲ್ಲಿಸಿಬಿಟ್ಟರು.

ಕಾಶ್ಮೀರಿನ ಹೊಸ ದಿವಾನರು

ಕಾಶ್ಮೀರ ಸಂಸ್ಥಾನದ ದಿವಾನರಾಗಿದ್ದ ರಾಜಾ ಹರಿಕಿಷನ್ ಕೌಲರವರು ಉದ್ಯೋಗದಿಂದ ನಿವೃತ್ತರಾಗಲು ಅವರ ಬದಲು [illegible] ಕರ್ನಲ್ [illegible] ರನ್ನು ತಾ|| 23 ರಿಂದ ದಿವಾನರಾಗಿ ನಿಯಮಿಸಲ್ಪಟ್ಟಿದ್ದಾರೆ.

ಸಾಹಸಪ್ರದರ್ಶನಕ್ಕೆ ಸರ್ಕಾರದ ಬಹುಮಾನ.

[illegible] ತಾ|| 7 ರಲ್ಲಿ ಪೇಶಾವರ್ [illegible] ತರುಣನು [illegible] ಆಯುಧಧಾರಿಗಳಾದ ಕಳ್ಳರನ್ನು ಕಲಕತ್ತಾದ ಒಂದು ಸಂದಿಯಲ್ಲಿ ಪ್ರತಿಭಟಿಸಿ ಘೋರವಾಗಿ ಅವರಿಂದ ಕೊಲ್ಲಲ್ಪಟ್ಟನು. ಅವನ ಧೈರ್ಯಸಾಹಸಗಳಿಗೆ ಮೆಚ್ಚಿ ಪ್ರಭುತ್ವದವರು ಅವನ ತಾಯಿಗೆ 1600 ರೂಪಾಯಿಗಳನ್ನು ಬಹುಮಾನಿಸಲು ನಿಶ್ಚಯಿಸಿರುವರು.

ವಿ. ಜೆ. ಪಟೇಲರು ವಿಯನ್ನಾಕ್ಕೆ ಹೊರಟರು.

ದೇಹಸ್ಥಿತಿಯು ಬಹಳವಾಗಿ ಕೆಟ್ಟಿದ್ದುದರಿಂದ ವಿ. ಜೆ. ಪಟೇಲರು ಕಾರಾಗೃಹವಾಸ ವಿಮುಕ್ತರಾಗಿ ಕಳೆದ ತಾ|| 8 ನೆಯ ಶನಿವಾರ ಬೊಂಬಾಯಿನಲ್ಲಿ ಒಬ್ಬರೇ ರಾಂಚೀ ಎಂಬ ಹಡಗನ್ನು ಹತ್ತಿ ವಿಯನ್ನಾಕ್ಕೆ ಪ್ರಯಾಣ ಮಾಡಿದರು. ದೇಹವು ಬಹಳ ಗಣನೀಯವಾಗಿ ಕ್ಷೀಣವಾಗಿರುವುದಾದರೂ ಅಪಾಯಸ್ಥಿತಿಯಲ್ಲಿಲ್ಲದುದರಿಂದ ಡಾಕ್ಟರಾರೂ ಕೂಡ ಪ್ರಯಾಣ ಮಾಡಲಿಲ್ಲ. ವಿಯನ್ನಾದಲ್ಲಿ ಹಿಂದೆ ಶಸ್ತ್ರಚಿಕಿತ್ಸೆಯನ್ನು ಮಾಡಿದ ಪ್ರಖ್ಯಾತ ಡಾಕ್ಟರುಗಳು ಪುನಃ ಚಿಕಿತ್ಸೆಗಾಗಿ ಬರಬೇಕೆಂದು ಅಪೇಕ್ಷಿಸಿದುದರಮೇಲೆ ಪಟೇಲರು ಪ್ರಯಾಣಮಾಡಿರುತ್ತಾರೆ.

ಚೀನಾ ಜಪಾನ್ ಯುದ್ಧ.

ಚೀನಾ ಜಪಾನ್ ಯುದ್ಧವು ಸದ್ಯದಲ್ಲಿ ನಡೆಯುತ್ತಿಲ್ಲವಾದರೂ ಉಭಯ ರಾಜ್ಯದವರು ಶಾಂಘೈಯಲ್ಲಿ ತಂತಮ್ಮ ಸೈನ್ಯಗಳನ್ನು ತಂದು ತುಂಬುತ್ತಿರುವರು. ಆಯುಧ ವಿಸರ್ಜನ ಸಭೆಯವರು ಚೀನಾ ಜಪಾನರ ಯುದ್ಧ ವಿರಾಮಕ್ಕಾಗಿ ಪ್ರಯತ್ನಿಸುತ್ತಿದ್ದಾರೆ, ಆದರೆ ಕಾರ್ಯಸಾಫಲ್ಯ ಮಾತ್ರ ಅನುಮಾನಾಸ್ಪದವಾಗಿದೆ. ಚೈನಾ ಪ್ರಜಾಪ್ರಭುತ್ವಕ್ಕೊಳಪಟ್ಟಿದ್ದ ಮಾಂಚೂರಿಯಾ ದೇಶವು ಜಪಾನರ ಪ್ರಯತ್ನವಿಶೇಷದಿಂದ ಸ್ವತಂತ್ರ ದೇಶವಾಗೇರ್ಪಟ್ಟಿದೆ. ಹಿಂದೆ ಚೀನಾ ಚಕ್ರವರ್ತಿಯಾಗಿದ್ದು ಪದಭ್ರಷ್ಟನಾಗಿದ್ದ ದೊರೆಯು ಅದರ ಮುಖ್ಯಾಧಿಕಾರಿಯಾಗಿ ನಿಯಮಿಸಲ್ಪಟ್ಟಿರುತ್ತಾನೆ.

ಕಾಶ್ಮೀರದಲ್ಲಿ ರಾಜ್ಯಾಂಗ ಸಂಸ್ಕರಣ.

ಕಳೆದ ನವಂಬರ್ ತಾ|| 12 ರಲ್ಲಿ ಪ್ರಕಟಿತವಾದ ಕಾಶ್ಮೀರ ಮಹಾರಾಜರ ಆಜ್ಞಾಪತ್ರಿಕೆಯಲ್ಲಿ ಹೇಳಲ್ಪಟ್ಟಿರುವ ಮೇರೆಗೆ ಸಂಸ್ಥಾನದ ರಾಜ್ಯಾಂಗಸಂಸ್ಕರಣಗಳನ್ನು ಕುರಿತು ಪರ್ಯಾಲೋಚಿಸಲು ಗ್ಲಾನ್ಸಿಯವರ ಅಧ್ಯಕ್ಷತೆಯಲ್ಲೇರ್ಪಟ್ಟಿರುವ ಸಂಘದವರು ಈ ತಾ|| 11 ರಿಂದ ವಿಚಾರಣೆಗಾರಂಭಿಸುವರು. ಈ ವಿಚಾರಣಾ ಸಂಘದಲ್ಲಿ ಒಬ್ಬ ಮಹಮ್ಮದೀಯ ಅಧಿಕಾರಿಯೂ, 3 ಮಂದಿ ಅನಧಿಕಾರಿ ಮಹಮ್ಮದೀಯ ಪ್ರತಿನಿಧಿಗಳೂ, ಒಬ್ಬ ಅನಧಿಕಾರಿ ಹಿಂದುವೂ, 6 ಮಂದಿ ಗುರುಜನರೂ, ಕಾಶ್ಮೀರ ಬೌದ್ಧ, ಕ್ಷತ್ರಿ ಹಿಂದು ಪ್ರತಿನಿಧಿಗಳೂ ಸೇರಿ ಒಟ್ಟು 11 ಮಂದಿ ಸಭ್ಯರುಗಳಿರುತ್ತಾರೆ.

ಸುನೀತಿ ತಂದೆಯ ಪಿಂಚನ್ನು ನಿಲ್ಲಿಸಲ್ಪಟ್ಟಿತು.

ಕೋಮಿಲ್ಲ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಸ್ಟೀವೆನ್ಸ್‌ರವರನ್ನು ಕೊಂದ ಅಪರಾಧಕ್ಕಾಗಿ ಮರಣಾವಧಿ ದ್ವೀಪಾಂತರವಾಸ ಶಿಕ್ಷೆ ವಿಧಿಸಲ್ಪಟ್ಟ ಸುನೀತಿ ಕನ್ಯೆಯ ತಂದೆಯಾದ ಉಮಾಚರಣ ಚೌಧರಿಯು ತ್ರಿಪುರದ ಕಲೆಕ್ಟರ ಆಫೀಸಿನಲ್ಲಿ ಉದ್ಯೋಗ ಮಾಡಿ 40 ರೂಪಾಯಿ ಪಿಂಚನ್ ಪಡೆಯುತ್ತಿದ್ದನು. ಸುನೀತಿಯು ಬಾಲ್ಯ ಕಾಲದ ಮೇಲೆ ಶಾಸನೋಲ್ಲಂಘನ ಮೊದಲಾದ ಕಾರ್ಯಗಳಲ್ಲುದ್ಯುಕ್ತಳಾಗಿದ್ದುದನ್ನೂ, ಆಕೆಯ ಮನೋವರ್ತನೆಯನ್ನೂ ತಂದೆಯಾದವನು ತಿಳಿದು ಸುಮ್ಮನೆ ಇದ್ದುದಕ್ಕಾಗಿಯೂ, ಹತ್ಯೆಯು ನಡೆದ ಮೇಲಾದರೂ ಆತನು ಪೋಲೀಸಿನವರಿಗೆ ಸಹಾಯ ಮಾಡಲಿಲ್ಲವಾಗಿಯೂ ಅವನ 40 ರೂ ಪಿಂಚನ್ನನ್ನು ಪ್ರಭುತ್ವದವರು ನಿಲ್ಲಿಸಿಬಿಟ್ಟರು.

ವಿಲಿಯರ್ಸ್‌ರವರ ಸ್ವದೇಶಗಮನ.

ಭಾರತದೇಶದ ಅಶಾಂತಿಯನ್ನು ಹೋಗಲಾಡಿಸಲು ನಿರ್ಬಂಧ ನೀತಿಯೊಂದೇ ಸಾಧನವೆಂದು ವಾದಿಸುತ್ತ ಅದಕ್ಕಾಗಿ ಪ್ರಭುತ್ವ ಪಕ್ಷವನ್ನು ವಹಿಸಿ ಕೃಷಿ ಮಾಡುತ್ತಿರುವ ಕಲಕತ್ತಾ ಯೂರೋಪಿಯನ್ನರ ಸಂಘಾಧ್ಯಕ್ಷರಾದ ವಿಲಿಯರ್ಸ್‌ರವರು ಇಂಡಿಯಾ ದೇಶವನ್ನು ಬಿಟ್ಟು ಸೀಮೆಗೆ ಹೋಗಿ ಅಲ್ಲಿ ರಾಜಕೀಯ ಕಾರ್ಯದಲ್ಲುದ್ಯುಕ್ತರಾಗಲು ಸಂಕಲ್ಪಿಸಿರುವರು. "ಇಂಡಿಯಾದಲ್ಲಿ ದೌರ್ಜನ್ಯ ಪಕ್ಷದವರು ವಿಲಿಯರ್ಸ್‌ರವರನ್ನು ಕೊಲ್ಲುವರೆಂಬ ಮಾತು ಹಿಂದೆ ಬಂದಿದೆ. ಆದರೂ ಅವರು ಅದಕ್ಕಾಗಿ ಇಂಡಿಯಾ ಬಿಟ್ಟುಹೋಗತಕ್ಕವರಲ್ಲ. ವಿಲಿಯರ್ಸ್ ರವರು ಬ್ರಿಟಿಷರ ಪಕ್ಷವಾಗಿ ಕೆಲಸಮಾಡುತ್ತಿರುವುದಕ್ಕಾಗಿ ದೇಶೀಯರು ಅವರ ವ್ಯಾಪಾರವನ್ನು ಬಹಿಷ್ಕರಿಸುವುದರಿಂದ ಅವರಿಗೆ ಬಹಳ ನಷ್ಟವಾಗಿರುತ್ತದೆಂಬುದು ನಿಜ. ಈ ಕಾರಣದಿಂದಲೇ ಅವರು ಇಂಡಿಯಾ ಬಿಟ್ಟುಹೋಗುವರು" ಎಂದು ಡೇಲಿ ಎಕ್ಸ್‌ಪ್ರೆಸ್ ಪತ್ರಿಕೆಯು ಪ್ರಕಟಿಸಿರುತ್ತದೆ.

ಕಾಶಿಯಲ್ಲಿ ಶಿವರಾತ್ರಿ ಸಪ್ತಾಹ.

ಕಾಶೀ ಮಹಾಕ್ಷೇತ್ರದೊಳಗೆ ಗಂಗಾ ನದಿಯ ತೀರದಲ್ಲಿರುವ ದಶಾಶ್ವಮೇಧಘಟ್ಟದ ಬಳಿ ಶ್ರೀಯುತ ಪಂಡಿತ ಮದನ ಮೋಹನ ಮಾಳವೀಯರವರು ಮಹಾಶಿವರಾತ್ರಿ ಸಪ್ತಾಹವನ್ನೂ ಮಂತ್ರೋಪದೇಶವನ್ನೂ ನಡೆಯಿಸಿದರು. ಈ ಉತ್ಸವಕ್ಕೆ ನಿಮ್ನ

ಜಾತಿಯವರು [illegible] ಎಂದು [illegible] ನಿಶ್ಚಯಿಸಲ್ಪಟ್ಟಿತು. [illegible] ಈ ಸಮಾಜವು [illegible] ಆರ್ಯಸಮಾಜದವರ [illegible] ಅಂತ್ಯಜರಿಗೆ ಮತ್ತು ಸನಾತನಿಗಳು ಭಗವತ್ಸ್ವರೂಪರೆಂದು ಕರೆಯುತ್ತಿದ್ದವರಿಗೆ ತಾ|| 4 ನೆಯ ಶುಕ್ರವಾರ ಸಾಯಂಕಾಲ ದೊಡ್ಡವರೇ ಗಂಗಾತೀರದಲ್ಲಿ ಭಗವತ್ಪಾದರ ಕಾಲ ಕ್ಷೇಪವನ್ನು ನಡಸಿದರು ಮತ್ತು ಅಷ್ಟು ಜನ ಮಂದಿ ಸ್ತ್ರೀ ಪುರುಷರುಗಳಿಗೂ ಮಕ್ಕಳಿಗೂ ಮಂತ್ರೋಪದೇಶವನ್ನು ಮಾಡಿದರು. ಇವರುಗಳಲ್ಲಿ 160 ರ ವರೆಗೆ ನಿಮ್ನ ಜನರೂ ಇದ್ದರು.

ಮೆಜಿಸ್ಟ್ರೇಟರಿಗೆ ವೃದ್ಧ ತಂದೆಯ ಪ್ರಾರ್ಥನೆ.

ಅಲಹಾಬಾದು ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬನಿಂದ ಬರಬೇಕಾಗಿದ್ದ ಚಿಕ್ಕ ಹಣಕ್ಕಾಗಿ ಅವನ ಆಸ್ತಿಯನ್ನು ಜಪ್ತಿ ಮಾಡಲು ಹೋಗಿದ್ದ ಕೋರ್ಟು ಅಮೀನನನ್ನು ಅಡ್ಡಿಪಡಿಸಿದರೆಂದು ಸಾಲಗಾರನ ಇಬ್ಬರು ಮಕ್ಕಳುಗಳ ಮೇಲೆ ಕ್ರಿಮಿನಲ್ ಕೇಸು ನಡೆದು ಇಬ್ಬರಿಗೂ ಕಠಿಣ ಕಾರಾಗೃಹವಾಸಶಿಕ್ಷೆಯೂ ಅರ್ಥದಂಡವೂ ವಿಧಿಸಲ್ಪಟ್ಟವು. ವಿವಾದವು ನಡೆಯುತ್ತಿರುವಾಗ್ಗೆ ತಂದೆಯು ಕೋರ್ಟಿಗೆ ಬಂದು, 'ಮಕ್ಕಳು ಅರಿಯದೆ ಮಾಡಿದ ಅಪರಾಧವನ್ನು ಕ್ಷಮಿಸಬೇಕು. ಅವರು ಯಾವ ಮಕ್ಕಳ ವ್ಯಸನದಲ್ಲಿ [illegible] ಅವರಿಗೆ ಬದಲು ನನಗೆ ಶಿಕ್ಷೆಯನ್ನು ವಿಧಿಸಿ ಅವರುಗಳನ್ನು ಬಿಟ್ಟುಬಿಡಬೇಕು' ಎಂದು ಬಹಳವಾಗಿ ರೋದಿಸಿ ಹೇಳಿಕೊಂಡನು. ದನ ಮೇಲೆ ಸಬ್ ಮೆಜಿಸ್ಟ್ರೇಟರು ಕನಿಕರಗೊಂಡು [illegible] ಮೆಜಿಸ್ಟ್ರೇಟರಿಗೆ ತಿಳಿಸಿ ಅವರಪ್ಪಣೆಯಾದಲ್ಲ ಬಿಟ್ಟುಕೊಡುತ್ತೇನೆಂದು ಹೇಳಿದರು.

ಗೋವನ್ನು ಪವಿತ್ರವನ್ನಾಗಿ ಭಾವಿಸಬಾರದ

ಹಿಂದುಗಳು ಗೋವನ್ನು ಪವಿತ್ರವನ್ನಾಗಿ ಭಾವಿಸಬಾರದ ಕಾಲ ಬಂದಿದೆ. ಕುರಿ ಕೋಳಿ ಮೊದಲಾದ ಪ್ರಾಣಿಗಳ ಸಮಾನವಾಗಿ ಅದನ್ನು ಭಾವಿಸಬೇಕಾಗಿದೆ. ದೇವರಿಗೆ ಮನುಷ್ಯನೂ ಪಶುಪಕ್ಷಿ ಮೊದಲಾದವುಗಳೂ ಒಂದೇ ಆಗಿರುವುದರಿಂದ ತಾರತಮ್ಯ [illegible] ಇಲ್ಲ, ಆದುದರಿಂದ ಅವುಗಳಲ್ಲಿ ಒಂದನ್ನು ಪವಿತ್ರವನ್ನಾಗಿಯೂ ಮತ್ತೊಂದನ್ನು ಅಪವಿತ್ರವನ್ನಾಗಿಯೂ ಭಾವಿಸುವುದು ಸರಿಯಲ್ಲವು, ಅಂದರೆ ಮಾಂಸಹಾರಿಗಳಾದ ಮಹಮ್ಮದೀಯರನ್ನು ಅಸ್ಪೃಶ್ಯರನ್ನಾಗಿ ತಿಳಿಯಕೂಡದು. ಹಿಂದುಗಳೆಲ್ಲರೂ ಮೊದಲಿನ ಅಭಿಪ್ರಾಯವನ್ನು ತ್ಯಜಿಸಿ ಇತರ ದೇಶಗಳಲ್ಲಿರುವ ಸಾಂಘಿಕ ಆಚಾರಗಳನ್ನು ಅನುಸರಿಸಬೇಕು. ಊಟಸಂಬಂಧವಾದ ಆಚಾರವನ್ನು ಮೇಲಿನ ಒಂದು ಭಾಗವನ್ನಾಗಿ ಆರ್ಯಸಮಾಜಸ್ಥಾಪಕರಾದ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರು ಯಾವಾಗಲೂ ಅಂಗೀಕರಿಸಿರಲಿಲ್ಲ. ದೇಶಕಾಲಾನುಗುಣವಾಗಿ ಇವು ಬದಲಾಯಿಸುತ್ತಿರಬೇಕು ಎಂದು ತರ್ಕಸಾಮಾಜಿಕರೊಬ್ಬರು ಉಪನ್ಯಾಸಮಾಡಿರುತ್ತಾರೆ.

ಬೇರಾರು ನೈಜಾಮರಿಗೆ ಕೊಡಲ್ಪಡುವುದಂತೆ.

ಬ್ರಿಟಿಷರಿಂದ ಭಾರತ ಪ್ರಭುತ್ವಕ್ಕೊಳಪಟ್ಟಿರುವ ಬೇರಾರು ಪ್ರಾಂತವನ್ನು ಪುನಃ ಸಂಪಾದಿಸಲು ನೈಜಾಂರವರು ಎಷ್ಟು ಪ್ರಯತ್ನ ಮಾಡುತ್ತಿರುವರೆಂಬುದು [illegible] ರೌಂಡುಟೇಬಲ್ ಸಭೆಯ ಪ್ರತಿನಿಧಿಯಾಗಿ ಹೋಗಿದ್ದ ಸರ್ ಹೈದರಿಯವರು ಸೀಮೆಯಲ್ಲಿ ಮಂತ್ರಿಮಂಡಲದವರೊಡನೆಯೂ ಪಾರ್ಲಿಮೆಂಟ್ ಮುಖ್ಯ ಮೆಂಬರುಗಳೊಡನೆಯೂ ಬಹಳ [illegible] ನಡಸಿ ಈಗ ದಿಲ್ಲಿಯಲ್ಲಿ ವೈಸ್ರಾಯರ ಕೂಡ ನಡಸುತ್ತಿದ್ದರು. ಇದಕ್ಕಾಗಿ ನೈಜಾಂರವರ್ ದಿಲ್ಲಿಗೆ ಹೋಗಿ ವೈಸ್ರಾಯರ ಸಮಕ್ಷದಲ್ಲಿ ಪ್ರಯತ್ನಿಸುವುದಾಗಿಯೂ ಇದರ ವೇಲೆ ಬೇರಾರು ನೈಜಾಮರಿಗೆ ಹಿಂದಕ್ಕೆ ಕೊಡಲ್ಪಡಲು ವೈಸ್ರಾಯರೊಪ್ಪಿರುವುದಾಗಿಯೂ ಇದರ ಪ್ರತಿಫಲವಾಗಿ ನೈಜಾಂರವರು ಬ್ರಿಟಿಷ್ ದೊರೆತನದವರಿಗೆ [illegible] ಕೋಟಿ [illegible] ಗಳನ್ನು ಕೊಡಲು ಸಮ್ಮತಿಸಿರುವುದಾಗಿಯೂ ಪ್ರಬಲವಾದ ವದಂತಿಯಿದೆ. ಲೋಕದಲ್ಲಿ ದುಡ್ಡಿಗೆ ಸಾಧ್ಯವಾಗದಿರುವ ವಸ್ತುವುಂಟೆ!

ಮಗುವಿನ ಅಪಹರಣ

ಪ್ರಸಿದ್ಧ ಆಕಾಶ ನಾವಿಕನಾದ ಕರ್ನಲ್ ಲಿಂಡ್‌ಬರ್ಗ್‌ರವರ 1½ ತಿಂಗಳ ಗಂಡುಮಗು ಮುಸಕದ ಮೇಲೆ ಮಲಗಿಸುತ್ತಿರುವಾಗ್ಗೆ ಕೆಲ ಕಳ್ಳರು ಮೋಟಾರು ಬಂಡಿಯಲ್ಲಿ ಬಂದು ತಮ್ಮ ಪಾದರಕ್ಷೆಗಳನ್ನು ತೆಗೆದುಬಿಟ್ಟು ಸಂಗಡ ತಂದಿದ್ದ ನಿಚ್ಚಣಿಗೆಯ ಸಹಾಯದಿಂದ ಮೇಲಕ್ಕೆ ಹತ್ತಿ ಮಗುವನ್ನು ಅಪಹರಿಸಿಕೊಂಡು ಹೋದರು. ಮಗು ಅಪಹೃತವಾಗಿರುವುದನ್ನು ತಂದೆಯು ತಿಳಿದು ಕೂಡಲೆ ಎಲ್ಲಾ ಪೋಲೀಸು ಠಾಣೆಗೆ ಅದರ ಗುರ್ತು ಸಮೇತ ಸಮಾಚಾರವನ್ನು ತಿಳಿಸಿದುದರಿಂದ ಅದನ್ನು ಕಂಡುಹಿಡಿಯಲು 100 ಪೋಲೀಸಿನವರು ನಾನಾ ಕಡೆಗೆ ಹೋಗಿ ಬಹಳ ಶೋಧನೆ ಮಾಡುತ್ತಿರುವರು. ಕಳ್ಳರು ಕೆನಡಾಕ್ಕೆ ಹೋಗಬಹುದೆಂಬ ಊಹೆಯಿಂದ ಸುದ್ದಿ ಮುಟ್ಟಿದ ಹಿಂಚೆ ಕಾಲದಲ್ಲಿ 800 ಮೋಟಾರುಬಂಡಿಗಳು ಪ್ರಯಾಣ ಮಾಡುವಾಗ್ಗೆ ಶೋಧಿಸಲ್ಪಟ್ಟವು. 1½ ಲಕ್ಷ ರೂಪಾಯಿಗಳನ್ನು ಕೊಟ್ಟಲ್ಲಿ ಮಗುವನ್ನು ತಂದುಕೊಡುತ್ತೇವೆಂದು ತಂದೆಯನ್ನು ಕೇಳಿರುವುದಾಗಿ ವರ್ತಮಾನವಿದೆ.

೧೧೩ ವರ್ಷದ ವೃದ್ಧ.

[illegible] ಅಂಬಾಲದಲ್ಲಿ 113 ವರ್ಷ ವಯಸ್ಸಿನ ಒಬ್ಬ ವೃದ್ಧನಿರುವನು. ಈತನಿಗೆ ಹಲ್ಲುಗಳು ಹುಟ್ಟಿಯೂ ಇವೆ, ಕಣ್ಣು ದೃಷ್ಟಿಯು ಈಗ ಚೆನ್ನಾಗಿದೆ. [illegible] ಕನ್ನಡಕ [illegible] ಉಪಯೋಗಿಸುವುದಿಲ್ಲ. ದಿನಕ್ಕೆ 1 ಸೇರು ಹಾಲು, [illegible] ಮೊಸರು, ಹಿಟ್ಟು [illegible] ತಿನ್ನುವನು. ರಾತ್ರಿ [illegible] ಕೇಳುವನು. ಈತನು ಯಾವಾಗಲೂ ಹೊಲದ ಕೆಲಸ [illegible] ವ್ಯಾಪಾರ [illegible] ಮಾಡುತ್ತಾ ಸಂಚರಿಸಿಕೊಂಡು ಇರುವನು. ಹಿಂದೆ ಬಟ್ಟೆ ವ್ಯಾಪಾರವನ್ನು ಮಾಡಿ ಸಂಪತ್ತನ್ನು ಸಂಪಾದಿಸಿ ಈಗ ಆರೋಗ್ಯದೃಢಕಾಯನಾಗಿರುವನು. ಈತನಿಗೆ 70 ವರ್ಷದ ಮಗನೂ, 40 ವರ್ಷದ ಮೊಮ್ಮಗನೂ ಅವನ ಮಕ್ಕಳೂ ಇರುವರು. ಈತನ [illegible] ತಿಳಿದು ಈತನನ್ನು ನೋಡಲಿಕ್ಕಾಗಿ ಮನೆಗೆ ಹೋಗಿದ್ದಾಗ್ಗೆ ಆತ ಮಹಡಿಯ ಮೇಲಿದ್ದವನು ಪಾದರಕ್ಷೆಗಳನ್ನು ಮೆಟ್ಟಿಕೊಂಡು ಯೌವನಸ್ಥನಂತೆ ಸರಾಗವಾಗಿ ಮೆಟ್ಟಿಲುಗಳನ್ನಿಳಿದು [illegible] ಒಂದು ಬಟ್ಟೆ ಯಾತ್ರಿಕನು ಮದ್ರಾಸು ಪತ್ರಿಕೆಗೆ ಬರೆದಿರುತ್ತಾನೆ.

ಸ್ವದೇಶ ಪದಾರ್ಥಗಳನ್ನು ಕೊಂಡುಕೊಳ್ಳಿ.

'ಸರ್ ಸಿ. ಪಿ. ರಾಮಸ್ವಾಮಯ್ಯರವರು ಭಾರತ ಪದಾರ್ಥಗಳನ್ನು ಕೊಳ್ಳಬೇಕೆಂದು ಹೊರಗಿನ ಸಂಘಕ್ಕೆ [illegible] ಎಂದು ಹಿಂದೂಸ್ಥಾನ್ ಟೈಂಸ್ ಪತ್ರಿಕೆಯಲ್ಲಿ ಬರೆದಿತ್ತು. ಇದರ ಮೇಲೆ ಸರ್ ಸಿ. ಪಿ. ರಾಮಸ್ವಾಮಯ್ಯರವರು "ನಾನು ಯಾವ ಬಹಿಷ್ಕಾರವನ್ನೂ ಪ್ರೋತ್ಸಾಹಿಸತಕ್ಕವನಲ್ಲ. ಏಕೆಂದರೆ ಇಂಗ್ಲೆಂಡಿನಲ್ಲಿರುವ ಒಂದು ದೊಡ್ಡ ವ್ಯಾಪಾರ ಸಂಘದಲ್ಲಿ ಸೇರಲು ನನ್ನ ಮಗನು ಕೂಡಲೆ ಪ್ರಯಾಣ ಮಾಡುವುದಕ್ಕೆ ಸಿದ್ಧನಾಗಿರುತ್ತಾನೆ. ಭಾರತ ದೇಶವು ತನಗೆ ಬೇಕಾದ ವಸ್ತುಗಳನ್ನು ತಾನೇ ಉತ್ಪನ್ನ ಮಾಡಿಕೊಳ್ಳಬೇಕೆಂಬ ನೀತಿಯಲ್ಲಿ ನನಗೆ ಪೂರ್ಣ ವಿಶ್ವಾಸವುಂಟು. ಮತ್ತು ಬ್ರಿಟಿಷ ವಸ್ತುಗಳನ್ನು ಕೊಳ್ಳಬೇಕೆಂದು ಬೋಧಿಸುವಂತೆ ಭಾರತ ಪದಾರ್ಥವನ್ನು ಕೊಳ್ಳಬೇಕೆಂದು ಬೋಧಿಸುವುದು ನಿರಾಕ್ಷೇಪಕರವಾಗಿರುವುದರಿಂದ ಆ ತತ್ವವನ್ನು ಮನಃಪೂರ್ವಕವಾಗಿ ಪ್ರಚುರಪಡಿಸುತ್ತೇನೆ" ಎಂದು ಪತ್ರಿಕೆಗಳಲ್ಲಿ ಬರೆದಿರುತ್ತಾರೆ. ಬ್ರಿಟಿಷ ಪದಾರ್ಥಗಳನ್ನು ಕೊಳ್ಳಬೇಕೆಂದು ಆಂಗ್ಲೇಯ ಪತ್ರಿಕೆಯವರು ಹೇಳಿರುವರಾದುದರಿಂದ ಭಾರತ ಪದಾರ್ಥಗಳನ್ನು ಕೊಳ್ಳಬೇಕೆಂದು ಭಾರತೀಯರು ಹೇಳುವುದು ತಪ್ಪೆಂದು ಅಭಿಪ್ರಾಯಪಡುವುದು ಶುದ್ಧ ಅವಿವೇಕವು.

ಸತ್ತವರು ಮೆಜಿಸ್ಟ್ರೇಟರಾಗಿರುವರು.

ಮೈಸೂರು ಬೆಂಚುಕೋರ್ಟಿಗೆ ಮ|| ಗಳಾದ (1) ಎಂ. ಎಸ್. ಆದಿರಂಗಯ್ಯನವರು ತಾ|| [illegible]-6-1932 ರಿಂದ, (2) ಎಂ. ಎಸ್. ಎಂ. ಕದಿರೇಶಂಚೆಟ್ಟಿಯಾರ್‌ರವರು ತಾ|| 17-6-1932 ರಿಂದ (3) [illegible] ನಾರಾಯಣಸ್ವಾಮಿಯವರು ತಾ|| [illegible]-8-1932 ರಿಂದ (4) [illegible] ಶ್ರೀಕಂಠಾಚಾರ್ಯರವರು ತಾ|| [illegible] 1932 ರಿಂದ 2 ವರ್ಷಗಳ ಕಾಲದವರೆಗೆ ಸ್ಪೆಷಲ್ ಮೆಜಿಸ್ಟ್ರೇಟರುಗಳಾಗಿ ನಿಯಮಿಸಲ್ಪಟ್ಟಿರುತ್ತಾರೆಂದು 1932 ನೆಯ ಮಾರ್ಚಿ ತಾ|| [illegible] ರ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಗಿದೆ. [illegible] ನಾಲ್ವರು ದೊಡ್ಡಮನುಷ್ಯರುಗಳಲ್ಲಿ ನಾಟಕೋಟೆ ಚೆಟ್ಟಿರಾದ ಎಂ. ಎಸ್. ಎಂ. ಕದಿರೇಶಂಚೆಟ್ಟಿಯಾರ್‌ರವರು [illegible] ತಿಂಗಳ ಹಿಂದೆ ಬೆಂಗಳೂರಿನಲ್ಲಿ ಪರಲೋಕಯಾತ್ರೆಯನ್ನು ಮಾಡಿದರು. ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರವರಲ್ಲಿ ಪ್ರಮುಖರಾಗಿದ್ದ ಶ್ರೀಕಂಠಾಚಾರ್ಯರವರು ಕೆಲ ಕಾಲ ಕೃಷ್ಣರಾಜೇಂದ್ರ ಆಸ್ಪತ್ರೆಯ ಚಿಕಿತ್ಸೆಯಲ್ಲಿದ್ದು [illegible] ತಿಂಗಳ ಹಿಂದೆ ಸ್ವರ್ಗಸ್ಥರಾದರು. [illegible] ಪ್ರಮುಖರಾದ ದೊಡ್ಡ ಮನುಷ್ಯರನ್ನು ನಮ್ಮ ಪ್ರಭುತ್ವದವರು ರಾಜಧಾನಿಯ ಸ್ಪೆಷಲ್ ಮೆಜಿಸ್ಟ್ರೇಟರುಗಳನ್ನಾಗಿ ನಿಯಮಿಸಿರುವುದನ್ನು ನೋಡಿದರೆ ಸತ್ತವರನ್ನು ಎಬ್ಬಿಸುವ ಅದ್ಭುತ ಶಕ್ತಿಯು ಪ್ರಭುತ್ವದವರಲ್ಲಿ ಇರಬೇಕೆಂದು ತೋರುತ್ತದೆ.

ಒಳದೇಶದ ವೃತ್ತಾಂತಗಳು

ರಾಜಧಾನಿಯಲ್ಲಿ [illegible] ಮಹಮ್ಮದೀಯ ಅನಾಥಾಲಯಕ್ಕೆ ಶ್ರೀಮನ್ಮಹಾರಾಜರವರು 1000 ರೂ ಗಳನ್ನು ಅನುಗ್ರಹಿಸಿರುತ್ತಾರೆ.

ಕಳೆದ ತಾ|| [illegible] ನೆಯ [illegible] ಬೆಂಗಳೂರು ಸಿಟಿ [illegible] ಹಟ್ಟಿಯಲ್ಲಿ [illegible] ವೆಂಕಟರಾಮಯ್ಯನೆಂಬಾತನ ಮನೆಗೆ [illegible] ಎಂಬ ಹುಡುಗನು ನಾಗ 2 ವರ್ಷದ ತ [illegible] ನಿವಾಸದಲ್ಲಿದ್ದ ಬಾವಿಯೊಳಕ್ಕೆ ಹಾಕಿಬಿಟ್ಟನು. [illegible] ಸೇರಿದ ಜನರು [illegible] ಮಗುವನ್ನು ಮೇಲಕ್ಕೆ ತೆಗೆಯುವಷ್ಟರೊಳಗಾಗಿ ಅದು ಸತ್ತು ಹೋಗಿತ್ತು.

ಈ ದಿವಸ ಸಾಯಂಕಾಲ ಶಿವ ಪ್ರದರ್ಶನದಲ್ಲಿ ಉತ್ತಮ [illegible] ಬರುವವರಿಗೆ ಶ್ರೀಮನ್ಮಹಾರಾಜರವರಿಂದ ದಯಪಾಲಿಸಲ್ಪಡುವ [illegible] ಶ್ರೀ ಕೃಷ್ಣರಾಜೇಂದ್ರ [illegible] ಸಮ್ಮುಖದಲ್ಲಿಗೆ ಆಹಾರವನ್ನು ಕೊಟ್ಟು ಅವರ ಆರೋಗ್ಯವನ್ನು ನೋಡಿಕೊಳ್ಳುವ [illegible] ಕಟ್ಟಡದಲ್ಲಿ [illegible] ಮಹಮ್ಮದ್ ಇಸ್ಮೇಲ್‌ರವರಿಂದ ನಡೆಸಲ್ಪಟ್ಟಿತು.

ನಂಜನಗೂಡಿನಲ್ಲಿ ದೊಡ್ಡ ಪರ್ವಕಾಲವಾಗಿಯೂ [illegible] ಕಟ್ಟಿಸಿ ಪ್ರಖ್ಯಾತರಾಗಿಯೂ ಇದ್ದು ಗತಿಸಿದ ಅರಸಲು [illegible] ಬಾವಿಚಿತ್ರದ ಅನಾವರಣ ಮಹೋತ್ಸವವು ಅವರ ಸತ್ರದಲ್ಲಿ [illegible] ಮಂಗಳವಾರ ಮೈಸೂರು [illegible] ಕಮೀಷನರ್ ಮ. ಎ. [illegible] ಸಾಹೇಬ್ ರಾವ್ ಬಹದ್ದೂರ್‌ರಿಂದ ನಡೆಸಲ್ಪಟ್ಟಿತು. ಈ ಮಹೋತ್ಸವಕ್ಕೆ [illegible] ಸ್ಥಳಗಳ ಅನೇಕ ದೊಡ್ಡಮನುಷ್ಯರುಗಳು ಆಹ್ವಾನಿಸಲ್ಪಟ್ಟಿದ್ದರು.

ಗುಂಡ್ಲುಪೇಟೆ ತಾ|| [illegible] ಇರುವ ಪ್ಲೀಡರ್ ರಾದ ಮ|| ಎಂ. ಪಿ. ಲಿಂಗಪ್ಪನವರು ಶಿವರಾತ್ರಿಯಲ್ಲಿ [illegible] ದಯಪಾಲಿಸಿದ ಅಂಗವಸ್ತ್ರಗಳನ್ನು [illegible]

[illegible] ಶಿವಪೂಜಾ [illegible] ಕೆಲಸವನ್ನು [illegible] ನೆರವೇರಿಸಿಕೊಂಡು [illegible] ಪುರಸ್ಕಾರದಲ್ಲಿ [illegible] ಸಮಾರಂಭವನ್ನು ಪರಿಪೂರ್ಣ ಸಂತೋಷದಿಂದ ಕಳೆದರು.

ಕೋಲಾರ ಡಿ|| ಬೋ|| ಅಸಿಸ್ಟೆಂಟ್ ಸೆಕ್ರೆಟರಿ [illegible] ಅಸಿಸ್ಟೆಂಟ್ [illegible] ಉದ್ಯೋಗಕ್ಕೆ ಸರ್ಕಾರದವರಿಂದ ಆಫೀಸರಾಗಿ ವರ್ಗ ಹೊಂದಿರುವ ಮ|| ಜಿ. ಬಿ. ಮಲ್ಲಾರಾಧ್ಯ ಎಂ. ಎ., ಯವರ ಬೀಳ್ಕೊಡುವ [illegible] ಕೋಲಾರದ [illegible] ಯೂನಿಯನ್ ಕ್ಲಬ್ಬಿನವರು ತಾ|| 6 ನೆಯ ಭಾನುವಾರ [illegible] ಮ|| ಎ. ಬಿ. ರಾಮಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸಿ ಮ|| [illegible] ಗುಣಕಥನವನ್ನು ಮಾಡಿ ಅವರಲ್ಲಿ ತಮಗಿರುವ ಪ್ರೀತಿ ಗೌರವಗಳನ್ನು ಪ್ರಕಟಿಸಿದರು.

ಶಿವನಸಮುದ್ರದ ಬಳಿ ಕಾವೇರಿ ನದಿಗೆ ಅಡ್ಡವಾಗಿ ಸೇತುವೆಯು ಮ|| ಗಳಾದ ಬಿ. ಮುನಿವೆಂಕಟಪ್ಪ ಮತ್ತು ಆರ್. ಸೀತಾರಾಮಯ್ಯರ್‌ರವರುಗಳಿಂದ ಕಟ್ಟಲ್ಪಡುತ್ತಿದ್ದುದು ಸಂಪೂರ್ಣವಾಗಿ ಪೂರೈಸಿ ಉಪಯೋಗಕ್ಕೆ ಸಿದ್ಧವಾಗಿರುವುದು. ಇದರ ಆರಂಭೋತ್ಸವವು ಕಂಟ್ರಾಕ್ಟರುಗಳ ವೆಚ್ಚದಿಂದಲೇ ಈ ತಾ|| 19 ನೆಯ ಶುಕ್ರವಾರ ನಡೆಸಲ್ಪಡುವುದೆಂದು ತಿಳಿದುಬರುತ್ತದೆ. ಮ|| ವಿ. [illegible] ವೆಂಕಟಪ್ಪನವರು ತಿರುಮಕೂಡಲು ನರಸೀಪುರದ ಮಧ್ಯೆ ಕಾವೇರೀ ನದಿಗೆ ಅಡ್ಡವಾಗಿ ಕಟ್ಟುತ್ತಿರುವ ಸೇತುವೆಯು ಬರುವ ಆಗಸ್ಟ್ ತಿಂಗಳಲ್ಲಿ ಪೂರೈಸಿ ಉಪಯೋಗಕ್ಕೆ ಸಿದ್ಧವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

[illegible] ಬೆಳ್ಳುಪ್ಪುರಕ್ಕೆ ಬಿ. [illegible] ಪ್ರಭುತ್ವದವರಿಂದ ದೊರಕಿಸಲ್ಪಟ್ಟುದರ ಮೇಲೆ ಆ ಊರಿನವರ ಪ್ರಾರ್ಥನೆಯಂತೆ ಶ್ರೀಮದ್ಯುವರಾಜರವರು [illegible] ನೆಯ ಆದಿತ್ಯವಾರ [illegible] ದಯಮಾಡಿಸಿ ಅಲ್ಲಿಯ ಮುನಿಸಿಪಾಲಿಟಿಯವರಿಂದ ಕೊಡಲ್ಪಟ್ಟ ಬಿನ್ನವತ್ತಳೆಯನ್ನು ಸ್ವೀಕರಿಸಿ ಸಮಯೋಚಿತವಾದ ಉತ್ತರವನ್ನು [illegible] ಮಧುರವಾಕ್ಯದಿಂದ ಅಪ್ಪಣೆಕೊಡಿಸಿ ವಿದ್ಯುದ್ದೀಪದ ಉತ್ಸವವನ್ನು ನೆರವೇರಿಸಿದರು. ಯುವರಾಜರವರ ದರ್ಶನಾಪೇಕ್ಷೆಯಿಂದ ಬಹು ದೂರ ಗ್ರಾಮಾಂತರಗಳಿಂದ ಜನರು ಸಾವಿರಗಟ್ಟಲೆಯಾಗಿ ಬಂದು ಶ್ರೀಮದ್ಯುವರಾಜರವರ ದರ್ಶನಾನಂದವನ್ನು ಹೊಂದಿ ಜಯಘೋಷದ್ವಾರ ತಮ್ಮ ನಿಷ್ಕಪಟವಾದ ರಾಜಭಕ್ತಿಯನ್ನು ಪ್ರದರ್ಶಿಸಿದರು.

ಕಾಂತರಾಜಪುರದ ಮ|| ಎಂ. ನಂಜಪ್ಪನವರು ಮಾಡಿರುವ ಧರ್ಮಕಾರ್ಯಗಳಿಗಾಗಿ ಅವರಿಗೆ ಶ್ರೀಮನ್ಮಹಾರಾಜರವರಿಂದ ಪಸ್ತ್ ಕ್ಲಾಸ್ ಸರ್ಟಿಫಿಕೇಟು ಮೊದಲು ಲಭ್ಯವಾದ ದರಿಂದ ತಮಗುಂಟಾದ ಸಂತೋಷಪ್ರದರ್ಶನಾರ್ಥವಾಗಿ [illegible] ಗ್ರಾಮದ [illegible] ಸಂಘದವರು ಅದೇ ಊರಿನ ಸಾಹುಕಾರ್ ಮ|| ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಮಂಗಳವಾರ ಒಂದು ದೊಡ್ಡ ಸಭೆ [illegible] ಸಭೆಯ [illegible] ಗುಣಪ್ರಶಂಸಾರೂಪವಾದ ಮಾನಪತ್ರವನ್ನೊಪ್ಪಿಸಿದರು. ಈ ಸಭೆಗೆ ಮ|| ಗಳಾದ ಕೆ. ಎಚ್. ರಾಮಯ್ಯನವರು, ಎಚ್. ಸಿ. ದಾಸಪ್ಪನವರು, ಸಾಹುಕಾರ್ ಎಸ್. ಚೆನ್ನಯ್ಯನವರು ಮೊದಲಾಗಿ ಸೂರಾರು ಜನ ದೊಡ್ಡಮನುಷ್ಯರುಗಳು ಪರಸ್ಥಳಗಳಿಂದ ದಯಮಾಡಿಸಿದ್ದರು. ಬಂದಿದ್ದವರಿಗೆ ದಿವ್ಯವಾದ ಭೋಜನ ಮಾಡಿಸಲ್ಪಟ್ಟಿತು.

ಬೆಂಗಳೂರು ಸಿಟಿ ಮಾರ್ಕೆಟ್ಟಿನ ಸಮೀಪದಲ್ಲಿರುವ ಸತ್ರದ ಒಂದು ಕೊಠಡಿ ಬಾಡಿಗೆಗೆ ಹಿಡಿದುಕೊಂಡಿದ್ದ ನಾರಾಯಣಶೆಟ್ಟಿ ಎಂಬಾತನೂ ಆತನ ಹೆಂಡತಿಯೂ ಕಳೆದ ಶಿವರಾತ್ರಿಯಲ್ಲಿ ಕೊಠಡಿಯ ಬಾಗಿಲು ಮುಚ್ಚಿ ಕಿಟಕಿಗಳ ಕದಗಳನ್ನೆಲ್ಲಾ ಬಳಿಗಾಗಿ ಮುಚ್ಚಿಕೊಂಡು ಇದ್ದಲಿನ ಅಗ್ಗಿಷ್ಟಿಕೆಯನ್ನುರಿಸಲು ಮಲಗಿಕೊಂಡರು. ಬೆಳಿಗ್ಗೆ ಬಹಳ ಹೊತ್ತಾದರೂ ಕೊಠಡಿ ಬಾಗಿಲು ತೆಗೆಯದಿದ್ದುದನ್ನು ನೆರೆಯವರು ನೋಡಿ ಅನುಮಾನಿಸಿ ಬಲವಂತದಿಂದ ಬಾಗಿಲನ್ನೊಡೆದು ಒಳಕ್ಕೆ ಪ್ರವೇಶಿಸಿ ಹೆಂಡತಿಯು ಸತ್ತು ಬಿದ್ದಿರುವುದನ್ನೂ ಗಂಡನು ಉಸಿರುಸಿಕ್ಕಿಕೊಂಡು ನರಳುತ್ತಿರುವುದನ್ನೂ ನೋಡಿ ಪೋಲೀಸಿನವರಿಗೆ ತಿಳಿಸಿದರು. ಪೋಲೀಸಿನವರು ಬಂದು ಗಂಡನನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಮಾಡಿಸಿದರು. ಆತನು ಚೇತರಿಸಿಕೊಂಡನು.

ರಾಜಧಾನಿಯಲ್ಲಿ ಬೆಳಗಿನ ವೇಳೆಯಲ್ಲಿ ಮಂಜು ಬೀಳುತ್ತ ಬೇಸಗೆಯಾಗಿ [illegible] ಸಿಕ್ಕದೇ [illegible] ನಲ್ಲಿಗಳಲ್ಲಿ ನೀರು ಬೆಳಿಗ್ಗೆ 10 ಘಂಟೆಯಿಂದ ಮಧ್ಯಾಹ್ನ 4 ಘಂಟೆಯವರೆಗೆ ನಿಲ್ಲಿಸಲ್ಪಡುವುದರಿಂದ ಪಟ್ಟಣಸ್ಥಳಗಳಿಂದ ಬರತಕ್ಕ ಜನರಿಗೂ ಪಟ್ಟಣಿಗರುಗಳಿಗೂ ಕುಡಿಯುವ ನೀರಿಲ್ಲದೆ ಬಹಳ ತೊಂದರೆಯಾಗಿರುವುದು. ಬೇಸಿಗೆಕಾಲವಾದುದರಿಂದ ಕಾವೇರೀ ನದಿಯಲ್ಲಿ ನೀರು ಕಡಿಮೆಯಾಗಿರುತ್ತದೆಂಬುದು ಕಾರಣವಾಗಿದ್ದರೆ ಉದ್ಯಾನಗಳಿಗೂ [illegible] ಹಗಲೂ ರಾತ್ರಿ ನೀರು [illegible] ಉಪಯೋಗಿಸಲ್ಪಡುತ್ತಿಲ್ಲ ಎಂದು ನಾವು ಕೇಳಿ [illegible] ಅರಿತುಕೊಳ್ಳುತ್ತಿರುವೆವು. [illegible] ಆಗಿರಲಿ [illegible] ಡಿಯುವ ನೀರಿಗೆ ಅಲೆಯುತ್ತಿರುವ [illegible] ಸಂತಾಪಕರವಾಗಿದೆ. [illegible] ಸಂಬಂಧಪಟ್ಟ [illegible] ತಕ್ಷಣ ಪರಿಹಾರವಾಗಿ [illegible] ಮಾಡಬೇಕಾಗಿದೆ.

Of all the journals [illegible] the [illegible] the [illegible] Nadu of Bangalore has sought to [illegible] [illegible] of the [illegible] President of the Mysore Municipal Council and that through the pen of Mr M Venkata [illegible] [illegible] [illegible] usually [illegible] [illegible] Mr Venkata krishnayya is old almost bordering on senility and one need not take him too seriously He speaks of Rama's virtues becoming manifest only with a Ravana to fight against So are Mr Rama Iyer's virtues becoming manifest with the presence of Ravanas in the City We have had occasion to point out in our previous issues about the ways of this President in creating his [illegible] in the Council and in his clannish instincts having full sway More recently we had occasion to point out th[illegible] [illegible] to a nominated member Mr [illegible] Alikhan by telling him that the interest of the rate payers were no concern of his which was a sufficient insult to Government which nominated him Our Government of course is evidently so absorbed in various matters that it can hardly concern itself with these small affairs In fact it is very [illegible] [illegible] Government is [illegible] [illegible] [illegible] [illegible] Government [illegible] [illegible] the people It dumps [illegible] Official President [illegible] the Council and sits [illegible] his [illegible] The last Municipal meeting held on Saturday the 28th May [illegible]32 was very interesting and not a little amusing In the first place the meeting was attended by Mr [illegible] Alikhan who had not attended the meeting since the Alikhan Rama Iyer [illegible] had begun It appears ever since Mr Alikhan had [illegible] to withdraw his remark [illegible] the [illegible] memo the President had not sent him the papers for circulation [illegible] notice [illegible] agenda [illegible] stated [illegible] This note of the President was [illegible] the Council and one would have expected that till Mr Alikhan withdrew the [illegible] the agenda and papers would not [illegible] Mr Alikhan But the high placed [illegible] made a big climb down and it would appear that he sent round both the agenda and the papers to Mr Alikhan Evidently the President thought that discretion was the better part of valour If he had not sent the agenda Mr Alikhan would not attend the meeting for the third time and then the removal of his name for non attendance would become necessary The President would hardly summon the courage to take the step when he himself had failed to send out agenda and business as required by the Regulation The most important subject that came up for discussion was the failure of the Executive to execute a decree obtained against a toll contractor for Rs 3040 in time and allowing it to get time-barred The President discovered this ommission too late and as usual the result was a note before the Council The President placed his proposition laying the blame mostly at the door of the ex-Revenue Officer Mr Hassan Ali and his office clerks Mr H C Dasappa questioned whether there was not the liability of the President and his office in the matter He pointed out that the responsibility as per S 24 of the Regulation and Section of chapter IV of the Rules and the Bye-laws vested in the President and his Head Office as well It was pointed out that the Municipal Manual made it obligatory on the part of the Revenue Section to maintain the register of suits and it was the procedure also that the Revenue Officer should see to the suits But one would like to ask a few questions Whether it is not the duty of the President to watch over the financial administration of the Municipal Council? Have not the bye-laws provided for the powers of S 164 of the Regulation relating to suits being exercised by the President? Even if the Revenue Section was responsible for maintaining the suit register was it not the [illegible] [illegible] [illegible] [illegible] [illegible] particular suit [illegible] properly answered [illegible] the [illegible] [illegible] [illegible] Administration Reports during the period [illegible] [illegible] [illegible] place [illegible] that the suit in particular was decreed? Was it not a fact that the file of papers relating to the suit [illegible] in the Head Office and was not sent to the Revenue Section during the period in question? It may be the fault of the clerks in not bringing it to the notice of the higher officers But what are the higher officers for if they cannot check the work of their subordinates and supervise their work? Whose duty was it to see that the audit objections were answered properly? When the administration reports contained the information that the suit was decreed and not pending was it not easily possible for the very President to know the answer for the audit objection? How [illegible] the President find time to [illegible] these questions about finances when he is busy about carrying on merciless [illegible] of prosecutions for nuisance offences He could find time to launch literally hundreds of [illegible] [illegible] for nuisance offences using his powers under S 161 of the Regulation but he [illegible] not see that his powers under S 164 were being properly exercised All this is Mr Rama Iyer's efficiency of which Mr Venkata krishnayya talks in The Nadu The blame is laid only on the clerks and the Revenue Officers and none on those on whom the responsibility lay and who should have supervised the working of these sections and who [illegible] [illegible] such efficiency [illegible] One wonders whether one should [illegible] [illegible] in such a state of affairs

ಇದು ಕಾರ್ಯದಕ್ಷತೆಯ ಪ್ರಭಾವವೇ?

ಬೆಂಗಳೂರಿನ [illegible] ಮೈಸೂರು ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ [illegible] ರಾಮಯ್ಯರವರು ರಾಮರ ಅವತಾರವೇ [illegible] [illegible] ಪುರಾಣ [illegible] ಪಡೆದಿರುವುದು [illegible] [illegible] [illegible] ವೆಂಕಟಕೃಷ್ಣಯ್ಯನವರು ಬರೆದಿರುವ [illegible] ನಾಡು ಪತ್ರಿಕೆಯಲ್ಲಿ ಪ್ರಕಟ [illegible] [illegible] [illegible] ಸಾಮಾನ್ಯವಾಗಿ [illegible] ರಾವಣನ ದೆಸೆಯಿಂದ [illegible] [illegible] ಪ್ರಕಾಶಕ್ಕೆ ಬರುವ [illegible] [illegible] [illegible] [illegible] [illegible] ದೇವತೆಗಳು [illegible] ರಾವಣನ [illegible] ರಿಂದ ಪ್ರಕಾಶಕ್ಕೆ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ರನ್ನು [illegible] [illegible] [illegible] [illegible] [illegible] [illegible] [illegible] [illegible] [illegible] ರವರನ್ನು [illegible] [illegible] [illegible] ಪ್ರಾಪ್ತಿಯಾಗಿದ್ದರೂ [illegible] [illegible] [illegible] [illegible] [illegible] ವೆಂಕಟಕೃಷ್ಣಯ್ಯನವರ [illegible] [illegible] [illegible] ವಯಸ್ಸಾಗಿರುವುದರಿಂದ ಅವರ ಅರುಳು ಮರುಳು ತನದ ಮಾತಿಗೆ ಬೆಲೆಯೇ ಇಲ್ಲ. ಮ|| ಅಯ್ಯರ್‌ರವರು ಕೌನ್ಸಿಲು ಮೆಂಬರುಗಳಲ್ಲಿ ಒಡಕನ್ನು ಹುಟ್ಟಿಸಿ ಒಬ್ಬ ಒಬ್ಬರನ್ನು ಪರವಡಿ [illegible] ನ್ಯಾಯವಿರುದ್ಧವಾದ ಕಾರ್ಯಗಳನ್ನು ಸಹ ಸಾಧಿಸು [illegible] ವುದನ್ನು ಅನೇಕ ಸಂದರ್ಭಗಳಲ್ಲಿ ನಾವು ವ್ಯಕ್ತಪಡಿಸಿರು [illegible] ಪ್ರಭುತ್ವದವರಿಂದ ನಾಮಕರಣರಾಗಿರುವ ಮ|| ಟಿ [illegible] ಆಲಿಖಾನರಿಗೂ ಪ್ರೆಸಿಡೆಂಟರಿಗೂ ಅವಿಮರ್ಶಕವಾಗಿ ನಡೆದ ಚರ್ಚೆಯಲ್ಲಿ, ಮ|| ಖಾನರವರು ತೆರಿಗೆದಾರರ ಪ್ರತಿನಿಧಿಗಳೆಂದು ಹೇಳಿ ಅವರನ್ನು ಅವಮಾನಪಡಿಸಿ ತನ್ನಾಳಿಕ ಆವರನ್ನು ನಿಯಮಿಸಿದ ಪ್ರಭುತ್ವದವರನ್ನು ಸಹ ಅವಮಾನಪಡಿಸುವ ವಿಚಾರವನ್ನು ಈ ಪತ್ರಿಕಾವಾಚಕರ ಅವಗಾಹನೆಗೆ ತಂದಿರುತ್ತೇವೆ. ನಮ್ಮ ಪ್ರಭುತ್ವದವರು ಕಾರ್ಯಗೌರವದಿಂದ ಇಂತಹ ಸಣ್ಣ ವಿಚಾರಗಳಿಗೆ ಗಮನಕೊಡಲು ವ್ಯವಧಾನವಿರು ವುದಿಲ್ಲವಾದ್ದರಿಂದ ಸ್ಥಾನಿಕ ಸ್ವರಾಜ್ಯಸ್ಥಾಪನದ್ದ ತಿಯನ್ನು ಅವಿ ವೃದ್ಧಿಗೊಳಿಸಿ ಪ್ರಜೆಗಳ ಸಹಕಾರವನ್ನು ಹೊಂದಬೇಕೆಂಬ ಕಾಂಕ್ಷೆಯು ಪ್ರಭುತ್ವದವರಿಗಿರುವುದು ಸಂಶಯವಾಗಿದೆ. ಸರ್ಕಾರಿ ಯಾಫಿಸರಿಯನ್ನು ಕೌನ್ಸಿಲಿನ ಪ್ರೆಸಿಡೆಂಟರನ್ನಾಗಿ ನಿಯಮಿಸಿ ಅವರು ಮಾಡುವ ಮನಸ್ವೇಚ್ಛಾಚಾರವನ್ನು ಗಮನಕ್ಕೆ ತಂದು ಕೊಳ್ಳುತ್ತಿಲ್ಲ. ಕಳೆದ ಶನಿವಾರ ನಡೆದಿದ್ದ ಮ್ಯುನಿ|| ಕೌನ್ಸಿಲ್ ಮೀಟಿಂಗಿನಲ್ಲಿ ಕೆಲವು ವಿಚಿತ್ರ ಸಂಗತಿಗಳು ಜರುಗಿರುವುವು. ಮ|| ಆಲಿಖಾನರವರ ಕಳುಗಿದ ಪ್ರೆಸಿಡೆಂಟರಿಗೆ [illegible] [illegible] [illegible] ಮೀಟಿಂಗುಗಳಿಗೆ [illegible] ಹೋದ ಮೀಟಿಂಗಿಗೆ ಒಂದು [illegible] [illegible] ಮೀಟಿಂಗಿಗೆ [illegible] ಕಾಗದಪತ್ರಗಳನ್ನು ಕಳು [illegible] [illegible] ಆವುಗಳನ್ನು [illegible] [illegible] ಆಲಿಖಾನರವರು ಬರೆದಿರುವುದನ್ನು [illegible] [illegible] ಮೀಟಿಂಗಿನ ಕಾರ್ಯ [illegible] [illegible] ಕಾಗದಪತ್ರಗಳು ಅವರಿಗೆ ಕಳುಹ [illegible] [illegible] ಪ್ರೆಸಿಡೆಂಟರು ಬರೆದಿದ್ದ ಅಂತಹ ಕೌನ್ಸಿಲಿನಲ್ಲಿ [illegible] [illegible] ಮ|| ಅಲಿಖಾನರವರು ತಮ್ಮ ವಾಕ್ಯವನ್ನು ವಾಪಸ್ ತೆಗೆದುಕೊಳ್ಳದಿದ್ದಾಗ್ಯೂ ಈ ವೇಳೆ ಕಾಗದಪತ್ರಗಳು ಅವರಿಗೆ ಕಳುಹಲ್ಪಟ್ಟಿದ್ದುದನ್ನು ನೋಡಿದರೆ [illegible] ಹೇಳಿದ್ದ ಪ್ರೆಸಿಡೆಂಟರು ಕೆಳಕ್ಕೆ ಇಳಿದಂತೆ ತೋರುತ್ತದೆ. ಈ ವೇಳೆ ಕಾಗದಪತ್ರಗಳು ಮ|| ಅಲಿಖಾನರವರಿಗೆ ಕಳುಹಲ್ಪಡದೆ [illegible] ಅವರು ಕಳೆದ ಮೀಟಿಂಗಿಗೂ ಬರಲಿಕ್ಕಾಗುತ್ತಿರಲಿಲ್ಲ ಮತ್ತು ಇದರಿಂದ ಮೆಂಬರತನವನ್ನೇ ಕಳೆದುಕೊಳ್ಳಬೇಕಾಗಿದ್ದಿತು. ಪ್ರೆಸಿಡೆಂಟರು ತಮ್ಮ ವರ್ತನವು ಅಕ್ರಮವೆಂದು ತಿಳಿದುಕೊಂಡು ತಾವಾಗಿಯೇ ಕಾಗದಪತ್ರಗಳನ್ನು ಕಳುಹಿಸಿರಬೇಕೆಂದು ತೋರುತ್ತದೆ. ಒಬ್ಬ ಕಂಟ್ರಾಕ್ಟರಿನಿಂದ ಬರಬೇಕಾಗಿದ್ದ 3140 ರೂ ಗಳಿಗಾಗಿ ಕೋರ್ಟಿನಲ್ಲಿ ಪಡೆದುಕೊಂಡಿದ್ದ ಡಿಕ್ರಿಯನ್ನು ಜಾರಿಮಾಡದೆ ಹಣವನ್ನು ಕಳೆದುಕೊಂಡ ವಿಚಾರವು ಮುಖ್ಯ ಚರ್ಚಾವಿಷಯವಾಗಿದ್ದಿತು. ಈ ಲೋಪವನ್ನು ಪ್ರೆಸಿಡೆಂಟರು ಡಿಕ್ರಿಯ 3 ವರ್ಷಕಾಲಾವಧಿಯು ಕಳೆದ ಅನಂತರ ಕಂಡುಹಿಡಿದು ಇದಕ್ಕೆ ರೆವಿನ್ಯೂ ಆಫೀಸರಾಗಿದ್ದ ಮ|| ಹಸನ್ ಅಲಿಯವರ ಮತ್ತು ಅವರ ಅಧೀನ ಉದ್ಯೋಗಸ್ಥರ ಅಜಾಗರೂಕತೆಯೇ ಕಾರಣವಾದುದರಿಂದ ಅವರುಗಳು ಮೇಲ್ಕಂಡ ನಷ್ಟವನ್ನು ಪಂಚಾಯತಿ ಪ್ರಕಾರ ಕೊಡಬೇಕೆಂದು ಗೊತ್ತುಮಾಡಿ ಕೌನ್ಸಿಲಿನ ಅನುಮೋದನೆಗಾಗಿಟ್ಟಿದ್ದರು. ಈ ವಿಚಾರದಲ್ಲಿ ಮ್ಯುನಿಸಿಪಲ್ ರೆಗ್ಯುಲೇಷನ್ ಮತ್ತು ಬೈಲಾ ಪ್ರಕಾರ ಪ್ರೆಸಿಡೆಂಟರು ಜವಾಬ್ದಾರರೆಂದು ಮ|| ಎಚ್. ಸಿ. ದಾಸಪ್ಪನವರು [illegible] ಮ್ಯುನಿಸಿಪಲ್ ಮ್ಯಾನ್ಯುಯಲ್ ಪ್ರಕಾರ [illegible] [illegible] ರಿಜಿಸ್ಟರನ್ನು ಇಟ್ಟು ನಡವಳಿಕೆ ಮತ್ತು ಜಾಗರೂಕತೆಯನ್ನು ಮಾಡುವುದು ರೆವಿನ್ಯೂ ಆಫೀಸರಿಗೆ ಸಂಬಂಧಪಟ್ಟಿರುವುದರಿಂದ ಪ್ರೆಸಿಡೆಂಟರು ಕೇಸುಗಳ ಸಂಬಂಧ ವಾದ ಲೋಪದೋಷಗಳಿಗೆ ಜವಾಬ್ದಾರರಲ್ಲವೆಂದು ಉತ್ತರ ಕೊಟ್ಟರು. ಈ ಉತ್ತರವನ್ನು ಕೆಲ ಪ್ರಶ್ನೆಗಳು ಪ್ರತಿವಾದಿಗಳಿಗೆ ಪಾತ್ರರಾಗಿರುವ ರೆಗ್ಯುಲೇಷನ್ ಮತ್ತು ಬೈಲಾ ಗಳ ನಿಯಮಗಳನ್ನು ವ್ಯಾಖ್ಯಾನಗಳನ್ನು ಮಾಡಿ ಪುಷ್ಟೀಕರಿಸಿ ಮ|| ಹಸನ್‌ಅಲಿಯವರು ಈಗಿನ ರೆವಿನ್ಯೂ ಆಫೀಸರು ಮತ್ತು ಅವರ ಕೈಕೆಳಗಿನ ಉದ್ಯೋಗಸ್ಥರು 3140 ರೂ ಗಳನ್ನು ಪ್ರೆಸಿಡೆಂಟರ ಪ್ರಕಾರ ಭರ್ತಿಮಾಡಿಕೊಡಬೇಕೆಂದು ನಿರ್ಧರಿಸಿದರು. ಡಿಕ್ರಿಯ 3 ವರ್ಷ ಕಾಲಾವಧಿಯು ಪೂರೈಸುವವರೆಗೂ ಅದು ಗಮನಕ್ಕೆ ತರಲ್ಪಡಲಿಲ್ಲವೆಂಬುದು ಪ್ರೆಸಿಡೆಂಟರ ಗಮನಕ್ಕೆ ಬರಲಿಲ್ಲವೆ. ಒಂದುವೇಳೆ ಅದರ ಲೋಪಕ್ಕೆ ರೆವಿನ್ಯೂ ಆಫೀಸರೂ ಅವರ ಕೈಕೆಳಗಿನವರೂ ಜವಾಬ್ದಾರರಾಗಿದ್ದರೂ ಅವರ ಕರ್ತವ್ಯಲೋಪವನ್ನು ಪ್ರೆಸಿಡೆಂಟರು ಸಕಾಲದಲ್ಲಿ ವಿಚಾರಿಸಿ ತಕ್ಕ ಎಚ್ಚರಿಕೆಯನ್ನು ಕೊಡತಕ್ಕದ್ದು ಅವರ ಕರ್ತವ್ಯವಲ್ಲವೆ? ಲೆಕ್ಕಪರಿಶೋಧಕರು ಈ ಲೋಪವಿಚಾರವಾಗಿ ಮಾಡಿದ ಆಕ್ಷೇಪಕ್ಕೆ ತಕ್ಕ ಸಮಾಧಾನ ಕೊಡಲ್ಪಟ್ಟಿದೆಯೇ ಇಲ್ಲವೆ ಎಂಬುದನ್ನು ಪ್ರೆಸಿಡೆಂಟರು ವಿಚಾರಿಸಿದರೆ? ತಮ್ಮ ಸೂಚನೆಯ ಪ್ರಕಾರ ಇದ್ದಗೊಳಿಸಲ್ಪಡುವ ಪರ್ಯಾಲೋಚಿತ ಮಾಡಿಗಳಲ್ಲಿ ಈ ಡಿಕ್ರಿ ವಿಚಾರವು ಸೇರಿಸಲ್ಪಟ್ಟಿದ್ದಿತೇ ಇಲ್ಲವೇ [illegible] ಪ್ರೆಸಿಡೆಂಟರು ಗಮನಿಸಿಲ್ಲವೆ? ಈ ಕೇಸಿಗೆ ಸಂಬಂಧ [illegible] [illegible] ಕಾರಾಗೃಹಕ್ಕೆ ಜಾರಿಯಾಗುವವರೆಗೂ ರೆವಿನ್ಯೂ ಆಫೀಸಿಗೆ ಕಳುಹಲ್ಪಡದೆ ಪ್ರೆಸಿಡೆಂಟರ ಆಫೀಸಿನಲ್ಲೇ ನಿಲ್ಲಿಸಿ ಕೊಳ್ಳಲ್ಪಟ್ಟಿದ್ದುದು ನಿಜವೆ? ಈ ವಿಚಾರವನ್ನು ಮೇಲ್ಪಟ್ಟ ಅಧಿಕಾರಿಗಳ ಗಮನಕ್ಕೆ ತರಲ್ಪಡದಿದ್ದುದು ಕ್ಲಾರ್ಕುಗಳ ತಪ್ಪಾಗಿರಬಹುದಾದರೂ ಅದನ್ನು ವಿಚಾರಿಸಿ ಕ್ರಮಪಡಿಸ ತಕ್ಕದು ಮೇಲ್ಪಟ್ಟ ಅಧಿಕಾರಿಗಳ ಕರ್ತವ್ಯವಲ್ಲವೆ? ಹೇಗೆಯೆ ಸಂಬಂಧವಾಗಿ ನೂರಾರು ನಿರ್ದಾಕ್ಷಿಣ್ಯದಿಂದ ಪ್ರಾಸಿಕ್ಯೂಷನ್ ಮಾಡುವ ಕಾರ್ಯಗೌರವದಲ್ಲಿ ಹಣಕಾಸಿನ ಕಡೆಗೆ ಗಮನಕೊಡಲು ಪ್ರೆಸಿಡೆಂಟರಿಗೆ ವ್ಯವಧಾನವೆಲ್ಲಿರಬೇಕು? ಇದ್ದೀತು! ಮ|| ರಾಮಯ್ಯರ್‌ರವರ ಇಂತಹ ಕಾರ್ಯದಕ್ಷತೆಯನ್ನೇ ಮ|| ವೆಂಕಟಕೃಷ್ಣಯ್ಯನವರು ತಾಯಿನಾಡು ಪತ್ರಿಕೆಯಲ್ಲಿ ಪ್ರಶಂಸಿಸಿರುವುದು. ಲೋಪದೋಷಗಳೆಲ್ಲ ಕ್ಲಾರ್ಕುಗಳು ಹೊಣೆಯಲ್ಲದೆ ಅವುಗಳನ್ನು ವಿಚಾರಿಸಿ ಎಚ್ಚರಿಸತಕ್ಕ ಅಧಿಕಾರಿಗಳ ಅನಾದರಣೆಯು ಮಾತ್ರ ಹೊಣೆಯಲ್ಲವಂತೆ! ಇಂತಹ ಕಾರ್ಯದಕ್ಷತೆಗೇನೆ ಏಯಪ್ಪಾ!

ಒಳದೇಶದ ವೃತ್ತಾಂತಗಳು

ಶೃಂಗೇರಿಯ ಜಗದ್ಗುರು ಶ್ರೀಮಚ್ಛಂಕರಾಚಾರ್ಯರವರ ಸ್ವಾಮಿಯು ಉದರ ಮುಂತಾದವಿಂದ ನರಳುತ್ತಿದ್ದಾರೆ ಚಿಕಿತ್ಸೆ [illegible]

ಈ ದಿವಸ ಶ್ರೀಮದ್ಯುವರಾಜರವರ ವರ್ಧಂತ್ಯುತ್ಸವ ನಿಮಿತ್ತವಾಗಿ ರಾಜಧಾನಿಯ ಎಲ್ಲ ಕಚೇರಿಗಳಿಗೂ ಶಾಲೆಗಳಿಗೂ ರಜಾ ಕೊಡಲ್ಪಟ್ಟಿರುವುದು

ಮದರಾಸ್ ಮತ್ತು ಸದರನ್ ಮರಾಠಾ ರೈಲ್ವೆಯಲ್ಲಿ ಟ್ರಾಫಿಕ್ ಮ್ಯಾನೇಜರಾಗಿದ್ದ ಮಿ|| ಎ. ಸಿ. ರೆಂಡಾಲ್‌ರವರು ಮೈಸೂರು ರೈಲ್ವೆಗಳ ಟ್ರಾಫಿಕ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಯ ಬರುತ್ತದೆ.

ರಾಜಧಾನಿಯ ಸ ಬೇಸಿಗೆಯ ಪ್ರದರ್ಶನ ಸಂಘದವರು ... ಬಿಡಿ ... ಪ್ರತಿ ... ಯನ್ನು ... ಬಹುದಾಗಿದೆ ... ಪ್ರದರ್ಶನ ... ಏರ್ಪಡಿಸಲಾಗಿದೆ.

ರಾಜಧಾನಿಯ ಎಕ್ಸ್ ಮ್ಯುನಿಸಿಪಲ್ ಕೌನ್ಸಿಲರಾದ ಮ್ಯ ಎಂ ಮಾದ ವರು ಎನ್ನ ... ರು ... ವಿವಾಹ ಮಹೋತ್ಸವವನ್ನು ... ವೈಭವದಿಂದ ನೆರವೇರಿ ... ಪ್ರಮುಖರನ್ನು ... ದೊಡ್ಡ ಮನುಷ್ಯರುಗಳು ... ಕರೆಸಲ್ಪಟ್ಟಿದ್ದರು

ಮೈಸೂರು ವೃತ್ತಪತ್ರಿಕಾ ಕರ್ತರ ಸಂಘದ ಆರಂಭೋತ್ಸವವು ಇದೇ ... ವಾರ ಬೆಂಗಳೂರು ಇಂಟರ್ಮೀಡಿಯೇಟ್ ಕಾಲೇಜಿನಲ್ಲಿ ಶ್ರೀ ... ರವರಿಂದ ನೆರವೇರಿಸಲ್ಪಟ್ಟು ಮದ್ರಾಸು ಹಿಂದು ಪತ್ರಿಕೆಯ ಪ್ರಸಿದ್ಧ ... ಪಾದಕರಾದ ಮ್ಯ ಎ. ರಂಗಸ್ವಾಮಯ್ಯಂಗಾರ್, ಬಿ ಎ, ಬಿ ಎಲ್, ರವರ ಅಧ್ಯಕ್ಷತೆಯಲ್ಲಿ ನಡೆಯುವುದು

ರಾಜಧಾನಿಯಲ್ಲಿ ಈಚೆಗೆ ... ಹೆಚ್ಚಾಗಿದೆ ... ಕೊಂಚ ದಿನಗಳಿಂದ ... ರೋಗಾದಿಗಳ ಬಾಧೆಯೇನೂ ಇಲ್ಲ ... ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ಸರ್ಕಾರಿ ಕಟ್ಟಡಗಳಿಗೆ ... ಬಣ್ಣವೂ ಮಾರ್ಗಗಳನ್ನು ಸರಿಪಡಿಸುವಿಕೆಯೂ ನಡೆಯುತ್ತಿವೆ ... ಕುದುರೆ ಜೂಜಿನವರು ನಿತ್ಯವೂ ಬರುತ್ತಿದ್ದಾರೆ

ಈಗ ಬೆಂಗಳೂರಿಗೆ ಸಪತ್ನೀಕರಾಗಿ ಬಂದಿರುವ ಹೈದರಾಬಾದಿನ ... ನಿವಾಸ ತವರ ಸಹೋದರರೂ ಬರುವ ಜೂನ್ ತಾ 14 ರಲ್ಲಿ ... ಶ್ರೀ ಮನ್ಮಹಾರಾಜರವರ ವರ್ಧಂತ್ಯುತ್ಸವಕ್ಕೆ ಆಹ್ವಾನಿಸಲ್ಪಟ್ಟ ... ಬರುವ ಜೂನ್ ತಾ 12ರಲ್ಲಿ ರಾಜಧಾನಿಗೆ ಬಂದ ವಸಂತಮಹಲ ... ಅತಿಥಿಗಳಾಗಿದ್ದುಕೊಂಡು ಶಿವನಸಮುದ್ರದ ಜಲಪಾತ ಮೊದಲಾದ ... ಕ್ಷಣೀಯ ಸ್ಥಳಗಳನ್ನು ಸಂದರ್ಶಿಸ ತವರಾಗಿರುವರು

ಬರುವ ಪ್ರಜಾಪ್ರತಿನಿಧಿಸಭೆಯಲ್ಲಿ ಸದಸ್ಯರುಗಳ ಅವಗಾಹನೆಗೆ ತರ ... ಕ್ಕೆ ಸಿದ್ಧಗೊಳಿಸಲ್ಪಟ್ಟಿರುವ ಸಂಸ್ಥಾನದ 1933–34 ನೆಯ ವರ್ಷದ ... ಯಪಟ್ಟಿಯಿಂದ 352 73 ಲಕ್ಷ ರೂ ಉತ್ಪನ್ನವೂ 362 00 ಲಕ್ಷ ... ಯವೂ ಆಗಿ 9 88 ಲಕ್ಷ ರೂ ನಷ್ಟ ಸಂಭವಿಸುವುದಾಗಿ ವ್ಯಕ್ತವಾಗು ... ಪ್ರಸಕ್ತ ವರ್ಷದಲ್ಲಿ 379 83 ಲಕ್ಷ ರೂ ಉತ್ಪನ್ನವಾಗುತ್ತದೆಂದು ... ರೀಕ್ಷಿಸಲ್ಪಟ್ಟಿದ್ದುದಕ್ಕೆ 343 27 ಲಕ್ಷ ರೂ ಉತ್ಪನ್ನವಾಗಿ 307 40 ... ಕ್ಷ ರೂ ವ್ಯಯವಾದುದರಿಂದ 18 57 ಲಕ್ಷ ರೂ ಕಡಿಮೆ ಬಂದಿರುತ್ತದೆ

ಕಳೆದ ವಾರ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಿನಿಂದ ರಾತ್ರಿ 2 30 ಘಂಟೆಗೆ ... ಎಕ್ಸ್‌ಪ್ರೆಸ್ ರೈಲು ಬಂಡಿಯು ಸ್ಟೇಷನ್ನಿನಿಂದ 2 ಮೈಲು ದೂರ ... ದ್ದಲಿರುವ ಲೆವೆಲ್ ಕ್ರಾಸಿಂಗ್ ಬಳಿ ಬಂದ ಸಮಯಕ್ಕೆ ಸರಿಯಾಗಿ ಒಬ್ಬ ... ಮನುಷ್ಯನು ಒಂದು ಕೋಣವನ್ನು ಹಿಡಿದುಕೊಂಡು ಇಂಜನ್ನಿನ ಮುಂಗಡೆ ... ದನು ಡ್ರೈವರು ಬ್ರೇಕನ್ನು ಹಾಕಿ ಬಂಡಿಯನ್ನು ನಿಲ್ಲಿಸುವಷ್ಟರೊಳಗೆ ... ಇಂಜನ್ನಿಗೆ ಸಿಕ್ಕಿ ಸತ್ತುಹೋಯಿತು ಮತ್ತು ಅವನ್ನು ಅಟ್ಟಿಕೊಂಡು ... ನವನಿಗೆ ಘೋರಾ ಅಪಾಯ ಸಂಭವಿಸಿತು ಅವನನ್ನು ಅದೇ ಬಂಡಿಯಲ್ಲಿ ... ಸಿಕೊಂಡು ಬೆಂಗಳೂರಿಗೆ ಹಿಂದಿರುಗಿ ಹೋಗಿ ಆಸ್ಪತ್ರೆಗೆ ಸಾಗಿಸಿದರು

ರಾಜಧಾನಿಯ ಒಂದನೇ ಮುನ್ಸೀಫರಾದ ಮ್ಯ ಜಿ ರಾಮಣ್ಣನವರ ... ಯ ಕುಮಾರ ಮ್ಯ ಬಿ ಆರ್ ವೆಂಕಟನರಸ್ಥರವರಿಗೆ ಓರಿಯಂ ... ಟಲ್ ಲೈಫ್ ಇನ್ಷೂರೆನ್ಸ್ ಕಂಪೆನಿ ಏಜಂಟರಾದ ಮ ಬಿ ಶ್ರೀನಿವಾಸ ... ಯಂಗಾರ್ಯರ ಮೊಮ್ಮಗಳು ಚಿ ಸೌ ಸುನಂದಾಯವರು ಕೊಡಲ್ಪಟ್ಟು ... ವಾಹ ಮಹೋತ್ಸವವು ನೆನ್ನೆಯ ದಿವಸ ಬೆಂಗಳೂರು ಶಂಕರಪುರದಲ್ಲಿ ... ಬಹಳ ವೈಭವದಿಂದ ನಡೆಯಿತು ದಿವಾನರು ಕೌನ್ಸಿಲರುಗಳೂ ಆದಿಯಾಗಿ ... ಕಾರಿಯಧಿಕಾರಿಗಳು, ಲಾಯರುಗಳು ಮ್ಯುನಿಸಿಪಲ್ ಕೌನ್ಸಿಲರುಗಳು ... ಇತರ ದೊಡ್ಡ ಮನುಷ್ಯರುಗಳು ಮಹೋತ್ಸವಕ್ಕೆ ದಯಮಾಡಿಸಿ ... ಸವರ ಶ್ರೇಯಸ್ಸನ್ನು ಕೋರಿ ಫಲಪುಷ್ಪವನ್ನು ಸ್ವೀಕರಿಸಿ ಬಂದರು ... ನೂತನ ದಂಪತಿಗಳಿಗೆ ಸಕಲ ಸನ್ಮಂಗಳವಾಗಲೆಂದು ಪ್ರಾರ್ಥಿಸುತ್ತೇವೆ

ಕಳೆದ ತಾ|| 20 ನೆಯ ಶುಕ್ರವಾರ ಬೆಂಗಳೂರು ಮಲ್ಲೇಶ್ವರದ ... ವರ್ಷ ವಯಸ್ಸಿನ ಮ|| ಅನಂತಕೇಶವಮೂರ್ತಿ, ಬಿ ಎಸ್ ಸಿ, ಬಿ ಟಿ ... ವರು ಅಂಗಾರಕದಿಂದ ... ಮೈಲುಘಾತ ... ಚಿಕಿತ್ಸೆ ... ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಲ್ಪಡುತ್ತಾ ... ಮೊಂದದೆ ವಿಧವಶರಾದರು ಇವರಿಗೆ 18 ವರ್ಷ ವಯಸ್ಸಿನ ಹೆಂಡತಿ ... ಇವರು ಕಳೆದ 7 ವರ್ಷಗಳಿಂದಲೂ ಯಾವ ಉದ್ಯೋಗವೂ ದೊರೆಯದೆ ... ಈಗಿನ ಕಷ್ಟರಿಯಸ್ಥಿತಿಯೋಗದಿಂದಾದರೂ ಉದ್ಯೋಗ ದೊರೆಯುವ ... ಸ್ಥಿತಿಯೂ ಇಲ್ಲದಿರುವುದರಿಂದ ಜೀವನಯಾತ್ರೆ ನಡೆಸಲು ಯತ್ನವಿಲ್ಲದೆ ... ತ್ಮಹತ್ಯೆಗೆ ಪ್ರಯತ್ನಿಸಿದನೆಂದು ಮ ... ವಾಕ್ಯದಲ್ಲಿ ತಿಳಿದರಂತೆ ... ಮೇಲೆ ಹೇಳಿದ ಕಾರಣವೇ ವಾಸ್ತವ್ಯವಾಗಿದ್ದಲ್ಲಿ ಬಹಳ ವಿಷಾದಕರವು ... ಇಂತಹ ಶೋಚನೀಯ ಪರಿಸ್ಥಿತಿಯ ನಿವಾರಣೆಗೆ ಪ್ರೌಢವಿದ್ಯಾಭ್ಯಾಸ ... ವ್ಯಾಮೋಹವನ್ನು ತಪ್ಪಿಸುವುದೇ ತಕ್ಕ ಉಪಾಯವು

ಕಳೆದ ಗುರುವಾರ ಮಧ್ಯಾಹ್ನ 1 ಘಂಟೆ ಸಮಯದಲ್ಲಿ ರಾಜಧಾನಿಯ ... ಸ್ಟೇಷನ್ನಿನಲ್ಲಿರುವ ಪುಸ್ತಕದಂಗಡಿಯಲ್ಲಿ ... ರಾಯರ 16 ವರ್ಷದ ಮಗನು ತನ್ನ ಮನೆಯೊಳಗೆ ಸಿಕ್ಕಿ ... ದು ಮೃತನಾದನು ಇವನು ... ಪುಸ್ತಕ ... ಅಂಗಡಿಗೆ ವಿಶೇಷವಾಗಿ ಹೋಗ ಬರುತ್ತಿದ್ದು ಒಂದು ದಿವಸ ಅಂಗಡಿಯವನು ತಾನು ಇಟ್ಟುಕೊಂಡಿದ್ದ ... ಪುಸ್ತಕಗಳಲ್ಲಿ ... ಕಳ್ಳತನವನ್ನು ಕಂಡು ಈ ಹುಡುಗನನ್ನು ವಿಚಾರಿಸಿದನು ಅವನ ... ಕಗಳನ್ನು ತಾನು ನೋಡಲಿಲ್ಲವೆಂದು ಹೇಳಲು ಅಂಗಡಿಯವನು ... ಬಿಟ್ಟುಕೊಂಡು ಪುಸ್ತಕವನ್ನು ತಂದುಕೊಡದಿದ್ದಲ್ಲಿ ಪೋಲೀಸಿಗೆ ... ನೆಂದು ಬೆದರಿಸಿದ್ದಲ್ಲದೆ ತಂದೆಗೆ ಹೇಳಿದನು ಆ ಹುಡುಗನು ... ಅಂಗಡಿಗೆ ಬರುವುದನ್ನು ಬಿಟ್ಟು ನಂತರ ... ಅಂಗಡಿಯವನು ನಿರ್ಧರಿಸಿ ತಂದೆತಾಯಿಗಳಿಗೆ ಪುನಃ ಹೇಳಿದನು ಅವರು ... ವಿಧವಾಗಿ ಕೇಳಿದರೂ ಹೇಳದೆ ಹೋಗಲು ಮಗನನ್ನು ಗದರಿಸಿ ... ದರು. ಹುಡುಗನು 1-2 ದಿವಸ ಊಟಮಾಡದೆ ಉಪವಾಸವಿದ್ದು ... ವಾರದ ದಿವಸ ಸ್ನಾನಸಂಧ್ಯಾವಂದನೆಯನ್ನು ಬಹಳ ನಿಷ್ಠೆಯಿಂದ ... ಊಟಮಾಡೆಂದು ತಾಯಿಯು ಎಷ್ಟು ಹೇಳಿದರೂ ಮಾಡದೆ ... ಕೊಠಡಿಯೊಳಕ್ಕೆ ಹೋದನು ಅಷ್ಟರಲ್ಲಿ ಅವರ ಬಂಧುವು ಮನೆಗೆ ... ಹುಡುಗನ ವಿಚಾರವನ್ನು ತಾಯಿ ಮಾತಿನಿಂದ ತಿಳಿದು ಕೊಠಡಿಯ ಬಾಗಿ ... ಲು ತಟ್ಟಿದನು ಅದು ಬರಲಿಲ್ಲವಾಗಿ ಒದೆದು ಒಡೆದುಹಾಕಿ ಒಳಗೆ ... ನೋಡುವಲ್ಲಿ ಹುಡುಗನು ಒಂದು ಎತ್ತರವಾದ ಕಾಲುಮಣೆಯ ... ನಿಂತು ಛತ್ತಿಗೆ ಹಗ್ಗದ ಒಂದು ಕೊನೆಯನ್ನು ಬಿಗಿದು ... ಒಂದು ಕೊನೆಯನ್ನು ಕುತ್ತಿಗೆಗೆ ಕಟ್ಟಿ ಕಾಲುಮಣೆಯನ್ನು ಕಾಲಿನಿಂದ ... ನೂಕಿ ನೇಣು ಹಾಕಿಕೊಂಡಿದ್ದುದನ್ನು ಕಂಡು ಕೂಡಲೆ ಹಗ್ಗವನ್ನು ಕತ್ತ ... ರಿಸಿ ದೇಹವನ್ನು ಕೆಳಗಿಳಿಸಿ ನೋಡುವಲ್ಲಿ ಸ್ಮೃತಿಯಿರಲಿಲ್ಲ ... ಕೈಕಾಲು ಬೆಚ್ಚಗಿದ್ದುದರಿಂದ ಆಸ್ಪತ್ರೆಗೆ ಸಾಗಿಸಿ ಪರೀಕ್ಷಿಸುವಲ್ಲಿ ... ಹೋಗಿದ್ದಿತು. ಅನಂತರ ಶವವು ಪರೀಕ್ಷಿಸಲ್ಪಟ್ಟು ಸಂಸ್ಕಾರಕ್ಕಾಗಿ ... ನವರಿಗೆ ಒಪ್ಪಿಸಲ್ಪಟ್ಟಿತು.

ಭಾರತವರ್ಷದಲ್ಲಿ ಬಂಗಾರದ ಗದ್ದಲ

ಕಳೆದ ವಾರದಲ್ಲಿ ... ಲಕ್ಷ ರೂ ಗಳ ಬಂಗಾರದ ... ಮಾರ್ಗವಾಗಿ ... ಪರದೇಶಕ್ಕೆ ಸಾಗಿಸಲ್ಪಟ್ಟಿದೆ.

ಪೆಷಾವರದಲ್ಲಿ ಬೆಂಕಿಯ ಅನಾಹುತ

ಪೆಷಾವರದ ... ಬೀದಿಯಲ್ಲಿ ಅಗ್ನಿಪ್ರಮಾದದಿಂದ 100 ಅಂಗಡಿ ಮನೆಗಳು ಸುಟ್ಟುಹೋದುವು.

ಸಿಂಹಾಕೃತಿಯ ಹಸುವಿನಕರು

ಬರೇಲಿಯಲ್ಲಿ ಒಂದು ಹಸು ಸಿಂಹದ ಮುಖವು ಮತ್ತು ದೇಹಾಕೃತಿಯ ಕರುವನ್ನು ಈಯಿತು ಅದು ಜನನವಾದ ಕೂಡಲೆ ಸತ್ತುಹೋಯಿತು

ಜವಹಾರಿಲಾಲರ ದೇಹಾರೋಗ್ಯ

ಪಂಡಿತ ಜವಹಾರಿಲಾಲರವರಿಗೆ ಕಠಿಣವಾಗಿ ಜ್ವರಬರುತ್ತಿರುವುದರಿಂದ ಅವರು ಡೆಹರಾಡೂನಿಗೆ ಸಾಗಿಸಲ್ಪಟ್ಟರು ಗೋಣಿಂದ ವಲ್ಲಭಪಂತರು ತೀಂಟುಜ್ವರದಿಂದ ನರಳುತ್ತಿರುವರು

ಟ್ರಾವನ್ಕೂರು ಮಹಾರಾಜರ ತಾಯಿ

ಸೀಮೆಗೆ ಪ್ರಯಾಣಮಾಡಿರುವ ಟ್ರಾವನ್ಕೂರು ಮಹಾರಾಜರವರ ತಾಯಿ ಮಹಾರಾಣಿಯವರು ವಿಮಾನವನ್ನು ಸುರಕ್ಷಿತವಾಗಿ ತಲುಪಿದರು ಮತ್ತು ಬರುವ ಜೂನ್ ತಾ|| 2 ರಲ್ಲಿ ಲಂಡನ್ ಪಟ್ಟಣವನ್ನು ಸೇರುವವರಾಗಿರುವರು

ಸ್ಕೂಲು ಕಟ್ಟಡಬಿದ್ದು ೩ ಮಕ್ಕಳು ಸತ್ತರು

ಟ್ರಾವನ್ಕೂರಿಗೆ ಸೇರಿದ ನಿಡುಮಂಗಾಡು ತಾಲ್ಲೂಕಿನಲ್ಲಿ ಒಂದು ಗ್ರಾಮ ಪಾಠಶಾಲೆಯಲ್ಲಿ ೬೦ ಮಕ್ಕಳು ಓದುತ್ತಿರುವಾಗ್ಗೆ ಗಾಳಿಮಿಶ್ರವಾದ ಮಳೆಯು ಒಂದು ಪಾಠಶಾಲೆಯ ಕಟ್ಟಡವು ಕುಸಿದುಬಿದ್ದಿತು ಇದರಿಂದ ೩ ಮಕ್ಕಳು ಕೂಡಲೆ ಸತ್ತರು 1೯ ಮಕ್ಕಳು ಅಪಾಯಹೊಂದಿದರು ಇವರಲ್ಲಿ ೮ ಮಕ್ಕಳು ಆಸ್ಪತ್ರೆಗೆ ಸಾಗಿಸಲ್ಪಟ್ಟರು

ದೋಣಿಯು ಮುಳುಗಿ ೮ ಮಂದಿ ಸತ್ತರು

ಜಮುನಾ ನದಿಯ ಮೇಲೆ 11 ಮಂದಿ ಪುರುಷರೂ ಸ್ತ್ರೀಯರೂ ಮಕ್ಕಳೂ ಒಂದು ದೋಣಿಯಲ್ಲಿ ಕುಳಿತು ಹೋಗುತ್ತಿರುವಾಗ್ಗೆ ದೋಣಿಯು ಒಂದು ಬಂಡೆಗೆ ತಾಕಿ ಒಡೆದು ಮಗುಚಿಕೊಂಡಿತು ಅದರೊಳಗಿದ್ದ ಪ್ರಯಾಣಿಕರಲ್ಲಿ 8 ಮಂದಿ ಜಲಸಮಾಧಿಯನ್ನು ಹೊಂದಿದರು ಉಳಿದ ಮೂವರು ಈಜಿಕೊಂಡು ಒಂದು ದಡ ಸೇರಿದರು

ರೊಟ್ಟಿಗಾಗಿ ಕೊಲೆ

ನಾಗಪುರಕ್ಕೆ ಸೇರಿದ ಪೇಠುಲ ಎಂಬಲ್ಲಿ ಕ್ಷಾಮ ವ್ಯಾಪ್ತವಾಗಿ ಒಬ್ಬ ಹೆಂಗುಸು ಕ್ಷುದ್ಬಾಧೆಯನ್ನು ಸಹಿಸಲಾರದೆ ಒಂದು ಚಿಕ್ಕ ಹುಡುಗಿಯು ತಿನ್ನುತ್ತಿದ್ದ ರೊಟ್ಟಿಯನ್ನು ಕಿತ್ತುಕೊಳ್ಳಲೆತ್ನಿಸಿದಾಗ ಆ ಹುಡುಗಿಯು ಕೊಡದೆ ಹೋಗಲಾಗಿ ಅವಳನ್ನು ಬಲವಾಗಿ ಹೊಡೆದಳು ಆ ಹುಡುಗಿಯು ಕೂಡಲೆ ಮೃತಳಾದಳು ಇದರಿಂದ ನಾಗಪುರದಲ್ಲಿ ಕ್ಷಾಮಬಾಧೆಯು ಎಷ್ಟು ಭಯಂಕರವಾಗಿದೆ ಎಂಬುದು ವ್ಯಕ್ತವಾಗುತ್ತದೆ

ಉದಕಮಂಡಲಕ್ಕೆ ವೈಸ್ರಾಯರಾಗಮನ

ಬರುವ ಜುಲೈ ತಿಂಗಳಲ್ಲಿ ಅಧಿಕೃತವಾದಂತೆ ವೈಸ್ರಾಯ ದಂಪತಿಗಳು ಆಕಾಶಯಾನದಲ್ಲಿ ಮೈಸೂರು ರಾಜಧಾನಿ ವರೆಗೆ ಪ್ರಯಾಣಮಾಡಿ ಅಲ್ಲಿಂದ ಮೋಟಾರು ಬಂಡಿಯಲ್ಲಿ ಉದಕಮಂಡಲಕ್ಕೆ ಹೋಗಿ ಅಲ್ಲಿ ಕೆಲ ದಿವಸಗಳವರೆಗಿರಲು ಯೋಚಿಸಿರುವುದಾಗಿ ತಿಳಿಯಬರುತ್ತದೆ ಹಾಗೆ ಬರುವುದಾದರೆ ಅವರ ಸ್ವಾಗತಕ್ಕೆ ರಾಜಧಾನಿಯಲ್ಲಿ ತಕ್ಕೇರ್ಪಾಟು ನಡೆಯುವುದು

ಪ್ರಪಂಚದಲ್ಲೆಲ್ಲ ಅತ್ಯಂತ ಭಾರವಾದ ಮನುಷ್ಯ

ಅಮೇರಿಕೆಯಲ್ಲಿ ಪ್ರಪಂಚದಲ್ಲಿರತಕ್ಕ ಎತ್ತರವಾದ ಮನುಷ್ಯರಿಗಿಂತಲೂ ಎತ್ತರವಾದ ಮನುಷ್ಯರಿರುವುದಾಗಿ ಈ ವರೆಗೆ ಪ್ರಸಿದ್ಧವಾಗಿದೆ ಈಗ ಅಲ್ಲಿ ಅತ್ಯಂತ ಭಾರವಾದ ಮನುಷ್ಯನಿರುತ್ತಾನೆ ಇವನು ಕ್ಯಾಲಿಫೋರ್ನಿಯಾ ವಾಸಸ್ಥನು ಇವನಿಗೆ 23 ವರ್ಷ ವಯಸ್ಸು ಇವನು 6 ಅಡಿ 1 ಅಂಗುಲ ಎತ್ತರವಿದ್ದು 786 ಪೌಂಡು ತೂಕವುಳ್ಳವನಾಗಿದ್ದಾನೆ ಇವನಷ್ಟು ಭಾರವಾದ ಮನುಷ್ಯನು ಪ್ರಪಂಚದ ಮತ್ತಾವ ಭಾಗದಲ್ಲೂ ಇಲ್ಲ ಮತ್ತು ಹಿಂದೆ ಯಾವಾಗಲೂ ಇರಲಿಲ್ಲ ಇಂಗ್ಲೆಂಡಿನೊಳಗೆ 1809 ರಲ್ಲಿ 739 ಪೌಂಡು ತೂಕವುಳ್ಳ ಮನುಷ್ಯನಿದ್ದನು ಒಂದು ಸರ್ಕಸ್ ಕಂಪನಿಯಲ್ಲಿ 330 ಪೌಂಡು ತೂಕವಿರುವ ಒಬ್ಬ ಹೆಂಗುಸಿರುತ್ತಾಳೆ.

ಲಾರ್ಡ್ ಇಂಚ್‌ಕೇಪರ ಮರಣ

ಲಾರ್ಡ್ ಇಂಚ್‌ಕೇಪರವರು ಕೆಲ ದಿವಸಗಳಿಂದ ಅಸ್ವಸ್ಥರಾಗಿದ್ದು ಮೋನಕೋ ಎಂಬ ಸ್ವಂತ ಹಡಗಿನಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ಹೃದ್ರೋಗದಿಂದ ಪ್ರಾಣಗತಿಯು ನಿಂತುಹೋಗಿ ಮೃತರಾದರು. ಇವರಿಗೆ 79 ವರ್ಷ ವಯಸ್ಸಾಗಿದ್ದಿತು ಇವರು ಬಹಳ ಸಾಮಾನ್ಯ ಸ್ಥಿತಿಯಲ್ಲಿದ್ದವರು ಬುದ್ಧಿಚಾತುರ್ಯದಿಂದಲೂ ಧೈರ್ಯಸಾಹಸಗಳಿಂದಲೂ ಹಡಗಿನ ಯಜಮಾನರಾದರಲ್ಲದೆ ಕಳೆದ 30 ವರ್ಷಗಳಿಂದ ಬ್ರಿಟಿಷ್ ರಾಜಕೀಯದಲ್ಲಿ ಬಹಳ ಪ್ರಮುಖರಾಗಿದ್ದು ಖ್ಯಾತಿಯನ್ನು ಪಡೆದರು ಮತ್ತು 1923–24 ರಲ್ಲಿ ಭಾರತ ಪ್ರಭುತ್ವದ ವೆಚ್ಚವನ್ನು ಕಡಿಮೆಮಾಡಲೇರ್ಪಟ್ಟಿದ್ದ ಕಮಿಟಿಯ ಅಧ್ಯಕ್ಷರಾಗಿದ್ದು ಭಾರತ ... ದಾಯವನ್ನು ಸಹಿಸಿದ್ದರು ... ಲಂಡನ್ನಿನಲ್ಲಿ ... ಪ್ರಕಾಶಿಸಿದ ... ಚರಿತ್ರೆಯು ... ಇವರಿಗೆ ಸ್ಮೃತಿಗೆ ಪಾತ್ರವಾಗಿದ್ದಾರೆ

ಗೋವಿನಹಣ್ಣು ಬಹಳ ಬೆಲೆಗೆ ಮಾರಲ್ಪಟ್ಟಿವೆ

ಬಹಳ ಉತ್ಕೃಷ್ಟವಾದ ಬಲಿತ ಬಾದಾಮಿ ಮಾವಿನ ಕಾಯಿಗಳು ಲಂಡನ್ ಪಟ್ಟಣಕ್ಕೆ ಹಡಗಿನಲ್ಲಿ ಬಹಳ ಎಚ್ಚರಿಕೆಯಿಂದ ಕಳುಹಿಸಲ್ಪಟ್ಟುವೆಂದೂ, ಅವು ಸುರಕ್ಷಿತವಾಗಿ ತಲುಪಿದ್ದು ಚಕ್ರವರ್ತಿಯವರಿಗೊಪ್ಪಿಸಲ್ಪಡುವುವೆಂದೂ ಹಿಂದೆ ತಿಳಿಸಿದ್ದೆವಷ್ಟೆ. ಹಡಗಿನಲ್ಲಿ ಕೆಡದಿರಲು ಮಂಜಿನಗಡ್ಡೆಗಳ ಮಧ್ಯೆ ಇಟ್ಟು ವಿಶೇಷ ಎಚ್ಚರಿಕೆಯಿಂದ ಸಾಗಿಸಲ್ಪಟ್ಟಿದ್ದರ ಮೇಲೆ ಕಾಯಿಗಳು ಕೆಟ್ಟಿರಲಿಲ್ಲವಾದುದರಿಂದ ಅವುಗಳಲ್ಲಿ ಪಕ್ವವಾಗಿಯೂ ಶ್ರೇಷ್ಠವಾಗಿಯೂ ಇದ್ದವುಗಳು ಬೊಂಬಾಯಿನ ಫಲವರ್ತಕರ ಏನಾಗಿ ದೊರೆಯುವಂಗೊಪ್ಪಿಸಲ್ಪಟ್ಟುವು. ಅವರು ಅವನ್ನು ಸೇವಿಸಿ ಪರಮಾನಂದವನ್ನು ಪ್ರದರ್ಶಿಸಿದರಂತೆ. ಹಣ್ಣುಗಳನ್ನು ಸೇವಿಸಿದ ಇತರರೂ ಆನಂದಪರವಶರಾಗಿ ಅವುಗಳನ್ನು ಯಥೇಷ್ಟವಾಗಿ ತರಿಸಿಕೊಡಬೇಕೆಂದು ಕೇಳುತ್ತಿರುವರಂತೆ. ಇನ್ನು ಮೇಲೆ ಈ ಹಣ್ಣುಗಳು ವಿಶೇಷವಾಗಿ ಕಳುಹಲ್ಪಡುವಂತಾಗಿ ವ್ಯಾಪಾರಗಾರರಿಗೆ ಬಹಳ ಲಾಭವು ಬರುವುದು ಮತ್ತು ಈ ದೇಶಿಯರಿಗೆ ಪ್ರಿಯವಾಗುವುದು

ಪೆ ಮೆರ್ಸಿಂಗಿನಲ್ಲಿ ಅಡಿಗೆಯಿಲ್ಲ

ಎರಡ್ಮೂವಂತರಿಗೂ ಸಹ ಮೂಢಭಕ್ತಿಯು ಇನ್ನೂ ಹೋಗಿಲ್ಲವೆಂಬುದಕ್ಕೆ ಮೆರ್ಮಸಿಂಗಿನಲ್ಲಿ ಒಂದು ವಿಚಿತ್ರ ಕಥೆಯು ಜನರೊಳಗೆ ಹರಡಿ ಕಳೆದ ಸೋಮವಾರದಿಂದಲೂ ಅಡಿಗೆ ಮಾಡಲ್ಪಡದಿರುವುದು ನಿದರ್ಶನವಾಗಿದೆ ಒಂದು ಸೋಮವಾರ ಒಬ್ಬ ಹೆಂಗುಸು ಹುಗೋಲಿನವನ ಬಳಿಗೆ ಹೋಗಿ ನದಿಯ ಆಚೆ ದಡಕ್ಕೆ ತನ್ನನ್ನು ಕರೆದುಕೊಂಡು ಹೋಗಿ ಬಿಡಬೇಕೆಂದು ಬಹಳವಾಗಿ ಕೇಳಿಕೊಂಡಳು ಅದರಮೇಲೆ ಅವನು ಆಕೆಯನ್ನು ದೋಣಿಯಲ್ಲಿ ಕುಳ್ಳಿರಿಸಿಕೊಂಡು ನದಿಯ ಮಧ್ಯಭಾಗಕ್ಕೆ ಬಂದಾಗ್ಗೆ 7 ಮಂದಿ ಕನ್ಯಾಸ್ತ್ರೀಯರು ಅಕಸ್ಮಾತ್ತಾಗಿ ಹರಿಗೋಲಿನಿಂದ ಮೇಲಕ್ಕೆ ಬಂದರು ಹರಿಗೋಲಿನವನು ಅವರನ್ನು ಕಂಡು ಭಯಗ್ರಸ್ತನಾಗಲು ಆ ಕನ್ಯೆಯರು ನಾವು ವಾಯುದೇವತೆಗಳು, ನಮ್ಮಲ್ಲಿ ಪ್ರತಿಯೊಬ್ಬರೂ ಒಂದೊಂದು ಸೋಮವಾರ ಒಂದು ಪ್ರಚಂಡಗಾಳಿಯನ್ನು ಹುಟ್ಟಿಸಿ ಪ್ರಾಣ ಮತ್ತು ಆಸ್ತಿಗಳನ್ನು ನಾಶಪಡಿಸುವೆವು ಎಂದು ಹೇಳಿದರು ಆ ಹರಿಗೋಲಿನವನು ಅದನ್ನು ಕೇಳಿ ಮತ್ತಷ್ಟು ಭಯಗ್ರಸ್ತನಾದುದನ್ನು ಕಂಡು ಸೋಮವಾರ ಯಾರು ಮನೆಗಳಲ್ಲಿ ಅಡಿಗೆಯನ್ನು ಮಾಡದೆ ಉಪವಾಸವಿರುವರೋ ಅವರಿಗೆ ಯಾವ ಬಾಧೆಯನ್ನೂ ಕೊಡದೆ ಅವರನ್ನು ಸಂರಕ್ಷಿಸುತ್ತೇವೆಂದು ಅಭಯವನ್ನಿತ್ತರು. ಅದಕ್ಕೆ ಸರಿಯಾಗಿ ಕಳೆದ ವಾರದ ಸೋಮವಾರ ಮೆರ್ಮಸಿಂಗಿನಲ್ಲಿ ಪ್ರಳಯಕಾಲದ ಗಾಳಿ ಮಳೆ ಬಂದುದು ಆ ಕನ್ಯಾಸ್ತ್ರೀಯರು ಹೇಳಿದುದರ ಫಲವಾಗಿರಬೇಕೆಂದು ಭಾವಿಸಲ್ಪಟ್ಟಿದೆ.

ಸರ್ಪವು ಕ್ಷೇತ್ರಯಾತ್ರೆ ಮಾಡಿದುದು

ತಿನ್ನವೆಲ್ಲಿ ಡಿಸ್ಟ್ರಿಕ್ಟಿಗೆ ಸೇರಿದ ತಿರುಚಂದೂರಿನ ದೇವಾಲಯದಲ್ಲಿ ವೈಶಾಖಮಾಸೋತ್ಸವವು ಬಹಳ ವೈಭವದಿಂದ ನಡೆಯುವುದು ಆ ಕಾಲದಲ್ಲಿ ನಾನಾ ಕಡೆಯಿಂದ ಯಾತ್ರಾರ್ಥಿಗಳು ಕಾವಡಿ ಸೇವೆಯನ್ನು ತೆಗೆದುಕೊಂಡು ಹೋಗುವರು. ಈಸಲ ವೈಶಾಖಮಾಸೋತ್ಸವಕ್ಕೆ ಮಧುರೆಯಿಂದ ದೈವಭಕ್ತ ದಂಪತಿಗಳು ಮತ್ಸ್ಯಕಾವಡಿಯನ್ನು ತೆಗೆದುಕೊಂಡುಹೋಗಲು ನಿಶ್ಚಯಿಸಿದ್ದರು ಆ ವೇಳೆ ಸರ್ಪಕಾವಡಿಯನ್ನು ತೆಗೆದುಕೊಂಡು ಹೋಗುವಂತೆ ಒಂದು ರಾತ್ರಿ ಗಂಡನಿಗೆ ಸ್ವಪ್ನವಾಯಿತು. ಅವನು ಇದು ದೇವರಾಜ್ಞೆಯೆಂದು ನಂಬಿದನು ಆದರೆ ಸಜೀವ ಸರ್ಪವು ತನಗೆ ದೊರಕುವುದು ಹೇಗೆಂದು ಯೋಚಿಸುತ್ತಿರುವಲ್ಲಿ ಪೆರುಮಂಗಲವೆಂಬ ಗ್ರಾಮಕ್ಕೆ ಹೋದರೆ, ಅಲ್ಲಿ ಒಂದು ಆಲದ ಮರದಲ್ಲಿ ಸರ್ಪವು ನಿನ್ನನ್ನು ನಿರೀಕ್ಷಿಸಿಕೊಂಡಿರುತ್ತದೆಂದು ಪುನಃ ಸ್ವಪ್ನವಾಯಿತು ಅವನು ಅದೇ ಪ್ರಕಾರ ಆ ಗ್ರಾಮಕ್ಕೆ ತನ್ನ ಹೆಂಡತಿಯ ಸಮೇತ ಹೋದನು. ಇವನು ಬಂದ ವಿಚಾರವು ಆ ಗ್ರಾಮಸ್ಥರಿಗೆ ಹೇಗೋ ತಿಳಿದು ಅವರು ಬಂದು ಆ ಆಲದ ಮರದ ಸುತ್ತ ಗುಂಪುಕೂಡಿದರು. ಆ ದಂಪತಿಗಳು ಸರ್ಪದ ಆಗಮನವನ್ನು ಪ್ರಾರ್ಥಿಸುತ್ತ ಬಹಳ ಹೊತ್ತಿನವರೆಗೆ ನಿಂತುಕೊಂಡಿರುವಲ್ಲಿ ಬೆಳಗಿನ ೮ ಘಂಟೆಯ ಸಮಯದಲ್ಲಿ ಒಂದು ಸುಂದರವಾದ ನಾಗರಹಾವು ಮರದಿಂದ ನಿಧಾನವಾಗಿ ಇಳಿದು ಒಂದು ಕಾವಡಿಯ ಬಳಿ ನಿಂತಿತು. ಆ ದಂಪತಿಗಳು ಕೆರೆಗೆ ಹೋಗಿ ಸ್ನಾನಮಾಡಿ ಮಡಿಯನ್ನುಟ್ಟುಕೊಂಡು ಬರುವಷ್ಟರಲ್ಲಿ ಸರ್ಪವು ಮರದ ಪೊಟ್ಟರೆಯೊಳಕ್ಕೆ ಹೋಗಿ ಸೇರಿಕೊಂಡಿತು ಸ್ನಾನಮಾಡಿಕೊಂಡು ಬಂದು ಕಾವಡಿಯ ಹಿಂಬದಿಯ ಬಾಯಿಯನ್ನು ತೆರೆದು ಹಾವು ಬಂದು ಅದರೊಳಗೆ ಸೇರುವುದನ್ನು ನಿರೀಕ್ಷಿಸಿಕೊಂಡು ನಿಂತರು ಆದರೆ ಅದು ಬಹಳ ಹೊತ್ತಿನವರೆಗೂ ಬಾರದೆ ಹೋಗಲು ಗಂಡನು ಹಾವನ್ನು ಪೊಟ್ಟರೆಯಿಂದ ತೆಗೆದು ಡಬ್ಬಿಯೊಳಕ್ಕೆ ಬಿಟ್ಟು ಬಾಯನ್ನು ಮುಚ್ಚಿದನು ನೆರೆದಿದ್ದ ಜನರು ಹೋಗಿ ಆಶ್ಚರ್ಯ ಚಕಿತರಾದರು. ಈಗುವಾಯಿ ಆ ದಂಪತಿಗಳು ಸರ್ಪಕಾವಡಿಯನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋಗಿ ಅಲ್ಲಿ ಕಾವಡಿಯನ್ನು ಬಿಚ್ಚಿದರು ಸರ್ಪವು ಹೊರಗೆ ಬಂದು ದೇವಾಲಯದ ಗೋಪುರವನ್ನು ಹತ್ತಿ ಮಾಯವಾಯಿತು ಎಂದು ಪ್ರತ್ಯಕ್ಷದರ್ಶಿಯು ಒಂದು ಪತ್ರಿಕೆಗೆ ಬರೆದಿರುತ್ತಾನೆ.

ಒಬ್ಬ ಕನ್ಯೆಗೆ ೧೦೦೦ ವರ

ಕೆಂಟ್ ಎಂಬ ದೇಶದಲ್ಲಿ ಸಿಬಿಲ್ ಜೋನ್ಸ್ ಎಂಬ ಕನ್ಯೆ ಇರುತ್ತಾಳೆ. ಇವಳು ಉದ್ದವಾಗಿಯೂ ಕೋಮಲವಾಗಿ ದ್ದು ಕರುಗಳು, ಕಾಲುಗಳು, ನೇತ್ರಗಳು ಬಿಳುಪಾಗಿಯೂ, ಕೇಶವು ಹೊಂಬಣ್ಣವಾಗಿಯೂ ಬಾಯಿ ಚಂದವಾಗಿಯೂ ಇರುತ್ತವೆ. ಬೇಸಾಯಗಾರರು, ಶ್ರೀಮಂತರು, ಪಾದ್ರಿಗಳು ಮತ್ತು ಕಸಬುದಾರರು ತನ್ನನ್ನು ಮದುವೆಯಾಗುವರೋ ಎಂದು ಬೇರೆ ಬೇರೆ ಪ್ರಾಂತಗಳಿಂದಲೂ ಈಕೆಗೆ ಕಾಗದಗಳನ್ನು ಬರೆಯುತ್ತಿರುವರು. ಇದಕ್ಕೆ ಈಕೆಯು ವಿವಾಹ ಮಾಡಿಕೊಳ್ಳುವುದಕ್ಕೆ ನಿರಾಕರಿಸುವಳು. "ಆಗ್ಗೆ ೩ ವರ್ಷಗಳ ಹಿಂದಿನ ಸ್ನೇಹಿತನೋ [illegible] ಆಗಿದ್ದನು ಆತ ಒಬ್ಬ ಮನುಷ್ಯನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದನು ಮತ್ತು ಅವನೂ ನನ್ನನ್ನು ಪ್ರೀತಿಸುತ್ತಿದ್ದನು. ಪ್ರಪಂಚದಲ್ಲೆಲ್ಲ ನಾನೇ ಅತ್ಯಂತ ಸುಖಿಯಾದ ಬಾಲೆಯಾಗಿದ್ದೆನು. ಆ ಕಾಲ ಕಳೆದು ಹೋಯಿತು. ಈಗ ನಾನೆಂದಿಗೂ ಮದುವೆಯಾಗುವುದಿಲ್ಲ' ಎಂದು ಹೇಳಿದಳು. ಈ ಜೋನ್ಸ್ ಕನ್ಯೆಗೆ ಕಳೆದ ೩ ವರ್ಷಗಳಲ್ಲಿ 1000 ಕ್ಕಿಂತಲೂ ಹೆಚ್ಚಾಗಿ ಜನರು ಈಕೆಯನ್ನು ಮದುವೆಯಾಗಲಿಷ್ಟಪಟ್ಟು ಬರೆದಿರುವರು. ' ಅವುಗಳಲ್ಲಿ ಕೆಲವು ಬಹಳ ಆಭಾಸವಾಗಿದ್ದುದರಿಂದ ಅವುಗಳನ್ನು ಸುಟ್ಟುಬಿಟ್ಟೆನು ಕೆಲ ವರ್ತಮಾನಪತ್ರಿಕೆಗಳ ಪ್ರಕಟನೆಯಲ್ಲಿ ಕೊಟ್ಟಿರುವ ನನ್ನ ಭಾವಚಿತ್ರವನ್ನು ನೋಡಿ ಅನೇಕರು ವಾಸಿ ಬರೆದಿರುತ್ತಾರೆ. ಅಮೇರಿಕೆಯ ಒಬ್ಬ [illegible] ನನ್ನನ್ನು [illegible] ಪತ್ರೇ ಕಾಗದಗಳನ್ನು ಬರೆಯುತ್ತಿದ್ದಾನೆ ತನ್ನ ಭಾವಚಿತ್ರವನ್ನೂ ಕಳುಹಿಸಿಕೊಟ್ಟು ತನ್ನ ಮನೆಯನ್ನು ನನಗಾಗಿ ಬಿಟ್ಟಿರುತ್ತೇನೆಂದು ಪ್ರತಿಯೊಂದು ಕಾಗದದಲ್ಲೂ ತಿಳಿಸುತ್ತಿದ್ದಾನೆ. ಹಂಗೇರಿಯವನಾದ ಒಬ್ಬ ಶ್ರೀಮಂತನು ಮೋಹಕರವಾದ ಕಾಗದವನ್ನು ತಿಂಗಳೊಂದಾವೃತ್ತಿ ಬರೆಯುತ್ತಿರುವನು ನಾನು ಮಾತ್ರ ಒಂದಕ್ಕೂ ಉತ್ತರವನ್ನು ಕೊಟ್ಟಿಲ್ಲ. ಆದರೂ ಬರೆಯುತ್ತಿದ್ದಾನೆ. ಸಿಕ್ಕಗಟ್ಟಲೆಯ ಕೆಲಸವನ್ನು ಪೂರೈಸಿಕೊಂಡು ಮನೆಗೆ ಹೋಗಿ ಸಾಯಂಕಾಲದ ವೇಳೆ ತಾಯಿಯೊಂದಿಗೆ ಕುಳಿತುಕೊಂಡು ಗ್ರಾಮಾಫೋನನ್ನು ಕೇಳಿ ಅಥವಾ ಪುಸ್ತಕ ಓದಿ ಅಥವಾ ಸಂಗೀತವನ್ನು ಪಾಡಿ ಕಾಲವನ್ನು ಬಹಳ ಆನಂದದಿಂದ ಕಳೆಯುತ್ತಿರುವೆನು" ಎಂದು ಹೇಳುತ್ತಾಳೆ. ಪ್ರಪಂಚದಲ್ಲೆಲ್ಲ ಈಕೆಯ ಭಾವಚಿತ್ರದಷ್ಟು ಹೆಚ್ಚಾಗಿ ಮತ್ತಾರ ಭಾವಚಿತ್ರವೂ ತೆಗೆಯಲ್ಪಟ್ಟಿಲ್ಲ. 1928 ರಿಂದ ಈವರೆಗೆ ಈಕೆಯ ಭಾವಚಿತ್ರಗಳು 10,000 ದ ವರೆಗೆ ತೆಗೆಯಲ್ಪಟ್ಟಿವೆ ಮತ್ತು ಈಕೆಯ ಮುಖಭಾವವು ನೂರಾರು ಒಗ್ಗಾದ ಮಾಸಪುಸ್ತಕಗಳ ಮುಖಪತ್ರದ ಮೇಲೆ ಮುದ್ರಿಸಲ್ಪಟ್ಟಿದೆ.

ದೀರ್ಘಾಯುಸ್ಸು.

ದೀರ್ಘಾಯುಸ್ಸೆಂದರೆ ಅದು ಎಷ್ಟು ವರ್ಷ ಬದುಕಿಯುಳ್ಳದ್ದು ಎಂಬುದಾಗಿ ವಿಚಾರಪರರು ಹೇಳುವರು. ಪೂರ್ವಕಾಲದಲ್ಲಿ ಅನೇಕರು ಅನೇಕ ನೂರು ವರ್ಷಗಳು ಬದುಕಿದರೆಂಬುದಾಗಿ ಕೆಲವು ಗ್ರಂಥಗಳಲ್ಲಿ ಬರೆಯಲ್ಪಟ್ಟಿರುವುದು. ಇವು ಎಷ್ಟರ ಮಟ್ಟಿಗೆ ನಿಜವೋ ಹೇಳುವುದಕ್ಕಾಗುವುದಿಲ್ಲ. ಆದರೆ ಕೆಲವು ರಿಕಾರ್ಡುಗಳನ್ನು ಪರಿಶೀಲಿಸಿದರೆ ಬಹುಕಾಲ ಬದುಕಿದವರ ಚರಿತ್ರೆಯು ಗೊತ್ತಾಗುತ್ತದೆ. ಸಾವಿರಾರು ಜನರು 100 ವರ್ಷಗಳ ಮೇಲೆ 110 ವರ್ಷಗಳ ವರೆಗೂ ಬದುಕಿದ್ದರು. 60 ಜನರು 110 ರಿಂದ 120 ರ ವರೆಗೂ ಬದುಕಿದ್ದರು. 29 ಜನರು 120 ರಿಂದ 130 ರ ವರೆಗೂ ಬದುಕಿದ್ದರು. 16 ಜನರು 130 ರಿಂದ 140 ರ ವರೆಗೂ ಬದುಕಿದ್ದರು. ೬ ಜನರು ೧೪೦ ರಿಂದ ೧೫೦ ರ ವರೆಗೂ ಬದುಕಿದ್ದರು. ಒಬ್ಬ ಮನುಷ್ಯನು ೧೮೫ ವರ್ಷಗಳ ವರೆಗೂ ಬದುಕಿದ್ದನು. ಇದು ಯೂರೋಪ್ ಖಂಡದಲ್ಲಿ ಸರಕಾರದ ಲೆಕ್ಕದಿಂದ ಗೊತ್ತುಮಾಡಲ್ಪಟ್ಟಿರುವುದು. ರಷ್ಯಾ ದೇಶದಲ್ಲಿ ಹೆಚ್ಚು ವರ್ಷ ಬದುಕಿದವರ ಚರಿತ್ರೆಯು ಗೊತ್ತುಮಾಡಲ್ಪಟ್ಟಿರುವುದು. ಆ ದೇಶದಲ್ಲಿ ೧೫೦ ರಿಂದ ೧೬೦ ರ ವರೆಗೂ ೩೫೦ ಜನರು ಬದುಕಿದ್ದರೆಂದು ೧೮೩೦ ನೆಯ ಇಸವಿಯಲ್ಲಿ ತೆಗೆದ ಲೆಕ್ಕಗಳಿಂದ ಗೊತ್ತಾಗುತ್ತದೆ. ಇಂಗ್ಲೆಂಡ್ ಮತ್ತು ವೇಲ್ಸ್ ಪ್ರಾಂತ್ಯಗಳಲ್ಲಿ ೭೦೦ ಜನರು ೧೮೩೦ರಲ್ಲಿ ೧೦೦ ವರ್ಷದ ವರೆಗೂ ಬದುಕಿದ್ದರೆಂದು ಗೊತ್ತಾಗುತ್ತದೆ. ಬ್ರಿಟಿಷ್ ರಾಜ್ಯದಲ್ಲಿ ೧೫೦ರಿಂದ ೩೭೦ ವಯಸ್ಸಿನ ವರೆಗೂ ಬದುಕಿದವರ ಚರಿತ್ರೆಯು "ಹೆರಾಲ್ಡ್ - ಹೆರಾಲ್ಡ್ ಆಫ್ ಬ್ರಿಟನ್" ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿರುವುದು. ಅವರ ಪೈಕಿ ೨೯ ಜನರು ೧೫೦ ವರ್ಷಗಳ ವರೆಗೂ ಬದುಕಿದ್ದರು. ೩೦ ಜನರು ೧೨೦ ವರ್ಷಗಳು ಬದುಕಿದ್ದರು. ೧೦೮ ಜನರು ೧೦೪ರ ಮೇಲೆ ೧೧೦ ವರ್ಷಗಳ ವರೆಗೂ ಬದುಕಿದ್ದರು. ಜಮೈಕ ಎಂಬ ಸ್ಥಳದಲ್ಲಿ ೫ ಜನರು ೧೨೦ ರಿಂದ ೧೫೦ ರ ವರೆಗೂ ಬದುಕಿದ್ದರು. ಪೆನ್ಸಿಲ್ವೇನಿಯಾ ಎಂಬ ಸ್ಥಳದಲ್ಲಿ ಒಬ್ಬ ಮನುಷ್ಯನು ೧೬೦ ವರ್ಷ ಬದುಕಿದ್ದನು. ಅಮೇರಿಕ ದೇಶದ ಜನಗಳು ಸಾಧಾರಣವಾಗಿ [illegible] ಆಚರಣೆಗೆ ಬರುವದಕ್ಕಿಂತ ಮುಂಚೆ ಸರಾಸರಿ ೧೨೨ ವರ್ಷ ಬದುಕುತ್ತಿದ್ದರು. ಲೈವರ್ ಕೆನ್ ಎಂಬುವನು ೧೫೦ ವರ್ಷ ಬದುಕಿದ್ದನು. ಥಾಮಸ್ ಫಾರ್ ಎಂಬುವನು ೧೫೨ ವರ್ಷ ಬದುಕಿದ್ದನು. ಡಾಯ ಸ್ಕಟ್ ಎಂಬುವನು ೧೬೩ ವರ್ಷ ಬದುಕಿದ್ದನು. ಹೆನ್ರಿ ಜೆಂಕಿನ್ಸ್ ಎಂಬುವನು ೧೬೯ ವರ್ಷ ಬದುಕಿದ್ದನು. ಜಾನ್ ರೋವೆನ್ ಎಂಬುವನು ೧೭೨ ವರ್ಷ ಬದುಕಿದ್ದನು. ಪೀಟರ್ ಜೋರ್ಟನ್ ಎಂಬುವನು ೧೮೫ ವರ್ಷ ಬದುಕಿದ್ದನು. ಥಾಮಸ್ ಕ್ಯಾನ್ ಎಂಬುವನು ೨೦೭ ವರ್ಷ ಬದುಕಿದ್ದನು. ನ್ಯೂ ಮೈಗಿನ್ ಎಂಬುವನು ೩೭೦ ವರ್ಷ ಬದುಕಿದ್ದನು. ಈ ರೀತಿಯಲ್ಲಿ ಆರೋಗ್ಯಶಾಸ್ತ್ರವನ್ನು ಬರೆದಿರತಕ್ಕ ಕೆಲವು ಗ್ರಂಥಕರ್ತರು ಬರೆದಿರುತ್ತಾರೆ. ಹೀಗೆ ದೀರ್ಘವಾದ ಆಯುಸ್ಸನ್ನು ಹೊಂದಿದ್ದವರು ಆಹಾರ ವಿಹಾರಗಳಲ್ಲಿ ಹೇಗೆ ಕ್ಲಿಷ್ಟವಾಗಿದ್ದರೋ ಬಾಲ್ಯಕ್ಕೆ ಹೇಗೆ ಗುರಿಯಾಗುತ್ತಿರಲಿಲ್ಲವೋ ಜಿತೇಂದ್ರಿಯರಾಗಿ ಅರಿಷಡ್ವರ್ಗಗಳನ್ನು ಹೇಗೆ ಹತೋಟಿಯಲ್ಲಿಟ್ಟುಕೊಂಡಿದ್ದರೋ ಹೇಗೆ ಶಾಂತಿಯೆಂಬ ಸಾಗರದಲ್ಲಿ ಸದಾ ವಿಹರಿಸುತ್ತಿದ್ದರೋ ಕೇವಲ ತೃಪ್ತರಾಗಿ ಯಾರಿಗೂ ದ್ರೋಹವಾದದೆ ತಮ್ಮ ಇಷ್ಟಾರ್ಥಸಿದ್ಧಿಯನ್ನು ಹೇಗೆ ಸಂಪಾದಿಸಿಕೊಳ್ಳುತ್ತಿದ್ದರೋ ಅವುಗಳನ್ನೆಲ್ಲಾ ನಿರೂಪಿಸಿ, ದೀರ್ಘಾಯುರಾರೋಗ್ಯಗಳಿಗೆ ಪುರುಷಾರ್ಥ ಪ್ರಾಪ್ತಿಗೂ ಪರೋಪಕಾರ ಪರಾಯಣತೆಯೂ ಪರ ಸೇವೆಯಲ್ಲಿ ಪರಿಶ್ರಮವೂ ಹಿತವೂ ಜಗದೀಶ್ವರನ ಧ್ಯಾನಕ್ಕೆ ಸಮಾನವಾದ [illegible] ಯಾವ [illegible] ಅನುಕೂಲಗಳಿವೆ ಎಂದು [illegible] ಉಪದೇಶವನ್ನು ಮಾಡುತ್ತಾರೋ ಅಂಥವರಿಗೆ ಮಾತ್ರ ದೀರ್ಘಾಯುಸ್ಸು ಸಿಕ್ಕಿ ಆಧ್ಯಾತ್ಮ [illegible] ಅತಿ ಸನಾತನ [illegible] ಯಾವ [illegible] ಅವರಿಗೆ ದೀರ್ಘಾಯುಸ್ಸು [illegible] ರೋಗಗಳು ಹೇಗೆ ಉತ್ಪನ್ನವಾಗುವವೋ ಈ ವಿಷಯಗಳನ್ನೆಲ್ಲಾ ಆರೋಗ್ಯ ಶಾಸ್ತ್ರಗಳಲ್ಲಿ ನಿರೂಪಿಸಲಾಗಿದೆ [illegible] ಯುಗಧರ್ಮದಲ್ಲಿ [illegible] ಯುಗಕ್ಕೆ ಸರಿಯಾಗಿ ಆಯುಸ್ಸು [illegible] ಆರೋಗ್ಯವೂ [illegible] ತೆಗೆದುಕೊಳ್ಳಲಾಗುವುದು. ಆದರೆ ದೀರ್ಘಾಯುಸ್ಸಿನ [illegible] ಆರೋಗ್ಯ ಐಶ್ವರ್ಯಾದಿ ಗುಣಗಳನ್ನು ಹೊಂದಿ ಪರೋಪಕಾರ ಪರಾಯಣತೆ [illegible] ಹೆಚ್ಚಿ [illegible] ಅದು ಕ್ಷೀಣವಾಗುವುದು. ಬಾಲ್ಯವಿವಾಹದವರು ಪರಾಧೀನರಾಗುವ ಇದುವರೆಗೆ ಆಯುಸ್ಸು ಕೊಟ್ಟಿಗೆ ಸಾಕು. ಅನಂತರ ಬದುಕಿರುವುದಕ್ಕೆ ನರಕಕ್ಕೂ ವ್ಯತ್ಯಾಸವೇನೂ ಇರುವುದಿಲ್ಲ. ಯಾರು ವರ್ಣಾಶ್ರಮ ಧರ್ಮಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳುವರೋ ಅವರಿಗೆ ನ್ಯಾಯಿಕವಾಗಿ ದೀರ್ಘಾಯುಸ್ಸೂ ಆರೋಗ್ಯವೂ ಲಭ್ಯವಾಗುವುವು. ಶಾರೀರಕ ಧರ್ಮಶಾಸ್ತ್ರ ಉಲ್ಲಂಘನರೂಪವಾದ ಪಾಪಗಳು ಅನೇಕವಾಗಿರುತ್ತವೆ. ಯಾರು ಈ ಪಾಪಗಳನ್ನು ಮಾಡುತ್ತಿಲ್ಲವೋ ಅವರಿಗೆ ದೀರ್ಘಾಯುರಾರೋಗ್ಯ ಐಶ್ವರ್ಯಗಳು ಲಭ್ಯವಾಗುವುವು.

ರಾ ಬ

ಮೈಸೂರು ಸಿಟಿ ಮುನಿಸಿಪಲ್ ಆಫೀಸ್,
ಮೈಸೂರು
ತಾ|| 28-5-1932

ಪ್ರಸಿದ್ಧಪತ್ರಿಕೆ.

ಮೈಸೂರು ಸಿಟಿ ಮುನಿಸಿಪಲ್ ಆಡಳಿತಕ್ಕೆ ಒಳಪಟ್ಟ ಸೂಯೆಜ್ ಫಾರಂನಲ್ಲಿರುವ ರಾಸುಗಳಿಗೆ 1932 ನೇ ಇಸವಿ ಜುಲೈ 1ನೇ ತಾರೀಖಿನ ಬಾಬಾಯ್ತು 1933 ನೇ ಇಸವಿ ಜೂನ್ 30ನೇ ತಾರೀಖಿನ ವರೆವಿಗೆ ಹುರಳಿ, ಹುಲ್ಲು, ಹಿಂಡಿ ವಗೈರೆ ಸಪ್ಲೈ ಮಾಡತಕ್ಕವರು 10-6-1932 ನೇ ತಾರೀಖಿನ ಒಳಗಾಗಿ ಟೆಂಡರನ್ನು ಮುನಿಸಿಪಲ್ ಹೆಲ್ತ್ ಆಫೀಸರವರಲ್ಲಿ ಸೀಲ್ ಮಾಡಿದ ಕವರುಗಳಲ್ಲಿ ಕೊಡಬಹುದು

ಹೆಚ್ಚಿಗೆ ವಿಚಾರವನ್ನು ತಿಳಿಯಲು ಅಪೇಕ್ಷಿಸುವವರು ಆಫೀಸ್ ಟೈಮಿನ ವೇಳೆಯಲ್ಲಿ ಹೆಲ್ತ್ ಆಫೀಸಿನಲ್ಲಿ ಬಂದು ತಿಳಿದುಕೊಳ್ಳಬಹುದು

(Sd.) T. G. RAMA IYER,
President

ಹೊಳೆನರಸೀಪುರದ ಟವರ್ ಮುನಿಸಿಪಲ್ ಆಫೀಸಿನಿಂದ—

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ— ಈ ಮುನಿಸಿಪಾಲಿಟಿಯ ಬಾಬ್ತು ಮಾರ್ಜಿನಲ್ಲಿ ನಮೂದಿಸಿರುವ ಬಾಬುಗಳು 6-6-1932 ನೇ ತಾರೀಖು ಸೋಮವಾರ ಬೆಳಿಗ್ಗೆ 11 ಘಂಟೆಗೆ ಸರಿಯಾಗಿ ಹೊಳೆನರಸೀಪುರದ ಟವರ್ ಮುನಿಸಿಪಲ್ ಆಫೀಸು ಬಳಿ ಪ್ರೆಸಿಡೆಂಟ್, ಯಾ ವೈಸ್ ಪ್ರೆಸಿಡೆಂಟರವರಿಂದ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆ ಇಷ್ಟವುಳ್ಳವರು ಹಾಜರಾಗಿ ಧಣಸವಾಲ್ ಮೂಲಕ ಪಡೆಯಬಹುದು

ಹರಾಜಿಗೆ ಸಂಬಂಧಪಟ್ಟ ಇತರ ವಿಷಯಗಳನ್ನು ತಿಳಿಯಲು ಇಷ್ಟಪಡುವವರು ಈ ಮುನಿಸಿಪಾಲಿಟಿಯ ಪ್ರೆಸಿಡೆಂಟ್ ಯಾ ವೈಸ್ ಪ್ರೆಸಿಡೆಂಟರವರಿಗೆ ಬರೆದು ತಿಳಿದುಕೊಳ್ಳಬಹುದು

ಈ ಸಂಬಂಧವಾದ ಹರಾಜು ಇಸ್ತಿಹಾರು ಕಾಪಿಗಳನ್ನು ಆಫೀಸು ಬಾಗಲಿಗೆ ಬಹಿರಂಗವಾಗಿ ಟಕಟಾಯಿಸಿರುತ್ತೆ

ತಾ|| 21-5-1932

ಬಿ. ಸುಬ್ಬರಾವ್,
ಪ್ರೆಸಿಡೆಂಟ್

ಬಾಬುಗಳು.

1. ಡೈಲಿ ಟೋಲ್.
2. ಬೀಫ್ ಸ್ಲಾಟರ್ ಹೌಸ್ ಫೀ
3. ಶೀಪ್ ಸ್ಲಾಟರ್ ಹೌಸ್ ಫೀ
4. ಬೀಫ್ ಸ್ಟಾಲ್ ರೆಂಟ್
5. ಮಟನ್ ಸ್ಟಾಲ್ ರೆಂಟ್
6. ಕನ್ಸರ್ವೆನ್ಸಿ ವಗೈರೆ ಗೊಬ್ಬರ
7. ಕನ್ಸರ್ವೆನ್ಸಿ ಗಾಡಿಗಳು.
8. ವೀಕ್ಲಿ ಮಾರ್ಕೆಟ್ ಫೀ
9. ಮ್ಯುನಿಸಿಪಲ್ ಲೈಟಿಂಗ್ ಮಾತ್ರ ಟೆಂಡರ್ ಮೂಲಕವು.

ಇಂಡಿಯಾ ದೇಶಕ್ಕಾಗಿ ನಡೆದ "ರೌಂಡ್‌ಟೇಬಲ್" ಸಮ್ಮೇಳನ

ಅತಿ ಮುಖ್ಯವಾದ ಕೆಲವು ರಾಜಕೀಯ ವಿಚಾರಗಳ ಸಂಬಂಧವಾಗಿ ಕೆಲವು ಸಲಹೆಗಳು

ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಂದ

(ತಾ 9 ರ ಸಂಚಿಕೆಯಿಂದ ಮುಂದುವರಿದುದು.)

ಈ ಕೊಂದಣೆಯು ಇಂಡಿಯಾ ಸರಕಾರದವರಿಗೂ ತೋರಬಂದಿದ್ದಿತು. ಅವರು ರಾಜಕೀಯ ಸುಧಾರಣೆಗಳ ವಿಚಾರದಲ್ಲಿ ಕಳುಹಿಸಿದ ಸಲಹೆಗಳ 45 ನೆಯ ಘಟದಲ್ಲಿ ಈ ವಿಚಾರವಾಗಿ ಅವರು ತೋರುವುದೇನೆಂದರೆ —

- ಈ ಹಕ್ಕುಗಳನ್ನು ಕೇವಲ ಅನಿರ್ದಿಷ್ಟ ರೀತಿಯಲ್ಲಿ ರಾಜಕೀಯ ನಿಬಂಧನೆ ಶಕ್ತಿ ಮಂಜೂರಿಯಂತೆ ಹೇಳಲ್ಪಟ್ಟರೆ ಉದ್ದಿಷ್ಟಾರ್ಥವು ಸಾರ್ಥಕವಾಗಿ ನೆರವೇರುವುದಕ್ಕೆ ಅದರಿಂದ ಏನೇನೂ ಸಹಾಯವಾಗುವುದಿಲ್ಲ. ಆದರೂ ಇದೂ ಅವರೆ ಎಲ್ಲ ಹಕ್ಕುಗಳ ಸಂಬಂಧದಲ್ಲಿಯೂ ಕೋರ್ಟುಗಳು ಜೋಗಲು ಅವಕಾಶವಾದರೆ ಅದರಿಂದಲೂ ತೊಂದರೆಯುಂಟು. ಕೆಲವು ಸನ್ನಿವೇಶಗಳ ಸಂಕಲ್ಪಗಳಲ್ಲೂ, ಅವುಗಳಿಗುಂಟಾದ ಪ್ರತಿಬಂಧಗಳನ್ನು ಅಥವಾ ಕೆಲಸಗಳನ್ನು ಕುರಿತು ಕೋರ್ಟುಗಳು ನಿರ್ಣಯಿಸುವ [illegible] ಅವಕಾಶವನ್ನು ಕಲ್ಪಿಸುತ್ತದೆ. [illegible] ಅನೇಕ ಸಲ [illegible] ಸಾಗ [illegible] ಕೋರ್ಟಿನ ವ್ಯವಹಾರಗಳಿಗೆ ಅವಕಾಶವುಂಟಾಗುತ್ತದೆ, [illegible] ಪ್ರಜಾಪ್ರಭುತ್ವ ಅನುಸರಣೆ [illegible] ಆದುದರಿಂದ, ಈ ಹಕ್ಕುಗಳಿಗೆ [illegible] ನಿರ್ವಚನ [illegible] ಸಂಬಂಧದಲ್ಲಿಯೂ ಕೋರ್ಟುಗಳ [illegible] ಅವಕಾಶವನ್ನು [illegible] ಮುಖ್ಯವಾದ [illegible] ಅನುಕೂಲ ಮಾರ್ಗವೊಂದು ಇರಬಹುದು.

ಈ ಬಗೆಯ ಅನುಕೂಲವಾದ ಮಾರ್ಗವಾಗಿ ಕೆಲವು ಸಲಹೆಗಳನ್ನು ಕೊಡಬಹುದಾಗಿದೆ ಅವು ಯಾವುವೆಂದರೆ —

(೧) ಆಡಳಿತ ಕ್ರಮದ ಹೊಸ ಶಿಸ್ತಿನಲ್ಲೇ ಅಂಗಭೂತವಾಗಿರುವಂತೆ ಹಕ್ಕುಗಳ ವ್ಯವಸ್ಥಾಪತ್ರಿಕೆಯೊಂದನ್ನು ಸೇರಿಸಬೇಕಾದಲ್ಲಿ, ಪ್ರಭಾಮಾತ್ರಕ್ಕೆ ವಾಸ್ತವವಾಗಿ ದೊರೆಯಬೇಕಾದ ವಸ್ತು ಚೆನ್ನಾಗಿ ಅಂಗೀಕೃತವಾದ ಹಕ್ಕುಗಳನ್ನು ಮಾತ್ರವೇ ಅದರಲ್ಲಿ ಕಾಣಿಸಬೇಕು. ವಿವಾದಾಸ್ಪದವಾದ ನಿಯಮಗಳನ್ನಾಗಲಿ ಬಹಳ ಹಣ ವ್ಯಯವಾಗುವ ಸಾಮಾಜಿಕ ಸುಧಾರಣೆಯ ಕಾರ್ಯಕ್ರಮವನ್ನಾಗಲಿ ಅದರಲ್ಲಿ ಸೇರಿಸಕೂಡದು ಮುಂದೆ ಹೇಳುವ ವಿವರವನ್ನು ಕಾಣಿಸಿದರೆ ಸಾಕೆಂದು ತೋರುವುದು (ದಿವಂಗತರಾದ ಮೋತೀಲಾಲ್ ನೆಹರೂ—ಅವರು ಸೂಚಿಸಿದ್ದ ಆಡಳಿತ ಕ್ರಮದ ಸಲಹೆಗಳಲ್ಲಿ ಅಡಕವಾಗಿರುವ ಅಂಶಗಳನ್ನೇ ಇಲ್ಲಿ ಸಾಮಾನ್ಯವಾಗಿ ಅನುಸರಿಸಲಾಗಿದೆ) ಆ ವಿವರವು ಯಾವುದೆಂದರೆ —

ಕಾನೂನಿಗನುಗುಣವಾದ ರೀತಿಯಲ್ಲಿ ಹೊರತು ಯಾವ ಮನುಷ್ಯನ ಗಾದರೂ ಅವನ ಸ್ವಾತಂತ್ರ್ಯಕ್ಕೆ ಭಂಗವನ್ನುಂಟುಮಾಡಕೂಡದು, ಅಥವಾ ಅವನ ಮನೆಗಾಗಲಿ ಸ್ವತ್ತಿಗಾಗಲಿ ಪ್ರವೇಶಿಸಕೂಡದು, ಅಥವಾ ಅವುಗಳನ್ನು ದೋಷಗಳ ಏಳಿಗಾಗಿ ಈಡು ಮಾಡಕೂಡದು ಅಥವಾ ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಕೂಡದು.

ಸಾರ್ವಜನಿಕ ನೆಮ್ಮದಿಗೆ ಅಥವಾ ಸದ್ವರ್ತನೆಗೆ ಭಂಗವನ್ನುಂಟು ಮಾಡದೆ ಯಾರು ಯಾವ ಮನೋವೃತ್ತಿಯನ್ನು ಬೇಕಾದರೂ ಇಟ್ಟುಕೊಂಡು ಯಾವ ಮತ ಧರ್ಮಗಳನ್ನು ಬೇಕಾದರೂ ಹೇಳಿಕೊಂಡು ಆಚರಣೆಗೆ ತಂದುಕೊಳ್ಳಬಹುದೆಂದು ಈ ದಿವ್ಯವಾದ ಹಕ್ಕುಬಾಧ್ಯತೆಗಳನ್ನು ಎಲ್ಲರಿಗೂ ಕೊಡಲಾಗಿದೆ

ಪ್ರಜಾನೆಮ್ಮದಿಗೂ ಸಾರ್ವಜನಿಕ ನೀತಿನಿಯಮಗಳಿಗೂ ವಿರುದ್ಧವಾಗಿ ಲ್ಲದ ಉದ್ದೇಶಗಳಿಗಾಗಿ ಪ್ರಜೆಗಳು ತಮ್ಮ ಅಭಿಪ್ರಾಯಗಳನ್ನು ಧಾರಾಳವಾಗಿ ವ್ಯಕ್ತಪಡಿಸುವ ಹಕ್ಕನ್ನೂ ಆಯುಧಗಳಿಲ್ಲದೆ ಶಾಂತರೀತಿಯಿಂದ ಸಭೆ ಸೇರುವ ಹಕ್ಕನ್ನೂ ಮತ್ತು ಸಂಘಗಳನ್ನೂ ಯೂನಿಯನ್ನುಗಳನ್ನೂ ಏರ್ಪಡಿಸುವ ಹಕ್ಕನ್ನೂ ಈ ಮೂಲಕವಾಗಿ ಪ್ರಜೆಗಳಿಗೆ ಜಾಹೀರು ಮಾಡಿ ಕೊಡಲಾಗಿದೆ

ನ್ಯಾಯಶಾಸನ ವಿಚಾರದಲ್ಲಿ ಸಮಸ್ತ ಪ್ರಜೆಗಳಿಗೂ ಸಮಾನತೆಯೂ ಸಮಾನವಾದ ಪೌರತ್ವದ ಹಕ್ಕುಗಳೂ ಇರುತ್ತವೆ

ಪ್ರಜೆಗಳಲ್ಲಿ ಪಕ್ಷಪಾತಕ್ಕೆ ಆಸ್ಪದವಾಗುವಂಥ ಯಾವ ಶಾಸನ ನಿಬಂಧನೆಗಳಾಗಲಿ, ವ್ಯವಹಾರದ ವಿಧಾನದ ನಿಯಮಗಳಾಗಲಿ, ತಪ್ಪಿತಸ್ಥರ ದಂಡನೆಯ ಸಂಬಂಧವಾದ ಕಾನೂನುಗಳಲ್ಲಿರತಕ್ಕದ್ದಲ್ಲ.

ಯಾವುದಾದರೂ ಒಂದು ಕೆಲಸವನ್ನು ಮಾಡಿದ ಕಾಲದಲ್ಲಿ ಅದು ದಂಡನಾರ್ಹವಾದ ಅಪರಾಧವೆಂದು ಪರಿಗಣಿಸಲ್ಪಡದೆ ಇದ್ದ ಪಕ್ಷದಲ್ಲಿ, ಆ ತರುವಾಯ ಅದೇ ಕಾರಣಕ್ಕಾಗಿ ದಂಡನೆಯನ್ನು ವಿಧಿಸತಕ್ಕದ್ದಲ್ಲ.

ಸರ್ಕಾರಿ ನೌಕರಿಗಳನ್ನಾಗಲಿ ಭಾರಿಯಾದ ಅಥವ ಗೌರವ ಯುಕ್ತವಾದ ಹುದ್ದೆಯನ್ನಾಗಲಿ ಪಡೆಯುವುದಕ್ಕೂ, ಯಾವುದಾದರೂ ವ್ಯಾಪಾರವನ್ನು ನಡೆಯಿಸುವುದಕ್ಕೂ ಅಥವಾ ವೃತ್ತಿಯನ್ನು ಕೈಕೊಳ್ಳುವುದಕ್ಕೂ ಒಬ್ಬೊಬ್ಬನ ಮತ ಜಾತಿ ಮತ್ತು ಪಂಗಡ, ಇದೊಂದೂ ಪ್ರತಿಬಂಧಕವಾಗಿರತಕ್ಕದ್ದಲ್ಲ.

ಯಾರೇ ಆಗಲಿ ಯಾವುದಾದರೂ ಇತರ ಮತವನ್ನು ಅವಲಂಬಿಸಿದಾಗ ಅಷ್ಟು ಮಾತ್ರವೇ ಅವರಿಗೆ ಪೌರರಾಗಿ ಇದ್ದ ಹಕ್ಕುಗಳಾಗಲಿ, ವಿಶೇಷಾಧಿಕಾರಗಳಾಗಲಿ ತಪ್ಪಿಹೋಗತಕ್ಕದ್ದಲ್ಲ ಮತ್ತು ಅವರು ಯಾವ ದಂಡನೆಗೂ ಗುರಿಯಾಗತಕ್ಕದ್ದಲ್ಲ.

ಬಹಿರಂಗವಾಗಿ ಎಲ್ಲ ರಸ್ತೆಗಳನ್ನೂ ಉಪಯೋಗಿಸುವುದಕ್ಕೂ, ಎಲ್ಲ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶಿಸುವುದಕ್ಕೂ ಪ್ರಜೆಗಳೆಲ್ಲರಿಗೂ ಸರ್ವ ಸಮಾನವಾದ ಹಕ್ಕುಗಳಿರತಕ್ಕದಾಗಿದೆ.

ಕೂಲಿಗಾರರ ಯೋಗಕ್ಷೇಮವನ್ನು ಕಾಪಾಡಿ ಅವರ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿಯೂ ಆರ್ಥಿಕ ಪರಿಸ್ಥಿತಿಯನ್ನು ಮೇಲ್ಪಡಿಸುವುದಕ್ಕಾಗಿಯೂ ಒಟ್ಟಿಗೆ ಸೇರುವುದಕ್ಕೂ, ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೂ, ಎಲ್ಲ ಕಸಬುಗಳನ್ನು ಅವಲಂಬಿಸುವುದಕ್ಕೂ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವುಂಟು ಈ ಸ್ವಾತಂತ್ರ್ಯಕ್ಕೆ ನಿರ್ಬಂಧವನ್ನಾಗಲಿ, ಅಡಚಣೆಯನ್ನಾಗಲಿ, ಉಂಟುಮಾಡತಕ್ಕ ಎಲ್ಲ ಒಪ್ಪಂದಗಳೂ, ಎಲ್ಲ ಏರ್ಪಾಡುಗಳೂ, ನೀತಿ ವಿರುದ್ಧವಾದುವುಗಳೇ ಸರಿ

ಸ್ತ್ರೀಯರಿಗೂ, ಪುರುಷರಿಗೂ, ಪ್ರಜೆಗಳಾಗಿ ಸಮಾನವಾದ ಹಕ್ಕುಗಳುಂಟು.

(೨) ದೇಶದ ಶಾಸನ ಸಭೆಗಳು ವಾಡಿಕೆಯಾಗಿ ಈ ನಿಯಮಗಳಿಗೆ ಗೌರವವನ್ನು ಕೊಟ್ಟು ವರ್ತಿಸುವುವೆಂದು ನಿರೀಕ್ಷಿಸಬಹುದಾಗಿದೆ. ಆದರೆ ಅಲ್ಪಸಂಖ್ಯಾತಪಂಗಡಗಳವರು ತಮ್ಮ ವಿಶೇಷ ರೀತಿಯ ಹಕ್ಕುಬಾಧ್ಯತೆಗಳನ್ನು ಕಾಪಾಡುವುದಕ್ಕಾಗಿ ಆಡಳಿತ ಯಂತ್ರದಲ್ಲೇ ಅವಕಾಶವನ್ನು ಕಲ್ಪಿಸುವುದು ಆವಶ್ಯಕವೆಂಬುದಾಗಿಯೂ, ಅದು ಕೇವಲ ನ್ಯಾಯ್ಯವೆಂಬುದಾಗಿಯೂ ಭಾವಿಸಿರುವುದರಿಂದ ನಡವಳಿಕೆಯ ವಿಧಾನದಲ್ಲಿ ಅವರುಗಳ ಸಲಹೆಯಂತೆ ಮುಂದೆ ಹೇಳುವ ಮಾರ್ಗಗಳನ್ನು ಅನುಸರಿಸಿ ಅನುಕೂಲ್ಯಗಳನ್ನು ಕಲ್ಪಿಸಬಹುದೇ—ಎಂಬುದನ್ನು ಪರ್ಯಾಲೋಚಿಸಬಹುದಾಗಿದೆ :—

ಸಂಯುಕ್ತಶಾಸನ ಸಭೆಯಿಂದಾಗಲಿ ಪ್ರಾಂತಿಕಶಾಸನ ಸಭೆಯಿಂದಾಗಲಿ, ಒಂದು ಮಸೂದೆಯಾಗಲಿ ಮಂಜೂರಾದರೆ, ಮತ್ತು ಯಾವ ಭಾಗವೂ ಒಂದು ವರ್ಗದಕ್ಕೆ ಸೇರಿದ ಅದರ ಸದಸ್ಯರಲ್ಲಿ ಮೂರರಲ್ಲೆರಡು ಭಾಗದ ಸದಸ್ಯರ ಅಭಿಪ್ರಾಯದಲ್ಲಿ ಅದು ಅವರ ಮತಕ್ಕಾಗಲಿ ಅಥವಾ ಮತಧರ್ಮವನ್ನವಲಂಬಿಸಿರುವ ಸಾಮಾಜಿಕ ಪದ್ಧತಿಗಳಿಗಾಗಲಿ ಬಾಧಕವನ್ನುಂಟುಮಾಡುವುದಾಗಿದೆಯೆಂದು ತೋರಿದರೆ, ಆ ಸದಸ್ಯರುಗಳು ಆ ಮಸೂದೆಯು ಮಂಜೂರಾದ ಒಂದು ತಿಂಗಳೊಳಗಾಗಿ ಸಭೆಯ ಅಧ್ಯಕ್ಷರಲ್ಲಿ (ಪ್ರೆಸಿಡೆಂಟರಲ್ಲಿ) ತಮ್ಮ ಆಕ್ಷೇಪಣೆಗಳನ್ನು ಬರೆದು ದಾಖಲು ಮಾಡ

[illegible]

ವಾಗಿ ಅನುಸರಿಸಿ ಸಂಸ್ಥಾನಗಳು ... ಸಂಸ್ಥಾನದ ಸ್ಥಿತಿಗತಿಗಳಿಗೂ, ವಿಶೇಷ ವಿಧದ ಆವಶ್ಯಕತೆಗಳಿಗೂ ... ಗಳಿಗೆ ತಕ್ಕ ಬಾಧ್ಯತೆಗಳ ವ್ಯವಸ್ಥೆ ... ಅವರಿಗೆ ಅನಳಾದರಬೇಕು

ರಕ್ಷಾ ಸಾಧನಗಳು.

ಇಂಡಿಯಾ ದೇಶಕ್ಕೆ ರಾಜ್ಯಾಂಗ ಸುಧಾರಣೆಗಳನ್ನು ಕೊಡುವ ಸಂಬಂಧವಾಗಿ ತಾವು ಅನುಸರಿಸಬೇಕೆಂದಿರುವ ಕಾರ್ಯಸರಣಿಯನ್ನು ... ಪ್ರಸ್ತಾಪಿಸುವಲ್ಲಿ ಬ್ರಿಟಿಷ್ ಸರ್ಕಾರದ ಪ್ರಧಾನ ಸಚಿವರು (ಶ್ರೀ ಮ್ಯಾಕ್ ಡೊನಾಲ್ಡ್ ರವರು) ರೌಂಡ್ ಟೇಬಲ್ ಸಮ್ಮೇಳನದ ಮೊದಲನೆಯ ಅಧಿವೇಶನದಲ್ಲಿ ರಕ್ಷಾ ಸಾಧನಗಳ (ಸೇಫ್ ಗಾರ್ಡ್ಸ್) ವಿಚಾರದಲ್ಲಿ ... ಅಂಶಗಳನ್ನು ಎರಡನೆಯ ಅಧಿವೇಶನದಲ್ಲಿಯೂ ತಿಳಿಸಿ ... ಇವುಗಳನ್ನು ... ರಕ್ಷಾ ಸಾಧನಗಳನ್ನು ... ಉದ್ದೇಶವೇನೂ ಇಲ್ಲವೆಂದೂ, ಕೇವಲ ಮಧ್ಯಕಾಲದ ಅವಧಿಗಾಗಿ ಮಾತ್ರವೇ ... ಉದ್ದೇಶದಿಂದ ಅವುಗಳನ್ನು ಏರ್ಪಡಿಸಲಾಗುವುದೆಂದೂ ಅವರು ತಿಳಿಸಿದರು ... ವಿಚಾರಗಳಲ್ಲಿ ಶಾಸನ ಸಭೆಯವರು ... ಅವಕಾಶವಿಲ್ಲದಂತೆ ... ಈ ರಕ್ಷಾ ಸಾಧನಗಳ ಉದ್ದೇಶವನ್ನು ... ಗಳನ್ನೂ, ಅವುಗಳನ್ನು ಬಲಾಯಿಸುವ ವಿಧಾನಗಳನ್ನೂ ... ಇಂಡಿಯಾ ದೇಶವು ಪ್ರಥುತ್ವಕ್ರಮದ ... ಜವಾಬ್ದಾರಿ ಸರ್ಕಾರವನ್ನು ಪಡೆಯುವುದಕ್ಕೆ ... ಸಾಧಕವಿಲ್ಲದಂತೆ ... ಸರ್ಕಾರದವರ ... ಪ್ರಧಾನ ಸಚಿವರು ... "ಹೌಸ್ ಆಫ್ ಕಾಮನ್ಸ್" ಸಭೆಯಲ್ಲಿ ಭಾಷಣ ಮಾಡುವಾಗ ಇಂಡಿಯಾದೇಶದ ಸ್ಟೇಟ್ ಸೆಕ್ರೆಟರಿಯವರಾದ ಸರ್ ಸ್ಯಾಮ್ಯುಯೆಲ್ ಹೋರ್ ರವರೂ ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸಿ ಇಂಡಿಯಾ ದೇಶದ ಮುಂದಣ ಅಭ್ಯುದಯಕ್ಕೆ ಈ ರಕ್ಷಾ ಸಾಧನಗಳು ... [illegible]

ದೇಶರಕ್ಷಣೆಯ ಸೈನ್ಯ

[illegible]

ಪ್ರಜೆಗಳೊಡನೆ ವ್ಯವಹಾರ.

[illegible]

ಹಾಳಾಗಿಸುವ ಸಂಬಂಧವಾದ ರಕ್ಷಣೆಗಳು.

[illegible]

(ಗರ್ಣ.)

ಸ್ವೀಕಾರ

[illegible]

... ವ್ಯವಹಾರ

[illegible]

ಪತ್ರವ್ಯವಹಾರಿಗಳಿಗೆ ಸೂಚನೆ

[illegible]

... ಸಂಸ್ಕೃತಪಾಠಶಾಲೆಗೆ ಸಹಾಯ.

[illegible]

ಶ್ರೀ ... ಪ್ರತಿಷ್ಠಾ ಮಹೋತ್ಸವ.

[illegible]

ಮಕ್ಕಳಿದ್ದರೆಮನೆ ಚೆಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿ

ಗರ್ಭಧಾರಣಾ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ... ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಶತ ... ಪಿ. ಎಸ್. ...

ಧರ್ಮಸತ್ರದ ಪ್ರವೇಶೋತ್ಸವ

[illegible]

ಯನ್ನು ಸ್ಥಾಪಿಸಿ ... ಊಟದ ವಿಚಾರಗಳು ... ಪ್ರವೇಶೋತ್ಸವ ... ಜರುಗಿಸಿದರು. ಅನಂತರ ಅತಿಥಿಗಳೆಲ್ಲರನ್ನೂ ... ಉಪಚಾರದಿಂದ ಸತ್ಕರಿಸಿದರು ... ಮಾದಯ್ಯಗೌಡರೇ ಮೊದಲಾಗಿ ... ದಯೆಯಿಟ್ಟು ದಯಮಾಡಿಸಿ ಸತ್ರದ ಪ್ರವೇಶೋತ್ಸವವನ್ನು ನೆರವೇರಿಸಿ ಧರ್ಮಕರ್ತರಿಗೆ ಸಂತೋಷವನ್ನುಂಟು ಮಾಡಿದ ... ಧರ್ಮಕರ್ತರಾದ ... ಕೋದಂಡರಾಮಶೆಟ್ಟರ ... ಚಿರಕೃತಜ್ಞನಾಗಿರುತ್ತೇನೆಂದು ಹೇಳಿದರು. ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯಿಂದ ಸಭಾವಿಸರ್ಜನೆಯಾಯಿತು. ... ಪ್ರತಿನಿಧಿ

ಶ್ರೀಮದ್ರೇವಣಸಿದ್ಧೇಶ್ವರಬೆಟ್ಟಕ್ಕೆ ವಿದ್ಯುದ್ದೀಪಾವಳಿ

[illegible]

ನೆಲಮಂಗಲದ ವೀರಶೈವ ವಿದ್ಯಾರ್ಥಿನಿಲಯ.

ನೆಲಮಂಗಲದ ಶ್ರೀಜಯದೇವ ವಿದ್ಯಾರ್ಥಿನಿಲಯಕ್ಕೆ ... ವಿದ್ಯಾರ್ಥಿಗಳು ... 15 ದಿನಗಳೊಳಗಾಗಿ ಅರ್ಜಿ ... [illegible]

M. ... HICHAPPA,

[illegible]

ಶ್ರೀಮನ್ಮಹಾರಾಜನಿರಂಜನ ಜಗದ್ಗುರುಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶ್ರೀ ವೀರಶೈವಾನಂದಾಶ್ರಮ, ತಿಪಟೂರು

ತಿಪಟೂರು ಗೌರ್ನಮೆಂಟ್ ಹೈಸ್ಕೂಲು ಸಂಸ್ಕೃತಪಾಠಶಾಲಾ ಮತ್ತು ವೇದಪಾಠಶಾಲಾ ಇವುಗಳಲ್ಲಿ ... ವೀರಶೈವ ವಿದ್ಯಾರ್ಥಿಗಳಿಗೆ ... ತಿಪಟೂರು ಶ್ರೀ ವೀರಶೈವಾನಂದಾಶ್ರಮದಲ್ಲಿ ... [illegible]

(1) ವಿದ್ಯಾರ್ಥಿಗಳ ... (2) ವಿದ್ಯಾರ್ಥಿಗಳ ... [illegible]

H. I. BASAVANNAPPA, B.A., L.L.B.

Hon. Secretary,

Sri Veerashaiva Anandashrama, Tiptur

ಅಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ... ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿವರಣೆಯೂ

[illegible]

ದಿಗ್ದರ್ಶನಂ

[illegible]

ಶಿವಪ್ರಸಾದೇನ ವಿನಾಶನಕರ್ತ್ರಯಃ |

ಶಿವಪ್ರಸಾದೇನ ವಿನಾಶನಮುಕ್ತಯಃ |

ಶಿವಪ್ರಸಾದೇನ ವಿನಾಶಭಕ್ತಯಃ

ಶಿವಪ್ರಸಾದೇನ ವಿನಾಶಮುಕ್ತಯಃ

[illegible]

ವಿದ್ಯಾರ್ಥಿಗಳಿಗೆ ಸೂಚನ

[illegible]

... ಬೀರಣ್ಣ.

ಪಿತ್ತಶಾಮಕ ಸಂಜೀವಿನಿ

[illegible]

ವಿಷಹರ ಸಂಜೀವಿ

[illegible]

ಇದೂ ಅಲ್ಲದೆ ಸಕಲ ವ್ಯಾಧಿಗಳಿಗೂ ಅಮೂಲ್ಯವಾದ ಔಷಧಿ ನಮ್ಮಲ್ಲಿ ದೊರೆಯುತ್ತದೆ.

[illegible]

... ಚಾಮರಾಜಪೇಟೆ ಮೈಸೂರು

ನವರಸಮೋಹನ ರಸಾಯನ

... ತರಿಸಿ ...

... ಶಿರಿಸ

M. C.

... ನೆಯ ... ಪಂಚಾಂಗ

ತಾ	ವಾ	ತಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ಮಾಸ
[illegible]	[illegible]	[illegible]	[illegible]	[illegible]	1 58	17
[illegible]	ಮಂಗಳ	[illegible]	0 24	ರೇವ	7 56	18
1	ಬುಧ	ದ್ವಾದ	5 18	ಅಶ್ವಿ	14 23	19
2	[illegible]	ತ್ರಯೋ	10 33	ಭರ	20 66	20
3	[illegible]	ಚತು	15 0	ಕೃತ್ತಿ	27 10	21
4	ಶನಿ	ಅಮಾ	18 17	ರೋಹಿ	32-44	22
5	ಭಾನು	ಪಾಡ್ಯ	22-21	ಮೃಗ	37 11	23

(1) ಶ್ರೀಮನ್ಮಹಾರಾಜರವರ ವರ್ಧಂತಿ (2) ಮಳೆನಕ್ಷತ್ರ ರೋಹಿಣಿ ... ನೆಯ ಪಾದ (3) ಚಕ್ರವರ್ತಿಯವರ ವರ್ಧಂತಿ, ಮಳೆನಕ್ಷತ್ರ ರೋಹಿಣಿ ... ನೆಯ ಪಾದ

ಮೈಸೂರು ವೈ. ವಿರೂಪಾಕ್ಷಯ್ಯನವರಿಂದ ಕ್ಲಾಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

[illegible]

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ [illegible]] [ಪರಸ್ಥಳದವರಿಗೆ [illegible]] [ಬಿಡಿಪ್ರತಿಗೆ [illegible]]

ಸಂಪುಟ [illegible]] ಮೈಸೂರು ಸ್ಟಾರ್ ಸನ್ [illegible] ನೆಯ ಇಸವಿ ಜೂನ್ ತಾರೀಖು [illegible] ನೆಯ ಸೋಮವಾರ [ಸಂಚಿಕೆ [illegible]

MYSORE SANDALWOOD OIL
Distilled in
GOVERNMENT FACTORIES

GUARANTEED B. P. & AM. P. STANDARDS

PROVIDES

Excellent Base for the manufacture of Soaps Perfumes and other Toilet preparations of the Highest quality

USED ALL THE WORLD OVER

BUY A BOTTLE TO DAY

Available in Sealed Aluminium Bottles

MYSORE GOVERNMENT SANDALWOOD OIL FACTORY,

2 BANGALORE [50—47]

ಲಗ್ನಪತ್ರಿಕೆಗಳು

ಮುದ್ರಣಕ್ರಮ

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ಸುಬ್ರಹ್ಮಣ್ಯ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್ ಸ್ಟಾರಾಫೀಸು, ಮೈಸೂರು

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಯ	ವಿ. ಪಿ. ಸಹ
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಜಸೆ, ಇವರ [illegible] ವರ್ಷ ವಾಪರಿಸಿದ

ಅಲ್ಪವಯಸ್ಸಿನವರಿಗೆ ಕ್ಷೀಣರಾಗ ದೇಹಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಬಿ] ವಜ್ರಾಂಗ ಸುಂದರಪಾಕದ [ಪ್ರ

ದಿಕ್ಕಾಗಿಸಿದರೆ ಕ್ಷೀಣತೆ ಕಾಯ್ದು ಕೊಳ್ಳಿರಿ

ಮೂತ್ರದ್ವಾರದಿಂದ [illegible]

ಸ್ತ್ರೀ ರೋಗ ನಿವಾರಣೇ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[illegible]

[illegible] ಮೂಲಕ — [illegible] ಕಾಜಸೆ, [illegible] ಮಿರಜಿ [illegible]

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]



[illegible]

ವಿಳಾಸ— [illegible] ಅಂಡ್ ಕಂಪನಿ [illegible]

ಮೈಸೂರು ಸ್ಟಾರ್

[illegible] ಜನವರಿ [illegible] ತಾ॥ ೬ ನೇಯ ಸೋಮವಾರ

OUR CONGRATULATIONS

We offer our hearty congratulations to Dharmaprakash D Banumiah on the high distinction of Rao Bahadur bestowed on him by His Excellency the Viceroy. If there was any who deserved such a recognition in Mysore it was our popular Sahukar. His charitable disposition [illegible] with the recognition of our Beloved Sovereign who has a rare capacity for discerning merit among the public workers in the State. Very often the obtaining of a title is the culmination of a man's endeavours and his public service or philanthropy ends with the title. With our Sahukar the bestowal of the distinction Dharmaprakash meant only a further incentive for greater service. Since then his contributions to various charities large and small have never ceased. There is not a single movement of any consequence and public utility in the City and even outside in the State which has not [illegible] patron in the person of Sahukar Banumiah. His recent donations to the Sanitorium, the Ayurvedic and Unani College, the opthalmic section of Krishnarajendra Hospital, the Maternity and Child Welfare centre, apart from numerous other charities have won him an honoured place among the citizens of the State. Though sufficiently aged the Sahukar is young in spirits and remarkably active for his age. May God grant him long life and health to enjoy the distinction is our prayer.

We are also very glad to see that Mr. M. Ramaswamy, Vice President of the City Municipal Council is the recipient of the title of Rao Saheb. Young as he is he has devoted himself to public service and has been doing a great deal of work in various spheres. He has been the Secretary of the Gunamba Maternity and Child Welfare Trust, the Mysore Pinjrapole from their very inception. He has yet a good future before him and we offer him our hearty congratulations on the distinction with our best wishes for his future.

We wish to offer our felicitations to Mrs. W. H. Theobald on her becoming the recipient of the Kaiser-i-hind Medal. She has been rendering useful service in various public movements and is Honorary Bench Magistrate and Superintendent of the Vocational Institute for women.

We offer also our sincere congratulations to Rao Saheb K. Ramaswamy, Corporation Engineer Bombay on his getting the further distinction of Rao Bahadur. Mysore must be proud of such a gentleman who having risen by dint of merit to a high position abroad has been striving his best to be of help to Mysoreans and Mysore. He is a generous soul instinctively and he richly deserves the distinction.

A USEFUL CIRCULAR

The Government have been pleased to pass a G. O. for the prompt disposal of petitions. While drawing the attention of officers to the instructions issued in G. O. dated 11th July 1922 they direct that where a petition is not expected to be disposed of in a fortnight an acknowledgment should invariably be sent to the party with the least possible delay. An adherence to this rule is sure to mitigate a lot of hardship which petitioners at present labour and we hope that the G. O. will be respected by all officers. We take it that this direction is not only meant for officers subordinate to Government but to the Secretariat and Government as well. Not very often the petitions addressed to Government remain unanswered for months without even an acknowledgment. We hope it will not be too much to expect that Government also will adhere to the principle strictly.

ಅಭಿನಂದನೆ

ಭಾರತ ಸಾರ್ವಭೌಮರ ವರ್ಧಂತ್ಯುತ್ಸವದಲ್ಲಿ ಪ್ರಕಾಶಿಸಿದ ಬಿರುದು ಪಟ್ಟಿಗಳಲ್ಲಿ [illegible] ಧರ್ಮಪ್ರಕಾಶ ಸಾಹುಕಾರ ಡಿ. ಬನುಮಯ್ಯನವರಿಗೆ ರಾವ್ ಬಹದ್ದೂರ್ [illegible] ಯೂ, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ [illegible] ಸ್ವಾಮಿಯವರಿಗೆ ರಾವ್ ಸಾಹೇಬ್ [illegible] ಯೂ ಮಿಸೆಸ್ ಥಿಯೊಬಾಲ್ಡ್ [illegible] ಕೈಸರ್ ಇ ಹಿಂದ್ [illegible] ರವರಿಗೆ ದೊರೆತ ಹೊಸ ಪದವಿ ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಇಂಜಿನಿಯರ್ [illegible] ಕಕ್ಕೆ [illegible] ದೊರೆತಿರುವುದು [illegible] ಶ್ರೀಮನ್ ಮೈಸೂರಿಯರಿಂದ ದಯಪಾಲಿಸಲ್ಪಟ್ಟಿರುವುದಕ್ಕಾಗಿ ಈ ಮಹಾಶಯರುಗಳನ್ನು ಪೂರ್ವಕವಾಗಿ ಅಭಿನಂದಿಸುತ್ತೇವೆ. ಶ್ರೀಯುತ ಡಿ. ಬನುಮಯ್ಯನವರು ಒಂದು ಲಕ್ಷ ರೂಪಾಯಿಗಳ ಮೇಲೆಯೇ ವೆಚ್ಚ ಮಾಡಿ ಹೈಸ್ಕೂಲನ್ನು ಸ್ಥಾಪಿಸಿ ಗುಣೈಕಪಕ್ಷಪಾತಿಗಳೂ ಧರ್ಮೋತ್ತೇಜಕರೂ ಆದ ಶ್ರೀಮನ್ಮಹಾರಾಜರವರ [illegible] ಗೆ ಪಾತ್ರರಾಗಿ ಧರ್ಮಪ್ರಕಾಶ ಎಂಬ ಅನ್ವರ್ಥ ಬಿರುದನ್ನು ಪಡೆದರು. [illegible] ಯಾಗಿ ಪ್ರತಿಫಲಾಪೇಕ್ಷೆಯಿಲ್ಲದ ಧರ್ಮಕಾರ್ಯವನ್ನು ಮಾಡಿ ಪ್ರಶಸ್ತಿಯನ್ನು ಪಡೆದ ಮೇಲೆ ಸಾಮಾನ್ಯವಾಗಿ ತಮ್ಮ ಪುರುಷಾರ್ಥಸಿದ್ಧಿಯಾಯಿತೆಂದು [illegible] ಆದರೆ ನಮ್ಮ ಧರ್ಮಪ್ರಕಾಶರು [illegible] ಮೌನರಾಗಿರದೆ ಮತ್ತಷ್ಟು [illegible] ಧರ್ಮಕಾರ್ಯಗಳನ್ನು ಮಾಡಲು ಉತ್ತೇಜಿತರಾಗಿ ಪ್ರತಿಫಲಾಪೇಕ್ಷೆಯಿಲ್ಲದ ಧರ್ಮಕಾರ್ಯಗಳನ್ನು ನಾನಾ ರೀತಿಯಲ್ಲಿ ಮಾಡುತ್ತಾ ಇರುವರು. ರಾಜಧಾನಿಯಲ್ಲಿ ಇವರ ಸಹಾಯವಿಲ್ಲದಿರುವ ಧರ್ಮಕಾರ್ಯವಾವುದೂ ಇಲ್ಲ. [illegible] ಸಂಸ್ಥಾನದ ಹೊರಗಡೆಯಲ್ಲೂ ಇವರಿಂದ [illegible] ಪಡೆದಿರುವ [illegible] ಕ್ಷಯರೋಗ ಆಸ್ಪತ್ರೆಯಲ್ಲಿ ಒಂದು ವಾರ್ಡನ್ನು ಆಯುರ್ವೇದೀಯ ಮತ್ತು ಯುನಾನಿ ಕಾಲೇಜಿನ ಮೇಲ್ಭಾಗದಲ್ಲಿ ರೋಗಿಗಳಿಗಾಗಿ ವಾರ್ಡುಗಳನ್ನೂ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕಣ್ಣಾಸ್ಪತ್ರೆಯನ್ನೂ ಗರ್ಭಿಣೀ ಶಿಶುರಕ್ಷಣಾಲಯವನ್ನೂ [illegible] ಸಾವಿರಾರು ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುವರಲ್ಲದೆ ಇನ್ನೂ ಅನೇಕಾನೇಕ ಸಣ್ಣ ದೊಡ್ಡ ಧರ್ಮಕಾರ್ಯಗಳನ್ನು ಮಾಡಿ [illegible] ಮೂಲಕ [illegible] ಸಂಪಾದಿಸುತ್ತಲಿರುವುದರಿಂದ ಘನತರವಾದ ರಾವ್ ಬಹದ್ದೂರ್ ಪ್ರಶಸ್ತಿಯನ್ನು ಪಡೆದುದು [illegible] ನಮ್ಮ ರಾಜಧಾನಿಯಲ್ಲಿ ಬೇರೊಬ್ಬರಿಲ್ಲ. ಈ ಧರ್ಮಪುರುಷರು ವೃದ್ಧರಾಗಿದ್ದರೂ ಧೈರ್ಯೋತ್ಸಾಹದಲ್ಲಿ ಯುವಕರಾಗಿರುತ್ತಾರೆ. ಈ ಪ್ರಶ್ಯಾಸ್ತರು ದೀರ್ಘಾಯುರಾರೋಗ್ಯದಿಂದಿದ್ದು ಈ ಘನತರ ಪ್ರಶಸ್ತಿಯನ್ನು [illegible] ಅನುಗ್ರಹಿಸಲೆಂದು ಆ ದಯಾಮಯನಾದ ಪರಮಾತ್ಮನನ್ನು ಬೇಡುತ್ತೇವೆ. ಅಲ್ಲದೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರಾಗಿಯೂ, [illegible] ಮತ್ತು ಗುಣಾಂಬಾ ಗರ್ಭಿಣೀ ಶಿಶು ಸಂರಕ್ಷಣಾಲಯದ ಕಾರ್ಯದರ್ಶಿಯವರಾಗಿಯೂ ಇದ್ದುಕೊಂಡು ಪಂಚೇಂದ್ರಿಯ [illegible] ಎಷ್ಟಾಮಯಬುದ್ಧಿಯಿಂದ ಮಾಡುತ್ತಿರುವ ಮತ್ತು ಇನ್ನೂ ಅತಿ ಯುವಾಗಿ ಇರುವ ದೇಶಭಕ್ತಿಯನ್ನೂ ಕಾಲಾವ್ಯವಧಾನವನ್ನೂ ಉಳ್ಳ ಮು॥ ಎಂ. ರಾಮಸ್ವಾಮಿಯವರಿಗೂ ಆನರರಿ ಬೆಂಚ್ ಮೆಜಿಸ್ಟ್ರೇಟರಾಗಿಯೂ ಸ್ತ್ರೀಯರ ಉದ್ಯೋಗ ಶಿಕ್ಷಣಾಲಯದ ಸೂಪರಿಂಟೆಂಡೆಂಟರಾಗಿಯೂ ಇದ್ದುಕೊಂಡು ಪ್ರಯೋಜನಯುಕ್ತ ಕಾರ್ಯಗಳನ್ನು ಮಾಡುತ್ತಿರುವ ಮಿ॥ ಥಿಯೊಬಾಲ್ಡ್‌ರವರ ಪತ್ನಿಯವರಿಗೂ ಮೈಸೂರು ದೇಶದಲ್ಲಿ ಹುಟ್ಟಿ ಬೊಂಬಾಯಿ ಮಹಾಪಟ್ಟಣಕ್ಕೆ ಹೋಗಿ ಅಲ್ಲಿಯ ಮ್ಯುನಿಸಿಪಲ್ ಇಂಜಿನಿಯರಾಗಿದ್ದುಕೊಂಡು ವಿಶೇಷ ಸಾಮರ್ಥ್ಯದಿಂದ ಉದ್ಯೋಗವನ್ನು ನಿರ್ವಹಿಸಿ ವಿಶೇಷ ಗೌರವಪ್ರತಿಷ್ಠೆಗಳನ್ನು ಪಡೆದು ನಮ್ಮ ದೇಶಕ್ಕೆ ಕೀರ್ತಿಯನ್ನು ತಂದಿರುವ ಮತ್ತು [illegible] ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿ ಹೊಳೆನರಸೀಪುರದಲ್ಲಿ ಹೆಂಗಸರ ಆಸ್ಪತ್ರೆಯನ್ನು ಕಟ್ಟಿಸಿ ಮಹೋಪಕಾರವನ್ನು ಮಾಡಿರುವ ಮು॥ ಕೆ. ರಾಮಸ್ವಾಮಿಯವರಿಗೂ ಆಯುರಾರೋಗ್ಯವನ್ನು ಇತೋಪ್ಯತಿಶಯವಾದ ಪ್ರಶಸ್ತಿಗಳನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಉಪಯುಕ್ತ ಪ್ರಭುತ್ವಾಜ್ಞೆ

ಸರ್ಕಾರಿಯಧಿಕಾರಿಗಳಿಗೆ ಪ್ರಜೆಗಳು ಎಂದುಕೊಳ್ಳುವ ಅರ್ಜಿಗಳು ವರ್ಷಗಟ್ಟಲೆ ಇತ್ಯರ್ಥವಾಗದೆ ಇರುವುದರಿಂದ ಪ್ರಜೆಗಳಿಗೆ ಬಹಳ ನಷ್ಟ ಕಷ್ಟಗಳು ಪ್ರಾಪ್ತವಾಗುತ್ತವೆಂಬ ದೂರು ಪ್ರಬಲವಾದುದರಮೇಲೆ, ಅರ್ಜಿಗಳು ಕೂಡಲೆ ವಿಲೆಯಾಗಬೇಕೆಂಬ ಬಗೆಗೆ ಪ್ರಭುತ್ವದವರು ಈಗ ತಾನೇ ಒಂದಪ್ಪಣೆಯನ್ನು ಮಾಡಿರುತ್ತಾರೆ. ಅದರಲ್ಲಿ ಅರ್ಜಿಯು ಎರಡು ವಾರದೊಳಗೆ ವಿಲೆಯಾಗಲು ಸಾಧ್ಯವಿಲ್ಲದಿರುವ ಪಕ್ಷದಲ್ಲಿ ಅರ್ಜಿದಾರರಿಗೆ ಕೂಡಲೆ ಇಂಡಾರಸನ್ನು ಕಳುಹಬೇಕೆಂದು ಹೇಳಲ್ಪಟ್ಟಿದೆ. ಈ ಆಜ್ಞೆಯು ಅನುಸರಿಸಲ್ಪಟ್ಟಲ್ಲಿ ಈಗ ಅರ್ಜಿದಾರರು ಅನುಭವಿಸುತ್ತಿರುವ ಕಷ್ಟನಷ್ಟಗಳು ಬಹಳಮಟ್ಟಿಗೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲವಾದುದರಿಂದ, ಎಲ್ಲಾ ಅಧಿಕಾರಿಗಳೂ ಈ ಆಜ್ಞೆಯನ್ನು ಗೌರವಿಸುವರೆಂದು ನಿರೀಕ್ಷಿಸುತ್ತೇವೆ. ಈ ಆಜ್ಞೆಯು ಕೆಳಗಿನ ಅಧಿಕಾರಿಗಳಿಗೆ ಮಾತ್ರ ಅಲ್ಲ ಯಿಸದೆ ಸಕ್ರೆಟೇರಿಯೇಟಿನವರಿಗೂ ಪ್ರಭುತ್ವಾಧಿಕಾರಿಗಳಿಗೂ ಅನ್ವಯಿಸುತ್ತದೆಂದು ಭಾವಿಸುತ್ತೇವೆ. ಅನೇಕವೇಳೆ ಪ್ರಭುತ್ವದವರಿಗೆ ಬರೆದುಕೊಂಡಂತಹ [illegible] ಗಳು ತಿಂಗಳುಗಟ್ಟಲೆ [illegible] ಪ್ರತಿ ಬಂದುದನ್ನೂ [illegible] ತಿಳಿಸದೇ [illegible] ಕಾರ್ಯಕ್ಕೆ [illegible] ಗಳನ್ನು [illegible] ಪಾಲಿಸುವರೆಂದು [illegible]

ಸ್ಟೋರ್ಸ್ ಮೋಟಾರು ಕಂಪೆನಿ [illegible]

[illegible] ಸ್ಟೋರ್ಸ್ ಮೋಟಾರು ಕಂಪೆನಿಗೆ [illegible] ರವರೆಗೂ ನಷ್ಟ ಸಂಭವಿಸಿರುತ್ತದೆ. ಇದಕ್ಕೆ ಮೋಟಾರು [illegible] ಗಳ ವಿಹಾರವು ಕಡಿಮೆಯಾದುದೇ ಕಾರಣವಂತೆ.

ಮೂವರು ಸಜೀವರಾಗಿ ಹೂತುಹೋದರು

ಕಲ್ಲಕೋಟೆಯಲ್ಲಿ ಮಳೆ ಗಾಳಿಯ ನಾಶದಿಂದ ಕುರದೊಟ್ಟಿ ಗ್ರಾಮದ ಸಮೀಪದಲ್ಲಿರುವ ಒಂದು ಗುಡ್ಡದ ಒಂದು ಭಾಗವು ಕುಸಿದು ಬಿದ್ದಿತು. ಇದರ ಕೆಳಗೆ ಒಬ್ಬ ಮನುಷ್ಯನೂ ಇಬ್ಬರು ಹೆಂಗಸರೂ ಸಿಕ್ಕಿ ಮೃತರಾದರು.

ಮಾಳಪ್ಪನವರ ಸೊಸೆಗೆ ಶಿಕ್ಷೆ

[illegible] ಮಾಳಪ್ಪನವರ ಕುಮಾರ ಮುಕುಂದ ಮಾಳಪ್ಪನವರ ಪತ್ನಿಯು ಕಳೆದ ತಾ॥ ೨೬ ರಲ್ಲಿ ನಡೆದ [illegible] ಗೆ ಪೋಲೀಸು ಆಜ್ಞೆಯನ್ನು ಮೀರಿ ಹೋಗಲು ಪ್ರಯತ್ನಿಸಿದ ಅಪರಾಧಕ್ಕಾಗಿ ಒಂದು ವರ್ಷ ಕಠಿಣ ಸಜಾ ವಿಧಿಸಲ್ಪಟ್ಟಿತು.

ಜಪಾನಿನಲ್ಲಿ ಜಾತೀಯ ಪ್ರಭುತ್ವಸ್ಥಾಪನೆ

ಜಪಾನಿನ ಪ್ರಧಾನ ಮಂತ್ರಿಯು ಪದವಿಯಿಂದ ರಾಜೀನಾಮೆ ಕೊಟ್ಟಿದ್ದರಿಂದ [illegible] ಸಂಭವಿಸಬಹುದೆಂದಿದ್ದ ಭಯವು ಹೋಯಿತು. ಇದಕ್ಕೆ ಜಾತೀಯ ಪ್ರಭುತ್ವ [illegible] ಕಾರಣವು. ಹೊಸ ಪ್ರಧಾನ ಮಂತ್ರಿಗೆ 73 ವರ್ಷ ವಯಸ್ಸಾಗಿದೆ.

ಬೆಂಕಿಯ ಅನಾಹುತ

ಪಂಜಾಬಿನಲ್ಲಿ [illegible] ಗೆ ಸೇರಿದ ಒಂದು ಗ್ರಾಮದಲ್ಲಿ ಪ್ರಚಂಡ [illegible] ಒಂದು ಮನೆಯು ಬೆಂಕಿಯಿಂದ ಹೊತ್ತಿಕೊಂಡು ಅದರ ಜ್ವಾಲೆಯು ಸುತ್ತಲೂ ಹರಡಿಕೊಂಡು 100 [illegible] ಮನೆಗಳು ಸುಟ್ಟುಹೋಗಿ ಸುಮಾರು [illegible] ನಷ್ಟವುಂಟಾಗಿದೆ.

ಬ್ರಿಟಿಷ್ ಸಾಮ್ರಾಜ್ಯ ಸಂರಕ್ಷಣಾವಶ್ಯಕತೆ

[illegible] ಯವರ ಎಪ್ಪತ್ತನೆಯ ಹುಟ್ಟಿದ ಹಬ್ಬದ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಉಪನ್ಯಾಸಮಾಡುವಾಗ್ಗೆ 'ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ದೇಶಗಳಲ್ಲಿ ಈವರೆಗೆ ಏಕೀಭಾವದಿಂದಿರುತ್ತವೆ. ಈ [illegible] ಸಂಬಂಧವನ್ನು ಸಡಿಲಿಸಿದಲ್ಲಿ ಪ್ರಪಂಚಕ್ಕೆ ಮಹತ್ತರ ಅನರ್ಥವು ಸಂಭವಿಸುವುದು. ಜನೋಪಾಸಭೆಯು ಒಯಪ್ರದವಾಗಿ ನಡೆಯುವುದೆಂಬ ಭರವಸೆಯು ನನಗೆ ಸಂಪೂರ್ಣವಾಗಿರುತ್ತದೆ' ಎಂದು ಹೇಳಿದರು.

ಅಸುರಲೆಂಡು ರಾಜಭಕ್ತಿ ಪ್ರಮಾಣ

[illegible] ರಾಜಭಕ್ತಿ ಪ್ರಮಾಣ ನಿಷೇಧದ ಬಿಲ್ಲು [illegible] ಅನುಮೋದಿತ ವಾದುದರಮೇಲೆ [illegible] ಸನೇಟು ಸಭೆಯಲ್ಲಿ ಉಪಸ್ಥಾಪಿಸಲ್ಪಡುವುದು. ಇದು ಸನೇಟು ಸಭೆಯಲ್ಲೂ ಎರಡುವೇಳೆ ಅನುಮೋದಿತವಾಗುವುದು. ಮತ್ತು ಮೂರನೆಯ ವೇಳೆಯೂ ಅನುಮೋದಿತವಾಗುವ ಭರವಸೆಯಿದೆ. ಅನಂತರ ಬ್ರಿಟಿಷರು ಅದರ ಮೇಲೇನು ಯೋಚನೆಮಾಡುವರೋ ನೋಡಬೇಕು.

ರಷಿಯಾ ಜಪಾನಿಗೆ ಯುದ್ಧ ನಡೆಯಬಹುದು

ರಷಿಯಾ ಜಪಾನಿಗೆ ಶೀಘ್ರದಲ್ಲಿಯೇ ಯುದ್ಧ ನಡೆಯುವ ಸಂಭವವುಂಟಾಗುತ್ತಿದೆ ಎಂದು ಹೇಳಲ್ಪಡುತ್ತದೆ. ಜನರಲ್ ಡಿಕ್ಟೇಟರು ಮುಕದನ್ನನ್ನು ಬಿಟ್ಟು ಹಾರ್ಬಿನ್ನಿನಲ್ಲಿ ಜನರಲ್ ಸ್ಟೇಷನ್ ಮುಖ್ಯ ಕಾರ್ಯಾಲಯವನ್ನೇರ್ಪಡಿಸಿ ತಾನು ಈಗ ಅಲ್ಲಿಯೇ ಇರುತ್ತಾನೆ. ಇನ್ನೊಂದು ಕಡೆ ಜಪಾನು ಸೇನೆಯು ಚೀನಾಕ್ಕೆ ಪೂರ್ವದಲ್ಲಿರುವ ಸುಂಗರೀ ನದಿಯ ಕೆಳಭಾಗದಲ್ಲಿ ರಷ್ಯಾ ಸರಹದ್ದಿಗೆ ತ್ವರಿತದಿಂದ ಹೋಗುತ್ತಿದೆ.

ಬೊಂಬಾಯಿಯಲ್ಲಿ ಸಮಾಧಾನವಾಗಿದೆ

ಬೊಂಬಾಯಿಯಲ್ಲಿ ಕಳೆದ ವಾರದಲ್ಲಿ ನಡೆದ ಹಿಂದು ಮಹಮ್ಮದೀಯರ ಕಲಹದಲ್ಲಿ ಈ ವರೆಗೆ 2000 ಮಂದಿ ಗಾಯಪಡೆದು 200 ಮಂದಿ ಹತರಾದರು. ಇದರಲ್ಲಿ ಹಿಂದುಗಳ ಸಂಖ್ಯೆಯೇ ಹೆಚ್ಚಾಗಿರುವುದು. ಈಗ ಕಲಹವು ನಿಂತು ಸಮಾಧಾನಸ್ಥಿತಿಗೆ ಬರುತ್ತಿರುವುದಾಗಿ ತಿಳಿಯಬರುತ್ತದೆ. ಶಾಂತಿಸ್ಥಾಪನೆಗಾಗಿ ಏರ್ಪಟ್ಟಿರುವ ಸಂಘದವರು ಹಿಂದು ಮಹಮ್ಮದೀಯರಿಗೆ ಕೋಪೋದ್ರೇಕವಾಗುವಂತಹ ಲೇಖನವನ್ನು ಬರೆಯಬಾರದೆಂದು ವೃತ್ತಪತ್ರಿಕಾಕರ್ತರುಗಳನ್ನು ಪ್ರಾರ್ಥಿಸಿರುತ್ತಾರೆ.

ಪೋಲೀಸಿನವನು ಕೈಬಳೆಗಳನ್ನ ಪಹರಿಸಿದುದು

ಲಾಹೋರಿನಲ್ಲಿ ಚಿಕ್ಕ ವಯಸ್ಸಿನ ಹಿಂದು ಹುಡುಗಿಯು ಸಂಗಡಗಾತಿಯರ ಕೂಡ ಆಡುತ್ತಿರುವಾಗ್ಗೆ ಒಬ್ಬ ಪೋಲೀಸಿನವನು ಬಂದು ಆ ಹುಡುಗಿಯ ಕೈಗಳನ್ನು ಹಿಡಿದುಕೊಂಡು

ಕಾಳಕ್ಕೆ ಚಿನ್ನಾಗಿ ಬಡಿದನು ಈ ಹುಡುಗಿಯು ಕೊಂಚ ಕಾಲ ಪ್ರಜ್ಞಾಹೀನಳಾಗಿದ್ದು ಅನಂತರ ಚೇತರಿಸಿಕೊಂಡದ್ದು ನೋಡಲು ಅವಳ ಬೆನ್ನ ಕೈಗಳಲ್ಲಿ ... ತಿಳಿಸಿದಳು ... ಕರಾಚಿ ಶಾಲೆಗೆ ... ಪ್ರಕರಣವು ನ್ಯಾಯಸ್ಥಾನಕ್ಕೆ ಬಂದು ... ಕೈದಿಗೆ ಶಿಕ್ಷೆ ವಿಧಿಸಲಾಯಿತು ...

ನೀರಿನ ತೊಟ್ಟಿಯಲ್ಲಿ ಮಗು ಬಿದ್ದು ಸತ್ತಿತು

ದಿಲ್ಲಿಯ ನಗರದಲ್ಲಿ ನೀರಿನ ಅಭಾವದಿಂದ ಮ್ಯುನಿಸಿಪಾಲಿಟಿಯವರು ಸ್ವಲ್ಪಕಾಲದಲ್ಲಿ ಮಿತವಾಗಿ ನೀರನ್ನೊದಗಿಸುತ್ತಿರುವ ಪ್ರಯುಕ್ತ ಜನರು ನೀರನ್ನು ತೊಟ್ಟಿಗಳಲ್ಲೂ ಹಂಡೆಗಳಲ್ಲೂ ಶೇಖರಿಸಿಟ್ಟುಕೊಳ್ಳುತ್ತಿರುವರು ... ಗಂಡುಮಗು ಸ್ನಾನದ ಮನೆಯಲ್ಲಿ ನೀರು ತುಂಬಿದ್ದ ತೊಟ್ಟಿಯೊಳಕ್ಕೆ ಬಿದ್ದು ಸತ್ತು ಹೋಗಿತ್ತು. ಒಂದು ಲೋಟವನ್ನು ತರಲು ಯಾರೊ ಸ್ನಾನದ ಮನೆಗೆ ಹೋಗಿ ನೋಡುವಲ್ಲಿ ಮಗುವಿನ ಶವವು ತೊಟ್ಟಿಯ ನೀರಿನ ಮೇಲೆ ತೇಲಾಡುತ್ತಿದ್ದನ್ನು ಕಂಡು ದಿಗಿಲುಬಿದ್ದು ಕೂಗಿಕೊಳ್ಳಲಾಗಿ ತಂದೆ ತಾಯಿಗಳು ಓಡಿ ಹೋಗಿ ನೋಡಿ ಬಹಳವಾಗಿ ರೋದಿಸಿದರು.

ಜರ್ಮನಿಯಲ್ಲಿ ನಿರುದ್ಯೋಗಿಗಳ ಸಂಖ್ಯೆ

ಜರ್ಮನಿಯಲ್ಲಿ 60,00 000 ಮಂದಿ ಉದ್ಯೋಗವಿಲ್ಲದಿರುತ್ತಾರೆ. ಇವರುಗಳ ಮೇಲೆ ಅಷ್ಟೇ ಸಂಖ್ಯೆಯ ಜನರು ಆಧಾರಪಟ್ಟುಕೊಂಡಿರುವರು, ಅಂದರೆ ಜರ್ಮನಿಯ ಒಟ್ಟು ಪ್ರಜಾಸಂಖ್ಯೆಯಲ್ಲಿ ೩ ಭಾಗದಷ್ಟು ಜನರು ತಕ್ಕ ಜೀವನ ಸಾಧನವಿಲ್ಲದಿರುತ್ತಾರೆ. ಈ ದುಸ್ಥಿತಿಯು ನಿವಾರಣೆಯಾಗಲು ಪ್ರಪಂಚವೆಲ್ಲ ಒಟ್ಟುಗೂಡಿ ವಿಶ್ವಾಸದಿಂದ ಕೃಷಿಮಾಡಬೇಕಾದುದು ಅತ್ಯಾವಶ್ಯಕ, ಆದರ ಅಂತು ವಿಶ್ವಾಸವು, ನಷ್ಟ ... ಸಮಸ್ಯೆಯು ಆಯುಧವಿಸರ್ಜನ ಸಭೆಯಲ್ಲಿ ಪರಿಹಾರವಾಗುವವರೆಗೂ ಹುಟ್ಟುವುದಿಲ್ಲ ಎಂದು ಜರ್ಮನಿಯ ಪ್ರಧಾನ ಮಂತ್ರಿಯು ಒಂದು ಔತಣ ಸಮಯದಲ್ಲಿ ಹೇಳಿದರು.

ದಿವಂಗತರಾದ ಸರ್ ಡಿ. ತಾತಾರಾಯವರು

ಪ್ರಸಿದ್ಧ ತಾತಾಕಂಪೆನಿಯ ಪ್ರೊಪ್ರೈಟರಾಗಿದ್ದ ಸರ್ ದೊರಾಬ್ಜಿ ತಾತಾರಾಯವರು ದೇಹಾರೋಗ್ಯಕ್ಕಾಗಿ ಜರ್ಮನಿಗೆ ಹೋಗಿ ಅಲ್ಲಿಯ ಒಂದು ಆರೋಗ್ಯಸ್ಥಳದಲ್ಲಿ ವಾಸಮಾಡುತ್ತಿದ್ದು ಕಳೆದ ಶುಕ್ರವಾರ ಹೃದ್ರೋಗದಿಂದ ಮೃತರಾದರು. ಇವರು ಯೂರೋಪಿಗೆ ಹೊರಡುವುದಕ್ಕೆ ಮೊದಲು ಮಾರ್ಚಿ ತಿಂಗಳಲ್ಲಿ ೧ ಕೋಟಿ ರೂ. ಬೆಲೆಬಾಳುವ ತಮ್ಮಾಸ್ತಿಯನ್ನು ಆಕಸ್ಮಿಕ ವಿಪತ್ತಿಗೆ ಗುರಿಯಾಗುವ ಜನರ ಸಹಾಯಕ್ಕಾಗಿ ಧರ್ಮಮಾಡಿದರಲ್ಲದೆ, ಇದಕ್ಕೆ ಮೊದಲೇ ಕ್ಷಯರೋಗ ಚಿಕಿತ್ಸಾಕ್ರಮವನ್ನು ಕಲಿಯಲು ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಲು ... ಲಕ್ಷ ರೂ. ಗಳನ್ನು ಕೊಟ್ಟಿದ್ದರು. ಇಂತಹ ಧರ್ಮಾತ್ಮರ ಮರಣದಿಂದ ಭಾರತದೇಶಕ್ಕೆ ಅಗಾಧ ನಷ್ಟವಾಯಿತು.

ಬ್ಯಾಂಕಿನ ೩೭೦೦೦ ರೂ. ಅಪಹರಣ

ಮದರಾಸು ಚಾರ್ಟರ್ಡ್ ಬ್ಯಾಂಕಿನ ಸಂರಕ್ಷಕನಾದ ಮುತ್ತು ಮೊದಲಿಯಾರನ ಸಹಾಯದಿಂದ ರಾಜರತ್ನ ಎಂಬ ವರ್ತಕನು 7000 ರೂಪಾಯಿಗಳನ್ನು ಬ್ಯಾಂಕಿನಲ್ಲಿ ಕಟ್ಟಿರುವಂತೆ ಲೆಕ್ಕದಲ್ಲಿ ಬರೆದು ಅನಂತರ 37000 ರೂ. ಗಳಿಗೆ ಚೆಕ್ಕನ್ನು ಕೊಟ್ಟು ಆ ಮೊಬಲಗನ್ನು ತೆಗೆದುಕೊಂಡನು. ಆ ದಿವಸ ಸಾಯಂಕಾಲ ಬ್ಯಾಂಕಿನ ಲೆಕ್ಕ ಜಪ್ತಿ ಮಾಡುವಾಗ್ಗೆ 37000 ರೂ. ಕಡಿಮೆ ಇರುವುದು ಕಂಡು ಬಂದಿತು. ಆ ಜಪ್ತಿ ಸಮಯದಲ್ಲಿ ಸಂರಕ್ಷಕನು ಬ್ಯಾಂಕಿನಲ್ಲಿರಲಿಲ್ಲವಾಗಿ ಅನುಮಾನ ಹುಟ್ಟಿ ಪೋಲೀಸಿಗೆ ತಿಳಿಸಲ್ಪಟ್ಟಿತು. ಪೋಲೀಸಿನವರು ರಾಜರತ್ನನನ್ನು ಸೆರೆ ಹಿಡಿದು ಅವನ ವಶದಲ್ಲಿದ್ದ 6000 ರೂ. ಗಳನ್ನು ವಶಪಡಿಸಿಕೊಂಡು ಸಂರಕ್ಷಕನನ್ನು ಹುಡುಕುವಲ್ಲಿ ಆವನು ಪಲಾಯನನಾಗಿದ್ದನು.

ಶಾರದಾ ಆಕ್ಟ್ ಉಲ್ಲಂಘನೆಗಾಗಿ ದಂಡ

ಸಾಂಗ್ಲಿವಾಸಿಯಾದ ಭೈರವ ಎಂಬಾತನು ತನ್ನ ... 7 ವರ್ಷ ವಯಸ್ಸಿನ ಸ್ನೇಹಲತೆಯನ್ನು ಚಂದ್ರಪುರದ ... 19 ವರ್ಷ ವಯಸ್ಸಿನ ವರನಿಗೆ ಕೊಡಲು ನಿಶ್ಚಯಿಸಿ ಲಗ್ನವನ್ನು ಕಟ್ಟಿಸಿದನು. ಈ ವಿವಾಹವು ನ್ಯಾಯವಿರುದ್ಧವಾದುದರಿಂದ ನಡೆಯಕೂಡದೆಂದು ಅದೇ ಊರಿನ ಭೈರವ ಚಂದ್ರಶರ್ಮನೂ ಇತರ ಒಂದಿಗರೂ ಹೆಣ್ಣಿನ ತಂದೆಗೆ ಹೇಳಿದರು. ಆವನು ಅವರುಗಳ ಮಾತನ್ನು ಉಲ್ಲಂಘಿಸಿದುದರಿಂದ ಅವರು ಯೂನಿಯನ್ ಬೋರ್ಡು ಪ್ರೆಸಿಡೆಂಟರ ಮೂಲಕ ಹೆಣ್ಣಿನ ತಂದೆಗೆ ಇಂಜಂಕ್ಷನ್ ನೋಟೀಸನ್ನು ಕೊಡಿಸಿದರು. ಆದರೂ ಹೆಣ್ಣಿನ ತಂದೆಯು ಆ ನೋಟೀಸನ್ನೂ ಲಕ್ಷ್ಯಮಾಡದೆ ಲಗ್ನಮಾಡಿ ಬಿಟ್ಟನು. ಆದರ ಮೇಲೆ ಭೈರವಚಂದ್ರಶರ್ಮನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಕೊಡಲು ಮ್ಯಾಜಿಸ್ಟ್ರೇಟು ಅಪರಾಧಿಗಳನ್ನು ಕರೆಸಿ ವಿಚಾರಣೆ ಮಾಡಿಕೊಂಡು ವರನಾದ ಚಂದ್ರಶೇಖರನಿಗೆ 100 ರೂ. ಯನ್ನೂ ಕನ್ಯೆಯ ತಂದೆಯ ಪುರೋಹಿತನಿಗೆ 100 ರೂ. ವರನ ಕಡೆಯ ಪುರೋಹಿತನಿಗೆ 25 ರೂ. ದಂಡವನ್ನೂ ವಿಧಿಸಿ ಈಗ ದೇಶದಲ್ಲಿ ದುಡ್ಡಿಲ್ಲದೆ ಜನರು ದುರವಸ್ಥೆಯಲ್ಲಿರುವುದರಿಂದ ಅಪರಾಧಿಗಳ ಮೇಲೆ ಕನಿಕರವಿಟ್ಟು ಸ್ವಲ್ಪ ದಂಡವನ್ನು ವಿಧಿಸಿರುತ್ತೇನೆಂದು ಹೇಳಿದರು.

ಪತಿಸಹಗಮನ (?) ಸತಿ

ಬಾಲ್ಯವಿವಾಹ [illegible] ಸರ್ [illegible] ಪುಟ್ಟಣ್ಣಶೆಟ್ಟರು ಸಿದ್ಧಗೊಳಿಸಿದ ಬಿಲ್ಲು ಕಳೆದ ಪ್ರಜಾಪ್ರತಿನಿಧಿ ಸಭೆಯ [illegible] ಬಹುಮತದಿಂದ ಅಂಗೀಕರಿಸಲ್ಪಟ್ಟಿದ್ದರೂ ಕಾರಣದಿಂದ [illegible] ಸಂದರ್ಭದಲ್ಲಿ [illegible] ಸಭೆಯಲ್ಲಿ [illegible] ಈ ವಿರೋಧಕ್ಕೆ [illegible] ಸಕ್ಕೆ ತರುವ [illegible] ದಿವಾನರು ಅನುಕೂಲಾಭಿಪ್ರಾಯವುಳ್ಳವರಾಗಿ [illegible] ವಿವಾಹವು [illegible] ಜನಾಭಿಪ್ರಾಯವು ಪ್ರಂಶಕೂಲವಾಗಿರುವುದರಿಂದ ಪ್ರಭುತ್ವದವರು ಈ ವಿಷಯದಲ್ಲಿ ಪ್ರವರ್ತಿಸಲು ಮನಸ್ಸಿಲ್ಲದವರಾಗಿರುತ್ತಾರೆಂದು ತಮ್ಮ ಉಪಸಂಹಾರ ಭಾಷಣದಲ್ಲಿ ಹೇಳಿ ಸಭಿಕರಿಗೆ ಅನಿರೀಕ್ಷಿತವಾದ ವಿಸ್ಮಯವನ್ನುಂಟುಮಾಡಿದರು. ಸಾಮಾಜಿಕ ಸುಧಾರಣೆಯ ಸಂಬಂಧವಾಗಿ ಯಾವ ಶಾಸನವು ತಾನೆ ವೃದ್ಧಾಚಾರ ಬದ್ಧರಾದವರ ಪ್ರಬಲ ವಿರೋಧವಿಲ್ಲದೆ ನಿರ್ಮಿಸಲ್ಪಡಲು ಸಾಧ್ಯವೆ? ಸಮಾಜದಲ್ಲಿ ಆ ವೃದ್ಧಾಚಾರಗಳಿಂದ ಕೆಡಕಾಗುತ್ತದೆಂದು ಜನರು ತಿಳಿದುಕೊಂಡಿರುವ ಪಕ್ಷದಲ್ಲಿ ಅದರ ನಿರೋಧಕ್ಕಾಗಿ ಯಾವ ಶಾಸನ ನಿರ್ಮಾಣಕ್ಕೂ ಅವಶ್ಯಕತೆಯೇ ಇರುವುದಿಲ್ಲ. ಈಗಿನ ಬಾಲ್ಯವಿವಾಹ ಪದ್ಧತಿಯಿಂದ ಕೇಡಾಗುತ್ತದೆಯೇ [illegible] ಎಂಬುದು ಮುಖ್ಯವಾಗಿ ಪರಿಶೀಲಿಸಲ್ಪಡತಕ್ಕದಾಗಿದೆ. ಈ ಕೆಡಕನ್ನು ನಿವಾರಣೆ ಮಾಡದಿದ್ದಲ್ಲಿ ಮುಂದಿನ ಪೀಳಿಗೆಗೆ ಮಹಾನರ್ಥವಾಗುವ ತಪ್ಪದಿಲ್ಲವೆಂದು ಹೇಳಬಲ್ಲೆವು. ಆದರೆ ಪಂಡಿತರ ಮತ್ತು ಪುರೋಹಿತರ ಮಾತಿನಲ್ಲಿ ಬಹಳ ಗೌರವವನ್ನಿಟ್ಟಿರುವ ನಮ್ಮ ದಿವಾನರು ಬ್ರಿಟಿಷ್ ಇಂಡ್ಯಾದಲ್ಲೆಲ್ಲ ಅನುಮೋದಿತವಾಗಿ ಆಚರಣೆಗೆ ಬಂದಿರುವ ಬಾಲ್ಯವಿವಾಹ ನಿರೋಧ ಶಾಸನವನ್ನು ನಮ್ಮ ಸೀಮೆಯಲ್ಲಿ ಆಚರಣೆಗೆ ತರುವುದರಿಂದ ಮನುಷ್ಯವರ್ಗಕ್ಕೇ ಮಹಾ ಅನರ್ಥವಾಪ್ತವಾಗುತ್ತದೆಂದು ಭಾವಿಸಿ ಅದನ್ನು ಅನುಮೋದಿಸದೆ ಹೋದುದು ಬಹಳ ಆಶ್ಚರ್ಯವಾಗಿರುತ್ತದೆ. ಈ ಶಾಸನ ನಿರ್ಮಾಣವು ಯಾವುದಾದರೊಂದು ಕೋಮಿನಲ್ಲಿರುವ ಕೆಡಕನ್ನು ಮಾತ್ರ ನಿವಾರಿಸಿ ಮಾಡತಕ್ಕುದಾಗಿರದೆ ಜಾತಿ ಮತಗಳ ಭೇದವಿಲ್ಲದೆ ಎಲ್ಲ ಕೋಮುಗಳಲ್ಲಿರುವ ಕೆಡಕನ್ನೂ ನಿವಾರಣೆ ಮಾಡುವುದಾಗಿದ್ದರೂ ಇದರಿಂದ ಬ್ರಾಹ್ಮಣ್ಯಕ್ಕೆ ಬಹಳ ಕೆಡಕಾಗುತ್ತದೆಂದು ಪ್ರಜಾಪ್ರತಿನಿಧಿಸಭೆಯ ಬ್ರಾಹ್ಮಣ ಮೆಂಬರುಗಳು ವಾದಿಸಿದರು. 15 ವರ್ಷಗಳೊಳಗಿರುವ ವಿಧವೆಯರ ಸಂಖ್ಯೆಯು ಬ್ರಾಹ್ಮಣರಲ್ಲಿ ಶೇಕಡ 5 ರಷ್ಟಿದ್ದರೆ ಬ್ರಾಹ್ಮಣೇತರರಲ್ಲಿ ಶೇಕಡ 95 ರಂತಿರುತ್ತದೆಂದು ತೋರಿಸಿಕೊಡಲ್ಪಟ್ಟಿತಾದರೂ ಬ್ರಾಹ್ಮಣರೆಲ್ಲರೂ ಏಕವಾಕ್ಯತೆಯಿಂದ ಪ್ರತಿಭಟಿಸಿದರು. ಅಲ್ಲದೆ ಇದರಿಂದ ತಮ್ಮ ಬ್ರಾಹ್ಮಣ್ಯವೇ ನಾಶವಾಗಿ ಹೋಗುತ್ತದೆಂದು ಹೇಳಿದರು! ಶಾಸ್ತ್ರ ಮತ್ತು ಪ್ರಕೃತಿ ಕರವಾಗಿಯೂ ಸಮ್ಮತವಾಗಿರುವ [illegible] ವಯಸ್ಸಿಗೆ ವಿವಾಹಕಾಲವನ್ನು ಹೆಚ್ಚಿಸುವುದರ ಮಾತ್ರದಿಂದಲೇ ಬ್ರಾಹ್ಮಣ್ಯವು ನಾಶವಾಗುವುದಾದರೆ ಅದು ವಿಚಿತ್ರ ಬ್ರಾಹ್ಮಣ್ಯವೆಂದು ಹೇಳಬೇಕಾಗುತ್ತದೆ. ಬ್ರಿಟಿಷ್ ಇಂಡ್ಯಾದಲ್ಲಿ ಶಾರದಾ ಶಾಸನವು ಅನುಷ್ಠಾನದಲ್ಲಿರುವುದಾದರೂ ಉಳಿದುಕೊಂಡಿರುವ ಬ್ರಾಹ್ಮಣ್ಯವು ಶಾರದಶಾಸನಕ್ಕಿಂತ ಕಠಿಣವಾಗಿಲ್ಲದಿರುವ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಶಾಸನದಿಂದ ನಾಶವಾಗಿಹೋಗುವ ಬ್ರಾಹ್ಮಣ್ಯವು ಮತ್ತಷ್ಟು ವಿಚಿತ್ರವಾದುದು. ಸರಿ [illegible] ಪಾರ್ಜಿತವಾಗಿ [illegible] ಬಂದಿರುವ ಈ ಅಮೂಲ್ಯ ಬಾಲ್ಯವಿವಾಹ ಪದ್ಧತಿಯನ್ನು ನಮ್ಮ ಪ್ರಭುತ್ವದವರು ಪೋಷಿಸಿಕೊಂಡು ಬರುವರೇನೊ ನೋಡಬೇಕಾಗಿದೆ. ಈ ಉಪಯುಕ್ತವಾದ ಬಿಲ್ಲನ್ನು ನಮ್ಮ ಪ್ರಭುತ್ವದವರು ಅನುಷ್ಠಾನಕ್ಕೆ ತರಲು ಸಂಕೋಚಪಡುವುದರಿಂದ ಯಾರಿಗೂ ಯಾವ ಪ್ರಯೋಜನವಾಗದೆ ಸಮಾಜಕ್ಕೆ ಮಾತ್ರ ಮತ್ತಷ್ಟು ಹಾನಿಯಾಗುತ್ತದೆ. ಪೂರ್ವಾಚಾರಪರಾಯಣರೂ ಈ ಶಾಸನ ನಿರ್ಮಾಣಕ್ಕೆ ವಿರೋಧವಾಗಿರುತ್ತಾರೆಂದು ಭಾವಿಸುವುದು ಶುದ್ಧ ತಪ್ಪು. ಕಳೆದ ವರ್ಧಂತಿಯ ಮಹೋತ್ಸವಕಾಲದಲ್ಲಿ ಪೂರ್ವಾಚಾರ ತತ್ಪರ ಸ್ತ್ರೀಯರು ರಾಜಧಾನಿಯ ಮಹಿಳಾ ಸೇವಾಸಮಾಜದಲ್ಲಿ ಶ್ರೀಮತಿ ಕಮಲಮ್ಮ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಈ ಬಾಲ್ಯವಿವಾಹ ನಿರೋಧಶಾಸನದ ಸಾಧಕ ಬಾಧಕಗಳನ್ನು ಕುರಿತು ಪರ್ಯಾಲೋಚಿಸುವಾಗ್ಗೆ, ಇಬ್ಬರು ಮಹಿಳೆಯರು ಪ್ರತಿಕೂಲವಾಗಿಯೂ ನಾಲ್ವರು ಅನುಕೂಲವಾಗಿಯೂ ಭಾಷಣ ಮಾಡಿದ ಮೇಲೆ 46 ಮಂದಿ ಬ್ರಾಹ್ಮಣ ಸ್ತ್ರೀಯರು ಶಾಸನವನ್ನು ಅನುಷ್ಠಾನಕ್ಕೆ ತರಕೂಡದೆಂದೂ 30 ಮಂದಿ ಬ್ರಾಹ್ಮಣ ಸ್ತ್ರೀಯರೂ 8 ಮಂದಿ ಬ್ರಾಹ್ಮಣೇತರ ಸ್ತ್ರೀಯರೂ ಅನುಷ್ಠಾನಕ್ಕೆ ತರಬೇಕೆಂದೂ ಓಟುಗಳನ್ನು ಕೊಟ್ಟರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಶಾಸನವನ್ನು ವಿರೋಧಿಸಿದ ಮಹಾ ನಾಗರಿಕರೆಂದೆನಿಸಿಕೊಂಡಿರುವ ಬ್ರಾಹ್ಮಣ ಮೆಂಬರುಗಳಿಗಿಂತ ಧೈರ್ಯದಿಂದಲೂ ಸಮಾಜಾಭಿವೃದ್ಧಿ ಕಾಂಕ್ಷೆಯಿಂದಲೂ ಓಟನ್ನು ಕೊಟ್ಟ ಬ್ರಾಹ್ಮಣ ಮಹಿಳೆಯರನ್ನು ನಾವು ಅಭಿನಂದಿಸುತ್ತೇವೆ. ನಮ್ಮ ಪ್ರಭುತ್ವದವರು ಕೆಲವರ ಗೊಡ್ಡು ಬೆದರಿಕೆಯ ಮಾತಿಗೆ ಕಿವಿಗೊಡದೆ ಸಂಸ್ಥಾನದ ಬಹುಜನಾಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಆಶಿಸುತ್ತೇವಲ್ಲದೆ, ಮೈಸೂರಿನವರ ಅಭಿಪ್ರಾಯವಾದರೂ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಬಾಲ್ಯವಿವಾಹ ನಿರೋಧ ಶಾಸನ ನಿರ್ಮಾಣಕ್ಕೆ ಸಹಾಯಕವಾಗಿರುತ್ತದೆಂದು ನಿರೀಕ್ಷಿಸುತ್ತೇವೆ.

[illegible] ಕೊಲ್ಲಲೆತ್ನಿಸಿದವನಿಗೆ ಮರಣ ಶಿಕ್ಷೆ

[illegible] ಮುಸಲೋನಿಯನ್ನು [illegible] ಮರಣ ಶಿಕ್ಷೆ ವಿಧಿಸಲ್ಪಟ್ಟಿತು.

ಮಹಾತ್ಮರ ಪ್ರಕೃತಿ [illegible]

[illegible] ಕಾಂಗ್ರೆಸ್ [illegible] ಪ್ರಿನ್ಸ್ [illegible] ಯಾವ ವಿಷಯವನ್ನೂ ಹೇಳಲಾರೆವೆಂದು ಮಹಾತ್ಮರು ಹೇಳಿದುದಾಗಿ ವರ್ತಮಾನವಿದೆ.

ಸುರಂಗದ ರೈಲುಬಂಡಿಗಳ ತಾಕಲಾಟ

ಲಂಡನ್ ಪಟ್ಟಣದ ಸುರಂಗದಲ್ಲಿ ಓಡಾಡುವ ವಿದ್ಯುತ್ ರೈಲುಬಂಡಿಗಳು ತಾಕಲಾಡಿ ಕೆಲವಕ್ಕೆ ಅಪಾಯವಾಯಿತಲ್ಲದೆ ಪ್ರಯಾಣಿಕರಲ್ಲಿ ಇಬ್ಬರಿಗೆ ಕೊಂಚ ಪೆಟ್ಟು ತಗಲಿತು. ಕಳೆದ 20 ವರ್ಷಗಳಿಂದಲೂ ಬಂಡಿಗಳ ತಾಕಾಟವಾಗಿರಲಿಲ್ಲವಂತೆ.

೧೦೦ ಮೈಲಿ ನಿಮಿಷಕ್ಕೆ ಬೆಂಗಳೂರಿನಿಂದ ಮದ್ರಾಸಿಗೆ

[illegible] ಬಂದಿದ್ದ ಮದ್ರಾಸಿನ [illegible] ಕಳೆದ ಗುರುವಾರ ಪ್ರಾತಃಕಾಲ 8-30 ಘಂಟೆಗೆ ರಾಜಧಾನಿಯಿಂದ [illegible] ಹೊರಟು [illegible] ಘಂಟೆಗೆ ಬೆಂಗಳೂರನ್ನು ತಲುಪಿ ಅಲ್ಲಿ ಕೆಲಕಾಲದವರೆಗೆ ವಿಶ್ರಮಿಸಿಕೊಂಡು ಮಧ್ಯಾಹ್ನ 2-20 ಘಂಟೆಗೆ ಬೆಂಗಳೂರಿಂದ ಪ್ರಯಾಣಮಾಡಿ ಮದ್ರಾಸನ್ನು 4-30 ಘಂಟೆಗೆ ಸುರಕ್ಷಿತವಾಗಿ ತಲುಪಿದರು.

ಸಪ್ರೂ [illegible] ಅಭಿಪ್ರಾಯ

ಸರ್ ತೇಜ್ ಬಹದೂರ್ ಸಪ್ರೂರವರು ಕೂಡಲೆ ಸಿಂಲಾಕ್ಕೆ ಬರಬೇಕೆಂದು [illegible] ಪೂನಾದಲ್ಲಿದ್ದ ಜಯಕರರವರಿಗೆ ತಂತಿಯನ್ನು ಕಳುಹಿ [illegible] ಬಂದಿರುವರು. ಜಯಕರರವರೂ [illegible] ಬಂದಿರುತ್ತಾರೆ. ಪ್ರಕೃತ ರಾಜಕೀಯ ಪರಿಸ್ಥಿತಿಯ [illegible] ಅಲ್ಪಸಂಖ್ಯಾಕರ ಸಮಸ್ಯೆಯನ್ನು ಪರಿಷ್ಕರಿಸುವುದು [illegible] ಸಲಹೆ ಸಂಘವನ್ನು ನಿಲ್ಲಿಸಿಬಿಡುವುದು [illegible] ನಿರ್ಣಯಿಸುವುದು, ದುಂಡುಮೇಜಿನ ಸಭೆಗೂ ಕಾಂಗ್ರೆಸ್ಸಿಗೂ ರಾಜಿಮಾಡುವುದು ಮೊದಲಾದ ವಿಷಯಗಳನ್ನು [illegible] ವರಿಬ್ಬರೂ ವೈಸ್ರಾಯರೊಡನೆ ಸಂಭಾಷಿಸಿದುದಾಗಿ ತಿಳಿದುಬಂದಿದೆ.

ಕೊಲೆಗಾರ ಶಿಕ್ಷೆ

ಮೈಸೂರಿಗೆ ಸೇರಿದ ಒಂದು ಗ್ರಾಮವಾಸಿಯಾದ [illegible] ಎಂಬವನಿಗೂ ನೆರೆ ಗ್ರಾಮಸ್ಥನಿಗೂ ಮನಸ್ತಾಪವಿದ್ದಿತು. ಒಂದು ದಿವಸ ರಾತ್ರಿ [illegible] ನೆರೆ ಗ್ರಾಮದವರು [illegible] ಮಾಡಿಕೊಂಡು ಊಟವಾದ ಮೇಲೆ [illegible] ಗ್ರಾಮದ ಹೊರಕ್ಕೆ ಕರೆದುಕೊಂಡು [illegible] ಬಾಯಿಗೆ ಬಟ್ಟೆ ತುರುಕಿ ಅವನನ್ನು ಬಾವಿಯೊಳಕ್ಕೆ [illegible] ಅದನ್ನು ಮಣ್ಣಿನಿಂದ ಮುಚ್ಚಿ ಬಂದಿದ್ದುದಕ್ಕಾಗಿ [illegible] ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು. [illegible] ಜೀವಕಾರಾಗೃಹವಾಸ ಶಿಕ್ಷೆಯೂ [illegible] ಕಠಿಣ ಸಜಾವೂ ವಿಧಿಸಲ್ಪಟ್ಟಿವೆ.

ಅಗ್ನಿ [illegible] ತಾಯಿ ಮಗು ಸತ್ತರು

[illegible] ಹಳ್ಳಿಯಲ್ಲಿ ಒಬ್ಬ ವೈಶ್ಯ ಯುವತಿಯು [illegible] ದೀಪದ ಬುಡ್ಡಿಗೆ ಎಣ್ಣೆ [illegible] ಬುಡ್ಡಿಯಿಂದ ದೀಪದ ಕಿಡಿ [illegible] ಬಿದ್ದು ಎಣ್ಣೆಯು [illegible] ಹೊತ್ತಿಕೊಂಡು [illegible] ಅಳಲಾರಂಭಿಸಿದ ಮಕ್ಕಳಲ್ಲಿ ಒಂದನ್ನು ಹೊರಕ್ಕೆ ತಂದುಬಿಟ್ಟು ಇನ್ನೊಂದು ಮಗುವನ್ನೆತ್ತಿಕೊಂಡು ಬರಲು ಮನೆಯೊಳಕ್ಕೆ ಹೋದಳು. ಕೂಡಲೆ ಅವಳ ಬಟ್ಟೆಯು ಹೊತ್ತಿಕೊಂಡು [illegible] ಸುಟ್ಟುಹೋದಳಲ್ಲದೆ ಒಳಗಿದ್ದ ಮಗುವೂ ಹೊತ್ತಿಕೊಂಡು ಮೃತವಾಯಿತು. ಮನೆಯೊಳಗಿದ್ದ ಸರ್ವಸ್ವವೂ ಸುಟ್ಟು ಭಸ್ಮವಾಯಿತು. ಆ ಯುವತಿಯು ಹೊರಕ್ಕೆ ತರಲ್ಪಟ್ಟ ಕೊಂಚ ಹೊತ್ತಿನಮೇಲೆ ಪ್ರಾಣಬಿಟ್ಟಳು.

ಮೋಸದಿಂದ ವರದಕ್ಷಿಣೆ ಪಡೆದುದಕ್ಕಾಗಿ ಶಿಕ್ಷೆ

ಸುಶೀಲ ಕುಮಾರ ಬಾನರ್ಜಿ ಎಂಬವನು ಕಲಕತ್ತಾ ವಿಶ್ವವಿದ್ಯಾಲಯದಿಂದ ಎಂ. ಎ. ಪ್ರಶಸ್ತಿಯನ್ನು ಪಡೆದಿರುತ್ತೇನೆಂದೂ, ಅನೇಕಾನೇಕ ಪ್ರಶಸ್ತಿ ಪತ್ರಗಳೂ ಬಹುಮಾನಗಳೂ ಬಂದಿರುತ್ತವೆಂದೂ ಮೂರು ವೇಳೆ ಸುಳ್ಳು ಹೇಳಿ ಮೂರು ಕನ್ಯೆಗಳನ್ನು ವಿವಾಹ ಮಾಡಿಕೊಂಡು ಅವರ ಮೂಲಕ ಅಪಾರ ವರದಕ್ಷಿಣೆಯನ್ನೂ ಆಭರಣಾದಿಗಳನ್ನೂ ಪಡೆದು ಕಡೆಯಲ್ಲಿ ಆ ಹೆಂಡತಿಗಳನ್ನು ತ್ಯಜಿಸಿಬಿಟ್ಟುದಕ್ಕಾಗಿ ಇವನಿಗೆ ಕಲಕತ್ತಾ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ 3 ವರ್ಷ ಕಠಿಣ ಸಜಾ, ಇವನಿಗೆ ಸಹಾಯಕರಾಗಿದ್ದ ಇವನ ತಾಯಿ ಸುಶೀಲ ಬಾಲಾದೇವಿಗೆ 2 ವರ್ಷ, ಚಿಕ್ಕಪ್ಪ ನಗೇಂದ್ರನಾಥ ಛಾಟರ್ಜಿ ಗೋಪಿನಾಥ [illegible] ತಿಂಗಳ ಸಜಾ ವಿಧಿಸಲ್ಪಟ್ಟಿತಲ್ಲದೆ ಇವನ ಅಣ್ಣನ ಮಗನಾದ ಪಂಚರಣ ಛಾಟರ್ಜಿಯು ಇವನಂತೆಯೇ ಬಹಳ ಪ್ರತಿಷ್ಠಿತನಾದ ಯುವಕನೆಂದು ಹೇಳಿ ಯುವತಿಯನ್ನು ಮದುವೆಯಾಗಿ ವರದಕ್ಷಿಣೆ ಮೊದಲಾದ ದ್ರವ್ಯವನ್ನು ಪಡೆದುದಕ್ಕಾಗಿ 1 ವರ್ಷ ಕಠಿಣ ಸಜಾ ವಿಧಿಸಲ್ಪಟ್ಟಿತು.

ದೊರೆತನದವರಿಗೂ ಕಾಂಗ್ರೆಸಿನವರಿಗೂ ರಾಜಿ ಅಸಾಧ್ಯ

ಕಾಂಗ್ರೆಸಿನವರೊಡನೆ ರಾಜಿಮಾಡಿಕೊಳ್ಳಲು ಬ್ರಿಟಿಷ್ [illegible] ಬರೆದವರು [illegible] ಈ ವಿಷಯವಾಗಿ ಬಹಳ [illegible] ಮಹಾತ್ಮರ [illegible] ನನ್ನು ದೊರೆತನದವರು ಬಹಳ ಅಲಕ್ಷ್ಯದಿಂದ [illegible] ಕಳುಹಿಸಿಕೊಟ್ಟರು. ಅದಕ್ಕೆ ಮಹಾತ್ಮರು ಬರೆದ ಉತ್ತರವನ್ನು ಭಾರತ ಮಂತ್ರಿಗಳು ಬಹಳ [illegible] ಪತ್ರಿಕೆಗಳಿಗೆ ಕಳುಹಿಸಿಕೊಟ್ಟರು. "ಡಾಕ್ಟರ್ ರವೀಂದ್ರರ ಸಂದೇಶದ ಭಾವವನ್ನು ಒಟ್ಟಿನಲ್ಲಿ ಅನುಮೋದಿಸುತ್ತೇನಾದರೂ ಇತರ ಕಾಂಗ್ರೆಸ್ ನಾಯಕರೊಡನೆ ಆಲೋಚಿಸಿದ ಹೊರತು ನಿರ್ಧಾರವಾಗಿ ಏನನ್ನೂ ತಿಳಿಸಲಾರೆನು" ಎಂದು ಮಹಾತ್ಮರು ಬರೆದಿರುವುದಾಗಿ ತಿಳಿದುಬಂದಿದೆ. ರವೀಂದ್ರರ ಪ್ರಕಟನೆಯನ್ನು ಬ್ರಿಟಿಷ್ ಪತ್ರಿಕೆಗಳು ಬರೆಯುತ್ತಿವೆ. ಅಲ್ಲದೆ ಮಹಾತ್ಮರ ಪ್ರತ್ಯುತ್ತರವನ್ನು ಆಧಾರವಾಗಿಟ್ಟುಕೊಂಡು ಮತ್ತಷ್ಟು ಹೆಚ್ಚಾಗಿ ಪ್ರಚಾರ ಮಾಡುತ್ತಿರುವುದರ ವಿನಾ ಈಗ ಪಾರ್ಲಿಮೆಂಟು ಸಭೆಯಲ್ಲಿ ಅಧಿಕ ಸಂಖ್ಯಾತರು ಪ್ರತಿಕೂಲರಾಗಿರುವುದರಿಂದ ಯಾವ ಪ್ರಯೋಜನವೂ ಆಗುವುದಾಗಿ ಕಂಡುಬರುವುದಿಲ್ಲ.

ಸಾವಿತ್ರಿದೇವಿಯ ಹೇಳಿಕೆ

ಲೈಸೆನ್ಸು ಇಲ್ಲದ ತುಪಾಕಿಗಳನ್ನೂ ಮದ್ದುಗುಂಡುಗಳನ್ನೂ ಇಟ್ಟುಕೊಂಡಿದ್ದುದಕ್ಕಾಗಿ ಸಾವಿತ್ರಿದೇವಿ ನಾಮಕ [illegible] ಸ್ತ್ರೀಯು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಳೆಂದು ತಿಳಿಸಿದ್ದೆವಷ್ಟೆ. ಆಕೆಯು ತನ್ನ ಹೇಳಿಕೆಯಲ್ಲಿ 'ನಾನು ಯಾವಾಗಲೂ ತುಪಾಕಿಗಳನ್ನೂ, ಮದ್ದುಗುಂಡುಗಳನ್ನೂ ಇಟ್ಟಿರಲಿಲ್ಲ ಮತ್ತು ಅವನ್ನು ಕೊಠಡಿಯಲ್ಲಾಗಲಿ ಸಾಮಾನುಗಳ ಸಂಗಡವಾಗಲಿ ಇದ್ದುದನ್ನು ಅರಿತವಳಲ್ಲ, ಅಲ್ಲದೆ ಅವುಗಳನ್ನೆಂದೂ ಮುಟ್ಟಿದವಳಲ್ಲ. ಈ ಕಾರಣದಿಂದ ನನ್ನಲ್ಲಿ ಲೈಸೆನ್ಸು ಇರಬೇಕಾದ ನಿಮಿತ್ತವಿಲ್ಲ. ನನ್ನ ಬಳಿಯಲ್ಲಿದ್ದಿತೆಂದು ತೋರಿಸುವ ಪೆಟ್ಟಿಗೆ ಕಟ್ಟಿಯು ನನ್ನದಲ್ಲ ಮತ್ತು ನನ್ನ ಕೊಠಡಿಯಲ್ಲಿ ಪೋಲೀಸಿನವರು ನನ್ನ ಸಮಕ್ಷಮ ಯಾವ ಪದಾರ್ಥವನ್ನೂ ತೆಗೆದುಕೊಂಡುದನ್ನು ನಾನು ನೋಡಲಿಲ್ಲ. ಮುಖ್ಯವಾಗಿ ನಾನು ವಾಸಿಸಿದ್ದ ಸ್ಥಳ [illegible] ಕೃತ್ಯ ನಡೆದ ದಿವಸ ಆದ ತುಪಾಕಿಗಳ ಏಟಿನಿಂದ ಕಂಪಿತಳಾಗಿ ಭಯಭ್ರಾಂತೆಯಾದೆ. ಆ ವೇಳೆಯಲ್ಲಿ ನನ್ನ [illegible] ಮತ್ತಾರೂ ನನ್ನ ಕೊಠಡಿಯಲ್ಲಿಲ್ಲದಿದ್ದುದನ್ನರಿತು ಪೋಲೀಸಿನವರು ಬಹಳ ಜುಲುಮಿನಿಂದ ಶೋಧನೆ ಮಾಡಿದರು. ಯಾವ ಪದಾರ್ಥಗಳನ್ನು ಶೋಧಿಸಿ ತೆಗೆದುಕೊಂಡರೆಂದು ನೋಡಿಕೊಳ್ಳಲು ನನ್ನ ಕಡೆಯವರಾರೂ ಇರಲಿಲ್ಲ. ಈ ಶೋಧನೆಯೆಲ್ಲವೂ ಬಹಳ ಅಕ್ರಮವೆಂದಲೂ ಜುಲುಮಿನಿಂದಲೂ ನಡೆಯಿತು. ಅವರು ಇದರ ಕಾರಣವನ್ನೂ ಸರ್ಚ್ ವಾರಂಟನ್ನೂ ತಂದಿರಲಿಲ್ಲ, ಆದರೂ ನಾನು ಮಾತ್ರ ಅವರನ್ನು ಅಡ್ಡಿಪಡಿಸಲಿಲ್ಲ. ನನ್ನ ಕೊಠಡಿಯಲ್ಲಿ ಸಿಕ್ಕಿದುವೆಂದು ಪೋಲೀಸಿನವರು ಹೇಳುವ ಪದಾರ್ಥಗಳು ಖಂಡಿತವಾಗಿಯೂ ನನ್ನವಲ್ಲ ಮತ್ತು ನನ್ನಲ್ಲಿರಲಿಲ್ಲ. ಅವುಗಳ ಗೋಜಿಗೆ ನಾನೆಂದೂ ಹೋದವಳಲ್ಲ. ನಾನು [illegible] ಸ್ತ್ರೀ ಎಂಬುದು ನಿಜ. ಅಲ್ಲದೆ ಈ ದೇಶದ (ಅಂದರೆ ನನ್ನ ದೇಶದ) ಪ್ರಜೆಗಳ ರಾಜಕೀಯ ಆಶೋತ್ತರಗಳಲ್ಲಿ ನನಗೆ ಪೂರ್ಣ ಸಹಾನುಭೂತಿಯಿರುತ್ತದೆ. ನಾನು ಖದ್ದರನ್ನು ಧರಿಸುತ್ತೇನಲ್ಲದೆ [illegible] ಕಾಲದಲ್ಲಿ ಬೀದಿಗಳಲ್ಲಿ ಹೊತ್ತುಕೊಂಡು ಮಾರುತ್ತೇನೆ. ನಾನು ಮಹಾತ್ಮರ ಶಿಷ್ಯೆಯಾಗಿರುವೆನು. ನನ್ನಲ್ಲಿ ಮದ್ದುಗುಂಡು ಇದ್ದುವೆಂದು ಸುಳ್ಳು ಹೇಳುವುದು ನನ್ನ ರಾಜಕೀಯ ಉದ್ದೇಶಕ್ಕೆ ಅಪಾರ್ಥವನ್ನು ಕಲ್ಪಿಸುವುದಕ್ಕಾಗಿ. ಅಂತಹ ಪದಾರ್ಥಗಳಿಗೂ, ಅವುಗಳನ್ನಿಟ್ಟವರಿಗೂ ನನಗೂ ಯಾವ ಸಂಬಂಧವೂ ಇರುವುದಿಲ್ಲ. ಈ ಸಂದರ್ಭದಲ್ಲಿ ನಾನು ತಪ್ಪಿಸಿಕೊಳ್ಳಲು ಬೇರೊಬ್ಬರ ಮೇಲೆ ಸುಳ್ಳು ಅಪಾದನೆ ಮಾಡತಕ್ಕವಳಲ್ಲ. ಆದರೆ ಯಾವುದೊಂದು ಕಾರಣವಿಲ್ಲದೆ ಅಪರಾಧಿನಿಯನ್ನಾಗಿ ಮಾಡುವರೆಂದು ಬಹಳ ಧೈರ್ಯದಿಂದ ಹೇಳುವೆನು. ನಾನು ನಿರಪರಾಧಿಯೆಂದು ಮನಸ್ಸಾಕ್ಷಿಯಾಗಿ ಅರುಹುವೆನು ಮತ್ತು ಕೋರ್ಟಿನವರು ಸಹ ಹಾಗೆಯೇ ತಿಳಿದು ದೋಷಮುಕ್ತಳನ್ನಾಗಿ ಮಾಡುವರೆಂದು ನಿರೀಕ್ಷಿಸುತ್ತೇನೆ' ಎಂದು ಹೇಳಿದಳು.

ಒಳದೇಶದ ವೃತ್ತಾಂತಗಳು.

ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಕುರುಡರ ಪಾಠಶಾಲೆಗಳು ಜುಲೈ ತಿಂಗಳಲ್ಲಿ ಪ್ರಾರಂಭಿಸಲ್ಪಡುತ್ತವೆ. ಇಷ್ಟವುಳ್ಳ ವಿದ್ಯಾರ್ಥಿಗಳು ಆಯಾ ಹಾಸ್ಟಲುಗಳ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕದ್ದು.

ನಮ್ಮ ಸಹೋದ್ಯೋಗಿಯಾದ ರಾಜಧಾನಿಯ ವಿಶ್ವಬಂಧು ಪತ್ರಿಕೆಯ 9 ನೆಯ ವರ್ಷದ ವರ್ಧಂತ್ಯುತ್ಸವವು ಕಳೆದ ತಾ|| 1[illegible] ನೆಯ ಶನಿವಾರ ಅಸಿಸ್ಟೆಂಟ್ ಕಮಿಷನರ್ ಮ|| ಕೆ. ಬಸವರಾಜ ಅರಸಿನವರ ಅಧ್ಯಕ್ಷತೆಯಲ್ಲಿ ನೆರವೇರಿತೆಂದು ತಿಳಿಸಲು ಸಂತೋಷಿಸುತ್ತೇವಲ್ಲದೆ ಈ ಪತ್ರಿಕೆಯು ದೀರ್ಘಾಯುವಾಗಿದ್ದು ಪ್ರಜಾಸೇವೆಯನ್ನು ಮಾಡಿ ಕೃತಕೃತ್ಯವಾಗಲೆಂದು ಹಾರೈಸುತ್ತೇವೆ.

ಕಳೆದ [illegible] ವಗಳನ್ನು [illegible]

ದಿವಾನರವರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ.ಸಿ.ಐ.ಇ., ಒ.ಬಿ.ಇ., ಯವರು ಲಂಡನ್ ನಗರದಲ್ಲಿ ನೆರೆಯುವ ರೌಂಡ್ ಟೇಬಲ್ ಕಾನ್ಫರೆನ್ಸಿನಲ್ಲಿ ಭಾಗಿಗಳಾಗಲು ನಿಯಮಿಸಲ್ಪಟ್ಟಿರುತ್ತಾರೆಂದು 1931 ರಲ್ಲಿ ಪ್ರಕಟವಾಗಿದ್ದ ವಾರ್ತೆಯನ್ನು ಆಧಾರರಹಿತವೆಂದು ಕಳೆದ ವಾರದ ಸ್ಟಾರ್ ಪತ್ರಿಕೆಯ ಒಳದೇಶದ ವರ್ತಮಾನಗಳಲ್ಲಿ ಪ್ರಕಟಿಸಿರುವುದಕ್ಕಾಗಿ ವಿಷಾದಿಸುತ್ತೇವೆ.

ರಾಜಧಾನಿಯಲ್ಲಿ ಈ ಸಲ ನಡೆದ ಕುದುರೆ ಜೂಜಿನೊಳಗೆ ಮಹಾರಾಜರವರ [illegible] ಆಟದಲ್ಲಿ ಮೊದಲನೆಯ ಬಹುಮಾನವಾದ 7000 ರೂ [illegible] ಎರಡನೆಯ ಬಹುಮಾನವಾದ 361 ರೂ [illegible] ಮೂರನೆಯ ಬಹುಮಾನದ 100 ರೂ [illegible] ಒಬ್ಬೊಬ್ಬರಿಗೆ 201 ರೂ ನಂತೆ 14 ಮಂದಿಗೂ ಬಂದಿರುತ್ತವೆ.

ರಾಜಧಾನಿಯಲ್ಲಿ 1 2 ವಾರಗಳಿಂದ ಮಳೆಯಿಲ್ಲದೆ ಶಕೆ ಹೆಚ್ಚಾಗಿದೆ ಮತ್ತು ಬಹಳ ಜೋರಾಗಿ [illegible] ಬೀಸುತ್ತಿರುವುದರಿಂದ ಜನರು ಆಕಾಶವನ್ನೇ ನೋಡುತ್ತಿರುವರು. ವರ್ಧಂತ್ಯುತ್ಸವಕ್ಕೆ ಬಂದಿದ್ದ ಮದ್ರಾಸ್ ಗವರ್ನರು, ಹೈದರಾಬಾದಿನ ಯುವರಾಜ ದಂಪತಿಗಳು, ಜಯಪುರದ ಮಹಾರಾಜರು ಮೊದಲಾದ ಅತಿಥಿಗಳೆಲ್ಲರೂ ಹಿಂದಿರುಗಿ ಪ್ರಯಾಣಮಾಡಿದರು. ಹೊರಗಿನಿಂದ ಬಂದಿರುವ ಸಂಗೀತಗಾರರ ಹಾಡುಗಾರಿಕೆಯು ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ನಡೆಯುತ್ತಿರುವುದು.

ಈ ವೇಳೆ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದಲ್ಲಿ ಶ್ರೀಮದ್ಯುವರಾಜರವರ ಸ್ವಾರಿಯೂ ಇದ್ದುದರಿಂದ ಅತ್ಯಂತ ಶೋಭಾಯಮಾನವಾಗಿಯೂ ಆಹ್ಲಾದಕರವಾಗಿಯೂ ಇದ್ದಿತು. ರಾತ್ರಿ ಅರಮನೆಗೆ ಹಿಂದಿರುಗಿ ಬರುವಾಗ್ಗೆ ಪ್ರಭು ಸಹೋದರರುಗಳು ಅತ್ಯಂತ ಮನೋರಂಜಕವಾಗಿ ಅಲಂಕರಿಸಲ್ಪಟ್ಟಿದ್ದ ಮೋಟಾರು ಬಂಡಿಯಲ್ಲಿ ಕುಳಿತುಕೊಂಡಿದ್ದುದೂ ಮುಂಗಡೆ ಕುಲದೀಪಕರಾದ ಶ್ರೀ ಜಯಚಾಮರಾಜ ಒಡೆಯರವರು ಕುದುರೆ ಸ್ವಾರಿಮಾಡಿಕೊಂಡು ಬರುತ್ತಿದ್ದುದೂ ಪ್ರೇಕ್ಷಕರ ಕಣ್ಣುಗಳನ್ನು ಸೂರೆಮಾಡಿದ್ದುವು. ಇಂತಹ ಉತ್ಸವಗಳನ್ನು ಪ್ರಜೆಗಳು ಅನಂತವಾಗಿ ನೋಡಿ ಧನ್ಯರಾಗುವಂತೆ ಅನುಗ್ರಹಿಸಲೆಂದು ಪರಮೇಶ್ವರನನ್ನು ನಾವು ಸರ್ವರೊಡನೆ ಪ್ರಾರ್ಥಿಸುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ಬಜೆಟ್ ಅಧಿವೇಶನ ಜೂನ್ 1934

ದಿವಾನ್ ರವರು ಅಧಿವೇಶನವನ್ನು ಮುಕ್ತಾಯಗೊಳಿಸುವುದರಲ್ಲಿ ಅಪ್ಪಣೆಕೊಡಿಸಿದ ಮುಕ್ತಾಯ ಭಾಷಣ

18 ನೆಯ ಜೂನ್ 1934

ಮಹನೀಯರೇ,—

ಪ್ರಜಾಪ್ರತಿನಿಧಿ ಸಭೆಯ ಈ ಅಧಿವೇಶನವನ್ನು ಮುಕ್ತಾಯಗೊಳಿಸುವುದರಲ್ಲಿ ನಾನು ಕೆಲವು ಅಂಶಗಳನ್ನು ಮಾತ್ರವೇ ಸೂಚಿಸುತ್ತೇನೆ.

ಈ ಅಧಿವೇಶನದಲ್ಲಿ ಸದಸ್ಯರುಗಳ ಪರ್ಯಾಲೋಚನೆಗಾಗಿ ಸರ್ಕಾರದವರು ಕೆಲವು ಮಸೂದಾ ಶಾಸನಗಳ ಸಾಮಾನ್ಯ ನಿಯಮಗಳ ವಿವರಣೆಗಳನ್ನು ಒಪ್ಪಿಸಿದ್ದರಷ್ಟೆ. ಈ ಸಂಬಂಧದಲ್ಲಿ ಒಂದೇ ಒಂದು ಮಸೂದಾ ಶಾಸನದ ಹೊರತು ಉಳಿದ ಮಸೂದಾ ಶಾಸನಗಳೆಲ್ಲವನ್ನೂ ಈ ಸಭೆಯವರು ಅನುಮೋದಿಸಿದರು. ಭೂ ಸಂಪಾದನೆಯ ರೆಗ್ಯುಲೇಷನನ್ನು ತಿದ್ದುಪಾಟು ಮಾಡತಕ್ಕ ಮಸೂದಾ ಶಾಸನದ ಸಂಬಂಧದಲ್ಲಿ ಮಾತ್ರ ಈ ಸಭೆಯವರ ಒಪ್ಪಿಗೆಯು ದೊರೆಯಲಿಲ್ಲ. ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಪರಸ್ಪರ ಸಹಾಯ ಸಂಘಗಳನ್ನೂ ರಿಜಿಸ್ಟರ್ಡು ಆದ ಇತರ ಸಂಘಗಳನ್ನೂ ಕಂಪನಿಗಳಂತೆಯೇ ಭಾವಿಸುವಂತೆ ಭೂ ಸಂಪಾದನೆಯ ರೆಗ್ಯುಲೇಷನನ್ನು ತಿದ್ದುಪಾಟು ಮಾಡಬೇಕೆಂದು ಈ ಮಸೂದಾ ಶಾಸನವನ್ನು ಸದಸ್ಯರುಗಳಿಗೆ ಒಪ್ಪಿಸಲಾಗಿದ್ದಿತು. ಈ ಸೂಚನೆಯಲ್ಲಿ ಹೊಸ ವಿಚಾರವೇನೂ ಸೇರಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ 12 ವರುಷಗಳಿಂದಲೂ ಇದೇ ಬಗೆಯ ಶಾಸನವು ಆಚರಣೆಯಲ್ಲಿದ್ದು ಉಪಯುಕ್ತವಾಗಿ ಕಂಡುಬಂದಿದೆ. ಆ ಶಾಸನದ ನಿಯಮಗಳನ್ನೇ ಮೈಸೂರು ಸಂಸ್ಥಾನದಲ್ಲಿಯೂ ಆಚರಣೆಗೆ ತರಬೇಕೆಂಬ ಉದ್ದೇಶದಿಂದ ಮಾತ್ರವೇ ಈ ಮಸೂದಾ ಶಾಸನವನ್ನು ರಚಿಸಿ ಅದರ ಸಾಮಾನ್ಯ ನಿಯಮಗಳ ವಿವರಣೆಯನ್ನು ಈ ಸಭೆಯವರಿಗೆ ಒಪ್ಪಿಸಿದ್ದೆವಷ್ಟೆ. ಅದನ್ನು ಸದಸ್ಯರುಗಳು ಸಂತೋಷವಾಗಿ ಅಂಗೀಕರಿಸುವರೆಂದು ನಂಬಿದ್ದೆವು. ಆದರೆ ಆ ಕಾಯಿದೆ ವಿಷಯದಲ್ಲಿಯೂ ಅದರಿಂದ ಉಂಟಾಗಬಹುದಾದ ಪರಿಣಾಮಗಳ ವಿಷಯದಲ್ಲಿಯೂ ಸದಸ್ಯರುಗಳಿಗೆ ಸ್ವಲ್ಪಮಟ್ಟಿಗೆ ಯಾವುದೋ ಒಂದು ಬಗೆಯ ಶಂಕೆಯುಂಟಾಯಿತೆಂದು ತೋರುತ್ತದೆ. ಈ ಮಸೂದಾ ಶಾಸನದ ವಿಚಾರದಲ್ಲಿ ಸಭೆಯವರ ಅನುಮತಿಯು ದೊರೆಯದೆ ಹೋದುದಕ್ಕೆ ಅದು ಮಾತ್ರವೇ ಕಾರಣವಾಗಿರಬೇಕು.

[illegible] ಪುಸ್ತಕಗಳ ಮೇಲಿನ ತೆರಿಗೆ.

[illegible] ಈ ತೆರಿಗೆಯಿಂದ ಬರುವ [illegible] ಸಂಸ್ಥೆಗಳಿಗೆ [illegible] ಅದರ ಬದಲು [illegible] ಮಾತ್ರವೇ [illegible] ಈ ವಿಷಯವನ್ನು ಸರ್ಕಾರದವರು ಪರಿಶೀಲಿಸುತ್ತಾರೆ.

ಇನಾಮು ಹಳ್ಳಿಗಳ ದಾಖಲಾತಿ ರೆಗ್ಯುಲೇಷನಿನ ಮೇರೆಗೆ ವಸೂಲಾಗುವ ಫೀಜುಗಳ ವಿಚಾರ.

ಇನಾಮು ಹಳ್ಳಿಗಳ ದಾಖಲಾತಿಯ ರೆಗ್ಯುಲೇಷನಿನ ಮೇರೆಗೆ ವಸೂಲು ಮಾಡುತ್ತಿರುವ ಫೀಜುಗಳನ್ನು ತಗ್ಗಿಸಬೇಕೆಂದು ಅರಿಕೆಗಳಾದುವು. ಹಿಂದೆ ಎರಡು ವರುಷಗಳ ಕೆಳಗೆ ಈ ಸಭೆಯಲ್ಲಿ ಇದೇ ಬಗೆಯ ಅರಿಕೆಗಳು ಮಾಡಲ್ಪಟ್ಟಾಗ, ನಾನು ಹೇಳಿದ್ದುದನ್ನೇ ಪುನಃ ಈಗಲೂ ಹೇಳಬೇಕಾಗಿದೆ. ಆಗ ನಾನು ಹೇಳಿದ್ದುದೇನೆಂದರೆ.—

"ಈ ರೆಗ್ಯುಲೇಷನಿನ ಮೇರೆಗೆ ವಿಧಾಯಕವಾಗಿರುವ ಫೀಜುಗಳಿಂದ ಲಾಭ ಸಂಪಾದನೆ ಮಾಡಿಕೊಳ್ಳಬೇಕೆಂಬ ಉದ್ದೇಶವು ನಮಗೆ ಖಂಡಿತವಾಗಿ ಇಲ್ಲ. ಇನಾಮು ಹಳ್ಳಿಗಳ ದಾಖಲಾತಿ ಶಿಸ್ತನ್ನು ಆಚರಣೆಗೆ ತರಲು ತಗಲುವ ವೆಚ್ಚವು ಆ ಖಾತೆಗೆ ಸಂಬಂಧಪಟ್ಟ ಇನಾಮುದಾರರುಗಳಿಂದ ವಸೂಲಾಗಬೇಕೆಂಬ ಉದ್ದೇಶದಿಂದ ಮಾತ್ರವೇ, ಸರ್ಕಾರದವರು ಈಗ ಜಾರಿಯಲ್ಲಿರುವ ಫೀಜುಗಳ ದರವನ್ನು ಗೊತ್ತುಪಡಿಸಿದ್ದಾರೆ."

ಈ ವಿಷಯವಾಗಿ ಚರ್ಚೆಯು ನಡೆಯುತ್ತಿದ್ದಾಗ ತಮಗೆ ಒಪ್ಪಿಸಿದ ಲೆಕ್ಕಗಳಿಂದ ಈ ಬಾಬಿನಲ್ಲಿ ವೆಚ್ಚಕ್ಕಿಂತಲೂ ಹುಟ್ಟುವಳಿಯು ಎಷ್ಟೋ ಅಲ್ಪಸ್ವಲ್ಪ ಮಾತ್ರವೇ ಜಾಸ್ತಿಯಾಗಿದೆಯೆಂಬುದು, ತಮಗೆ ಮನವರಿಕೆ [illegible] ವಾಗಿರಬೇಕು. ಹೀಗಿರುವಲ್ಲಿ ಫೀಜುಗಳ ದರವನ್ನು ಪ್ರಕೃತದಲ್ಲಿ ತಗ್ಗಿಸುವುದು ಸಾಧ್ಯವಿಲ್ಲವೆಂಬ ವಿಷಯವು ತಮ್ಮುಗಳಿಗೆ ಮನದಟ್ಟಾಗಿರುವುದೆಂದು ಖಂಡಿತವಾಗಿ ನಂಬುತ್ತೇನೆ. ಆದರೂ ಈ ಕೂಡಲೇ ಇನಾಮು ಹಳ್ಳಿಗಳ ದಾಖಲಾತಿ ಶಿಸ್ತಿಗೆ ತಗಲತಕ್ಕ ವೆಚ್ಚವನ್ನು ತಗ್ಗಿಸುವುದಕ್ಕೇನಾದರೂ ಅವಕಾಶವುಂಟೆ ಎಂಬ ಸಂಗತಿಯನ್ನು ಮತ್ತೊಮ್ಮೆ ಪರಿಶೀಲಿಸಿ ನೋಡಿ ಫೀಜಿನ ದರವನ್ನೇನಾದರೂ ತಗ್ಗಿಸುವುದು ಸಾಧ್ಯವೆಂತಾದಲ್ಲಿ, ಹಾಗೆ ಸಾಧ್ಯವಾದಷ್ಟು ಸಹಾಯವನ್ನು ಮಾಡಲಾಗುವುದು.

ಬಾಲ್ಯವಿವಾಹ ನಿರೋಧಕ ಮಸೂದಾ ಶಾಸನದ ವಿಚಾರ

ಬಾಲ್ಯವಿವಾಹವನ್ನು ನಿರೋಧಿಸುವ ಮಸೂದಾ ಶಾಸನದ ವಿಚಾರದಲ್ಲಿ ತೀವ್ರಾಸಕ್ತಿಯುಳ್ಳ ಸ್ವಾರಸ್ಯವಾಗಿಯೂ ಚರ್ಚೆಯು ನಡೆಯಿತು.

ಸದಸ್ಯರಲ್ಲಿ ಬಹುಭಾಗದವರೇನೋ ಈ ಮಸೂದಾ ಶಾಸನವನ್ನು ಆಚರಣೆಗೆ ತರಬಹುದೆಂದು ಅಭಿಪ್ರಾಯಪಟ್ಟರು. ಆದರೆ ಬಾಲ್ಯವಿವಾಹವು ನಡೆಯುವುದಾದರೆ ಅಂತಹ ಸಂದರ್ಭಗಳಲ್ಲಿ ಶಿಕ್ಷೆಯನ್ನು ವಿಧಾಯಕವಾಗಿ [illegible] ಈ ಮಸೂದಾ ಶಾಸನವನ್ನು ಆಚರಣೆಗೆ ತಂದಲ್ಲಿ, ಒಳ್ಳೆಯದಾಗುವುದಕ್ಕಿಂತಲೂ ಹೆಚ್ಚಾಗಿ ಕೆಡುಕೇ ಆಗುವುದೆಂದು ಹಲವು ಮಂದಿ ಸದಸ್ಯರು ಅಭಿಪ್ರಾಯಪಟ್ಟರು. ಅಂತೂ [illegible] ಹೀಗೂ ಇರುವವರ ಮನೋಭಾವಗಳನ್ನೆಲ್ಲಾ ಕೂಡಿ ನೋಡಿದರೆ, ಸದ್ಯದಲ್ಲೇನೋ ಈ ವಿಚಾರದಲ್ಲಿ ಭಿನ್ನಮಾನಗಳನ್ನು [illegible] ಮೇಲೆಂದು ಅನುಮೋದಿಸಬೇಕಾಗಿದೆ. ಮತ್ತು ಸಾಮಾಜಿಕ ವಿಚಾರಗಳಿಗೂ ಉಭಯತಾಪಿ ಸಂಬಂಧಪಟ್ಟಿರುವ ವಿಷಯಗಳಲ್ಲಿ ಶಾಸನವನ್ನು ವಿಧಾಯಕ ಮಾಡಲು ನಮ್ಮ ದೇಶದಲ್ಲಿ ಕಾರ್ಯಗತಿ ಅನೇಕ ಕಷ್ಟಗಳಿವೆ. [illegible] ಸ್ಥಿರವಾಗಿ ನಿಲ್ಲುವಂತಹ ವಾಸ್ತವವಾದ ಸುಧಾರಣೆಗಳಾಗಬೇಕಾದರೆ ಜನಗಳು ತಮ್ಮ ತಿಳುವಳಿಕೆಯಿಂದ ತಾವೇ ಮನಃಪೂರ್ವಕವಾಗಿ ಸುಧಾರಣೆಗಳನ್ನು ನೆರವೇರಿಸುವುದರಿಂದ ಅದು ಸರಾಗವಾಗಿ ಸಾಗುವುದೆಂಬುದೂ ಒಂದು ತತ್ವವಾಗಿದೆ. ಹೊರಗಿನ ನಿರ್ಬಂಧಗಳನ್ನು ಹೇರುವುದರಿಂದ ಅದು ನೆರವೇರುವಂತೆ ಮಾಡುವುದು ಸಾಧ್ಯವಿಲ್ಲ.

ನಾನು ಹೀಗೆ ಹೇಳುತ್ತೇನಾದರೂ ಅನೇಕಾನೇಕ ಸುಧಾರಣೆಗಳನ್ನು ಆಚರಣೆಗೆ ತಂದಿರುವ ತುರ್ಕಿಸ್ಥಾನದವರ ಉದಾಹರಣೆಯನ್ನು ನಾನು ಮರೆತಿಲ್ಲ. ಆದಾಗ್ಯೂ ನಮ್ಮ ದೇಶದ ಸ್ಥಿತಿಗತಿಗಳು, ಅದರಲ್ಲಿಯೂ ಮುಖ್ಯವಾಗಿ ಮತವಿಷಯಕವಾದ ಮತ್ತು ಸಾಮಾಜಿಕ ವಿಷಯವಾದ ಸ್ಥಿತಿಗತಿಗಳು ತುರ್ಕಿಸ್ಥಾನದ ಸ್ಥಿತಿಗತಿಗಳಂತಿಲ್ಲವೆಂಬುದನ್ನು ನಾವು ಮರೆಯಕೂಡದು. ಒಂದು ದೇಶದಲ್ಲಿ ಆವಶ್ಯಕವೂ ಮತ್ತು ಉಪಾದೇಯವೂ ಆದುದು, ಮತ್ತೊಂದು ದೇಶದಲ್ಲಿ ಅನಾವಶ್ಯಕವಾಗಿರಬಹುದಲ್ಲದೆ ಅಲ್ಲಿ ಅದನ್ನು ಆಚರಣೆಗೆ ತರುವುದು ಉಚಿತವಲ್ಲದೆ ಇರಬಹುದು.

ಆದಕಾರಣ, ಬಾಲ್ಯವಿವಾಹವನ್ನು ನಿರೋಧಿಸುವ ಶಾಸನವನ್ನು [illegible] ವಿಷಯದಲ್ಲಿ ಪ್ರಜಾಭಿಪ್ರಾಯವು ಇನ್ನೂ ಹೆಚ್ಚು ಸ್ಪಷ್ಟವಾಗಿ [illegible] ಬೇಕೆಂದು [illegible] ಸರ್ಕಾರದವರು ಈ ವಿಷಯದಲ್ಲಿ ಪ್ರವರ್ತಿಸಲು ಮನಸ್ಸಿಲ್ಲದವರಾಗಿದ್ದಾರೆ. ಪ್ರಗತಿಸಾಧನೆಯ ಮನೋಭಾವವು ನಮ್ಮ ದೇಶದಲ್ಲಿ ಅನೇಕ ವಿಷಯಗಳಲ್ಲಿ ಈಗ ವ್ಯಕ್ತಗೊಂಡಿದೆ. ಈ ವಿಚಾರದಲ್ಲಿಯೂ [illegible] ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ನಮಗೆ ಧೈರ್ಯವನ್ನುಂಟುಮಾಡಲೆಂದು ಹಾರೈಸೋಣ.

ಮೈಸೂರು ಸಂಸ್ಥಾನದ ಪ್ರಗತಿ ಮತ್ತು ಅಖಿಲ ಭಾರತೀಯ ಸಂಯುಕ್ತ ರಾಜ್ಯಾಂಗ ವ್ಯವಸ್ಥೆ

ಪ್ರಗತಿಯ ವಿಷಯವಾಗಿ [illegible] ಈ ಸಭೆಯಲ್ಲಿ [illegible] ಹೇಳಿದುದನ್ನು ಕುರಿತು ಆ ಸಂಬಂಧವಾಗಿ ನಾನು ಕೆಲವು ಸಂಗತಿಗಳನ್ನು ಸೂಚಿಸುವೆನು. ನಾನು ಹಾಗೆ ಮಾಡುವೆನೆಂದು [illegible] ನಿರೀಕ್ಷಿಸಿರುವಿರೆಂಬುದರಲ್ಲಿ ಸಂಶಯವಿಲ್ಲ.

ಈ ಪ್ರಗತಿಯ ವಿಚಾರವು [illegible] ಬ್ರಿಟಿಷ್ ಇಂಡಿಯಾದಲ್ಲಿರುವ [illegible] "ರೌಂಡ್ ಟೇಬಲ್" [illegible] ಅಧಿವೇಶನದಲ್ಲಿ [illegible] ಸಹಜವಾಗಿದೆ.

ಹಿಂದೂ ಭಾರತೀಯ ಸೇನೆಯಲ್ಲಿ ಲಾಕ್ಯಾಂಡ ವ್ಯವಸ್ಥೆಯ ವಿಷಯಕ್ಕೆ ನಮ್ಮ ಮೈಸೂರು ಸಂಸ್ಥಾನಕ್ಕೆ [illegible] ಅಧಿಕಾರ ಒಪ್ಪಿಸಿದುದನ್ನು [illegible] ಕೊಟ್ಟಿರುವ ಸಂಸ್ಥಾನದ [illegible] ಇಂಡಿಯಾ ಸರ್ಕಾರ [illegible] ಸಂಬಂಧವುಳ್ಳವು [illegible] ರಾಜಕೀಯ [illegible] ಇಂಡಿಯಾ [illegible]

[illegible]

ಆದಕಾರಣ ಅದರ ಶೀಘ್ರವಾಗಿಯೂ ಅದನ್ನು ಖುಷಿವಾಗಿ ಯೂ ಸಂಯುಕ್ತ ವ್ಯವಸ್ಥೆಯನ್ನು [illegible] ರಾಜಕೀಯ ವಿಚಾರಗಳಿಂದಲ್ಲ ಏಕೀಭಾವವನ್ನು [illegible]

[illegible]

ನ್ಯಾಯಶೀಲತೆಯೂ ದೇಶಾಭಿಮಾನವೂ [illegible] ವಾಗಿ ಕಂಗೊಳಿಸುವಂತೆ ಸಂಯುಕ್ತ ವ್ಯವಸ್ಥೆಯ ಭವ್ಯಮಂದಿರವನ್ನು ನಿರ್ಮಿಸುವುದಕ್ಕೆ ಕಾರಣವಾಗಲೆಂಬುದಾಗಿ ನಾವೆಲ್ಲರೂ [illegible] ವಾಗಿ ಹಾರೈಸೋಣ

ಚಿಕ್ ಮಗಳೂರ್ ಡಿಸ್ಟ್ರಿಕ್ಟ್ ಬೋರ್ಡ್

ನೋಟೀಸು.

ಚಿತ್ರದ [illegible] ತಾಲ್ಲೂಕಿನಲ್ಲಿ ಈ ಕೆಳಗೆ ನಮೂದು ಮಾಡಿರುವ ಕಾಂಗಾರಿಗಳನ್ನು ನಡೆಸತಕ್ಕ ಬಗ್ಗೆ ಬೇರೆ ಬೇರೆ ಸೀಲ್ಡು ಟೆಂಡರುಗಳು ತಾ|| 2 7-1932 ನೇ ಮಧ್ಯಾಹ್ನ 3 ಘಂಟೆ ವರುವಿಗೆ [illegible] ಪ್ಲಾನ್ ವಗೈರೆ ತಪಸೀಲುಗಳನ್ನು ಕೆಲಸ ನಡೆಯುತ್ತಿರುವ ಕಾಲಗಳಲ್ಲಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು

			ರೂ.
1	ಸಾದರಹಳ್ಳಿ, ಭಾಂಡ ಮಾಡಿಸುವುದು, ಡಿಪಾಜಿಟ್		100
2.	ಚಿಪ್ಪಿನಕೆರೆ	,,	100
3	ಚಿಕ್ಕ ಗುಂಟನೂರು	,	100
4	ಗೊಡಬನಹಾಳು	,,	100

ಕಾಂಗಾರಿಗಳನ್ನು 1932 ನೇ ಡಿಸಂಬರ್ ಅಖೈರೊಳಗೆ ಪೂರೈಸಬೇಕು

ಬಿ. ಚೆನ್ನಪ್ಪ,
ಪ್ರೆಸಿಡೆಂಟ್.

[2—2]

NOTICE

Tenders are invited for preparing a scheme and an estimate for installation of electric plant in Gadag Betgeri Municipal limits to provide 1500 electric lights of 25 candle power excluding decorative lights and big lights on public squares

Sealed tenders should be submitted within one month from the date of this notice only by the qualified electrical engineers or by companies who have employed such engineers

In the tenders information should be given regarding the charges for preparing the scheme and estimate after visiting this place

Detailed information if any required may be obtained from this office

Municipal Office,
Gadag Betgeri, 16-6-32

T. V Koti,
President
Gadag Betgeri
Municipal Borough

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಗುಂಡ್ಲುಪೇಟೆ ತಾ|| ಮಡಹಳ್ಳಿ

ತಾ 11 ನೇ ಮಂಗಳವಾರ ನಮ್ಮ [illegible] ಶ್ರೀಮನ್ಮಹಾರಾಜ [illegible]

[illegible]

ಹೇಳಿಕೆ ತಾ|| ಗಡಿಪಳ್ಳಿ

[illegible]

ಹೊಸ್ಪೇಟೆ

ಕಳೆದ ಮಂಗಳವಾರ ಶ್ರೀಮನ್ಮಹಾರಾಜರವರ 49 ನೆಯ ವರ್ಷದ ವರ್ಧಂತ್ಯುತ್ಸವದಿನವಾದುದರಿಂದ ಆ ದಿವಸ ಬೆಳಗ್ಗೆ ಹೊಸ್ಪೇಟೆಯ ಎಲ್ಲಾ ಸ್ಕೂಲಿನ ವಿದ್ಯಾರ್ಥಿಗಳ ಸ ಮಾರು 400 ರವರೆಗೆ ಇಲ್ಲಿಯ ಸಬ್‌ಡಿವಿಜನ್ ಆಫೀಸ ಬಂಗಲೆಯಿದಿರಿಗಿರುವ ಮೈದಾನದಲ್ಲಿ ಸ್ಥಾಪಿತವಾಗಿದ್ದ ಸಂಸ್ಥಾನದ ಧ್ವಜದ ಸುತ್ತಲೂ ನೆರೆದು ಧ್ವಜವಂದನೆಯನ್ನು ಮಾಡಿದರು ಅನಂತರ ಸ್ಥಳೀಯ ಅಧಿಕಾರಿಗಳು ಉದ್ಯೋಗಸ್ಥರು ವರ್ತಕರುಗಳು ಮೊದಲಾದವರೆಲ್ಲರೂ ಸೇರಿ ಪುಷ್ಪಮಾಲಿಕೆಗಳಿಂದ ಮನೋಹರವಾಗಿ ಅಲಂಕೃತವಾದ ಶ್ರೀಮನ್ಮಹಾರಾಜರವರ ಛಾಯಾಚಿತ್ರಪಟವನ್ನು ವಾದ್ಯ ಸಮೇತ ಊರಿನ ಮುಖ್ಯ ಬೀದಿಗಳಲ್ಲಿ ಉತ್ಸವ ಹೊರಡಿಸಿದರು ದಾರಿಯುದ್ದಕ್ಕೂ ಜನರು ಹಣ್ಣು ಫಲ ಪುಷ್ಪಗಳನ್ನರ್ಪಿಸಿ ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ಪ್ರದರ್ಶಿಸಿದರು ಈ ಉತ್ಸವ ಚೌಕಕ್ಕೆ ಬರುವಷ್ಟರಲ್ಲಿ ಜನಸಂಖ್ಯೆಯು 1000 ವರೆಗೆ ಸೇರಿ ನೂತನ ಜಯಘೋಷವು ಸಭೋಮಂಡಲವನ್ನು ಮೊಳಗಿಸುತ್ತಿದ್ದಿತು 10 ಘಂಟೆಗೆ ಉತ್ಸವವು ಪೂರೈಸಿ ಶ್ರೀ ಕೋದಂಡರಾಮಸೆಟ್ಟರ ಧರ್ಮಸತ್ರದಲ್ಲಿ ಸಬ್ ಡಿವಿಜನ್ ಆಫೀಸರೂ ಟೌನ್ ಮ್ಯುನಿಸಿಪಲ್ ಪ್ರೆಸಿಡೆಂಟರೂ ಆದ ಮ|| ಜಿ. ಬಿ ತುಲ್ಲಿರಾಥ, ಎಂ ಎ, ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಮನ್ಮಹಾರಾಜರವರ ಅನುಪಮಾನ ದ ಗುಣಕಥನ, ಅವರ ಆಳ್ವಿಕೆಯಲ್ಲಿ ಪ್ರಜೆಗಳಿಗೆ ಉಂಟಾಗಿರುವ ಸುಖ ಸೌಲಭ್ಯಾದಿ ವಿಷಯಗಳ ಮೇಲೆ ಭಾಷಣಗಳೂ ಅಧ್ಯಕ್ಷರವಿಯಾಗಿ ಅನೇಕ ದೊಡ್ಡ ಮನುಷ್ಯರುಗಳಿಂದ ಮಾಡಲ್ಪಟ್ಟ ಮೇಲೆ ಗಂಧ ಪುಷ್ಪ ಪಾನ ವಿನಿಯೋಗವಾಗಿ ತ್ರಿವಾರ ಜಯಘೋಷದಿಂದ ಸಭೆ ವಿಸರ್ಜಿತವಾಯಿತು ಹೊಸ್ಪೇಟೆಯ ನಿವಾಸಿಗಳು ಈ ದಿವಸ ಸಭೆಸೇರಿ ಮಹಾಪ್ರಭುಗಳಿಗೆ ಆಯುರಾರೋಗ್ಯೈಶ್ವರ್ಯಾದಿಗಳನ್ನು ಪಡೆದು ಇಂತಹ ವರ್ಧಂತ್ಯುತ್ಸವಗಳನ್ನು ಅನಂತವಾಗಿ ಅನುಭವಿಸುವಂತೆ ಅನುಗ್ರಹಿಸಲೆಂದು ಪರದೇವತೆಯನ್ನು ಪ್ರಾರ್ಥಿಸುತ್ತಾ ಲಂಡ ಮಹಾಪ್ರಭುಗಳಿಗೆ ತಂತಿಯ ಮೂಲಕ ವಿನ್ನಯಿಸಿಕೊಂಡರು.

ಉತ್ಸವಪ್ರಿಯ.

ದಿನಸಿ ಕಿತ್ತು ಕೊಳಗೊಂಡಿಗಳು.

[illegible]

ಸ್ವೀಕಾರ

[illegible]

ಪತ್ರವ್ಯವಹಾರ

[illegible] ಲೇಖಕರುಗಳಿಗೆ ಸಂಪಾದಕರು ಉತ್ತರವಾದಿಗಳಲ್ಲ [illegible] —ಸಂಪಾದಕ

[illegible]

[illegible] ಬ್ರಹ್ಮನಿಷ್ಠರಾದ ಸ್ವಾಮಿ [illegible]

[illegible] ಜಗದ್ಗುರು ಒಡೆಯರ ಮಹಾಸ್ವಾಮಿಯ [illegible] ಗ್ರಾಮದಲ್ಲಿ ಅತ್ಯುತ್ಸವದಿಂದ [illegible] ಎಲ್ಲಾ ಶಿಷ್ಯ ಭಕ್ತಾದಿಗಳು ಬಹುಭಕ್ತಿ ವಿಶ್ವಾಸದಿಂದ [illegible] ಮಹಾಸ್ವಾಮಿಯ ಧರ್ಮಬೋಧಾನುಭವಾನದಿಂದ [illegible] ಸಂತೋಷವಾಗುತ್ತದೆ ಇದೇ ಸಂಧಿಯಲ್ಲಿ ಈ ಗ್ರಾಮದ ಹಾಗೂ ಸುತ್ತಮುತ್ತಿನ ಗ್ರಾಮದ [illegible] ಜಗದ್ಗುರುಗಳ ಒಡೆಯರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ [illegible] ಸಭೆಸೇರಿದ್ದರು ಆ ಸಂಸ್ಥಾನ [illegible] ಒಡೆಯರ ಸ್ವಾಮಿಗಳೂ ಇಲ್ಲಿಯವರ [illegible] ಅನೇಕ ಅನುಭವಪೂರ್ವಕವಾಗಿ [illegible] ಮಾಡಿದ ಭಾಷಣಗಳನ್ನು ಕೇಳಿ ಎಲ್ಲರೂ [illegible] ಈ ಪ್ರಾಂತದ ಜನಾಂಗವು ಎಲ್ಲಾ [illegible] ಈಗಿನ ರಾಜ [illegible] ಅನುಕೂಲವಾಗಲಿಕ್ಕಿಲ್ಲವೆಂದು ಅನುಮತಿಯನ್ನು ಕೊಟ್ಟರು ಈ ಠರಾವನ್ನು ಸರ್ಕಾರಕ್ಕೆ ಕಳಿಸುವ ಬಗ್ಗೆ ಅಧ್ಯಕ್ಷ ಒಡೆಯರ ಸ್ವಾಮಿಗಳವರನ್ನು ಬೇಡಿಕೊಂಡರು

ಲಿಂಗನಗೌಡ ಪಾಟೀಲ್, ಸಾ|| ಮೈಲಾರ

ಮೂದಲು ಮದುವೆ ಆರ್ಟಿಕಲ್ಲಿಗೆ ಜವಾಬು.

ಕಳೆದ ತಾ|| 6-6-32 ರ ಸ್ಟಾರ್ ಪತ್ರಿಕೆಯಲ್ಲಿ ಮೂದಲುಮದುವೆ ಎಂಬ ಹೆಡ್ಡಿಂಗಿನಿಂದ ಲಗ್ನಭಾಗಿ ಎಂಬುವರು ಬರೆದಿರುವ ಆರ್ಟಿಕಲ್ಲನ್ನು ಓದಿ ಆಶ್ಚರ್ಯವಾಯಿತು ಗಂಡಿನವರು ಬಹಳ ಮಿತವ್ಯಯದಿಂದ ಆಡಂಬರವಿಲ್ಲದೆ ಲಗ್ನ ಬೆಳಸಬೇಕೆಂದು ನಿಂತಿದ್ದರು. ಆದರೆ ಹೆಣ್ಣಿನವರು ಹೆಚ್ಚು [illegible] ಮೋಟಾರುಕಾರು, ಗ್ಯಾಸ್ ದೀಪಗಳೂ ಬ್ಯಾಂಡೂ ಹೆಣ್ಣಿನ [illegible] ಬೇಕೆಂದು ಹಟ [illegible] ಮಾಡಿಸಿದರು. ಇದರಿಂದ ಗಂಡಿನವರ ಮನಸ್ಸಿಗೆ ಬಹಳ ವ್ಯಸನವಾಯಿತು ಎಂದು ವಗೈರೆ ಬರೆದಿರುವುದನ್ನು ನೋಡಿ ಆಶ್ಚರ್ಯವೂ ವ್ಯಸನವೂ ಉಂಟಾದುವು ಹೆಣ್ಣಿನವರೂ ಗಂಡಿನವರೂ ಶ್ರೀಮಂತರಾದವರಿಂದ ತಮ್ಮ ಅಂತಸ್ತಿಗೆ ತಕ್ಕಂತೆ ವೆಚ್ಚ ಮಾಡಿದರಲ್ಲದೆ ದುಂದಿಗಾಗಿ ಒಂದು ಕಾಸನ್ನೂ

[illegible]

ಕರ್ತವ್ಯದ ವಿಷಯದಲ್ಲಿ ...

ಪುಸ್ತಕ ವಿಮರ್ಶೆ ಸಂಚಿಕೆ

[illegible]

ಮದ್ದೂರು ತಾಲ್ಲೂಕು ಬೆಸಗರಹಳ್ಳಿ

ಈ ಗ್ರಾಮಕ್ಕೆ 1930 31 ನೇ ಸಾಲಿನಲ್ಲಿ ... [illegible]

... ಬಿ ಬಸವರಾಜಯ್ಯ

ಶಿವದೀಕ್ಷಾ ಸಂಸ್ಕಾರ

[illegible]

[illegible]

... ಒಬ್ಬ ಮಹಾಜನರ

ವೆಸ್ಲ್ಯಾಂಡ 1 ರೂ ಯನ್ನು ... ಕಳುಹಿಸಿದ್ದಾರೆ ಸಂ]

ಸ್ಕೂಲ್ ಕಟ್ಟಡದ ಪ್ರವೇಶೋತ್ಸವ

[illegible]

ಫೈಲೀಶ್ ... ಬಸಪ್ಪನವರು, ದಾಸಪ್ಪನವರು, ರಂಗಾಚಾರ್ಯ ... ಸಭಾ ಪ್ರಾರಂಭದಲ್ಲಿ ಸ್ಕೂಲ ಬಾಲಕರಿಂದ ದೇವರ ಪ್ರಾರ್ಥನೆಯೂ, ... ಸಭಾಧ್ಯಕ್ಷರಿಗೂ ಮತ್ತು ... ಸಭೆಯು ವಿಸರ್ಜಿಸಲ್ಪಟ್ಟಿತು.

ದಾವಣಗೆರೆಯ ... ಸಭೆ

[illegible]

[illegible]

ಆನೇಕೊಂಡದ ...

ದಾವಣಗೆರೆ.

ದಾವಣಗೆರೆ ಪುರವಾಸಿಗಳ ಅನುತಾಪಸೂಚಕಸಭೆ.

ದಾವಣಗೆರೆಯ ಪುರಪ್ರಮುಖರೂ ಪ್ರಸಿದ್ಧ ವರ್ತಕರೂ, ಸಾತ್ವಿಕರೂ ಆದ ... ತಾ|| 11 6 1933 ನೇ ... [illegible]

ಪ್ರತ್ಯಕ್ಷದರ್ಶೀ.

ಮೈಸೂರು ಸೀಮೆಯ ಶ್ರೀಮತಿ ಮಕ್ಕಳ ವೀರಶೈವರ ಪ್ರಥಮ ಸಮ್ಮೇಳನ.

ಈ ಸಮ್ಮೇಳನದ ಪ್ರಥಮ ಅಧಿವೇಶನವು ಕಳೆದ ಮೇ ತಾ|| 12 ರಿಂದ ತಾ|| 14 ರ ವರೆಗೆ ... [illegible]

ಮಕ್ಕಳಿಲ್ಲದ ಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿ

ಗರ್ಭಧಾರಣಾ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರೋತ್ಪತ್ತಿ ಆಗುವದು ೯ ಗುಳಿಗೆಗಳ ಕಿ. ೩ ರೂಪಾಯಿ. ಟ ಖ ೫ ಆಣೆ

ಪತ್ತೆ—ವೈದ್ಯ ಪ್ರಿ. ಎಸ್. ಕಾಪಸೆ. ಮಿರಜ M. C

ಸಂಘದ ಸಭೆ, ಈ ಮತ್ತು ಕೆ ಏರ್ಪಡಿಸಿದ ಉಗಾಡಿ ಸಂಭಾಷಣೆ ... ಅಂಶಗಳನ್ನು ತಿಳಿಸಿದರು ... ಸಮಾಜದ ... ಸಭೆಯಲ್ಲಿ ... ಅನುಕೂಲವಾದ ಅನೇಕ ನಿರ್ಣಯಗಳು ಚರ್ಚೆಗೆ ತರಲ್ಪಟ್ಟವು. ಅವುಗಳಲ್ಲಿ ಸರ್ವಾನುಮತದಿಂದ ಒಪ್ಪಲ್ಪಟ್ಟ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ಸೂಚಿಸಿದೆ —

(1) ಈ ಸಮಾಜದಲ್ಲಿ ವಿದ್ಯಾಪ್ರಸಾರಣೆ ಬಗ್ಗೆ ಒಂದು ಫಂಡನ್ನು ಏರ್ಪಡಿಸತಕ್ಕದ್ದು. ಈ ಫಂಡಿನ ವ್ಯವಸ್ಥೆಗಳನ್ನು ನೋಡಿಕೊಳ್ಳತಕ್ಕ ಬಗ್ಗೆ 1 ಸಂಘವನ್ನೇರ್ಪಡಿಸಿ ... ಸಂಘ ಎಂದು ಹೆಸರು ಇಡತಕ್ಕದ್ದು. ಈ ಫಂಡಿಗೆ ... ವರ್ಷ 1 ಕ್ಕೆ 1 ರೂ ನಂತೆ ಕೊಡತಕ್ಕದ್ದು.

(2) ಈ ಸಂಘದ ಕಾರ್ಯಕಾರಿ ಸಮಿತಿಗೆ ... ಜನ ಮೆಂಬರುಗಳನ್ನು 1 ವರುಷ ... ಚುನಾಯಿಸಲ್ಪಟ್ಟ 30 ಜನ ಮೆಂಬರುಗಳನ್ನು 1 ಕಾರ್ಯ ... ಈ ಸಭೆಯ ಅಧ್ಯಕ್ಷರಾದ ... ಸಹಾಯಕ್ಕಾಗಿ ... ತೀರ್ಮಾನವಾಯಿತು.

(3) ಈ ಸಮಾಜದಲ್ಲಿ ನಡೆಸಲ್ಪಡತಕ್ಕ ಪ್ರತಿಯೊಂದು ... ಕಾರ್ಯಗಳಲ್ಲಿಯೂ ಈ ಸಂಘಕ್ಕೆ 1 ರೂ ನಂತೆ ... ಕಾರ್ಯಸ್ಥರಿಂದ ವಸೂಲ್ಮಾಡಿ ಸಂಘದ ... ಪಡೆಯತಕ್ಕದ್ದು.

(4) ಈ ಸಮಾಜದವರು ಲಗ್ನಕಾಲಗಳಲ್ಲಿ ... ಆಚರಣೆಗೆ ತರತಕ್ಕ ಬಗ್ಗೆ ... ಒಂದೇ ದಿನ ... ಊಟ ಮತ್ತು ... ಲಗ್ನಗಳನ್ನು ನಡೆಸತಕ್ಕದ್ದು.

(5) ಈ ಸಮಾಜದ ಜನಗಳಲ್ಲಿ ಲಗ್ನಕಾಲದಲ್ಲಿ ಕೆಲವರು ... ತಕ್ಕ ... ಪದ್ಧತಿಯನ್ನು ಮತ್ತು ಲಗ್ನದ ... ಪದ್ಧತಿಯನ್ನು ಸಂಪೂರ್ಣವಾಗಿ ಬಿಟ್ಟು ಶಾಸ್ತ್ರೋಕ್ತ ... ಯನ್ನು ಆಚರಣೆಗೆ ತರತಕ್ಕದ್ದು.

(6) ಈ ಮಠದಲ್ಲಿರುವ ಕೆಲವು ಮೂಢಸಂಪ್ರದಾಯಗಳು ಅಂದರೆ ಅನ್ನದೇವತಾಪೂಜೆ ... ನಡೆಸುವುದನ್ನು ಸಂಪೂರ್ಣವಾಗಿ ತ್ಯಜಿಸತಕ್ಕದ್ದು.

ಇವೇ ಮೊದಲಾದ ಠರಾವುಗಳ ತೀರ್ಮಾನವಾದನಂತರ ಅಧ್ಯಕ್ಷರು ... ಈ ಸಭಾ ... ಪ್ರಯೋಜನವನ್ನು ಕೊಡಬೇಕಾದರೆ ... ಸಮಾಜಸೇವಾಕಾರ್ಯವನ್ನು ಇಲ್ಲಿಗೆ ... ಸಹಾಯ ... ಬೇಕೆಂದು ಹೇಳಿ ಈ ಸಭೆಯನ್ನು ಮುಕ್ತಾಯಗೊಳಿಸಿದರು. ಇದಾದನಂತರ ಸಭೆಯಲ್ಲಿ ತೀರ್ಮಾನವಾದ ಮೊದಲನೇ ಠರಾವಿನ ಪ್ರಕಾರ ಸಂಘವು ಸ್ಥಾಪಿಸಿ ... ಬಂದಿದ್ದ ... ಫಂಡಿಗೆ ... ವಾಗ್ದಾನ ಮಾಡಿದ ಹಣ ಸುಮಾರು 3,000 ರೂ ಗಳಾಗಬಹುದು ... ಈ ಹಣವನ್ನು ವಸೂಲ್ಮಾಡಿ ಸಮಾಜಕಾರ್ಯಕ್ಕೆ ಬೇಕಾದ ಕರ್ತವ್ಯಗಳನ್ನು ನಡೆಸಲು ಕೂಡಲೆ ಆರಂಭಿಸಬೇಕಾಗಿ ವಿಜ್ಞಾಪನೆ.

ಮಠಾಧಿಪತಿ

ಅಧ್ಯಾಪಕವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯ ವಿಮರ್ಶೆಯೂ

(ಲೇಖಕ ... ಗೋಪಾಲಕೃಷ್ಣರಾವ್, ಕರ್ನಾಟಕ ಪಂಡಿತರು, ಟ್ರೈನಿಂಗ್ ಕಾಲೇಜು, ಮೈಸೂರು)

ದಿಗ್ದರ್ಶನಂ

(ಜೂನ್ ತಾ|| 13ರ ಸಂಚಿಕೆಯಿಂದ ಮುಂದುವರಿದುದು)

ಈಗ ಪ್ರಕೃತವಾದ ಶಕ್ತಿಲಕ್ಷಣವನ್ನು ವಿವರಿಸುವವರಾಗಿದ್ದೇವೆ. ಈ ವಿಚಾರವು ಪ್ರಕೃತೋಪಯುಕ್ತವೇ ಹೊರತು ಕೇವಲ ... ಶಿವಶಕ್ತಿಯರಿಗೆ ಇರುವ ಸಂಬಂಧವು ಅನುಭಾವದೃಷ್ಟಿಯಿಂದ ... ಪಾರಮಾರ್ಥಿಕವೇ ... ವಿಚಾರದಲ್ಲಿ ಕೋರಿರುವ ಭೇದವು ವ್ಯಾವಹಾರಿಕವೆಂದು ಹೇಳಲ್ಪಡುವುದಾದ ಕಾರಣ ಅದು ಔಪಚಾರಿಕವೆನ್ನಿಸಿ ... ಶಕ್ತಿಯು ... ಇತ್ಯಾದಿ.

ಪಾರಮಾರ್ಥಿಕ ... ಅವಿನಾಭಾವ ಸಂಬಂಧ ... ಇತ್ಯಾದಿ.

... ಶಕ್ತಿಯ ... ಇತ್ಯಾದಿ.

... ಎಂದರೆ ... ಶಕ್ತಿಯು ... ತೋರಿಸಿಕೊಡುವುದು ಅಸಾಧ್ಯವು.

"ಶಕ್ತಿಂ ವಿನಾ ಶಿವಸ್ಯಾಪಿ ..." ಇತ್ಯಾದಿ.

ಶಕ್ತಿಯ ಮೂಲವನ್ನು ತಿಳಿದವರು ಜನನಮರಣಗಳ ... ಪಾರಾಗುವರು.

... ಇತ್ಯಾದಿ.

... ಈ ಶಕ್ತಿಯು ಎಂತಹದೆಂದು ತಿಳಿಯಬೇಕು.

... ಇತ್ಯಾದಿ.

ಬಿಂದುವಿನ ... ಇತ್ಯಾದಿ.

... ಇತ್ಯಾದಿ.

ಅದು ಜಗದುತ್ಪತ್ತಿಕಾರಣವನ್ನು ತಾಳಿದಾಗ ಕುಂಡಲ್ಯಾದಿಶಬ್ದಗಳಿಂದ ... ಶಕ್ತಿಯು ... ಇತ್ಯಾದಿ.

... ಇತ್ಯಾದಿ.

ಸ್ವಕಾರ್ಯಾಯ ... ಶಕ್ತಿಯಾಗಿದೆ ... (ಸಂವಿದ್ವೇದ ಪರಾಶಕ್ತಿ ...) ಇತ್ಯಾದಿ.

ಈ ಶಕ್ತಿಯು ಅವಿಚ್ಛಿನ್ನವಾದ ಧ್ಯಾನಯೋಗಕ್ಕೆ ಮಾತ್ರ ಗೋಚರವೆಂದು ... ಶ್ರುತಿಯು ...

... ಇತ್ಯಾದಿ.

ಕ್ರಿಯಾಭೇದದಿಂದ ಮಾಡಿಯೆಂದು ... ಶಕ್ತಿಯು ... ಜನನಮರಣ ಚಕ್ರದಲ್ಲಿ ಸುತ್ತಿಸುತ್ತಿವೆ.

... ಇತ್ಯಾದಿ.

... ಇತ್ಯಾದಿ.

... ಇತ್ಯಾದಿ.

ಈ ಅರ್ಥವು ಅಪಾರವಾದ ವಿವೇಚನ ... ಮಾಯೆಯೆಂದು ... ಶ್ರುತಿಯಿಂದ ನೋಡಿ ನಮ್ಮನ್ನು ...

ವೇದಾಂತಿಗಳಾದರೋ ... ಪ್ರಸಾದ ... ಇತ್ಯಾದಿ.

... ಇತ್ಯಾದಿ.

... ಇತ್ಯಾದಿ.

... ಇತ್ಯಾದಿ.

... ಸತೀಶ

ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಸ್ವಾಗತ ಕಮಿಟಿ ಧಾರವಾಡ ಇವರಿಂದ ಪ್ರಸಿದ್ಧ ಮಾಡಲ್ಪಟ್ಟ ಪ್ರಕಟನೆ ನಂ. ೬

ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಸ್ವಾಗತ ಕಮಿಟಿಯ ಮೆಂಬರರೂ, ಮಹಾಸಭೆಯ ಕಾರ್ಯಕರ್ತರೂ ... ಇದರ ಮೂಲಕ ತಿಳಿಯಪಡಿಸಲಾಗಿದೆ —

(1) ಅಧ್ಯಕ್ಷರನ್ನು ಆರಿಸುವುದು, ಮತ್ತು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು

ನಮ್ಮ ಪ್ರಕಟನೆ ನಂ 4 ಮತ್ತು 5 ನೆಯದರ ಪ್ರಕಾರ ಈ ಸಾರಿ ಜಾಗುವ 11 ನೇ ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ಯಾರನ್ನು ನೇಮಿಸಬೇಕು ಮತ್ತು ಮಹಾಸಭೆಯಲ್ಲಿ ಯಾವ ಯಾವ ವಿಷಯಗಳನ್ನು ಚರ್ಚಿಸಬೇಕು ಎಂಬುವದರ ಬಗ್ಗೆ ಸ್ವಾಗತ ಕಮಿಟಿಯನ್ನು ಕರೆದು ... ಸ್ವಾಗತ ಕಮಿಟಿಯ ಮೆಂಬರರ ಮತ್ತು ಆಸ್ಥೆಯ ದಾತರ ಅಭಿಪ್ರಾಯವನ್ನು ಕೇಳಿಕೊಂಡು ಸುವರ್ಣ್ಯ ಮಾಡಿ ಸಭೆ ಜನಗಳನ್ನು ... ಆ ಸೂಚನೆಯ ... ಎಲ್ಲ ... ಅದರಂತೆ ಬಂದ ... ಶಿಫಾರಸು ... (1) ಅಧ್ಯಕ್ಷರ ಬಗ್ಗೆ ... (2) ... ಒಂದು ಸ್ವತಂತ್ರ ... ಬಗ್ಗೆ ಪ್ರಯತ್ನ ಮಾಡುವದು, ಈ 2 ... ಚರ್ಚೆಗೆ ಇಡಬೇಕೆಂದು ನಿರ್ಣಯವಾಯಿತು.

(2) ಮಹಾಸಭೆಯ ಮುಂದೆ ಹಾಕಲ್ಪಟ್ಟದ್ದು

ಈ ಪ್ರಕಾರ ಮಹಾಸಭೆಯ ಅಧ್ಯಕ್ಷರನ್ನು ಆರಿಸಿದ ಒಳಕ ಮತ್ತು ವಿಷಯಗಳನ್ನು ಆರಿಸಿದ ಬಳಿಕ ಇದೇ ಮೇ ತಿಂಗಳಲ್ಲಿ ನೆರೆಯಬೇಕೆಂದು ಮೊದಲು ವರ್ಕಿಂಗ ಕಮಿಟಿಯವರು ಗೊತ್ತು ಮಾಡಿದ ಠರಾವನ್ನು ಆ ನಂತರ ಬದಲಾಯಿಸಲ್ಪಟ್ಟ ಮಹಾಸಭೆಯ ಸ್ವಾಗತ ಕಮಿಟಿಯವರು ತಾ 15 5 1932 ನೇ ದಿವಸ ಕೂಡಿದ ತಮ್ಮ ಕಮಿಟಿಯ ಮೀಟಿಂಗಿನಲ್ಲಿ ಕೆಳಗೆ ಬರೆದ ಠರಾವುಗಳನ್ನು ಪಾಸುಮಾಡಿ ಸ್ಟ್ಯಾಂಡಿಂಗ ಕಮಿಟಿಯವರಿಗೆ ತಿಳಿಸಿರುತ್ತಾರೆ. ಅವುಗಳ ಯಾದಿ —

ಠರಾವ ನಂ 1 ಈ ವರ್ಷ ವರ್ಕಿಂಗ ಕಮಿಟಿಯವರು ಮಾಡಿದ ನಿರ್ಣಯ ಪ್ರಕಾರ ಮೇ ... ಒಡೆಯರಾದ ... ಮೈಸೂರು ಸಂಸ್ಥಾನದಲ್ಲಿರುವ ಅಧಿಕಾರಿಗಳಿಗೂ ಮತ್ತು ವಕೀಲರಿಗೂ ... ಮಹಾಸಭೆಯ ಕಾಲಕ್ಕೆ ... ಶ್ರೀಮಂತ ... ಸರದೇಸಾಯಿ ಇವರ ... ಈಗ ಅಧ್ಯಕ್ಷರಾಗಿರುವುದರಿಂದ ... ಇದೇ ಸಭೆಯು ಕಾಲಕ್ಕೆ ... ಬೆಳಗಾವಿ ... ಕೆಲಸಗಳನ್ನು ... ವಿರಕ್ತರ ... ಕಾರಣದಿಂದ ಈಸಾರಿ ... 11 ನೇ ಅಖಿಲ ವೀರಶೈವ ಮಹಾಸಭೆಯನ್ನು ನವೆಂಬರ ತಿಂಗಳ ಕೊನೆಯ ... (ತಾರೀಖು ... ವರೆಗೆ) ... ಸ್ವಾಗತ ಕಮಿಟಿಯ ಅಭಿಪ್ರಾಯವಾಗಿದೆ.

ಠರಾವ ನಂ 2 (ನಮ್ಮ ಕಡೆಗೆ ಬರೆದು ಬಂದಿಲ್ಲ)

... ಫಂಡಿನಿಂದ 3,000 ರೂ ಗಳ 2 ನೇ ಭಾಗವ ... ನೋಟುಗಳ ... ಕಮಿಟಿಯ ಟ್ರೆಝರರ ಕಡೆಗೆ ... ದಿವಸ ... ದಿವಸ ಮತ್ತು ... ಬ್ಯಾಂಕಿನಲ್ಲಿ ... ಇಡಬೇಕೆಂದು ...

... ಸ್ವಾಗತ ಕಮಿಟಿಯವರು ಈ ... 1932 ನೇ ಡಿಸೆಂಬರಕ್ಕೆ ಕರೆಯಬೇಕೆಂದು ನಿರ್ಣಯ ಮಾಡಿದ್ದಾರೆ.

G H Hosurmath — ಜನರಲ ಸೆಕ್ರೆಟರಿ
K ... Kalkarni — ಚೇರಮನ್ನ

ಸ್ವಾಗತ ಕಮಿಟಿ ಅಖಿಲ ವೀರಶೈವ ಮಹಾಸಭೆ ಧಾರವಾಡ ತಾ 12 5 32

ನಾರಿನ ಮೇಲೆ ರಾಮಬಾಣ

ಮೂರು ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ... ನಾರಿನವರು, ಜರೂರ ತರಿಸಿ ಕೊಳ್ಳಿರಿ. ... ರೂ ... ಆಣೆ

ಪತ್ತೆ ... ವೈದ್ಯ ... ಶಾಸನೆ, ಮಿರಜ

M C

೧೯೩೨ ನೆಯ ಇಸವಿ ಜೂನ್ ತಾ ೨೦ ರಿಂದ ಜೂನ್ ತಾ|| ೨೬ ರ ವರೆಗೆ ... ಅಂಗಿರಸನಾಮಸಂವತ್ಸರದ ಜ್ಯೇಷ್ಠ ಬಹುಳ ... ದಿಂದ ಜ್ಯೇಷ್ಠ ಬಹುಳ ಅಷ್ಟಮಿ ವರೆಗಿನ ಪಂಚಾಂಗ

ತಾ || ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವಿ ಘ ಮಾಸ
20	ಸೋಮ	ಬಿದಿ	22-27	ಪೂರಾ	8 31	7
21	[1] ಮಂಗಳ	ತದಿ	19 53	ಉಷಾ	7 34	8
22	ಬುಧ	ಚೌತಿ	18 23	ಶ್ರವ	7 42	9
23	ಗುರು	ಪಂಚ	18 12	ಧನಿ	9 6	10
24	[2] ಶುಕ್ರ	ಷಷ್ಠಿ	19 12	ಶತ	11 40	11
25	ಶನಿ	ಸಪ್ತ	21 30	ಪೂಭಾ	15 30	12
26	ಭಾನು	ಅಷ್ಟ	44-00	ಉಭಾ	20 24	13

(1) ಮಳೆನಕ್ಷತ್ರ-ಆರ್ದ್ರಾ ೧ ನೆಯ ಪಾದ (2) ಮಳೆನಕ್ಷತ್ರ ಆರ್ದ್ರಾ ೩ ನೆಯ ಪಾದ

ಮೈಸೂರು ... ಅವರಿಂದ ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M. 24

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦]　　[ಪರಸ್ಥಳದವರಿಗೆ ೨-೪-೦]　　[ಬ್ರಿಟಿಷ್ ಇಂಡಿಯಾ ... ೩-೮-೦]

ಸಂಪುಟ ೪೫]　ಮೈಸೂರು ಸ್ಟಾರ್ ಸೇ ೧೯೩೨ ನೆಯ ಇಸವಿ ಜೂನ್ ತಾರೀಖು ೨೭ ನೆಯ ಸೋಮವಾರ　[ಸಂಚಿಕೆ ೨೭

MYSORE SANDALWOOD OIL
Distilled in
GOVERNMENT FACTORIES

GUARANTEED B P P J, & AM 4 P STANDARDS

PROVIDES

Excellent Base for the manufacture of Soaps Perfumes and other Toilet preparations of the Highest quality

USED ALL THE WORLD OVER

BUY A BOTTLE TO DAY

Available in Sealed Aluminium Bottles

MOYSRE GOVERNMENT SANDALWOOD OIL FACTORY, BANGALORE

6　　[60—60]

THE MYSORE AGRICULTURAL SCHOOL, HEBBAL, BANGALORE

Notification No A S M Gl 225 of 31-32, dated 21st June 1932

In supersession of the previous notification No A S M Gl 225 of 31—32, dated 22nd April 1932 published in the Mysore Gazette, Part III, Pages 798—799 dated 19th May 1932, the time for sending up the applications for admissions to the Mysore Agricultural School at Hebbal, Bangalore, has been extended to 10th July 1932 and that of the entrance examination has been postponed to 17th July 1932 at 12 noon, as the results of the S S L C Examination have not yet been declared

V K BADMI
Principal

[3—1]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ವಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕರಿಗೆ ಕ್ಷೀಣರಾಗಬೇಡಿರಿ | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ [ಸ್ಪರ | ಧಿಕ್ಕರಿಸಿದರೆ ಕ್ಷೀಣರಾಗುವಿರಿ ...

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—27]

ಪತ್ರ ವ್ಯವಹಾರ:—ವೈದ್ಯ ಪ್ರಿ. ಎಸ್. ಕಾಪಸೆ ಮು. ಪೋ. ವಿರಜಿ ಎಂ. ಎಸ್. ಎಂ.

ಲಗ್ನಪತ್ರಿಕೆಗಳು

ಮುದ್ರಣಕ್ರಮ

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರು

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

	ಕ್ರಮ	ಪ್ರತಿ ಸೇಂ
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಡಾಕ್ಟರ್ ಜೀ ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

(Registered Trade Mark)

[illegible]

ವಿಳಾಸ:—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[60—2]　ಪೋ. ಬಾ. ೫೧೦, ಮದರಾಸು

WANTED

Applications with particulars of father's name, caste, age and examinations passed are invited from ... by 30th July 193. ... persons who have passed ... book-keeping examination for appointment ... of Rs. 15—1—20 with the benefits of Provident Fund and ...

... ,
Honorary Secretary,
The Palace Stables Co-operative Society Ltd.,
Mysore

ಮೈಸೂರು ಸ್ಟಾರ್

೧೯೩೨ ನೇ ಇಸವಿ ಜೂನ್ ತಾ|| ೨೭ ನೆಯ ಸೋಮವಾರ

THE LEGISLATIVE COUNCIL

BUDGET SESSION

The Government had ... at ... busy business of its own at this budget session of the Council with the result that the non-official members found that they had not enough time for either general discussion of the budget or for particular discussions on the voting of the demands. The three bills relating to Cities, Towns and Minor Municipalities occupied nearly three days of the time of the House. The House went ... on the whole the Town and the Minor Municipalities Bills particularly the latter as the privilege of adult franchise was granted therein. The one general demand was that the Presidentships and the Vice-Presidentships should be thrown open for election to non-officials. The Government promised to work the measure in as liberal a manner as possible. As regards the City Municipalities Bill there was greater opposition as even according to Government it did not seek to introduce any essential changes in the existing regulation. The general opinion was that as this Bill was only applicable to the two cities of Bangalore and Mysore the Government should not keep the old provision which would enable them to ... difference between the one ... elected President ... the other an official President which was a negation of local self Government. The utter illogicality of it was pointed out by almost every member who spoke about the Bill. The desire of the non-official members was to see it modelled on the basis of City Corporation Acts of British India. But yet the Government were strangely nervous to give the same privilege to Mysore as they had done to Bangalore in the ... and what seems to us to be a specious plea that the special circumstances of Mysore would not permit of it. The House was not told exactly what the special circumstances were. But one could fairly understand what Government meant. It would be absurd to suggest that a non-official President would not be found as efficient and as loyal as an official. We would like to know how the present ... official Presidents in the Mysore City has ... of special help in the special circumstances? How often have the Council and the President come into conflict over any of the special requirements of Mysore? What reasons have the Government to think that the Council would behave in a different way with one of its own non-official President. The galling nature of the invidious distinction was pointed out by the honourable members. We do hope that these reactionary parts of the Bill would be set right at the Select Committee stage. One of the most important subjects that was brought up before the House was the relief that should be granted to the ryots at this hour of extreme depression. The Government was reminded of its undertaking last year to review the situation in case it continued to be bad during the next year and of its not having done anything to relieve the situation. The non-official element in the House was almost unanimous that so no relief should be given either by way of reducing to the rates of assessment prevailing prior to the resettlement or ... percentage ... Reasons ... Government which was ... to ... its previous position ... was ... against all the arguments. We feel that Government is far too much out of touch with the realities of the situation. The ryot has been really hit very hard. The Government is in such a high altitude that it is almost impossible for it to understand the sad realities of the situation. How we wish that those at the helm of affairs would live for a short while in the villages and experience the life of the villager bereft of all the comforts they could command in the cities. We do hope that our Governmet will adopt a more sympathetic attitude. At present we do not see much signs of their meeting popular wishes. They are having all their own way and as some of the members said there seems to be a lot of patience on the part of non-officials in giving up their jobs taking all the trouble to study questions and crying at these Houses only for Government to turn a deaf ear to their proposals. We do hope that Government will see the reasonableness of the views put forward by non-official members in many respects and will at least accept partially their proposals. Otherwise all these discussions will look a big tamash and something worse a waste of a lot of people's money.

ಮೈಸೂರು ನ್ಯಾಯವಿಧಾಯಕ ಸಭೆ

ಕಳೆದ ಸೋಮವಾರ ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದ ದರ್ಬಾರ್ ಹಾಲಿನೊಳಗೆ ದಿವಾನ್ ಸರ್ ಮಿರ್ಜಾ ಎಂ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡೆಯುತ್ತಿರುವ ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ನಾಲ್ಕನೆಯ ದಿವಸ ಮುಕ್ತಾಯವಾಗುವುದಾಗಿದೆ. ಪ್ರಭುತ್ವಕ್ಕೆ ಸಂಬಂಧಪಟ್ಟ ವಿಷಯಗಳು ಹೆಚ್ಚಾಗಿದ್ದುದರಿಂದ ಒಟ್ಟಿನ ಸಾಧಾರಣ ವಿಷಯಗಳನ್ನಾಗಲಿ ಬಜೆಟನ್ನು ಕೊಡಬೇಕಾಗಿರುವ ವಿಷಯಗಳನ್ನಾಗಲಿ ಕುರಿತು ಚರ್ಚಿಸಲು ಅನಧಿಕಾರಿ ಮೆಂಬರುಗಳಿಗೆ ಸಾಕಾದಷ್ಟು ವ್ಯವಧಾನವಿರಲಿಲ್ಲ. ಇತರ ವಿಷಯಗಳನ್ನು ಕುರಿತು ಮುಂದೆ ಪ್ರಕಟಿಸುತ್ತೇವೆ.

ಶಿರ ... ಮೆಂಬರುಗಳ ಸಂಖ್ಯಾಧಿಕ್ಯ

ಮೈಸೂರು ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಒಟ್ಟು ಸಂಖ್ಯೆಯು ಸಾಮಾನ್ಯವಾಗಿ 250, ಆದರೆ ಇದನ್ನು 275 ಕ್ಕೆ ಏರಿಸಲು ಪ್ರಭುತ್ವದವರಿಗೆ ಅಧಿಕಾರವಿರುತ್ತದೆ. ಈಗ 273 ಮೆಂಬರುಗಳಿದ್ದಾರೆ. ಹೊಸದಾಗೇರ್ಪಟ್ಟಿರುವ ತಾಲ್ಲೂಕು ... ದಲೂ 300 ಜನಸಂಖ್ಯೆಗೆ ಕಡಿಮೆ ಇಲ್ಲದಿರುವ ಟೌನ್ ಮ್ಯುನಿಸಿಪಾಲಿಟಿಗಳಿಂದಲೂ ಮೆಂಬರುಗಳನ್ನು ಆರಿಸಬೇಕಾಗಿರುವುದರಿಂದ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಆಗಿರತಕ್ಕ ಪ್ರಾತಿನಿಧ್ಯ ಇತ್ಯಾದಿ ವಿಷಯಗಳಲ್ಲಿ ಹೆಚ್ಚುಕಡಿಮೆ ಮಾಡಲು ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ. ಇದಕ್ಕೆ 2 ನೆಯ ಕೌನ್ಸಿಲರು ರಾಜಮಂತ್ರಪ್ರವೀಣ ಮ|| ಕೆ. ಮ. ವಾರ್ಮಾರವರು ಅಧ್ಯಕ್ಷರಾಗಿಯೂ ಮ|| ಗಳಾದ (1) ಎಸ್ ಪಿ ರಾಜಗೋಪಾಲಾಚಾರ್ಯರು (2) ಎಚ್ ಮಾಧವರಾಯರು (3) ಕೆ ಎಚ್ ರಾಮಯ್ಯನವರು (4) ಎಚ್ ರಾಮರಾಯರು ಔದ್ಯೋಗಿಕ ಮೆಂಬರುಗಳಾಗಿಯೂ (5) ಶ್ರೀಮತಿ ಕಮಲಮ್ಮ ದಾಸಪ್ಪನವರು (6) ಎ ಎಸ್ ಕೃಷ್ಣಸ್ವಾಮಿಯವರು (7) ಬಿ ಮಹಮದ್ ಇಮಾಂರವರು (8) ಪಿ ಗೋಪಾಲಾಚಾರ್‌ರವರು (9) ಎಲ್ ವೇಮಾರೆಡ್ಡಿಯವರು ಅನೌದ್ಯೋಗಿಕ ಮೆಂಬರುಗಳಾಗಿಯೂ ಪ್ರಜಾಪ್ರತಿನಿಧಿಸಭೆಯ ಸೆಕ್ರೆಟರಿಯವರೇ ಈ ಕಮಿಟಿಯ ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿರುವರು. ಈ ಕಮಿಟಿಯವರು ಸಾಧ್ಯವಾದಮಟ್ಟಿಗೆ ಜಾಗ್ರತೆ ಸಮಾಲೋಚನೆ ಮಾಡಿ ತಮ್ಮ ವರದಿಯನ್ನು ಬರುವ ಸೆಪ್ಟೆಂಬರ್ ತಾ|| 30 ರೊಳಗೆ ಕಳುಹಿಸಿಕೊಡಬೇಕೆಂದು ಪ್ರಭುತ್ವದವರು ಕೋರಿರುತ್ತಾರೆ.

ಆರ್ಡಿನೆನ್ಸುಗಳ ಪುನರುದ್ಧರಣ

ಬರುವ ಜುಲೈ ತಾ|| 4 ರಲ್ಲಿ ಕೊನೆಗಾಣುವ ಆರ್ಡಿನಾನ್ಸುಗಳೆಲ್ಲವನ್ನೂ ಒಟ್ಟುಗೂಡಿಸಿ ಕೆಲ ಬದಲಾವಣೆಯಿಂದ ವೈಸ್ರಾಯರು ಒಂದು ಹೊಸ ಆರ್ಡಿನನ್ಸನ್ನು ಪ್ರಯೋಗಿಸುವರೆಂದು ವರ್ತಮಾನವಿದೆ.

ಡಗ್ಲಾಸರನ್ನು ಕೊಂದವನಿಗೆ ಮರಣ ಶಿಕ್ಷೆ

ಕಳೆದ ಏಪ್ರಿಲ್ ತಾ|| 30ರಲ್ಲಿ ಮಿಡ್ನಾಪುರದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಡಗ್ಲಾಸರವರನ್ನು ಕೊಂದು ಪ್ರತ್ಯೇಕ ಟ್ರಿಬ್ಯುನಲ್ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಪ್ರದ್ಯೋತ ಕುಮಾರ ಭಟ್ಟಾಚಾರ್ಯ ಎಂಬವನಿಗೆ ಮರಣದಂಡನೆ ವಿಧಿಸಲ್ಪಟ್ಟಿತು.

ದಿಲ್ಲಿಯಲ್ಲಿ ಕುಡಿಯುವ ನೀರಿನ ತೊಂದರೆ

ದಿಲ್ಲಿ ಮ್ಯುನಿಸಿಪಾಲಿಟಿಯವರು ಸಾಕಷ್ಟು ಕುಡಿಯುವ ನೀರನ್ನು ಸರಿಯಾಗಿ ಒದಗಿಸುತ್ತಿಲ್ಲವೆಂದೂ, ಪ್ರಜೆಗಳಲ್ಲಿ ... ಮ್ಯುನಿಸಿಪಾಲಿಟಿಯವರು ಬಹಳ ಕಷ್ಟ ... ಎಂದು ... ದೊಡ್ಡ ಸಭೆ ... ಮುಖ್ಯ ಕಮೀಷನರವರ ... ಪ್ರದರ್ಶನ ... ನಡೆಸಲ್ಪಟ್ಟಿತ್ತು.

ವೈಸರಾಯರ ಮಲಬಾರ್ ಪ್ರಯಾಣ ನಿಂತಿತು

ಬರುವ ಜುಲೈ ತಿಂಗಳ ಮಧ್ಯಭಾಗದಲ್ಲಿ ವೈಸ್ರಾಯರು ದೇಶ ಸಂಚಾರ ಹೊರಟು ಮೈಸೂರು ಮಾರ್ಗವಾಗಿ ಉದಕಮಂಡಲಕ್ಕೆ ಹೋಗುವರೆಂದು ಪ್ರಕಟವಾಗಿದ್ದಿತಷ್ಟೆ. ರೌಂಡು ಟೇಬಲು ಸಲಹ ಸಂಘಕ್ಕೆ ಸಂಬಂಧಪಟ್ಟ ಕಾರ್ಯಗಳು ಪ್ರತಿಬಂಧಕವಾಗಿರುವುದರಿಂದ ವೈಸ್ರಾಯರ ದೇಶಸಂಚಾರವು ನಿಲ್ಲಿಸಲ್ಪಟ್ಟುದರಿಂದ ಉದಕಮಂಡಲಕ್ಕೆ ಅವರು ಬರುವುದಿಲ್ಲವೆಂದು ಪ್ರಕಟವಾಗಿದೆ.

ಓರ್ವ ಸ್ತ್ರೀ ಗಂಡನನ್ನು ಕೊಂದಳು

ಪಿಶಾವರ ಜಿಲ್ಲೆಯಲ್ಲಿ ... ಬೇವಿಯನ್ನು ಗುಡಿಸುತ್ತಿದ್ದ ಒಬ್ಬ ಸ್ತ್ರೀಯು ನಡತೆಯ ವಿಷಯದಲ್ಲಿ ಆಕೆಯ ಗಂಡನು ಅನುಮಾನಪಟ್ಟುಕೊಂಡಿದ್ದನು. ಇದರಿಂದ ಆಕೆಗೆ ಕೋಪ ಹುಟ್ಟಿ ಗಂಡನನ್ನು ಕೊಂದುಹಾಕುತ್ತೇನೆಂದು ಅನೇಕ ವೇಳೆ ಹೇಳುತ್ತಿದ್ದು ಕಡೆಯಲ್ಲಿ ಅವನು ಮಲಗಿ ನಿದ್ರಿಸುತ್ತಿದ್ದಾಗ ಕುತ್ತಿಗೆಯನ್ನು ಕೊಯ್ದು ಕೊಂದುಬಿಟ್ಟು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿರುವಳು.

ಧಾರವಾಡದಲ್ಲಿ ೯ ಮಂದಿಗೆ ಸೆರೆ

ಕಳೆದ ವಾರ ಧಾರವಾಡದಲ್ಲಿ ಮ|| ಗಳಾದ ರಘುನಾಥರಾವ್ ಜಠಾರ ವಕೀಲ, ಅನಂತರಾವ್ ಕರ್ಮರ್ಕರ ವಕೀಲ, ಗೋಪಾಲಾಚಾರ್ಯ ... ವಕೀಲ ... ಕಮಲಾಪುರ, ಶ್ರೀನಿವಾಸರಾವ್ ಹೊಂಗ ... ದಕ್ಷಿಣಪಂಥ ಜಿಂದ್ರೆ ಮಾಸ್ತರ, ದೇವರ ಮನೆ ಆನಂದರಾವ ... ಬೇಲೂರ ಮತ್ತು ಕಟ್ಟೂರ ವಕೀಲ ಇವರುಗಳು ಪೋಲೀಸು ಅಧಿಕಾರಿಗಳಿಂದ 3 ನೆಯ ಆರ್ಡಿನನ್ಸು 1 ನೇ ಸೆಕ್ಷನ್ನಿನ ಪ್ರಕಾರ ಸೆರೆ ಹಿಡಿಯಲ್ಪಟ್ಟು ಜೈಲಿಗೆ ಸಾಗಿಸಲ್ಪಟ್ಟರು.

ದೇವದಾಸ ಗಾಂಧಿಯವರಿಗೆ ಜ್ವರ

ಗೋರಕ್ಪುರ (ಗೋರಕ್ಷನಪುರ) ದ ಕಾರಾಗೃಹದಲ್ಲಿರುವ ಮಹಾತ್ಮರ ಕುಮಾರರಾದ ದೇವದಾಸ ಗಾಂಧಿಯವರಿಗೆ ಕಳೆದ 14 ದಿನಗಳಿಂದಲೂ ಜ್ವರಬರುತ್ತಿರುವುದಾದರೂ ಅದರ ವಿವರ ತಿಳಿಯಲಿಲ್ಲವೆಂದೂ ಕಾರಾಗೃಹಕ್ಕೆ ಹೋಗಿ ದೇವದಾಸರಿಗೆ ಉಪಚಾರ ಮಾಡಬೇಕೆಂದು ಗೋರಕ್ಷಪುರವಾಸಿಯಾದ ಹನುಮಾನ್ ಪ್ರಸಾದ ಪೋದ್ದಾರ್‌ರವರಿಗೆ ಮಹಾತ್ಮರಿಂದ ತಂತಿ ಬಂದಿರುವುದಾದರೂ ಜೈಲಿನ ಅಧಿಕಾರಿಗಳು ಪೋದ್ದಾರರವರನ್ನು ನೋಡುವುದಕ್ಕೆ ಬಿಡಲಿಲ್ಲವೆಂದೂ ... ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಮುಸಲ್ಮಾನನ ಕೃಷ್ಣ ಪಾತ್ರ ಧಾರಣಕ್ಕಾಗಿ ಆಕ್ರೋಶ

ಲಾಹೋರು ಮೆಜೆಸ್ಟಿಕ್ ಚಲನಚಿತ್ರ ಪ್ರದರ್ಶನಶಾಲೆಯಲ್ಲಿ ಬಿಲ್ವಮಂಗಲ ಅಥವಾ ಚಿಂತಾಮಣಿ ಎಂಬ ನಾಟಕವು ಪ್ರದರ್ಶಿಸಲ್ಪಡುತ್ತಿರುವಾಗ್ಗೆ ಶ್ರೀಕೃಷ್ಣನ ಪಾತ್ರವನ್ನು ಮಹಮ್ಮದೀಯನು ವಹಿಸಿ ಅಭಿನಯಿಸಿದನೆಂದು ಪ್ರೇಕ್ಷಕರಲ್ಲೊಬ್ಬ ಹಿಂದು ವಿದ್ಯಾರ್ಥಿಯು ತಿಳಿದು ಕೋಪಾವಿಷ್ಟನಾಗಿ ಸಿನೆಮಾ ಛಾಯಾಚಿತ್ರ ಬೀಳುತ್ತಿದ್ದ ತೆರೆಯನ್ನು ಹರಿದುಹಾಕಿಬಿಟ್ಟನು. ಇದಕ್ಕಾಗಿ ಅವನಮೇಲೆ ಕಂಪೆನಿಯವರು ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದವನ್ನು ಹೂಡಿರಲು ಅವನಿಗೆ 200 ರೂ ದಂಡವೂ 1 ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟವು.

ವಿ ... ರೈತರಿಗುಪಶಾಂತಿ

ವಿಶೇಷವಾದ ರೈತರಿಗುಪಶಾಂತಿಯನ್ನುಂಟುಮಾಡಲು ... ಪ್ರಭುತ್ವದವರು ನಿರ್ಧರಿಸಿರುತ್ತಾರೆ. 1931 ರ ಕಡೆಯವರೆಗೆ ರೈತರುಗಳಮೇಲೆ ಬಾಕಿ ನಿಂತಿರುವುದನ್ನು ವಸೂಲುಮಾಡಲು ಕೈಗೊಂಡಿರುವ ಕಾರ್ಯವನ್ನು ನಿಲ್ಲಿಸಿಬಿಟ್ಟು ಬಾಕಿಯನ್ನು ವಸೂಲುಮಾಡಲು ಇನ್ನೊಂದು ವರ್ಷದವಧಿಯನ್ನು ಕೊಡಲು ಪ್ರಭುತ್ವದವರೊಪ್ಪಿಕೊಂಡಿರುವರು. ಭೂಮಿಯ ಕಪ್ಪದ ವಿಷಯದಲ್ಲಿ ಬ್ರಿಟಿಷರವರು ಉಪಶಾಂತಿಯನ್ನುಂಟುಮಾಡಬೇಕೆಂದು ಕೋರುತ್ತಿರುವ ... ರವರು ತಮ್ಮ ರೈತರುಗಳಿಗೆ ಉಪಶಾಂತಿ ಮಾಡಲು ಉದಾರಭಾವವನ್ನೂ ದೂರದೃಷ್ಟಿಯನ್ನೂ ತೋರಿಸುವವರಾಗಿರುತ್ತಾರೆ. ಆದುದರಿಂದ ... ರವರ ಪ್ರಸಕ್ತ ಕಾರ್ಯದಿಂದ ... ಪ್ರಜೆಗಳು ಸಂತೋಷಪಟ್ಟುಕೊಂಡು ಕೃತಜ್ಞರಾಗಿರುವರು.

ಜರ್ಮನಿಯ ನಷ್ಟಪರಿಹಾರ

ಜರ್ಮನಿಯು ತೆರಬೇಕಾಗಿರುವ ನಷ್ಟಪರಿಹಾರದ ವಿಚಾರವಾಗಿ ಬ್ರಿಟಿಷರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಒಂದು ಪ್ರಕಟನೆಯನ್ನು ಹೊರಡಿಸುವಂತೆ ಮುಖ್ಯ ಮಂತ್ರಿ ಮೆಕ್ಡೊನಾಲ್ಡ್‌ರವರು ಪಾರ್ಲಿಮೆಂಟಿನವರಿಗೆ ಹೇಳಿದರು. ಜರ್ಮ

ನೂ ನಷ್ಟಪರಿಹಾರವನ್ನು ಕೊಡತಕ್ಕದೆಂಬ ಅಭಿಪ್ರಾಯ ವಿಂದ ಈ ಪ್ರಕಟನೆಯನ್ನು ಸಿದ್ಧಗೊಳಿಸಿರುವುದಾಗಿ ಮತ್ತು ಸ್ವಾಸ್ಥ್ಯಾಗಾರದ ಚಿಕಿತ್ಸೆ ಗೌರವವನ್ನು ಕಾಪಾಡಬೇಕಾಗಿ ಎಂಬುದು ಆಸ್ಪತ್ರೆಗಳು ಕ್ರಮವಾಗಿ ನಡೆಸಲ್ಪಡಬೇಕು ಅದಕ್ಕಾಗಿ ವಿಧಾನಗಳನ್ನು ಕೊಡಲ್ಪಡಬೇಕು ಬದ್ಧನಾಗಿ ಶಕ್ತಿಯಿರುವ ಏರ್ಪಾಟನ್ನು ಮಾಡಬೇಕು ಆ ಏರ್ಪಾಟುಗಳು ಇನ್ನೇ ಬಿಡ ಬೇಕಾದರೂ ಅಂತೆಯೇ ಈ ಏರ್ಪಾಟುಗಳು ಮಾಡಲ್ಪಟ್ಟ ಅವು ಜನತೆಗೆ ಅನುಕೂಲವಾಗದೇ ಇದ್ದರೆ ಅಭ್ಯಂತರವಾಗಿರ ಕೂಡದು ಎಂದು ಹೇಳಿರುತ್ತಾರೆ.

ಮಹಾತ್ಮರು ಜೈಲಿನಿಂದ ಬರೆದ ಪತ್ರ

" ಇಂಡಿಯನ್ ರಿಕನ್ಸಿಲಿಯೇಷನ್ ಗ್ರೂಪ್ " (ಇಂಡ್ಯಾ ಸಮಾಧಾನ ಸಂಘ) ಎಂಬ ಹೆಸರಿನ ಒಂದು ಸಂಘದ ಪ್ರತಿನಿಧಿಗಳಾಗಿ ಕ್ವೇಕರು ಪಕ್ಷಕ್ಕೆ ಸೇರಿದ ಮೂವರು ಇಂಡ್ಯಾದೇಶಕ್ಕೆ ಬಂದಿದ್ದು ಇಲ್ಲಿಯ ರಾಜಕೀಯ ಪರಿಸ್ಥಿತಿಯನ್ನೂ ಸಮಾಧಾನವಾಗುವುದರ ಸಾಧ್ಯಾಸಾಧ್ಯತೆಯನ್ನೂ ವಿಚಾರಿಸಿಕೊಂಡು ಸೀಮೆಗೆ ಹಿಂದಿರುಗಿ ಪ್ರಯಾಣಮಾಡಿದರು ಆ ಮೂವರಲ್ಲೊಬ್ಬ ನಾದ ಪರ್ಸಿ ಬಾರ್ಟ್ ಎಂಬವರಿಗೆ ಮಹಾತ್ಮರು ಎರವಾಡಾ ಕಾರಾಗೃಹದಿಂದ ಬರೆದಿರುವ ಲೇಖವು ಲಂಡನ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ ಅದೇನೆಂದರೆ —" ಭಾರತ ರಾಷ್ಟ್ರೀಯ ಗೌರವಕ್ಕೆ ಭಂಗಬಾರದ ರೀತಿಯಲ್ಲಿ ಸ್ವರಾಜ್ಯ ಸಮಾಧಾನವನ್ನೂ ಶಾಂತಿಯನ್ನೂ ಉಂಟುಮಾಡಲು ನಾನು ನನ್ನ ಶಕ್ತಿಯನ್ನು ಉಪಯೋಗಿಸುವೆನು ಶಾಂತಿಸಮಾಧಾನಗಳನ್ನುಂಟು ಮಾಡುವಲ್ಲಿ ನಾನು ಯಾರಿಗೂ ಕಡಿಮೆಯಾಗಿರುವುದಿಲ್ಲ ಆದುದರಿಂದ ಶಾಂತಿಸಮಾಧಾನವನ್ನು ವಿರೋಧಿಸುವ ಯಾವ ಕಾರ್ಯವನ್ನೂ ನಾನು ಮಾಡುವುದಿಲ್ಲವೆಂದು ನೀವು ನಂಬಿರ ಬಹುದು ಜೈಲಿನ್ನವರು ನಮಗೆ ಇದಕ್ಕಿಂತಲೂ ಹೆಚ್ಚಾಗಿ ಏನೇನನ್ನೂ ಬರೆಯಕೂಡದು "

ಅಲಕ್ಷ್ಯ ವೈದ್ಯ ಚಿಕಿತ್ಸೆಗಾಗಿ 7969 ರೂ. ಪರಿಹಾರ

ಸಿಮ್ಲಾದ ಸಿವಿಲ್ ಸರ್ಜನ್ ಲೆಫ್ಟಿನೆಂಟ್ ಕರ್ನಲ್ ವಿಟ್ಮೋ ರು ಎಂಬವರು ಅಲಕ್ಷ್ಯದಿಂದ ವೈದ್ಯಚಿಕಿತ್ಸೆ ಮಾಡಿದ ಪ್ರಯುಕ್ತ ತನಗೆ ಮರಣಾವಧಿ ನಷ್ಟ ಸಂಭವಿಸಿತು. ಇದಕ್ಕಾಗಿ ಸಿವಿಲ್ ಸರ್ಜನ್ನಿನಿಂದ 30,000 ರೂ ನಷ್ಟ ಪರಿಹಾರವನ್ನು ಕೊಡಿಸಬೇಕೆಂದು ಲಾಯಿಲ್ಪುರದಲ್ಲಿ ಪ್ಲೀಡರಾಗಿರುವ ಆರ್ ಎಸ್ ಸಾಪ್ರ ಎಂಬಾತನು ಅದೇ ಊರಿನ ಸಬ್ ಕೋರ್ಟಿನಲ್ಲಿ ದಾವಾ ಮಾಡಿದ್ದನು ವೈದ್ಯನು ತಪ್ಪಿತಸ್ಥನೆಂದು ನಿರ್ಧಾರವಾಗಿ ಈ ಪ್ರಕಾರವಾಗಿ ನಷ್ಟಪರಿಹಾರ ಗೊತ್ತುಮಾಡಲ್ಪಟ್ಟಿತು. (1) ವೈದ್ಯಕ್ಕಾಗಿ ಖರ್ಚಾಗಿರುವುದು 1769 ರೂ (2) ದೋಷಬಿಟ್ಟ ಚಿಕಿತ್ಸೆಮಾಡಿದುದರಿಂದ ಪ್ಲೀಡರಿಗೆ ದೇಹದೌರ್ಬಲ್ಯವುಂಟಾಗಿ ಜೀವಿತ ಸೌಖ್ಯವಿಲ್ಲದಂತಾದುದಕ್ಕಾಗಿಯೂ, ಕೈ ಬೆರಳುಗಳೂ ಪಕ್ಕೆಯೂ ನಿರುಪಯೋಗವಾದುದರಿಂದಲೂ, ದೃಷ್ಟಿಯು ಕೆಟ್ಟುಹೋಗಿ ಬುದ್ಧಿಮಾಂದ್ಯವುಂಟಾದುದರಿಂದಲೂ ಆತನ ದ್ರವ್ಯಸಂಪಾದನೆಗೆ ಅವಕಾಶವಿಲ್ಲದಂತಾದುದಕ್ಕಾಗಿಯೂ 6000 ರೂಪಾಯಿಗಳು ಒಟ್ಟು 7969 ರೂ. ಪರಿಹಾರದ್ರವ್ಯವು ಕೊಡಬೇಕೆಂದು ತೀರ್ಮಾನಿಸಲ್ಪಟ್ಟಿತು ಇನ್ನೇ ವೈದ್ಯನು ಸುಳ್ಳು ಸಾಕ್ಷ್ಯವನ್ನು ನುಡಿದುದಕ್ಕಾಗಿ ಆತನಮೇಲೆ ಮತ್ತೊಂದು ವಿವಾದವನ್ನು ಅದೇ ಪ್ಲೀಡರು ಹೂಡಿರುತ್ತಾನೆ

ಹೆಂಡತಿಯ ವಿಕ್ರಯ

ಬಂಗಾಳಕ್ಕೆ ಸೇರಿದ ಕೋಮಿಲ ಸಬ್‌ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ಗಂಡನು ಹೆಂಡತಿಯನ್ನು ವಿಕ್ರಯಿಸಿದ ವಿವಾದವು ನಡೆಯುತ್ತಿದೆ ಉರಿಯುಸ ಎಂಬ ಗ್ರಾಮದಲ್ಲಿ ರೇವತಿ ಮೋಹನ ಚಕ್ರವರ್ತಿ ಎಂಬ ಒಬ್ಬ ಬ್ರಾಹ್ಮಣ ಯುವಕನು ತನ್ನ ಮಾವನ ಆಸ್ತಿಗೆ ತಾನೇ ಹಕ್ಕುದಾರನಾಗಿ ತನ್ನ ಹೆಂಡತಿ ಮತ್ತು ಅತ್ತೆಯರೊಡನೆ ಮಾವನ ಮನೆಯಲ್ಲೇ ವಾಸವಾಗಿದ್ದನು. ಕೆಲ ಕಾಲಾನಂತರ ನಾಗರಭಾಷಿದೇವಿ ಎಂಬ 14 ವರ್ಷದ ಬಾಲೆಯನ್ನು ಮದುವೆಮಾಡಿಕೊಂಡು ತನ್ನ ಮನೆಗೆ ಕರೆದುಕೊಂಡು ಬಂದನು ಆದರೆ ತನ್ನ ಮೊದಲನೆಯ ಹೆಂಡತಿಯೂ ಅವಳ ತಾಯಿಯೂ ಎರಡನೆಯ ಹೆಂಡತಿಯನ್ನು ಬಹಳವಾಗಿ ಹಿಂಸಿಸುತ್ತ ಬಂದುದರಮೇಲೆ ಆ ಹುಡುಗಿಯನ್ನು ನವಕಾಳಿಯ ವಿಸಿನವಿಹಾರಿದಾಸ ಎಂಬವನಿಗೆ 150 ರೂಪಾಯಿಗಳಿಗೆ ವಿಕ್ರಯಿಸಿ ಒಂದು ಪತ್ರವನ್ನು ಸಹ ಬರೆದುಕೊಟ್ಟನು. ಈ ಸಂಗತಿಯನ್ನು ಆ ಹುಡುಗಿಯ ಅಣ್ಣನು ತಿಳಿದು ಪೋಲೀಸಿಗೆ ವರದಿಮಾಡಿದನು ಪೋಲೀಸಿನವರು ಅವಳ ಗಂಡನಾದ ಚಕ್ರವರ್ತಿಯನ್ನೂ, ಇವನಿಗೆ ವ್ಯಾಪಾರದಲ್ಲಿ ಸಹಾಯಕರಾಗಿದ್ದ ಮೂವರನ್ನೂ ಸೆರೆಹಿಡಿದು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರು. ಇವರ ವಿಚಾರಣೆಯು ಈ ತಾ|| 30 ರಲ್ಲಿ ನಡೆಯುವುದು.

ಸರ್ಪವನ್ನುನು ಬದುಕಿದುದು

ಹೈದರಾಬಾದಿನೊಳಗೆ ದೊಡ್ಡ ವ್ಯಾಪಾರಸ್ಥಳವಾದ ಲಾಡ್‌ಬಜಾರ್ ಎಂಬ ಪೇಟೆಯಲ್ಲಿ ಒಬ್ಬ ಹಾವಾಡಿಗರವನು ತನ್ನ ಹಾವಿನ ಬುಟ್ಟಿ ಮೊದಲಾದ ಸಾಮಗ್ರಿಗಳನ್ನು ಮಡಗಿಕೊಂಡು ಜನರ ಗುಂಪುಸೇರುವುದಕ್ಕಾಗಿ ಡೋಲನ್ನು ಬಡಿಯುತ್ತಿದ್ದನು. ಜನರು ಬಂದು ಸೇರುತ್ತಿದ್ದರು. ಈ ಮಧ್ಯೆ ಬುಟ್ಟಿಯೊಳಗಿದ್ದ ದೊಡ್ಡ ನಾಗರಹಾವು ಹೇಗೋ ಹೊರಗಡೆಗೆ ಬಂದು 16 ವರ್ಷದ ಒಬ್ಬ ಯುವಕನ ಸಮೀಪಕ್ಕೆ ಹೋಗಿ ಅವನನ್ನು ಕಡಿಯಿತು. ಅವನು ಹೆದರಿ ಕೆಳಗೆ ಬಿದ್ದು ಕೂಡಲೆ ಮೂರ್ಛೆಹೋದನು. ಈ ಆಕಸ್ಮಿಕವನ್ನು ಹಾವಾಡಿಗರವನು ನೋಡಿ ಬಿಗಿಬಿಡದೆ ತನ್ನ ಚೀಲದಿಂದ ಒಂದು ಬೇರಿನ ಚೂರನ್ನು ತೆಗೆದು ತನ್ನಲ್ಲಿದ್ದ ಮುಂಗುಸಿಯ ಬಾಯಿಯೊಳಕ್ಕೆ ಕೊಟ್ಟನು ಅದು ಆ ಬೇರನ್ನು ವೇಗವಾಗಿ ಅಗಿದು ಮುಗಿಸಿದ ಮೇಲೆ ಹಾವಾಡಿಗನು ಅದರ ಬಾಯಿಯಿಂದ ಆ ಚೂರ್ಣವನ್ನು ತೆಗೆದು ಸರ್ಪದಿಂದ ಕಚ್ಚಲ್ಪಟ್ಟ ಯುವಕನ ಗಾಯದ ಮೇಲಿಟ್ಟನು. ಸ್ವಲ್ಪ ಹೊತ್ತಿನಮೇಲೆ ಆ ಯುವಕನು ಪ್ರಜ್ಞೆ ಹೊಂದಿ ಮೇಲಕ್ಕೆದ್ದನು ಈ ಹಾವಾಡಿಗರು ಇಂತಹ ಔಷಧಿಗಳನ್ನು ಹಾವುಗಳೊಡನೆ ಹೋರಾಡುವ ಮುಂಗುಸಿ ಮೊದಲಾದ ಪ್ರಾಣಿಗಳಿಂದ ಅರಿತುಕೊಂಡಿರಬಹುದು

ಕೆಳಗೆ ಬಿದ್ದಿದ್ದ ಮರ ಮೇಲಕ್ಕೆದ್ದಿರುವುದು

ಮಡಕಶಿರಾಕ್ಕೆ ಸೇರಿದ ಹರಿಸಮುದ್ರ ಎಂಬ ಗ್ರಾಮದ ಬಳಿ ಬಹಳ ಪುರಾತನವಾದ ಒಂದು ಮರವು ಈ ತಿಂಗಳ ಆದಿ ಭಾಗದಲ್ಲಿ ಮುರಿದುಬಿದ್ದು ಹೋಗಿದ್ದಿತು. ಇದನ್ನು ಕಡಿದು ತೆಗೆದುಕೊಂಡು ಹೋಗಲು ರೆವಿನ್ಯೂ ಶಾಖೆಯವರು ಹರಾಜು ಮಾಡಿದರು ಅದನ್ನು ಕೊಂಡವನು ಅದರ ಕೊಂಬೆಗಳನ್ನೆಲ್ಲ ಕತ್ತರಿಸಿ ಮುಂಡವನ್ನು ಬಿಟ್ಟುಹೋಗಿದ್ದನು ಕೆಲಕಾಲಾನಂತರ ಒಂದು ದಿವಸ ದನಕಾಯುವ ಹುಡುಗರು ತಮ್ಮ ದನಕರುಗಳನ್ನು ಆ ಮುರಿದು ಬಿದ್ದಿದ್ದ ಮುಂಡದ ಸಮೀಪದಲ್ಲಿ ಮೇಯಿಸುತ್ತಿರುವಾಗ್ಗೆ ಅಕಸ್ಮಾತ್ತಾಗಿ ಆ ಮುಂಡವು ಘಟ್ಟಿಯಾಗಿ ಧ್ವನಿಮಾಡುತ್ತ ಮೇಲಕ್ಕೆದ್ದು ನೆಟ್ಟಗೆ ನಿಂತುಕೊಂಡಿತು ಆ ಹುಡುಗರು ಇದನ್ನು ನೋಡಿ ಭಯಭ್ರಾಂತರಾಗಿ ಪಿಶಾಚವು ಮರದಲ್ಲಿ ಸೇರಿರಬೇಕೆಂದು ಭಾವಿಸಿ ಊರಿಗೆ ಓಡಿಹೋಗಿ ನಡೆದ ಸಂಗತಿಯನ್ನು ಜನರಿಗೆ ತಿಳಿಸಿದರು ಜನರು ಗುಂಪುಕಟ್ಟಿಕೊಂಡು ಬಂದು ಈ ಅದ್ಭುತಕಾರ್ಯವನ್ನು ನೋಡಿ ಇದು ದೈವಿಕ ಚಮತ್ಕಾರವೆಂದು ತಿಳಿದು ಮರಕ್ಕೆ ಹಣ್ಣುಕಾಯಿಗಳನ್ನು ಅರ್ಪಿಸಿ ಮಂಗಳಾರತಿ ಮಾಡಿಸಿದರು. ಈ ಮರದಲ್ಲಿ ವಾಸಿಸುತ್ತಿದ್ದ ಘಟಸರ್ಪದ ಮಹಿಮೆಯೆಂದು ಹೇಳಲ್ಪಡುತ್ತಿದೆ ನೆರೆಗ್ರಾಮಗಳಿಂದ ನೂರಾರು ಜನರು ಬಂದು ನೋಡಿ ಆಶ್ಚರ್ಯಪಟ್ಟುಕೊಂಡು ಹೋಗುತ್ತಿರುವರಂತೆ!

ಅಸ್ಪೃಶ್ಯತಾನಿವಾರಣೆ

ಯಾವದಸ್ಕಾರದ ಸ್ವಾಮಿ ಶ್ರದ್ಧಾನಂದ ಮೆಮೋರಿಯಲ್ ಟ್ರಸ್ಟಿನವರು ವೃತ್ತಪತ್ರಿಕೆಗಳಲ್ಲಿ ಈ ಪ್ರಕಾರವಾಗಿ ಪ್ರಕಟಿಸಿರುತ್ತಾರೆ —ಅಸ್ಪೃಶ್ಯತಾನಿವಾರಣ ಸಮಸ್ಯೆಯನ್ನು ಇನ್ನೂ ಬಗೆಹರಿಸದೆ ಇಟ್ಟುಕೊಂಡಿರಕೂಡದು ಈ ಸಮಸ್ಯೆಯು ಪರಿಹಾರವಾಗದಿದ್ದರೆ ಹಿಂದು ಸಮಾಜವು ಉಳಿಯುವುದೇ ಕಷ್ಟವಾಗುವುದು ಒಂದುಕಡೆ ಡಾಕ್ಟರು ಅಂಬೇಡಕರವರು ಹಿಂದು ಸಮಾಜನಾಶಕ್ಕೆ ಹೇತುವಾದ ಪ್ರತ್ಯೇಕ ನಿರ್ವಾಚಕ ವರ್ಗಕ್ಕಾಗಿ ಪ್ರಯತ್ನಿಸುತ್ತಿರುವರು ಈ ಪ್ರಯತ್ನದಿಂದ ಭಾರತದೇಶದಲ್ಲಿ ಪ್ರಜಾಹಿತಕಾರ್ಯಗಳಿಗೂ, ರಾಜಕೀಯ ಕಾರ್ಯಗಳಿಗೂ ಅನರ್ಥಕಾರಿಯಾಗಿ ಪರಿಣಮಿಸುವುದು. ಈ ಪ್ರಯತ್ನವನ್ನು ಪ್ರತಿಭಟಿಸಿ ಹಿಂದು ಸಮಾಜವು ಒಕ್ಕಟ್ಟಿನವಾಗದಂತೆ ಮಾಡುವುದು ಹಿಂದುಗಳ ಕರ್ತವ್ಯವಾಗಿರುತ್ತದೆ ತಾವು ಕೀಳೆಂಬ ಭಾವನೆಯು ಅಸ್ಪೃಶ್ಯರನ್ನು ಆವರಿಸಿಕೊಂಡಿದೆ. ಈ ಭಾವನೆಯನ್ನು ಅಸ್ಪೃಶ್ಯರು ಬಿಡಬಾರದವರಾಗಿರುತ್ತಾರೆ. ಆದುದರಿಂದ ಅವರಲ್ಲಿ ಭಾವಪರಿವರ್ತನವಾಗತಕ್ಕದ್ದು ಅತ್ಯಾವಶ್ಯಕವು. ಅಸ್ಪೃಶ್ಯರೆಂದು ಎಂದಿನಂತೆ ಪರಿಗಣಿಸಿ ಹಿಂದು ಚತುರ್ವರ್ಣದವರು ಭಗವಂತನಿಗೂ, ಮಾನವರಿಗೂ ದ್ರೋಹಮಾಡುತ್ತಿರುವರು ಇನ್ನು ಮೇಲೆ ಈರೀತಿ ಇರುವುದು ಎಷ್ಟು ಮಾತ್ರಕ್ಕೂ ಯುಕ್ತವಲ್ಲ ಈ ವೇಳೆಯಲ್ಲಿ ದೇಶದ ಎಲ್ಲ ಪ್ರಾಂತ್ಯವಾಗಿರುವ ವಿಶೇಷ ಸಂದರ್ಭಸ್ಥಿತಿಯನ್ನು ಅರಿತುಕೊಂಡು ಜುಲೈ ತಾ|| 17 ರಲ್ಲಿ ಅಸ್ಪೃಶ್ಯತಾನಿವಾರಣೆಗಾಗಿ ಪ್ರಯತ್ನಿಸಲು ಪ್ರಜೆಗಳನ್ನು ಪ್ರಾರ್ಥಿಸಿಕೊಳ್ಳುವುದಕ್ಕಾಗಿ ಯಾವದಸ್ಕಾರದ ಸ್ವಾಮಿ ಶ್ರದ್ಧಾನಂದ ಮೆಮೋರಿಯಲ್ ಟ್ರಸ್ಟಿನವರು ನಿಶ್ಚಯಿಸಿರುತ್ತಾರೆ. ಮಠಗುರುಗಳೂ, ಸಭೆಗಳ ಸಮಾಜಗಳ ಕಾರ್ಯನಿರ್ವಾಹಕರುಗಳೂ ಈ ವಿಜ್ಞಾಪನೆಯನ್ನು ಆಲಿಸಿ ಆ ತಾರೀಖಿನಲ್ಲಿ ಗೊತ್ತಾಗುವ ಕಾರ್ಯಕ್ರಮಗಳನ್ನು ಜರುಗಿಸುವಂತೆ ಕೋರುತ್ತೇವೆ ಆ ದಿವಸದಿಂದ ಅಸ್ಪೃಶ್ಯತೆಯನ್ನು ಪರಿಗಣಿಸಬಾರದು. ಅಸ್ಪೃಶ್ಯರೆಂದೂ, ನಿಮ್ಮ ಜನರೆಂದೂ ಕರೆಯಲ್ಪಡುವವರನ್ನು ಹಿಂದು ಸಮಾಜಕ್ಕೆ ಸೇರಿಸಿಕೊಳ್ಳಬೇಕು. ಪ್ರಜೆಗಳು ಸೇರುವ ಸಭೆಗೆ ಅವರನ್ನು ಕರೆದೊಯ್ಯಬೇಕು. ದೇವಾಲಯಗಳಿಗೂ ಅವರನ್ನು ಪ್ರವೇಶಗೊಳಿಸಬೇಕು. ಜುಲೈ ತಾ|| 17 ರಲ್ಲಿ ನಡೆಯುವ ಸಭೆಯಲ್ಲಿ ಮುಂದಿನ ಕಾರ್ಯಕ್ರಮಗಳ ಅನುಸರಿಸಲ್ಪಡುವುವು -(1) ಅಸ್ಪೃಶ್ಯತಾ ಪಾವಸದ ಮೇಲೆ ಉಪನ್ಯಾಸಗಳಾಗುವುವು (2) ರಾಜಾ-ಮೂಂಜೆ ಪ್ಯಾಕ್ಟನ್ನು ಒಪ್ಪದಿರುವುದು ಅಂಬೇಡಕರ ಅನರ್ಥಕಾರಿಯಾದ ಪ್ರಚಾರವನ್ನು ಖಂಡಿಸಿ ತೀರ್ಮಾನಮಾಡುವುದು (3) ದೇವಾಲಯದಲ್ಲಿ ಸಮಸ್ತರೂ ಸೇರಿ ಪೂಜೆಮಾಡಿಸುವುದು, ಬಾವಿಗಳಲ್ಲಿ ಎಲ್ಲರೂ ನೀರನ್ನುಪಯೋಗಿಸುವುದು ಎಂದು ಪ್ರಸಿದ್ಧಪಡಿಸುವುದು (4) ಸಾಧ್ಯವಿದ್ದೆಡೆಯಲ್ಲಿ ಅಂತರ್ವರ್ಣ ಭೋಜನಕ್ಕೇರ್ಪಾಟುಮಾಡುವುದು.

ಬಹಿರ್ದೇಶದ ವ್ಯತ್ಯಾಂತಗಳು

ಮೈಸೂರು ಯೂನಿವರ್ಸಿಟಿ ಮತ್ತು ಯೂನಿವರ್ಸಿಟಿ ಜರ್ನಲ್ ಎಂಬ ಮಾಸಪತ್ರಿಕೆಯ ಪ್ರಕಟನೆಯು ಈ ಜೂನ್ ತಿಂಗಳಾರಭ್ಯ ನಿಲ್ಲಿಸಲ್ಪಟ್ಟಿತು.

ಸಂಬಂಧಪಟ್ಟವರಲ್ಲಿ ... ಕ್ರಿಕೆಟ್ ಪಂದ್ಯ ... ಜುಲೈ ತಾ|| 7 ನೇಯ ... ಎರಡು ಪ್ರಯಾಣಿಕರು ... ಸೋಲಿ 10-5 ಘಂಟೆಯೊಳಗೆ ನಡೆಯುವುದು ... ಕೊಡುವಹಾದ ಹೆಲ್ತ್ ಗಳ ತಾ|| 4 ರಲ್ಲಿ ಜನಜನಿತವಾಗಿ ತಾ|| 25 ರಲ್ಲಿ ಕೊಡಲ್ಪಡುವ ಸಂಚು ಪ್ರಚುರಪಡಿಸಲ್ಪಟ್ಟಿದೆ

ಸರ್ಕಾರದ ಉದ್ಯಾನಗಳ ಡೈರೆಕ್ಟರಾಗಿದ್ದ ಮಿ|| ಜಿ. ಎಚ್. ಕ್ರಂಬೀಗಲ್‌ರವರು ಬರುವ ಜುಲೈ ತಾ|| 1 ರಲ್ಲಿ ಉದ್ಯೋಗದಿಂದ ನಿವೃತ್ತರಾಗುವ ಪ್ರಯುಕ್ತ ಉದ್ಯಾನಗಳ ಸೂಪರಿಂಟೆಂಡೆಂಟರಾದ ಮ|| ಎಚ್. ಸಿ. ಜವರಾಯ್ಯನವರು ಉದ್ಯಾನ ಶಾಖೆಯ ಮತ್ತು ಬೆಂಗಳೂರಿನ ಸರ್ವವಸ್ತು ಪ್ರದರ್ಶನಾಲಯದ ಮೇಲ್ವಿಚಾರಕರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರ ಚುನಾವಣೆಯು ಈ ತಾ|| 30 ರಲ್ಲಿ ನಡೆಯುವುದು ಈ ಚುನಾವಣೆಗೆ ಮ್ಯು|| ಕೌನ್ಸಿಲರುಗಳಾದ ಮ|| ಬಿ. ಕೆ. ಗರುಡಾಚಾರ್ಯರೂ, ಅಡ್ವೊಕೇಟ್ ಮ|| ಎಸ್ ಬಾಲಕೃಷ್ಣಯ್ಯನವರೂ ಅಭ್ಯರ್ಥಿಗಳಾಗಿರುವರು ಈ ಚುನಾವಣೆಯ ಫಲಿತಾಂಶವು ಬಹಳ ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ

ಹಾಸನ ಜಿ|| ಅರಸೀಕೆರೆ ತಾ|| ಮಾಲೇಕಲ್ಲು ತಿರುಪತಿಯಲ್ಲಿ ನಡೆಯುವ ರಥೋತ್ಸವಕಾಲದಲ್ಲಿ ಅಂದರೆ ಬರುವ ಜುಲೈ ತಾ|| ... 17 ಮತ್ತು 18 ರಲ್ಲಿ ಆಯುರ್ವೈದ್ಯ ಕೋ-ಆಪರೇಟಿವ್ ಕಾನ್ಫರೆನ್ಸು ಮತ್ತು ಇನ್‌ಸ್ಟಾಲ್ಮೆಂಟ್ ಕಾನ್ಫರೆನ್ಸು ನಡೆಸಲ್ಪಡುವುದಾಗಿಯೂ, ಈ ಸಭೆಗೆ ಬರತಕ್ಕ ವೈದ್ಯರುಗಳ ಭೋಜನಕ್ಕೆ ಏರ್ಪಾಡಿಸಿರುವುದಾಗಿಯೂ ಹಾಸನದ ಮ|| ಆರ್ ವಿ ಸೂರ್ಯನಾರಾಯಣಶೆಟ್ಟಿ ಬ್ರದರ್ಸ್‌ರವರು ತಿಳಿಸುತ್ತಾರೆ

ಕಳೆದ ಬುಧವಾರ ಬೆಂಗಳೂರಿಂದ ಹೊಸೂರು ಮಾರ್ಗವಾಗಿ ಹೊರಟ ಪ್ರಯಾಣಿಕರ ಬಸ್ಸು ಮಡಿವಾಳದ ಬಳಿ ಇದಿರಾಗಿ ಬರುತ್ತಿದ್ದ ಎತ್ತಿನಬಂಡಿಗೆ ದಾರಿಯನ್ನು ಕೊಡುವ ಪ್ರಯತ್ನದಲ್ಲಿ ಪಕ್ಕದಲ್ಲಿದ್ದ ಹಳ್ಳಕ್ಕೆ ಮಗುಚಿಕೊಂಡಿತು ಇದರಿಂದ ಡ್ರೈವರಿಗೂ ಕಂಡಕ್ಟರಿಗೂ ಮತ್ತಿಬ್ಬರು ಪ್ರಯಾಣಿಕರಿಗೂ ವಿಶೇಷ ಅಪಾಯವು ಸಂಭವಿಸಿರುವುದು ಪೋಲೀಸಿನವರು ಕೂಡಲೆ ಬಂದು ಅಪಾಯವನ್ನು ಹೊಂದಿದವರನ್ನು ಬೆಂಗಳೂರಿನ ಆಸ್ಪತ್ರೆಗೆ ಸಾಗಿಸಿದರು.

ರಾಜಧಾನಿಯ ಇಟಗಿಗೂಡಿನಲ್ಲಿರುವ ಮ|| ನಾಮಕಾರ್ ಎ. ಸಿದ್ದಣ್ಣನವರ ಪುತ್ರ ಮ|| ಎ ಎಸ್ ಚೆನ್ನಯ್ಯನವರ 16-18 ವರ್ಷ ವಯಸ್ಸಿನ ಪತ್ನಿಯು ಕೆಲ ದಿವಸಗಳಿಂದ ವೈನ್ಸ್ಲಾಕ್ ಕ್ಷಯರೋಗ ಆಸ್ಪತ್ರೆಯ ಚಿಕಿತ್ಸೆಯಲ್ಲಿದ್ದು ಈ ದಿವಸ ಕಾಲವಾದರೆಂದು ತಿಳಿಸಲು ಖೇದವಾಗುತ್ತದೆ. ಈಕೆಗೆ ಒಂದು ಗಂಡುಮಗುವಿರುವುದು ಮ|| ಚೆನ್ನಯ್ಯನವರಿಗೆ ಪತ್ನಿ ವಿಯೋಗದುಃಖಪ್ರಾಪ್ತವಾದುದಕ್ಕಾಗಿ ನಮ್ಮ ಅನುತಾಪವನ್ನು ಸೂಚಿಸಿ ಇವರಿಗೆ ಮನಸ್ಸಮಾಧಾನವೂ ಮೃತರ ಆತ್ಮಕ್ಕೆ ಶಾಂತಿಯೂ ಉಂಟಾಗಲೆಂದು ಕೋರುತ್ತೇವೆ.

ರಾಜಧಾನಿಯಲ್ಲಿ ನಡೆದ ಮಹಮ್ಮದೀಯರ ಸಭೆಗೆ ಬಂದಿದ್ದ ಮದ್ರಾಸಿನ ಮಿ|| ಸಿ ಅಬ್ದುಲ್ ಹಕೀಂಸಾಹೇಬರು ಇಲ್ಲಿಯ ಮಹಮ್ಮದೀಯ ಅನಾಥಾಲಯಕ್ಕೆ ಹೋಗಿದ್ದು ಅದರ ಕಾರ್ಯಕ್ರಮವನ್ನೂ ಹುಡುಗರ ವಿದ್ಯಾಭಿವೃದ್ಧಿಯನ್ನೂ ಕೇಳಿ ತಿಳಿದುಕೊಂಡು ಬಹಳವಾಗಿ ಸಂತೋಷಪಟ್ಟು ಆಲಯದ ಸಹಾಯಾರ್ಥವಾಗಿ 10,000 ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟರೆಂದು ಕೇಳಿ ಸಂತೋಷಿಸುತ್ತೇವಲ್ಲದೆ ಅವರನ್ನು ಅಭಿನಂದಿಸುತ್ತೇವೆ ಮತ್ತು ಇತರ ಮಹಮ್ಮದೀಯ ಶ್ರೀಮಂತ ಮನುಷ್ಯರುಗಳು ಅವರ ಮೇಲ್ಪಂಕ್ತಿಯನ್ನು ಅನುಸರಿಸಬೇಕಾಗಿ ಕೋರುತ್ತೇವೆ

ಕಳೆದ ಬುಧವಾರ ಸಾಯಂಕಾಲ 4 ಘಂಟೆಯ ಸಮಯದಲ್ಲಿ ರಾಜಧಾನಿಯಿಂದ ನಾಗಮಂಗಲಕ್ಕೆ ಹೊರಟ ಶ್ರೀ ಸಿದ್ಧಿವಿನಾಯಕ ಮೋಟಾರು ಬಸ್ಸು ಬೀರನಗೆರೆ ಉತ್ತರದ ಸಮೀಪದಲ್ಲಿ ಮುಂದುಗಡೆಯೋಗುತ್ತಿದ್ದ ಮತ್ತೊಂದು ಬಸ್ಸನ್ನು ಹಿಂದಾಕುವ ಪ್ರಯತ್ನದಲ್ಲಿ ಗೇಟಿನಕಲ್ಲಿಗೆ ಡಿಕ್ಕಿ ಹೊಡೆದ ರಭಸದಿಂದ ಬಸ್ಸು ಉರುಳಿ ಬಿತ್ತು, ಒಳಗಿದ್ದವರಲ್ಲಿ ಇಬ್ಬರು ಗಾಯಗೊಂಡರು ಇತರರು ಸ್ವಲ್ಪ ಗಾಯಗೊಂಡರು ... ಬಂದಿಯೊಳಗಿದ್ದ ಪ್ರಯಾಣಿಕರಲ್ಲಿ ಒಬ್ಬನಿಗೆ ಸಿಕ್ಕಿದ ಅಪ್ಪಳಿಸಿದ ಗಾಯದಿಂದ ಸ್ಥಳದಲ್ಲೇ ಮೃತನಾದನು ಇನ್ನೊಬ್ಬ ಸಾಯುವಹಾದಿಯಲ್ಲಿ ಇರುವನು ... ಜೀವಸ್ಥಿತಿಯಲ್ಲಿರುವ ಆಸ್ಪತ್ರೆಗೆ ಸಾಗಿಸಲ್ಪಟ್ಟರು, ಅವರಲ್ಲಿ ಆ ಯುವಕನು ಸತ್ತುಹೋಗಿ ಉಳಿದವರು ಚಿಕಿತ್ಸೆಹೊಂದುತ್ತಿರುವರು. ಬಸ್ಸಿನ ಡ್ರೈವರಿಗೂ ಮತ್ತೆ ಮೂವರಿಗೂ ಸ್ವಲ್ಪವಾಗಿ ಪೆಟ್ಟು ಬಿದ್ದಿರುತ್ತದೆ. ಇಂತಹ ಅನಾಹುತಗಳು ಪದೇ ಪದೇ ನಡೆಯುತ್ತಿವೆ, ಆದರೆ ಡ್ರೈವರುಗಳಿಗೆ ಕಠಿಣ ಶಿಕ್ಷೆಯು ವಿಧಿಸಲ್ಪಡದಿರುವುದರಿಂದ ಅವರು ನಿರ್ಲಕ್ಷ್ಯದಿಂದಲೂ, ನಿರ್ಭೀತಿಯಿಂದಲೂ ಮನಸ್ಸೇ ಬಂದಿಗಳನ್ನೋಡಿಸಿ ಪ್ರಾಣಹಾನಿಯನ್ನುಂಟುಮಾಡುತ್ತಿರುವರು. ಇದು ನಿಲ್ಲಬೇಕಾದಲ್ಲಿ ಅಂಥಾ ಡ್ರೈವರುಗಳಿಗೆ ತಕ್ಕಹಾದ ಕಠಿಣವಾದ ಶಿಕ್ಷೆಯೂ ಬಸ್ಸಿನ ಯಜಮಾನರುಗಳಿಗೆ ಅರ್ಥದಂಡವೂ ವಿಧಿಸಲ್ಪಡಬೇಕು. ಅದು ವಿನಾ ಗತ್ಯಂತರವಿಲ್ಲ.

ಮೈನರ್ವಾ ಮಿಲ್ಸ್ ಲಿಮಿಟೆಡ್

[3 1]

ಪ್ರತಿ 500 ರೂ ಗೆ ಸಾಲಿಯಾನೆ ಶೇಕಡ 7½ ರೂ ಬಡ್ಡಿಯುಂತೆ 18,00,000 ರೂಪಾಯಿಗಳನ್ನು ಆಸ್ತಿಯ ಮೊದಲನೆಯ ಆಧಮಾನದಮೇಲೆ ಸಾಲವಾಗಿ ತೆಗೆಯಲು ಗೊತ್ತುಮಾಡಿದೆ

ಬೆಂಗಳೂರಲ್ಲಿರುವ ಮೇಲ್ಕಂಡ ಕಂಪೆನಿಯ 35,00,000 ರೂಪಾಯಿ ಬೆಲೆ ಬಾಳುವ ಆಸ್ತಿಯು ಈ ಸಾಲಕ್ಕೆ ಈಡಾಗಿರುತ್ತದೆ.

ಈ ಮಿಲ್ಲಿನಲ್ಲಿ 32,416 ಕದುರುಗಳು ಮತ್ತು 440 ಮಗ್ಗಗಳು ನವೀನ ಉಪಕರಣಗಳ ಸಮೇತವಾಗಿರುತ್ತವೆ

ಈ ಸಾಲದ ಮೊಬಲಗು 1940 ನೇ ಇಸವಿ ಜನವರಿ ತಾರೀಖು 2 ರಲ್ಲಿ ಸಲ್ಲತಕ್ಕದ್ದು. ಈ ಸಾಲದ ಮೊಬಲಗನ್ನು ಪೂರ್ತಿಯಾಗಿ ಆಗಲಿ ಭಾಗಶಃ ಆಗಲಿ 1935 ನೆಯ ಜನವರಿ ತಾ॥ 2 ರಲ್ಲಿ ಅಥವಾ ಅನಂತರದಲ್ಲಿ ಬಡ್ಡಿ ಸಮೇತ ಕಂಪೆನಿಯವರಿಗೆ ಸೂಕ್ತ ತೋರಿದಂತೆ ವಾಪಸ್ಸು ಕೊಡುವ ಅಧಿಕಾರವನ್ನು ಕಂಪೆನಿಯವರಿಟ್ಟುಕೊಂಡಿರುತ್ತಾರೆ

ಇಟಲಿಯ ಫಾಸಿಸ್ಟ್ ವಿಧಾನ

ಈ ನೆಯ ಶತಮಾನದಲ್ಲಿ ಯೂರೋಪುಖಂಡದೊಳಗೆ ಎರಡು ದೇಶಗಳು ಅತ್ಯುನ್ನತದೆಶೆಗೆ ಬಂದುವು ಅವುಗಳಲ್ಲೊಂದಾದ ಜರ್ಮನಿಯು ಮಹಾಯುದ್ಧದಲ್ಲಿ ಪರಾಜಯವನ್ನು ಹೊಂದಿದುದರಿಂದ ಈಗ ತನ್ನ ಗೌರವವನ್ನು ಉಳಿಸಿಕೊಳ್ಳುವುದು ಕಷ್ಟವಾಗಿದ್ದಿತು ಆದರೆ ಮೇಲೆ ಹೇಳಿದ ದೇಶಗಳಲ್ಲಿ ೨ನೆಯದಾದ ಇಟಲಿ ದೇಶವು ಮಾತ್ರ ಈಗಲೂ ತನ್ನ ಗೌರವಪ್ರತಿಷ್ಠೆಗೆ ಭಂಗ ಬಾರದಂತೆ ಪ್ರಯತ್ನಪಡುತ್ತಿರುವುದು ಯುದ್ಧದಲ್ಲಿ ಜರ್ಮನಿಯು ಸೋತು ಕ್ಷೀಣವಾಗುತ್ತಿದ್ದರೆ ಇಟಲೀ ದೇಶವು ಇದೇ ಯುದ್ಧದಲ್ಲಿ ಜಯವನ್ನು ಹೊಂದಿದುದರಿಂದಲೂ ಅದರ ಜಯ ಅವಸಾನದಿಂದಲೂ 19 ನೆಯ ಶತಮಾನದಲ್ಲಿ ಮಾಜಿನೀ ಗ್ಯಾರಿಬಾಲ್ಡೀ ಕಾವೂರು ಮೊದಲಾದವರು ನಾಯಕರು ಮಾಡಿದ ಪ್ರಯತ್ನಗಳ ಫಲವನ್ನು ಹೊಂದುವಂತಾಯಿತು ಈಗಲೂ ಯೂರೋಪುಖಂಡದಲ್ಲಿ ಫ್ರಾನ್ಸು ದೇಶವನ್ನು ಬಿಟ್ಟರೆ ಇಟಲಿಯು ಅತ್ಯಂತ ಬಲವಾದ ದೇಶವೆಂದು ಹೇಳಲಭ್ಯಂತರವಿಲ್ಲ ಫ್ರಾನ್ಸು ದೇಶದ ಪ್ರಾಮುಖ್ಯತೆಯು ಅನಾದಿ ಕಾಲದಿಂದಲೂ ಒಪ್ಪಿಕೊಳ್ಳಲ್ಪಟ್ಟುದಾಗಿದೆ ಆದರೂ ಇಟಲಿಯು ಎಂದೋ ಇಂಥಾ ಪ್ರತಿಷ್ಠೆಯನ್ನು ಅಲಂಕರಿಸಿರುತ್ತದೆ ಇದರಿಂದ ಇಟಲೀ ದೇಶವು ನೂತನ ಶಕ್ತಿಯನ್ನು ಹೊಂದಿ ತನ್ನ ಸ್ವಂತ ಪ್ರಯತ್ನದಿಂದ ಇತರರಿಗೆ ಆದರ್ಶಪ್ರಾಯವಾಗಿರುವಂತೆ ಪ್ರವರ್ತಿಸುತ್ತಿದ್ದಿತು ಈಗಿನ ಕಾಲದಲ್ಲಿ ಯೂರೋಪುಖಂಡವು ಇಟಲಿಯ ಕಾರ್ಯವನ್ನು ಬಹಳ ಎಚ್ಚರಿಕೆಯಿಂದ ನಿಕ್ಕಿಯಿಂದ ಪರಿಶೀಲಿಸುತ್ತಿರುವುದು ರೋಮು ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಸಂಸ್ಥೆಗಳೆಲ್ಲ ಯೂರೋಪುಖಂಡ ಸಮಸ್ಯೆಯಾಗಿ ಪರಿಣಮಿಸುತ್ತಿರುವುದು ಹೀಗೆ ದೌರ್ಜನ್ಯಪೂರಿತವಾದ ಇಟಲಿ ದೇಶದ ಪ್ರಾಮುಖ್ಯತೆಗೆ ಕಾರಣವು ಈ ಕೆಳಗೆ ವಿವರಿಸಲ್ಪಟ್ಟಿದೆ

ಇಟಲಿಯ ಪೂರ್ವಚರಿತ್ರೆ

1914-1918 ರ ಮಹಾಯುದ್ಧ ಕಾಲದವರೆಗೂ ಇಟಲಿ ದೇಶವು ಬಹಳ ಹೀನಸ್ಥಿತಿಯಲ್ಲಿದ್ದಿತು ಇದಕ್ಕೆ ಕಾರಣಗಳು ಅನೇಕವಾಗಿವೆ 19 ನೆಯ ಶತಮಾನದ ಮಧ್ಯಕಾಲದವರೆಗೂ ಇಟಲಿ ದೇಶದಲ್ಲಿ ಒಂದು ಪ್ರಜಾಸಾಮ್ರಾಜ್ಯ ಇರಲಿಲ್ಲವು ಮೊದಲಿನಿಂದಲೂ ಆಸ್ಟ್ರಿಯಾ ದೇಶದ ಚಕ್ರವರ್ತಿಯ ರಾಜ್ಯವು ಹೋಲಿರೋಮನ್ ಎಂಪೈರ್ ಎಂದು ಕರೆಯಲ್ಪಡುತ್ತ ಇಟಲಿ ದೇಶವು ಕೂಡ ಆ ರಾಜ್ಯದಲ್ಲಿ ಒಂದು ಭಾಗವೆಂದು ಭಾವಿಸಿದ್ದಿತು ಜರ್ಮನ್ನಾ ಬಿಟ್ಟು ಆರುವ ರಾಜ್ಯವನ್ನು ಪರಿಪಾಲಿಸುತ್ತಾ ಈ ಚಕ್ರವರ್ತಿಗಳು ಹೋಲಿರೋಮನ್ ಚಕ್ರವರ್ತಿಗಳೆಂದು ಪರಿಗಣಿಸಲ್ಪಡುತ್ತಿದ್ದರು ದಕ್ಕೆ ರೋಮು ಕಾರಣವಾಯಿತು ಕ್ರೈಸ್ತಮತದಲ್ಲಿ ಅನಾದಿ ರೋಮನ್ ಕ್ಯಾಥೋಲಿಕ್ ಎಂಬ ಮಹಾಶಾಖೆಯ ರೋಮನ್ ಪಟ್ಟಣದಲ್ಲಿ ವಾಸಿಸುತ್ತಿರುವನು ಈತನನ್ನು ಪೋಪ್ ಎಂದು ಕರೆಯುವರು ಈ ರೋಮನ್ ಕ್ಯಾಥೋಲಿಕ್ ಪಂಗಡದವರು ಪ್ರಪಂಚದಲ್ಲೆಲ್ಲ ಭಾಗದಲ್ಲೂ ಕಂಡುಬರುತ್ತಾರೆ ಈ ಮಹಾ ಪೋಪ್ ಗುರು ತಮ್ಮ ರಾಜ್ಯದಲ್ಲಿರುವ ರೋಮನ್ ಪಟ್ಟಣದಲ್ಲಿರುವುದರಿಂದಲೂ ಕೆಲಕಾಲದವರೆಗೆ ತಮ್ಮ ವಂಶ ಹೋಲಿ ಹೆಸರಾಗಿದ್ದು ಇದರಲ್ಲಿ ಪೋಪನನ್ನು ಚಕ್ರವರ್ತಿಗಳ ವಿರೋಧದಿಂದಲೂ ಪೋಪನು ಚಕ್ರವರ್ತಿಯನ್ನು ಬಂಧಿಸಿದುದರಿಂದಲೂ ಈ ಆಸ್ಟ್ರಿಯಾ ದೇಶದ ಚಕ್ರವರ್ತಿಗಳು ಹೋಲಿ ರೋಮನ್ನಿನ (ಅಂದರೆ ಪವಿತ್ರ ರೋಮನ್ ದೇಶದ) ಚಕ್ರವರ್ತಿಗಳೆಂದು ಭಾವಿಸಲ್ಪಡುತ್ತಿದ್ದರು

ಹೀಗೆ ಪವಿತ್ರವಾದ ರೋಮನ್ ಸಾಮ್ರಾಜ್ಯದಲ್ಲಿ ಒಂದು ಭಾಗವಾಗಿ ಇಟಲಿ ದೇಶವು 30 ವರ್ಷಕಾಲ ಪರಿಗಣಿಸಲ್ಪಟ್ಟಿದ್ದಿತು ಇಂಥಾ ಸಂದಿಗ್ಧ ಸಮಯದಲ್ಲಿ ಫ್ರಾನ್ಸು ದೇಶದಲ್ಲಿ ನೆಪೋಲಿಯನ್ ಎಂಬ ಮಹಾ ಸೇನಾನಾಯಕನು ಚಕ್ರವರ್ತಿ ಪದವಿಯನ್ನು ಹೊಂದಿದನು ನೆಪೋಲಿಯನ್ನನ ದಿಗ್ವಿಜಯದಿಂದ ಯೂರೋಪುಖಂಡದಲ್ಲೆಲ್ಲ ಪ್ರಾಬಲ್ಯವನ್ನು ಸ್ಥಾಪಿಸಿತು ಇವನು ಅಲ್ಲದೆ ಆಸ್ಟ್ರಿಯಾಖಂಡದಲ್ಲಿರುವ ರಾಜ್ಯಾದಿಗಳ ಮೇಲೂ ಸಹ ದಂಡೆತ್ತಿ ಹೋಗುವ ಶಕ್ತಿಸಾಮರ್ಥ್ಯವು ನೆಪೋಲಿಯನ್ ಚಕ್ರವರ್ತಿಗಿದ್ದಿತು ಪವಿತ್ರವಾದ ರೋಮನ್ ಸಾಮ್ರಾಜ್ಯದಲ್ಲಿರುವ ಬಹು ರಾಜ್ಯಗಳನ್ನು ಆಕ್ರಮಿಸಿ ಅವನ್ನು ಸೋಲಿಸಿ ಸ್ವತಂತ್ರಗೊಳಿಸಿ ಮಾಡಿಕೊಂಡು ಕಡೆಯಲ್ಲಿ ಆಸ್ಟ್ರಿಯಾ ದೇಶದವರನ್ನು ಓಡಿಸಿದಾಗ ಹೋಲಿರೋಮನ್ ಚಕ್ರವರ್ತಿಗಳೆಂಬ ಹೆಸರು ಈ ವಿಷಯಗಳು ನಡೆದು 110 ವರ್ಷಗಳಾದುವು. ಇದೇ ಸಮಯದಲ್ಲಿ ಇಟಲಿ ದೇಶವು ಕೂಡ ನೆಪೋಲಿಯನ್ನನ ಸಾಮ್ರಾಜ್ಯದಲ್ಲಿ ಒಂದು ಭಾಗವಾಗಿ ಬಂದುದರಿಂದ ಹೋಯಿತು ಅದರಿಂದಲೂ ಇಟಲಿ ದೇಶದಲ್ಲಿ ಪರಸ್ಪರ ಸ್ವಾತಂತ್ರ್ಯವಿಲ್ಲದೆ ಹಲವು ಚಿಕ್ಕ ಚಿಕ್ಕ ಪ್ರಭುಗಳ ರಾಜ್ಯಗಳಾಗಿ ಹೋಯಿತು

ನೆಪೋಲಿಯನ್ನನ ಕಾರ್ಯಭಾರದ ಫಲವು

ಈ ಚಕ್ರವರ್ತಿಗಳೆಲ್ಲರ ಆತ್ಮ ಪರಾಕ್ರಮವು ಸ್ವಲ್ಪಕಾಲ ಮಾತ್ರ ನೆಲೆಸಿದ್ದಿತು ನೆಪೋಲಿಯನ್ನನ ಸಾಮ್ರಾಜ್ಯವು ಹೆಚ್ಚು ಕಾಲ ಬಾಳಲಿಲ್ಲ ಅವನಿಂದ ಹೊಸದಾಗಿ ಸ್ಥಾಪಿಸಲ್ಪಟ್ಟ ಹಲವಾರು ದೇಶಗಳ ರಾಜ್ಯಗಳಲ್ಲಿ ನ್ಯಾಯವಿಧಾನವು ಇದರಿಂದ ಆ ದೇಶಗಳ ಪ್ರಜೆಗಳಲ್ಲಿ ಹೊಸ ಜಾಗೃತಿಯು ಉಂಟಾಯಿತು ಒಬ್ಬರಿಗೊಬ್ಬರು ಸಂಬಂಧಗಳನ್ನು ಹೆಚ್ಚಿಸಿ ಅಧಿಕಾರದ ಬಲವನ್ನು ಮಾಡಿದರು ಇಟಲಿಯ ನೆಪೋಲಿಯನ್ನನ ಕಾಲದಲ್ಲಿ ಹಲವು ಕಾರ್ಯಗಳಿಗೆ ಎಡೆಮಾಡಿಕೊಟ್ಟು ಬಹಳವಾಗಿ ಕದಿರು ಮತ್ತು ಹೊಸ ಸಂಸ್ಥೆಗಳನ್ನು ಅನೇಕವಾಗಿ ಸ್ಥಾಪಿಸಿದನು ಫ್ರಾನ್ಸಿನಲ್ಲಿ ಪ್ರಸಿದ್ಧವಾಗಿರುವ “ಕೋಡ್ ನೆಪೋಲಿಯನ್” ಎಂಬ ನ್ಯಾಯವಿಧಾನವು ಏರ್ಪಡಿಸಲ್ಪಟ್ಟಿತು ಪಟ್ಟಣ ರಾಷ್ಟ್ರಗಳಲ್ಲಿ ಮನಸ್ಸು ಒಂದೇ ಹಾಗೆ ತಿರುಗುವ ಸಂಬಂಧಗಳನ್ನೆಲ್ಲ ತೆಗೆದುಬಿಟ್ಟನು ರಾಜ್ಯವೆಲ್ಲವೂ ಒಂದೇ ಎಂದು ಪರಿಗಣಿಸಲ್ಪಟ್ಟು ಆಳಲ್ಪಡುತ್ತಿದ್ದುದರಿಂದ ದೇಶದ ಜನರಿಗೆ ಸಂಘೀಭಾವವು ಸೂಚಿತವಾಯಿತು ನೆಪೋಲಿಯನ್ನನ ರಾಜ್ಯವು 1815 ರಲ್ಲಿ ಒಡೆದು ಛಿದ್ರವಾಯಿತು ಆದರೆ ಆತನ ರಾಜ್ಯಾಂಗ ವಿಧಾನ ಮಾತ್ರ ಎಲ್ಲ ಕಾಲಕ್ಕೂ ಜೀವಿಸಿರುವುದು ಇದರಿಂದ ಇಟಲಿಗೆ ಮಾಡಿದ ಸಹಾಯವು ನೆಪೋಲಿಯನ್ ಚಕ್ರವರ್ತಿಯ ಮಹಾಕಾರ್ಯಗಳಲ್ಲಿ ಒಂದಾಗಿ ಪರಿಗಣಿಸಲ್ಪಡಲು ಕಾರಣಭೂತವಾಯಿತು

ನೂತನ ಶಕಾರಂಭ

ಮೇಲೆ ಹೇಳಿರುವ ಗಾರಿಬಾಲ್ಡೀ, ಮಾಜಿನೀ ಮೊದಲಾದವರು ನೆಪೋಲಿಯನ್ನನ ಆಡಳಿತಾಧಿಕಾರವು ವಿಚ್ಛಿನ್ನವಾದ ಕಾಲದಿಂದಲೂ ತಮ್ಮ ದೇಶಭಕ್ತಿಯಿಂದ ಇಟಲಿದೇಶಾಭಿವೃದ್ಧಿಗೆ ಬಹಳ ಸಾಹಸಪಟ್ಟರು ಮಾಜಿನಿಯು “ಯಂಗ್ ಇಟಲೀ” ದೇಶವನ್ನುದ್ಧರಿಸಿದನಲ್ಲದೆ ಪ್ರಪಂಚಕ್ಕೆಲ್ಲ ಆದರ್ಶಪ್ರಾಯವಾಗಿದ್ದನು ಇವರು ಮೂವರು ಮಾಡುವ ಕಾರ್ಯಗಳಿಗೆ ಅನುಗುಣವಾಗಿ ಆ ದೇಶದ ರಾಜನಾದ ವಿಕ್ಟರ್ ಎಮ್ಯಾನ್ಯುಯೆಲನು ರಾಜ್ಯಭಾರಮಾಡುತ್ತಿದ್ದನು

ಈ ನಾಲ್ವರ ಜೊತೆಗೂಡುವಿಕೆಯಲ್ಲಿ ಇಟಲೀ ದೇಶವು ಜಾಗೃತೆಯಲ್ಲಿ ತನ್ನ ನಿಜಶಕ್ತಿಯನ್ನು ಅರಿತುಕೊಂಡು ದಿನ ದಿನಕ್ಕೆ ಅಭಿವೃದ್ಧಿ ಹೊಂದುತ್ತಿದ್ದಿತು ಇಪ್ಪತ್ತನೆಯ ಶತಮಾನದಲ್ಲಿ ಮೊದಲು 10 ವರ್ಷಗಳು ಇಟಲೀ ದೇಶಕ್ಕೆ ಕಷ್ಟಕಾಲವಾಗಿ ಪರಿಣಮಿಸಿದುವು ಎಂದೂ ಕಾಣದ ಮತ್ತು ಅರಿಯದ ದುರ್ಗತಿಗಳು ಆ ಸಂಘೀಭಾವವು ಪ್ರಜೆಗಳಲ್ಲಿ ಉಂಟಾಯಿತು ಆದರಿಂದ ಹೊಸ ಹೊಸದಾದ ಮಹ ಉತ್ಕರ್ಷಭಾವನೆಯು ದೇಶವನ್ನಾವರಿಸಿಕೊಂಡಿದ್ದಿತು ಆಸ್ಟ್ರಿಯಾ ಚಕ್ರವರ್ತಿಯವರ ಆಡಳಿತದ ಕಾಲದಲ್ಲಾಗಲಿ ನೆಪೋಲಿಯನ್ನನ ಕಾಲದಲ್ಲಾಗಲಿ ಇಟಲಿಯು ಪರದೇಶಗಳೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳೆಸಲಿಲ್ಲ ಹೊಸ ರಾಷ್ಟ್ರವಾಗಿ ನಿಯಮಿಸಲ್ಪಟ್ಟುದರಿಂದ ಸ್ವತಂತ್ರವಾಗಿ ಇಟಲೀ ದೇಶವು ಇತರ ದೇಶಗಳೊಡನೆ ಪ್ರತಿಭಟಿಸಬೇಕಾಗಿ ಬಂದಿತು ಇದರಿಂದ ದೊಡ್ಡ ಸೈನ್ಯಗಳೂ ನೌಕಾದಳವೂ ಬೇಕಾಗಿ ಬಂದುವು ಇದೇ ಪ್ರಕಾರವಾಗಿ ಹೊಸದಾದ ರಾಜ್ಯಾಂಗ ವಿಧಾನಕ್ಕೆ ಬೇಕಾದ ಸಂಗತಿಗಳನ್ನೆಲ್ಲ ಏರ್ಪಡಿಸಿಕೊಳ್ಳಬೇಕಾಗಿ ಬಂದಿತು ಹೊಸದಾದ ಶಾಸನಸಭೆಗಳು ಅನುಷ್ಠಾನಕ್ಕೆ ತರಲ್ಪಟ್ಟುವು ಒಟ್ಟಿನಮೇಲೆ ಹೊಸ ವೇತನಗಳು ಒಂದುಸಾರಿ ಒಟ್ಟುಗೂಡಿ ಇಟಲೀ ದೇಶದಮೇಲೆ ದಂಡೆತ್ತಿ ಬಂದುವು

ಈ ಸಂಧಿ ಸಮಯದಲ್ಲಿ ಇಟಲೀ ದೇಶಕ್ಕೆ ಬಹಳ ನಷ್ಟವುಂಟಾಯಿತು ಪ್ರಜೆಗಳು ಹೊಸವಾದಗಳನ್ನು ಅವಗಣಿಸಿ ಸಮರ್ಥಿಸಿಕೊಳ್ಳುವ ಶಕ್ತಿಯುಳ್ಳವರಾಗಿರಲಿಲ್ಲ ದೇಶದಲ್ಲಿ ಹೊಸ ತೆರಿಗೆಗಳನ್ನು ವಿಶೇಷವಾಗಿ ವಿಧಿಸಿ ಪ್ರಜೆಗಳನ್ನು ಬಾಧಿಸುತ್ತಿದ್ದುದರಿಂದ ಅಧೋಗತಿಗೆ ಬರಬೇಕಾಯಿತು ಎಲ್ಲಿ ನೋಡಿದರೂ ಕೆಲಸ ಕಾರ್ಯವಿಲ್ಲದೆ ಮತ್ತು ಸರ್ಕಾರಿಯಧಿಕಾರಿಗಳ ದುರ್ಬಲತೆಯ ಕೆಲಸಗಳೇ ಒಟ್ಟಿನಲ್ಲಿ ಆ ವೇಳೆಯಲ್ಲಿ ಇಟಲೀ ದೇಶದವರು ಬಹಳವಾಗಿ ಒಡೆದಿಸಲ್ಪಡುತ್ತಿದ್ದರು

ಯೂರೋಪು ಮಹಾಯುದ್ಧ

ದುರ್ಭಿಕ್ಷದಲ್ಲಿ ಅಧಿಕಮಾಸವೆಂಬ ಗಾದೆಯಂತೆ ಬಹಳ ಭಯಂಕರ ಪೀಡನೆಗೆ ಗುರಿಯಾಗಿದ್ದ ಇಟಲೀ ದೇಶವು 1914 ರಿಂದ 1918 ರ ವರೆಗೆ ನಡೆದ ಮಹಾಯುದ್ಧದಲ್ಲಿ ಇಂಗ್ಲೆಂಡು ಫ್ರಾನ್ಸಿನ ಪರವಾಗಿ ಜರ್ಮನಿ ಆಸ್ಟ್ರಿಯಾದೇಶಗಳ ವಿರುದ್ಧವಾಗಿ ಕಾದಾಡಿತು ಮೊದಲು ೨ ವರ್ಷಗಳಲ್ಲಿ ಇಟಲೀ ದೇಶವು ಎಲ್ಲ ಕಡೆಯಲ್ಲೂ ಪರಾಜಯವನ್ನು ಹೊಂದಿತು ಆದರೆ ಮುಸಲೋನಿ ಎಂಬ ಮಹಾನಾಯಕನು ಮುಂದೆ ಬಂದು ಸೋತುಹೋಗುತ್ತಿದ್ದ ಇಟಲಿ ಸೈನ್ಯಗಳು ಜಯಶಾಲಿಗಳಾಗುವಂತೆ ಮಾಡಿದನು

ಫಾಸಿಸ್ಟ್ ಉದ್ಯಮವ್ಯಾಪ್ತಿ

ಮೇಲಿನ ಪ್ರಸಾರದ ಪರ್ಯವಸಾನವು “ಫಾಸಿಸ್ಟ್” ಎಂಬ ಇಟಲೀ ದೇಶದ ಸಂಘಗಳುತ್ಪನ್ನವೇ ಫಾಸಿಸ್ಟ್ ಯಲ್ಲಿ ಪುರುಷರು ಸ್ತ್ರೀಯರು ಬಾಲಕ ಬಾಲಿಕೆಯರು ಎಲ್ಲರೂ ಸೇರಬಹುದು ಇದರಲ್ಲಿ ಗಂಡಸರಿಗೂ ಹೆಂಗಸರಿಗೂ ಏಳೇ ಉಡುಪುಗಳು ಫಾಸಿಸ್ಟ್ ಯವರ ಯೂನಿಫಾರಮಾಗಿ ಉಪಯೋಗಿಸಲ್ಪಟ್ಟಿದೆ ಇವರು ಮಾಡುವ ನಮಸ್ಕಾರವು ಜನಸಾಮಾನ್ಯರು ಮಾಡುವ ರೀತಿಯಲ್ಲಿಲ್ಲ ಈ ವಿಧವಾಗಿ ಫಾಸಿಸ್ಟ್ ಯ ಉಪಸಂಘಗಳು ದೇಶದಲ್ಲೆಲ್ಲಾ ಸ್ಥಾಪಿತವಾದುವು ಯುದ್ಧವು ಮುಗಿದ ೨ ೩ ವರ್ಷಗಳಲ್ಲಿ ಮುಸಲೋನಿಯು ಪಾರ್ಟಿಗೆ ವಿಶೇಷ ಬಲಬಂದಿತು ಹೀಗೆ ಬಲ ಬಂತ ಕೂಡಲೇ ಮುಸಲೋನಿಯು ದೇಶದಲ್ಲಿ ಕ್ಷಿಪ್ರವಾಗಿ ಹೋರಾಟಕ್ಕೆ ಶಾಸನ ಸಭೆಯಲ್ಲಿ ಪ್ರವೇಶಿಸಿ ಅದನ್ನು ವಶಮಾಡಿಕೊಂಡು ಅದನ್ನು ಛಿನ್ನಗೊಳಿಸಿ ತನ್ನ ನಿರಂಕುಶ ಫಾಸಿಸ್ಟ್ ಪ್ರಭುತ್ವವನ್ನು ಸ್ಥಾಪಿಸಿದನು 10 ವರ್ಷಗಳಲ್ಲಿ ಈ ಫಾಸಿಸ್ಟ್ ಪ್ರಭುತ್ವವು ಉನ್ನತ ದೆಶೆಗೆ ಬಂದಿತು

ಇಟಲೀ ದೇಶದ ರಾಜನಾದ ವಿಕ್ಟರ್ ಇಮಾನ್ಯುಯೆಲ್ ದೇಶವನ್ನು ನಾಮ ಮಾತ್ರಕ್ಕೆ ಪರಿಪಾಲಿಸುತ್ತಿರುವನು ಇಂಗ್ಲೆಂಡು ರಾಜರುಗಳಂತೆ ಈತನು ಮಾತ್ರ ರಾಜ್ಯಾಂಗ ವಿಧಾನ ನಿಯಮಕ್ಕೆ ಬದ್ಧನಲ್ಲವು ಏಕೆಂದರೆ ಇಟಲಿಯಲ್ಲಿ ರಾಜ್ಯಾಂಗ ವಿಧಾನ ಪ್ರಮಾಣವೇನೂ ಇಲ್ಲ ಈ ಕಾರಣದಿಂದ ಮುಸಲೋನಿಯೇ ರಾಜ್ಯಾಂಗ ಪ್ರಧಾನವು, ಅಂದರೆ ಇಟಲೀ ರಾಜನು ಮುಸಲೋನಿಯು ಹೇಳಿದಂತೆ ನಡೆಯಬೇಕಾಗಿದೆ

ದೇಶದಲ್ಲಿ ಹೆಸರಿಗೆ ಮಾತ್ರ ಎರಡು ಶಾಸನಸಭೆಗಳಿರುತ್ತವೆ ಆದರೆ ಅವೆರಡೂ ಫಾಸಿಸ್ಟರ ಕೈಯಲ್ಲಿ ಸಿಕ್ಕಿಬಿದ್ದಿರುವುವು ಏಕೆಂದರೆ, ಇಟಲೀ ದೇಶದಲ್ಲಿ ಫಾಸಿಸ್ಟರ ವಿನಾ ಬೇರೆ ಪಾರ್ಟಿಯವರು ಆವಕಾಶವಿಲ್ಲ. ದೇಶದ ಪ್ರಜೆಗಳೆಲ್ಲರೂ ಫಾಸಿಸ್ಟು ಸಂಘಕ್ಕೆ ಸೇರಬೇಕು ಹಾಗಿಲ್ಲವಾದರೆ ಅವರು ಕಾರಾಗೃಹದಲ್ಲಿ ಬಂಧಿಸಲ್ಪಡುವರು ಅಥವಾ ಗಡೀಪಾರು ಮಾಡಲ್ಪಡುವರು ಈ ನಿರ್ಬಂಧದಿಂದ ಅನೇಕ ಇಟಲಿಯವರು ಲಂಡನ್ನಿಗೂ ಪ್ಯಾರಿಸ್ಸಿಗೂ ಬರ್ಲಿನ್ನಿಗೂ ಹೋಗಿ ನೆಲೆಸಿದರು ಆ ದೇಶಗಳಲ್ಲಿ ಹಿಂದಿರುಗಿ ಬಂದವರು ಮರಣದಂಡನೆಗೆ ಗುರಿಯಾಗುತ್ತಿದ್ದರು. ಈ ಪ್ರಕಾರವಾಗಿ ಇಟಲಿಯಲ್ಲಿ ವಿದ್ಯಾವಂತರೂ, ಮೇಧಾವಿಗಳೂ ಬಹಳ ಕಷ್ಟಕ್ಕೆ ಗುರಿಯಾಗಿರುವರು ಈ ವಿಷಯದಲ್ಲಿ ಫಾಸಿಸ್ಟರೊಡನೆ ಯಾವ ಸಂಬಂಧವೂ ಇಲ್ಲದೆ ಹೊರದೇಶಕ್ಕೆ ಹೋಗಿ ಅಲ್ಲಿಂದಲೇ ಕೆಲಸಮಾಡುವವರು ಸಹ ಉಂಟು ಇದು ಹೀಗಿದ್ದರೂ ಇಟಲಿಯಲ್ಲಿ ಫಾಸಿಸ್ಟರ ಪ್ರಭುತ್ವವು ದಿನೇದಿನೇ ವೃದ್ಧಿಯಾಗುತ್ತಿದೆ

ಫಾಸಿಸ್ಟ್ ಸರ್ಕಾರದ ಕಾರ್ಯಕ್ರಮ

ದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಹಲವು ಕಾರ್ಯಗಳನ್ನು ನಡೆಸುತ್ತಿರುವರು ಇಟಲಿಯ ರಾಷ್ಟ್ರೀಯ ಐಕ್ಯಮತ್ಯವನ್ನು ಕಾಪಾಡುವುದು ಮೊದಲ ಉದ್ದೇಶವಾಗಿದೆ ಅಲ್ಲದೆ ಕಾರ್ಮಿಕರಿಗೂ ಮಾಲೀಕರಿಗೂ ಸಂಬಂಧ ಕಲ್ಪಿಸಿ ದೇಶಕ್ಕೆ ಸಹಾಯಕವಾಗಿರುವ ಈ ಕೆಲಸಕ್ಕೆ ಅನ್ಯಾಯವೆಸಗುತ್ತಿದ್ದ ದೇಶಕ್ಕೆ ವಿರುದ್ಧವಾಗಿ ನಡೆಯುವ ರಾಜ್ಯಾಂಗ ಕಠಿಣ ಚಟ್ಟವನ್ನು ಪ್ರಜೆಗಳು ಅನುಭವಿಸಬೇಕು ಈ ಪ್ರಕಾರವಾದ ತತ್ವವಿಧಾನವನ್ನು ಇಟಲೀ ದೇಶದವರೆಲ್ಲರೂ ಅನುಮೋದಿಸಿಯೇ ಇರುತ್ತಾರೆ ಕಾರ್ಮಿಕರಿಗೆ ಪೂರ್ವ ಕಾಲದಿಂದಲೂ ಅನುಸರಿಸಿ ಬಂದಿದ್ದ ಹೀನಸ್ಥಿತಿಯು ಈಗ ಕಳೆದುಹೋಗಿರುವುದು ಇದಕ್ಕೆ ಬದಲಾಗಿ ಫಾಸಿಸ್ಟ್ ಪಾರ್ಟಿಯವರಿಗೆ ತಾರತಮ್ಯವಿಲ್ಲದ ಜನರ ದೃಷ್ಟಿಯಿಂದ ಎಲ್ಲರನ್ನು ಪರಿಗಣಿಸುತ್ತಿರುವ ಸಿದ್ಧತೆಯು ಆಚರಣೆಯಲ್ಲಿದೆ

ವಾಣಿಜ್ಯಾಭಿವೃದ್ಧಿ

ಯುದ್ಧ ಮುಗಿದಂದಿನಿಂದಲೂ ಇಟಲೀ ದೇಶವು ಪಾರಿಶ್ರಾಮಿಕದಲ್ಲೂ ವ್ಯಾಪಾರದಲ್ಲೂ ಶ್ರೀಘ್ರವಾದ ಅಭಿವೃದ್ಧಿಯನ್ನು ಪಡೆಯಿತು, ಇದಕ್ಕಾಗಿ ಮುಸಲೋನಿಯು ದೇಶಕ್ಕೆ ಹೊರಗಿನಿಂದ ಬರುವ ಪದಾರ್ಥಗಳಿಗೆ ಹೆಚ್ಚು ಸುಂಕವನ್ನು ವಿಧಿಸಿ ದೇಶೀಯ ಪರಿಶ್ರಮವನ್ನು ವೃದ್ಧಿಗೊಳಿಸಿದನು ಇಷ್ಟು ಮಾತ್ರವಲ್ಲದೆ ಸೈನ್ಯವನ್ನೂ ನೌಕಾದಳವನ್ನೂ ವೈಮಾನಿಕದಳವನ್ನೂ ಪ್ರಬಲವಾಗಿ ಏರ್ಪಡಿಸಿ ಅವುಗಳಿಗೆ ಬೇಕಾದ ಯುದ್ಧಸಾಮಗ್ರಿಗಳನ್ನು ಒದಗಿಸುತ್ತ ಬಂದುದರಿಂದ ವರ್ತಕರುಗಳಿಗೆಲ್ಲ ಹೆಚ್ಚು ಲಾಭವು ಕಂಡುಬಂದಿತು ಈ ಪ್ರಕಾರವಾಗಿ ಫಾಸಿಸ್ಟ್ ಪಾರ್ಟಿಯವರು ದೇಶೀಯ ಜನರಲ್ಲಿ ವಿದ್ಯಾರ್ಥಿ ಕರೂ ಮತಾವಾದಿಗಳೂ ಹೊರತಾಗಿ ಉಳಿದವರೆಲ್ಲ ಯಾವುದೇ ಒಂದು ವಿಧವಾಗಿ ಲಾಭವನ್ನು ತೋರಿಸಿ ಅವರ ಸಂಪೂರ್ಣ ಸಹಾಯವನ್ನು ಪಡೆಯುತ್ತಿದ್ದರು ಈ ಫಾಸಿಸ್ಟ್ ಪಾರ್ಟಿ ಮಾಡಿದ ಕಾರ್ಯಗಳು ಅನೇಕವಾಗಿರುತ್ತವೆ ದೇಶೀಯರ ಅಭ್ಯುದಯವೇ ಅವರ ಮುಖ್ಯ ಉದ್ದೇಶವು ಬಾಲಕಬಾಲಕಿಯರೂ ಕೂಡ ಈ ಫಾಸಿಸ್ಟ್ ಪಾರ್ಟಿಗೆ ಸೇರಲೇ ಬೇಕು ಸ್ತ್ರೀಯರಾಗಲಿ ಪುರುಷರಾಗಲಿ ಈ ಫಾಸಿಸ್ಟ್ ಪಾರ್ಟಿಗೆ ವಿರುದ್ಧವಾಗಿ ನಡೆಯಲಾಗುವುದಿಲ್ಲ ಇದಕ್ಕೆ ಮುಂಚೆ ಸೇರದವರು ಕಾರಾಗೃಹದಲ್ಲಿ ಬಂಧಿಸಲ್ಪಡುವರು ಅಥವಾ ಗಡೀಪಾರು ಮಾಡಲ್ಪಡುವರು ಮುಸಲೋನಿಯು ಈ ಪಾರ್ಟಿಯ ಮುಖ್ಯನಾಯಕ ಆತನ ಮಾತಿಗೆ ದೇಶದಲ್ಲಿ ಬದಲು ಹೇಳುವವರೇ ಇಲ್ಲ

ಇಂಥಾ ಫಾಸಿಸ್ಟ್ ಪಾರ್ಟಿಯ ಕಾರ್ಯಕ್ರಮವು ಇಟಲೀ ದೇಶವನ್ನು ಕಳೆದ 10 ವರ್ಷಗಳಲ್ಲಿ ಅತ್ಯುನ್ನತಸ್ಥಿತಿಗೆ ತಂದಿರುತ್ತದೆನ್ನುವುದರಲ್ಲಿ ಸಂದೇಹವಿಲ್ಲ ಈಗಲೂ ಇಟಲಿಯು ಹೆಸರಾದ ಫ್ರಾನ್ಸಿನ ಸಹ ಭಯವುಂಟಾಗುತ್ತದೆ

ಜರ್ಮನಿಗೆ ದುರವಸ್ಥೆ ಯೇಕೆ?

ಭಾರತೀಯರ ದುರವಸ್ಥೆಗೂ ಅದೇ ಕಾರಣ

ಜರ್ಮನ್ ರಾಷ್ಟ್ರವು ಪ್ರಪಂಚದ ಎಲ್ಲ ರಾಷ್ಟ್ರಗಳಿಗಿಂತಲೂ ಸುಧಾರಿಸಿದ್ದಾಗಿದೆ ಜರ್ಮನಿಯ ಶಾಸ್ತ್ರಜ್ಞರೂ ಪ್ರಪಂಚದವರನ್ನೇ ಅಂಜಿಸುವ ಜರ್ಮನಿಯಯ ಶಸ್ತ್ರಕಲೆಯ ಬಗೆಯನ್ನೇ ಆಶ್ಚರ್ಯಗೊಳಿಸಿತು ಜರ್ಮನಿಯ ಇಂಜಿನೀಯರುಗಳ ಸಾಮರ್ಥ್ಯವು ಅನೇಕ ರಾಷ್ಟ್ರಗಳ ಉದ್ಯೋಗಗಳನ್ನು ಮೂಲೆಗೊತ್ತಿತು ಈ ಪ್ರಕಾರ ಜರ್ಮನಿಯು ಕೇವಲ 20 ವರ್ಷಗಳ ಹಿಂದೆ ಪ್ರಪಂಚದ ಶ್ರೇಷ್ಠ ರಾಷ್ಟ್ರಗಳಲ್ಲಿ ಶ್ರೇಷ್ಠವಾಗಿ ಮೆರೆಯುತ್ತಿದ್ದಿತು ಇಂಥಾ ಜರ್ಮನಿಗೆ ದುರವಸ್ಥೆ ಯೇಕೆ ಬಂದಿತೆಂಬುದನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ

ಈಗ ಜರ್ಮನಿಯು ಭಯಂಕರವಾದ ವಿಪತ್ತಿಗೊಳಗಾಗಿದೆ ರಾಷ್ಟ್ರದ ಅಂತರಂಗದ ಅಶಾಂತಿಯೂ ಅನಿವಾರ್ಯವಾಗಿದೆ ಒಬ್ಬರಿಂದೊಬ್ಬರಿಗೆ ಕಲಹ ಮತ್ತು ವ್ಯತ್ಯಾಸಗಳು ಅಲ್ಲಿನ ದುರವಸ್ಥೆಯ ಮುಖ್ಯ ಕಾರಣಗಳಾಗಿವೆ ಹಿಟ್ಲರ್ ಮತ್ತು ಅವರವರು ಜರ್ಮನಿಯ ಸಾಲಗಾರರಿಂದ ಸಾಲದ ಕಂತು ಕೊಡಲು ಆಗುವುದಿಲ್ಲವೆಂದು ೭ ೩ ತಿಂಗಳುಗಳ ಹಿಂದೆಯೇ ಪ್ರಕಟಿಸಿದ್ದಾರೆ ಜಗತ್ತಿನಲ್ಲಿ ಅತ್ಯಂತ ಧನಿಕರಾದ ಈ ಜರ್ಮನಿಯ ದಿವಾಳಿಯಾಯಿತೇಕೆ

ಈಗ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಸಾಂಪತ್ತಿಕ ವಿಪತ್ತಿನಿಂದ ಬಂದ ಬೆಂದಾಗುತ್ತಲಿವೆ ಹಿಂದೆ ಸ್ಟಾಕನ್ನು ಈ ಹಣದಿಂದ ಗೋಳಿಗೆ ಒಳಗಾಗಿ ಮೇಲೆ ಏಳುತ್ತಲಿದೆಯೆಂದು ಹತ್ತಿಯ ಬೆಲೆಯು ಮಣಕ್ಕೆ 1 ರೂ ಆಗಿ ಹತ್ತಿ ! ಇನ್ನೇನು ಗತಿ ಎಂದು ಒಕ್ಕಲಿಗರೂ ವ್ಯಾಪಾರಿಗಳೂ ಬಾಯಿ ಬಿಡುತ್ತಿದ್ದಾರಲ್ಲವೆ ? ಹತ್ತಿಯನ್ನು ಕೊಂಡು ಜನರ ಹಣವನ್ನು ಸುಲಿಯುತ್ತಿದ್ದ ಪಾಶ್ಚಾತ್ಯ ರಾಷ್ಟ್ರಗಳ ಗತಿಯೇನಾಗಿದೆಯೆಂಬುದು ಈ ಜನ ತಮ್ಮ ದೇಶಬಾಂಧವರಿಗೇಕೆ ಗೊತ್ತು ? ಗಾಂಧಿಯು ನಮಗೆ ಈ ಗತಿಯನ್ನು ತಂದಿಟ್ಟನಪ್ಪಾ ಎಂದು ಗಾಂಧಿಯ ಹೆಸರಿನಿಂದ ಹಣ ಕಟ್ಟಿಕೊಳ್ಳುತ್ತಿದ್ದಾರೆ

ಈ ನಮ್ಮ ದಡ್ಡರು ಜರ್ಮನಿಗೆ ದುರವಸ್ಥೆಯೇಕೆಂಬುದನ್ನು ಯೋಚಿಸಿರುವರೇನು ಪಾಪ ನಮ್ಮ ಊರಿನ ಸ್ಥಿತಿಯನ್ನು ಕೂಡಾ ತಿಳಿಯದಾದ ಈ ನಮ್ಮ ದಡ್ಡರು ಜರ್ಮನಿಯ ಸ್ಥಿತಿಯನ್ನು ಅರಿತುಕೊಳ್ಳುವುದು ಶಕ್ಯವೆ

ಜರ್ಮನಿಯು 15 ವರ್ಷಗಳ ಹಿಂದೆ ಘನಘೋರ ಯುದ್ಧವನ್ನು ಪ್ರಾರಂಭಿಸಿ ಯೂರೋಪುಖಂಡದಲ್ಲಿ 4 ವರ್ಷ ರಕ್ತದ ಕಾಲುವೆಯನ್ನು ಹರಿಸಿತಷ್ಟೆ ಆ ದುರಾಚಾರದ ಫಲವನ್ನೇ ಆ ರಾಷ್ಟ್ರವು ಅದರ ಸೇರಿದ ಪ್ರಪಂಚದ ಬಹುರಾಷ್ಟ್ರಗಳೂ ಈಗ ಅನುಭವಿಸುತ್ತಲಿವೆ

ಆ ಮಹಾಯುದ್ಧದಲ್ಲಿ ಜರ್ಮನಿಯು ಗೆದ್ದಿದ್ದರೆ ಅದು ಈಗ ಪ್ರಪಂಚವನ್ನೇ ತನ್ನ ಕೈಯಲ್ಲಿಟ್ಟುಕೊಳ್ಳುತ್ತಿದ್ದಿತು ಅದು ಆಗ ಸೋತುದರಿಂದ ಆಗ ಪ್ರಪಂಚದಿಂದಲೇ ತೆರಿಸಿಕೊಳ್ಳುವ ಹೊತ್ತು ಬಂದಿತು ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸಲೇ ಬೇಕಲ್ಲವೆ ?

ಪ್ರಪಂಚದ ಧನ ಪ್ರಾಣಗಳನ್ನು ಭಯಂಕರವಾಗಿ ಆ ರಾಜರೆ ಆಹುತಿ ಕೊಟ್ಟಿದುದರಿಂದ ಈಗ ಪ್ರಪಂಚಕ್ಕೆ ಬಲ ಬೇಕಾಯಿತು. ಜರ್ಮನಿಯು ಸೋತ ಇಂಗ್ಲಿಷ್, ಫ್ರಾನ್ಸ್, ಮೊದಲಾದ ಮಿತ್ರರಾಷ್ಟ್ರಗಳ ಹೇಳಿಕೆಯಂತೆ ಕೇಳಬೇಕಾಯಿತು ಪರಿಣಾಮ ಎಂಬಲ್ಲಿಯ ಒಪ್ಪಂದವೇ ಜರ್ಮನಿಯನ್ನು ಇಷ್ಟು ಹಪ್ಪು ಮಾಡಿತು

ಮಹಾಯುದ್ಧದಿಂದಾದ ನಷ್ಟವನ್ನು ನಾಶವನ್ನು ಜರ್ಮನಿಯು ಮಿತ್ರ ರಾಷ್ಟ್ರಗಳಿಗೆ ಕೊಡಬೇಕಾಯಿತು ಕಳೆದ 15 ವರ್ಷಗಳಿಂದ ಜರ್ಮನಿಯನ್ನು ಹಿಂಡಿ ಹಿಪ್ಪೆಮಾಡಿದರು ಆ ಒಪ್ಪಂದದ ಪ್ರಕಾರ ಹಣ ಬಾಕಿದಂತಾಯಿತು ಜರ್ಮನಿಯು ಕೆಟ್ಟದಿಂದ ಈಗ ನಾಲ್ಕು ಭಾಗದ

ಸಂಸ್ಕೃತ ವಿದ್ಯಾಪ್ರೋತ್ಸಾಹ

ವೀರಶೈವ ಸಮಾಜದಲ್ಲಿಗೆ ಲೌಕಿಕ ವಿದ್ಯಾಭಿವೃದ್ಧಿಯು ಎಷ್ಟು ಆವಶ್ಯಕವೋ ಧಾರ್ಮಿಕ ವಿದ್ಯಾಭಿವೃದ್ಧಿಯೂ ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಆವಶ್ಯಕವಾಗಿದೆ. ವೀರಶೈವ ಮತತತ್ವಗಳನ್ನು ತಿಳಿದು ಪಡಿಸಿ ಅದರ ಶ್ರೇಷ್ಠತೆಯನ್ನು ಪ್ರಚಾರಪಡಿಸಲು ಸಂಸ್ಕೃತ ವಿದ್ಯೆಯು ಅತ್ಯಗತ್ಯವಾಗಿದೆ. ಈ ಉದ್ದೇಶದಿಂದಲೇ ಈಚೆಗೆ ಅನೇಕ ಸಂಸ್ಕೃತ ಪಾಠಶಾಲೆಗಳೂ ಕಾಲೇಜುಗಳೂ ಸ್ಥಾಪಿಸಲ್ಪಟ್ಟಿವೆ. ಈ ಪೈಕಿ ತುಮಕೂರು ತಾ॥ ಶ್ರೀ ಎಡೆಯೂರು ಗಂಗಾ ಮಹಾಕ್ಷೇತ್ರದ ಶಾಲೆಯು ಒಂದಾಗಿದೆ. ಇದರ ಪುರೋಭಿವೃದ್ಧಿಗಾಗಿ ಅನೇಕ ಮಹನೀಯರು ಶಕ್ತ್ಯನುಸಾರ ಸಹಾಯ ಮಾಡಿ ಕೀರ್ತಿಭಾಗಿಗಳಾಗಿರುತ್ತಾರೆ. ಈಚೆಗೆ ಬೆಂಗಳೂರು ಸಿಟಿ ಬಳೇಪೇಟೆ ವಾಸಿ ಗುರುಸಿದ್ಧಪ್ಪನವರ ಕುಮಾರ ಸಿದ್ಧಬಸಪ್ಪನವರೂ ಇವರ ಮಕ್ಕಳು ಗಂಗಪ್ಪ ಉರುಫ್ ಶಿವಣ್ಣ ಮತ್ತು ರೇವಣ್ಣ ಇವರುಗಳೂ ೬೦೦ ರೂ ಗಳನ್ನು ಮತ್ತು ರಾಯಚೋತಿನಲ್ಲಿರುವ ಅತ್ತಿಕೊಳ್ಳ ಶಿವಪ್ಪಗೌಡರು ೬೦೦ ರೂ ಗಳನ್ನು ದಾನಮಾಡುವುದರ ಮೂಲಕ ಧಾರ್ಮಿಕ ವಿದ್ಯೆಯಲ್ಲಿ ತಮಗಿರುವ ಅಭಿಮಾನವನ್ನು ವ್ಯಕ್ತಗೊಳಿಸಿರುತ್ತಾರೆ. ಇವರುಗಳಿಗೆ ಶ್ರೀಸಿದ್ಧಲಿಂಗೇಶ್ವರಸ್ವಾಮಿಯು ಸದಾ ಸ್ಥಿರತರಾಯುರಾರೋಗ್ಯೈಶ್ವರ್ಯಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ — ಸಂಸ್ಕೃತ ವಿದ್ಯಾರ್ಥಿ

ಶ್ರೀ ಬಸವರಾಜ ನಾಟಕಶಾಲೆಯವರಿಗೆ ಧನಸಹಾಯ

ಹಲಗೇರಿ ಶ್ರೀ ಕಾಲಭೈರವೇಶ್ವರ ಕಂಪನಿಯವರು ಒಡತನದಲ್ಲಿ ಇರುವ ನಾಟಕವನ್ನು ಸ್ವತಂತ್ರವನ್ನಾಗಿ ಮಾಡುವ ರಾಷ್ಟ್ರೀಯ ಪ್ರಯತ್ನಗಳಲ್ಲಿ ಇವರೆಲ್ಲರೂ ಮಾತೃಭಾಷೆಯಾದ ಕನ್ನಡ ಭಾಷೆಯಲ್ಲಿ ನಾಟಕರೂಪದಿಂದ ಮಾಡುವ ಸೇವೆಯನ್ನು ಶ್ರೀ ಮತ್ತು ಬಿ.ಎ. ಎಂ. ಪ್ರಯೋಗಗಳನ್ನು ನೋಡಿದರೆ ಪುರುಷರನ್ನು (ಪಾತ್ರಗಳನ್ನು) ಸನ್ಮಾರ್ಗಗಾಮಿಗಳನ್ನಾಗಿ ಮಾಡುವ ಎಷ್ಟೋ ರೀತಿಯ ಸ್ತ್ರೀಯರ (ನಾಯಕಿಯರ) ಮೇಲೆ ಎಷ್ಟು ಇರುವುದೆಂಬುದು ಅತಿ ಕೋವಿದರಾದ ಈ ಕಂಪೆನಿಯವರು ಎಷ್ಟು ಮುಖ್ಯವಾಗಿನಲ್ಲಿ ೫೦ ನಾಟಕಗಳನ್ನು ಗದಗ ಪಟ್ಟಣದ ಪೇಟೆಯ ಸಹಾಯದಿಂದ ನಡೆಯುವ ಧರ್ಮಾರ್ಥ ವಾಚನಾಲಯ ಪ್ರಿಂಟಿಂಗ್ ಪ್ರೆಸ್ ಇತ್ಯಾದಿಗಳಿಗೆ ಕೊಟ್ಟಿರುವುದು ಇವರ ಉದಾರಬುದ್ಧಿಯನ್ನು ವ್ಯಕ್ತಗೊಳಿಸುತ್ತದೆ. ಇವರು ಮೊನ್ನೆ ನಮ್ಮ ಈ ಊರ ಮುಖ್ಯಾಧಿಸಲ್ಲಿ ನಡೆದ ನಾಟಕಶಾಲೆಯಲ್ಲಿ ಶ್ರೀ ಬಸವ ನಾಟಕದ ಉತ್ಪನ್ನದ ಅರ್ಧಭಾಗವನ್ನು ಕೊಟ್ಟು ಪ್ರೋತ್ಸಾಹಿಸಿದ ಬಗ್ಗೆ ಇವರಿಗೆ ಅತಿ ಬಹು ಋಣಿಯಾಗಿರುತ್ತೇವೆ. ಇಂಥಾ ನಿಸ್ವಾರ್ಥ ಮತ್ತು ದೇಶಭಾಷಾಸೇವೆಗೈವ ಕಂಪೆನಿಯವರಿಗೆ ರಾಜ್ಯದ ಮುಖಂಡರೂ ನಮ್ಮ ನಾಡಿನ ಮಹಾಜನರೂ ಬಹುಮಾನ ಪದಕಗಳನ್ನು ನೀಡಿ ಇಲ್ಲಿ ಸಹಾಯವನ್ನು ಕೊಟ್ಟು ಪ್ರೋತ್ಸಾಹಿಸುವರೆಂದು ಶ್ರೀ ಬಸವಣ್ಣನವರನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. — ಕರಿಯಪ್ಪ ಕರಬಸಪ್ಪ, ಮುಧೋಳ, ಗದಗ ಜಿಲ್ಲಾ

ಗುರುಮಠಕಲ್ಲು ಶ್ರೀಗಳ ಆಗಮನ ನಿರೀಕ್ಷಣೆ

ಸೈಜಾಂ ಇಲಾಖಾ ಗುರುಮಠಕಲ್ಲು ಶ್ರೀಮನ್ನಿರಂಜನ ಪ್ರಾಭವೀರನಾಥ ಗಳವರು ಕಳೆದ ಮಾಘಮಾಸದಲ್ಲಿ ಧಾರವಾಡದಲ್ಲಿ ನಡೆದ ೮೩ ಪುರಾಣದ ಪೂಜೆಯ ಕಾಲಕ್ಕೆ ನಮ್ಮ ಸ್ವಾಗತಕ್ಕೆ ದಯಮಾಡಿಸಿ ಕಳೆದ ೩ ತಿಂಗಳಿಂದಲೂ ಈ ಪ್ರಾಂತದ ನಾನಾ ಕಡೆಗಳಲ್ಲಿ ಸಂಚರಿಸಿ ಸಮಾಜದ ನಾನಾ ಮಹತ್ವದ ಕಾರ್ಯಗಳನ್ನು ಜರುಗಿಸುತ್ತಲಿರುವರು. ಮೊದಲು ಈ ಸ್ವಾಮಿಗಳು ಧಾರವಾಡದ ಲಿಂಗಾಯತ ಬೋರ್ಡಿಂಗಿನಲ್ಲಿ ನೆರೆದ ಪ್ರಮುಖ ಜನರ ಸಭೆಯಲ್ಲಿ ಸ್ವಲ್ಪಕಾಲ ಭಾಷಣಮಾಡಿ ನವೀನರನ್ನು ಚಕಿತರನ್ನಾಗಿ ಮಾಡಿದರು. ಅಲ್ಲಿಂದ ಶ್ರೀಗಳು ಹೋದ ಕಡೆಗಳಲ್ಲಿ ಇವರ ವ್ಯಾಖ್ಯಾನ ಕೇಳಲು ಜನರು ಉತ್ಸುಕರಾಗಿ ಶ್ರೀಗಳ ಸೇವೆಗೆ ಸಹಾಯವಾಗುತ್ತಿರುವರು. ಆದುದರಿಂದ ಶ್ರೀಗಳ ನಿರಭಿಮಾನ ಸ್ವಾಭಿಮಾನ ಸಮಾಜ ಕಳಕಳಿ ಈ ಸದ್ಗುಣಗಳು ಇವರಲ್ಲಿ ಎಲ್ಲರಿಗೂ ಒಡೆದು ಕಾಣುತ್ತಿವೆ. ಇವರು ಆವಿ ಶಾಲೆಗಳಿಗೆ ದಯಮಾಡಿಸಿ ದೇವಸ್ಥಾನದಲ್ಲಿ ಪೂಜಾದಿ ಕಾರ್ಯಗಳು ಕ್ರಮವಾಗಿ ನಡೆಯುವಂತೆಯೂ ಯಾತ್ರಿಕರ ಅನುಕೂಲಕ್ಕಾಗಿ ೭ ೮ ಕೋಣೆಗಳನ್ನು ಭಕ್ತರ ಸಹಾಯದಿಂದ ಏರ್ಪಡಿಸಿಯೂ ಯಾತ್ರಿಕರ ಅನೇಕ ತೊಂದರೆಗಳನ್ನು ನಿವಾರಿಸಿ ಒಂದು ಆದರ್ಶಕ್ಷೇತ್ರವನ್ನಾಗಿ ಮಾಡಿ ಕೀರ್ತಿಪಾತ್ರರಾಗಿರುವರು.

ಸ್ವೀಕಾರ

ಶ್ರೀ ವೀರಶೈವ ವಿವಾಹಾಭಿನಂದನಾರ್ಥವಾಗಿ ಈ ಕೆಳಗೆ ಕಂಡ ವಿವಾಹ ಮಹೋತ್ಸವಗಳಲ್ಲಿ ಇತರ ಸಂಸ್ಥೆಗಳಿಗೂ ತೆಗೆದು ಕಳುಹಿಸಿದ ಹಣವನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.—ಸಂ

(೧) ಬೆಂಗಳೂರು ಸಿಟಿ ಕೋಟೆಯಲ್ಲಿರುವ ವೀರಣ್ಣನವರ ಪುತ್ರಿ ಜಯಮ್ಮನವರೊಂದಿಗೆ ಮೈಸೂರು ಆಕ್ಸ್‌ಫರ್ಡ್ ಪ್ರೆಸ್ಸಿನ ಲಿಂಗಣ್ಣನವರ ವಿವಾಹಮಹೋತ್ಸವದಲ್ಲಿ ರೂ ೧ (೨) ಬೆಂಗಳೂರು ಸಿಟಿ ಗಂಗಪ್ಪನವರ ಪುತ್ರಿ ರಾಜಮ್ಮನವರೊಂದಿಗೆ ವಿವಾಹಮಹೋತ್ಸವದಲ್ಲಿ ರೂ ೧ (೩) ಬೆಂಗಳೂರು ಸಿಟಿ ಬಳೇಪೇಟೆಯಲ್ಲಿರುವ ನಾಗಪ್ಪನವರ ಜ್ಯೇಷ್ಠಪುತ್ರಿ ವಿವಾಹಮಹೋತ್ಸವದಲ್ಲಿ ರೂ ೨ (೪) ಗೊಲ್ಲಹಳ್ಳಿ ರುದ್ರಪ್ಪನವರ ವಿವಾಹಮಹೋತ್ಸವದಲ್ಲಿ ರೂ ೧ ಒಟ್ಟು ೫ ರೂ.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಓದುಗರು ತಿಳಿಯತಕ್ಕದ್ದು.—ಸಂಪಾದಕ

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ಪಕ್ಷಪಾತರಹಿತವಾಗಿಯೂ ಸಾರ್ವಜನಿಕವಾಗಿಯೂ ಸಂಕ್ಷಿಪ್ತವಾಗಿಯೂ ಸ್ಪಷ್ಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ ಇರಬೇಕೆಂದೂ ಬುಧವಾರದೊಳಗೆ ನಮ್ಮ ಕೈಸೇರುವಂತೆ ಕಳುಹಿಸಬೇಕೆಂದು ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಮುಂದೆ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷ್ಯಕೊಡದೆ ಉದ್ದವಾಗಿ ಬೇಕಾದವರನ್ನು ಧೂಷಿಸಿ ಬೇಡವಾದವರನ್ನು ದೂಷಿಸಿ ಅಸ್ಪಷ್ಟವಾಗಿ ಬರೆದು ನಮಗೆ ತ್ರಾಸವನ್ನು ಕೊಡುತ್ತಿರುವರೆಂದು ಬರೆಯಲು ವಿಷಾದವಾಗುತ್ತದೆ. ಆದುಕಾರಣ ಇನ್ನು ಮೇಲೆ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದ್ದು.—ಸಂ

ವೀರನಪುರಕ್ಕೆ ಗೌರವ ಬಂದಿತು

ಗುಂಡ್ಲುಪೇಟೆ ತಾ॥ ಗೊಲ್ಲಹಳ್ಳಿ ಪಟೇಲ್ ಮ॥ ಚಿಕ್ಕಮಲ್ಲಪ್ಪನವರ ಅಳಿಯಂದಿರು ವೀರನಪುರದ ಪಟೇಲ್ ಮ॥ ಭುಟ್ಟಪ್ಪನವರ ಮಗ ಮ॥ ವಿ. ಪಿ. ನಾಗಮಲ್ಲಪ್ಪನವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದು ಈ ಸಲ ನಡೆದ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಈ ತಾಲ್ಲೂಕಿನ ವೀರಶೈವರಲ್ಲಿ ಇಷ್ಟರಮಟ್ಟಿಗೆ ಕಷ್ಟಪಟ್ಟು ಓದಿ ಈ ಪರೀಕ್ಷೆಯನ್ನು ಈ ವರೆಗೆ ಯಾರೂ ಮಾಡಿರಲಿಲ್ಲ. ಈ ಮ॥ ವಿ. ಪಿ. ನಾಗಮಲ್ಲಪ್ಪನವರು ಇನ್ನೂ ಬಹಳ ಚಿಕ್ಕವಯಸ್ಸಿನವರಾದುದರಿಂದ ಬಿ.ಎ. ಮೊದಲಾದ ದೊಡ್ಡ ಪರೀಕ್ಷೆಗಳಿಗೆ ಓದಿ ಪ್ಯಾಸುಮಾಡಿ ತಾವು ಅಭಿವೃದ್ಧಿಗೆ ಬರ ಬಿಡದ್ದೆ ತಮ್ಮ ಕುಟುಂಬಕ್ಕೂ ನಮ್ಮ ತಾಲ್ಲೂಕಿಗೂ ಗೌರವವನ್ನು ತರುವರೆಂದು ಆಶಿಸುವ — ವಿದ್ಯಾಭಿಮಾನಿ

ನಾಯಕರ ಸಂಘ, ಚಿತ್ರದುರ್ಗ

ಗುಬ್ಬಿ ಶ್ರೀ ಚನ್ನಬಸವೇಶ್ವರ ಥಿಯೇಟ್ರಿಕಲ್ ಕಂಪೆನಿಯ ಪ್ರೊಪ್ರೈಟರ್ ಎಂ. ವೀರಣ್ಣನವರು ತಾ॥ ೬-೬-೩೧ ನೇ ಇಸವಿ ಚಿತ್ರದುರ್ಗದಲ್ಲಿ "ವೀರಸಿಂಧು" ಎಂಬ ನಾಟಕವನ್ನಭಿನಯಿಸಿ ಬಂದ ಉತ್ಪತ್ತಿಯಲ್ಲಿ ೨೧೧ ರೂ ಗಳನ್ನು ಚಿತ್ರದುರ್ಗದ ನಾಯಕರ ಸಂಘದ ವಿದ್ಯಾರ್ಥಿನಿಲಯದ ಸಹಾಯಕ್ಕಾಗಿ ದಯಪಾಲಿಸಿದರು. ರಂಗಭೂಮಿಯು ಧನಾರ್ಜನೆಗೆ ಮಾತ್ರವಲ್ಲದೆ ಜಾತೀಯ ಏಳ್ಗೆಗೂ ...

ಬ್ರಾಹ್ಮಣರು ಅಪದ್ವರ್ಮವಾಗಿ ಉಳಬಹುದು

ಇಂದಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣ ಜನಸಮಾಜದ ವಿಚಾರದಲ್ಲಿ ಆಪತ್ಕಾಲದಲ್ಲಿ ಉಳುವ ವಿಷಯದ ಕುರಿತು ಸ್ಮೃತಿಕಾರರ ಅಭಿಪ್ರಾಯವನ್ನು ಕೆಳಗೆ ವಿವರಿಸುತ್ತೇನೆ.

"ಕಲೌ ಪಾರಾಶರಾಃ ಸ್ಮೃತಾಃ" (ಕಲಿಯುಗದಲ್ಲಿ ಪರಾಶರ ಸ್ಮೃತಿಯಲ್ಲಿ ಹೇಳಿದ ಧರ್ಮಗಳು) ಎಂಬುದಾಗಿ ಹೇಳಿರುವ ಪರಾಶರ ಸ್ಮೃತಿಯಲ್ಲಿ—

ಷಟ್ಕರ್ಮಸಹಿತೋ ವಿಪ್ರಃ ಕೃಷಿಕರ್ಮ ಚ ಕಾರಯೇತ್ ॥

(ಆಚಾರಕಾಂಡ ಅಧ್ಯಾಯ ೨ ಶ್ಲೋಕ ೨)

(ಬ್ರಾಹ್ಮಣನು ಷಟ್ಕರ್ಮನಿರತನಾಗಿ ಕೃಷಿಯನ್ನು ಮಾಡಿಸತಕ್ಕದ್ದು) ಈ ವಚನದ ವ್ಯಾಖ್ಯಾನದಲ್ಲಿ ಮಾಧವಾಚಾರ್ಯರು "ಕೃಷಿಕರ್ಮವನ್ನು ಮಾಡಿಸುವುದು ಬ್ರಾಹ್ಮಣರ ಮುಖ್ಯ ಧರ್ಮ" ಎಂಬುದಾಗಿಯೂ ಅಂತೆಯೇ—

ಕುರ್ಯಾದ್ಕೃಷಿವಾಣಿಜ್ಯಂ ಪ್ರಕುರ್ವೀತಾಪ್ಯಯಂ ಕೃತಂ

ಆಪತ್ಕಾಲೇ ಸ್ವಯಂ ಕುರ್ವನ್ನೈನಸಾ ಯುಜ್ಯತೇ ದ್ವಿಜಃ

ಎಂಬ ಬೃಹಸ್ಪತಿಯ ವಚನದ ಮೇಲಿಂದ "ಬ್ರಾಹ್ಮಣರು ನೇಗಿಲಿನಿಂದ ಉಳುವುದು ಅಪದ್ಧರ್ಮ" ಎಂದೂ ವ್ಯವಸ್ಥೆ ಮಾಡಿರುತ್ತಾರೆ. ಇದಕ್ಕನುಕೂಲವಾಗಿ ಮುಂದೆ ಮೂಲ ಪರಾಶರ ಸ್ಮೃತಿಯಲ್ಲಿಯೂ ಕ್ಷುಧಿತಂ ತೃಷಿತಂ ಶ್ರಾಂತಂ ಬಲೀವರ್ದಂ ನ ಯೋಜಯೇತ್ । ಹೀನಾಂಗಂ ವ್ಯಾಧಿತಂ ಕ್ಲೀಬಂ ವೃಷಂ ವಿಪ್ರೋ ನ ವಾಹಯೇತ್ ॥ ಸ್ಥಿರಾಂಗಂ ನೀರುಜಂ ತೃಪ್ತಂ ಸುನರ್ದಂ ಷಂಢವರ್ಜಿತಂ ವಾಹಯೇದ್ದಿವಸಸ್ಯಾರ್ಧಂ ಪಶ್ಚಾತ್ಸ್ನಾನಂ ಸಮಾಚರೇತ್ ॥ (ಆಚಾರಕಾಂಡ ೧) (ವಿಪ್ರನು ಹಸಿದ ಬಾಯಾರಿದ ಮುಂತಾದ ದೋಷಯುಕ್ತ ವಿಶೇಷಣವುಳ್ಳ ಎತ್ತನ್ನು ನೇಗಿಲಿಗೆ ಕಟ್ಟದೆ ನೈಯಲ್ಲಿ ಸಶಕ್ತವಾದ ಮೊದಲಾದ ಗುಣಯುಕ್ತ ವಿಶೇಷಣವುಳ್ಳ ಒಳ್ಳೇ ಎತ್ತಿನಿಂದಲೇ ದಿವಸದಲ್ಲಿ ಒಪ್ಪತ್ತು ಹೂಡಿಸಿ ಬಳಿಕ ಸ್ನಾನಮಾಡಬೇಕು) ಎಂಬದಾಗಿ ಬ್ರಾಹ್ಮಣರು ಸ್ವತಃ ಉಳುವ ವಿಧಾನವನ್ನು ಹೇಳಿದುದಲ್ಲದೆ ಮುಂದೆ ಅದೇ ಪರಾಶರ ಸ್ಮೃತಿಯಲ್ಲಿ—

"ಸ್ವಯಂ ಕೃಷ್ಟೇ ತಥಾ ಕ್ಷೇತ್ರೇ ಧಾನ್ಯೈಶ್ಚ ಸ್ವಯಮಾರ್ಜಿತೈಃ ನಿರ್ವಪೇತ್ ಪಂಚಯಜ್ಞಾಂಶ್ಚ ಕ್ರತುದೀಕ್ಷಾಂ ಚ ಕಾರಯೇತ್" (ತಾನು ಸ್ವತಃ ಉತ್ತ ಗದ್ದೆಯಲ್ಲಿ ಹುಟ್ಟಿದ ತನ್ನ ಸ್ವಂತ ದುಡಿತದಿಂದ ಸಂಗ್ರಹಿಸಿದ ಕಾಳುಗಳಿಂದ ಪಂಚಯಜ್ಞಾದಿಗಳನ್ನು ಮಾಡಬೇಕು) ಎಂದು ಮೊದಲಾಗಿ ಹೇಳಿದುದರ ಮೇಲಿಂದ "ಆಪತ್ಕಾಲದಲ್ಲಿ ಬ್ರಾಹ್ಮಣರು ನೇಗಿಲಿನಿಂದ ಉಳಬಹುದು" ಎಂಬದಾಗಿ ಪರಾಶರ ಮಾಧವರ ಆಶಯವೆಂದು ಸ್ಪಷ್ಟ ತೋರದಿರಲಾರದು.

ಇನ್ನು ದುಷ್ಕಾಲದಲ್ಲಿ ನ್ಯಾಯವಾದ ಮಾರ್ಗದಿಂದ ಜೀವನವನ್ನು ನಡೆಸುವವರಿಗೆ ಅನುಕೂಲವಾಗಿ ಮೀಯ ಪ್ರಸ್ತಾವನೆಗಾಗಿ "ಕೃಷಿಯನ್ನು ಮಾಡಬಾರದೆಂದು" ಹೇಳಿ ಅಧರ್ಮವಾದ ವೆಂದೂಹಿಸಬಹುದಾದ ಕೃಷಿನಿಂದೆಯನ್ನು ಮಾಡಿದ್ದೂ ದೊರಕಬಹುದು.

ಆದರೆ "ಯಥಾ ಮೃತಾಭ್ಯಾಂ ಜೀವೇತು ಮೃತೇನ ಪ್ರಮೃತೇನವಾ ಸತ್ಯಾನೃತಾಭ್ಯಾಮಪಿ ವಾ ನ ಶ್ವವೃತ್ತ್ಯಾ ಕದಾಚನ" (ಮನು ಅ ೪) (ಕೃಷಿಯಿಂದಾದರೂ ಜೀವಿಸಬಹುದು ಸೇವಾವೃತ್ತಿಯಿಂದ ಎಂದೂ ಜೀವಿಸಬಾರದು) ಎಂದು ನಿಷೇಧಿಸಿರುವ ಸ್ವತಂತ್ರಯಂತಿರುವ ಹಿಂದುಗಳಲ್ಲದವರಿಗೂ ಮಣಿಯಬೇಕಾಗುವಂಥ ನೌಕರಿಗಾಗಿ ಬಾಯಿಬಿಡುವುದಕ್ಕಿಂತ ಸ್ವತಂತ್ರವಾದ ಕೃಷಿಯನ್ನು ಕೈಕೊಳ್ಳುವುದೇ ಲೇಸು.

ಇಂಥ ವಿಷಯಗಳಲ್ಲಿ ಮಠಾಧೀಶರು ರಾಯರ ಅಪ್ಪಣೆಯನ್ನು ಕೊಡುವುದು ಕಷ್ಟಸಾಧ್ಯ. ಉದಾಹರಣೆಗಾಗಿ ಶಾರದಾ ಕಾನೂನಿನಂತೆ ೧೪ ವರ್ಷ ಕಳೆದ ಹುಡುಗಿಗೇನೆ ಮದುವೆಮಾಡಬೇಕಾಗಿದ್ದರೂ ಈ ಕುರಿತು ಯಾವ ದೇಶದ ಮಠಾಧೀಶರಾದರೂ ಪ್ರೌಢವಿವಾಹವನ್ನು ಮಾಡಬಹುದೆಂದು ಸರ್ಕಾಲರನ್ನು ಹೊರಡಿಸಿರುವರೇ?

ಇದೊಂದು ವಿಷಯದಲ್ಲಿ ನ್ಯಾಯವೆಂದೂ ಹೇಳಬಹುದು. ಹಿಂದೆ ಆಪತ್ಕಾಲದಲ್ಲಿ ವಿಶ್ವಾಮಿತ್ರನು ವ ಚಾಂಡಾಲನ ಮೊದಲಾದವರು ನಿಷಿದ್ಧ ಭಕ್ಷ್ಯ...

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣಾ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತೆಕ್ಕೊಂಡರೆ ಫುತ್ರಿಣಿ ಆವಿಗುರಿ ೯ ಗುಳಿಗೆಗಳ ಕಿ. ೩ ರೂಪಾಯಿ. ಟ ಪಿ. ೫ ಆಣೆ

ಪತ— ...ಪಿ. ಎಸ್. ಕಾಪಸೆ ಮಿರಜ

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಕೆಸ್ತೂರು ಮುಖ್ಯ [illegible]

ಇಲ್ಲಿಯ ಗೌರ್ನ್ಮೆಂಟ್ ಮಿಡಲ್ ಸ್ಕೂಲ್ ಹೈ ಮಾ॥ ವೆ॥ ನರಸಿಂಹ ಜೋಯಿಸರವರ ಮಹೋತ್ಸಾಹದಿಂದ ಪಾಠಶಾಲೆಯ ಬಾಲಕರು ಜೂನ್ ತಿಂಗಳಲ್ಲಿ ವೃಕ್ಷಗಳ ಕೆಳಗೆ ಸಮ್ಮೇಳನದ ಮಹೋತ್ಸವವನ್ನು ನಡೆಸಿದರು. ಸಭಾಮಂಟಪವನ್ನು ತಳಿರುತೋರಣಗಳಿಂದಲೂ ಚಿತ್ರಪಟಗಳಿಂದಲೂ ಶೃಂಗರಿಸಿ ಮಹಾರಾಜರವರ ಭಾವಚಿತ್ರವನ್ನಿರಿಸಿದ್ದರು. ಆ ದಿನ ಕನ್ನಡ ಶಾಲೆಯ ಬಾಲಕರು ಕೆಲವರು ಆನಂದಗೀತೆಗಳನ್ನು ಹಾಡಿದರು. ಹಿರಿಯರು ನಾನಾ ವಿಧವಾದ ಪಾಠಗಳನ್ನೂ ನೀತಿಗಳನ್ನೂ ಕಥಾಸಮಾಚಾರಗಳನ್ನೂ ಹೇಳಿದರು. ಹೆಡ್ ಮಾಸ್ಟರ್ ಮ॥ ರಾ॥ ರವರು ಆ ದಿನ ಈ ಸಮಾರಂಭಕ್ಕೆ ಅಧ್ಯಕ್ಷಪದವಿಯನ್ನು ವಹಿಸಿದ್ದ ಮ॥ ಕುರೇನಹಳ್ಳಿ ರಾ॥ ಸೀಬಣ್ಣನವರ ಮುಖೇನ ಅನೇಕ ಬಹುಮಾನಗಳನ್ನೂ ಮೆಡಲ್‌ಗಳನ್ನೂ ದಯಪಾಲಿಸಲು ಅವಕಾಶವನ್ನು ಕಲ್ಪಿಸಿದ್ದರು. ಬಹುಮಾನ ವಿನಿಯೋಗಾನಂತರ ಕೆಸ್ತೂರು ಶ್ರೀ ಧನಲಕ್ಷ್ಮೀ ಕೋ-ಆಪರೇಟಿವ್ ಸೊಸೈಟಿ ಪ್ರೆಸಿಡೆಂಟರಾದ ಮ॥ ಟಿ. ಜಿ. ರಾಜಶೇಖರಯ್ಯನವರು ಸ್ವಾರಸ್ಯವಾದ ಉಪನ್ಯಾಸಮಾಡಿದರು. ಇಂತಹ ಸಂತೋಷ ಸಮಾರಂಭವನ್ನು ಗ್ರಾಮದವರೊಡನೆ ಸಹೃದಯರೂ ಇಲ್ಲದೆ ಸರ್ವರೂ ಸಹ ಸಹಕರಿಸಿದವನ್ನು ಹೈ ಮಾ॥ ಮ॥ ವರದರಾಜ ಅಯ್ಯಂಗಾರರವರಿಗೂ ಉಪಾಧ್ಯಾಯರುಗಳಿಗೂ ತಮ್ಮ ಅಮೋಘವಾದ ಕಾರ್ಯಕಲಾಪಗಳನ್ನು ಮಾನಿಸಿದರು. ದೀರ್ಘಾಯುವನ್ನಿತ್ತು ಯುವರಾಜರ ದೊಡ್ಡ ಸಂಸ್ಥಾನಗಳಿಗೂ, ವಿದ್ಯಾರ್ಥಿಗಳಿಗೂ ದಯಾಘನನಾದ ಭಗವಂತನು ಚಿರಾಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲೆಂದೂ ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಇಂಥಾ ಜನ್ಮದಿನೋತ್ಸವಗಳನ್ನು ಅನಂತವಾಗಿ ನೋಡಿಸಬೇಕೆಂದೂ ದಯಾಘನನಾದ ಭಗವಂತನನ್ನು ತಮ್ಮೆಲ್ಲರೊಂದಿಗೆ ಪ್ರಾರ್ಥಿಸುತ್ತೇನೆಂದು ಹೇಳಿದರು. ತರುವಾಯ ಗಂಧಪುಷ್ಪ ಫಲತಾಂಬೂಲ ವಿನಿಯೋಗಾನಂತರ ಶ್ರೀಮನ್ಮಹಾರಾಜಸಾಹೇಬ್ ಬಹದ್ದೂರವರ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಅಪ್ಪ ವಭಾಗಿ

ಅಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ—ವೇ॥ ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ನಾಟಕ ಪಂಡಿತರು, ಟ್ರೇನಿಂಗ್ ಕಾಲೇಜು ಮೈಸೂರು)

ದಿಗ್ದರ್ಶನಂ.

(ಜೂನ್ ತಾ॥ ೨೦ರ ಸಂಚಿಕೆಯಿಂದ ಮುಂದುವರಿದುದು)

೪೪

ಶ್ರೀ ಚಾಮರಾಜಪ್ರಭುವು ಸ್ವಲ್ಪವೂ ವಿಳಂಬವಿಲ್ಲದೆ ಆಲೋಚಿಸುತ್ತ ಸುಪ್ರಸಿದ್ಧರಾದ ಜೋಯಿಸರನ್ನು ಕರೆದು ಅವರ ಮುಖವನ್ನು ನೋಡುತ್ತ ಇನ್ನು ಸ್ವಲ್ಪ ಹೊತ್ತಿನಲ್ಲೇ ನನ್ನ ಧರ್ಮಪತ್ನಿಯು ಪ್ರಸವಿಸುವ ಶಿಶುವು ಗಂಡಾಗಿರುವುದೋ ಹೆಣ್ಣಾಗಿರುವುದೋ ಎಂಬುದನ್ನು ಶಾಸ್ತ್ರರೀತ್ಯಾ ಗುಣಿಸಿ ಹೇಳಿದರೆ ನಿಮಗೆ ಉತ್ತಮವಾದ ಬಹುಮಾನಗಳನ್ನು ಕೊಡುವೆನೆಂಬುವಷ್ಟರಲ್ಲೇ ಉತ್ತಮವಾದ ಲಗ್ನದಲ್ಲಿ ಆ ಮನೋಹರರೂಪಿಣಿಯು ಪತಿಗೆ ಪ್ರೀತಿಪೂರ್ವಕವಾಗಿ ಪುತ್ರರತ್ನ ರೂಪವಾದ ಉತ್ತಮವಾದ ಬಹುಮಾನವನ್ನು ಕೊಟ್ಟಳು

ಪದ್ಯ—ಬಿಡುವೇನಿಲ್ಲದೆ ಚಿಂತಿಸುತ್ತಿರಲಾದೈವಜ್ಞರಂ ನೋಡುತಿಂ ದೊಡನಿನ್ನೀತನುಜಾತಮಾವರಫಲಂ ಗಂಡಪ್ಪುದೋ ಹೆಣ್ಣೊ ಪೇಳ್ ಕೊಡ ಮಾನ್ಯಂಗಳನೀವೆನೆಂಬನಿತರೊಳ್ ಸಲ್ಲಗ್ನದೊಳ್ ಕಾಂತೆತಾಂ । ಪಡೆದಿತ್ತಳ್ ಪತಿಗೊಲ್ದು ಪುತ್ರಬಹುಮಾನ ಪ್ರವ್ಯಮಂ ನವ್ಯಮಂ । ೪೪.

ನಿಯಾರಾಪ್ತ ಕಾಂ ಬಾಲವರ್ತಿಯಾದುದರತ್ತಣಿಂ, ನಿರ್ಬಂಧಿತ ನೃಪಾಂತಸ್ಥಿತಿಯನೆಂಬುದೆಯುಂ, ಸಮುಚಿತ್ತಂ, ನಿಜಪತಿರಾಜನಪ್ಪ ಚಾಮರಾಜನಂ ಜನಕರಾಜನಂಗೆಯ್ದು, ಕೃತಕೃತ್ಯೆಯಾಗಿದುಳ್,

ಮಹಾರಾಣಿಯಾದರೋ ಪುತ್ರವತಿಯಾದುದರ ಬೆಸೆಯಿಂದ, ಮನೆಯೊಳಗೆ ಇದ್ದುಕೊಂಡು (ಆರೋಗ್ಯರಕ್ಷಣೆಗೋಸ್ಕರ), ತಕ್ಕ ರೀತಿಯಿಂದ, ತನ್ನ ಪತಿಯೂ ರಾಜಶ್ರೇಷ್ಠನೂ ಜಗತ್ತಿಗೆ ಶ್ರೀ ಚಾಮರಾಜನನ್ನು ರಾಜರ್ಷಿಯಾದ (ಶ್ರೇಷ್ಠನಾದ ತಂದೆಯನ್ನಾಗಿ) ಜನಕರಾಜನನ್ನಾಗಿ ಮಾಡಿ, ಧನ್ಯಳಾಗಿದ್ದುಕೊಂಡು,

ಗದ್ಯ—ಪತಿಯೊಡನೆ ವಿಧ್ಯುಕ್ತಿರೀತಿಯಿಂ ನಿಜಕುಮಾರ ಕಂಠೀರವಂಗೆ “ಶ್ರೀ ಕೃಷ್ಣರಾಜ ಒಡೆಯರ್” ಎಂಬ ನಾಮಕರಣಮಂ ನೆರೆವೇರಿಸಿ, ಪರಮಾನಂದದೊಳ್ ಒಂದಿ, ಪ್ರಭುತ್ವೋಚಿತೋಪಚಾರಂಗಳಿಂ ಪರಿಪಾಲಿಸುತ್ತಮಾಗುವರನ ಬಳವಿಯನೆಸಪಾರುತ್ತಮಿರೆಯಿರೆ,

ವೇದಘೋಷದೊಡನೆ ಶಾಸ್ತ್ರದಲ್ಲಿ ಹೇಳಲ್ಪಟ್ಟ ಕ್ರಮದಿಂದ ತನ್ನ ಶ್ರೇಷ್ಠನಾದ ಕುಮಾರನಿಗೆ “ಶ್ರೀ ಕೃಷ್ಣರಾಜ ಒಡೆಯರು” ಎಂಬ ನಾಮಧೇಯವನ್ನು ಇಟ್ಟನು, ಉತ್ತಮವಾದ ಹೆಸರನ್ನಿಟ್ಟು, ಹಿರಿದಾದ ಸಂತೋಷದಲ್ಲಿ ಮುಳುಗಿ, ರಾಜತ್ವಕ್ಕೆ ತಕ್ಕ ಉಪಚಾರಗಳಿಂದ ಸಂರಕ್ಷಿಸುತ್ತ ರಾಜಪುತ್ರನ ಅಭಿವೃದ್ಧಿಯನ್ನೇ ನಿರೀಕ್ಷಿಸುತ್ತ ಇರಲಾಗಿ,

೪೫

ಕಂದ॥ ನರಪತಿಲಕ್ಷ್ಮಣಲಕ್ಷಿತ ।
ನುರುತರಗಾಂಭೀರ್ಯಧೈರ್ಯಶೌರ್ಯೋದ್ದಾಮಂ
ಸರಳಾಲಾಪಂಬಳೆದಂ ।
ಕರಮೊದವಿಸುತಂದುವೆತ್ತವರ್ಗಕ್ಕಮುದಮಂ ।

ರಾಜಲಕ್ಷಣಗಳಿಂದ ಕೂಡಿಕೊಂಡಿರತಕ್ಕ, ಹೆಚ್ಚಾದ ಗಾಂಭೀರ್ಯ ಧೈರ್ಯ ಶೌರ್ಯಗಳಿಂದ ಮಹಾಮಹಿಮೆಯುಳ್ಳ ಮಧುರವಾದ ಮಾತುಗಳನ್ನಾಡುವ ಶ್ರೀ ಕೃಷ್ಣರಾಜಪ್ರಭುವು ಆಗ ತಾಯಿತಂದೆಗಳಿಗೆ ಹೆಚ್ಚಾದ ಸಂತೋಷವನ್ನು ಸರ್ವರೀತಿಯಲ್ಲಿ ಉಂಟುಮಾಡುತ್ತ ಅಭಿವೃದ್ಧಿಯನ್ನು ಹೊಂದಿದನು.

ಗದ್ಯ—ವೊತ್ತವೇದದೊಳ್ ಆಶೀರ್ವಾದಗ್ರಂಥಿತಪ್ಪಾನಮುಂ, ಪಂಡಿತರಿಂ ಕ್ರಿಯಾಜ್ಞಾನಸಮುದಾಯ ಜನ್ಯವಾದಸುಜ್ಞಾನವೈಶಿಷ್ಟ್ಯಪೂರ್ಣಪ್ರಮೆಯಿಂ ಸನ್ನಿಧಾನಕರ್ತೃಕಶಪ್ರಭಾಸಜ್ಞಪ್ತಿಯಿಂ ತಿಳಿದದರತ್ತಣಿಂ, ಸಂಕಲಿತಮಪ್ಪ ಪರಜ್ಞಾನಮುಂಟಪ್ಪುದು,

ಪ್ರಾರಂಭದಲ್ಲಿ ಸಮಸ್ತವಾದ ಗ್ರಂಥಗಳಲ್ಲಿರುವ ವಿಷಯಗಳ ಜ್ಞಾನವನ್ನು, ಕ್ರಮವಾಗಿ ಕ್ರಿಯಾಜ್ಞಾನಸಮುದಾಯದಿಂದುಂಟಾದ ವಿಶುದ್ಧಾದ್ವೈತಜ್ಞಾನ (ಯಥಾರ್ಥಜ್ಞಾನ) ಪ್ರಮೆಯಿಂದಲೂ ಸನ್ನಿಧಾನಕರ್ತೃಕತೆ ಪ್ರಭುಶಕ್ತಿಯನ್ನು ತೋರಿಸಿ ಅದರ ಬೆಸೆಯಿಂದ, ಸೇರಿಕೊಂಡಿರತಕ್ಕ ಪರಜ್ಞಾನವನ್ನು ಹೊಂದಿದನು,

ಪದ್ಯ—“ ಜಂತೂಂಸರ್ವಾಂಸ್ತುತ್ಯಪದವಾರ್ಜವಂ ಪ್ರಾಪ್ನೋತಿಪದಂ ।
ಜ್ಞಾನವಾನ್ ಜ್ಞಾನವಿಷಯಃ ಕಿಂಪ್ರಲಾಪಃ ಕರಿಷ್ಯತೇ ॥”

ಎಲ್ಲ ವಿಧದ ವಿಶೇಷಣೆಯೂ ತರತಮ ಕ್ರಮಬದ್ಧವಾದತಕ್ಕದ್ದು, ಸರಳತೆಯು ಸಹಜಪ್ರಪಂಚದ ಜೋಡಣೆಯನ್ನು ತೋರಿಸತಕ್ಕದ್ದು ಹಿರಿಯತನದ ಅಂಶವು ಇನ್ನೇ. ಮೊದಲು ಆ. ರೇಖಾಪಥವು (ಸಾಗರದಿಂದಿದ್ದಲ್ಲಿ) ಬಹಳ ದೂರದಲ್ಲಿ ಮುಟ್ಟಿದ

ಎಂಬ ನಾಲ್ಕನೇ ಶ್ಲೋಕದ ತಾತ್ಪರ್ಯವು. ಪಡುವ (ಗರಕವಿಸು) ಜಿಷ್ಣು ಭ್ರಮಣ ಪುರಾಣದ ರಾಜ್ಯ ಹಾಗೆ ಪ್ರವಾಸ, ಹೋಲಿಕೆಗಳು, ಹೆಸರು, ಬುದ್ಧಿ, ಬಾಳ್ವೆ, ನಡೆತೆಗಳಿಂದ ಇದ್ದವುಗಳು.

ಪಾಪ ರಾಜ್ಯದ ಮತವನ್ನು ಹೋಲಿಸಿಯೂ, ಪರಸ್ಪರ ಸಮಾನವಾದ ಹೊಸ ದಾರ್ಶನಿಕ ವಿಷಯಗಳಿಂದ ಕಾವ್ಯಗಳನ್ನು ಪ್ರತಿಪಾದಿಸಿ, ಎಷ್ಟು ತೊಂದು,

ದಿಗ್ದರ್ಶನದಿಂದ, ಸಕಲವಾಗಿ ಸುತ್ತಿ ಬರಲಾಗದಷ್ಟು ಸರಿಯಾದ ಜೀವನಕ್ಷಮವಿಲ್ಲದ, ನಾಯಕರನ್ನು ಕಂಡು ಹೆಚ್ಚಾಗಿ ಮರುಗಿ,

ಶಮದಮಾದ್ಯಾತ್ಮಗುಣಂಗಳ್ ಶಿವರಾಜ್ಯಲಕ್ಷಣಮೆಂದುಂ, ಕಾಮಾದ್ಯನಾತ್ಮ ಗುಣಂಗಳ್, ಮಾಯಾರಾಜ್ಯಲಕ್ಷಣಮೆಂದುಮಿವರ್ಕೆ ಕಲಿರಾಜ್ಯಂ, ಮೃತ್ಯುರಾಜ್ಯಮೆಂಬ ಪರ್ಯಾಯನಾಮಂಗಳ್ ಒಳವೆಂದುಂ, ಮಿತ್ರಶತ್ರುಸ್ವಭಾವಮಂ ಚೊಕ್ಕಳಿಕೆಯಿನಲವಧರಿಸಿಯುಂ ಮಾರಹರಂ ಶಿವರಾಜ್ಯಪ್ರಜೆಯೆಂದುಂ, ಪತಿಕಂ ಮಾಯಾರಾಜ್ಯಪ್ರಜೆಯೆಂದುಮವಂಗೆ ನಿತ್ಯಜೀವನಮುಮಿವಂಗೆ ನಿತ್ಯಮರಣಮುಂ ಸಿದ್ಧಮೆಂದು ಮೊದ್ದಮೊದಲ್ ನಿರ್ಣಯಿಸಿಯುಂ,

ಶಮವೇ (ಶಾಂತಿಯೇ) ಮೊದಲಾದ ಆತ್ಮಗುಣಗಳು ಶಿವ (ಉತ್ತಮ) ರಾಜ್ಯಲಕ್ಷಣವೆಂದೂ, ಕಾಮವೇ (ಕೆಟ್ಟ ಆಸೆಯೇ) ಮೊದಲಾದ ಅನಾತ್ಮಗುಣಗಳು ಮಾಯಾರಾಜ್ಯಲಕ್ಷಣವೆಂದೂ, ಇವುಗಳಿಗೆ ಕಲಿರಾಜ್ಯ, ಮೃತ್ಯುರಾಜ್ಯವೆಂದು ಇದೇ ಅರ್ಥದ ಬೇರೆ ಹೆಸರುಗಳು ಉಂಟೆಂದೂ,

ಸ್ನೇಹಿತರ ಮತ್ತು ವಿರೋಧಿಗಳ ಸಮುದಾಯವನ್ನು ಸ್ವಚ್ಛವಾದ ರೀತಿಯಲ್ಲಿ ಸೋಡಿಯೂ,

ಉತ್ತಮಸ್ಥಿತಿಯಲ್ಲಿರತಕ್ಕವನು ಶಿವರಾಜ್ಯದ ಪ್ರಜೆಯೆಂದೂ ಮೇಲೆ ಹೇಳಿದ ಗುಣಗಳಿಂದ ಬಿಡಲ್ಪಟ್ಟವನು ಮಾಯಾರಾಜ್ಯ ಪ್ರಜೆಯೆಂದೂ ಅವನಿಗೆ ನಿತ್ಯಜೀವವೂ (ಸುಖವೂ) ಇವನಿಗೆ ನಿತ್ಯಮರಣವೂ (ಕಷ್ಟವೂ) ಸಹಜವಾಗಿದೆಯೆಂದೂ ಮನೋಹರವಾದ ರೀತಿಯಲ್ಲಿ ಗೊತ್ತು ಮಾಡಿಯೂ,

“ ದುಷ್ಟಸ್ಯ ಶಿಕ್ಷಾ ಸಂತತಿರ್ಭಕ್ತಿಶಿಷ್ಟಸ್ಯ ರಕ್ಷಣಂ । ಶಕ್ತಿಧರ್ಮೋ ನರಾಧಿಪಾನಾಂ ಶಿಷ್ಟಾನಾಂ ಪ್ರತಿಪಾಲನೇ ॥”

ಸಶೇಷ.

ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತಕಾಲೇಜು, ಹುಬ್ಬಳ್ಳಿ.

ಈ ಕಾಲೇಜಿನಿಂದ ಈಸಾರೆ ಕಲಕತ್ತಾ ಪರೀಕ್ಷೆಗೆ ಸಾಹಿತ್ಯ ಮಧ್ಯಮದವರು ೩ ಆದ್ಯರವರು ೭ ಈ ೪ ರಲ್ಲಿ ೪ ವಿದ್ಯಾರ್ಥಿಗಳು ಪಾಸಾಗಿರುತ್ತಾರೆ ಅದರಲ್ಲಿಯೂ ಒಬ್ಬರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಈ ೧೯೩೨ ರಲ್ಲಿ ಕಾಲೇಜವು ಪ್ರಾರಂಭವಾಗಿರುವದು ಇಲ್ಲಿ ನ್ಯಾಯ, ವ್ಯಾಕರಣ, ಸಾಹಿತ್ಯ, ವೇದಾಂತ, ಉಪನಿಷತ್ ಪುರಾಣ, ಸಾಂಖ್ಯ ಮೊದಲಾದ ಪರೀಕ್ಷೆಗಳ ಅಭ್ಯಾಸವು ನಡೆಯುವದಲ್ಲದೆ ಹಿಂದಿ, ಇಂಗ್ಲೀಷು, ಭಾಷೆಗಳ ಜ್ಞಾನದ ಮಟ್ಟಿಗೆ ಕಲಿಸಲ್ಪಡುವವು ಪುರಾಣ ಕೀರ್ತನಕ್ಕೆ ಬೇಕಾಗುವ ರಾಗದ ಮಾಹಿತಿಯದರೆಯಿಂದ ಸಂಗೀತ ವ್ಯವಸ್ಥೆಯು ಮಾಡಲ್ಪಟ್ಟಿರುತ್ತದೆ ಸದರಿ ಕಾಲೇಜಿಗೆ ಸೇರಬಿಚ್ಛಿಸುವವರು ಶೀಘ್ರವೇ ಬರತಕ್ಕದ್ದು

ಪ್ರಿನ್ಸಿಪಾಲ ಚಂದ್ರಶೇಖರಶಾಸ್ತ್ರಿಗಳು, ವ್ಯಾಕರಣತೀರ್ಥ
ಹೊಳಲು, ಹುಬ್ಬಳ್ಳಿ

ಕಾಶೀ ಶ್ರೀ ಜಗದ್ಗುರು ಮುರುಘಾಮಠದ ಜಯದೇವ ಬೋರ್ಡಿಂಗಿನ

ವಿದ್ಯಾರ್ಥಿಗಳ ೧೯೩೨ ನೇ ಇಸವಿಯ ಪರೀಕ್ಷೆಯ ಫಲಿತಾಂಶ

1. ಗುರುಸಿದ್ಧಶಾಸ್ತ್ರಿ ಕೌರಾಣಿಕಮಠ (ಮಧುರಯೂನಿವರ್ಸಿಟಿ) ಸಾಹಿತ್ಯ ಆಚಾರ್ಯ 2 ವಿರೂಪಾಕ್ಷ ಶಿವಾಚಾರ್ಯ ರೋಣ (ಮಧುರ ಯೂನಿವರ್ಸಿಟಿ) ಸಾಹಿತ್ಯ ಆಚಾರ್ಯ 3 ಶಂಭುಲಿಂಗಶಾಸ್ತ್ರಿ ಭೀಮನಹಳ್ಳಿ (ಕಲಕತ್ತ ಯೂನಿವರ್ಸಿಟಿ) ಸಾಹಿತ್ಯತೀರ್ಥ 4 ಶಿವಕುಮಾರಶರ್ಮ ಅಮ್ಮಿನಗಿ (ಕಲಕತ್ತ ಯೂನಿವರ್ಸಿಟಿ) ಸಾಹಿತ್ಯತೀರ್ಥ 5 ಜಯದೇವಶರ್ಮ ಚಿತ್ರದುರ್ಗ (ಬನಾರಸ್ ಕ್ವೀನ್ಸ್ ಕಾಲೇಜು) ವ್ಯಾಕರಣ ಮಧ್ಯಮ ಸಂಪೂರ್ಣ 6 ಶಿವಕುಮಾರ ಪಟ್ಟದಾರ್ಯ ಕೋಟುಮಾಚಗಿ, (ಬನಾರಸ್ ಕ್ವೀನ್ಸ್ ಕಾಲೇಜು) ವ್ಯಾಕರಣ ಮಧ್ಯಮ ಸಂಪೂರ್ಣ 7. ಮೃತ್ಯುಂಜಯದೇವರು ಮುಧೋಳ (ಬನಾರಸ್ ಕ್ವೀನ್ಸ್ ಕಾಲೇಜು) ಸಾಹಿತ್ಯ ಮಧ್ಯಮ 8 ಕಾಶೀನಾಥಶಾಸ್ತ್ರಿ ಜಾನಾಪುರ (ಕಲಕತ್ತ ಕ್ವೀನ್ಸ್ ಕಾಲೇಜು) ವ್ಯಾಕರಣ ಮಧ್ಯಮ 9 ಪಟ್ಟದಾರ್ಯ ಬೆಂಡಿಗೇರಿ (ಕಲಕತ್ತ ಕ್ವೀನ್ಸ್ ಕಾಲೇಜು) ಸಾಹಿತ್ಯ ಮಧ್ಯಮ 10 ಗುರುಸಿದ್ಧದೇವರು ಕೆತ್ತೂರು (ಕಲಕತ್ತ ಕ್ವೀನ್ಸ್ ಕಾಲೇಜು) ಸಾಹಿತ್ಯ ಮಧ್ಯಮ 11 ಪಟ್ಟದ್ದೇವರು ಮುತಸಾಳ (ಕಲಕತ್ತ ಕ್ವೀನ್ಸ್ ಕಾಲೇಜು) ಸಾಹಿತ್ಯ ಮಧ್ಯಮ 12 ಮುರುಘೇಂದ್ರ ಬ್ರಹ್ಮಚಾರಿ ಕಂಥಕೋಣ (ಕ್ವೀನ್ಸ್ ಕಾಲೇಜು) ಪ್ರವೇಶಪರೀಕ್ಷೆ 13 ಶಿವನಮೂರ್ತಿಶರ್ಮ ಹೆಬ್ಬಾಳು (ಕ್ವೀನ್ಸ್ ಕಾಲೇಜು) ಪ್ರವೇಶಪರೀಕ್ಷೆ 14 ಪಂಚಾಕ್ಷರಶರ್ಮ ಪುರಾಣೀಕ (ಹಿಂದೂ ಯೂನಿವರ್ಸಿಟಿ) ಮೆಟ್ರಿಕ್ಯುಲೇಷನ್

ಅಂತು 14 ಜನ ವಿದ್ಯಾರ್ಥಿಗಳು ಈ ಬೋರ್ಡಿಂಗಿನಿಂದ ಪರೀಕ್ಷೆಗೆ ಕುಳಿತಿದ್ದು 14 ಜನರೂ ಉತ್ತೀರ್ಣರಾದ್ದಲ್ಲದೆ, ಪಂ. ಗುರುಸಿದ್ಧಶಾಸ್ತ್ರಿಗಳು ಮಧುರಾ ಯೂನಿವರ್ಸಿಟಿಯ “ಸಾಹಿತ್ಯ ಆಚಾರ್ಯ” ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸಿನಲ್ಲಿಯೂ, ಪಂ. ಕಾಶೀನಾಥಶಾಸ್ತ್ರಿಗಳು ವ್ಯಾಕರಣ ಮಧ್ಯಮದಲ್ಲಿ ಫಸ್ಟ್‌ಕ್ಲಾಸಿನಲ್ಲಿಯೂ ಇನ್ನುಳಿದೆಲ್ಲಾ ವಿದ್ಯಾರ್ಥಿಗಳು ಸೆಕೆಂಡು ಕ್ಲಾಸಿನಲ್ಲಿಯೂ ಉತ್ತೀರ್ಣರಾಗಿರುತ್ತಾರೆ ಇದರಂತೆ ಈ ಬೋರ್ಡಿಂಗು ಉತ್ತರೋತ್ತರ ಅಭಿವೃದ್ಧಿಹೊಂದಿ ಸಮಾಜ ಶ್ರೇಯಸ್ಸಾಧಕವಾಗಲೆಂದೂ, ಇದಕ್ಕೆ ಸಮಾಜದವರ ಪ್ರೋತ್ಸಾಹವು ದೊರೆಯಲೆಂದು ಹಾರೈಸುತ್ತೇವೆ.

ಮುಪ್ಪಣ್ಣ, ಟ ಬೆಳ್ಳುಳ್ಳಿ, ಸೆಕ್ರೆಟರಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಿಸಿದ ಫಂಡಿನ ಹಣದ ತಪಸೀಲು—

ಮೈ॥ ಗಳಾದ

(1) ಬಾಣಾವಾರದ ಅತ್ತಿಗುಪ್ಪೆ ಸಂಜುಂಡಪ್ಪನವರ ಮಗ ಚಿ॥ ರುದ್ರಪ್ಪನವರಿಗೂ ಕೃಷ್ಣರಾಜಪೇಟೆ ಶೆಟ್ಟರು ಸಿದ್ಧಲಿಂಗಯ್ಯನವರ ಪುತ್ರಿ ಚಿ॥ ಸೌ॥ ಗೌರಮ್ಮನಿಗೂ ನಡೆದ ಲಗ್ನದಲ್ಲಿ ಕೃಷ್ಣರಾಜಪೇಟೆ ಮಿಡ್ಲ್ ಸ್ಕೂಲು ಮಾಸ್ಟರ್ ಹೆಚ್. ಹೆಚ್. ಶಿವಯ್ಯನವರ ಮೂಲಕ ೨ ರೂ. (2) ಅರಸೀಕೆರೆ ಎಂ. ಚನ್ನಬಸಪ್ಪನವರ ಕುಮಾರ ಚಿ॥ ಎಂ. ಸಿ. ಬಸಪ್ಪನವರಿಗೂ ತಿಪಟೂರು ತಿಮ್ಮಲಾಪುರದ ಸಿದ್ಧಲಿಂಗಪ್ಪನವರ ಕುಮಾರಿ ಚಿ॥ ಸೌ॥ ಮಂಗಮ್ಮನಿಗೂ ನಡೆದ ಲಗ್ನದಲ್ಲಿ ಎಂ. ಚನ್ನಬಸಪ್ಪನವರಿಂದ 2 ರೂ. (3) ಮೈಸೂರು ಕೃಷ್ಣರಾಜಪೇಟೆ ತಾಲ್ಲೂಕು ದಿಂಡಗೂರು ವೀರಭದ್ರಪ್ಪನವರ ಅಣ್ಣಂದಿರಾದ ಲಿಂಗಪ್ಪ ಎಂಬುವರ ಪುತ್ರಿಯಾದ ಚಿ॥ ಸೌ॥ ಪಾರ್ವತಮ್ಮನಿಗೂ ಬೇವಿನಹಳ್ಳಿ ದಾಸಪ್ಪನ ಮಗ ಚಿ॥ ಸಿದ್ದಪ್ಪನವರಿಗೂ ನಡೆದ ಲಗ್ನದಲ್ಲಿ ವಧುವಿನ ಕಡೆಯಿಂದ 1 ರೂ. ವರನ ಕಡೆಯಿಂದ 1 ರೂ. ಈ ಎರಡು ಬೆಂಗಳೂರು ಜವಳಿ ಅಂಗಡಿ ಪಿ. ಎಸ್. ಶೆಟ್ಟರವರ ಮೂಲಕ 2 ರೂ. (4) 1 ಗೋಪಾಲಪುರ ಚಿಕ್ಕಣ್ಣಯ್ಯನವರ ಕೆಸ್ತೂರು ಮನೆಯಲ್ಲಿ ನಡೆದ ಹೊಸಕೋಟೆ ಮಲ್ಲಯ್ಯನವರ ಶಿವಪೂಜೆಯಲ್ಲಿ ಮಹಾಜನರಿಂದ 3 ರೂ. ಪಲ್ಲಕ್ಕಿಗೆ ಬಾಬು 2 ಆಣೆ, 2. ಕೆನಮಂಗಲದ ನಂಜುಂಡಪ್ಪನವರ ಮನೆಯಲ್ಲಿ ನಡೆದ ಮಾಗಡಿ ಯಡಿಯೂರಪ್ಪನವರ ಶಾಂತಿ ಪ್ರಸ್ಥದಲ್ಲಿ ವಧುವರರ ಕಡೆಯಿಂದ 3 ರೂ. 3. ಕಾನಕಾನಹಳ್ಳಿ ಮಿರಾಯಿ ಅಂಗಡಿ ರೇವಣಸಿದ್ಧಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 4 ರೂ ಜುಂಲಾ ಬೆಂಗಳೂರು ಮಾಮೂಲ್ ಪೇಟೆ ಅಡಿಕೆ ಅಂಗಡಿ ಕೆ. ಎ. ದೊಡ್ಡರಾಜಪ್ಪನವರ ಮೂಲಕ ರೂ. 9-2-0. (5) ಮಾಗಡಿ ತಾ॥ ಬಂಡೆಮಠದಲ್ಲಿ ನಡೆದ ಲಗ್ನದಲ್ಲಿ ಶ್ರೀ ಚರಮೂರ್ತಿ ಕೋಟಿ ದಾರ್ಯಸ್ವಾಮಿಗಳಿಂದ ಬೆಂಗಳೂರು ರುದ್ರಮುನಿಯಪ್ಪನವರ ಮೂಲಕ 1 ರೂ (6) ನೇಮತಿ ಸೋಗಿ ವೀರಭದ್ರಪ್ಪನವರ ಮಗ ಚಿ॥ ಈಶ್ವರಪ್ಪನವರಿಗೂ ಬೆಂಗಳೂರು ಅರಳೇಪೇಟೆ ಎನ್. ರಾಚಪ್ಪನವರ ಪುತ್ರಿ ಚಿ॥ ಸೌ॥ ಮಹಾದೇವಮ್ಮನಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ ತೆಗೆದದ್ದು ಗೊಲ್ಲಹಳ್ಳಿ ರುದ್ರಪ್ಪನವರ ಮೂಲಕ 4 ರೂ (7) ಬೆಂಗಳೂರು ಅಕ್ಕಿಪೇಟೆ ತಾವರೆಕೆರೆ ಬಸಪ್ಪನವರ ದ್ವಿತೀಯ ಪುತ್ರಿ ಚಿ॥ ಸೌ॥ ಚನ್ನಬಸಮ್ಮನ ಲಗ್ನದಲ್ಲಿ ವಧೂವರರ ಕಡೆಯಿಂದ ವೇ॥ ಶೆಟ್ಟರು ಸಿದ್ಧಬಸಪ್ಪಶೆಟ್ಟರ ಮೂಲಕ 5 ರೂ (8) ಆನೇಕಲ್ ತಾ॥ ಜಗಣಿ ಚಿನ್ನಗಂಗಪ್ಪನವರ ಕುಮಾರ್ತೆ ಚಿ॥ ಸೌ॥ ಹೊನ್ನಮ್ಮನ ಲಗ್ನದಲ್ಲಿ ವಧೂವರರ ಕಡೆಯಿಂದ ಬೆಂಗಳೂರು ಅರಳೇಪೇಟೆ ಯಜಮಾನ್ ಗಂಗಪ್ಪನವರ ಮೂಲಕ 5 ರೂ. (9) ಬೆಂಗಳೂರು ಸುಲ್ತಾನ್‌ಪೇಟೆ ಯೂನಿವರ್ಸಲ್ ಪವರ್ ಪ್ರೆಸ್ ಶ್ರೀಕಂಠಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ತೆಗೆದದ್ದು ದೇ॥ ಯಜಮಾನ್ ಪುಟ್ಟಪ್ಪನವರ ಮೂಲಕ 3 ರೂ. (10) ಕೋಲಾರದಲ್ಲಿರುವ ಮಾಲೂರು ಶಂಕರಯ್ಯನವರ ಪುತ್ರ ಚಿ॥ ಮಲ್ಲಪ್ಪನವರಿಗೂ ಮಾಲೂರು ಪುಟ್ಟಣ್ಣನವರ ಮೊಮ್ಮಗಳು ಚಿ॥ ಸೌ॥ ಪಾರ್ವತಮ್ಮನಿಗೂ ನಡೆದ ಲಗ್ನದಲ್ಲಿ ವರನ ಕಡೆಯಿಂದ 5 ರೂ ವಧುವಿನ ಕಡೆ ಎಂ. ಪಿ. ಮಲ್ಲೇಶಯ್ಯನವರಿಂದ 10 ರೂ. ಜುಂಲಾ ಬೆಂಗಳೂರು ಮೈಸೂರು ಬ್ಯಾಂಕ್ ಕೆ. ವೈ. ಮಲ್ಲಶೆಟ್ಟಪ್ಪನವರ ಮೂಲಕ 15 ರೂ (11) ಮಾಗಡಿ ತಾ॥ ತಾವರೆಕೆರೆ ಕರಿಬಸಪ್ಪನವರ ಬಸವರಾಜಪ್ಪನವರ ಕುಮಾರ ಚಿ॥ ಶಿವಗಂಗಪ್ಪನೆಂಬ ವರನಿಗೂ ಮಾಗಡಿ ಕೆಂಬ ರುದ್ರಪ್ಪನವರ ಮಲ್ಲಿಕಾರ್ಜುನಯ್ಯನವರ ಕುಮಾರ್ತೆ ಚಿ॥ ಸೌ॥ ಭ್ರಮರಾಂಬನೆಂಬ ವಧುವಿಗೂ ನಡೆದ ಲಗ್ನದಲ್ಲಿ ವರನ ಕಡೆಯಿಂದ 5 ರೂ, ವಧುವಿನ ಕಡೆಯಿಂದ 1 ರೂ ಜುಂಲಾ ಶೆಟ್ಟರ ಕರಿಬಸಪ್ಪನವರಿಂದ 6 ರೂ. ಜುಂಲಾ ರೂ 71-2-0 ಎಂ. ನಾಗಪ್ಪ, ಆ ಸೆಕ್ರೆಟರಿ,

ಮೈ॥ ವೀ॥ ವಿದ್ಯಾಭಿವೃದ್ಧಿ ಫಂಡು, ಸಂಘ.

ಹಸ್ಸ್ ಕಿತ್ತಳೆಗಿಡಗಳು.

ನಮ್ಮಲ್ಲಿ ೨ ಅಡಿಯಿಂದ 1 ಅಡಿ ವರೆಗೆ ಎತ್ತರವಿರುವ ಬೀಜದ ಹಸ್ಸ್ ಕಿತ್ತಳೆ ಗಿಡಗಳು, 100 ಗಿಡಗಳಿಗೆ 10 ರೂ. ಗಳಂತೆ ಕ್ರಯಕ್ಕೆ ದೊರೆಯುತ್ತವೆ ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ

ವಿಳಾಸ - ಜಂಗಮರ ಸಣ್ಣಯ್ಯ ಯಾನೆ ಕರಿಬಸವಯ್ಯ,

2 ಗುಡಗಳಲೆ ಗ್ರಾಮ, ಶನಿವಾರ ಸಂತೆ ಪೋಸ್ಟ್, ಕೊಡಗು.

ನಾರಿನಹುಣ್ಣಿಗೆ ರಾಮಬಾಣ

ಮೂರು ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವುದಿಲ್ಲ ನಾರಿನವರು ಬರೆದು ತರಿಸಿ ಕೊಳ್ಳಿರಿ. ಕಿ. ೧। ರೂ ಟ ಖ. ೫ ಆಣೆ

ವಿಳಾಸ—ವೈದ್ಯ ವ್ಹಿ ಎಸ್ ಕಾಪಸೆ. ಮಿರಜ.

10 M. C

೧೯೩೨ ನೆಯ ಇಸವಿ ಜೂನ್ ತಾ ೨೭ ರಿಂದ ಜುಲೈ ತಾ॥ ೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ, ಅಂಗಿರಸನಾಮಸಂವತ್ಸರದ ಜ್ಯೇಷ್ಠ ಬಹುಳ ನವಮಿಯಿಂದ ಜ್ಯೇಷ್ಠ ಬಹುಳ ಅಮಾವಾಸ್ಯೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ
27	ಸೋಮ	ನವ	29-0	ರೇವ	26-10	14
28	[1] ಮಂಗಳ	ದಶ	33-59	ಅಶ್ವಿ	33-33	15
29	ಬುಧ	ಏಕಾ	39 5	ಭರ	39-10	16
30	ಗುರು	ದ್ವಾದ	43-56	ಕೃತ್ತಿ	45-33	17
1	[2] ಶುಕ್ರ	ತ್ರಯೋ	48-7	ರೋಹಿ	51-19	18
2	ಶನಿ	ಚತು	51-20	ಮೃಗ	56-13	19
3	ಭಾನು	ಅಮಾ	53-41	ಆದ್ರಾ	60	20

(1) ಮಳೆನಕ್ಷತ್ರ-ಆದ್ರಾ ೩ ನೆಯ ಪಾದ. (2) ಮಳೆನಕ್ಷತ್ರ-ಆದ್ರಾ ೪ ನೆಯ ಪಾದ.

ಮೈಸೂರು; ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲಾಯಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦]   [ಪರಸ್ಥಳದವರಿಗೆ ೩-೮-೦]   [ಸ್ಟೇಟ್ಸಿಗೆ ೩-೮-೦]

ಸಂಪುಟ ೪೫]   ಮೈಸೂರು ಸ್ಟಾರ್ ಸೆ. ೧೯೩೨ ನೆಯ ಇಸವಿ ಜುಲೈ ತಾರೀಖು ೪ ನೆಯ ಸೋಮವಾರ   [ಸಂಚಿಕೆ ೨೨

MYSORE SANDALWOOD OIL
Distilled in
GOVERNMENT FACTORIES

GUARANTEED B P P J & AM 4 P STANDARDS

PROVIDES

Excellent Base for the manufacture of Soaps Perfumes and other Toilet preparations of the Highest quality

USED ALL THE WORLD OVER

BUY A BOTTLE TO DAY

Available in Sealed Aluminium Bottles

MYSORE GOVERNMENT SANDALWOOD OIL FACTORY,

6   BANGALORE   [60—1]

THE MYSORE AGRICULTURAL SCHOOL HEBBAL, BANGALORE

Notification No A S M GI 225 of 31-32 dated 21st June 1932

In supersession of the previous notification No A S M GI 225 of 31—32 dated 22nd April 1932 published in the Mysore Gazette Part III Pages 798-799 dated 19th May 1932, the time for sending up the applications for admissions to the Mysore Agricultural School at Hebbal Bangalore has been extended to 10th July 1932 and that of the entrance examination has been postponed to 17th July 1932 at 12 noon as the results of the S S L C Examination have not yet been declared

V K BADMI

Principal

[೩—೨]

ಲಗ್ನಪತ್ರಿಕೆಗಳ

ಮುದ್ರಣಕ್ರಮ

ನಮ್ಮ ಕ್ಯಾಪ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್ ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	ವಿ ಪಿ ಸೇ
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆರ್ಡರು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ಉಪಯೋಗಿಸಿದ

ಅಲ್ಪವಯಸ್ಸಾಗಿ ಕ್ಷೀಣರಾಗಬೇಡಿರಿ | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಥಿಕ್ಕರಿಸಿದರೆ ಕ್ಷೀಣತೆ ಹಾಯ್ದು ಹೋಗ್ಬಹುದು

ರಬಿ] ವಜ್ರಾಂಗ ಸುಂದರಪಾಕದ [ಸ್ವರ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[೫೦—೨೧]

ಚಾಲಕ:—ವೈದ್ಯ ವ್ಹಿ. ಎಸ್ [illegible] ಮಿರಜ. ಎಂ ಎಸ್. ಎಂ

ಡಾಕ್ಟರ್ ಜೀ. ವೀ. ಯವರ

ಸುಗಂಧ ನಶ್ಯದ ಪುಡಿ.

[illegible]



[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್, ಪೋ ಬಾ. ೫೧೧, ಮದರಾಸ್

ಮೈಸೂರು ಸ್ಟಾರ್.

೧೯೩೩ನೇ ಇಸವಿ ಜುಲೈ ತಾ|| ೪ ನೆಯ ಸೋಮವಾರ.

R. T. C. DISSOLVED

Whatever doubts the pessimists entertained about the outcome of the Round Table Conference few were prepared for its dissolution in such an unceremonious manner as Sir Samual Hoare, the Secretary of State for India did at the House of Commons. When H. E. the then Viceroy Lord Irwin referred to the formation of the Round Table Conference he made it quite certain that it should enjoy the fullest freedom as regards its functions, and that its conclusions would form the basis of the proposals which would be later submitted to the Parliament. The Prime Minister in his speech on 1st December 1931 when he proposed setting up expert committees to work in India on questions of Finance, Franchise and Indian States, with a Consultative Committee expressly stated that in the end they would have to meet again 'for final review of the whole scheme" Further, when the approval of the Indian policy was sought at the hands of the Parliament, the Premier assured that the R. T. C would be continued for final review. The reports of the three committees are ready and R T C. should have met without delay if the assurances of the British Government had any value But what has happened now Sir Samual Hoare has sung the funeral song of the R T C abandoned the co-operation of Indians, and proposes a new scheme which provides for (1) a single Bill for autonomous constitution of provinces and for Federation of Provinces and States, (2) a Joint Select Committee of the two Houses to draft the Bill, (3) the Consultative Committee to formulate its decisions on various matters yet undecided by the R. T. C committees and (4) the summoning of a body of Indians for further discussion in London with the Joint Select Committee if the Consultative Committee cannot formulate definite proposals by that time. This means definitely that the policy of arriving at the largest possible agreement between Britain, Brtish India and the Indian States by joint discussion which the R T C stood for is given up Whatever justification the British Government can now advance in favour of their new policy, there can be no doubt that they have committed a most serious breach of its promise and prejudiced seriously its reputation in the eyes of the moderate opinion of India which had still some faith in its sense of fairness and honour. It evidently means that the characterisation of the R T C as a bid debating society by Mahatma Gandhi has only proved too true. The British were not prepared to attach any more value to its conclusions and today the whole of the R T C. deliberations only looks like a big tamash and something worse, a costly and wasteful tamash. All that we can say is that we were not prepared for such a performance on the part of the British Cabinet, inspite of the fact that the Conservatives who are virtually in power in the National Government were exercising their own influence to wreck the R. T. C. method We are not inclined to examine the definite proposals of the Secretary of State in detail. The proposal to hold up the All-India Federation till the units are prepared actually to federate has given rise to a great deal of apprehension as that would mean liberty to provincial units as well to join or not which was the last thing India bargained for. The voluntary basis for joining the Federation can only be made applicable to the Indian States but never to British India. There is also the fear that though the Bill is a single one, the time between the introduction of provincial autonomy and of the Federal Government would be too long and in fact the All-India Federation would not come about for long as innumerable difficulties would crop up meantime. It looks as though the National Government is not going to advance in practice much beyond the proposals of the Simon Commission. We do hope that the British statesmanship is not dead for any such reactionary tendency which will [illegible] the link between India and [illegible] and [illegible] the latter stands to suffer more by such weakening.

ಚಕ್ರಗೋಷ್ಠಿಯ ಅವಸಾನ.

ಚಕ್ರಗೋಷ್ಠಿ ಅಥವಾ ರೌಂಡುಟೇಬಿಲು ಕಾನ್ಫರೆನ್ಸಿನ ಪರಿಣಾಮವು ಹೇಗಾಗುತ್ತದೋ ಎಂದು ಕೆಲರು ಅನುಮಾನ ಗ್ರಸ್ತರಾಗಿರುವಲ್ಲಿ ಮತ್ತೆ ಕೆಲರು ಅದನ್ನು ನಾಶಗೊಳಿಸಲು ಸನ್ನದ್ಧರಾಗಿದ್ದರು. ಅದರಂತೆಯೇ ಕಳೆದ ಹೌಸು ಆಫ್ ಕಾಮನ್ಸ್ ಸಭೆಯಲ್ಲಿ ಅದಕ್ಕೆ ಭಾರತ ಮಂತ್ರಿಯವರಿಂದ ಅಂತ್ಯ ಸಾನಪ್ರಾಪ್ತವಾಯಿತು. ಈ ರೌಂಡುಟೇಬಿಲು ಕಾನ್ಫರೆನ್ಸಿನ ರಚನೆಯ ಕಾಲದಲ್ಲಿ ವೈಸ್ರಾಯರಾಗಿದ್ದ ಲಾರ್ಡ್ ಇರ್ವಿನ್ ರವರು ಈ ಸಭೆಗೆ ಕಾರ್ಯನಿರ್ವಹಣದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದೂ ಅದರ ತೀರ್ಮಾನವು ಕಡೆಯಲ್ಲಿ ಪಾರ್ಲಿಮೆಂಟಿಗೆ ಕಳುಹಲ್ಪಡುವ ಸೂಚನೆಗಳಿಗೆ ಮುಖ್ಯಾಧಾರವಾಗಿರಬೇಕೆಂದೂ ಖಚಿತವಾಗಿ ಹೇಳಿದ್ದರು ಆರ್ಥಿಕ, ಚುನಾವಣೆ ಮತ್ತು ದೇಶೀಯ ಸಂಸ್ಥಾನಗಳ ಸಂಬಂಧವಾದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಮೂರು ಸಮರ್ಥ ಕಮಿಟಿಗಳನ್ನು ಮತ್ತು ಒಂದು ಆಲೋಚನ ಕಮಿಟಿಯನ್ನು ರಚಿಸುವುದರ ವಿಚಾರವಾಗಿ ಪ್ರಧಾನ ಮಂತ್ರಿಗಳು 1931 ನೆಯ ಡಿಸೆಂಬರ್ ತಾ|| 1 ರಲ್ಲಿ ಭಾಷಣಮಾಡುವಾಗ್ಗೆ, "ರಾಜ್ಯಾಂಗ ರಚನೆಯ ಸಂಪೂರ್ಣ ವಿಧಾನವನ್ನು ಕಡೆಯಲ್ಲಿ ಪುನರ್ವಿಮರ್ಶಿಸಿ ನಿರ್ಧರಿಸಲು ಆರ್ ಟಿ ಸಿ ಪುನಃ ಸಮಾವೇಶವಾಗಬೇಕು' ಎಂದು ಹೇಳಿದ್ದರು. ಅಷ್ಟೇ ಅಲ್ಲದೆ ಭಾರತ ನೀತಿಯ ವಿಚಾರದಲ್ಲಿ ಪಾರ್ಲಿಮೆಂಟಿನವರ ಅನುಮತಿಯನ್ನು ತೆಗೆದುಕೊಳ್ಳುವ ವೇಳೆಯಲ್ಲಿ ರೌಂಡುಟೇಬಿಲು ಸಭೆಯು ಕಡೆಯ ನಿರ್ಧರವಾಗುವವರೆಗೂ ನಡೆದುಕೊಂಡು ಬರುವುದೆಂದು ಪ್ರಧಾನಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಬ್ರಿಟಿಷ್ ಪ್ರಭುತ್ವದವರ ಭರವಸೆಗೆ ಬೆಲೆಯಿರುವ ಪಕ್ಷದಲ್ಲಿ ಮೂರು ಕಮಿಟಿಯವರ ವರದಿಗಳು ಸಿದ್ಧವಾಗಿರುವುದರಿಂದ ಅವನ್ನು ಪುನರ್ವಿಮರ್ಶಿಸಿ ನಿರ್ಧರಿಸಲು ರೌಂಡುಟೇಬಿಲು ಕಾನ್ಫರೆನ್ಸು ತಾಮಸವಿಲ್ಲದೆ ಸಮಾವೇಶವಾಗಬೇಕು. ಆದರೆ ಈಗ ಭಾರತ ಮಂತ್ರಿಗಳಾದ ಸರ್ ಸ್ಯಾಮ್ಯುಯಲ್ ಹೋರ್ ರವರು ಸಾವೇರಾಗವನ್ನು ಹಾಡಿರುವರು ಮತ್ತು ಪ್ರಾಂತಿಕ ಸ್ವರಾಜ್ಯ ಮತ್ತು ಪ್ರಾಂತಗಳ ಹಾಗೂ ಸಂಸ್ಥಾನಗಳ ಫೆಡರೇಷನ್ನಿನ ರಚನೆಗಾಗಿ ಒಂದು ಮಸೂದೆ ತಯಾರಾಗುವುದು. (೨) ಈ ಮಸೂದೆಯನ್ನು ತಯಾರಿಸಲು ಕಾಮನ್ಸ್ ಮತ್ತು ಲಾರ್ಡ್ಸ್ ಸಭೆಗಳಿಂದ ಚುನಾಯಿಸಲ್ಪಟ್ಟ [illegible] ರುಗಳಿಂದ ಕೂಡಿದ ಒಂದು ಕಮಿಟಿಯೇರ್ಪಾಟಾಗುವುದು. (೩) ಆರ್. ಟಿ. ಸಿ. ಕಮಿಟಿಗಳವರಿಂದ ಇದುವರೆಗೆ ನಿರ್ಧರವಾಗದಿರುವ ವಿಚಾರಗಳನ್ನು ಆಲೋಚನ ಸಂಘದವರು ನಿರ್ಧರಿಸುವರು. (೪) ಆ ಅವಧಿಯೊಳಗಾಗಿ ಆಲೋಚನ ಸಂಘದವರು ನಿರ್ದಿಷ್ಟವಾದ ಸೂಚನೆಗಳನ್ನು ಕೊಡಲು ಸಾಧ್ಯವಾಗದಿದ್ದಲ್ಲಿ ಲಂಡನ್ನಿನಲ್ಲಿ ಸಂಯುಕ್ತ ಸಂಘದವರೊಡನೆ ಕಲೆತು ವಿಷಯಗಳನ್ನು ಚರ್ಚಿಸಲು ಕೆಲ ಭಾರತೀಯರನ್ನು ಕರೆಸಿಕೊಳ್ಳುವುದು ಈ ವಿಷಯಗಳನ್ನೊಳಕೊಂಡಿರುವ ಒಂದು ಹೊಸ ಪಂಚಿಕೆಯನ್ನು ಸೂಚಿಸಿರುವರು. ಆರ್. ಟಿ ಸಿ ಮೂಲಕ ಬ್ರಿಟಿಷ್ ಬ್ರಿಟಿಷ್ ಇಂಡ್ಯಾ ಮತ್ತು ದೇಶೀಯ ಸಂಸ್ಥಾನಗಳು ಇವುಗಳ ಮಧ್ಯೆ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕೆಂಬ ಆಲೋಚನೆಯು ಖಂಡಿತವಾಗಿ ತಪ್ಪಿಹೋದಂತೆ ಇದರಿಂದ ವ್ಯಕ್ತವಾಗುತ್ತದೆ ಬ್ರಿಟಿಷ್ ಪ್ರಭುತ್ವದವರು ತಾವು ಈಗ ಹೊಸದಾಗಿ ಅನುಸರಿಸುವ ನೀತಿಯನ್ನು ಸಮರ್ಥಿಸಿ ಎಷ್ಟು ವಾದಿಸಿದಾಗ್ಯೂ ತಮ್ಮ ವಾಗ್ದಾನವನ್ನುಲ್ಲಂಘಿಸಿ ನ್ಯಾಯಪರತೆಯಮೇಲೂ ಗೌರವದ ಮೇಲೂ ದೃಷ್ಟಿಯುಳ್ಳ ಭಾರತೀಯ ಸಾಮ್ಯಪಕ್ಷದವರಲ್ಲಿ ತಮ್ಮ ಮರ್ಯಾದೆಗೆ ಕುಂದನ್ನುಂಟುಮಾಡಿಕೊಂಡಿರುವುದರಲ್ಲಿ ಸಂದೇಹವಿಲ್ಲ. ಈ ರೌಂಡುಟೇಬಿಲು ಕಾನ್ಫರೆನ್ಸು ಚರ್ಚಾಸಂಘವಲ್ಲದೆ ಮತ್ತೇನೂ ಅಲ್ಲವೆಂದು ಮಹಾತ್ಮ ಗಾಂಧಿಯವರು ಹೇಳಿದುದು ಅಕ್ಷರಶಃ ಸತ್ಯವಾಯಿತು. ಈ ಆರ್ ಟಿ ಸಿ ತೀರ್ಮಾನವನ್ನು ಬ್ರಿಟಿಷಿನವರು ಗೌರವಿಸತಕ್ಕವರಾಗಿರಲಿಲ್ಲವಾದುದರಿಂದ ಅದರ ನಡವಳಿಕೆಯೆಲ್ಲವೂ ಒಂದು ತಮಾಷೆ ಅದಲ್ಲದೆ ವಿಶೇಷ ದ್ರವ್ಯ ನಷ್ಟಕರವಾದ ತಮಾಷೆಯಾಗಿ ಪರಿಣಮಿಸಿತ್ತದೆ ಈಗಿನ ಸಾರ್ವಜನಿಕ ಪ್ರಭುತ್ವಾಧಿಕಾರದಲ್ಲಿರುವ ಕನ್ಸರ್ವೇಟಿವರುಗಳು ಆರ್. ಟಿ. ಸಿ ಯನ್ನು ಕಾರ್ಯಕ್ರಮವನ್ನು ಮುಗ್ಗುಗೊಡಿಸಲು ಸಾಹಸಪಡುತ್ತಿದ್ದುದು ನಿಜವೆಂದು ತಿಳಿದಿದ್ದಾಗ್ಯೂ ಬ್ರಿಟಿಷ್ ಕ್ಯಾಬಿನೆಟ್ಟಿನವರು ಅಂದರೆ ಮಂತ್ರಿ ವರ್ಗದವರು ಈ ರೀತಿ ವರ್ತಿಸುತ್ತಾರೆಂದೂಹಿಸಿರಲಿಲ್ಲ. ಈಗೇರ್ಪಡಲಿರುವ ಪ್ರಾಂತಿಕ ಸ್ವರಾಜ್ಯ ಪ್ರಭುತ್ವಗಳು ಫೆಡರೇಷನಿಗೆ ಶಕ್ತಿ ಅರ್ಹತೆಯನ್ನು ಸಂಪಾದಿಸಿಕೊಂಡಮೇಲೆ ಕೇಂದ್ರ ಪ್ರಭುತ್ವ ಸ್ವರಾಜ್ಯಸ್ಥಾಪನೆಯಾಗುವುದೆಂದು ಹೇಳಿರುವುದು ಅನುಮಾನಕರವಾಗಿರುತ್ತದೆ ಫೆಡರೇಷನ್ನಿಗೆ ತಾವಾಗಿ ಸೇರುವಂತಾಗಬೇಕೆಂಬುದು ದೇಶೀಯ ಸಂಸ್ಥಾನಗಳಿಗೆ ಅನ್ವಯಿಸುವುದಲ್ಲದೆ ಬ್ರಿಟಿಷ್ ಇಂಡ್ಯಾಕ್ಕೆ ಅನ್ವಯಿಸುವುದೇ ಇಲ್ಲ. ಈಗಿನ ಮಸೂದೆಯು ಒಂದೇ ಆಗಿರುವುದಾದರೂ ಪ್ರಾಂತಿಕ ಸ್ವರಾಜ್ಯಗಳು ಕೇಂದ್ರ ಸ್ವರಾಜ್ಯವನ್ನು ಸಂಪಾದಿಸಲು ಹಿಡಿಯುವ ಕಾಲಾವಧಿಯು ಬಹಳ ದೀರ್ಘವಾಗುವುದರಿಂದ ಮತ್ತು ಈ ಮಧ್ಯೆ ನಾನಾತೊಂದರೆಗಳು ಹುಟ್ಟುವುದರಿಂದ ಅಖಿಲಭಾರತ ಫೆಡರೇಷನ್ನು ಬಹಳ ಕಾಲದವರೆಗೂ ಅಸಾಧ್ಯವಾಗುವಂತಿದೆ. ನ್ಯಾಷನಲ್ ಗವರ್ನ್‌ಮೆಂಟಿನವರು [illegible] ಕಮಿಷನ್ ರವರ ಸೂಚನೆಗಳನ್ನು ಮೀರಿ ಮುಂದುವರಿಯುವಂತೆ ತೋರುವುದಿಲ್ಲ. ಬ್ರಿಟಿಷ್ ರಾಜನೀತಿಜ್ಞರು ಭಾರತದೇಶಕ್ಕೂ ಬ್ರಿಟನ್ನಿಗೂ ಇರತಕ್ಕ ಸಂಬಂಧವನ್ನು ಸಡಿಲವಾಗಿ ಮಾಡುವ ಸಂಕುಚಿತ ನೀತಿಯನ್ನು ಬಿಟ್ಟು ಸತ್ಯಾಂಶವನ್ನು ಗ್ರಹಿಸಿ ವಿಶಾಲ ನೀತಿಯನ್ನವಲಂಬಿಸುವರೆಂದು ನಿರೀಕ್ಷಿಸುತ್ತೇವೆ

ಒಳದೇಶದ ವೃತ್ತಾಂತಗಳು

ಇರ್ವಿನ್ ನಾಲಾ ಕೆಳಗಿನ ಕ್ಷೇತ್ರಗಳ ಕಷ್ಟನಷ್ಟಗಳನ್ನು ಕಣ್ಣಾರ ನೋಡಿ ತಿಳಿಯಲು ದಿವಾನರು ತಮ್ಮ ಪ್ರೈವೇಟ್ ಸೆಕ್ರೆಟರಿಯವರೊಡನೆ ಈ ತಾ|| 7 ರಲ್ಲಿ ಮಂಡ್ಯದ ತಾಲ್ಲೂಕು ಸಂಚಾರ ಹೊರಡುವರು.

ಕಳೆದ ಗುರುವಾರ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರ ಚುನಾವಣೆಗಾಗಿ ನಡೆದ ಸ್ಪೆಷಲ್ ಮೀಟಿಂಗಿನಲ್ಲಿ ಅಭ್ಯರ್ಥಿಗಳಾಗಿದ್ದ ಇಬ್ಬರಲ್ಲಿ ಮ|| ಎಂ ಬಾಲಕೃಷ್ಣಯ್ಯನವರು ತಮ್ಮ ಅಭ್ಯರ್ಥಿತ್ವವನ್ನು ಹಿಂದಕ್ಕೆ ತೆಗೆದುಕೊಂಡುದರಿಂದ ಮ|| ಎ ಕೆ ಗರುಡಾಚಾರರು ಪ್ರತಿಸ್ಪರ್ಧೆಯಿಲ್ಲದೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಫೈನಾನ್ಸಿಯಲ್ ಸೆಕ್ರೆಟರಿಯವರಾಗಿದ್ದ ಮ|| ಬಿ. ಶ್ರೀನಿವಾಸಯ್ಯಂಗಾರರು ಈ ತಾ|| 1 ರಲ್ಲಿ ಉದ್ಯೋಗದಿಂದ ನಿವೃತ್ತರಾದರು ಇವರ ಬದಲು ಕಂಟ್ರೋಲರಾದ ಮ|| ಎಸ್ ಶಾಮಣ್ಣನವರು ಫೈನಾನ್ಸಿಯಲ್ ಸೆಕ್ರೆಟರಿಯವರಾಗಿಯೂ, ಸನ್ನನ್ ಸೂಪರಿಂಟೆಂಡೆಂಟರವರಾದ ಮ|| ಎಚ್. ವೆಂಕಟೇಶಯ್ಯಂಗಾರರು ಕಂಟ್ರೋಲರಾಗಿಯೂ ನಿಯಮಿಸಲ್ಪಟ್ಟಿರು ಸಲ್ಲದೆ ಮ|| ಎ ಶ್ರೀನಿವಾಸಯ್ಯಂಗಾರರು ವ್ಯಯಕರ್ತನ ಕಮಿಟಿಯವರ ಸೂಚನೆಯ ಪ್ರಕಾರ ಯಾವ್ಯಾವ ಶಾಖೆಯಲ್ಲಿ ಎಷ್ಟೆಷ್ಟು ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವೆಂಬುದನ್ನು ಗೊತ್ತುಮಾಡಲು 2 ತಿಂಗಳ ವರೆಗೆ ಸ್ಪೆಷಲ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು ಈ ಹೊಸ ಉದ್ಯೋಗವು ೨ ತಿಂಗಳಲ್ಲಿಯೇ ಮುಗಿಯುವಂತೆ ತೋರುವುದಿಲ್ಲವಾದುದರಿಂದ ಕಾಲಾವಧಿಯು ಹೆಚ್ಚಿಸಲ್ಪಡುವುದು

ಈಗ್ಗೆ [illegible] ಮೇಗೆ ಹೋಗಿ ಮುದ್ರಣ ಕಲೆಯಲ್ಲಿ ಹೊಸ ಸೂತ್ರಗಳನ್ನು ಸೂಚಿಸಿ ದೊಡ್ಡ ಪ್ರಶಸ್ತಿಗಳನ್ನೂ ಪದಕಗಳನ್ನೂ ಪಡೆದುಕೊಂಡು ಹಿಂದಿರುಗಿ ಬಂದಿರುವ ಗೌರ್ನಮೆಂಟು ಪ್ರೆಸ್ಸಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ|| ಬಿ ಕೃಷ್ಣಸ್ವಾಮಿಶೆಟ್ಟಿ ಬಿ ಇ, ಯವರಿಗೆ ಈ ಜುಲೈ ತಾ|| 1 ರಿಂದ 3 ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದು ಬೆಂಗಳೂರು ರಾಜಧಾನಿಯ ವೈಶ್ಯ ಸಮಾಜದವರು ಮಾಡಿದ ಪುನರಾಗಮನ ಸತ್ಕಾರ ಸಂಬಂಧವಾದ ಪತ್ರವ್ಯವಹಾರವು ಬೇರೆ ಕಡೆ ಮುದ್ರಿಸಲ್ಪಟ್ಟಿದೆ ಇವರು ಈಗ ಪ್ರೆಸ್ಸಿನ ಸೂಪರಿಂಟೆಂಡೆಂಟರಾಗಿರುವ ಮ|| ಪಿ ಪುಟ್ಟಯ್ಯನವರಂತೆ ತಮ್ಮ ವಿದ್ಯಾಸಂಪತ್ತನ್ನು ಪ್ರದರ್ಶಿಸಿ ಮತ್ತು ಕೈಕೆಳಗಿನ ಕೆಲಸಗಾರರನ್ನು ಪ್ರೀತಿಯಿಂದಲೂ ಕರುಣೆಯಿಂದಲೂ ಕಂಡು ಕೀರ್ತಿಯನ್ನು ಹೊಂದುವವರಾಗಲೆಂದು ಆಶಿಸುತ್ತೇವೆ.

ಮೈಸೂರು ರೈಲ್ವೆಯಲ್ಲಿ, ಬೆಂಗಳೂರಿನಿಂದ ಚನ್ನಪಟ್ಟಣಕ್ಕೂ ಚನ್ನಪಟ್ಟಣದಿಂದ ಬೆಂಗಳೂರಿಗೂ ಹೋಗಿಬರುವ 73, 74, 71 ಮತ್ತು 76 ನೇ ನಂಬರ್ ಷಟಲ್ ಗಾಡಿಗಳಲ್ಲಿಯೂ ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೂ, ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೂ ಹೋಗಿ ಬರುವ 36, 36, 77 ಮತ್ತು 78 ಷಟಲ್ ರೈಲ್ ಗಾಡಿಗಳಲ್ಲಿ ಪ್ರಯಾಣ ಮಾಡತಕ್ಕವರುಗಳ ಅನುಕೂಲಕ್ಕಾಗಿ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ನಿಂದ ಊರೊಳಕ್ಕೂ ಊರೊಳಗಿನಿಂದ ಬೆಂಗಳೂರು ಸಿಟಿ ಸ್ಟೇಷನ್ನಿಗೂ, ಮೇಲೆ ನಮೂದಿಸಿರುವ ಎಲ್ಲಾ ಗಾಡಿಗಳೂ ಸಿಟಿ ಸ್ಟೇಷನ್ನಿಗೆ ಸಕಾಲಕ್ಕೆ ಬೆಂಗಳೂರು ಸಿಟಿ ಬಸ್ಸು ಸರ್ವಿಸಿನವರ ಬಸ್ಸುಗಳು ಬರುವಂತೆ ಏರ್ಪಾಟು ಮಾಡಿರುತ್ತಾರೆ ಈ ಬಸ್ಸುಗಳಲ್ಲಿ ಪ್ರಯಾಣ ಮಾಡುವವರು ಹಾಲಿ ಚಾಲತಿಯಲ್ಲಿರತಕ್ಕ ಬಸ್ಸು ಚಾರ್ಜುಗಳನ್ನು ಕೊಡಬೇಕು ಎಂದು ಟ್ರಾಫಿಕ್ ಮ್ಯಾನೇಜರು ಪ್ರಕಟಿಸಿರುತ್ತಾರೆ.

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ಡಿನ ವಾರ್ಷಿಕೋತ್ಸವವು ಕಳೆದ ತಾ|| ೨೦ ನೆಯ ಭಾನುವಾರ ಲಕ್ಷ್ಮೀಥಿಯೇಟರಿನಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯ್ಯರವರ ಅಧ್ಯಕ್ಷತೆಯಲ್ಲಿ ಜರುಗಿತಲ್ಲದೆ, ಈ ಸೊಸೈಟಿಯ ಮೊದಲನೇ ಪ್ರೆಸಿಡೆಂಟರಾಗಿದ್ದ ಮ|| ಸಾಹುಕಾರ್ ಚೆಟ್ಟಿಪ್ಪ ಸಿದ್ದಪ್ಪನವರ ಭಾವಚಿತ್ರದ ಅನಾವರಣೋತ್ಸವವು ಸೊಸೈಟಿ ಮಂದಿರದಲ್ಲಿ ಮ|| ಟಿ. ಜಿ. ರಾಮಯ್ಯರಿಂದಲೇ ನೆರವೇರಿಸಲ್ಪಟ್ಟಿತು. ಈ ಉತ್ಸವಗಳಿಗೆ ಅಧಿಕಾರಿಗಳೂ ಸೊಸೈಟಿಯ ಮೆಂಬರುಗಳೂ ಆಹ್ವಾನಿಸಲ್ಪಟ್ಟಿದ್ದು ಸಂಗೀತಶ್ರವಣದಿಂದಲೂ ತಾಂಬೂಲ ವಿನಿಯೋಗದಿಂದಲೂ ಸತ್ಕರಿಸಲ್ಪಟ್ಟರು. ಮ|| ಚೆಟ್ಟಿಪ್ಪ ಸಿದ್ದಪ್ಪನವರು ಸೊಸೈಟಿಯ ಪ್ರೆಸಿಡೆಂಟರಾಗಿದ್ದು ದಕ್ಷತೆಯಿಂದ ಕಾರ್ಯವನ್ನು ನಿರ್ವಹಿಸಿ ಸೊಸೈಟಿಯನ್ನು ಅಭಿವೃದ್ಧಿಗೆ ತಂದು ಮೆಂಬರುಗಳ ಗೌರವಕ್ಕೆ ಪಾತ್ರರಾದುದು ಸಂತೋಷಪ್ರದವು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಟಿ. ಕೇಶವಯ್ಯಂಗಾರ್ಯರು ಈ ತಾ|| 11 ರಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವುದರಿಂದ ಖಾಲಿಯಾದ ಆ ಸ್ಥಾನಕ್ಕೆ ಮ|| ಟಿ. ಕೇಶವಯ್ಯಂಗಾರ್ಯರು ಅಧ್ಯಕ್ಷರಾಗಿದ್ದರು. ಶ್ರೀ ಸಿ. ಪಿ. ವೆಂಕಟರಾಮಯ್ಯ ಅವರು ಪ್ರೆಸಿಡೆಂಟರಾಗಿ ನೇಮಕರಾಗಿದ್ದಾರೆ. ಮ|| ಕೇಶವಯ್ಯಂಗಾರ್ಯರು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಾಗಿದ್ದು ಗತಿಸಿದ ಬಿ. ತಿರುಮಲಾಚಾರ್ಯರ ಕುಮಾರರು ಮತ್ತು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಕಮಿಷನರರಾಗಿಯೂ, ಅನಂತರ ಡೆಪ್ಯುಟಿ ಕಮಿಷನರರಾಗಿಯೂ ಕೆಲಸ ಮಾಡಿ ಮ್ಯುನಿಸಿಪಾಲ್ ಆಡಳಿತವನ್ನು ಚೆನ್ನಾಗಿ ತಿಳಿದವರಾಗಿರುವುದರಿಂದ ಇವರು ಜನಗಳ ಸರಸಿಗರಾಗಿಯೂ ನಿಗರ್ವಿಗಳಾಗಿಯೂ ಸ್ನೇಹಪರರಾಗಿಯೂ ಇರುವುದರಿಂದ ಇವರ ಆಡಳಿತದಲ್ಲಿ ರಾಜಧಾನಿಯ ಮ್ಯುನಿಸಿಪಲ್ ಆಡಳಿತವು ಸುವ್ಯವಸ್ಥಿತವಾಗಿಯೂ ರೈಟ್ ಪೇಯರುಗಳಿಗೆ ಹಿತಕರವಾಗಿಯೂ ನಡೆಯುವುದೆಂದು ನಿರೀಕ್ಷಿಸುತ್ತೇವೆ.

ಕಳೆದ ಮಂಗಳವಾರ ರಾತ್ರಿ ... ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಮೀಟಿಂಗು ನಡೆಯಿತು. ... ಆಸ್ಪತ್ರೆಯ ಕಟ್ಟಡವನ್ನು ... ರೋಡಿನಲ್ಲಿರುವ ... ರೂ ಗಳ ವೆಚ್ಚದಿಂದ ಕಟ್ಟಲು ನಿರ್ಧರಿಸಲ್ಪಟ್ಟಿತು. ... ತೋಟದಲ್ಲಿ ಅಂದರೆ ಈಗ ... ಗುಡಿಯ ದಕ್ಷಿಣಭಾಗದಲ್ಲಿ ... ಕಾರ್ಯಾರ್ಥವಾಗಿ ಬಿಟ್ಟಿರುವ ಬೈಲು ಪ್ರದೇಶವನ್ನು ಉಚಿತವಾಗಿ ಅದಕ್ಕೆ ಬಳಸಿಕೊಳ್ಳಲು ... ರೂ ವೆಚ್ಚಮಾಡಿ ಸುಂದರವಾದ ... ಛತ್ರವನ್ನು ಕಟ್ಟಿಸಿಕೊಡುತ್ತೇನೆಂದು ... ಕಂಟ್ರಾಕ್ಟರ್ ಮ|| ತಿಮ್ಮಯ್ಯನವರು ಕೇಳಿದ್ದುದರಿಂದ ಆ ಕಾರ್ಯಾರ್ಥವಾಗಿ ಮತ್ತೊಂದು ಪ್ರದೇಶವನ್ನು ಕಟ್ಟಿಸುವುದರ ವೆಚ್ಚಕ್ಕಾಗಿ ೩,೦೦೦ ರೂ ಗಳನ್ನು ಕೊಟ್ಟು ಛತ್ರವನ್ನು ಮ್ಯುನಿಸಿಪಾಲಿಟಿಯವರ ಆಡಳಿತಕ್ಕೆ ಬಿಟ್ಟುಕೊಡಲೊಪ್ಪಿದಲ್ಲಿ ಆ ಪ್ರದೇಶವು ಉಚಿತವಾಗಿ ಕೊಡಲ್ಪಡುವುದೆಂದು ನಿರ್ಧರಿಸಲ್ಪಟ್ಟಿತು. ಮೀಟಿಂಗಿನಲ್ಲಿ ಇದ್ದ ಮ|| ತಿಮ್ಮಯ್ಯನವರು ಅದಕ್ಕೊಪ್ಪಿಕೊಂಡರು. ಮೈಸೂರು ಮಿಷನ್ ಸಂಘದವರು ಕೋಡಿನಲ್ಲಿರುವ ಕ್ರೈಸ್ತರ ಗುಡಿ ಪಕ್ಕದ ಖಾಲಿ ... ಕಾನ್ವೆಂಟ್ ಗರ್ಲ್ಸ್ ಸ್ಕೂಲನ್ನು ಕಟ್ಟುವುದಕ್ಕಾಗಿ ಪಾದರಿ ... ಗುಂಟೆ 1 ಕ್ಕೆ 3 ಆಣೆಯಂತೆ ಪಕ್ಕದಲ್ಲಿ ... ಕೊಡಲು ನಿರ್ಧಾರವಾಯಿತು.

ಕಲಗ್ರಾಮಗಳಿಗೆ ೫೦೦೦ ರೂ ದಂಡ

ಚಿಟಗಾಂಗ್ ಡಿಸ್ಟ್ರಿಕ್ಟಿನಲ್ಲಿ ಕೆಲ ಗ್ರಾಮಸ್ಥರು ಶಾಸನೋಲ್ಲಂಘನಪಂಡ ಚಳುವಳಿಯನ್ನು ಮಾಡುತ್ತಲೂ ... ರೀತಿ ಆಚರಿಸಲು ಜನರಿಗೆ ಬೋಧಿಸುತ್ತಲೂ ಇರುವುದರಿಂದ ಅವರುಗಳಿಗೆ ಬಂಗಾಳ ಗೌರ್ನರು 5000 ರೂಪಾಯಿಗಳ ದಂಡವನ್ನು ವಿಧಿಸಿರುವರು.

ಕಾಂಗ್ರೆಸ್ ಮಹಾ ಸಭಾಧ್ಯಕ್ಷರು

ಅಖಿಲಭಾರತ ಕಾಂಗ್ರೆಸ್ ಮಹಾ ಸಭಾಧ್ಯಕ್ಷರಾಗಿದ್ದ ಮ|| ಗಂಗಾಧರರಾವ್ ದೇಶಪಾಂಡೆಯವರು ಶಿಕ್ಷಿಸಲ್ಪಟ್ಟಿದ್ದರಿಂದ ಅವರ ಬದಲು ಡೆಲ್ಲಿ ... ವಕೀಲರಾದ ಡಾಕ್ಟರ್ ಕಿಚಲುಯವರು ಮಹಾ ಸಭಾಧ್ಯಕ್ಷರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಸಭ್ಯಾದಲ್ಲಿ ೧೦೦೦ ಸೆರೆ

ಕೈರಾ ಡಿಸ್ಟ್ರಿಕ್ಟು ಕಾನ್ಫರೆನ್ಸನ್ನು ನಡ್ಯಾದಲ್ಲಿ ನಡೆಸಲು ಪ್ರಯತ್ನಿಸಲ್ಪಟ್ಟಿತ್ತು. ಈ ಸಭೆ ಸೇರುವುದನ್ನು ... ಜನರನ್ನು ಪೋಲೀಸಿನವರು ರೈಲ್ವೇ ಸ್ಟೇಷನ್ನುಗಳಲ್ಲಿ ಕಾವಲಿದ್ದು ತಡೆದು ನಿಲ್ಲಿಸಿದ್ದಲ್ಲದೆ 1000 ಜನರವರೆಗೆ ಸೆರೆ ಹಿಡಿದಿರುತ್ತಾರೆ. ಪ್ರಭಾತಭೇರಿಯಲ್ಲಿ ಭಾಗಿಗಳಾಗಿದ್ದ ಸ್ತ್ರೀಯರು ಸಹ ಸೆರೆಹಿಡಿಯಲ್ಪಟ್ಟಿರುವರು.

ಡಾಕ್ಟರ್ ಅನ್ಸಾರಿಯವರ ದೇಹಸ್ಥಿತಿ

ಈಗ ಕಾರಾಗೃಹ ಬಂಧನದಲ್ಲಿರುವ ಡಾಕ್ಟರ್ ಅನ್ಸಾರಿಯವರು ಈ ತಾ|| 7ರಲ್ಲಿ ಬಿಡಲ್ಪಡುವರು. ಇವರಿಗೆ ಕಾರಾಗೃಹ ಬಂಧನವಾದ ಮೇಲೆ ದುಂಡಿಯ ನೋವು ಪ್ರಬಲವಾಗಿ ದೇಹಸ್ಥಿತಿಯು ಬಹಳಮಟ್ಟಿಗೆ ಕೆಟ್ಟುಹೋಗಿರುವ ಪ್ರಯುಕ್ತ ಸಮರ್ಥರಾದ ವೈದ್ಯರಿಂದ ಚಿಕಿತ್ಸೆಯನ್ನು ಪಡೆಯಲು ಇವರು ಕೂಡಲೆ ಯುರೋಪಿಗೆ ಪ್ರಯಾಣಮಾಡುವುದಾಗಿ ತಿಳಿಯಬರುತ್ತದೆ.

ಚುನಾವಣೆಯಲ್ಲಿ ಬಡಿದಾಟ

ಮಸಲಿಪಟ್ಟಣ ಡಿ|| ಗೆ ಸೇರಿದ ಘಂಟಸಲಪಳಂ ಎಂಬೂರಿನಲ್ಲಿ ಯೂನಿಯನ್ ಬೋರ್ಡು ಮೆಂಬರುಗಳ ಚುನಾವಣೆಯು ನಡೆಯುವಾಗ್ಗೆ ಅಭ್ಯರ್ಥಿಗಳ ಕಡೆಯವರಿಗೆ ಹೋರಾಟ ಬಡಿದಾಟ ನಡೆದು 25 ಮಂದಿಗೆ ಗಾಯಗಳಾಗಿ ಕೆಲರು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಹೊಂದುತ್ತಿರುವರು. ಇದೇ ರೀತಿ ಚಿನ್ನಮುತ್ತೂರು ಎಂಬಲ್ಲಿ ಬಡಿದಾಟವಾಗಿ 15 ಮಂದಿಗೆ ಗಾಯಗಳಾಗಿರುತ್ತವೆ.

ರೋಡಿನ ... ಜನಗಳ ಗತಿ

ಹಿಂದು ... ಮಹಿಳೆಯರಿಗೆ ... ಈ ದೇಶದಲ್ಲಿ ... ಪಟ್ಟಣಗಳ ... ತಾವು ... ಹಾಗೂ ... ದೇವಸ್ಥಾನಗಳಲ್ಲಿ ... ಸಂದರ್ಭದಲ್ಲಿ ಛಾಯಾ ಚಿತ್ರ (ಫೋಟೋ) ಗಳನ್ನು ತೆಗೆಯಬಾರದು ಎಂದು ಗೊತ್ತುಮಾಡಲ್ಪಟ್ಟಿದೆ.

ರೈಲು ಬಂಡಿಯಿಂದ ಸ್ತ್ರೀ ಹೊರಗೆಸೆಯಲ್ಪಟ್ಟಳು

ವಿತರಿಸೀನು ಸಂಸ್ಥಾನದ ಒಬ್ಬ ಇಂಜನಿಯರ ಹೆಂಡತಿಯು ರೈಲ್ವೆ ಬಂಡಿಯ ಎರಡನೇ ತರಗತಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ರಾಜಪುರ ಹತ್ತಿರ ಯಾರಿಂದಲೋ ಬಂಡಿಯಿಂದ ಹೊರಗೆ ಬಿಸಾಡಲ್ಪಟ್ಟಿದ್ದು ಕಂಬಗಳ ಬಳಿ ಪ್ರಾಣನಷ್ಟ ಬದ್ದಿದ್ದಳು. ... ಯಾರೋ ಕಂಡು ಆಕೆಯನ್ನು ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಆಕೆಯು ಮೃತಳಾದಳು. ಆಕೆಯು ಪ್ರಯಾಣಮಾಡಿದ ಬಂಡಿಯಿಂದ ಸಾಮಾನನ್ನು ಕೊಂಡ್ಕೆ ಸಾಗಿಸಿದ ... ಸೆರೆಹಿಡಿಯಲ್ಪಟ್ಟಿರುತ್ತಾನೆ.

ಪತ್ರದ ಜೊತೆಯಲ್ಲಿ ಕಾಗದದ ಹೊತ್ತಿಕೊಂಡುದು

ಡಿಲ್ಲಿಯ ಪೋಸ್ಟಾಫೀಸಿನಲ್ಲಿ ಕಾಗದಗಳಿಗೆ ಒಬ್ಬನು ಮುದ್ರೆಯೊತ್ತುತ್ತಿರುವಾಗ್ಗೆ ಒಂದು ಕಾಗದವು ಭುಗಿಲ್ಲೆಂದು ಹೊತ್ತಿಕೊಂಡಿತು. ಅದರಿಂದ ಮುದ್ರೆಯನ್ನೊತ್ತುವವನ ಕೈ ಸುಟ್ಟುಹೋಯಿತಾದರೂ ಅವನು ಕಾಗದವನ್ನು ಕೂಡಲೆ ಕೆಳಕ್ಕೆ ಬಿಸಾಡಿದುದರಿಂದ ಇತರ ಕಾಗದಗಳು ಹೊತ್ತಿಕೊಳ್ಳಲವಕಾಶವಾಗಲಿಲ್ಲ. ಇಂದಿನೊಂದಾವರ್ತಿ ಇದೇ ರೀತಿಯಾಗಿದ್ದಿತು. ಈ ಕೃತ್ಯಮಾಡುವವರನ್ನು ಹಿಡಿದುಕೊಟ್ಟಲ್ಲಿ 100 ರೂ ಬಹುಮಾನಕೊಡುವುದಾಗಿ ಪೋಲೀಸು ಕಮಿಷನರು ಪ್ರಕಟಿಸಿದ್ದಾರೆ.

ದೇಶಪಾಂಡೆಯವರ ಶಿಕ್ಷೆ

ಎಮರ್ಜನ್ಸಿ ಪವರ್ ಆರ್ಡಿನೆನ್ಸಿನ ಪ್ರಕಾರ ಕಳೆದ ತಾ|| 19ರಲ್ಲಿ ಸೆರೆ ಹಿಡಿಯಲ್ಪಟ್ಟ ಅಖಿಲ ಭಾರತ ಕಾಂಗ್ರೆಸ್ ಸಂಘಾಧ್ಯಕ್ಷರಾದ ಮ|| ಗಂಗಾಧರರಾವ್ ದೇಶಪಾಂಡೆಯವರು ತಾ|| 28ರಲ್ಲಿ ಸೆರೆಯಿಂದ ಬಿಡಲ್ಪಟ್ಟು ಕೂಡಲೆ ಊರಿಗೆ ಹೋಗಬೇಕೆಂದೂ, ಪೋಲೀಸಿನವರಲ್ಲಿಗೆ ಪ್ರತಿದಿನವೂ ಹಾಜರಿಕೊಡಬೇಕೆಂದೂ, ಇನ್ನು ಮೇಲೆ ಶಾಸನೋಲ್ಲಂಘನ ಕಾರ್ಯಗಳಲ್ಲಿ ಸೇರಕೂಡದೆಂದೂ ಡಿಸ್ಟ್ರಿಕ್ಟು ಮೆಜಿಸ್ಟ್ರೇಟವರು ಅಪ್ಪಣೆ ಮಾಡಿದ್ದರು. ಆದರೆ ದೇಶಪಾಂಡೆಯವರು ಆ ರೀತಿ ನಡೆಯಲಿಲ್ಲವಾಗಿ 1 ವರ್ಷ ಕಠಿಣ ಸಜ ಮತ್ತು 300 ರೂ ಜುಲ್ಮಾನೆ ವಿಧಿಸಲ್ಪಟ್ಟರು.

ಸ್ಪೆಷಲ್ ಮೆಜಿಸ್ಟ್ರೇಟರ ಕೊಲೆ

ಚಿತ್ತಗಾಂಗಿನ ಸ್ಪೆಷಲ್ ಮೆಜಿಸ್ಟ್ರೇಟರಾದ ಕಾಮಾಖ್ಯ ಪ್ರಸಾದಸೇನರು ಹಾಗೂ ಸಬ್ ಡಿಪ್ಯುಟಿ ಕಲೆಕ್ಟರಾದ ಮ|| ... ಅವರ ಮನೆಗೆ ಬಂದಿದ್ದರು. ... ತಾ|| 27 ನೆಯ ರಾತ್ರಿ ಕಾಮಾಖ್ಯಪ್ರಸಾದರು ಮಲಗಿಕೊಂಡಿರುವಾಗ್ಗೆ ಯಾರೋ ಅಪರಿಚಿತರು ಕಿಟಕಿಯ ಮೂಲಕ 6 ಗುಂಡುಗಳನ್ನು ಹೊಡೆದು ... ಗುಂಡಿನ ಪೆಟ್ಟನ್ನು ... ಮರಣ ಹೊಂದಿದ ... ಕಾಮಾಖ್ಯರ ... ಪೋಲೀಸರು ... ಹಂತಕರನ್ನು ಹುಡುಕುತ್ತಿದ್ದಾರೆ.

ಜವಹಾರಿಲಾಲರ ಬಿಡುಗಡೆಯ ನಿರಾಕರಣೆ

ಪಂಡಿತ ಜವಹಾರಿಲಾಲನೆಹರುರವರಿಗೆ ಜೈಲಿನಲ್ಲಿ ... ಗಳನ್ನು ನೋಡಲಿಕ್ಕೆ ಕಲ್ಪಿಸಿದ್ದ ಅವಕಾಶವನ್ನು ಪ್ರಭುತ್ವದವರು ನಿರಾಕರಿಸಿದರು. ಅವರ ತಾಯಿಯೂ ಪತ್ನಿಯೂ ಕುಮಾರಿ ... ಆನಂದ ಭವನವನ್ನು ... ನೋಡಲ್ಪಡಬೇಕೆಂದು ... ಹಿಂದಿರುಗಿ ಬಂದು ... ರಾಜಕೀಯ ಪರಿಸ್ಥಿತಿಯನ್ನು ... ದವರು ಅವರೊಡನೆ ಉತ್ತರ ಪ್ರತ್ಯುತ್ತರವನ್ನು ನಡೆಸುತ್ತಿರುವುದಾಗಿಯೂ ಆ ರಹಸ್ಯವು ಹೊರಪಡಬಾರದೆಂದು ... ದಿಂದ ಸಂದರ್ಶನವು ನಿರಾಕರಿಸಲ್ಪಟ್ಟಿದಾಗಿಯೂ ತಿಳಿಯಬರುತ್ತದೆ.

ಸ್ತ್ರೀಮೇಲೆ ಉಗುಳಿ ಶಿಕ್ಷೆ ಹೊಂದಿದವನು

ಮದ್ರಾಸಿನ ಒಂದು ಬೀದಿಯ ಕಾಲುದಾರಿಯಲ್ಲಿ ಒಬ್ಬ ಮನುಷ್ಯನು ನಡೆದುಕೊಂಡು ಹೋಗುತ್ತಿರುವಾಗ್ಗೆ ಸಗ್ಗದಲ್ಲಿ ಬರುತ್ತಿದ್ದ ಸ್ತ್ರೀಯರಲ್ಲಿ ಒಬ್ಬಳು ಅವನಮೇಲೆ ಉಗುಳಿದನು. ಆಗ ಉಗಿದ ಮನುಷ್ಯನ ... ಹೋಲೀಸಿನಲ್ಲಿ ... ಬೇಕೆಂದು ... ಉಗುಳಿದ ... ಸುವವರಂತೆ ನಟಿಸಿ ... ಬಟ್ಟೆಯನ್ನು ತೊಳೆಯುವಾಗ್ಗೆ ... ಅವನ ಮೇಲಿದ್ದ 61 ರೂ ನ ... ಪ್ರಯತ್ನಿಸಿದನು. ... ಮರೂ ... ಆಗ ಆ ಮನುಷ್ಯನು ... ಕೊಳ್ಳಲು ಪೋಲೀಸರು ... ಸ್ತ್ರೀಯರನ್ನು ಹಿಡಿದು ಅವರಲ್ಲಿದ್ದ ಸ್ವಲ್ಪ ಹಣವನ್ನು ವಶಪಡಿಸಿಕೊಂಡರು.

ಸ್ತ್ರೀಯ ಮೇಲೆ ... ಸುದ್ದಿ

ಅಪಾಯಕರ ಸರ್ಪಗಳು

ರಕ್ತದ ... ಓಡಿ ... ಮಕ್ಕಳು ... ಹೋಗುತ್ತಿರುವಾಗ್ಗೆ ... ನಡೆಯಿತು. ... ಮೇಲಿನ ... ರುವ ವಿಷದ ಹಾವುಗಳಿಂದ ... ಮಾರಲ್ಪಟ್ಟಿದ್ದು ಗುಣ ಹೊಂದಿದ ವ್ಯಕ್ತಿಯಾದರು. ಈ ಹಾವುಗಳು ಒಂದು ನೂರು ಅಡಿ ... ಮಹಾ ವಿಷಕರವಾಗಿರುವವಲ್ಲದೆ ನೀರಿನ ಮೇಲೆ 4 ಅಡಿ ಎತ್ತರಕ್ಕೆ ಹಾರಿ ದೋಣಿಯಲ್ಲಿ ಸಂಚರಿಸುವ ಜನರನ್ನು ಕಚ್ಚುತ್ತವೆ. ಇವುಗಳ ಕಾಟಕ್ಕಾಗಿ ಆ ಸ್ಥಳದಲ್ಲಿ ಯಾರೂ ಸ್ನಾನ ಮಾಡದಂತೆ ಎಚ್ಚರಿಸಲು ಪೋಲೀಸು ಕಾವಲಿಡಲ್ಪಟ್ಟಿರುವುದು.

ಲೋಥಿಯನ್‌ರವರ ಅಭಿಪ್ರಾಯ ಸನ್ಯಾಸ

'ಹಿಂದೆ ಇಂಡಿಯಾದ ಸಹಾಯ ಮಂತ್ರಿಯಾಗಿ ಇಂಡಿಯಾಕ್ಕೆ ಹೋಗಿದ್ದಾಗ್ಗೆ ನೀವು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಕುರಿತು ಮುಂದಾಗಿ ಇಂಡಿಯಾ ಮಂತ್ರಿಗಳ ಮತ್ತು ವೈಸ್‌ರಾಯರ ಅನುಮತಿಯನ್ನು ಪಡೆದಿದ್ದಿರಾ' ಎಂದು ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಲಾರ್ಡ್ ... ಪ್ರಶ್ನಿಸಿದರು. ಅದಕ್ಕೆ "ನಾನು ಇಂಡಿಯಾಕ್ಕೆ ಹೋಗುವುದಕ್ಕೆ ಮೊದಲೇ ಇಂಡಿಯಾ ಸಹಾಯ ಮಂತ್ರಿ ಪದವಿಯನ್ನು ಶಾಶ್ವತವಾಗಿ ಬಿಟ್ಟುಕೊಟ್ಟೆನು. ಆದುದರಿಂದ ನಾನು ಇಂಡಿಯಾದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವೆಲ್ಲವೂ ನನ್ನ ಸ್ವಂತವಲ್ಲದೆ ಸ್ಟೇಟು ಸೆಕ್ರೆಟರಿಯವರ ಅಥವಾ ವೈಸ್‌ರಾಯರ ಪ್ರತಿನಿಧಿಯಾಗಿ ತಿಳಿಸಿದ ಅಭಿಪ್ರಾಯವಲ್ಲ" ಎಂದು ಲಾರ್ಡ್ ಲೋಥಿಯನ್ ರವರು ಉತ್ತರವನ್ನು ಕೊಟ್ಟರು.

ಬರ್ಲಿನ್ನಿನಲ್ಲಿ ಲಂಚ ಕಲ್ಪನೆಗಳಿಗಾಗಿ ಕಠಿಣಶಿಕ್ಷೆ

ಜರ್ಮನಿಯ ರಾಜಧಾನಿಯಾದ ಬರ್ಲಿನ್ ಪಟ್ಟಣದ ಮ್ಯುನಿಸಿಪಾಲಿಟಿಯ ಕೆಲಸಗಾರರಿಗೆ ಉಡುಪುಗಳನ್ನೊದಗಿಸಲು ಕಂಟ್ರಾಕ್ಟನ್ನು ತೆಗೆದುಕೊಂಡಿದ್ದ ಮೂವರು ಸಹೋದರರು ಆಫೀಸಿನ ಕೆಲಸಗಾರರನ್ನು ವಶಪಡಿಸಿಕೊಂಡು ಠಕ್ಕನೆ, ಮೋಸ ಮೊದಲಾದ ಕೃತ್ಯಗಳನ್ನು ನಡೆಸಿ ಮ್ಯುನಿಸಿಪಲ್ ಬ್ಯಾಂಕಿನಿಂದ ಲಕ್ಷಾಂತರ ರೂಪಾಯಿಗಳ ಸಂಪಾದನೆಮಾಡಿ ಕುದುರೆ ಜೂಜಿಗಾಗಿ ಬೇಕಾದಷ್ಟು ದ್ರವ್ಯವನ್ನು ವೆಚ್ಚಮಾಡಿ ಜರ್ಮನಿಯಲ್ಲೆಲ್ಲ ಬಹಳ ಪ್ರಖ್ಯಾತರಾಗಿದ್ದರು. ಕಡೆಯಲ್ಲಿ ಇವರ ಮೋಸವು ಹೊರಪಟ್ಟು ಮೆಜಿಸ್ಟ್ರೇಟರಲ್ಲಿ ಕಳೆದ 32 ತಿಂಗಳಿಂದಲೂ ವಿಚಾರಣೆ ನಡೆದು ಇಬ್ಬರು ಸಹೋದರರಿಗೆ 4 ವರ್ಷ ಅತ್ಯಂತ ಕಠಿಣ ಸಜವೂ ಇವರಿಗೆ ಸಹಾಯಕರಾಗಿದ್ದ ಉದ್ಯೋಗಸ್ಥರಿಗೆ 3 ರಿಂದ 18 ತಿಂಗಳವರೆಗೆ ಸಜವೂ ವಿಧಿಸಲ್ಪಟ್ಟಿತು. ಮೂರನೆಯ ಸಹೋದರನು ಅಸ್ವಸ್ಥನಾಗಿರುವುದರಿಂದ ಅವನ ವಿಚಾರಣೆಯು ಮುಂದೆ ನಡೆಯುವುದು. ಈ ವಿವಾದದಲ್ಲಿ 600 ಮಂದಿ ಸಾಕ್ಷಿ ನುಡಿದರಂತೆ.

ಬೊಂಬಾಯಿ ದಂಗೆ

ನೂರಾರು ಜನರು ಸುಡಲು ನೂರಾರು ಜನರು ಸೆರೆಹಿಡಿಯಲ್ಪಟ್ಟದ್ದಾಗ್ಯೂ ಹಿಂದು-ಮಹಮ್ಮದೀಯರ ಕಲಹವು ಶಾಂತವಾಗದೆ ಪುನಃ ಪುನಃ ನಡೆಯುತ್ತಲೇ ಇದೆ. ಹಿಂದು-ಮಹಮ್ಮದೀಯರು ಪರಸ್ಪರ ಕತ್ತಿಗಳಿಂದ ಹೊಡೆದಾಡುವುದೂ ಗುಂಡುಗಳಿಂದ ತಿವಿದು ಕೊಲ್ಲುವುದೂ ಹೆಚ್ಚುತ್ತಿರುವುದು. ಇದರಲ್ಲಿ ಹಿಂದುಗಳಿಗೇ ವಿಶೇಷ ನಷ್ಟವಾಗುತ್ತಿದೆ. ಪೋಲೀಸಿನವರು ಯಥಾಪ್ರಕಾರ ಗುಂಡುಗಳನ್ನು ಹಾರಿಸುತ್ತಿರುವರಾದರೂ ಈ ಭಯ ಪಕ್ಷದಲ್ಲಿ ಪ್ರಾಣನಷ್ಟವಾಗುವುದರ ಹೊರತು ಮತ್ತಾವ ಪ್ರಯೋಜನವೂ ಇಲ್ಲ. ಕಲಹ ನಡೆಯುತ್ತಿರುವ ಬೀದಿಗಳಲ್ಲಿ ಅಂಗಡಿಗಳು ಮುಚ್ಚಲ್ಪಟ್ಟು ವ್ಯಾಪಾರವೂ ಜನಸಂಚಾರವೂ ನಿಂತುಹೋಗಿದೆ. ಪೋಲೀಸಿನವರೂ ಸೈನಿಕರೂ ಗುಂಡುಗಳನ್ನು ಹಾರಿಸಿ ಪ್ರಾಣನಷ್ಟವನ್ನುಂಟುಮಾಡುತ್ತಿದ್ದರೂ ಈ ಕಲಹವನ್ನು ಸಮಾಧಾನ ಪಡಿಸಲು ಏನು ಸಂಭವಿಸುತ್ತಿದ್ದರೂ ಕಲಹವು ಇನ್ನೂ ಶಾಂತವಾಗದಿರುವುದು ಅತ್ಯಂತ ಶೋಚನೀಯವಾಗಿರುವುದಲ್ಲದೆ ವ್ಯಾಪಾರದಲ್ಲೂ ಐಶ್ವರ್ಯದಲ್ಲೂ ಇಂಗ್ಲೆಂಡಿಗೆ ಲಂಡನ್ನಿನಂತಿರುವುದೆಂದು ಖ್ಯಾತಿಪಡೆದಿದ್ದ ಬೊಂಬಾಯಿ ಪಟ್ಟಣವು ನಿರ್ನಾಮವಾಗಲು ಕಾರಣವಾಗಿರುತ್ತದೆ.

ಅದ್ಭುತ ಶಕ್ತಿಯ ಯೋಗಿ

ತಿರುವಾಂಕೂರು ಸಂಸ್ಥಾನದಲ್ಲಿ ಕಾರುನಾಗಪಳ್ಳಿ ಎಂಬ ಗ್ರಾಮದ ... ಸಮುದ್ರದ ನೀರು ಗ್ರಾಮಕ್ಕೆ ... ಬಂದುದರಿಂದ ... ನೀರಿನ ಮೇಲೆ ಯೋಗಾಸನದಲ್ಲಿ ... ಒಬ್ಬ 16 ವರ್ಷ ವಯಸ್ಸಿನ ಯೋಗಿ ಮಲಗಿಕೊಂಡಿರುತ್ತಿದ್ದನು. ಅವನನ್ನು ನೀರಿನಿಂದ ಹೊರಕ್ಕೆ ಸಾಗಿಸಿ ... ಜನರು ಸಾಹಸಪಟ್ಟರೂ ಸಾಧ್ಯವಾಗಲಿಲ್ಲ. ಅದರ ಮೇಲೆ ಕಳೆದ ಎಪ್ರಿಲ್ 21 ರ ವೇಳೆಗೆ ಕೆಲ ದೋಣಿಯವರು ಆ ಯೋಗಿಯನ್ನೆತ್ತಿ ... ದೋಣಿಯಲ್ಲಿ ... ಪ್ರದೇಶಕ್ಕೆ ಸಾಗಿಸಿಕೊಂಡು ಬಂದರು. ... ಅಸ್ಪಷ್ಟವಾಗಿ ಮಾತನಾಡಿ ... ಒಂದು ನೋಟಿಕೆ ... ಕಥೆಯಲ್ಲಿ ... ಜನಗಳು ...

ಗೆಹೊಂಡು ಪಾವೇಲಿಕರೆ ಎಂಬಲ್ಲಿಗೆ ಕಲಿದುಹೊಂಡು ಹೋದರು. ಅದು [illegible] ಚಿನ್ನ ಸ್ತುವಂತೆ ಕೆಲ ವರ್ಷಗಳ ಹಿಂದೆ ಇದೇ ಕಾಗುವಾಗನಲ್ಲಿಯಲ್ಲಿ ಇನ್ನು ಬ್ಬ [illegible] "ದೇ ವ್ಯಕ್ತ ವಾಗಿ [illegible] ನೋಲೆ ಮಲಗಿಕೊಂಡಿರುತ್ತಿದ್ದನಂತೆ.

ಇಂಡಿಯಾಕ್ಕೆ ಬ್ರಿಟಿಷ್ ಪ್ರತಿನಿಧಿಗಳು ಹೋದುದ್ದು.

ಇಂಡ್ಯಾವಿಗ್ರಹಸವರ ಯೂನಿಯನ್‌ನಲ್ಲಿ ಕಳೆದ ಮಂಗಳ ವಾರ ನಾಲ್ಯುಜ್ಜನ ಪಾರ್ಲಿಮೆಂಟು ಸಭಾಸಂಬಂಧದಲ್ಲಾಗಿ ಜಾರ್ಜ್ ಲ್ಯಾನ್ಸ್‌ಬರಿಯವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ನಡೆ ದಿತು. ಕ್ರಿಪ್ಸ್, ಹೋಡ್ಜ್‌ಕಿನ್ಸನ್, ಬೆನ್, ಗ್ರೀನ್‌ವುಡ್, ವರಾಪ್ಸ್, ಮಾರ್ಲೆ, ಮೆನ್ನನ್, ಈಶ್ವರಯ್ಯ, ಪಾರ್ಸ್ಲ ಜೋನ್ಸ್, ಲುಕ್ ಪ್ಲಿಕ್‌ಪರ್‌ಕನ್, ರಾಯಿಡರ್‌ಕನ್ ಮೊದಲಾದವರನೇಕರು ಬಂದಿದ್ದರು "ಲೇಬರ್ ಪಕ್ಷದವರು ಪುನಃ ಅಧಿಕಾರಕ್ಕೆ ಬಂದಲ್ಲಿ ಇಂಡ್ಯಾಕ್ಕೆ ರಾಷ್ಟ್ರೀಯ ಸ್ವಪರಿ ಪಾಲನಕ್ಕಿಂತ ಅಧಿಕವಾದ ಸ್ವಪರಿಪಾಲನವು ಲಭಿಸುವುದೆಂದು ನನಗೆ ತೋರುತ್ತದೆ. ದೇಶೀಯ ಸಂಸ್ಥಾನಾಧಿಪತಿಗಳು ಸದ್ಭಾವ ವನ್ನು ತೋರಿಸದಿದ್ದರೆ ಸೆಂಟರಿನಲ್ಲಿ ಬಾಧ್ಯತೆಯನ್ನು ಕೊಡು ವುದು ಎಂದಿಗೂ ಕೊನೆ ಸಾಗುವುದಿಲ್ಲವೆಂದು ತೋರುತ್ತದೆ" ಎಂದು [illegible] ಭಾಷಣಮಾಡಿ ಇಂಡ್ಯಾಮಂತ್ರಿಯವರ ನ್ನು ತೀವ್ರವಾಗಿ ಖಂಡಿಸಿದರು. ಭಾರತದೇಶದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಳ್ಳುವುದಕ್ಕಾಗಿ ಕೆಲ ಮಂದಿ ಬ್ರಿಟಿಷ್ ಪ್ರತಿನಿಧಿಗಳನ್ನು ಇಂಡ್ಯಾಕ್ಕೆ ಕಳುಹಿಸಬೇಕೆಂದು ನಿರ್ಧರಿಸಲ್ಪಟ್ಟಿತು.

WANTED

Applications with particulars of father's name, caste, age, and examinations passed are invited so as to reach by 20th July 1932, from persons who have passed Book-keeping examination for appointment as clerk on Rs 15—1—20 with the benefits of Provident Fund and annual bonus.

M. THAMMIAH
ತಾ|| 19-7-32

ಗೃಹಕೃತ್ಯದ ನೋಟೀಸು.

ಮೈಸೂರು ಡಿಸ್ಟ್ರಿಕ್ಟ್ [illegible] ಹೋಬಳಿ [illegible] ಗ್ರಾಮದಲ್ಲಿರುವ [illegible] ಗೌಡನ ಮಗ ಬಸವೇಗೌಡನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ ನನ್ನ ತಂದೆಯಾದ [illegible] ಗೌಡನಿಗೆ ನಾನು ಒಬ್ಬನೇ ಗಂಡು ಮಗನಾಗಿ ಕುಟುಂಬದ ಆಸ್ತಿಗಳಿಗೆಲ್ಲಾ ನಾನು ವಾರಸುದಾರನಾಗಿ [illegible] [illegible]

ಬಸವೇಗೌಡನ ರುಜು

ಪತ್ರವ್ಯವಹಾರ

[illegible] ಪತ್ರವ್ಯವಹಾರಕರ ಅಭಿಪ್ರಾಯಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು [illegible] ಸಂಪಾದಕ

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ

[illegible]

ಇನಾಂದಾರರಿಗೆ ಅನುಕೂಲವೇಯುಪ

ನಮ್ಮ ಮೈಸೂರು ಘನಸರ್ಕಾರದವರು ಹಳ್ಳಿಗಾಡಿನವರ [illegible]

[illegible]

ಶ್ರೀ ಜಗದ್ಗುರು ವಿದ್ಯಾರಣ್ಯ ಚಿದ [illegible] ಪರೀಕ್ಷಾ ಫಲಿತಾಂಶ

1 [illegible]

2 [illegible]

3 [illegible] ನ್ಯಾಯಶಾಸ್ತ್ರದಲ್ಲಿ—ಗುರುಲಿಂಗದೇವರು, ಬೆಳಗಾಂವ.

4 ಇಂಗ್ಲಿಷು [illegible]

5 [illegible]

6 [illegible]

7 [illegible]

8 [illegible]

ಸಂಸ್ಕೃತವಿದ್ಯಾರ್ಥಿಗಳೂ ಶಿವಸಂಗಿಯ ಘಂಡ

[illegible]

[illegible] ಸಂಸ್ಕೃತವು ಬೇಡ [illegible]

[illegible]

ಮ|| [illegible] ಟೌನ್ ಮುನಿಸಿಪಲ್ ಪ್ರೆಸಿಡೆಂಟ್ [illegible]

ಮೈಸೂರು ಮುನಿಸಿಪಲ್ ಪ್ರೆಸಿಡೆಂಟರಾಗಿದ್ದ ಮ|| ಟಿ. ಜಿ. ರಾಮಯ್ಯಂಗಾರರು [illegible] ಕೆಲವು ತಿಂಗಳ [illegible] ಈವರು ಮುನಿಸಿಪಲ್ ಪ್ರೆಸಿಡೆಂಟರಾಗಿದ್ದ [illegible] ವರ್ಷಗಳ ಕಾಲದಲ್ಲಿ ಅನೇಕ ಪ್ರಗತಿಪರ ಕಾರ್ಯಗಳು ನಡೆದಿರುವವು [illegible] ನಗರಸಭೆಯ ಅನುಭವಿಗಳು ಹೊಸ [illegible] ಇಂಥಾ ಪ್ರಾಮಾಣಿಕರಾಗಿ ಪ್ರೆಸಿಡೆಂಟರಾಗಿದ್ದುದು ಮೈಸೂರು ಪ್ರಜೆಗಳ ಪುಣ್ಯವೆಂದು [illegible] ಈ ರಾಜಧಾನಿಯ ಅಲಂಕಾರವೇ [illegible] ಪ್ರಾರಂಭವಾದುದ್ದು [illegible] ನಮ್ಮ ವಿನಾಸರದ [illegible]

ಪಶ್ಚಿಮರ ... (ಇವರು ಪ ...) ... [illegible]

... ಪ್ರಾರಂಭವಾದ ... 30 35 ಸಾವಿರ ರೂಪಾಯಿಗಳನ್ನು ... 300—400 ರೂಪಾಯಿ ... 3100 ರೂ ... [illegible]

... ಓರ್ವ ಅಭ್ಯರ್ಥಿ [illegible]

ವೀರಶೈವ ಶಿಕ್ಷಣ ಪ್ರಚಾರಕ ಸಂಘದವರಿಗೆ ಆಮಂತ್ರಣವು.

ಅಧ್ಯಕ್ಷರಿಂದ ಸಮಸ್ತ ಸದಸ್ಯರಿಗೆ, ಈ 20 ನೆಯ ... [illegible]

ಸಿದ್ದ ಪ್ರತಿಗಳಲ್ಲಿಯೂ, ಶಾಸನಗಳಲ್ಲಿಯೂ, ... [illegible]

... 30 32 ವರ್ಷಗಳಿಂದ ... 10 ದಿವಸಗಳವರೆಗೆ ... 59 ಆಗಮಗಳು, ... [illegible]

ದೇವಸ್ಥಾನವನ್ನು ಕಟ್ಟಿಸಿ ... 1 ವಾರಿಯ ... 20 ... 29 ... 1 ... [illegible]

ವೀರಶೈವ ಪತ್ರಿಕಾಕರ್ತರಿಗೆ—ಈ ಲೇಖನವು ಸ್ವಕೀಯ ಸಮಾಜೋಪಯೋಗಿ ಆಗಿರದೆ ಮತಸ್ಪರ್ಧೆಯ ... ಪ್ರಕಟಿಸಬೇಕಾಗಿ ವಿನಂತಿ ವಿಧ್ಯಜ್ಞ ನ ವಿಧೇಯ,

ಚಂದ್ರಶೇಖರಶಾಸ್ತ್ರಿ ಬೆನ್ನೂರು ಪಗಡಿನ್ನಿ ಬೃಹನ್ಮಠಾಧಿಕಾರಿ,

ಯು ಪೋ ಕಂಪ್ಲಿ, ಜಿಲ್ಲಾ ಬಳ್ಳಾರಿ

ಬೆಂಗಳೂರು ನಗರದಲ್ಲಿರುವ ಕಲಾಮಂದಿರದಲ್ಲಿ ನಡೆದ ಕಲಾ ಪ್ರದರ್ಶನದ ಪ್ರಾರಂಭಮಹೋತ್ಸವವನ್ನು ನೆರವೇರಿಸುವಾಗ್ಗೆ ದಿವಾನ್ ರವರು ಮಾಡಿದ ಭಾಷಣ

(1932ನೆಯ ಇಸವಿ ಜುಲೈ 10ನೆಯ ತಾರೀಖು)

ಮಹಿಳೆಯರೇ ಮತ್ತು ಮಹಾಶಯರೇ —

ನಮ್ಮಲ್ಲಿ ಅನೇಕರು ರಾಜಕೀಯ ವಿಚಾರಗಳಿಂದಲೇ ತುಂಬಿಹೋಗಿರುವ ವಾತಾವರಣದಲ್ಲಿ ... ಅದಕ್ಕಿಂತಲೂ ... [illegible] ... 1910 ನೆಯ ಇಸವಿಯಲ್ಲಿ ಈ ಕಲಾಮಂದಿರವು ... [illegible]

ಮೆಚ್ಚಳಿದ್ದರೆಮನೆ ಚೆಂಡ.

ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳ ಟಿಂಡು | ಗರ್ಭಧಾರಣ ಸಂಜೀವನೀ | ಬಂಜೆತನ ಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತೆಕ್ಕೊಂಡರೆ ಪುತ್ರಪ್ರಾಪ್ತಿ ಆಗುವುದು ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ M. C 14

ಚಿತ್ರಲೇಖನವೂ, ಶಿಲ್ಪವಿದ್ಯೆಯೂ, ... [illegible]

ಗ್ರಾಣ ಕಾಲವನ್ನು ಕ್ರಮವನ್ನೂ, ಸಿಕವಾಗಿ ವಿನಿಯೋಗಿಸಬೇಕೂ ಸಹ್ಯ ಮನುಷ್ಯನೇ ಸಮಸ್ತ ಇಂದು ಸ್ವಾಂತದಿಂದ ವ್ಯಕ್ತಿಕ ಚೋದಿತ ನಿಷ್ಟಕ್ಕೆ ಮತ್ತು ಶಿವ ಜ್ಞಾನ ಕೊಡುವ ಅವನ್ನೂ ಉದ್ಯೋಗ ಪರಿಶ್ರಮದ ಅತ್ಯುಚ್ಚಗೂ ಬುಕ ಇವ ಇಂದು ಪ್ರಾಣ ಬೇಕಾಗಿರುವಂತಹ ಆ ಚಿಯ ಕಾರ್ಯಗಳವೆಲ್ಲಾ ಆಗಿದೆ ... ಸಮಾನ ಭೂಮಿಯ ... ಮಾನವ ಸ್ವಭಾವಕ್ಕೆ ಮನುಷ್ಯ ... ಅವರ ಆಟಿ ... ಸಹಾಯ ಹೊಸ್ಸನ್ನು ... ಕಾಂಡರ ... ಸ್ವಭಾವನ್ನು ... ವಿಚಿತ್ರಗಳ ... ಬೇಕಾದ ... ಆಗಿದೆ ... ಬೇಕಾದ ... ಕಾಡುವ ಮನುಷ್ಯಧರ್ಮ ದೇಹವು ಬೆಳೆಯುವುದು ಆಯಾಸಗಳ ಮತ್ತು ಅಂಗಸಾಧನೆಯ ಸಹಾಯದಿಂದ ಮನುಷ್ಯನ ಬುದ್ಧಿಯೂ ಭಾವನಾಶಕ್ತಿಯೂ ಕುದುರಿ, ವೃದ್ಧಿಹೊಂದಿ, ವಿಕಸಿತವಾಗುವುದು. ಮುಖ್ಯವಾಗಿ ಲಲಿತ ಸಾಹಿತ್ಯ ಮತ್ತು ಲಲಿತಕಲೆಗಳು ಇವು ಮನುಷ್ಯರ ಅವಲಂಬನವಿಂದಲೇ ಆದರೂ, ವಿಸ್ತರಿಸಿದವರಿಗೆ ಇವುಗಳು ಅತ್ಯವಶ್ಯವಾಗಿ ಬೇಕೇಬೇಕು

ಕಲಾ ಪ್ರಪಂಚದಲ್ಲಿ ಭರತಖಂಡಕ್ಕೆ ಅನನ್ಯ ಸಾಧಾರಣವಾದ ಶ್ರೇಷ್ಠ ಸ್ಥಾನವು ದೊರೆತಿದ್ದ ಕಾಲವು ಒಂದಿದ್ದಿತು ... ಚಿತ್ರಗಳನ್ನು ... ನೋಡಿ ... ಕೆಲವು ... ಸಂಪ್ರದಾಯ ... ವಿಚಿತ್ರವಾದ ಜೀವನವನ್ನು ... ಜಗತ್ತಿನಲ್ಲೇ ಅತ್ಯಂತ ರಮಣೀಯವಾಗಿರುವುದು ... ಚಿತ್ರಗಳೂ ... ವಿಷಯ ... ತೋರಿಸುವ ... ದೇವಾಲಯಗಳಲ್ಲಿಯೂ ... ಕೆತ್ತನೆಯ ... ಸಹ ವೈಖರಿಯನ್ನು ಮುಕ್ತಿಗೆ ... ಸಾಧ್ಯ

ಇಂಡಿಯಾ ದೇಶದ ಕಲಾ ಸಂಪತ್ತಿನ ವೈಶಿಷ್ಟ್ಯ ವೈಖರಿಯೂ ಲೋಕೋತ್ತರವಾದುವುಗಳು ಭಾರತೀಯ ... ದೇಶದ ಕಲೆಯ ಮಾದರಿಯನ್ನು ಅನುಕರಿಸಿ ... ಭಾರತೀಯರ ಪ್ರತಿಭೆಯಿಂದಲೇ ಸ್ವತಂತ್ರವಾಗಿ ... ಸರ್ವತೋಮುಖವಾದ ಸಮಗ್ರ ವಿಧಗಳ ಮಾದರಿಗಳನ್ನು ... ಭಾರತೀಯರಲ್ಲಿ ... ಕ್ರಿಯಾ ಮಾಧುರ್ಯಭಾವದ ವ್ಯಕ್ತರೂಪವೆಂದೇ ಹೇಳಬಹುದು ... ಉದಾತ್ತ ಸಂಸ್ಕೃತಿಯಿಂದಲೂ ಒಳ್ಳೆಯ ವ್ಯವಸ್ಥೆಯಿಂದಲೂ ... ಉಚ್ಚತರಗತಿಯ ನಾಗರಿಕತೆಗೆ ಅನುರೂಪವಾದ ... ಭಾರತೀಯ ಕಲೆಯೂ ಸೇರಿದೆಯೆಂದು ... ಭಾರತೀಯರ ... ಕಲೆಯ ಈ ಬಗೆಯ ಉತ್ತಮ ಲಕ್ಷಣಗಳಿಗೆ ಭಾರತೀಯರ ... ಕಾರಣ ... ಜಗತ್ತಿನ ... ಶ್ರೇಷ್ಠ ಕಲೆಯ ... ಲೋಕೋತ್ತರ ... ಕಲಾಭಿರುಚಿ ... ಆಡಿಯಾದುದು

ಭಾರತೀಯ ಕಲೆಯು ಪರಿಪೂರ್ಣತೆಯನ್ನು ಪಡೆಯುವ ಮಟ್ಟಿಗೆ ... ಹೊಂದಬೇಕಾದರೆ ಭಾರತೀಯರ ಪೂರ್ವ ಸಂಪ್ರದಾಯವನ್ನನುಸರಿಸಿ ... ಪಾಶ್ಚಾತ್ಯ ಸಂಪ್ರದಾಯದಲ್ಲಿ ... ಇಂಡಿಯಾದೇಶದ ಕಲೆಗಾರರು ... ಪಾಶ್ಚಾತ್ಯ ರೀತಿಯನ್ನನುಸರಿಸಿ ಅತ್ಯುತ್ತಮವಾಗಿ ... ಭಾರತೀಯ ದೃಶ್ಯಗಳನ್ನೂ ಭಾರತೀಯ ವ್ಯಕ್ತಿಗಳನ್ನೂ ಪಾಶ್ಚಾತ್ಯ ... ಸಂಪ್ರದಾಯಕ್ಕನುಸಾರವಾಗಿ ನಮ್ಮ ದೇಶದ ಚಿತ್ರಲೇಖಕರು ಚಿತ್ರಿಸಿದ್ದಾರೆ ... ಚಿತ್ರಗಳು ... ಒಂದು ದೊಡ್ಡ ಚಿತ್ರಶಾಲೆಯನ್ನೇ ... ಹೆಚ್ಚು ಸಂಖ್ಯೆಯಲ್ಲಿ ... ಆದರೆ, ನಾವು ಚಿತ್ರಕಲೆಯ ... ಭಾರತೀಯ ಕಲಾಸಂಪ್ರದಾಯದ ... ಪಾಶ್ಚಾತ್ಯ ಕಲೆಯ ... ಚಿತ್ರಗಳಲ್ಲಿ ... ಹೊರಗಿನ ... ಭಾವನೆಯ ... ಭಾರತೀಯ ಕಲೆಯ ಸೊಗಸನ್ನು ಚಿತ್ರದಲ್ಲಿ ... ಭಾರತೀಯ ಸಂಪ್ರದಾಯವು ... ಭಾವ ಸಮೃದ್ಧಿಯನ್ನು ಭಾರತೀಯ ಸಂಪ್ರದಾಯದಿಂದ ... ಚಿತ್ರಲೇಖನ ವಿಧಾನಕ್ಕೆ ಮಾತ್ರ ಪಾಶ್ಚಾತ್ಯ ಸಂಪ್ರದಾಯದ ಉತ್ತಮ ಲಕ್ಷಣಗಳನ್ನು ... ಚಿತ್ರಲೇಖಕರ ... ಬಹಳ ಮನೋಹರವಾಗಿವೆ

ಮಹಾಜನರ ಅಭಿರುಚಿಯಿಂದ ಕುಶಲ ವಿದ್ಯೆಗಳಿಗೆ ಆದರ ಆಶ್ರಯವು ದೊರೆಯಲ್ಲದೆ ಕಲಾಭಿವೃದ್ಧಿಗೆ ಮಾರ್ಗವು ಇಲ್ಲ ... ಕಲೆಯ ... ಜನತೆಯ ... ದೇಶದ ... ಕಲೆಯ ಪರಿಸ್ಥಿತಿಯು ಮುಂದೆ ಹೇಗೆ ... ಮಹಾಜನರಿಗೆ ಕಲೆಯಲ್ಲಿ ಹೆಚ್ಚು ಆಸಕ್ತಿಯುಂಟಾಗಿ ... ದೇಶದಲ್ಲಿ ... ಪರಿಸ್ಥಿತಿಯು ಉತ್ತಮವಾಗುವುದು ... ಚಿತ್ರ ... ಕಲಾಭಿವೃದ್ಧಿಯ ... ಕಲಾಭಿವೃದ್ಧಿಯಲ್ಲಿರುವ ಆಸಕ್ತಿಯೆಂಬುದು ...

ಯುಕ್ತವೆನ್ನಿಸುವವುಗಳಿಗೆ ಕಲಾಭಿವೃದ್ಧಿಯ ಕಾರ್ಯ ... ಗಮನಕೊಡಲು ... ಜೀವನ ಪರಿಸ್ಥಿತಿಯು ... ವಿಷಯದಲ್ಲಿ ... ಕಲೆಯೂ ... ಅವಲಂಬಿಸಿದ ಸಮಸ್ತ ಕಾರ್ಯಕ್ಷೇತ್ರಗಳಲ್ಲಿಯೂ ... ಸಾಧನ ಸಂಪತ್ತುಗಳನ್ನು ಹೊಂದಿಸಿಕೊಂಡು ಜನಜೀವನ ವಿಧಾನವೇ ... ಭಾರತೀಯ ... ಭರತಖಂಡದಲ್ಲಿ ಕಲೆಯೂ ... ಪ್ರಾರ್ಥಿಸೋಣ.

ಅಸ್ಥಾನವಿದ್ವಾನ್ ಶ್ರೀವಿನ್ಯಾಸ್ ವೇದಮೂರ್ತಿ ಟಿ ಎಂ ತ್ರ್ಯಂಬಕ ಸಿದ್ದಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯ ವಿಮರ್ಶೆಯೂ

(ಲೇಖಕ ... ಗೋಪಾಲಕೃಷ್ಣ ... ಕಂಠೀರವ, ಟ್ರೈನಿಂಗ್ ಕಾಲೇಜು ಮೈಸೂರು)

ದಿಗ್ದರ್ಶನ

(ಜುಲೈ ... ಸಂಚಿಕೆಯ ... ಮುಂದುವರಿಗೆ)

... ಗಂಡಭೇರುಂಡ ... ಚಕ್ರ, ... ಹಿರಿಯನು, ಕಿರಿಯನು ... ಹನುಮ ... ಬಿರುದನು, ... ಚೆನ್ನಿಗನು, ... ಗನುಂ ... ನನು ... ಮೊಬಗೆಯವನುಂ ... ಷಂ, ಬನಗಾಡಿಕಾರನುಂ

ಜಗವಾಡಕ್ಕೆ ... ಗಂಡಭೇರುಂಡ ... ರಾಜ ಪ್ರಜೆಗಳ ದೇವಳ ... ದಯಿಲ್ಲಿ ಓಡಾಡು ... ಪಾಡುದಂದ ... (ಸಂತುಷ್ಟನಾದವನು)

... ಶಿಕೆಗೆ ... ಅಮರನು ... ಭಕ್ತನು ... ವಿಜ್ಞಾ ... ಉಪಾಧ್ಯಾಯನುಂ (ಆಚಾರ್ಯನು) ... ದೇಶಿಗನು ... ಭೂಕಾಲಯ ... ಮಾರುಭಾರ ... ಸೌಂದರ್ಯ ... ಸಮಯಾದಿ ... ವಿಶೇಷ ... ಸೌಂದರ್ಯ ... ನಯನ ... (ದರ್ಶನ ... ಎಂದು ...)

ಎಂ ... ಗಾರ್ಭ ... ಕೇರಿಯಲ್ಲಿ ... ಆತ್ರರಂ ಸುಹಸ ತ್ರೀ ಗನುಂ ಎಂಬವರ ... ಲ್ಲ ... ಸ್ಯತಿಯನನುಸಂಧಾನಗೆಯ್ಯಿರ ... ನಿರನ್ನಿರನವರ ... ಪ್ರಜೆಗಳೆಂದು, ... ನೋಡಿ

ಮತ್ತೆ ... ನಿರಿತಿ ... ದಗೊಂಡ

... ಗಟ್ಟಗನೂ ವಿಲಾಸಗಾರನೂ ಕಾವ್ಯವರ್ಣ ... ಎಲ್ಲ ... ಭಾವನೆಯನ್ನು ... ಅಶ್ಚರ್ಯ ... ಚೆನ್ನಾಗಿ ನೋಡಿ

... ಅಸ್ವ ... ಅಂತರಿಂದ ... ಎಂಬುದನ್ನ ... ಕಿಡು

... ಪ್ರಾ ... ಕತೋನ್ನ ...

ಮ ... ರಂ ... ನಾರದನಾದೊಡಂ ... ರಂತೆ ಮನ್ನಿಸಿಯನ ... ನಿತಿಯ ೦

ಇಂದ್ರನ ಪುಣ್ಯಕಾರ್ಯವನ್ನು ಮಾಡಿದವನು ... ಅವನಿಗೆ ತನ್ನ ಸ್ವರ್ಗಲೋಕದಲ್ಲಿ ಮನ್ನಿಸಿದ ...

ಎ ... ರ್ಗಳೆಯುಂ ಸಮಸ್ತ ವಸ್ತುಜಾತಮುಂ ಪರಿಪಕ್ವದಶೆಯನ್ನೈ ... ವಂತಿಯ ೦

ಅನ್ಯ ... ಎಲ್ಲಾ ... ಗಳ ... ಸಮುದಾಯವನ್ನು ... ಅಶ್ವವಾಗ ... ಹೊಂದಿಸುವಂತೆಯ ...

ಮತ್ತ ... ಪಟ್ಟಿ ... ಹೊಂದಿಸುವಂತೆಯುಂ

ಅ ... ಧರ್ಮನು, ... ಬಲ್ಲ ... ನಗೆ ... ವಂತೆಯೂ

... ಅನುಸರಣೆಯೊಳಂ ಅತ್ಯಂತಸ್ಥೆಯೋ ... ಷಕಂತೆಯ ೦

ಸ್ವಯಂತ್ರಶಿಕ್ಷಿತ ಅಭಿಪ್ರಾಯು ಸಿದ್ಧಿಸಿ ರಾಜ್ಯಭಾರದಲ್ಲಿ ... ತಾನು ... ಜಾಗರೂಕನಾಗಿರುವಂತೆಯೂ

ಮುಖ್ಯನಿರಿಯ ... ಉಟೆಮನು ... ಮಟ್ಟಿ ... ವಂತೆಯ ೦

ಸಮುದ್ರರಾಜನು ಲೋಕಗಳ ಉಪಕಾರಕ್ಕೆ ... ಗಿರುವ ... ಹೊರ ... ಪಡುವಂತೆಯೂ

... ಪುನರಂ ... ಪ್ರವೃತ್ತ ... ವಾಯು ... ಎಲ್ಲ ... ಗಳ ... ಸಮಾಚಾರವನ್ನು ತಿಳಿದಂತೆಯೂ

... ದುರ್ಗ ... ನಿಶ್ಚಿತ ... ವೈ ...

... ಗಳ ಮತ್ತ ... ಭಗನಾವತಿಯ (ಪಾರ್ವತೀ ಪತಿಯ) ಕೃಪೆ ... ದಿಂದ ... ಹಾಗಳಿಗೆ ಸ್ಥಾನ ...

... ಅಲಕ ... ವ್ಯವ ... ಇರಿಕಂತೆಯುಂ

... ಇಂದ್ರರ ಸಮೀಪದಲ್ಲೇ ಇರು ವಂತೆಯೂ

ತರಿಯಗ್ರಾಂ ... ರಾಜ್ಯವಾಗಿ ... ಭಾರದ ... ಹೊಂದಿಗೆ ... ಶಕ್ತಿ ... ಶಕ್ತಿ ... ಪ್ರಜಾನ ...

ಭೂಪತಿಯು, ಅನಾದಿವಾದ ಸಂಪತ್ತಿನಿಂದಲೂ, ಭೋಗದ ಅಧಿಕ್ಯ ... ಹೊಂದಿದ ಜನರನ್ನು ... ದಿಗ್ದರ್ಶನ ... ಜನಸ ... ಕೃಪೆ ... ಅಧಿಕವಾಗಿ ಸಂತೋಷಪಟ್ಟು ಮನಸ್ಸುಳ್ಳವನಾಗಿ,

ಆರಸುತನಂಗೆಯ್ವುದ ... ವಾಗಲಿ ...

ರಾಜ್ಯಭಾರಮಾಡಲು ಪ್ರಸಿದ್ಧಮಾಡಿ, ಉತ್ಸಾಹಪೂರ್ವಕವಾಗಿ ಅಪೇಕ್ಷೆ ಪಟ್ಟನು. ಆ ಕ್ರಮವು ಹೇಗೆ ... ಎಂದರೆ,

ತಮ ... ಪ್ರಿಯ ...

... ತ್ರ ...

... ಆ ...

...

...

...

... ಇಂತು ... ಗ್ರಂಥ ... ದಿಂದ ಸ್ವರ ... ಉಪಾಧ್ಯಾಯ ... ಈ ಸುಪ್ರಸಿದ್ಧ ಮಹಾಪ್ರಭು ... ಸಾರ್ಥಕವಾದ ಎರಡು ... ದಾಗಿ ಜೋಡಿಸಿ ... ಯುಲ್ಲವೇ

ಒಡೆಯರ್ ... ಮಹಾರಾಜ, ಆಚಾರ್ಯ ಎಂಬೆರಡು ಅರ್ಥಗಳುಂಟು ಲೋಕದಲ್ಲಿ ಮಹಾರಾಜತ್ವವೂ, ಆಚಾರ್ಯತ್ವವೂ ಒಂದೆಡೆ ಸೇರುವುದು ಬಹಳ ಅಪೂರ್ವ ಈ ನಮ್ಮ ಸುಪ್ರಸಿದ್ಧ ಶ್ರೀ ಕೃಷ್ಣರಾಜ ಮಹಾಪ್ರಭುವಿನಲ್ಲಿ ರಾಜತ್ವವೂ ಆಚಾರ್ಯತ್ವವೂ ಬೇಕಾದ ಅಭಿಮಾನವಾದ ... ಇವೆಯೆಂದು ... ಸಶೇಷ

ಪ್ರಕಟನೆಯು

ಶ್ರೀ ... ಗಳ ... ಇಂದಿನಿಂದ ತಾ| 1 ನೆ ... 131 ನೆಯ ... ತಾ 7 7 1932 ನೆಯ ಇಸವಿ ... ನೋಟೀಸು ... ಗಳಿಂದ ... ವಿರುದ್ಧ ... ಯೋಗ್ಯವಾದುದೆಂದು ... —

1 ಕಾಲೇಜಿನ ... ರ ... ವೆಂಬರಿಗೆ 15 ದಿನ ಮುಂಚಿತವಾಗಿ ... ಕೊಡತಕ್ಕದ್ದು

2 ಕಾಲೇಜಿನ ... ಕಾಲೇಜಿನ ಬಿಲ್ಡಿಂಗಿನಲ್ಲಿಯೇ ನಡೆಯ ... ಬೇರೆ ... ನಡೆಸತಕ್ಕದ್ದು

3 ಯಾವ ಅಧಿಕಾರಿಗಳನ್ನಾದರೂ ... ಬರಬೇಕು ... ಅಧಿಕಾರವಿರುವುದಿಲ್ಲ

4 ಜನರಲ್ ... ಮೆಂಬರರು ... ನಡೆಯ ... ನಡೆಯುವುದಿಲ್ಲ

ಇದರ ಕಾರಣಗಳಿಂದ ಶ್ರೀ ... ಗಳು 7 ದಿನ ಮುಂಚಿತವಾಗಿ ... ನೋಟೀಸು ತಾ 18 7 ... ಪ್ರಕಟಿಸಲ್ಪಟ್ಟಿರುವುದು ... ಈ ನೋಟೀಸಿನಿಂದ ... ಮೆಂಬರರ ... ಸಾಧನೆಯು ... ಮೆಂಬರರಿಗೆ ... ಈ ಪ್ರಕಾರ ... ಸರ್ವಜನರಿಗೆ ತಿಳಿಸುವುದಕ್ಕೋಸ್ಕರ ಈ ಪ್ರಕಟನೆಯು ... ಕಾರ್ಯಗಳನ್ನು ಮಾಡಲು ... ಕಾರಣ ಕಾಲೇಜು ... ವ್ಯವಹಾರಗಳ ... ನಡೆದರೆ ... ವಿರೋಧವಾಗಿ ಯಾರಾದರೂ ನಡೆದರೆ ಅವರಿಗೆ ... ಅವರೇ ಬಾಧ್ಯರಾಗಿ ... ಗಂಗಮ್ಮ ... ಕ್ಕೆ ...

ತಾ 11 7 32 ... ಸಹಿ ...

ನಾರಿನವೋಲೆ ರಾಮಬಾಣ

... ಉಪಸಗಳಲ್ಲಿ ನೆಟ್ಟಗಾಗಿ ಮುಂದೆ ... ನಾರಿನವರ, ಚರೂರ ತರಿಸಿ ಕೊಳ್ಳಿ ... ರೂ ...

... ಫೈಸ್ ... ಎಸ್ ಕೊಳಿಸೆ, ಮಿರಜ.

14

M C

... ನೆಯ ಇಸವಿ ಜುಲೈ ... ರಿಂದ ... ತಾ| ... ವರೆಗೆ ... ಆಷಾಢ ... ಬಹುಳ ತ್ರಯೋದಶಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಗಿಂಕಿ ಮಾಸ
25	ಸೋಮ	ಅಷ್ಟ	60	ಅಶ್ವಿ	50 26	10
26	ಮಂಗಳ	ಅಷ್ಟ	2 11	ಭರ	57 6	11
27	ಬುಧ	ನವ	7 14	ಕೃತ್ತಿ	60	12
28	ಗುರು	ದಶ	12-7	ಕೃತ್ತಿ	3 31	13
29	ಶುಕ್ರ	ಏಕಾ	16 31	ರೋಹಿ	9 28	14
30	ಶನಿ	ದ್ವಾದ	19 34	ಮೃಗ	14-16	15
31	ಭಾನು	ತ್ರಯೋ	21 54	ಆದ್ರ್ರಾ	18-14	16

(1) ಮಳೆನಕ್ಷತ್ರ ಪುಷ್ಯ 4 ನೆಯ ಪಾದ (2) ಆದಿಶುಕ್ರವಾರ, ಮಳೆನಕ್ಷತ್ರ ಪುಷ್ಯ 4 ನೆಯಪಾದ.

ಮೈಸೂರು. ಮ್ಯೆ ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[illegible] ||
[illegible] ||
[illegible] ||

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಬಿಡಿಪ್ರತಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಆಗಸ್ಟ್ ತಾರೀಖು ೧ ನೆಯ ಸೋಮವಾರ [ನಂಬರ ೩೧

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ

ಅವರು ನಿಮ್ಮ ಸರಕುಗಳನ್ನು **1932** ನೆಯ ಇಸವಿ ಅಕ್ಟೋಬರು **1** ರ ಲಾಗಾಯಿತು **15** ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಆಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟ ಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು ಅದರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

"ಪ್ರಿನ್ಸೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

[50—5] ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಆಫೀಸರ ಕಚೇರಿ, ಬೆಂಗಳೂರು.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಕ್ಷರಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ
ದೊರೆಯುವ ಗ್ರಂಥಗಳು.

	ಕ್ರಯ	ವಿ. ಪಿ. ಸೇರಿ.
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
ಸರಿಜಾತ	[illegible]	[illegible]
ಪ್ರತಿಸಂಹಾರ	[illegible]	[illegible]
[illegible]	[illegible]	[illegible]
ಬಸವೇಶ್ವರವಚನ	[illegible]	[illegible]
[illegible]	[illegible]	[illegible]
[illegible]	[illegible]	[illegible]

ಸತ್ಯದ ಜಗತ್ತು] ೧೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಳುಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಾಗಿ ಕ್ಷೀಣರಾಗಬೇಡಿರಿ | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಚ್ರಾಂಗ ಸುಂದರಪಾಕದ. [ಸ್ಟರ | ಧಿಕ್ಕರಿಸಿದರೆ ಕ್ಷೀಣತೆ ಬಾಯ್ದು ಕೊಳ್ಳುವಿರಿ.

[illegible]

ಸ್ತ್ರೀರೋಗ ನಿವಾರಣ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible] [60—32]

ಪತ್ರ ಮೂಲಕ:—ವೈದ್ಯ ವ್ಹಿ. ಎಸ್. ಕಾಳುಸೆ, ಮು. ಪೋ. ಮಿರಜಿ ಎಂ. ಎಸ್. ಎಂ

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

[illegible]

ವಿಳಾಸ:—ಗುಡುಪುಸವ ಅಂಡ್ ಕಂಪೆನಿ ಲಿಮಿಟೆಡ್,
[60—47] ಪೋ. ಬಾ. ೫೧೧, ಮದರಾಸು.

ಮೈಸೂರು ಸ್ಟಾರ್

೧೯೩೨ ನೆಯ ಇಸವಿ ಆಗಸ್ಟ್ ತಾ|| ೧ ನೆಯ ಸೋಮವಾರ

DAVIDSON COMMITTEE AND MYSORE

The report of the Indian States Committee presided over by the Right Honourable J. C. C. Davidson has been issued simultaneously in England and India. The main question before the Committee was to examine the financial relations of the Indian States with the Government of India with a view to remove the obstacles that would lie in the way of an ideal system of Federal finance. The distinguishing features of the situation were two firstly, the direct contribution made by the States to which there was no parallel in the case of British Indian Provinces and secondly, in ny of the States enjoying a measure of immunity from the incidence of those very taxes which would be the main sources of Federal revenue. In this article we would like to refer to the findings of the Davidson Committee with regard to the former especially from the point of view of Mysore. It may be noted that this Committee made an extensive tour among the Indian States and have to their credit an expenditure of over a lakh and a half of rupees. The report gives no doubt an indication of a detailed study of the problem concerned but we certainly cannot give them credit for much sympathy with some of the States. Every one will remember the recommendation of the Federal Structure Committee of the R. T. C. that in so far as the cash contributions made by the States were of a feudal nature they should be wiped out *Pari Passu* with the direct contributions required from the British Indian Provinces and further that there should be immediate remission in respect of any part of such contribution which may be in excess of 5 percent of the total revenue of the State concerned. The present report however, says that these contributions are not of a feudal nature. We would like to know from the eminent authors of the report what is the nature of the contributions if they are not of a feudal character. They should surely have taken the trouble of enlightening the readers of the report on the exact nature of the contributions. Evidently they were afraid that if they termed these contributions as of a feudal character they would not be able to justify their continuence for any longer. After a mountain of labour, this Committee has produced the mouse of a remission of what is in excess of 5 percent of the total revenues. They have not gone a bit further than the Federal Structure Committee. As regards the remaining payments by the States the Committee recommends that the moiety should be extinguished at the latest in 10 years from Federation and the whole within 20 years. We are sorry to observe that this Committee has missed the fundamental point in the case. It is not that the States are unwilling to contribute their quota to the Federal revenues even as the provinces would do but they feel it inconsistant with their position as units of the same Federation, to pay a tribute to that Federal Government. If the Committee had brought their unprejudiced mind to bear upon this important question there would have been no difficulty in appreciating this standpoint. If they had honestly tackled the question from this point of view they would have been compelled by both the force of logic and the need for equity to come to the irresistable conclusion of doing away with these tributes. We wonder how it did not appeal to the Committee that it would be almost galling to the self respect of a State to enter into a Federation with the badge of inferiority which the payment of a tribute would certainly mean. In fact, the States have been insisting on the wiping out of these tributes as a condition precedent to their joining the Federation. As regards those States which are not joining the Federation the Committee's recommendation for the abolition of the contributions in the course of 20 years does not apply at all. This is hardly an honest way of welcoming States to join the Federation. The Committee not satisfied with such a conservative and illiberal and we may add unfair and unjust proposal, have gone about to define who the recipients of these contributions are. They say that they are payable to the Paramount power and not to the Federal Government. There cannot be a more puerile suggestion than this because they at the same time say that the Paramount power would place the contributions as long as they continue to be paid at the disposal of the Federal Government. Every pie of these contributions ever since they have been levied, has gone to the Government of India Exchequer. Now when the Federal Government is to be constituted we are astonished that the Committee should attempt to bring in the claim of the Paramount power in connection with these contributions as opposed to the claims of the Federal Government. So much about the contributions. They do not say anything about the restoration of the Assigned Tracts namely the Civil and Military Station. We would like to await the full report in connection with this question. So far as the present summary of the recommendation goes there is no indication as to their restoration. We would not be surprised if the Committee have been equally unsympathatic with regard to this question also. After all, the net advantage to Mysore would be a saving about Rs 7 7 lakhs. In these hard days we suppose that we should say something is better than nothing. We hope that our energetic and patriotic Dewan whose efforts in this direction have deservedly won him praise from all quarters, will not rest until he gets these contributions wiped out completely.

ಡೇವಿಡ್‌ಸನ್ ಕಮಿಟಿಯೂ, ಮೈಸೂರೂ

ಆರ್ಥಿಕ ವಿಚಾರದಲ್ಲಿ ಭಾರತ ಪ್ರಭುತ್ವಕ್ಕೂ ದೇಶೀಯ ಸಂಸ್ಥಾನಗಳಿಗೂ ಇರತಕ್ಕ ಪರಸ್ಪರ ಸಂಬಂಧವು ಮುಂದಾಗಲಿಕ್ಕಿರುವ ಫೆಡರೇಷನ್ನಿನ ನಿರ್ಮಾಣಕ್ಕೆಷ್ಟರಮಟ್ಟಿಗೆ ಪ್ರತಿಬಂಧಕವಾಗಿರುತ್ತದೆಂಬುದನ್ನು ವಿಚಾರಿಸಿ ತನ್ನಿವಾರಣಾರ್ಥವಾಗಿ ತಕ್ಕ ಸೂಚನೆಗಳನ್ನು ಕೊಡಲು ಏರ್ಪಟ್ಟಿದ್ದ ಡೇವಿಡ್‌ಸನ್ ಕಮಿಟಿಯವರು 10 ಸಾವಿರ ಮೈಲು ಸಂಚರಿಸಿ ಆಯಾ ಸಂಸ್ಥಾನಾಧೀಶರುಗಳೊಡನೆ ಅಥವಾ ಅವರ ಮಂತ್ರಿಗಳೊಡನೆ ಸಂಭಾಷಿಸಿ ಇಂಗ್ಲೆಂಡಿಗೆ ಹಿಂದಿರುಗಿ ಕಳೆದ ಮೇ ತಿಂಗಳಲ್ಲಿ ಬರೆದ ವರದಿಯು ಇಂಗ್ಲೆಂಡಿನಲ್ಲೂ ಇಂಡಿಯಾದಲ್ಲೂ ಕಳೆದ ಗುರುವಾರ ಏಕಕಾಲದಲ್ಲಿ ಪ್ರಕಟಿಸಲ್ಪಟ್ಟಿತು. ಇವರ ಸಂಚಾರಕ್ಕಾಗಿ 1½ ಲಕ್ಷ ರೂ ವೆಚ್ಚವಾಗಿರುವುದು. ಈ ವರದಿಯ ಕನ್ನಡ ಭಾಷಾಂತರವು ಸಶೇಷವಾಗಿ ಈ ಪತ್ರಿಕೆಯ ಬೇರೆಕಡೆ ಮುದ್ರಿಸಲ್ಪಟ್ಟಿದೆ. ಈ ಕಮಿಟಿಯವರು ಕೆಲಸಂಸ್ಥಾನಗಳ ವಿಚಾರದಲ್ಲಿ ಮಾತ್ರ ತಮ್ಮ ಸಹಾನುಭೂತಿಯನ್ನು ತೋರಿಸಿರುವುದಕ್ಕಾಗಿ ನಾವು ಅವರನ್ನು ಹಿಂಡಿತವಾಗಿ ಪ್ರಶಂಸಿಸುವುದಿಲ್ಲ. ಸಂಸ್ಥಾನಗಳು ಸಲ್ಲಿಸುತ್ತಿರುವ ಪೊಗದಿಯು ಅವುಗಳ ಗೌರವಕ್ಕೆ ಕುಂದಕವಾಗುವುದರಿಂದ ಅದು ರದ್ದು ಮಾಡಲ್ಪಡಬೇಕೆಂದೂ ಈ ಪೊಗದಿಯು ಸಂಸ್ಥಾನದ ಒಟ್ಟು ವರಮಾನದಲ್ಲಿ ಶೇಕಡ 5 ಕ್ಕಿಂತ ಹೆಚ್ಚಾಗಿದ್ದರೆ ಹೆಚ್ಚು ಮೊಬಲಗುಗಳನ್ನು ಅವುಗಳಿಗೆ ಬಿಟ್ಟುಕೊಡಲ್ಪಡಬೇಕೆಂದೂ ಫೆಡರಲ್ ಸ್ಟ್ರಕ್ಚರ್ ಕಮಿಟಿಯವರು ಅಭಿಪ್ರಾಯಪಟ್ಟಿರುವುದು ಎಲ್ಲರಿಗೂ ತಿಳಿದೇ ಇರುವುದು. ಆದರೆ ಈ ಪೊಗದಿಯನ್ನು ತೆರುವುದು ಸಂಸ್ಥಾನಗಳಿಗೆ ಅವಮಾನಕರವಲ್ಲವೆಂದು ಪ್ರಸಕ್ತ ವರದಿಯಲ್ಲಿ ಹೇಳಲ್ಪಟ್ಟಿದೆ. ಹಾಗೆ ಅದು ಅವಮಾನಕರವಲ್ಲದಿದ್ದರೆ ಮತ್ತೆಂತಹುದೆಂಬುದನ್ನು ಈ ಕಮಿಟಿಯವರು ವಿವರಿಸಿದ್ದರೆ ಅನುಕೂಲವಾಗಿರುತ್ತಿದ್ದಿತು. ಈ ಪೊಗದಿಯು ಫ್ಯೂಡಲ್ ಅಂದರೆ ಗುತ್ತಿಗೆಯ ಸ್ವಭಾವವೆಂದು ಹೇಳಿದ್ದರೆ ಅದು ನಿಲ್ಲಿಸಲ್ಪಡದೆ ನಿಲ್ಲಿಸಲ್ಪಡಬೇಕೆಂದು ಹೇಳಲಾಗುತ್ತಿಲ್ಲವೆಂದರಿತೇ ಹಾಗೆ ಹೇಳದೆ ಬಿಟ್ಟಿರುವರು. ಈ ಕಮಿಟಿಯವರ ಸಾಹಸವು ಬೆಟ್ಟವನ್ನಗೆದು ಇಲಿಯನ್ನು ಹಿಡಿದಂತೆ ಪರಿಣಮಿಸಿರುತ್ತದೆ. ಶೇಕಡ 5 ಕ್ಕಿಂತ ಹೆಚ್ಚಾಗಿರುವ ಮೊಬಲಗು ತಪ್ಪಿಸಲ್ಪಟ್ಟಿವೆ. ಉಳಿಯುವ ಮೊಬಲಗಿನಲ್ಲಿ ಅರ್ಧವು 10 ವರ್ಷದೊಳಗೆ ತಪ್ಪಿಸಲ್ಪಡಬೇಕೆಂದೂ ಉಳಿದ ಅರ್ಧವು 20 ವರ್ಷದೊಳಗೆ ನಿಶ್ಶೇಷವಾಗಿ ತಪ್ಪಿಸಲ್ಪಡಬೇಕೆಂದೂ ಅಭಿಪ್ರಾಯಪಟ್ಟಿರುವರು. ಸಂಸ್ಥಾನಗಳವರು ತಮ್ಮಾದಾಯದಲ್ಲಿ ಕೊಂಚ ಭಾಗವನ್ನು ಫೆಡರಲ್ ಪ್ರಭುತ್ವಾದಾಯಕ್ಕೆ ಕೊಡಲು ಅಸಮ್ಮತಿಸುವುದಿಲ್ಲವಾದರೂ ಹಾಗೆ ಕೊಡುವುದು ಫೆಡರೇಷನ್ನಿಗೆ ಸೇರಲೊಪ್ಪಿರುವ ತಮ್ಮ ಯೋಗ್ಯತೆಗೆ ಕುಂದೆಂದೆಂದು ಭಾವಿಸುತ್ತಾರೆ. ಈ ಕಮಿಟಿಯವರು ನಿರ್ಮತ್ಸರ ಬುದ್ಧಿಯಿಂದ ಈ ವಿಷಯವನ್ನು ಪರ್ಯಾಲೋಚಿಸಿದ್ದರೆ ಪೊಗದಿಯನ್ನು ಕೂಡಲೆ ತಪ್ಪಿಸಬಿಡತಕ್ಕದು ನ್ಯಾಯವೂ ಅವಶ್ಯಕವೂ ಎಂದು ಅವರು ನಿರ್ಧಾರವಾಗಿ ಹೇಳದೆ ಇರುತ್ತಿರಲಿಲ್ಲ. ದೇಶೀಯ ಸಂಸ್ಥಾನಗಳು ಆತ್ಮಗೌರವಕ್ಕೆ ಕುಂದಕವಾದ ಪೊಗದಿಯನ್ನು ತೆರುತ್ತ ಫೆಡರೇಷನ್ನಿಗೆ ಸೇರುವುದು ಮನೋವೇದಕವೆಂಬುದು ಈ ಕಮಿಟಿಯವರಿಗೆ ತೋರದಿದ್ದುದು ಆಶ್ಚರ್ಯ. ಫೆಡರೇಷನ್ನಿಗೆ ಸೇರುವುದರ ಮೊದಲೇ ಪೊಗದಿಯನ್ನು ತಪ್ಪಿಸಬೇಕೆಂದು ಸಂಸ್ಥಾನಗಳು ಒತ್ತಾಯಪಡಿಸುತ್ತಿರುವುದು ಯುಕ್ತವಾಗಿದೆ. ಇದಕ್ಕೆ ಫೆಡರೇಷನ್ನಿಗೆ ಸೇರದಿರುವಂತಹವುಗಳ ಪೊಗದಿಯು 20 ವರ್ಷಗಳೊಳಗೆ ತಪ್ಪಿಸಲ್ಪಡಬೇಕೆಂದು ಕಮಿಟಿಯವರು ಮಾಡಿರುವ ಶಿಫಾರಸು ಅನ್ವಯಿಸುವುದಿಲ್ಲ. ಈ ಕಮಿಟಿಯವರು ಅನ್ಯಾಯವನ್ನೂ, ಅನುಚಿತವನ್ನೂ, ಅನುದಾರತ್ವವನ್ನೂ, ಅಸಹನೆಯೂ ಆದ ಸಲಹೆಯನ್ನು ಮಾಡಿರುವುದು ಸಾಲದೆ, ಪೊಗದಿಯು ಯಾರಿಗೆ ಸಲ್ಲತಕ್ಕದೆಂಬುದನ್ನು ಸಹ ವಿವರಿಸಿರುತ್ತಾರೆ. ಈ ಪೊಗದಿಯು ಸಾರ್ವಭೌಮ ಪ್ರಭುತ್ವಕ್ಕಲ್ಲದೆ ಫೆಡರಲ್ ಪ್ರಭುತ್ವಕ್ಕೆ ಸಲ್ಲತಕ್ಕುದಲ್ಲವೆಂದು ಹೇಳಿರುವುದಕ್ಕೆ ಈ ಕಮಿಟಿಯವರು, ಪೊಗದಿಯು ಸಲ್ಲುವವರೆಗೂ ಅದನ್ನು ಸಾರ್ವಭೌಮ ಪ್ರಭುತ್ವದವರು ಫೆಡರಲ್ ಪ್ರಭುತ್ವಕ್ಕೆ ಕೊಡಲ್ಪಡತಕ್ಕದೆಂದು ಹೇಳುವುದು ಹಾಸ್ಯಾಸ್ಪದವಾಗಿದೆ. ಪೊಗದಿಯು ಕೊಡಲ್ಪಡತಕ್ಕದೆಂದು ಆರಂಭಿಸಿದಂದಿನಿಂದ ಅದರ ಪ್ರತಿಯೊಂದು ಕಾಸೂ ಇಂಡಿಯಾ ಪ್ರಭುತ್ವದ ಬೊಕ್ಕಸಕ್ಕೇ ಹೋಗಿರುವುದು. ಫೆಡರಲ್ ಪ್ರಭುತ್ವ ನಿರ್ಮಾಣವಾದಾಗ್ಗೆ ಇದಕ್ಕೆ ಸಲ್ಲಬೇಕಾದ ಪೊಗದಿಯ ಹಣವು ಸಾಮ್ರಾಜ್ಯ ಪ್ರಭುತ್ವಕ್ಕೆ ಸಲ್ಲುವಂತೆ ಮಾಡಲು ಈ ಕಮಿಟಿಯವರು ಪ್ರಯತ್ನಿಸಿರುವುದು ಆಶ್ಚರ್ಯಜನಕವೆನಿಸುತ್ತದೆ. ಪೊಗದಿಯ ವಿಚಾರವಾಗಿ ಮೇಲ್ಕಂಡಂತೆ ಹೇಳಿರುತ್ತಾರಲ್ಲದೆ ಸಂಸ್ಥಾನಗಳು ಭಾರತಪ್ರಭುತ್ವದವರಿಗೆ ವಹಿಸಿಕೊಟ್ಟಿರುವ ಭೂಪ್ರದೇಶವನ್ನು ಅಂದರೆ ದಂಡುಪ್ರದೇಶವನ್ನು ಅವರುಗಳಿಗೆ ಹಿಂದಿರುಗಿ ವಹಿಸಿಕೊಡುವ ವಿಚಾರದಲ್ಲಿ ಏನನ್ನೂ ಹೇಳಿರುವುದಿಲ್ಲ. ಆದರೂ ಈ ವಿಚಾರವಾಗಿ ಸಂಪೂರ್ಣ ವರದಿಯಲ್ಲಿ ಏನು ಹೇಳಲ್ಪಟ್ಟಿರುವುದೆಂಬುದನ್ನು ನೋಡಬೇಕಾಗಿದೆ. ಈಗಿನ ವರದಿಯಲ್ಲಿ ಮಾತ್ರ ದಂಡುಪ್ರದೇಶವನ್ನು ಸಂಸ್ಥಾನಗಳಿಗೆ ಹಿಂದಿರುಗಿ ವಹಿಸಿಕೊಡುವ ವಿಚಾರದಲ್ಲಿ ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರೂ ನಾವು ಆಶ್ಚರ್ಯಪಡಬೇಕಾಗಿರಲಿಲ್ಲ. ಈಗ ಪ್ರತಿವರ್ಷದಲ್ಲೂ ತೆರುತ್ತಿರುವ ಪೊಗದಿಯಲ್ಲಿ 7 7 ಲಕ್ಷ ರೂ ಮಿಗತಾಯವಾಗುವುದೇ ನಮ್ಮ ಸಂಸ್ಥಾನಕ್ಕೆ ಸಾಮ್ರಾಜ್ಯ ಪ್ರಭುತ್ವ ನಿರ್ಮಾಣದಿಂದ ಆಗುವ ಪ್ರಯೋಜನವು. ಈ ಆರ್ಥಿಕ ವಿಷಮಸ್ಥಿತಿಯಲ್ಲಿ ದೊರತಷ್ಟೇ ಲಾಭವೆಂದು ಭಾವಿಸಬೇಕಾಗಿದೆ. ಸಂಸ್ಥಾನದ ಪೊಗದಿಯನ್ನು ಬಿಡಿಸಿಕೊಳ್ಳಲು ಅಸಮಸಾಹಸಮಾಡಿ ಸಮಸ್ತರ ಪ್ರಶಂಸೆಗೆ ಪಾತ್ರರಾಗಿರುವ ನಮ್ಮ ದಿವಾನ್ ಸರ್ ಮಿರ್ಜಾಯವರು ದುಸ್ಸಹವಾದ ಪೊಗದಿಯು ನಿರ್ಮೂಲವಾಗುವವರೆಗೂ ಪ್ರಯತ್ನಸದೆ ಬಿಡುವುದಿಲ್ಲವೆಂದು ನಿರೀಕ್ಷಿಸುತ್ತೇವೆ.

ಡಿ. ಎಲ್. ಎ. ಅಸೋಸಿಯೇಷನ್ನಿನ ವರದಿ

ಧರ್ಮವಾಣಿ ಲಂಗರಯ್ಯ ಎಜ್ಯುಕೇಷನ್ ಅಸೋಸಿಯೇಷನ್ನಿನ 1931-32ನೆಯ ಸಾಲಿನ ವರದಿಯ ಪ್ರತಿಯನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ. ಈ ಫಂಡಿನ ಮೂಲಧನವಾದ 2,0 000 ರೂಪಾಯಿಗಳು ಗವರ್ನಮೆಂಟು ಸೆಕ್ಯೂರಿಟಿಗಳ ಮೇಲೆ ಮುಂಗಡವಾಗಿ ವಿನಿಯೋಗಿಸಲ್ಪಟ್ಟಿವೆ. ಈ ಮೊಬಲಗಿಗೆ ಪ್ರತಿ ವರ್ಷದಲ್ಲೂ ಬರುವ 8,800 ರೂ ಬಡ್ಡಿಯನ್ನು ಬ್ಯಾಂಕಿನಲ್ಲಿಡುವುದರಿಂದ ಇದಕ್ಕೆ 100 ರೂ ಬಡ್ಡಿ ಬರುತ್ತದೆ. ಇದಲ್ಲದೆ ಮುಖ್ಯಸ್ಥ ಶ್ರೀ ಗಂಗಾಧರಸ್ವಾಮಿ ಮೂರು ಸಾವಿರ ವರ ಪ್ರಿಂಟಿಂಗ್ ಮತ್ತು ಟ್ರೇಡಿಂಗ್ ಕಂಪೆನಿಯವರಿಂದ ಪ್ರತಿ ವರ್ಷದ ಲಾಭದಲ್ಲಿ ಕಾಲುಭಾಗ ಅಂದರೆ ಸುಮಾರು 1,000 ಚಿಲ್ಲರೆ ರೂಪಾಯಿಗಳು ಕೊಡಲ್ಪಡುತ್ತಿವೆ. ಪ್ರಸಕ್ತ ವರ್ಷದಲ್ಲಿ ಸ್ಕಾಲರ್‌ಷಿಪ್ ವಿದ್ಯಾರ್ಥಿಗಳು 96, ದೇವೀಮೊಸೂರು ಮಿಡ್ಲ್ ಸ್ಕೂಲಿನ ವಿದ್ಯಾರ್ಥಿಗಳು 8, ಕಾಲೇಜಿನವರು 13, ಮೆಡಿಕಲ್ ಕೋ ಆಪರೇಟಿವ್ ಸ್ಕೂಲಿನ ವಿದ್ಯಾರ್ಥಿ 1, ಬೆಂಗಳೂರಿನ ಕಲಾಭವನದವನು 1, ಶಾಂತಿನಿಕೇತನದ ವಿದ್ಯಾರ್ಥಿ 1, ಎಂಜಿನಿಯರಿಂಗ್ ಕಾಲೇಜಿನವನು 1, ಲಂಡನ್ನಿನಲ್ಲಿ ಛಾಯಾಚಿತ್ರಕಲೆಯನ್ನು ಕಲಿಯುವವನು 1, ಕಾಶಿಯಲ್ಲಿ ಸಂಸ್ಕೃತ ವ್ಯಾಸಂಗ ಮಾಡುವವರು 1. ಈ ಪ್ರಕಾರವಾಗಿ 128 ವಿದ್ಯಾರ್ಥಿಗಳಿಗೆ ಒಟ್ಟು 8,020 ರೂ ಗಳ ವೇತನವು ಕೊಡಲ್ಪಟ್ಟಿರುವುದು. ವಿದ್ಯಾರ್ಥಿವೇತನವನ್ನು ಕೋರಿದ್ದ 250 ಮಂದಿಗಳಲ್ಲಿ ಧನಾಭಾವದಿಂದ 128 ಮಂದಿಗಳಿಗೆ ಮಾತ್ರ ಕೊಡಬೇಕಾಗಿ ಬಂದಿತೆಂದೂ ವಿದ್ಯಾರ್ಥಿಗಳು ಬರೀ ಆರ್ಟ್ಸ್ ಗ್ರಾಜ್ಯುಯೇಟರುಗಳಾಗಲು ಪ್ರಯತ್ನಿಸುವುದಕ್ಕಿಂತ ಕಾಲಾನುಗುಣವಾಗಿ ಔದ್ಯೋಗಿಕ ಶಿಕ್ಷಣದ ಕಡೆಗೆ ಗಮನ ಕೊಡುವುದುತ್ತಮವೆಂದೂ ವರದಿಯಲ್ಲಿ ಹೇಳಲ್ಪಟ್ಟಿದೆ. ಈಗಿನ ಕಾಲದಲ್ಲಿ ಸರಕಾರಿ ಉದ್ಯೋಗವು ದೊರೆಯುವುದು ಕಷ್ಟವಾದುದರಿಂದ ಆದಾಯಕರವಾದ ಔದ್ಯೋಗಿಕ ಶಿಕ್ಷಣವನ್ನು ಹೊಂದುವುದು ಶ್ರೇಯಸ್ಕರವು. ಈ ಫಂಡಿನಿಂದ ವೇತನವನ್ನು ಪಡೆದವರು ಸಂಪಾದನೆಕಾರರಾದ ಮೇಲೆ ಆ ಹಣವನ್ನು ಹಿಂದಿರುಗಿ ಕೊಡಬೇಕೆಂಬ ನಿಯಮಾನುಸಾರವಾಗಿ 1930-31-7 ರೂ ಬರಮಾಡಲ್ಪಟ್ಟು ಮೂಲಧನಕ್ಕೆ ಸೇರಿಸಲ್ಪಟ್ಟಿರುತ್ತದೆ. ಆದರೆ ಇಬ್ಬರು ವಕೀಲರು ಹಣವನ್ನು ಕೊಡದೆ ದಾವಾ ಮಾಡಿಸಿಕೊಂಡಿರುವುದು ಬಹಳ ವಿಷಾದಕರವು. ಪ್ರಭುತ್ವದುದ್ಯೋಗಕ್ಕೆ ಸೇರಲು ಅರ್ಹರಾದ ವೀರಶೈವ ಅಭ್ಯರ್ಥಿಗಳ ಹೆಸರನ್ನು ಬೇಕಾದಾಗ ಪ್ರಭುತ್ವದವರಿಗೆ ತಿಳಿಸಿ ಶಿಫಾರಸು ಮಾಡುವ ಸೌಲಭ್ಯವು ಲಾರ್ಡ್ ವಿಲ್ಲಿಂಗ್‌ಡನ್ನರವರು ಬೊಂಬಾಯಿ ಗೌರ್ನರಾಗಿದ್ದಾಗ್ಗೆ ಈ ಸಂಘದವರಿಗೆ ಕೊಡಲ್ಪಟ್ಟಿತು. ಅದರ ಪ್ರಕಾರ ಈ ವರ್ಷದಲ್ಲಿ 17 ಮಂದಿಗಳು ಶಿಫಾರಸು ಮಾಡಲ್ಪಟ್ಟಿದ್ದರು. ಆದರೆ ಆರ್ಥಿಕಾಭಾವದಿಂದ ಯಾರಿಗೂ ಉದ್ಯೋಗ ದೊರೆಯಲಿಲ್ಲ. ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ಉದ್ಯೋಗಸ್ಥರನ್ನು ತೆಗೆಯುವುದರಲ್ಲಿ ವೀರಶೈವರನ್ನು ಕಡಮೆಮಾಡಬಾರದೆಂದು ಸಂಘದವರು ಪ್ರಾರ್ಥಿಸಿಕೊಂಡಿದ್ದರು. ಆದರಿಂದ ಸ್ವಲ್ಪವಾದರೂ ಪ್ರಯೋಜನವಾಗಿರಬೇಕೆಂದು ನೆನೆಸಲ್ಪಟ್ಟಿದೆ. ಇಂತಹ

ಸಾಲಿನ್ನವನ್ನು ನಮ್ಮ ಮೈಸೂರು ಸೀಮೆಯ ವೀರಶೈವ ವಿದ್ಯಾವರ್ಧಕ ಸಂಘ ಎಂಬುದರಿಂದ ನಮ್ಮ ಪ್ರಭುತ್ವದವರಿಂದ ಪಡೆದುಕೊಂಡಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನವಾಗುವುದಲ್ಲದೆ ಸಂಘದವರೂ ಬಹಳ ಭಾಗ್ಯಶಾಲಿಗಳಾಗಿದ್ದರು. ಇದಲ್ಲದೆ ಈ ಸಂಘದವರು ಈ ಸೀಮೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಈ ವಿಚಾರವನ್ನು ಪ್ರಸ್ತಾಪಿಸುವುದಕ್ಕೆ ಪ್ರಯತ್ನವನ್ನು ಮಾಡುವವರಾಗಬೇಕು. ಸ್ವಾಮಿ ಅವರು ತಮ್ಮ ಸಹಾಯವನ್ನು ನೀಡುವುದರಿಂದ ವೀರಶೈವ ವಿದ್ಯಾರ್ಥಿಗಳಿಗಾಗಿ ದಾನಮಾಡಿದ ಶ್ರೀ ಲಿಂಗರಾಜ ಅರಸು ಅವರ ಉದಾರ ಕೃತಿಯನ್ನು ಸಂಪಾದಿಸಿ ಉಪಯೋಗಿಸಿಕೊಂಡು ಮುಂದೆ ನಡೆಸುವ ವಿಷಯದಲ್ಲಿ ಧಾರವಾಡದವರಿಗೆ ವಿದ್ಯಾರ್ಥಿಗಳ ಹಿತವನ್ನು ನೆರವೇರಿಸುವ ಸಮಯದಲ್ಲಿ ಪ್ರತಿಷ್ಠೆಯನ್ನು ಮಾಡಿಸುವ ಪ್ರಯತ್ನವನ್ನು ಈ ಸಂಘದವರು ಕೈಕೊಂಡಿರುವುದೂ, ತಮ್ಮ ಕೃತಿಯಲ್ಲಿ ವಾಙ್ಮಯ ಶಾಖೆಯನ್ನು ಸ್ಥಾಪಿಸಿ ತನ್ಮೂಲಕ ವೀರಶೈವ ಪುರಾತನ ಮತಗ್ರಂಥಗಳನ್ನು ಶೋಧಿಸಲು ಉಪಕ್ರಮಿಸಿ ಚನ್ನಬಸವ ಪುರಾಣಗ್ರಂಥವನ್ನು ಮುದ್ರಣ ಮಾಡಿಸುತ್ತಿರುವುದೂ ಸ್ತುತ್ಯವೂ ಇತರ ವೀರಶೈವ ವಿದ್ಯಾವರ್ಧಕ ಸಂಘಗಳಿಗೆ ಮಾರ್ಗದರ್ಶಕವೂ ಆಗಿರುತ್ತವೆ. ನಮ್ಮ ಮೈಸೂರಿನ ವೀರಶೈವ ವಿದ್ಯಾವರ್ಧಕ ಸಂಘದವರು ಕಲ ವರ್ಷಗಳ ಹಿಂದೆ ಕೈಕೊಂಡಿದ್ದ ಶ್ರೀಕರ ಭಾಷ್ಯದ ಮುದ್ರಣವು ಇನ್ನೂ ಪೂರೈಸದೆ ಇದ್ದರೆ ಜಾಗ್ರತೆ ಪೂರೈಸುವಂತೆ ಪ್ರಯತ್ನಿಸುವರೆಂದೂ, ತತ್ಸಂಬಂಧವಾದ ವಿಷಯವನ್ನು ಈ ತಿಂಗಳಿನಲ್ಲಿ ನಡೆಯುವ ಸಂಘದ ಜನರಲ್ ಮೀಟಿಂಗಿನಲ್ಲಿ ತಿಳಿಸುವರೆಂದೂ ನಿರೀಕ್ಷಿಸುತ್ತೇವೆ. ಧಾರವಾಡದ ವಿದ್ಯಾವರ್ಧಕ ಸಂಘದವರ ಆಡಳಿತವು ಪ್ರಸಕ್ತ ವರ್ಷದಲ್ಲಿ ಬಹಳ ಸಮರ್ಪಕವಾಗಿ ನಡೆದಿರುವುದು ಅಭಿನಂದನೀಯವು ಮತ್ತು ಅವರು ಇನ್ನೂ ಹೆಚ್ಚಾಗಿ ವಿದ್ಯಾರ್ಥಿವೇತನಗಳನ್ನು ಕೊಡಲು ಅನುಕೂಲವಾಗುವಂತೆ ಮತಾಭಿಮಾನಿಗಳು ಸಂಘಕ್ಕೆ ದ್ರವ್ಯಸಹಾಯ ಮಾಡುವುದು ಆವಶ್ಯಕವು.

ಒಬ್ಬ ಖೈದಿಯನ್ನು ಹಾವು ಕಡಿದಿತು

ದಿಲ್ಲಿಯ ಸೆಂಟ್ರಲ್ ಜೈಲು ಹೊರಗಡೆ ನಾಲೆಯ ಹತ್ತಿರ [illegible] ಮಂದಿ ಸಿ ಕ್ಲಾಸ್ ಖೈದಿಗಳು ಕೆಲಸಮಾಡುತ್ತಿರುವಾಗ್ಗೆ [illegible]ವರಲ್ಲೊಬ್ಬನನ್ನು ಹಾವು ಕಡಿದಿತು. ಅವನು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ಹಳೇ ಅಡ್ವೋಕೇಟ್ ಜನರಲ್‌ರವರ ಸೆರೆ

ಹಿಂದೆ ಅಡ್ವೋಕೇಟ್ ಜನರಲ್ಲಾಗಿದ್ದ ಬಲ್ಲುಭಾಯಿ ಜೆ. ದೇಸಾಯಿಯವರು ತಮ್ಮ ಮನೆಯಲ್ಲಿರುವಾಗ್ಗೆ ಪೋಲೀಸು ಡೆಪ್ಯುಟಿ ಕಮಿಷನರ್ ಖಾನ್ ಬಹದ್ದೂರ್ ಪೋಚ್‌ರವರಿಂದ ಸೆರೆ ಹಿಡಿಯಲ್ಪಟ್ಟರು. ಇನ್ನೊಬ್ಬ ಅಡ್ವೊಕೇಟರೂ ಸೆರೆ ಹಿಡಿಯಲ್ಪಟ್ಟರು.

ಹಡಗಿನ ದೊಡ್ಡ ಅಧಿಕಾರಿಗೆ ಅರ್ಥ ದಂಡ

ಎಸ್ ಎಸ್ ಹವಾರ್ಡ್‌ರ್ ಎಂಬ ಹಡಗಿನಲ್ಲಿ ದೊಡ್ಡ ಅಧಿಕಾರಿಯಾಗಿರುವ ಇ ಎಚ್. ಮೇಕ್‌ಫೀಲ್ಡ್‌ರವರು ಇಬ್ಬರು ಯೂರೋಪಿಯನ್ ಅಪ್ರೆಂಟಿಸ್‌ರವರಿಂದ ಬಿಸಿಲಿನಲ್ಲಿ ಕೆಲಸ ಮಾಡಿಸಿದರೆಂಬ ಅಪರಾಧಕ್ಕಾಗಿ ಪೋರ್ಟ್ ರೂಲ್ಸಿನ ಪ್ರಕಾರ [illegible] ರೂ. ಜುಲ್ಮಾನೆ ವಿಧಿಸಲ್ಪಟ್ಟರು.

ಮೆಜಿಸ್ಟ್ರೇಟರ ಮೇಲೆ ಪಾದರಕ್ಷಾ ಪ್ರಯೋಗ

ಎರಡು ಕಳ್ಳತನ ಮಾಡಿದ ಅಪರಾಧಿಗೆ [illegible] ವರ್ಷ ಕಠಿಣ ಶಿಕ್ಷಾ ವಿಧಿಸಿರುವುದಾಗಿ ಅಹಮದಾಬಾದಿನ ಮೆಜಿಸ್ಟ್ರೇಟರು ತೀರ್ಪನ್ನು ಹೇಳಿದರು. ಖೈದಿಯು ಅದನ್ನು ಕೇಳಿ ಜೋಡನ್ನು ಮೆಜಿಸ್ಟ್ರೇಟರ ಮೇಲೆಸೆದನು. ಅದು ದೈವಾಧೀನದಿಂದ ಅವರಿಗೆ ತಗಲಲಿಲ್ಲವಾಗಿ ಖೈದಿಯು ಮತ್ತೊಂದು ಜೋಡನ್ನೆಸೆಯಲು ಪ್ರಯತ್ನಿಸುತ್ತಿರುವಷ್ಟರಲ್ಲಿ ಪೋಲೀಸಿನವರು ಅವನನ್ನು ಹಿಡಿದುಕೊಂಡರು.

ಗಾಂಧಿಯವರೊಡನೆ ರಾಯಭಾರ ನಡೆಯಲಿಲ್ಲ

ಬ್ರಿಟಿಷ್ ದೊರೆತನದವರಿಗೂ ಮಹಾತ್ಮ ಗಾಂಧಿಯವರಿಗೂ ರಾಯಭಾರ ನಡೆಯುತ್ತಿರುವುದೆಂಬ ವರ್ತಮಾನವು ನಿರಾಧಾರವಾದುದು. ಸತ್ಯಾಗ್ರಹವು ನಿಲ್ಲಿಸಲ್ಪಡುವವರೆಗೆ ಯಾವ ರಾಯಭಾರವೂ ನಡೆಯುವುದಿಲ್ಲ. ರಾಯಭಾರವನ್ನು ನಡೆಸಲು ಒಂದು ಪಕ್ಷ ಇಂಡಿಯಾ ಮಂತ್ರಿ ಹೋರ್‌ರವರು ಒಪ್ಪಿದರೂ ಈಗಿನ ಪಾರ್ಲಿಮೆಂಟು ಮೆಂಬರುಗಳೊಪ್ಪುವುದಿಲ್ಲವೆಂದು ಇಂಗ್ಲೀಷ್ ಪತ್ರಿಕೆಯು ತಿಳಿಸಿರುತ್ತದೆ.

ಬಲಿಕೊಡಲ್ಪಡಲಿಕ್ಕಿದ್ದ ಗೋವನ್ನು ಅಪಹರಿಸಿದುದು

ಮಹಮ್ಮದೀಯರು ಒಂದು ಮಸೀತಿಯಲ್ಲಿ ಬಲಿಕೊಡಲಿಕ್ಕೆ ತಂದಿದ್ದ ಗೋವನ್ನು ಪರಿಷದ್‌ದಾಸ್ ಎಂಬ ಸನ್ಯಾಸಿಯು ಪೋಲೀಸ್ ಕಾನ್‌ಸ್ಟೆಬಲ್ ಸುರಾಜ್‌ರಾಯ ಎಂಬವನ ಸಹಾಯದಿಂದ ಅಪಹರಿಸಿಕೊಂಡು ಹೋದುದರ ಮೇಲೆ ಹಿಂದು ಮಹಮ್ಮದೀಯರಿಗೆ ಬಡಿದಾಟವು ನಡೆದಿತು. ಇದಕ್ಕಾಗಿ ಆ ಸನ್ಯಾಸಿಯೂ ಕಾನ್‌ಸ್ಟೇಬಲೂ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿರುತ್ತಾರೆ.

ಸರ್ಪವು ಹಗೆಯನ್ನು ತೀರಿಸಿಕೊಂಡಿತು

ಕಲ್ಲಿಕೋಟೆಯಲ್ಲಿ ಒಬ್ಬ ತಿಯ್ಯಾ ಜಾತಿಯ ಯುವಕನು ಕಳೆದ ತಾ|| 21 ರ ರಾತ್ರಿ ಕತ್ತಲೆಯಲ್ಲಿ ಮನೆಗೆ ಬರುತ್ತಿರುವಾಗ್ಗೆ ದಾರಿಯಲ್ಲಿ ಒಂದು ಸರ್ಪವನ್ನು ತುಳಿದು ಕೊಲ್ಲಲು ಅದು ಅವನನ್ನು ಕಡಿಯಲೆತ್ನಿಸಿತು. ಆದರೆ ಅವನು ತಪ್ಪಿಸಿಕೊಂಡು ಮನೆಗೆ ಬಂದು ಊಟಮಾಡಿ ಸುಖವಾಗಿ ಮಲಗಿ ನಿದ್ರೆಹೋದನು. ಆ ಸರ್ಪ ಹುಡುಕಿಕೊಂಡು ಮನೆಯ ಬಳಿಗೆ ಬಂದು ತನ್ನ ಸೇಡನ್ನು ತೀರಿಸುವವರೆಗೂ ಅವನನ್ನು ಕಚ್ಚಿತು. [illegible] ಅವನು ಮೃತನಾದನು.

ಪ್ಲೇಗ್ ರೋಗಕ್ಕೆ ತುತ್ತಾದವನಿಗೆ ಮರಣ ದಂಡನೆ

ಒಂದು ಜೂನ್ ಕೆಲವು ಪ್ರಸಿದ್ಧನಾಗಿದ್ದ ಕಳ್ಳನು ಕಡೆಯಲ್ಲಿ ಪೋಲೀಸಿನವರಿಗೆ ಸಿಕ್ಕಿಬಿದ್ದನು. ಹಿಂದೆ ಅವನಿಗೆ ವಿಧಿಸಲ್ಪಟ್ಟಿದ್ದ ಮರಣ ದಂಡನೆಯು ಹೈಕೋರ್ಟಿನಲ್ಲಿ ಸ್ಥಿರಗೊಳಿಸಲ್ಪಟ್ಟಿತು. ಈ ಹಂತಕನು ಟೋಬಾನಾ ಅಮಲ್ದಾರನನ್ನು ಕೊಂದಿದ್ದನು ಮತ್ತು ಒಂದು ಗ್ರಾಮದಲ್ಲಿ ಗೋಹತ್ಯಮಾಡುತ್ತಿದ್ದ ಅನೇಕ ಮಂದಿ ಕಸಾಬರನ್ನು ಒಂದು ದಿವಸ ಕೊಂದುಬಿಟ್ಟನು. ಇಷ್ಟೇ ಅಲ್ಲದೆ ಆ ಪ್ರಾಂತದಲ್ಲಿ ಅವನು ಅನೇಕ ದರೋಡೆಗಳನ್ನು ನಡೆಸಿದ್ದನು.

೬೦೦ ಟಿನ್ನು ಪೆಟ್ರೋಲಿಯಂ ಅಗ್ನಿಪಾಲಾಯಿತು

600 ಪೆಟ್ರೋಲಿಯಂ ಟಿನ್ನುಗಳನ್ನು ತುಂಬಿಕೊಂಡು ಬೆಜವಾಡಕ್ಕೆ ಸೇರಿದ ಏಲೂರು ಕಾಲುವೆಯಲ್ಲಿ ಹೋಗುತ್ತಿದ್ದ ದೋಣಿಯೊಳಗೆ ನಾವಿಕರು ಅಡಿಗೆ ಮಾಡುತ್ತಿರುವಾಗ್ಗೆ ಪೆಟ್ರೋಲಿಯಮಿಗೆ ಬೆಂಕಿ ಬಿದ್ದು ಟಿನ್ನುಗಳು ಹೊತ್ತಿಕೊಂಡು ಉರಿದುಹೋದುವು. 20,000 ಮಂದಿ ದಡದಮೇಲೆ ನಿಂತು ನೋಡುತ್ತಿದ್ದರು. ಆವೇಳೆಯಲ್ಲಿ ಮಳೆಯು ಬಂದಿತ್ತಾದರೂ ಜ್ವಾಲೆಯನ್ನಾರಿಸಲು 3 ಗಂಟೆಕಾಲ ಹಿಡಿದಿತು. ಇದರಿಂದ ಕಂಪೆನಿಗೆ ಬಹಳ ನಷ್ಟಸಂಭವಿಸಿರುವುದು.

ಭಾರತ ಸಾಂಘಿಕ ಸಮಸ್ಯಾ ಪರಿಷ್ಕಾರ

ಪ್ರಧಾನ ಮಂತ್ರಿ ಮೆಕ್ಡೊನಾಲ್ಡರವರು ಈಗ ಲಾಸಿಮತ್ತಿನಲ್ಲಿ ಭಾರತ ಸಾಂಘಿಕ (ಮತ) ಸಮಸ್ಯೆಯನ್ನು ಬಗೆಹರಿಸುವ ವಿಚಾರವಾಗಿ ಬಹಳ ಶ್ರದ್ಧೆಯಿಂದ ಆಲೋಚಿಸುತ್ತಿರುವರು. ಈ ತಾ|| [illegible] ರಲ್ಲಿ ಮಂತ್ರಿ ವರ್ಗಕ್ಕೆ ಸೇರಿದ ಸಂಘ ಸಭೆಯು ಜರುಗುವುದು. ಆ ಸಭೆಯಲ್ಲಿ ಮೆಕ್ಡೊನಾಲ್ಡರವರು ಮುಖ್ಯವಾದ ಸೂಚನೆಯನ್ನು ಕೊಡಬೇಕಾಗಿದೆ. ಮೆಕ್ಡೊನಾಲ್ಡರವರಿಗೆ ಬಹಳವಾಗಿ ಆರೋಗ್ಯವಾಗಿರುವುದು. ತಾ|| 3 ರಲ್ಲಿ ಲಂಡನ್ ಪಟ್ಟಣಕ್ಕೆ ಬರುವರು. ಆಗ ಐರ್ಲೆಂಡು ಸಮಸ್ಯೆಯನ್ನೂ ಭಾರತ ಸಮಸ್ಯೆಯನ್ನೂ, ಒಟ್ಟಾವಾ ಸಭೆಯನ್ನೂ ಕುರಿತು ಮಂತ್ರಿವರ್ಗದವರೊಡನೆ ಪರ್ಯಾಲೋಚಿಸುವರು.

ಮೊಸಳೆಯು ಮಗುವನ್ನು ನುಂಗಿತು

ಒಂದು ದಂಪತಿಗಳು ತಮ್ಮ ಮಗುವಿನ ಸಮೇತ ಒಂದು ದೋಣಿಯಲ್ಲಿ ಕುಳಿತು ರವಿ ನದಿಯ ಮೇಲೆ ವಿಹರಿಸುತ್ತಿರುವಾಗ್ಗೆ ಸ್ತ್ರೀಯು ತನ್ನ ಮಗುವನ್ನು ಸ್ನಾನಮಾಡಿಸಲು ಅದನ್ನು ನೀರಿನಲ್ಲಿ ಅದ್ದಿ ಕೊಂಚಹೊತ್ತಿನ ಮೇಲೆ ಮಗುವನ್ನು ಮೇಲಕ್ಕೆತ್ತಿದಳು. ಆ ಮಗುವು ಮೇಲಕ್ಕೆ ಸರಾಗವಾಗಿ ಬರಲಿಲ್ಲ ಮತ್ತು ಯಾವುದೋ ಅದನ್ನು ಹಿಡಿದುಕೊಂಡು ಕೆಳಕ್ಕೆಳೆಯುವಂತೆ ಆಕೆಗೆ ತೋರಿತು. ಮೇಲಕ್ಕೆತ್ತಲು ಆಕೆಯು ಎಷ್ಟು ಪ್ರಯತ್ನಿಸಿದಾಗ್ಯೂ ಪ್ರಯೋಜನವಾಗಲಿಲ್ಲವಾಗಿ ದೋಣಿಯೊಳಗೆ ಕುಳಿತ್ತಿದ್ದವರೆಲ್ಲರೂ ಒಬ್ಬನ ತರುವಾಯ ಒಬ್ಬನು ಮಗುವನ್ನು ಹಿಡಿದುಕೊಂಡು ಮೇಲಕ್ಕೆತ್ತಲು ಸಾಹಸಪಟ್ಟರಾದರೂ ಸಾಧ್ಯವಾಗಲಿಲ್ಲ ಮತ್ತು ಈ ಪ್ರಯತ್ನದಲ್ಲಿ ದೋಣಿಯೊಳಕ್ಕೆ ನೀರು ನುಗ್ಗಿ ತುಂಬಿ ಇದರಿಂದ ದೋಣಿಯು ಮುಳುಗಿ ಹೋಗುವ ಭಯವುಂಟಾಗಲು ಮಗುವನ್ನು ನೀರಿನೊಳಕ್ಕೆ ಬಿಟ್ಟುಬಿಟ್ಟರು.

ರವೀಂದ್ರನಾಥ ಟಾಗೂರರ ವಿಷಾದವು

ಪ್ರಸ್ತುತ ಭಾರತ ಸ್ಥಿತಿಯ ವಿಚಾರವಾಗಿ ಕವೀಂದ್ರರಾದ ರವೀಂದ್ರನಾಥ ಟಾಗೂರ್‌ರವರು ತಮ್ಮ ವಿಷಾದವನ್ನು ಈ ಪ್ರಕಾರವಾಗಿ ಪ್ರಕಟಿಸಿರುತ್ತಾರೆ — ನ್ಯಾಯದ ಮೇಲೂ, ಸಾಮರಸ್ಯದ ಮೇಲೂ ಆಧಾರಪಟ್ಟುಕೊಂಡು ಸಾಮರಸ್ಯದಿಂದ ಕೂಡಿದ ಸಮಾಧಾನವನ್ನುಂಟುಮಾಡಲಿಕ್ಕೆ ತಕ್ಕ ಅವಕಾಶವು ಈ ಗಂಟಾಗಿದೆ. ಈ ಸಮಾಧಾನವನ್ನುಂಟುಮಾಡಲು ಭಾರತೀಯ ನಾಯಕರೂ, ಭಗವದಿಚ್ಛೆಯಿಂದ ಭಾರತ ದೇಶದೊಡನೆ ಸಂಬಂಧವನ್ನುಂಟುಮಾಡಿಕೊಂಡಿರುವ ವಿದೇಶೀಯರೂ ದೂರದೃಷ್ಟಿಯಿಂದಲೂ ಧೈರ್ಯ ಸ್ಥೈರ್ಯದಿಂದಲೂ ಕೃಷಿಮಾಡಬೇಕು. ಭಾರತ ದೇಶದ ಮುಂದಣ ಕಲ್ಯಾಣದಿಂದಲೇ ಸಮಸ್ತರಿಗೂ ಪ್ರಯೋಜನವಾಗಬೇಕಾಗಿರುವುದರಿಂದ ಅದನ್ನು ಪಡೆಯಲು ಎಲ್ಲರೂ ಭಿನ್ನ ಭಾವವನ್ನು ಬಿಟ್ಟು ತಕ್ಕ ರಾಜ್ಯಾಂಗ ವಿಧಾನವನ್ನೇರ್ಪಡಿಸಲು ಪ್ರಯತ್ನಿಸಬೇಕು. ಶಾಂತಿಯುತವಾದ ಸಾಂಘಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಕವಾದ ರಾಜ್ಯಾಂಗ ವಿಧಾನವನ್ನು ಏರ್ಪಡಿಸಬೇಕು. ಈಗ ಭಾರತ ದೇಶದಲ್ಲಿ ರಾಜಕೀಯದಲ್ಲಿ ಆಂದೋಳನವುಂಟಾಗಿದೆ. ಇದು ಮುಂದೆಯೂ ಹೀಗೆಯೇ ಇರುವುದಾದಲ್ಲಿ ಭೇದವು ಬಹಳವಾಗಿ ಹೆಚ್ಚುವುದರಿಂದ ಅನುಕೂಲ ಪರಿಸ್ಥಿತಿಯನ್ನುಂಟುಮಾಡಲು ಧೀಮಂತರು ಬಹಳವಾಗಿರುತ್ತಾರೆಂಬ ನಂಬಿಕೆಯು ನನಗಿರುತ್ತದೆ. ದೇಶದಲ್ಲಿ ಪರಿಸ್ಥಿತಿಯು ಒಬ್ಬರುತ್ತ ಕಿರಾತ ಸ್ವರೂಪವನ್ನು ಹೊಂದುತ್ತಿದೆ. ಅವಿಶ್ವಾಸ, ಸಂಶಯ, ದ್ವೇಷ ಮೊದಲಾದವುಗಳು ಹೆಚ್ಚುತ್ತಿರುವುವು. ದೊರೆತನದವರ ಕಠಿಣ ವಿಧಾನವೂ, ಭಿನ್ನ ಮತಾಂತರದವರ ಪ್ರತೀಕಾರವೂ ಬಹಳವಾಗಿ ಹೆಚ್ಚುತ್ತಿವೆ. ಈ ಸ್ಥಿತಿಯನ್ನು ಕೂಡಲೆ ತೊಲಗಿಸದಿದ್ದರೆ ಭಿನ್ನಮತದವರು ನವ ಸ್ಥಿತಿಯನ್ನು ನಿಚಾರಮಾಡಲಾರರು. ಮತ ಕಲಹವನ್ನು ಶಾಶ್ವತವಾಗಿ ಹೋಗಲಾಡಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕಷ್ಟವು ಎಷ್ಟು ಹೆಚ್ಚಾಗಿದ್ದರೂ ಸಹಿಸಬೇಕು. ಆಯಾ ಮತದ ಆಶಯಕ್ಕೆ ಸರಿ ಅನುಕೂಲಿಸುವುದು, ನವ ಸಂಕೀರ್ಣ ಮನಸ್ಥಿತಿ ಮನಸ್ಸೋವೃದ್ಧಿ ಹಿಂಸೆಯಾದರೆ ಮಾತ್ರ ಅದು ಏನಾಗಿ ಹೋಗುವುದಿಲ್ಲ. ಸ್ವದೇಶದಲ್ಲೇ ಒಳ್ಳೆ ಶಕ್ತಿಯುಳ್ಳದ್ದನ್ನು ಅದೆಷ್ಟು ಸಹಿಸುತ್ತಿದೆ. ಕಡೆಗೆ ಭಯಂಕರವಾದ ಅನಿಷ್ಟವು ಪರಿಣಾಮಕ್ಕೆ ಮನುಷ್ಯನ ನಾಗರಿಕತೆಯು ಸಂಪೂರ್ಣವಾಗಿ ಹೋಗುವುದು. ಆದುದರಿಂದ ಮನುಷ್ಯ ಚರಿತ್ರೆಯನ್ನು ಹಾಳುಮಾಡಲೆಂಬುವವರು ಇವುಗಳಿಗೆ ಯಾವಾಗಲೂ ಅವಕಾಶ ಕೊಡಕೂಡದು. ಇಂಡಿಯಾದಲ್ಲಿ ಪಾಲಕಪಾಲ್ಯರಲ್ಲಿ ನೈತಿಕ ಸಂಬಂಧವು ಕೆಟ್ಟುಹೋಗಿರುವುದರಿಂದ ಉಂಟಾಗಿರುವ ದುಸ್ಥಿತಿಯು ದಿನದಿನಕ್ಕೆ ದುರ್ಭರವಾಗುತ್ತಿರುವುದಲ್ಲದೆ ಬಹಳ ಅಸಹ್ಯಕರವಾಗಿ ಸಹ ಕಂಡುಬರುತ್ತಿದೆ. ಇದರಿಂದ ದೇಶವು ಕೇವಲ ಕಿರಾತಸ್ಥಿತಿಗೆ ಬರುವ ಸೂಚನೆಯು ಕಂಡುಬರುತ್ತಿರುವುದೆಂದು ಪ್ರಕಟಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರ ಪ್ಯಾಲೇಸು ಕಳೆದ ಸೋಮವಾರ ಬೆಂಗಳೂರಿಗೆ [illegible] ಕಳೆದ ಬುಧವಾರ ಸಾಯಂಕಾಲ ರಾಜಧಾನಿಗೆ ದಯಮಾಡಿಸಿ ನೆನ್ನೆಯ ದಿವಸ ಬೆಂಗಳೂರಿಗೆ ತೆರಳಿತು.

ರಾಜಧಾನಿಯಲ್ಲಿ ಇಲಿಗಳು ಸಾಯುವುದು ಹೆಚ್ಚಾಗಿ ಇಟ್ಟಿಗೆಗೂಡಿನಲ್ಲಿ ಪ್ಲೇಗು ಮರಣಗಳಾದವಲ್ಲದೆ ಲಷ್ಕರ್ ಮೊಹಲ್ಲಾ ಸೀಬಯ್ಯನ ಗಲ್ಲಿಯಲ್ಲಿಯೂ ಕುಂಬಾರಗೇರಿಯಲ್ಲೊಂದೂ ಪ್ಲೇಗು ಮರಣಗಳಾದವು. ಇದರಿಂದ ಈ ರೋಗವು ಪ್ರಬಲಿಸಬಹುದೆಂದು ತೋರುತ್ತದೆ.

ರಾಜಧಾನಿಯ ಜೈಲು ಸೂಪರಿಂಟೆಂಡೆಂಟರಾದ ಮ|| ಆರ್ ಮಲ್ಲಿಕಾರ್ಜುನಪ್ಪನವರು ಈ ತಾ [illegible] ರಲ್ಲಿ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡುವುದರಿಂದ, ಕೃಷ್ಣರಾಜೇಂದ್ರ ಆಸ್ಪತ್ರೆಯ ಅ|| ಸರ್ಜನ್ ಮ|| ಎಸ್ ಎನ್. ಪ್ರಸಾದರವರು ತಮ್ಮ ಕೆಲಸದೊಡನೆ ಜೈಲು ಸೂಪರಿಂಟೆಂಡೆಂಟ್ ಕೆಲಸವನ್ನೂ ನೋಡಿಕೊಳ್ಳಬೇಕಾಗಿ ಅಪ್ಪಣೆಯಾಗಿರುತ್ತದೆ.

5-6 ದಿವಸಗಳ ಹಿಂದೆ ಶ್ರೀರಂಗಪಟ್ಟಣದಿಂದಾಚೆಗಿರುವ ಕಿರಂಗೂರು ಸೇತುವೆಯ ಬಳಿ ಕಾವೇರಿ ನದಿಯ ದಡದಲ್ಲಿ ಬಂತಿಯನ್ನೊಗೆಯುತ್ತಿದ್ದ ಒಬ್ಬ ತರುಣನು ಅವನ ಸಹಾಯಕ್ಕಾಗಿ ಹೋಗಿದ್ದ ಅವನ ಮಾವನೂ ಇವರುಗಳ ಸಮೀಪದಲ್ಲಿ ಮುಖವನ್ನು ತೊಳೆಯುತ್ತಿದ್ದ ಮತ್ತೊಬ್ಬನೂ ನದಿಯಲ್ಲಿ ಆಕಸ್ಮಾತ್ ಪ್ರವಾಹವು ಹೆಚ್ಚು ಬಂದುದರಿಂದ ಮೂವರೂ ನೀರಿನಲ್ಲಿ ಕೊಚ್ಚಿಹೋದರೆಂದು ಕೇಳುತ್ತೇವೆ.

ಬೆಂಗಳೂರಿನಲ್ಲಿರುವ ಹೈದರಾಬಾದು ಸಂಸ್ಥಾನದ ಯುವರಾಜ ನವೋದರ ದಂಪತಿಗಳಲ್ಲಿ ಯುವರಾಜರ ಪತ್ನಿಯವರು ದಿವಾನ್ ಸರ್ ಮಿರ್ಜಾ ಯವರೊಡನೆ ಕಳೆದ ಮಂಗಳವಾರ ಸಾಯಂಕಾಲ ಪಬ್ಲಿಕ್ ಆಫೀಸು ಕಟ್ಟಡಕ್ಕೆ ಬಂದಿದ್ದು ಚೀಫ್ ಸೆಕ್ರೆಟರಿ ಮ|| ಎನ್. ಮಾಧವರಾಯರಿಂದಲೂ ರಿಜಿಸ್ಟ್ರಾರ್ ಜನರಲ್‌ರವರಿಂದಲೂ ಗೌರವಪೂರ್ವಕವಾಗಿ ಇದಿರುಗೊಳ್ಳಲ್ಪಟ್ಟು ದಿವಾನರ ಕೊಟಡಿಯನ್ನೂ, ಸಚಿವರ ಮತ್ತು ನ್ಯಾಯವಿಧಾಯಕ ಸಭೆಯ ಮಂದಿರಗಳನ್ನೂ ಪರಾಮರ್ಶಿಸಿದರು.

ಮಂಡ್ಯದ ಸಬ್ ಡಿವಿಜನ್ ಆಫೀಸರಾದ ಮ|| ಆರ್ ಎ ನರಸಿಂಹಯ್ಯಂಗಾರ್ಯರು ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿಯೂ ಇರುವುದರಿಂದ ತತ್ಸಂಬಂಧವಾಗಿ ಕಳೆದ ಶನಿವಾರ ಹಿರೋಡೆಗೆ ಬಂದಿದ್ದು ಹಿನೋಡೆ ಬೆಟ್ಟಕ್ಕೆ ಹೋಗಿ ಅಲ್ಲಿದ್ದ ಸನ್ಯಾಸಿಗಳ ದರ್ಶನವನ್ನು ಮಾಡಿಕೊಂಡು ಹೊರಟವರು ಬಿಡಾರಕ್ಕೆ ಬರಲಿಲ್ಲವೆಂದೂ ಎಲ್ಲಿಗೆ ಹೋದರೆಂಬುದು ಗೊತ್ತಾಗಲಿಲ್ಲವೆಂದೂ, ಈ ವಿಚಾರವನ್ನು ತಿಳಿದು ಮೈಸೂರು ಡೆಪ್ಯುಟಿ ಕಮಿಷನರು ಅಲ್ಲಿಗೆ ಹೋಗಿದ್ದರೆಂದೂ ತಿಳಿಯಬರುತ್ತದೆ. ಮ|| ನರಸಿಂಹಯ್ಯಂಗಾರ್ಯರಿಗೆ ಒಂದೊಂದು ವೇಳೆ ಬುದ್ಧಿ ವಿಕಲ್ಪವಾಗಿ 1 2 ದಿವಸಗಳ ಮೇಲೆ ಸರಿಹೋಗುವುದುಂಟೆಂದು ಅವರ ಮನೆಯವರು ಹೇಳುವರಂತೆ.

ಕಳೆದ 1929 ನೆಯ ಮಾರ್ಚಿ ತಾ|| 27 ರಲ್ಲಿ ಚೆನ್ನಪಟ್ಟಣದ ಮುಳ್ಳಪ್ಪನವರು ನಡಗಟ್ಟದ ಸಂತೆಗೆ ಹೋಗುತ್ತಿರುವಾಗ್ಗೆ, ಬೈರಾಪಟ್ಟಣದ ಮತ್ತು ಕೆಲ ನೆರೆ ಗ್ರಾಮಗಳ ರೈತರುಗಳು ಆ ಮುಳ್ಳಪ್ಪನ ಮೇಲೆ ಬಿದ್ದು ಹೊಡೆದರೆಂಬ ಅಪರಾಧಕ್ಕಾಗಿ ಸಣ್ಣೇಗೌಡ, ಕೆಂಪಯ್ಯ ಮತ್ತೆ ಐವರು ಬೆಂಗಳೂರು ಅಸಿಸ್ಟೆಂಟ್ ಸೆಷನ್ಸ್ ಜಡ್ಜಿಯವರಿಂದ 6 ತಿಂಗಳ ಕಠಿಣ ಸಜ ವಿಧಿಸಲ್ಪಟ್ಟಿದ್ದರು. ಅಪರಾಧಿಗಳೆಲ್ಲರ ವಿಚಾರಣೆಯು ಒಟ್ಟಿಗೆ ಮಾಡಲ್ಪಟ್ಟು ನ್ಯಾಯ ವಿರುದ್ಧವೆಂದು ಹೇಳಿ ಚೀಫ್ ಕೋರ್ಟಿಗೆ ಅಪೀಲುಮಾಡಲ್ಪಟ್ಟಿದ್ದುದರ ಮೇಲೆ, ಎಲ್ಲರ ವಿಚಾರಣೆಯನ್ನೂ ಒಟ್ಟಿಗೆ ಮಾಡಿರುವುದು ನ್ಯಾಯ ವಿರುದ್ಧವಲ್ಲವೆಂದೂ, ಟ್ರೈಯಿಂಗ್ ಮೆಜಿಸ್ಟ್ರೇಟರು ಬಹಳ ಎಚ್ಚರಿಕೆಯಿಂದ ವಿಚಾರಣೆ ನಡೆಸಿರುತ್ತಾರೆಂದೂ, ಜಸ್ಟಿಸ್. ಸಿ. ಮಹಾದೇವಯ್ಯನವರು ಅಭಿಪ್ರಾಯಪಟ್ಟು ಕೆಳಗಿನ ಕೋರ್ಟಿನ ತೀರ್ಪನ್ನು ಸ್ಥಿರ ಪಡಿಸಿದರು.

ರಾಜಧಾನಿಯ ಲಷ್ಕರ್ ಮೊಹಲ್ಲಾ ಕುಂಬಾರಗೇರಿಯಲ್ಲಿರುವ ಕಂಟ್ರಾಕ್ಟರ್ ಮ|| ವ್ಹಿ ಶಿವಪ್ಪನವರ ಮನೆಗೆ ನೆನ್ನೆಯ ದಿವಸ ಬೆಳಗಿನ 8 ಘಂಟೆಯಲ್ಲಿ ಒಬ್ಬ ಹುಡುಗನು ನಿಗ್ಗಿ ಮಹಡಿಯ ಮೇಲಕ್ಕೆ ಹೋಗಿ ಬೀಗ ತೆಗೆದಿದ್ದ ಕೊಠಡಿಯೊಳಕ್ಕೆ ಪ್ರವೇಶಿಸಿ ಎರಡು ದೊಡ್ಡ ಬೆಳ್ಳಿಯ ತಟ್ಟೆಗಳನ್ನು ಅಪಹರಿಸಿಕೊಂಡು ಇಳಿಯುತ್ತಿರುವಾಗ್ಗೆ ಮನೆಯ ಹೆಂಗಸೊಬ್ಬಳು ಕಂಡು ಏನೆಂದು ಪ್ರಶ್ನಿಸಲು ಅವಳು ಉತ್ತರಕೊಡದೆ ಹಾದಿಗೆ ಬಿದ್ದು ಹೋದನು. ಆಕೆಯು ಅವನನ್ನು ಹಿಂಬಾಲಿಸಲು ಅವನು ಸಮೀಪದಲ್ಲಿದ್ದ ಮನೆಯ ಹಿತ್ತಿಲಿಗೆ ಹೋಗಿ ತಟ್ಟೆಗಳನ್ನು ಮುಚ್ಚಿಟ್ಟು ಬಚ್ಚಿಟ್ಟುಕೊಂಡಿದ್ದನು. ಇದನ್ನು ನೋಡುತ್ತಿದ್ದ ಒಬ್ಬ ಹುಡುಗನು ಅವನನ್ನು ಹಿಂಬಾಲಿಸುತ್ತಿದ್ದ ಹೆಂಗಸರಿಗೆ ತಿಳಿಸಲು ಅವರು ಇತರರನ್ನು ಸಹಾಯಕ್ಕೆ ಕೂಗಿದರು. ಕೂಡಲೆ ಆ ಹುಡುಗನು ತಟ್ಟೆಗಳನ್ನಲ್ಲೇ ಬಿಟ್ಟೋಡಿದನು. ಮನೆಯವರು ಅವನನ್ನು ಹಿಡಿದುಕೊಂಡು ಪೋಲೀಸಿನವರಿಗೆ ಒಪ್ಪಿಸಲು ತನ್ನ ಕಡೆ ಸಾಕ್ಷಿ ಮನೆಯವರ ಮುಂದೆ ಪ್ರಯತ್ನಿಸಿದನು ಎಂದು ಹೇಳಲ್ಪಟ್ಟಿದೆ.

1931 ರಲ್ಲಿ ನಡೆದ ಮೈಸೂರು ಸೀಮೆಯ ಜನಪರಿಗಣತಿ.

ಡಿಸ್ಟ್ರಿಕ್ಟ್, ಪಟ್ಟಣಗಳು ಮತ್ತು ಜನಸಂಖ್ಯೆ

ಡಿಸ್ಟ್ರಿಕ್ಟು ಅಥವಾ ಸಂಸ್ಥಾನ	[illegible]	ಪಟ್ಟಣಗಳು	ಗ್ರಾಮಗಳು	ಒಕ್ಕಲಿರುವ ಮನೆಗಳು: ಒಟ್ಟು	ಪಟ್ಟಣ	ಗ್ರಾಮ	ಜನಗಳು: ಒಟ್ಟು	ಪಟ್ಟಣ	ಗ್ರಾಮ	ಪುರುಷರು: ಒಟ್ಟು	ಪಟ್ಟಣ	ಗ್ರಾಮ	ಸ್ತ್ರೀಯರು: ಒಟ್ಟು	ಪಟ್ಟಣ	ಗ್ರಾಮ
ಬೆಂಗಳೂರು ದಂಡು ಸೇರಿ ಸಂಸ್ಥಾನ	29 32[illegible]	10[illegible]	16 3[illegible]	1 [illegible]1 4[illegible]	20[illegible] [illegible]07	1,106 [illegible]75	6 557 302	1 045,043	5 512 [illegible]	3,3[illegible]	[illegible]	2 807,14[illegible]	3 2[illegible] 3[illegible]	4[illegible]	4 705 119
ಪಟ್ಟು	20 3 1	107	16 383	1 280 893	183 936	1 [illegible]05 878	6 423 180	910 920	5 512 260	3 291 061	477 413	2 807 14[illegible]	3 1[illegible] 633	433 616	2 705,110
ಬೆಂಗಳೂರು ಸಿಟಿ	12	1		34 057	34 657		173 357	172 357		91 680	91 680		80 677	80 677	
ಡಿಸ್ಟ್ರಿಕ್ಟು	2 022	13	2 478	170 950	15 031	161 824	908 066	77 990	830 066	461 006	38 827	4[illegible]3 078	446 151	38 163	407 988
ಕೋಲಾರ ಗೋಲ್ಡ್ ಫೀಲ್ಡ್ಸ್	30	1		19 148	19 448		85 103	85 103		45 051	45 051		40 052	40 052	
ಡಿಸ್ಟ್ರಿಕ್ಟು	3 101	11	2 761	150 993	13 710	137 283	763 154	70 040	693 804	389 262	35 760	353 436	374 072	34 374	340 308
ತುಮಕೂರು	4 083	10	2 381	171 154	12 083	160 101	801 405	61 686	739 819	431 144	32,182	406 012	122 20	29 104	392 807
ಮೈಸೂರು ಪಟ್ಟಣ	10	1		21 716	1 717		107 142	107 142		57 722	0 17[illegible]		50 370	50 370	
ಡಿಸ್ಟ್ರಿಕ್ಟು	5 192	26	[illegible] 709	291 050	[illegible]8 721	267 831	1 108 034	115 056	1 [illegible]88 958	703 838	58 862	[illegible]41 976	700 146	56 194	643 052
ಚಿತ್ರದುರ್ಗ	1 149	11	1 250	124 708	13 315	111 [illegible]	656 [illegible]	66 451	590 118	336 786	31 58	3[illegible] 200	319 783	31 865	287 918
ಹಾಸನ	2 635	12	2 [illegible]52	1[illegible]2 146	6 [illegible]	[illegible] 976	616 [illegible]37	64 667	44 370	300 716	7 5[illegible]	2 3 2[illegible]	298 10[illegible]	25 [illegible]	271 140
ಕಡೂರು	2 77	9	159	73 649	7 983	65 664	34[illegible] 716	39 911	307 804	184 689	[illegible]	[illegible]	163 3 6	18 583	144 743
ಶಿವಮೊಗ್ಗ	4 048	12	1 714	102 949	11 271	91 678	510 187	[illegible]	[illegible]	[illegible]	[illegible]	241 147	245 006	[illegible]8 89[illegible]	216 114
ಬೆಂಗಳೂರು ದಂಡು	11	1		21 612	21 612		134 113	134 113		[illegible]	[illegible]		64,704	64 704	

ಮಹಮ್ಮದೀಯರ ಪ್ರಾಬಲ್ಯಕ್ಕೆ ಸಿಕ್ಕರ ಅಸಮ್ಮತಿ

ಕಳೆದ ಜುಲೈ ತಾ|| 24 ನೆಯ ಶುಕ್ರವಾರ ಸಿಮ್ಲಾದಲ್ಲಿರುವ ಸಿಂಗು ಸಭಾ ಮಂದಿರದಲ್ಲಿ ಸರ್ ಸುಂದರಸಿಂಗು ಸರದಾರ್ ಉಜ್ವಲಸಿಂಗು ಆನರಬಲ್ ಸರ್ದಾರ್ ಬೂಟಸಿಂಗು, ಭಾಯಿ ಅರ್ಜುನಸಿಂಗು ಇವರೇ ಮೊದಲಾಗಿ ಸಿಕ್ಕ ನಾಯಕರುಗಳೂ ಇತರರೂ ಸರದಾರ್ ಬಹದೂರು ಶಿವನಸಿಂಗರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು ಗಯಾನೀಶೇರುಸಿಂಗರವರು ಪ್ರಥಮೋಪನ್ಯಾಸಮಾಡುವಾಗ್ಗೆ ಮಹಮ್ಮದೀಯರಿಗೆ ಮೆಕ್ಕಮದೀನಾ ಹೇಗೆ ಪವಿತ್ರಸ್ಥಾನಗಳೋ ಹಾಗೆ ಸಿಕ್ಕರಿಗೆ ಪಂಜಾಬು ಪವಿತ್ರಸ್ಥಾನವಾಗಿರುತ್ತದೆ ಮಹಮ್ಮದೀಯರಿಗೆ ಯಾವರೀತಿಯಾಗಿ ಆಧಿಕ್ಯವನ್ನು ಕೊಟ್ಟರೂ ನಾವು ಮಹಮ್ಮದೀಯರ ಪರಿಪಾಲನಕ್ಕೊಳಪಡುವುದಿಲ್ಲ ಅವಶ್ಯವಾದಲ್ಲಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಕಾದಾಡಲು ಲಕ್ಷಮಂದಿ ಸಿಕ್ಕರು ಸಿದ್ಧರಾಗಿರುವರು ಶಾಸನಸಭೆಯ ಸ್ಥಾನಗಳ ಪರಿಷ್ಕಾರದಲ್ಲಿ ಯಾವ ಲೋಪವುಂಟಾದರೂ ಅದಕ್ಕೆ ವೈಸ್ರಾಯರೂ ಪಂಜಾಬು ಗೌರ್ನರೂ ಜವಾಬುದಾರರಾಗುವರು ಆರ್ಥಿಕಸ್ಥಿತಿಯ ವಿಚಾರದಲ್ಲಿ ಹಿಂದುಗಳಿಗೂ ಸಿಕ್ಕರಿಗೂ ಸಾಮ್ಯವಿರುವುದಕ್ಕಿಂತ ಮಹಮ್ಮದೀಯರಿಗೂ ಸಿಕ್ಕರಿಗೂ ಸಾಮ್ಯವು ಹೆಚ್ಚಾಗಿರುತ್ತದೆ ಯಾವವೊ ಕೆಲ ಸ್ಥಾನಗಳಿಗೆ ಮಹಮ್ಮದೀಯರು ಆಶಪಟ್ಟರೆ ಅವರಿಗೆ ಸಿಕ್ಕರೊಡನೆ ಸ್ನೇಹವು ಶಾಶ್ವತವಾಗಿ ಕಳೆದುಹೋಗುವುದು ಎಂದು ಹೇಳಿದರು "ಸಮಷ್ಟಿ ನಿಯೋಜಕವರ್ಗದಿಂದಲೂ ಪಂಜಾಬನ್ನು ಸಾಂಘಿಕವಾಗಿ ವಿಭಜನಮಾಡುವುದರಿಂದಲೂ ಈ ಸಮಸ್ಯೆಯನ್ನು ಪರಿಷ್ಕರಿಸಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದುವು ಸಿಕ್ಕರು ಕತ್ತಿಯ ಸಹಾಯದಿಂದ ಪಂಜಾಬನ್ನು ಸಂಪಾದಿಸಿದರು ಇದನ್ನು ಬ್ರಿಟಿಷು ದೊರೆತನದವರು ಲೇಪಿನಿಯ ಸಹಾಯದಿಂದ ಸಾಂಘಿಕ ಮಹಮ್ಮದೀಯರ ಪರಿಪಾಲನದಿಂದ ಕಾಪಾಡಿದರು ಅಧಿಕಸಂಖ್ಯಾಕರಾದ ಮಹಮ್ಮದೀಯರಿಗೆ ಅಧೀನರಾಗಿರಲು ನಾವೆಷ್ಟುಮಾತ್ರಕ್ಕೂ ಒಪ್ಪುವುದಿಲ್ಲ ಎಂದು ಸರ್ದಾರ್ ಉಜ್ವಲಸಿಂಗರೂ ಹೇಳಿದರು "ಪಂಜಾಬು ಶಾಸನ ಸಭೆಯ ಸಭ್ಯತ್ವದಲ್ಲಿ ಸಿಕ್ಕರಿಗಿರುವ ನ್ಯಾಯವಾದ ಹಕ್ಕುಗಳನ್ನೂ ಸಿಕ್ಕರು ಈವರೆಗೆ ಮಾಡಿದ ಉಪಕಾರವನ್ನೂ ದೊರೆತನದವರು ಈಗ ಮರೆತು ಹೆಚ್ಚು ಸ್ಥಾನಗಳನ್ನು ಮಹಮ್ಮದೀಯರಿಗೆ ಕೊಡಲು ನಿಶ್ಚಯಿಸಿರುವರೆಂಬ ವರ್ತಮಾನವು ಪ್ರಬಲವಾಗಿರುವುದರಿಂದ ಸಿಮ್ಲಾದಲ್ಲಿರುವ ಸಿಕ್ಕರಿಗೆ ಬಹಳ ವ್ಯಾಕುಲವಾಗಿರುತ್ತದೆ ಸಿಕ್ಕಮತಕ್ಕೆ ಪಂಜಾಬು ಜನ್ಮಸ್ಥಾನವು ಅಲ್ಪಸಂಖ್ಯಾಕರಾಗಿರುವ ಮಹಮ್ಮದೀಯರು, ಆಂಗ್ಲೊ ಇಂಡಿಯನ್ನರು ಯೂರೋಪಿಯನ್ನರು ಮೊದಲಾದವರುಗಳಿಗೆ ಕೋರಿಸಲ್ಪಡುತ್ತಿರುವಂತಹ ಸೌಕರ್ಯಗಳೇ ಸಿಕ್ಕರಿಗೂ ಸಹ ಒದಗಿಸಿಕೊಡಬೇಕು ಹಾಗಿಲ್ಲದಿದ್ದಲ್ಲಿ ಬಹಳ ಆಶಾಭಂಗವಾಗುವುದು ಎಂದು ಈ ಸಭೆಯವರು ನಿಷ್ಕರ್ಷೆಯಿಂದಲೂ ಧೈರ್ಯದಿಂದಲೂ, ಸವಿನಯದಿಂದಲೂ ದೊರೆತನದವರಿಗೆ ತಿಳಿಸಲಿಚ್ಛಿಸುತ್ತಾರೆ ಪಂಜಾಬಿನಲ್ಲಿ ಸಿಕ್ಕರ ಸಂಖ್ಯೆಯು ಬಹಳ ಹೆಚ್ಚಾಗಿರುತ್ತದೆ ಅವರಿಗೆ ಸಂಪೂರ್ಣ ರಕ್ಷಣೆಯು ಲಭಿಸದಿದ್ದರೆ ಅವರು ಶಾಂತಿಯುತವಾದ ಸಾಧನಗಳಿಂದೆಲ್ಲ ಪ್ರತಿಭಟಿಸದೆ ಬಿಡರು ರಾಷ್ಟ್ರೀಯ ಸ್ವಪರಿಪಾಲನವನ್ನು ಕಳೆದುಕೊಳ್ಳಲು ಸಿಕ್ಕರೊಪ್ಪುವುದಿಲ್ಲ ಆದರೆ ಬ್ರಿಟಿಷ್ ದೊರೆತನದವರ ಪರಿಷ್ಕಾರದಿಂದ ಮಹಮ್ಮದೀಯರ ಪರಿಪಾಲನವೇರ್ಪಟ್ಟಲ್ಲಿ ಅದಕ್ಕೆ ಅಧೀನರಾಗಲು ಸಿಕ್ಕರೆಷ್ಟುಮಾತ್ರಕ್ಕೂ ಸಮ್ಮತಿಸುವುದಿಲ್ಲ ಭಾರತ ಶಾಸನಸಭೆಯಲ್ಲಿ 100 ಕ್ಕೆ 6 ಸ್ಥಾನಗಳೂ ಸರಹದ್ದು ಶಾಸನ ಸಭೆಯಲ್ಲಿ 6 ಸ್ಥಾನಗಳೂ ಭಾರತ ಪ್ರಭುತ್ವ ವರ್ಗದಲ್ಲಿ ಒಂದು ಸ್ಥಾನವೂ ಸಿಕ್ಕರಿಗೆ ದೊರಕಬೇಕು ಸಿಕ್ಕರು ಕೋರಿರುವ 17 ವಿಷಯಗಳು ನೆರವೇರಬೇಕು" ಎಂದು ತೀರ್ಮಾನಿಸಲ್ಪಟ್ಟಿತು

ಮನುಷ್ಯರ ಮುತ್ತಜ್ಜಿ

ಡಚ್ ಪ್ರೊಫೆಸರರಾದ ಬರ್ನಲೋಟ್ ಮೋಯಿನ್ಸ್ ಎಂಬವರು ಡಾರ್ವಿನರಂತೆಯೇ ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞರು ಮಂಗನೆ ಮನುಷ್ಯನ ಅಜ್ಜ ಎಂಬುದು ಅವರ ಸಿದ್ಧಾಂತ ಅವರಿಗೆ ಈಗ ಒಬ್ಬಳು ಹುಡುಗಿಯು ದೊರೆತಿರುವಂತೆ ಆಕೆಯು ಮನುಷ್ಯರ—ಮಂಗಗಳ ಮಧ್ಯವರ್ತಿನಿಯಾಗಿದ್ದಾಳೆಂದವರು ಹೇಳುತ್ತಾರೆ ಹುಡುಗಿಯ ಹೆಸರೇನೆಂಬುದನ್ನು ಅವರಿನ್ನೂ ತಿಳಿಸಲಿಲ್ಲ ಅವಳು ಮನುಷ್ಯನ ಮುತ್ತಜ್ಜಿಯಾಗಿರಲು ಅರ್ಹಳಂತೆ ಇಂದಿನ ಮುತ್ತಜ್ಜಿಯಲ್ಲ ಕೋಟ್ಯಂತರ ವರ್ಷಗಳ ಹಿಂದಿನ ಮುತ್ತಜ್ಜಿ ಇಂದವಳ ಪರಿಚಯವನ್ನು ಅವರು ಹೀಗೆ ಕೊಡುತ್ತಾರೆ — ಸೈನ್ಸ್‌ನಗರದಲ್ಲಿಯ ಸುಪ್ರಸಿದ್ಧ ಕಟುಂಬಕ್ಕೆ ಸೇರಿದವಳೀಕೆ ವಿಜ್ಞಾನಶಾಸ್ತ್ರಗಳಿಗೆ ತನ್ನಿಂದಾಗುವ ಲಾಭವೇನೆಂದು ಅವಳಿಗೆ ಗೊತ್ತಿದೆ ಅವಳ ಬಂಧುಬಳಗಕ್ಕೂ ಗೊತ್ತಿದೆ, ಅದ್ದರಿಂದ ಅವಳ ಛಾಯಾಚಿತ್ರ ತೆಗೆಯಲು ಅವರೆಲ್ಲರೂ ಒಪ್ಪಿದ್ದಾರೆ ಹೊರಗಿನಿಂದ ನೋಡುವಾಗ ಅವಳ ಆಕಾರದಲ್ಲಿ ವಿಶೇಷವೇನೂ ತೋರುವುದಿಲ್ಲ ಆದರೆ ವಸ್ತ್ರಗಳನ್ನು ತೆಗೆದರೆ ಎದೆಯಿಂದ ಮೊಣಕಾಲಿನ ವರೆಗೆ ಮಂಗನ ಮೈಯಲ್ಲಿರುವಂತಹ ಉಣ್ಣೆಯನ್ನು ನೋಡಬಹುದು ಇದರರ್ಥವೇನೆಂದರ ಈ ಹುಡುಗಿಗೆ, ಆಕೆಯ ಅತಿ ಪುರಾತನ ಪೂರ್ವಿಕರಾದ ಮಂಗಗಳ ಸ್ವಭಾವ ಬಂದಿದೆ ಇದರಿಂದ ಡಾರ್ವಿನರ ವಿಕಾಸವಾದವು ಸರಿ ಪ್ರಾಣಿಗಳು ಬುದ್ಧಿಶಕ್ತಿಯಲ್ಲಿ ಅಭಿವೃದ್ಧಿಹೊಂದಿ ಆಕಾರದಲ್ಲಿ ಸ್ವಲ್ಪ ವ್ಯತ್ಯಾಸಗೊಂಡು ಮನುಷ್ಯರೆನಿಸಿಕೊಂಡರು ಎಂದು ಈ ಪಂಡಿತರು ಹೇಳುತ್ತಾರೆ ಪ್ರಪಂಚದ ಪ್ರಾಣಿಶಾಸ್ತ್ರಜ್ಞರಲ್ಲಿ ನಿಪುಣರಾದವರು ಇವಳನ್ನು ಪರೀಕ್ಷಿಸಿ ಮಾಡಿ ಮಂಗನಿಗೂ ಮನುಷ್ಯರಿಗೂ ಇರುವ ಸಂಬಂಧವನ್ನು ಮತ್ತೆ ನಿಷ್ಕರ್ಷೆಮಾಡಿಬಿಡುವರಂತೆ!

ರಾ ಬ

ತುಮಕೂರು ಡಿಸ್ಟ್ರಿಕ್ಟು ಬೋರ್ಡು

ಪ್ರಕಟನೆ.

ತಾ|| 30 7 193[illegible]

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ –

ತುಮಕೂರು ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದುಮಾಡಿರುವ ಸಂತೆಗಳಲ್ಲಿ ಹಿಂದೆ 30 6-1[illegible] ನೆಯ ಮದ್ರಾಸ್ ಎಲ್ 1-95 ಎಸ್ ಬಿ 21-[illegible]-2 ನೆಯ ನಂಬರು ಗೌರ್ನಮೆಂಟು ಆರ್ಡರಿನಲ್ಲಿ ಮಂಜೂರುಮಾಡಿರುವ ದರಗಳಂತೆ ಸುಂಕವನ್ನು ವಸೂಲ್ಮಾಡುವುದಾಗಿ ಬೋರ್ಡಿನಲ್ಲಿ ತೀರ್ಮಾನಿಸಿರುತ್ತಾರೆ

ಸದರಿ ಸಂತೆಗಳಲ್ಲಿ ಸುಂಕವನ್ನು ವಸೂಲ್ಮಾಡುವ ವಿಚಾರದಲ್ಲಿ ತಕರಾರುಗಳು ಏನಾದರೂ ಇದ್ದ ಪಕ್ಷದಲ್ಲಿ ಈ ಇಷ್ಟಿಹಾರ್‌ಮೆ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಅಂತಹ ತಕರಾರುಗಳನ್ನು ಲಿಖಿತಮೂಲಕ ತುಮಕೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರಿಗೆ ಒರೆದುಕೊಳ್ಳತಕ್ಕದ್ದಿರುತ್ತದೆ

ಕಾಲಾತೀತವಾಗಿ ಬರುವ ತಕರಾರುಗಳಿಗೆ ಗಮನ ಕೊಡುವುದಿಲ್ಲ

ತಾಲ್ಲೂಕು ಹೆಸರು	ಸಂತೆ ನಡೆಯುವ ಸ್ಥಳ
1 ಮಧುಗಿರಿ	(1) ಒಡವನಹಳ್ಳಿ
	(11) ಕೊಡಿಗೇನಹಳ್ಳಿ
2 ಶಿರಾ	(1) ಪಟ್ಟನಾಯ್ಕನಹಳ್ಳಿ
	(1) ಎಕ್ಕನಹಳ್ಳಿ
3 ಗುಬ್ಬಿ	(1) ಕಡ[illegible]
	(11) ದಂಡಿನಶಿವರ
6 ಕುಣಿಗಲು	(1) ಯಡಿಯೂರು
	(11) ಹುಲಿಯೂರುದುರ್ಗ

ಡಿ ಎಸ್. ಮಲ್ಲಪ್ಪ,
ಪ್ರೆಸಿಡೆಂಟ್ ಡಿಸ್ಟ್ರಿಕ್ಟು ಬೋರ್ಡು,
ತುಮಕೂರು ಡಿ[illegible]

ಡೇವಿಡ್ಸನ್ ಕಮಿಟಿಯ ವರದಿ

ಆರ್ಥಿಕ ವಿಷಯದಲ್ಲಿ ಸ್ವಾದೇಶಿಕ ಸಂಸ್ಥಾನಗಳಿಗೂ ಫೆಡರಲ್ ಪ್ರಭುತ್ವದವರಿಗೂ ಇರಬೇಕಾದ ಪರಸ್ಪರ ಸಂಬಂಧ ವಿಷಯವನ್ನು ವಿಚಾರಿಸಿ ತಕ್ಕ ಸೂಚನೆಗಳನ್ನು ಕೊಡಲು ನಿಯಮಿಸಲ್ಪಟ್ಟಿದ್ದ ರೌಂಡುಟೇಬಲ್ ಸಭೆಯ ಉಪಸಂಘದವರ ವರದಿಯು ಕಳೆದ ಗುರುವಾರ ಇಂಗ್ಲೆಂಡಿನಲ್ಲೂ ಇಂಡ್ಯಾದಲ್ಲೂ ಏಕಕಾಲದಲ್ಲಿ ಪ್ರಕಟಿಸಲ್ಪಟ್ಟಿತು ಈ ಸಂಘದ ಅಧ್ಯಕ್ಷರಾದ ರೈಟ್ ಆನರಬಲ್ ಡೇವಿಡ್ಸನ್ನರವರು ಮೆಂಬರುಗಳಾದ ಸರ್ ರೆಜಿನಾಲ್ಡ್ ಗ್ಲಾನ್ಸಿ ಲಾರ್ಡ್ ಹೇಸ್ಟಿಂಗ್ಸ್ ಡಚೆಸರ್ ಸರ್ ಮಾಲಿಕುಗ್ವೈರ್ ಸರ್ ಚಾರ್ಲೆಸ್ ಸ್ಟ್ಯೂಯರ್ಟ್ ವಿಲಿಯಂಸ್ ತಿ ರಮಾಚಾರ್ಯರವರು ವರದಿಗೆ ರುಜುವನ್ನು ಮಾಡಿರುತ್ತಾರೆ

ವಿಚಾರಣಾಂಶಗಳು

ಆರ್ಥಿಕ ವಿಷಯದಲ್ಲಿ ಇಂಡ್ಯಾ ಪ್ರಭುತ್ವದವರಿಗೂ ದೇಶೀಯ ಸಂಸ್ಥಾನಗಳಿಗೂ ಇರುವ ಪರಸ್ಪರ ಸಂಬಂಧವು ಫೆಡರಲ್ ನಿರ್ಮಾಣಕ್ಕೆ ಎಷ್ಟರಮಟ್ಟಿಗೆ ಅಡ್ಡಿಯಾಗಿರುವುದೆಂಬ ವಿಷಯವನ್ನು ಪರಿಶೀಲಿಸುವುದಕ್ಕಾಗಿ ಈ ವಿಚಾರಣ ಸಂಘವು ನಿಯಮಿಸಲ್ಪಟ್ಟಿರುವುದು ಎಲ್ಲಾ ರಾಷ್ಟ್ರಗಳವರೂ ಒಂದೇ ಪದ್ಧತಿಯನ್ನು ಅನುಸರಿಸಿ ಫೆಡರಲ್ ಪ್ರಭುತ್ವದ ಆದಾಯಕ್ಕೆ ತಮ್ಮ ಆದಾಯದಲ್ಲಿ ಕೆಲಂಶ ಭಾಗವನ್ನು ಬಿಟ್ಟುಕೊಡಬೇಕೆಂದು ಪ್ರಧಾನ ಮಂತ್ರಿಗಳು ಸೂಚನೆಯನ್ನು ಕೊಟ್ಟಿದ್ದರು ಆದರೆ ಭಾರತದೇಶದಲ್ಲಿ ಈ ಸಮಸ್ಯೆಯು ದೊಡ್ಡ ತೊಡಕಿನಿಂದ ಕೂಡಿರುತ್ತದೆ ಕೆಲ ಸಂಸ್ಥಾನಗಳವರು ಇಂಡ್ಯಾ ಪ್ರಭುತ್ವದವರಿಗೆ ಗೊತ್ತಾದ ಮೊಬಲಗನ್ನು ಪ್ರತಿ ವರ್ಷದಲ್ಲೂ ಕಪ್ಪವಾಗಿ ಕೊಡುತ್ತಾರೆ ಒಡೆಯರ ಪ್ರಭುತ್ವಕ್ಕೆ ನ್ಯಾಯವಾಗಿ ಸೇರಬೇಕಾದ ಹಣವನ್ನು ಮತ್ತೆ ಕೆಲ ಸಂಸ್ಥಾನಗಳಿಗೆ ವಿಧಿಸಲ್ಪಟ್ಟಿಲ್ಲ ಫೆಡರಲ್ ಪ್ರಭುತ್ವಪರಿಪಾಲನೆಗೊಳಪಟ್ಟಿರಬೇಕಾದ ಪೋಸ್ಟ್ ಟೆಲಿಗ್ರಾಫ್ ಕರೆನ್ಸಿ ಮೊದಲಾದ ವಿಷಯಗಳಲ್ಲಿ ಕೆಲ ಸಂಸ್ಥಾನಗಳಿಗೆ ಸ್ವತಂತ್ರವಾದ ಹಕ್ಕಿರುವುದು ಕಪ್ಪವೂ ವಿನಾಯಿತಿಯೂ ಸ್ವತಂತ್ರ ಹಕ್ಕುಗಳೂ ಏರ್ಪಟ್ಟಿರುವ ವಿಧಾನವನ್ನು ಪರಿಶೀಲಿಸಿ ಇವನ್ನು ಸರಿಪಡಿಸಲು ಸಂಸ್ಥಾನಾಧಿಪತಿಗಳೊಡನೆ ರಾಯಭಾರವನ್ನು ನಡೆಸಬೇಕಾಗಿ ಬಂದಿತು ಈ ಕಾರಣದಿಂದ ಈ ಕಮಿಟಿಯವರು ಭಾರತದೇಶದಲ್ಲಿ ಸಂಚರಿಸಿ ಹಳೇ ರಿಕಾರ್ಡುಗಳನ್ನು ಸಹ ಪರಿಶೀಲಿಸಬೇಕಾಯಿತು [illegible] ಕಮಿಟಿಯವರು 10 ಸಾವಿರ ಮೈಲು ತಿರುಗಿ 88 ಸಂಸ್ಥಾನಾಧೀಶರುಗಳೊಡನೆಯೂ ಅವರ ಮಂತ್ರಿಗಳೊಡನೆಯೂ ಸಂಭಾಷಣ ಮಾಡಿದರು ಇಂಗ್ಲೆಂಡಿನೊಳಗೆ ಮೇ ತಿಂಗಳಲ್ಲಿ ಈ ವರದಿಯು ಬರೆಯಲ್ಪಟ್ಟಿತು

ಸಂಸ್ಥಾನಾಧಿಪತಿಗಳಿಗೂ ಬ್ರಿಟಿಷ್ ಪ್ರಭುತ್ವದವರಿಗೂ ನಡೆದಿರುವ ಒಡಂಬಡಿಕೆಗಳು

ಸಂಸ್ಥಾನಾಧಿಪತಿಗಳಿಗೂ ಬ್ರಿಟಿಷ್ ಪ್ರಭುತ್ವದವರಿಗೂ ನಡೆದಿರುವ ಒಡಂಬಡಿಕೆಗಳ ವಿಷಯಕ್ಕೆ ಸಂಬಂಧಪಟ್ಟ ಚರಿತ್ರೆಯು ಈ ವರದಿಯ 2 ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿದೆ ಸಂಸ್ಥಾನಗಳಲ್ಲಿ ಅರಾಜಕತ್ವವೂ ಸರ್ವಭಯವೂ ಪ್ರಬಲವಾಗಿದ್ದ ಸಮಯದಲ್ಲಿ ಬ್ರಿಟಿಷ್ ಪ್ರಭುತ್ವದವರು ಎಲ್ಲರಿಗೆ ಯಿಂದಿದ್ದ ಶಾಂತಿಯನ್ನುಂಟುಮಾಡಿ [illegible] ಕಲಹವುಂಟಾಗದಿರಲು ಕೆಲ ಕಟ್ಟುಪಾಡುಗಳನ್ನು ಮಾಡಿದರು ಆದರೆ ಭಾರತ ದೇಶದಲ್ಲಿ ಫೆಡರೇಷನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯವು ಹುಟ್ಟುವುದಕ್ಕೆ ಮೊದಲೇ ಅನೇಕ ಸಂಸ್ಥಾನಗಳು ರೈಲ್ವೆ, ಕರೆನ್ಸಿ ಪೋಸ್ಟು ಟೆಲಿಗ್ರಾಫ್ ಮೊದಲಾದ ಶಾಖೆಗಳ ಅಧಿಕಾರವನ್ನು ಸಂಪೂರ್ಣವಾಗಿ ಇಂಡ್ಯಾ ಪ್ರಭುತ್ವದವರಿಗೆ ವಹಿಸಿಕೊಟ್ಟಿದ್ದರು ಇಂಡ್ಯಾ ಪ್ರಭುತ್ವದವರ ಪರಿಪಾಲನೆಕ್ಕೊಳಪಟ್ಟ ಶಾಖೆಗಳು ಸಂಸ್ಥಾನಗಳಲ್ಲೂ ಇಂಡ್ಯಾಪ್ರಭುತ್ವದ ಉದ್ಯೋಗಿಗಳಿಂದಲೇ ನಿರ್ವಹಿಸಲ್ಪಡುತ್ತಿವೆ ಸುಂಕ ಉಪ್ಪು ಶಾಖೆಗಳು ಇಂಡ್ಯಾ ಪ್ರಭುತ್ವದವರ ಅಧಿಕಾರಕ್ಕೊಳಪಟ್ಟು ಯಾವ ನಿಬಂಧನೆಯೂ ಇಲ್ಲದಿರುವುದರಿಂದ ಈ ವಿಷಯದಲ್ಲಿ ಪ್ರಭುತ್ವದವರ ವಿಧಾನವನ್ನು ವಿಮರ್ಶಿಸಲಿಕ್ಕಾಗಲಿ ಬದಲಾಯಿಸಿ ನಡೆಸಲಿಕ್ಕಾಗಲಿ ಸಂಸ್ಥಾನದವರಿಗೆ [illegible]

ಕೊಡಬೇಕೆಂದು ಕೇಂದ್ರ ಸರ್ಕಾರ ಮತ್ತು ಸಂಸ್ಥಾನಗಳ ನಿರ್ಧಾರವನ್ನು ನಿರ್ಣಯಿಸುವ ವಿಷಯದಲ್ಲಿ ಸಂಸ್ಥಾನಾಧಿಪತಿಗಳ ಒಪ್ಪಿಗೆಯೊಡನೆ ಆಲೋಚಿಸಬೇಕಾದ್ದು ಅಗತ್ಯವು.

ಸಾಮಾನ್ಯ

ಸಂಸ್ಥಾನಗಳ ವಿಷಯದಲ್ಲಿ ಸಮಾಲೋಚನೆ ಮಾಡಬೇಕೆಂದು ಕೇಳುವ ಈ ಮಾತನ್ನು ಅಂಗೀಕರಿಸಿ ನಿರ್ಧರಿಸುವವರು ಸರ್ಕಾರದ ಪ್ರತಿನಿಧಿಗಳಿರಬೇಕು. ಈ ಉದ್ದೇಶಕ್ಕಾಗಿ ಸಂಸ್ಥಾನಗಳು ಪ್ರತ್ಯೇಕವಾಗಿ ಬೇರೆ ಬೇರೆ ವಿಷಯಗಳ ಬಗ್ಗೆ ಅಭಿಪ್ರಾಯ ತಿಳಿಸುವ ಏರ್ಪಾಟನ್ನು ಮಾಡಿಕೊಳ್ಳುವುದು ಅವಶ್ಯಕವೆಂದು ಅಭಿಪ್ರಾಯ. ಈಗ ಸಲ್ಲಿಸುತ್ತಿರುವ ಕಪ್ಪವನ್ನು ಅದರ ಮೊಬಲಗಿನಲ್ಲಿ ಕಡಿಮೆ ಮಾಡಿ ಈಗ ಪ್ರತಿಯೊಂದು ಸಂಸ್ಥಾನಕ್ಕೂ ಪ್ರತ್ಯೇಕ ಸೌಕರ್ಯಗಳನ್ನು ಹಕ್ಕುಗಳನ್ನು ಕೊಡುವ ಮತ್ತು ಬಾಕಿ ಹಣವನ್ನು ತೀರಿಸುವುದು ಅಗತ್ಯವು.

ಕಪ್ಪಗಳು

ಅನೇಕ ಸಂಸ್ಥಾನಗಳು ಕೇಂದ್ರಪ್ರಭುತ್ವಕ್ಕೆ ಕಪ್ಪಗಳನ್ನು ಕೊಡುತ್ತವೆ. ಸಾಮ್ರಾಜ್ಯ ಪ್ರಭುತ್ವಕ್ಕೆ ಅಧೀನರಾಜ್ಯಗಳ ಸಲ್ಲಿಸುವ ಹಣವು ಕಪ್ಪವೆಂದು ಕರೆಯಲ್ಪಡುತ್ತದೆ. ಆದುದರಿಂದ ಫೆಡರೇಷನು ಏರ್ಪಟ್ಟರೆ ಕಪ್ಪ ಕೊಡುವ ಪದ್ಧತಿಯು ತಪ್ಪಬೇಕೆಂದು ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಆರ್ಥಿಕ ಶೋಧಕ ಸಂಘದವರು ಅಭಿಪ್ರಾಯಪಟ್ಟಿರುತ್ತಾರೆ. ಬ್ರಿಟಿಷ್ ಇಂಡ್ಯಾ ರಾಷ್ಟ್ರಗಳು ಫೆಡರಲ್ ಪ್ರಭುತ್ವಕ್ಕಾಗಿ ಕೊಡಬೇಕಾದ ಕಪ್ಪವನ್ನು ತಪ್ಪಿಸುವಾಗ್ಗೆ ಸಂಸ್ಥಾನಗಳು ಕೊಡಬೇಕಾಗಿರುವ ಕಪ್ಪವು ಕೂಡ ತಪ್ಪಿಸಲ್ಪಡಬೇಕೆಂದೂ ಈಗ ರಾಷ್ಟ್ರಗಳು ಕೊಡುತ್ತಿರುವ ಕಪ್ಪವು ರಾಷ್ಟ್ರದ ಆದಾಯದಲ್ಲಿ 20 ಭಾಗದಷ್ಟಕ್ಕಿಂತ ಅಧಿಕವಾದ ಮೊತ್ತವು ತಕ್ಷಣವೇ ಕಡಿಮೆ ಮಾಡಲ್ಪಡಬೇಕೆಂದೂ ಈ ಉಪಸಂಘದವರು ಸೂಚಿಸುತ್ತಾರೆ. ಆದರೆ ಈ ವಾದವನ್ನು ಈ ವಿಚಾರಣಾ ಸಂಘದವರು ಅಂಗೀಕರಿಸಲಿಲ್ಲ. ಆದಾಗ್ಯೂ ಬ್ರಿಟಿಷ್ ಇಂಡ್ಯಾ ರಾಷ್ಟ್ರಗಳು ಸಲ್ಲಿಸುವ ಕಪ್ಪವು ತಪ್ಪಿಸಲ್ಪಟ್ಟಲ್ಲಿ ಸಂಸ್ಥಾನಗಳು ಸಲ್ಲಿಸಬೇಕಾಗಿರುವ ಕಪ್ಪವೂ ಕೂಡ ತಪ್ಪಿಸಲ್ಪಡಬೇಕಾದುದು ನ್ಯಾಯವೆಂದು ಇವರು ಅಂಗೀಕರಿಸುವರು. ಸಂಬಂಧಪಟ್ಟ ಭಾರವು ಎಲ್ಲಾ ರಾಷ್ಟ್ರಗಳ ಮೇಲೂ ಸಮಾನವಾಗಿ ಹಂಚಲ್ಪಡಬೇಕೆಂಬ ಸೂತ್ರವನ್ನು ಅನುಸರಿಸಿ ಇವರು ಈ ಸೂಚನೆಯನ್ನು ಕೊಟ್ಟಿರುವರು. ಒಂದು ಸಂಸ್ಥಾನದ ಕಪ್ಪವು ಸಂಸ್ಥಾನದ ಒಟ್ಟು ಆದಾಯದಲ್ಲಿ 5% ರಷ್ಟಕ್ಕಿಂತ ಅಧಿಕವಾಗಿದ್ದರೆ ಆ ಹೆಚ್ಚು ಮೊಬಲಗು ಕೂಡಲೆ ತಪ್ಪಿಸಲ್ಪಡಬೇಕೆಂಬ ಸೂಚನೆಯನ್ನು ಇವರು ಅನುಮೋದಿಸುತ್ತಾರೆ. ಇಂತಹ ಕಪ್ಪಗಳಲ್ಲಿ (1) ಪ್ರತ್ಯೇಕ ಕಾರಣದಿಂದ ವಿಧಿಸಲ್ಪಟ್ಟ ಕಪ್ಪ (2) ಒಂದು ಸಂಸ್ಥಾನವು ಇನ್ನೊಂದು ಸಂಸ್ಥಾನಕ್ಕೆ ಕೊಡಬೇಕಾದ ಕಪ್ಪವನ್ನು ಪ್ರಭುತ್ವಕ್ಕೆ ಅವಾಂತ್ರಮಾಡಿ ಸಲ್ಲಿಸುತ್ತಿರುವ ಕಪ್ಪ ಹೀಗಲ್ಲದೆ ಉಳಿದ ಕಪ್ಪವನ್ನು ಕ್ರಮೇಣ ತಪ್ಪಿಸಲ್ಪಡಬೇಕೆಂದು ಇವರು ಸೂಚಿಸಿರುತ್ತಾರೆ. ಎರಡನೇ ತರಗತಿಗೆ ಸೇರಿದ ಕಪ್ಪದಲ್ಲಿ ಕೇಂದ್ರ ಪ್ರಭುತ್ವದವರು ಈ ಕಪ್ಪವನ್ನು ಬಿಟ್ಟುಕೊಡಬೇಕೆಂದೂ, ಮೊದಲು ಯಾವ ಸಂಸ್ಥಾನಕ್ಕೆ ಈ ಕಪ್ಪವು ಸಲ್ಲಿಸಲ್ಪಡುತ್ತಿದ್ದಿತೋ ಈಗಲೂ ಕೂಡ ಆ ಸಂಸ್ಥಾನಕ್ಕೇ ಈ ಕಪ್ಪವು ಕೊಡಲ್ಪಡಬೇಕೆಂದೂ ಸೂಚಿಸಲ್ಪಟ್ಟಿದೆ. ಆದರೂ ಕಪ್ಪವನ್ನು ಸಲ್ಲಿಸುವ ಪದ್ಧತಿಯು ಸಮಾನವಾದ ಹಕ್ಕುಗಳುಳ್ಳ ಫೆಡರೇಷನ್ನಿನಲ್ಲಿರತಕ್ಕ ಕಾರಣವಿಲ್ಲ. ಆದುದರಿಂದ ಕ್ರಮೇಣ 20 ವರ್ಷಗಳೊಳಗೆ ಎಲ್ಲಾ ಕಪ್ಪಗಳೂ ತಪ್ಪಿಸಲ್ಪಡುವ ಏರ್ಪಾಟು ಮಾಡುವುದು ಉಚಿತವು. ಸಂಸ್ಥಾನದ ಆದಾಯದಲ್ಲಿ 5% ರಷ್ಟಕ್ಕಿಂತ ಹೆಚ್ಚು ಭಾಗವು ಸಲ್ಲುತ್ತಿದ್ದಲ್ಲಿ ಕಪ್ಪವು ತಪ್ಪಿಸಲ್ಪಟ್ಟು ಸಂವತ್ಸರಕ್ಕೆ 11 ಲಕ್ಷ ರೂಪಾಯಿಗಳು ಕೊಡಲ್ಪಡಬಹುದು. ಕಪ್ಪವು ಸಂಪೂರ್ಣವಾಗಿ ತಪ್ಪಿಸಲ್ಪಟ್ಟಲ್ಲಿ 60 ಲಕ್ಷ ರೂಪಾಯಿಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಈ ಕಪ್ಪಗಳು ಸಾಮ್ರಾಜ್ಯಾಧಿಕಾರಕ್ಕೆ ಕೊಡಲ್ಪಡುತ್ತವೆ. ಅಷ್ಟು ಮಾತ್ರಕ್ಕೇ ಈ ಮೊಬಲಗು ಫೆಡರಲ್ ಪ್ರಭುತ್ವದವರಿಗೆ ಸೇರಬೇಕೆಂದು ಹೇಳಲು ಸಾಧ್ಯವಿಲ್ಲ. ಆದಾಗ್ಯೂ ಸಾಮ್ರಾಜ್ಯಾಧಿಕಾರಿಗಳು ಈ ಮೊಬಲಗುಗಳನ್ನು ಫೆಡರಲ್ ಪ್ರಭುತ್ವದವರ ವಶಕ್ಕೆ ವಹಿಸಿಕೊಡುವರೆಂದೂ ಈ ಏರ್ಪಾಟಿಗೆ ಸಂಸ್ಥಾನಾಧಿಪತಿಗಳು ಆಕ್ಷೇಪಿಸುವುದು ಉಚಿತವಲ್ಲವೆಂದೂ ವಿಚಾರಣಾ ಸಂಘದವರು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ದತ್ತಮಂಡಲ

ಸಂಸ್ಥಾನಗಳ ಸಂರಕ್ಷಣೆಗಾಗಿ ಸೇನೆಯನ್ನೇರ್ಪಡಿಸಿ ಸಂಸ್ಥಾನದಲ್ಲಿ ಆ ಸೇನೆಯನ್ನಿರಿಸುವುದಕ್ಕಾಗಿ ಕೆಲ ಸಂಸ್ಥಾನಾಧಿಪತಿಗಳು ತಮ್ಮ ರಾಜ್ಯದಲ್ಲಿ ಕೆಲಭಾಗವನ್ನು ಪ್ರಭುತ್ವದವರಿಗೆ ಕೊಟ್ಟು ಒಡಂಬಡಿಕೆಯನ್ನು ಮಾಡಿಕೊಂಡಿರುವರು. ಹೈದರಾಬಾದು, ಬರೋಡ, ಗ್ವಾಲಿಯರು, ಇಂದೋರು, ಸಾಂಗ್ಲಿ ಸಂಸ್ಥಾನಗಳೂ ಈಸ್ಟ್ ಇಂಡ್ಯಾ ಕಂಪೆನಿಗಳಿಗೂ ಇಂತಹ ಒಡಂಬಡಿಕೆಗಳಾಗಿರುತ್ತವೆ. ಫೆಡರೇಷನ್ನೇರ್ಪಟ್ಟಾಗ ಈ ಒಡಂಬಡಿಕೆಯನ್ನು ರದ್ದುಮಾಡಿ ಪ್ರದೇಶವನ್ನು ಬಿಟ್ಟುಕೊಟ್ಟಿರುವುದಕ್ಕಾಗಿ ಆಯಾ ರಾಷ್ಟ್ರಗಳಿಗೆ ಕೊಂಚ ಮೊಬಲಗನ್ನು ಕೊಡಬೇಕೆಂದು ಆ ಸಂಘದವರು ಸೂಚಿಸುತ್ತಾರೆ. ಏಕೆಂದರೆ, ಕೆಲ ಸಂಸ್ಥಾನಗಳು ಕಪ್ಪಕ್ಕೆ ಬದಲಾಗಿ ಕೊಂಚ ಪ್ರದೇಶವನ್ನು ಬಿಟ್ಟುಕೊಟ್ಟಿರುತ್ತವೆ. ಕಪ್ಪವು ರದ್ದಾಗುವಾಗ್ಗೆ ಈ ತರಗತಿಗೆ ಸೇರಿದ ಸಂಸ್ಥಾನಗಳಿಗೆ ಕೊಂಚ ಪರಿಹಾರವನ್ನು ಕೊಡುವುದು ಆವಶ್ಯಕವು. ಒಡಂಬಡಿಕೆಯಾದ ವೇಳೆಯಲ್ಲಿ ಪ್ರಭುತ್ವದವರಿಗೆ ವಹಿಸಿಕೊಡಲ್ಪಟ್ಟ ಪ್ರದೇಶದಿಂದ ಬರುತ್ತಿದ್ದ ವರ್ಷದ ಆದಾಯವನ್ನು ಆಧಾರವಾಗಿಟ್ಟುಕೊಂಡು ಕೆಳಗೆ ಸೂಚಿಸಿರುವ ಮೊಬಲಗು ಪರಿಹಾರವಾಗಿರಬೇಕೆಂದು ವಿಚಾರಣಾ ಸಂಘದವರು ನಿರ್ಣಯಿಸಿರುವರು.

ಬರೋಡಾ—	23 ಲಕ್ಷದ 98 ಸಾವಿರ	ರೂಪಾಯಿ
ಗ್ವಾಲಿಯರು—	11 ,,	78
ಇಂದೂರು—	1 ,,	11
ಸಾಂಗ್ಲಿ—	1	10

ಇನ್ನು ಮೇಲೆ ಸಹ ಸೈನ್ಯ ಸಂರಕ್ಷಣೆಯ ಬಾಧ್ಯತೆಯನ್ನು ಕೇಂದ್ರ ಪ್ರಭುತ್ವದವರೇ ವಹಿಸಬೇಕೆಂದು ಹೈದರಾಬಾದು ಸಂಸ್ಥಾನದವರು ಕೋರಿರುವುದರಿಂದ ಈ ಸಂಸ್ಥಾನಕ್ಕೆ ಪರಿಹಾರದ ಮೊಬಲಗನ್ನು ಸೂಚಿಸಿಲ್ಲ.

ಇತರ ವಿಧವಾದ ಪರಿಹಾರ

ಇತರ ವಿಧವಾದ ಪರಿಹಾರಗಳನ್ನು ಕೆಲ ಸಂಸ್ಥಾನಗಳು ಕೇಳುತ್ತಿರುವರು. ಕೆಲ ಸಂಸ್ಥಾನಗಳಲ್ಲಿ ಒಳ್ಳೇ ಹಣ ಮತ್ತು ಟಂಕಸಾಲೆ ವಿಚಾರದಲ್ಲಿ ಕೇಂದ್ರ ಪ್ರಭುತ್ವದವರಿಗೆ ಸಹಾಯಮಾಡುತ್ತಿರುವುದರಿಂದ ಆದ ನಷ್ಟಕ್ಕೆ ಪರಿಹಾರವನ್ನು ಕೊಡುವ ವಿಷಯಗಳನ್ನು ಕೂಡ ಅವರು ವಿಚಾರಿಸಬೇಕೆಂದು [illegible]

ರೈಲ್ವೆ ಮತ್ತು ಸೈನ್ಯ ಇವುಗಳ ಉಪಯೋಗಕ್ಕಾಗಿ ಕೊಡಲ್ಪಟ್ಟ ಭೂಮಿಗೆ ಪರಿಹಾರವು ಕೋರಲ್ಪಟ್ಟಿದೆ. ಈ ವಿಷಯದಲ್ಲಿ ಸಂಸ್ಥಾನಗಳ ಕೋರಿಕೆಯನ್ನು ಅಂಗೀಕರಿಸುವುದು ಅಗತ್ಯವಾಗಿದೆ. ಈ ಪ್ರದೇಶಗಳ ಮೇಲೆ ಸಂಸ್ಥಾನಗಳವರು ಮುನಿಸಿಪಲ್ ಕಂದಾಯವನ್ನು ವಿಧಿಸಬಹುದೆಂದೂ, ಸಂಸ್ಥಾನಗಳಲ್ಲಿ ರೈಲ್ವೆ ಕೆಲಸ ಮುಂತಾದುದರಿಂದ ಆದಾಯ ತೆರಿಗೆಯನ್ನು ವಸೂಲ್ಮಾಡಬಹುದೆಂದೂ ಕಮಿಟಿಯವರು ಸೂಚಿಸಿರುತ್ತಾರೆ. ಸಂಸ್ಥಾನಗಳಲ್ಲಿ ಹೊಂದ ಅಫೀಮು ಮೊದಲಾದ ಪದಾರ್ಥಗಳ ಮೇಲೆ ವಿಧಿಸಲ್ಪಡುವ ಎಕ್ಸೈಜು ಕಂದಾಯದಿಂದ ಬರುವ ಆದಾಯವು ಸಂಸ್ಥಾನಗಳ ಉಪಯೋಗಾರ್ಥವಾಗಿಯೇ ವ್ಯಯವಾಗಬಹುದೆಂಬ ಸೂತ್ರವನ್ನು ಅಂಗೀಕರಿಸುವುದು ಆವಶ್ಯಕವು.

ಉಪ್ಪಿನ ತೆರಿಗೆ

ಭಾರತ ದೇಶದಲ್ಲಿ ಉಪ್ಪು ಬಹಳವಾಗಿ ಉತ್ಪನ್ನವಾಗುತ್ತಿದೆ. ಈ ಉಪ್ಪಿನಿಂದ ಪ್ರಭುತ್ವದವರಿಗೆ ವಿಶೇಷ ಆದಾಯ ಬರುತ್ತದೆ. ಫೆಡರಲ್ ಪ್ರಭುತ್ವವೇರ್ಪಟ್ಟಲ್ಲಿ ವರ್ಷಕ್ಕೆ ಒಂದು ಉಪ್ಪಿನ ಮಾರಾಟದಿಂದ 8,00,000 ರೂಪಾಯಿಗಳ ಆದಾಯ ಬರುವುದು. ಅಂದರೆ ಒಟ್ಟು ಆದಾಯದಲ್ಲಿ ನೂರಕ್ಕೆ 6 ರಷ್ಟು ಉಪ್ಪಿನಿಂದ ಉತ್ಪನ್ನವಾಗುವುದು. ಕಾಥೇವಾಡ ಮತ್ತು ಕಚ್ಛ ಪ್ರದೇಶಗಳ ಬಳಿ ಉಳಿದ ಬಂದರಗಳಲ್ಲೆಲ್ಲಾ ಉಪ್ಪನ್ನು ತಯಾರಿಸುವ ಅಧಿಕಾರವು ಪ್ರಭುತ್ವದವರಿಗೇ ಇರುತ್ತದೆ. 60 ವರ್ಷಗಳ ಹಿಂದೆ ಬೇರೆ ಬೇರೆ ಸಂಸ್ಥಾನಗಳೊಡನೆ ಒಡಂಬಡಿಕೆ ಮಾಡಿಕೊಂಡ ಇಂಡ್ಯಾ ಪ್ರಭುತ್ವದವರು ಈ ಹಕ್ಕನ್ನು ಪಡೆದುಕೊಂಡಿರುವರು. ಈ ಒಡಂಬಡಿಕೆಯಲ್ಲಿ ಆಗ ಯಾವ ವ್ಯತ್ಯಾಸವೂ ಆಗಕೂಡದೆಂದು ಸೂಚಿಸಿರುವರು. ವಿದೇಶಗಳಿಂದ ಈಗಲೂ ವರ್ಷಕ್ಕೆ 4,80,000 ಟನ್ನು ಉಪ್ಪು ಬರುತ್ತಿದೆ. ಇದನ್ನು ಕಡಿಮೆ ಮಾಡಲು ಪ್ರಭುತ್ವದವರು ಅನುಭವಿಸುತ್ತಿರುವ ಹಕ್ಕಿಗಾಗಿ ಸಂಸ್ಥಾನಗಳಿಗೆ ಕೊಡುತ್ತಿರುವ ಪರಿಹಾರವನ್ನು ಕೇಳಲೂ ಫೆಡರಲ್ ಪ್ರಭುತ್ವದವರು ಕ್ರಮೇಣ ಪ್ರಯತ್ನಿಸಬಹುದು. ಆದರೆ ಕಥೇವಾಡ ಕಚ್ಛ ಪ್ರದೇಶಗಳಲ್ಲಿ ಮಾತ್ರ ಉಪ್ಪು ಉತ್ಪತ್ತಿಯನ್ನು ಹೆಚ್ಚಿಸಿ ಫೆಡರಲ್ ಪ್ರಭುತ್ವದವರೇ ಉಪ್ಪು ತೆರಿಗೆಯನ್ನು ವಸೂಲ್ಮಾಡಲು ತಕ್ಕ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಅಗತ್ಯವು.

ಉಪ್ಪು ತೆರಿಗೆಯಿಂದ ನ್ಯಾಯವಾಗಿ ಬರಬೇಕಾದ ಮೊಬಲಗಿನಲ್ಲಿ ಸಂಸ್ಥಾನಾಧಿಪತಿಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಯ ಪ್ರಕಾರ 16 ಲಕ್ಷ ರೂಪಾಯಿಗಳನ್ನು ಪ್ರಭುತ್ವದವರಿಗೆ ಕೊಡುತ್ತಿಲ್ಲ. ಕಥೇವಾಡ ಕಚ್ಛ ಪ್ರದೇಶಗಳಲ್ಲಿ ಫೆಡರಲ್ ಪ್ರಭುತ್ವದವರು ಉಪ್ಪು ಸುಂಕವನ್ನು ವಸೂಲ್ಮಾಡಿದರೆ ಮೇಲ್ಕಂಡ ಮೊಬಲಗಿನಲ್ಲಿ 10,50,000 ರೂ. ಕಡಿಮೆಯಾಗುವುದು.

ರೇವೆಗಳು—ಸುಂಕಗಳು

ಸಂಸ್ಥಾನಗಳಿಗೆ ಬೇರೆ ಬೇರೆ ರೇವೆಗಳಲ್ಲಿರುವ ಹಕ್ಕಿನಿಂದ ಸಂಸ್ಥಾನ ಸಮ್ಮತವನ್ನು ಸಮನ್ವಯ ಮಾಡುವುದು ಬಹಳ ಕಷ್ಟ ವಿಷಯವಾಗಿದೆ. 1930-31 ರಲ್ಲಿ 36,182 ಲಕ್ಷ ರೂಪಾಯಿಗಳ ಬೆಲೆಯ ಸರಕುಗಳು ಭಾರತ ದೇಶಕ್ಕೆ ಬಂದಿರುತ್ತವೆ. ಈ ಪಟ್ಟದಲ್ಲಿ ಸಂಸ್ಥಾನಗಳಿಗೆ ಸೇರಿದ ರೇವೆಗಳಲ್ಲಿ ಬಂದಿಳಿದ ಸರಕುಗಳ ಬೆಲೆಯು 1,000 ಲಕ್ಷ ರೂ. ಆಗುವುದು. ಈ ವರ್ಷದಲ್ಲಿ ಸಂಸ್ಥಾನಗಳ 250 ಲಕ್ಷದ 78 ಸಾವಿರ ರೂಪಾಯಿಗಳ ಸುಂಕವನ್ನು ವಸೂಲ್ಮಾಡಿರುತ್ತವೆ. ಆದರೆ ಕಥೇವಾಡ ದೇಶದ ಸಮಾಚಾರದಲ್ಲಿ ಬ್ರಿಟಿಷ್ ಪ್ರಭುತ್ವದವರು ಕಡೆಯನ್ನೇರ್ಪಡಿಸಿದ ಪ್ರಾಥಮಿಕ ನೆಲ್ಲಿಯಿಂದ ಮೊಬಲಗಿನಲ್ಲಿ 144 ಲಕ್ಷದ 60 ಸಾವಿರ ರೂ. ಬ್ರಿಟಿಷ್ ಪ್ರಭುತ್ವದವರಿಗೆ ಲಭ್ಯವಾಗಿರುತ್ತದೆ. ಆದುದರಿಂದ ಒಟ್ಟಿನಲ್ಲಿ ಸುಂಕದಿಂದ ಬಂದ ಆದಾಯದಲ್ಲಿ 100 ಕ್ಕೆ 4 ರಷ್ಟು ಮಾತ್ರ ಸಂಸ್ಥಾನಗಳಿಗೆ ಸೇರುವುದು. ಆದರೆ ಆ ಮೊಬಲಗಿನಲ್ಲಿ ಶಾಶ್ವತ ಮೊದಲಾದ ರಾಷ್ಟ್ರಗಳಿಗೆ ಕಲ್ಪಿಸಲ್ಪಟ್ಟಿರುವ ಪ್ರತ್ಯೇಕ ಸೌಕರ್ಯಗಳ ಲೆಕ್ಕವು ಸೇರಿಸಲ್ಪಟ್ಟಿಲ್ಲ. ಒಟ್ಟಿನಲ್ಲಿ ಸುಂಕದಿಂದ ನ್ಯಾಯವಾಗಿ ಪ್ರಭುತ್ವದವರಿಗೆ ಬರಬೇಕಾದ ಆದಾಯದಲ್ಲಿ ಸಂಸ್ಥಾನಗಳು 184 ಲಕ್ಷದ 42 ಸಾವಿರ ರೂ. ಗಳನ್ನು ಸಲ್ಲಿಸಲ್ಲ. ಸುಂಕವನ್ನು ವಸೂಲ್ಮಾಡುವ ಹಕ್ಕುಗಳನ್ನು ಬಿಟ್ಟುಕೊಡುವುದಕ್ಕಾಗಿ ಸಂಸ್ಥಾನಗಳಿಗೆ ಫೆಡರಲ್ ಪ್ರಭುತ್ವದವರು ಎಷ್ಟು ಹಣವನ್ನು ಪರಿಹಾರವಾಗಿ ಕೊಡಬೇಕೆಂಬುದನ್ನು ನಿರ್ಣಯಿಸುವುದು ಬಹಳ ಕಷ್ಟಕಾರ್ಯವು. ಆದಾಗ್ಯೂ ಕೊಚ್ಚಿನ್ ರೇವೆಯ ವಿಷಯದಲ್ಲಿ ಪ್ರಭುತ್ವದವರು ತಿರುವಾಂಕೂರು ಕೊಚ್ಚಿನ್ ಸಂಸ್ಥಾನಗಳೊಡನೆ ಕೂಡಲೆ ರಾಯಬಾರವನ್ನು ನಡೆಸುವುದು ಅಗತ್ಯವೆಂಬುದು ಕಮಿಟಿಯವರ ಅಭಿಪ್ರಾಯವಾಗಿದೆ. ಬೊಂಬಾಯಿ ಕೊಚ್ಚಿನ್ ರೇವೆಗಳ ಮಧ್ಯೆ ಕೊಚ್ಚಿನ್ ರೇವೆಯೇ ದೊಡ್ಡದು. ಇಲ್ಲಿ ರೇವು ಸ್ಥಾಪನೆಗೆ ಬಹಳ ಅನುಕೂಲವಿರುತ್ತದೆ. ಆದುದರಿಂದ ಈ ರೇವೆಯ ಮೇಲೆ ಎರಡು ಸಂಸ್ಥಾನಗಳಿಗಿರುವ ಹಕ್ಕನ್ನು ಕೇಂದ್ರಪ್ರಭುತ್ವದವರು ಕೊಂಡುಕೊಳ್ಳಬೇಕು. ಆದರೆ ಇತರ ರೇವೆಗಳ ವಿಷಯವು ಅಷ್ಟು ಅವಸರವಾಗಿಲ್ಲ. ಫೆಡರಲ್ ಪ್ರಭುತ್ವಕ್ಕೆ ಸೇರಿದ ರಾಷ್ಟ್ರಗಳು ಸುಂಕವನ್ನು ವಸೂಲ್ಮಾಡುವುದು ನಿಯಮಿತವಾಗಿಯೂ ವ್ಯವಸ್ಥಿತವಾಗಿಯೂ ಇರುವುದಾದರೂ, ಈ ಹಕ್ಕನ್ನು ಬಿಟ್ಟುಕೊಡಲು ಫೆಡರಲ್ ರಾಷ್ಟ್ರಗಳಿಗಿಷ್ಟವಿಲ್ಲದಿರುವುದರಿಂದ ಯಾವುದಾದರೊಂದು ವಿಧದಲ್ಲಿ ರಾಜಿಮಾಡಿಕೊಳ್ಳುವುದು ಒಳ್ಳೇದು. ಇವುಗಳ ಪಡೆಗಟ್ಟಿನಂತೆ ಫೆಡರಲ್ ಪ್ರಭುತ್ವದವರು ಪ್ರತ್ಯೇಕವಾಗಿ ಒಂದು ಕಡೆಯನ್ನು ಕಲ್ಪಿಸಿ ಸುಂಕವನ್ನು ವಸೂಲ್ಮಾಡುವಲ್ಲಿ ಇವರುಗಳು ಯಾವ ಪ್ರತಿಬಂಧವನ್ನೂ ಮಾಡಕೂಡದು. ಆದುದರಿಂದ ಫೆಡರಲ್ ಪ್ರಭುತ್ವಾಧಿಕಾರಕ್ಕೆ ಭಂಗವಾಗದ ವಿಧಾನವನ್ನು ಸಂಕಲ್ಪಿಸಿ ಸಂಸ್ಥಾನಗಳಿಗೆ ಉಂಟಾಗುವ ಆದಾಯದ ನಷ್ಟ ಆಕ್ಷೇಪಿಸುವ ವಿಷಯದಲ್ಲಿ ರಾಜಿಮಾಡಿಕೊಳ್ಳುವುದು ಆಗತ್ಯವು. ಸಶೇಷ

ಪ್ರಕೃತಿಸಿದ್ಧ ಆಹಾರ ಪ್ರಚಾರ

[illegible] ಪ್ರಕೃತಿಸಿದ್ಧ ಆಹಾರವೇ ರೋಗನಿವಾರಣೆಗೆ ಶ್ರೇಷ್ಠವು. ಬಹು ಜನ ವೈದ್ಯರುಗಳು ನೋಡುತ್ತಿರುವ ರೋಗಿಗಳನ್ನು ಪರೀಕ್ಷಿಸಿ ಪ್ರಕೃತಿಸಿದ್ಧವಾದ ಆಹಾರ ಮಾತ್ರವೇ ಅವರಿಗೆ ಆರೋಗ್ಯ ಕೊಡುವುದೆಂದು ತಿಳಿಸಿರುತ್ತಾರೆ. ಸ್ವಾಭಾವಿಕವಾದ ಆಹಾರವನ್ನು ತಿನ್ನುವುದರಿಂದ ನಮ್ಮ ಶರೀರವು ಬಲವುಳ್ಳದ್ದಾಗಿಯೂ, ಮನುಷ್ಯರು ಉಪವಾಸದಿಂದ ನಂಜು ಮುಂತಾದುದು ಹೊರಕ್ಕೆ ಹೋಗುವುದು. ಬೇಯಿಸಿದ ಅನ್ನ ಮೊದಲಾದವುಗಳು ಶರೀರದ ಸ್ಥಿರವಾದ ಭಾಗಗಳಲ್ಲಿ ಶ್ಲೇಷ್ಮವಾಗಿಯೂ, ಕೊಬ್ಬಾಗಿಯೂ ಶೇಖರವಾಗುವುದು. ಅನಾರೋಗ್ಯವು ಆದ ಲಕ್ಷಣಗಳನ್ನು ನಾವು ನೋಡಿ ನಮ್ಮ ಬಲವು ಆರೋಗ್ಯವೆಂದು ತಿಳಿದುಕೊಳ್ಳುವೆವು. ಈ ಕಾಲಗಳಲ್ಲಿ ಆರೋಗ್ಯವಾದ ಶರೀರಗಳು ಕಾಣುವುದು ಅಲ್ಲದೆ ಅಲಕ್ಷ್ಯವು. ಈ ಕಾರಣದಿಂದ ಪ್ರಕೃತಿಶಾಸ್ತ್ರವನ್ನು ನೋಡಿ ಎಲ್ಲರೂ ಪಾಲಿಸಬೇಕಾದುದು ಪ್ರಧಾನ ವಿಷಯವು.

ಮಂಡ್ಯದ ತಾಲ್ಲೂಕಿನಲ್ಲಿ ಬಹುಮಟ್ಟಿಗೆ ನೀರಿನ ಅನಾನುಕೂಲದಿಂದ ಕೆರೆಗಳ ಕೆಳಗಿರುವ ತರೀ ಜಮೀನುಗಳಲ್ಲಿ ಬೇಣಿ ಕಬ್ಬನ್ನು ಬೆಳೆಯುವ ವಾಡಿಕೆಯಿರುತ್ತೆ. ಅದಕ್ಕೆ ಬೇಕಾದ ವ್ಯವಸಾಯದ ಕೆಲಸಗಳನ್ನೆಲ್ಲಾ ಕೈ ಕೋಟೆದ ರೀತಿಯಲ್ಲಿ ನಡೆಯುವ ಪದ್ಧತಿಯಿರುತ್ತೆ. ಶುರುವಿನಲ್ಲಿ ನೀರನ್ನು [illegible] ಪದ್ಧತಿಯು ಈ ಹರಿವೆಗಳು ಎಂಬ ಕೆಲ ಈ ಹಾಕುವದು. ಈಗ ಕಾವೇರಿ ನಾಲೆಯು ಬಂದಿರುವುದರಿಂದ ನೀರಿನ ಅನಾನುಕೂಲವೇನೂ ಇಲ್ಲದ್ದರಿಂದ ವ್ಯವಸಾಯ ಕ್ರಮಗಳನ್ನು ಬದಲಾಯಿಸಿಕೊಂಡು ಕಬ್ಬನ್ನು ಹೇರಳವಾಗಿ ಬೆಳೆಯಬಹುದಾಗಿರುತ್ತೆ. ಕೆಲ್ಲಗಿ 3 ಮೇಲೆ ಕಬ್ಬಿಗೆ ಸಮರ್ಪಕವಾಗಿ ದಪ್ಪನಾಗಿರುವ ಹೊಸ ಜಾತಿಯ ಕಬ್ಬನ್ನು ಬೆಳೆಸುವುದರಿಂದ ಹೆಚ್ಚು ಲಾಭವನ್ನು ಸಂಪಾದಿಸಬಹುದು. ಕೈತೋಟದ ಕೆಲಸ ಪದ್ಧತಿಯನ್ನು ಬಿಟ್ಟು ಕಬ್ಬಿಣದ ನೇಗಿಲನ್ನು ಉಪಯೋಗಿಸಿದರೆ ಕೆಲಸವೆಲ್ಲವೂ ಬಹುಮಟ್ಟಿಗೆ ನೇಗಿಲಿನಿಂದಲೇ ಮಾಡುವುದಕ್ಕಾಗುವುದಾದ್ದರಿಂದ ವ್ಯವಸಾಯದ ಖರ್ಚು ಕೂಡ ಕಡಿಮೆಯಾಗುವುದು. ಈಗಿನ ಕಬ್ಬಿನ ವ್ಯವಸಾಯಕ್ಕೆ ಖರ್ಚುಗಳನ್ನು ಬೇರೆ ಬೇರೆ ಗೊಬ್ಬರವು ಒದಗಿಸಲ್ಪಡುವುದು ಎಂದು ಎದೆಯಿಸಿ ಆದ್ದರಿಂದ ಈ ಗೊಬ್ಬರದ ಬೆಲೆ ಹೆಚ್ಚಾದ್ದರಿಂದ ಅವಶ್ಯಕವಾದ ಗೊಬ್ಬರಗಳನ್ನು ಉಪಯೋಗಿಸಿದರೆ ಬೆಳೆ ಅನುಕೂಲವಾಗಿ ಲಾಭವು ಬರುತ್ತೆ. ಕಬ್ಬನ್ನು ಗಾಣವಾಡಿಸುವುದು, ಬೆಲ್ಲ ತಯಾರಿಸುವುದು ಬಿಟ್ಟು ನಿಟ್ಟಾಗಿ ಮಾಡಿ ಮಾರುವುದಕ್ಕೆ ಬದಲು ಧಾರಣೆಯು ಕಡಿಮೆಯಾಗಿ ಲಾಭಕರವಾಗದಿರಬಹುದಾದ್ದರಿಂದ ರೈತರಿಂದಲೇ ಕಬ್ಬನ್ನು ಕೊಂಡು ಕೊಂಡು ಸಕ್ಕರೆಯನ್ನು ತಯಾರಿಸುವ ಕಾರ್ಖಾನೆಗಳನ್ನು ಮಾಡುವ ಏರ್ಪಾಡುಗಳು ನಡೆಯುತ್ತಿವೆ.

ಮಂಡ್ಯಕ್ಕೆ 6 ಮೈಲಿ ದೂರವಾಗಿಯೂ ಗಣಂಗೂರು ಗ್ರಾಮಕ್ಕೂ ಶಿವಳ್ಳಿ ಗ್ರಾಮಕ್ಕೂ ನಡುವೆ ಇರುವ ಬೋರೆಯ ಮೇಲೆ ವ್ಯವಸಾಯ ಕ್ಷೇತ್ರವೊಂದನ್ನು ಏರ್ಪಡಿಸಿ ಹೋದಸಾಲಿನಲ್ಲಿ 12 ಎಕರೆ ಕಬ್ಬನ್ನು ಬೆಳೆಯಿಸಿ, ಈ ಸಾಲಿನಲ್ಲಿ ಬೀಜವಾಗಿ ಉಪಯೋಗಿಸಿ ಮುಂದಕ್ಕೆ ರೈತರಿಗೆ ಬಿತ್ತನೆಯನ್ನು ಒದಗಿಸ ಬೇಕಾಗಿ 200 ಎಕರೆಗೆ ನಿಟ್ಟಿರುತ್ತೆ. ಅಲ್ಲಿ ಅನುಸರಿಸಿರುವ ವ್ಯವಸಾಯ ಕ್ರಮವನ್ನೇ ರೈತರೆಲ್ಲರೂ ಅನುಸರಿಸಬಹುದಾಗಿರುವದರಿಂದ ಆ ಕ್ರಮಗಳನ್ನೆಲ್ಲಾ ಇಲ್ಲಿ ವಿವರಿಸಿರುತ್ತೆ. ಇದೂ ಅಲ್ಲದೆ ಪ್ರತಿಯೊಂದು ವ್ಯವಸಾಯ ಕೆಲಸದ ತಸ್ವೀರನ್ನು ತೆಗೆದು ಮುದ್ರಿಸಿರುತ್ತೆ. ಆಸಕ್ತಿ ಹೊಂದಿದವರು ಪರೀಕ್ಷಾ ಕ್ಷೇತ್ರಕ್ಕೆ ಹೋಗಿ ನೋಡಿ ಬೇಕಾದಂತಹಗಳನ್ನೆಲ್ಲಾ ಅಲ್ಲಿನವರಲ್ಲಿ ಚರ್ಚೆಮಾಡಿ ತಿಳಿದುಕೊಂಡು ಸಂದೇಹಗಳನ್ನೆಲ್ಲಾ ಪರಿಹರಿಸಿಕೊಳ್ಳಬಹುದು.

ವ್ಯವಸಾಯಕ್ಕೆ ಬೇಕಾದ ಮುಟ್ಟುಗಳನ್ನೂ ಗೊಬ್ಬರಗಳನ್ನೂ ಒದಗಿಸುವ ಡಿಪೋ ಒಂದನ್ನು ಮಂಡ್ಯದಲ್ಲೇ ಏರ್ಪಾಡು ಮಾಡಿರುತ್ತೆ.

ನೆಲವನ್ನು ಬಿತ್ತನೆಗೆ ಹದಗೊಳಿಸುವ ಕ್ರಮ—ಟ್ರಾಕ್ಟ್ ಪದ್ಧತಿ ಪ್ರಕಾರ ಮುಸುಕಿನ ಜೋಳ ಕಟಾವಾದನಂತರ ಕಬ್ಬಿನ ಬೆಳೆಯನ್ನಿಡಬಹುದಾದ್ದರಿಂದ ಮುಸುಕಿನ ಬೆಳೆಯು ಕಟಾವಾದ ಕೂಡಲೇ ಹಂತಕ್ಕೆ ನೀರನ್ನು ಹಾಯಿಸಿಕೊಂಡು ಹದಕ್ಕೆ ಸರಿಯಾಗಿ ಒಣಗಿದ ಮೇಲೆ ಕಬ್ಬಿಣದ ನೇಗಿಲನ್ನು ಉಪಯೋಗಿಸಿ ಒಂದುಸಾರಿ ಉಳುಮೆಮಾಡಿ ಅನಂತರ ಇನ್ನೊಂದುಸಾರಿ ಅಡ್ಡಡ್ಡಲಾಗಿ ನೆಲವನ್ನು ಉಳಬೇಕು. ಕಬ್ಬಿಣದ ನೇಗಿಲಿನಿಂದ ನೆಲವನ್ನು 2 ಸಾರಿಗಿಂತ ಜಾಸ್ತಿಯಾಗಿ ಉಳಬೇಕಾದ್ದಿಲ್ಲ. ನಾಟಿ ನೇಗಿಲಿನ ಕೆಲಸಕ್ಕಿಂತ ಕಬ್ಬಿಣದ ನೇಗಿಲಿನ ಕೆಲಸವು ಜಾಗ್ರತೆಯಾಗಿಯೂ ಸಾಜೋಕಾಗಿಯೂ ನಡೆಯುವದು. ಹೀಗೆ ಉತ್ತು ಕೆಲವು ದಿನಗಳಾದ ಮೇಲೆ ಹಲುಬೆಯನ್ನು ಹೊಡೆದು ಭೂಮಿಯಲ್ಲಿ ಹೆಂಟೆಗಳಿಲ್ಲದಂತೆ ಮಾಡಿ ನೀರು ಹರಿಯುವ ಅನುಕೂಲಕ್ಕೆ ತಕ್ಕಂತೆ ಕಬ್ಬು ನೆಡುವ ಸಾಲುಗಳನ್ನು ನೇಗಿಲಿನಿಂದಲೇ ಮಾಡಬಹುದು. 3 ಅಡಿ ದೂರಕ್ಕೆ ಅಂದರೆ ಮಾರಿಗೆ 3 ಸಾಲು ಬರುವಂತೆ ಸಾಲುಗಳನ್ನು ಹೊಡೆಯಬೇಕು. ಸಾಲುಗಳಿಗೆ ಅಡ್ಡಲಾಗಿ 15 ಅಡಿ ದೂರಕ್ಕೆ ಒಂದೊಂದು ನೀರು ಕಾಲುವೆಯನ್ನು ನೇಗಿಲಿನಿಂದಲೇ ಮಾಡಬಹುದು. ಹೀಗೆ ಮಾಡಿದರೆ 15 ಅಡಿ ಉದ್ದವುಳ್ಳ ಸಾಲುಗಳು ಎಕರೆಯೊಂದಕ್ಕೆ ಸರಾಸರಿ ಸಾವಿರ ಸಾಲುಗಳಾಗುವವು. ಈರೀತಿಯಲ್ಲಿ ನೇಗಿಲಿನಿಂದಲೇ ಸಾಲುಗಳನ್ನೂ ನೀರು ಕಾಲುವೆಗಳನ್ನೂ ಮಾಡಿಕೊಂಡರೆ ಕೆಲಸವು ಜಾಗ್ರತೆಯೂ ಖರ್ಚು ಕಡಿಮೆಯೂ ಆಗುವದು.

ಗೊಬ್ಬರ ಹಾಕುವದು ಮತ್ತು ಬೀಜವನ್ನು ನೆಡುವುದು.—ಕಬ್ಬನ್ನು ನೆಡುವದಕ್ಕೆ ಮುಂಚೆ ದನದ ಗೊಬ್ಬರವನ್ನು ಹಾಕಬೇಕೆಂಬ ನಿರ್ಬಂಧವೇನೂ ಇಲ್ಲ. ಹಾಗೆ ಹಾಕದೆ ಎಕ್ಕರೆ ಗೆದ್ದಲು ಹುಳುಗಳ ಕಾಟವೆಂದರೆ ಯನ್ನು ಬಹುಮಟ್ಟಿಗೆ ಕಡಿಮೆಮಾಡಿಕೊಳ್ಳಬಹುದು. ಹಿಮೆ ಗೊಬ್ಬರವನ್ನು ಹಾಕಿದರೆ ಸಾರವು ಜಾಗ್ರತೆಯಾಗಿ ದೊರಕಿ ಪೈರು ಚನ್ನಾಗಿ ಬೆಳೆಯುವದು.

1 ಮಣ ಅಮೋನಿಯಂ ಸಲ್ಫೇಟ್ ಎಂಬ ಉಪ್ಪನ್ನೂ 1 ಮಣ ಕಾನ್‌ಸಂಟ್ರೇಟೆಡ್ ಸೂಪರ್ ಫಾಸ್ಫೇಟ್ ಎಂಬ ಗೊಬ್ಬರವನ್ನೂ ಬೆರಸಿಕೊಂಡು ಹೀಗೆ ಬೆರಳೆಯಾದ 2 ಮಣ ಗೊಬ್ಬರವನ್ನು 1 ಎಕರೆ ನೆಲಕ್ಕೆ ಉಪಯೋಗಿಸಬೇಕು. 1 ಎಕರೆ ನೆಲದಲ್ಲಿ 15 ಅಡಿ ಉದ್ದದ ಸಾವಿರ ಸಾಲುಗಳಿರುವದರಿಂದ ಮೇಲೆ ಹೇಳಿದಂತೆ ಬೆರಸಿದ 1 ಮಣ ಗೊಬ್ಬರವನ್ನು 125 ಸಾಲುಗಳಲ್ಲಿ ಹಂಚಬೇಕು. ಈ ಪ್ರಮಾಣಕ್ಕೆ ತಕ್ಕಂತೆ ಯಾವುದಾದರು ಅಳತೆಯ ಪಾತ್ರೆಯನ್ನು ಮಾಡಿಕೊಂಡರೆ ಗೊಬ್ಬರವನ್ನು ಒಂದೇ ಸಮನಾಗಿ ಸಾಲುಗಳಲ್ಲಿ ಹಂಚಬಹುದು. ಹೀಗೆ ಗೊಬ್ಬರವನ್ನು ಹಂಚಿದಮೇಲೆ ಪ್ರತಿಸಾಲಿಗೂ ಸಳ್ಳಗೆ ನೀರನ್ನು ಕಟ್ಟಬೇಕು. ಹೀಗೆ ಕಟ್ಟಿದ ನೀರ ಸಾಲಿನಲ್ಲೇ ಹೀರಿ ಹೋಗಬೇಕಲ್ಲದೆ ಮುಂದಕ್ಕೆ ಹರಿದು ಹೋಗದಂತೆ ನೋಡಬೇಕು. ಹಾಕಿದ ಗೊಬ್ಬರವೆಲ್ಲ ನೀರಿನಲ್ಲಿ ಕರಗಿ ಮಣ್ಣಿನಲ್ಲಿ ಸೇರಿಹೋಗುವುದು. ಹೀಗೆ ಮಣ್ಣಿನಲ್ಲಿ ಸೇರಿದನಂತರ ಹಾಕಿದ ಗೊಬ್ಬರವು ನೀರಿನ ಓಟದಿಂದ ಒಂದುಕಡೆಯಿಂದ ಮತ್ತೊಂದು ಕಡೆಗೆ ಹೋಗುವುದಿಲ್ಲ.

ಈರೀತಿಯಲ್ಲಿ ಸಾಲುಗಳಲ್ಲಿ ಹಿಮೆ ಗೊಬ್ಬರವನ್ನು ಹಾಕಿ ನೀರನ್ನು ಕಟ್ಟಿದನಂತರ ಕಬ್ಬಿನ ಬೀಜವನ್ನು ಕೂಡಲೇ ಸಾಲುಗಳಲ್ಲಿ ನೆಡಬೇಕು. ವಾಗಿ ನೆಡುವುದಕ್ಕೆ ತೊಂಡೆ ಬೀಜವನ್ನಾಗಲಿ ಕಣ್ಣಟಿಗೆ ಬೀಜವನ್ನಾಗಲಿ ಉಪಯೋಗಿಸಬಹುದು. ಕಣ್ಣಟಿಗೆ ಬೀಜವನ್ನು ಹಾಕುವದಾದರೆ ಬೀಜವನ್ನು ಕತ್ತರಿಸುವ ಕಬ್ಬಿಗೆ 9 ತಿಂಗಳುಗಳಿಗಿಂತ ಜಾಸ್ತಿ ವಯಸ್ಸಾಗಿರಬಾರದು. ಅಂಥ ಕಬ್ಬಿನಿಂದ 3 ಗೆಣ್ಣಿಗೊಂದು ಬೀಜವಾಗುವಂತೆ ಕತ್ತರಿಸಬೇಕು. ಹಾಗೆ ಕತ್ತರಿಸಿ ಆರಿಸಿಕೊಂಡ ಬಿತ್ತನೆಯನ್ನು ಎಕರೆಯೊಂದಕ್ಕೆ ಒಟ್ಟು 9,000 ದಂತೆ ನೆಟ್ಟರೆ ಸಾಕು. ಅದ್ದರಿಂದ ಸಾಲಿಗೆ 8 ಬೀಜದಂತೆ ನೆಡಬೇಕು. ಕಬ್ಬಿನ ಗೆಣ್ಣುಗಳು ದೂರವಾಗಿದ್ದರೆ ಸಾಲಿಗೆ 8 ಬೀಜವೇ ಸಾಕಾಗುವುದು. ಗೆಣ್ಣುಗಳು ಹತ್ತಿರವಾಗಿದ್ದರೆ ಸಾಲಿಗೆ 10 ಬೀಜ ಬೇಕಾಗಬಹುದು. ಸಾಲಿನಲ್ಲಿ ನೆಡುವಾಗ ಬಿತ್ತನೆಗಳ ನಡುವೆ ಜಾಗವನ್ನು ಬಿಟ್ಟು ನಡಬೇಕು.

ಈರೀತಿಯಲ್ಲಿ ಬೀಜವನ್ನು ನೆಟ್ಟನಂತರ ಅವಶ್ಯಕವಿದ್ದಂತೆ 2 3 ದಿವಸಕ್ಕೊಂದುಸಾರಿ ನೀರನ್ನು ಹಾಯಿಸುತ್ತಿದ್ದರೆ 10-15 ದಿನಗಳೊಳಗಾಗಿ ಮೊಳಕೆಗಳೇಳುವುವು.

ಬಿತ್ತನೆಯನ್ನು ಹಾಕಿದ 6 ಅಥವಾ 8 ವಾರಗಳಾದನಂತರ ಕಬ್ಬಿನ ಕೊಂಡೆಗಳು ಹೇರಳವಾಗಿ ಒಡೆಯುವುದಕ್ಕಾಗಿ ಮತ್ತೊಂದಾವರ್ತಿ ಹಿಮೆ ಗೊಬ್ಬರವನ್ನು ಹಾಕಬೇಕು. ಇದಕ್ಕಾಗಿ ಎಕರೆಯೊಂದಕ್ಕೆ 4 ಮಣದಂತೆ ಬರೀ ಅಮೋನಿಯಮ್ ಸಲ್ಫೇಟನ್ನು ಮಾತ್ರ ಉಪಯೋಗಿಸಬೇಕು. ಗೊಬ್ಬರವು ಎಲೆ ಪೈರಿನಮೇಲೆ ಬೀಳದಂತೆ ಅದನ್ನು ಸಾಲುಗಳಲ್ಲಿ ಮಾತ್ರ ಹಾಕಿ ಕೂಡಲೇ ನೀರನ್ನು ಕಟ್ಟಬೇಕು.

ಇದಾದನಂತರ ಅವಶ್ಯಕತೆಯಿದ್ದಂತೆ ಪೈರಿಗೆ ನೀರನ್ನು ಕಟ್ಟುತ್ತಿರುವದಲ್ಲದೆ ಆಗಾಗ್ಗೆ ಕಳೆಯನ್ನು ಕೀಳಬೇಕು. ಪೈರನ್ನು ನೆಟ್ಟ ಸುಮಾರು 3 ತಿಂಗಳಾದನಂತರ ಸಾಲುಗಳಲ್ಲಿ ಹಿಂಡಿ ಗೊಬ್ಬರವನ್ನಾಗಲಿ ಹಿಂಡಿ ಗೊಬ್ಬರವನ್ನಾಗಲಿ ಬನದ ಗೊಬ್ಬರವನ್ನಾಗಲಿ ಹಾಕಿ ಸಾಲುಗಳ ಮಧ್ಯೆ ಕಬ್ಬಿಣದ ನೇಗಿಲನ್ನು ಹೊಡೆದು ಸಾಲುಗಳನ್ನು ಮುಚ್ಚಬೇಕು. 15 ಅಡಿ ಉದ್ದದ ಸಾಲುಗಳನ್ನು ಮುಚ್ಚಿದಮೇಲೆ ನೀರು ಹಾಯಿಸುವದಕ್ಕೆ ಅನುಕೂಲವಾಗಬೇಕು. ಈ ಕೆಲಸ ಮಾಡುವ ವಿಧಾನವನ್ನು ನೆಲವನ್ನು ನೋಡಿಯಾದರೂ ತಿಳಿದುಕೊಬಹುದು. ಕಬ್ಬು ಬಾಗದಂತೆ ಸುಲಿಯುವ ವ್ಯವಸಾಯದ ಇಲಾಖೆ ಅಧಿಕಾರಿಗಳಲ್ಲಾಗಲಿ, ಪರೀಕ್ಷಾ ಕ್ಷೇತ್ರದಲ್ಲಿ ಕೆಲಸಮಾಡುವ ಅಧಿಕಾರಿಗಳನ್ನಾಗಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಹಿಂಡಿ ಗೊಬ್ಬರವನ್ನು ಎಕರೆಗೆ 30 ಮಣದ ಪ್ರಮಾಣದಲ್ಲಿ ಹಾಕಬಹುದು. ಹಿಂಡಿ ಗೊಬ್ಬರವನ್ನು ಎಕರೆಗೆ 8-10 ಮಣದಷ್ಟು ಹಾಕಿದರೆ ಸಾಕು. ಎಕರೆಗೆ 40 ಮಣ ಹಿಂಡಿಯನ್ನು ಅಥವಾ 6 ಗಾಡಿ ದನದ ಗೊಬ್ಬರವನ್ನಾಗಲಿ, ಬೇಕಾಗಿ ಕೊಟ್ಟಿಗೆ ದನದ ಗೊಬ್ಬರವನ್ನಾಗಲಿ ಉಪಯೋಗಿಸಬಹುದು. ಹಸಿರು ಗೊಬ್ಬರವನ್ನು ಉಪಯೋಗಿಸುವವರು ಸಣಬನ್ನು ಬೆಳೆದು ಅದನ್ನು ಗೊಬ್ಬರವನ್ನು ಎಕರೆಗೆ 6 ಗಾಡಿಯಂತೆ ಹಾಕಬಹುದು. 1 ಗಾಡಿ ಕಂಪೋಸ್ಟು ಗೊಬ್ಬರದಲ್ಲಿ 1 ಗಾಡಿ ದನದ ಗೊಬ್ಬರದಲ್ಲಿರುವಷ್ಟು ಸಾರ ಇರುವದು.

ಕಂಪೋಸ್ಟು ಗೊಬ್ಬರವನ್ನು ಟನ್ನಿಗೆ 4 ರೂ. ನಂತೆ ಮೈಸೂರಿನಲ್ಲಿ ಮಾರುತ್ತಾರೆ. ರೈಲಿನಲ್ಲಿ ಮಂಡ್ಯಕ್ಕೆ ತರಿಸಿದರೆ ಟನ್ನಿಗೆ 2-2-0 ರೈಲು ಚಾರ್ಜು ಬೀಳುವದು. ರೈಲಿನಿಂದ ಮುಂದಕ್ಕೆ ತಮ್ಮ ಗಾಡಿಗಳಲ್ಲೇ ರೈತರು ಸಾಗಿಸಬಹುದು.

ಈರೀತಿಯಾಗಿ 3 ತಿಂಗಳ ಬೆಳೆಯನ್ನು ವಿಪುಹಾಕಿದನಂತರ ವಾರಕ್ಕೆ ಒಂದೆರಡಾವರ್ತಿ ನೀರನ್ನು ಕಟ್ಟಿಕೊಂಡು ಕಳೆಯನ್ನು ಕಿತ್ತು ಪೈರಿಗೆ 12 ತಿಂಗಳಾಗುವವರೆವಿಗೂ ನೋಡಿಕೊಂಡರೆ ಕಟಾವಿಗೆ ಸಿದ್ಧವಾಗುವದು.

ಕಬ್ಬಿನ ಬೆಳೆಗೆ ಸಕಾಲದಲ್ಲಿ ನೀರನ್ನು ಕಟ್ಟುವುದು ಎಷ್ಟು ಅವಶ್ಯಕವೋ ನೀರು ಜಾಸ್ತಿಯಾಗಿ ಜೌಗಾಗದಂತೆ ನೋಡಿಕೊಳ್ಳುವುದೂ ಅಷ್ಟು ಅವಶ್ಯಕ. [illegible] ಹೆಚ್ಚಾಗಿ [illegible] ಪ್ರದೇಶಗಳಲ್ಲಿ ಅವಶ್ಯಕವಿದ್ದಂತೆ ನೀರು ಬಸಿದು ಹೋಗಲು ಆಳವಾದ ಜಗಳನ್ನು ತೆಗೆಯಬೇಕು.

ಇದೇ ರೀತಿಯಲ್ಲಿ ಹೋದ ಸಾಲಿನಲ್ಲಿ 12 ಎಕರೆ ಕಬ್ಬನ್ನು ಪರೀಕ್ಷಾ ಕ್ಷೇತ್ರದಲ್ಲಿ ನೆಟ್ಟು ವ್ಯವಸಾಯ ಮಾಡಿದ್ದರಲ್ಲಿ ಪೈರಿಗೆ 12 ತಿಂಗಳಾದಮೇಲೆ ಎಕರೆಗೆ ಸರಾಸರಿ 45 ಟನ್ ಕಬ್ಬು ಬೆಳೆದಿರುತ್ತೆ. ಸ್ವಲ್ಪ ಕಬ್ಬನ್ನು ಗಾಣವಾಡಿಸಿ ನೋಡಿದ್ದರಲ್ಲಿ 1 ಟನ್ ಕಬ್ಬಿಗೆ 10 ಮಣ ಬೆಲ್ಲ ಇಳಿದಿರುತ್ತೆ. ಕಬ್ಬನ್ನು ಕಟಾಯಿಸುವವರೆವಿಗೂ ಎಲ್ಲಾ ಬಾಬುಗಳೂ ಸೇರಿ ಎಕರೆಯೊಂದಕ್ಕೆ 210 ರೂ ಗಳು ಖರ್ಚಾಗಿರುತ್ತೆ. 1 ಟನ್ ಕಬ್ಬನ್ನು ಅರೆದು ಬೆಲ್ಲ ಮಾಡಲು 5 ರೂ ಖರ್ಚಾಗುತ್ತೆ. ಹಾಗೆ ಮಾಡಿದ ಬೆಲ್ಲವನ್ನು ಮಣ 1 ಕ್ಕೆ 1 6-0 ಯಿಂದ 1 8-0 ವರೆವಿಗೂ ಮಾರಿರುತ್ತೆ. ಬೆಲ್ಲಕ್ಕಿಂತಲೂ ಸಕ್ಕರೆಯನ್ನು ಮಾಡಿದರೆ ಹೆಚ್ಚು ಲಾಭವು ಬರುವುದಾದ್ದರಿಂದ ಸಕ್ಕರೆ ಕಾರ್ಖಾನೆಯ ಏರ್ಪಾಡುಗಳು ನಡೆಯುತ್ತಿವೆ.

ಹೆಚ್ಚು ವಿಷಯಗಳನ್ನು ಮಂಡ್ಯದ ತಾಲ್ಲೂಕಿನಲ್ಲಿರುವ ವ್ಯವಸಾಯದ ಇಲಾಖಾ ಅಧಿಕಾರಿಗಳನ್ನು ಕೇಳಿ ತಿಳಿದುಕೊಳ್ಳಬಹುದು.

ಅಖಿಲ ಶ್ರೀಮದ್ವೀರಶೈವ ಮಹಿಳಾ ಪರಿಷತ್ ಧಾರವಾಡ.

ಇದೇ ಡಿಸೆಂಬರ್ ತಿಂಗಳ ಕ್ರಿಸ್‌ಮಸ್ ರಜೆಯಲ್ಲಿ ನೆರೆಯುವ ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಕಾಲಕ್ಕೆ ಈ ಮಹಿಳಾ ಪರಿಷತ್ತನ್ನು ಕೂಡಿಸುವದು ಗೊತ್ತಾಗಿದೆ. ಕಾರಣ ಸ್ತ್ರೀಯರ ಏಳಿಗೆಯಲ್ಲಿ ಆಸಕ್ತಿ ಇರುವ ಸ್ತ್ರೀ ಪುರುಷರಿಗೆ ಏನಾದರೂ ತಿಳಿಸುವದು ಅಥವಾ ತಿಳಿದುಕೊಳ್ಳುವದು ಇದ್ದರೆ ಅವರು ಕೆಳಗೆ ನಮೂದ ಮಾಡಿದವರ ಸಂಗಡ ಪತ್ರವ್ಯವಹಾರ ಮಾಡಬಹುದು.

ಪಾರ್ವತೀದೇವಿ ಕೇಸರಿ,

ಅಖಿಲ ಶ್ರೀಮದ್ವೀರಶೈವ ಮಹಿಳಾ ಪರಿಷತ್, ಧಾರವಾಡ

ನಾರಿನವೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ ಟ ಖ ೫ ಆಣೆ

ಪತ್ತಾ—ವೈದ್ಯ ವ್ಹಿ ಎಸ್ ಕಾಪಸೆ, ಮಿರಜ

21 M. C

೧೯೩೭ ನೆಯ ಇಸವಿ ಅಕ್ಟೋಬರ್ ತಾ, ೪ ರಿಂದ ಅಕ್ಟೋಬರ್ ತಾ, ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೯ ನೆಯ ಆಂಗಿರಾ ನಾಮಸಂವತ್ಸರದ ಆಶ್ವಯುಜ ಶುದ್ಧ ಚೌತಿಯಿಂದ ಆಶ್ವಯುಜ ಶುದ್ಧ ದಶಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ನಡ ಮಾಸ
3	ಸೋಮ	ಚೌತಿ	39 1	ವಿಶಾ	41.38	18
4	ಮಂಗಳ	ಪಂಚ	42 58	ಅನೂ	37 37	19
5	ಬುಧ	ಷಷ್ಠಿ	37 10	ಜ್ಯೇಷ್ಠ	33 34	2[illegible]
6	ಗುರು	ಸಪ್ತ	32 2	ಮೂಲ	30 8	21
7	ಶುಕ್ರ	ಅಷ್ಟ	27 36	ಪೂಷಾ	27-29	2[illegible]
8	ಶನಿ	ನವ	23-48	ಉಷಾ	25 27	2[illegible]
9	ಭಾನು	ದಶ	21 13	ಶ್ರವ	24-39	[illegible]

(1) ಮಳೆನಕ್ಷತ್ರ ಹಸ್ತ ೩ ನೆಯ ಪಾದ (2) ಕಾಳರಾತ್ರಿ, ಸರಸ್ವತಿ ಪೂಜೆ, ಮಳೆನಕ್ಷತ್ರ ಹಸ್ತ ೪ ನೆಯ ಪಾದ (3) ಆಯುಧ ಪೂಜಾದಿ ಪೂಜೆ (4) ವಿಜಯದಶಮಿ, ಶಮೀಪೂಜೆ

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀಕೃಷ್ಣ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು

[illegible]

[ಸ್ಥಳದವರಿಗೆ ವಾರ್ಷಿಕ ... ೧-೧೨-೦] [ಪರಸ್ಥಳದವರಿಗೆ ೨-೮-೦] [ಸೈಮೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ೯ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೧೦ ನೆಯ ಸೋಮವಾರ [ಸಂಚಿಕೆ ೪೧

Insurance in the Mysore State Life Insurance, Public Branch.

Life Insurance is admittedly the best form of investment and the greatest seafeguard against the old age and death

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries Economic Superintendents, Helpers and the Insurance Office, Public Office Buildings Bangalore (Sd.) S SHAMANNA,

[60—14] *Secretary, Insurance Committee*

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕಲ್ಕೆ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	[illegible]
[illegible]	೦—೧೨—೦	೧—೩—೦
[illegible]	೦—೮—೦	೦—೧೬—೦
[illegible]	೦—೪—೦	೦—೯—೧
[illegible]	೦—೫—೦	೦—೧೦—೨
[illegible]	೦—೪—೦	೦—೯—೦
[illegible]	೦—೪—೦	೦—೯—೦
[illegible]	೦—೧—೦	೦—೬—೦
[illegible]	೦—೮—೦	೦—೧೩—೦
[illegible]	೦—೮—೦	೦—೧೩—೦
[illegible]	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಪಿರಿಯಪಟ್ಟಣದಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಿಗೆ ಕ್ಷೀಣರಾಗ ಬೇಡಿರಿ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದು [ಸ್ಟರ

ಧಿಕ್ಕರಿಸಿದರೆ ಕ್ಷೀಣವೆ ಕಾಯ್ದುಕೊಳ್ಳಿರಿ

[illegible]

ಸ್ತ್ರೀ ರೋಗ ನಿವಾರಣೇ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[illegible] [30—41]

ಪತ್ತಾ ಮಾಲಕ:—ವೈದ್ಯ [illegible] ಕಾಪಸೆ. ಮು. ಪೋ. ಪಿರಿಯಪಟ್ಟಣ ಎಂ. ಎಸ್. ಎಂ

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

(Registerd Trade Mark)

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[30—5] ಪೋ. ಬಾ. [illegible], ಮದರಾಸು.

ಮೈಸೂರು ಸ್ಟಾರ್

೧೯೩೨ನೇ ಇಸವಿ ಅಕ್ಟೋಬರ್ ತಾ|| ೧೦ನೆಯ ಸೋಮವಾರ.

THE MYSORE CO-OPERATIVE CONFERENCE

The Nineteenth Mysore Provincial Co-operative Conference was opened by Amin-ul-Mulk Sir Mirza M. Ismail, Dewan of Mysore on the 5th October 1932. The Dewan Sahib emphasised among others two aspects of the work immediately before the movement. The first is the part which co-operation could play in the uplift of the depressed classes. Their problem had assumed special importance with the voluntary self-immolation which the Mahatma had sought last month. *The other problem is the development of the* Irwin Canal area. The Dewan Sahib was certain that it was only through co-operation that the development of the area could be brought about. In particular he stressed on the need for sugar cane cultivation and the manufacture of sugar for which the Government was taking all necessary steps The conference was presided over by Mr. S. P. Rajgopalachari, Revenue Commissioner whose address makes really useful and interesting reading. He has analysed the situation remarkably well. While he was ungrudging *in his compliment to the working of the* department under the enthusiastic Reg*istrar Mr K H Ramayya for the high* place Mysore has taken in co-operative *matters in India*, he was also conscious of the existing defects, especially in the working of rural primary societies, namely (1) want of proper management resulting in the increase of over-dues, (2) inelasticity and delay in issuing loans to the ryots and (3) the heavy rates of interest charged in many of these societies. Mr. Rajgopalachari suggested certain remedies which are well worth the consideration of the Propagandist Institute and the Department The first thing is the training of necessary men and effective supervision of the work of the societies both by *Department and Supervisors of the large* financing institutions. The second thing is the instituting of proper inquiry at the time of grant of loans and promptness in taking steps as loans fall due Another very important suggestion is the adoption of the recommendation of the Indian Central Banking Enquiry Committee about the introduction of the normal credit system in the societies The president wanted the cash—credit system which is in vogue in the Banks to be introduced The reason is plain The existing procedure of insisting on an application each time a loan is required is too cumbersome and dilatory and quite unsuited *to the villager, in consequence of which he* prefers the usual money lender Once the ryot offers security up to a certain amount, he must be free to operate up to the limit without having recourse to fresh applications. Mr Rajgopalachari pointed out certain defects in the execution of the decrees which were now hampering the work of societies and he hoped that solutions would be found to overcome them. He pleaded for lowering the rate of interest for housing societies and suggested that the funds to the credit of the Village Panchayets could well be utilised for develop*ing village extensions and improving the hous*ing conditions in the villages. Dealing with industrial co-operation he emphasised the scope *for* joint action in purchasing raw material machinery and sale of finished product. In particular he wanted co-operation to redeem areca growers who are now in the hands of the midde men. The Conference concluded its deliberations on the 7th October. Much of its valuable time was taken away in discussing the need for a seperate conference by urban societies. Some of the Mysore City co-operators were for holding a separate conference, but wiser counsel prevailed and they arrived at a compromise whereby a sub-committee of the Provincial Conference would meet to send up propositions relating to urban societies and they would be discussed by the conference itself. We are glad that this separatist tendency in co-operation did not succeed. We congratulate the organisers of the conference on the success that attended their efforts.

ಮೈಸೂರು ಸಹಕಾರ ಸಮ್ಮೇಳನ.

ಮೈಸೂರು ಸಂಸ್ಥಾನದ ಸಹಕಾರ ಸಮ್ಮೇಳನದ 19 ನೆಯ ಅಧಿವೇಶನವು ಕಳೆದ ಬುಧವಾರ ರಾಜಧಾನಿಯ ಟೌನ್‌ಹಾಲಿನೊಳಗೆ ದಿವಾನ್ ಸರ್ ಮಿರ್ಜ಼ ಎಂ ಇಸ್ಮೈಲ್‌ರವರಿಂದ ಆರಂಭಿಸಲ್ಪಟ್ಟು ರೆವಿನ್ಯೂ ಕಮಿಷನರಾದ ಮ|| ಎಸ್. ಪಿ. ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ 3 ದಿವಸಗಳವರೆಗೆ ಜರುಗಿತು. ದಿವಾನರು ತಮ್ಮಾರಂಭ ಭಾಷಣದಲ್ಲಿ, ಈ ಸಹಕಾರ ಉದ್ಯಮದಲ್ಲಿ ತತ್‌ಕ್ಷಣ ನಡೆಯಬೇಕಾಗಿರುವ 2 ಅತ್ಯಂತ ಪ್ರಾಮುಖ್ಯ ವಿಷಯಗಳನ್ನು ಮುಖ್ಯವಾಗಿ ಒತ್ತಿ ಹೇಳಿದರು. ಅವುಗಳಲ್ಲಿ ಸಹಕಾರದಿಂದ ನಿಮ್ನ ಜನೋದ್ಧಾರವು ಎಷ್ಟರಮಟ್ಟಿಗೆ ಆಗುತ್ತದೆಂಬ ವಿಚಾರವು ಮೊದಲನೆಯ ಸಮಸ್ಯೆಯಾಗಿರುತ್ತದೆ. ಮಹಾತ್ಮರು ಕಳೆದ ತಿಂಗಳು ಕೈಕೊಂಡಿದ್ದ ಉಪವಾಸ ದೀಕ್ಷೆಯಿಂದ ಈ ನಿಮ್ನಜನೋದ್ಧಾರ ಸಮಸ್ಯೆಗೆ ಅತ್ಯಂತ ಪ್ರಾಮುಖ್ಯತೆಯುಂಟಾಗಿರುವುದು. ಇರ್ವಿನ್ ನಾಲಾ ಪ್ರದೇಶವನ್ನಭಿವೃದ್ಧಿಗೊಳಿಸುವ ವಿಚಾರವು 2 ನೆಯ ಸಮಸ್ಯೆಯಾಗಿದೆ. ಈ ನಾಲಾ ಪ್ರದೇಶದ ಅಭಿವೃದ್ಧಿಯು ಸಹಕಾರದಿಂದಲೇ ಸಾಧ್ಯವೆಂದು ದಿವಾನರು ಸಂಪೂರ್ಣ ಭರವಸೆಯುಳ್ಳವರಾಗಿರುತ್ತಾರೆ. ಕಬ್ಬಿನ ವ್ಯವಸಾಯವನ್ನಭಿವೃದ್ಧಿಗೊಳಿಸಿ ಸಕ್ಕರೆಯನ್ನು ಮಾಡುವುದು ಅತ್ಯಾವಶ್ಯಕವೆಂದು ಒತ್ತಿ ಹೇಳಿದರು. ಅಧ್ಯಕ್ಷರ ಉಪನ್ಯಾಸವು ಬಹಳ ಉಪಯುಕ್ತವೂ ಸ್ವಾರಸ್ಯವೂ ಆಗಿರುತ್ತದೆ ಸಹಕಾರ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ವಿಭೇದಿಸಿ ಹೇಳಿರುತ್ತಾರೆ ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರಾದ ಮ|| ಕೆ ಎಚ್. ರಾಮಯ್ಯನವರ ಉತ್ಸಾಹಪೂರಿತವಾದ ಮೇಲ್ವಿಚಾರಣೆಯಲ್ಲಿ ಸಹಕಾರ ಶಾಖೆಯು ಸಹಕಾರ ಕಾರ್ಯನಿರ್ವಾಹದಲ್ಲಿ ಭಾರತ ದೇಶದಲ್ಲೆಲ್ಲ ಉತ್ತಮಸ್ಥಾನವನ್ನು ಪಡೆದಿರುವುದನ್ನು ಶ್ಲಾಘಿಸಿರುವುದರ ಜತೆಗೆ ಅದರ ಕಾರ್ಯಕ್ರಮದಲ್ಲಿರತಕ್ಕ ನ್ಯೂನತೆಗಳನ್ನು ಮುಖ್ಯವಾಗಿ ಗ್ರಾಮಗಳಲ್ಲಿರತಕ್ಕ ಚಿಕ್ಕ ಸಂಘಗಳ ಕಾರ್ಯನಿರ್ವಾಹದಲ್ಲಿ ಅಂದರೆ (1) ಸರಿಯಾದ ಆಡಳಿತವಿಲ್ಲದ್ದರಿಂದ ಸಾಲದ ಬಾಕಿ ಹೆಚ್ಚುತ್ತಿರುವುದು (2) ರೈತರಿಗೆ ಸಾಲಕೊಡತಕ್ಕ ವಿಚಾರದಲ್ಲಿ ತೊಂದರೆಯೂ ಸಾವಕಾಶವೂ ಆಗುತ್ತಿರುವುದು (3) ಅನೇಕ ಸಂಘಗಳಲ್ಲಿ ಬಡ್ಡಿದರವು ಹೆಚ್ಚಾಗಿರುವುದು–ಈ ನ್ಯೂನತೆಗಳನ್ನು ಕುರಿತು ಪ್ರಸ್ತಾಪಿಸಿ ಅವುಗಳ ನಿವಾರಣೋಪಾಯಗಳನ್ನು ತಿಳಿಸಿರುವರು. ಅವನ್ನು ಸಹಕಾರತತ್ತ್ವ ಪ್ರಸಾರಕ ಸಂಸ್ಥೆಯವರು ಮತ್ತು ಸಹಕಾರ ಶಾಖೆಯವರು ಅವಶ್ಯವಾಗಿ ಗಮನಿಸಬೇಕು. ಈ ಕಾರ್ಯನಿರ್ವಾಹದಲ್ಲಿ ಜನರನ್ನು ತರಬೇತುಮಾಡುವುದು ಮತ್ತು ಶಾಖೆಯವರೂ ದೊಡ್ಡದಾಗಿ ಲೇವಾದೇವಿ ಮಾಡುವ ಸಂಘಗಳ ಸೂಪರ್‌ವೈಜರುಗಳೂ ಸಹಕಾರ ಸಂಘಗಳ ಕಾರ್ಯಕಲಾಪಗಳನ್ನು ವಿಚಾರಿಸುವುದು ಮೊದಲನೆಯ ಕರ್ತವ್ಯವಾಗಿದೆ ಎಲ್ಲ ಸಂದರ್ಭಗಳನ್ನೂ ಚೆನ್ನಾಗಿ ವಿಚಾರಿಸಿ ಸಾಲಕೊಡುವುದು ಮತ್ತು ಕೊಟ್ಟ ಸಾಲವನ್ನು ಸಕಾಲದಲ್ಲಿ ವಸೂಲುಮಾಡಲು ತಕ್ಕ ಕಾರ್ಯಭಾಗವನ್ನು ನಡೆಸುವುದು ಎರಡನೆಯ ಕರ್ತವ್ಯವಾಗಿದೆ ಮಿತಿಮೀರದೆ ಕ್ಲಿಪ್ತವಾಗಿ ಸಾಲಕೊಡುವ ಪದ್ಧತಿಯನ್ನು ಸಂಘಗಳು ಆಚರಣೆಗೆ ತರಬೇಕೆಂದು ಇಂಡಿಯನ್ ಸೆಂಟ್ರಲ್ ಬ್ಯಾಂಕಿಂಗ್ ಎಂಕ್ವೈರಿ ಕಮಿಟಿಯವರು ಮಾಡಿರುವ ಶಿಫಾರಸನ್ನು ಈ ಸಂಘಗಳು ಅನುಸರಿಸಬೇಕೆಂದು ಸೂಚಿಸಿರುವುದು ಬಹಳ ಪ್ರಾಮುಖ್ಯವಾಗಿದೆ ಬ್ಯಾಂಕುಗಳಲ್ಲಿ ಆಚರಣೆಯಲ್ಲಿರುವ ಕ್ಯಾಷ್ ಕ್ರೆಡಿಟ್ ಪದ್ಧತಿಯನ್ನು ಸಹಕಾರ ಸಂಘಗಳು ಅನುಸರಿಸಬೇಕೆಂದು ಅಧ್ಯಕ್ಷರು ಹೇಳಿರುವರು. ಸಾಲವನ್ನಪೇಕ್ಷಿಸುವ ಪ್ರತಿಯೊಂದು ವೇಳೆಯಲ್ಲೂ ಅಪ್ಲಿಕೇಷನ್ ಕೊಡಬೇಕೆಂದು ಒತ್ತಾಯಪಡಿಸುವ ಈಗಿನ ಪದ್ಧತಿ ಬಹಳ ಸಾವಕಾಶಕ್ಕೂ ತೊಂದರೆಗೂ ಕಾರಣವಾಗಿರುವುದರಿಂದ ಗ್ರಾಮಸ್ಥರು ಸಾಹುಕಾರರಲ್ಲಿ ಸಾಲವನ್ನು ತೆಗೆದುಕೊಳ್ಳುವುದು ಮೇಲೆಂದು ಭಾವಿಸುವರು. ಆದುದರಿಂದ ಒಂದಾವೃತ್ತಿ ತನ್ನ ಆಸ್ತಿಯನ್ನು ಸಂಘಕ್ಕೆ ಈಡುಮಾಡಿ ಸಾಲ ತೆಗೆದುಕೊಂಡಂತಹ ರೈತನು ಪುನಃ ಸಾಲವನ್ನು ತೆಗೆದುಕೊಳ್ಳಲು ಹೊಸದಾಗಿ ಅಪ್ಲಿಕೇಷನ್ ಕೊಡಬೇಕೆಂಬ ನಿರ್ಬಂಧವಿರಕೂಡದು ಡಿಕ್ರಿಗಳನ್ನು ಜಾರಿಗೆತರುವಲ್ಲಿರತಕ್ಕ ನ್ಯೂನತೆಗಳಿಂದ ಸಂಘಗಳ ಕಾರ್ಯಕ್ಕೆ ಅಡಚಣೆಯಾಗಿರುವ ಭಾಗವನ್ನು ಅಧ್ಯಕ್ಷರು ತೋರಿಸಿಕೊಟ್ಟು ಅವುಗಳ ನಿವಾರಣೋಪಾಯಗಳನ್ನು ಕಂಡುಹಿಡಿಯಬೇಕೆಂದು ಹೇಳಿರುತ್ತಾರೆ. ಮನೆ ಕಟ್ಟಲು ಸಾಲ ಕೊಡತಕ್ಕ ಸೊಸೈಟಿಗಳಿಗೆ ಸಹಾಯಮಾಡುವ ಹಣದ ಮೇಲಿನ ಬಡ್ಡಿದರವನ್ನು ಕಡಿಮೆಮಾಡುವುದು ಅವಶ್ಯಕವೆಂದು ಹೇಳಿ ಗ್ರಾಮಪಂಚಾಯತಿಗಳ ಹಣವು ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿಯೂ, ಗ್ರಾಮಸ್ಥರ ಮನೆಗಳ ಸ್ಥಿತಿಯನ್ನುತ್ತಮಪಡಿಸುವುದಕ್ಕಾಗಿಯೂ ವಿನಿಯೋಗಿಸಲ್ಪಡಬೇಕೆಂದು ಸೂಚಿಸಿರುವರು. ಕೈಗಾರಿಕೆಯ ಸಹಕಾರ ವಿಚಾರವಾಗಿ ಪ್ರಸ್ತಾಪಿಸುವಾಗ್ಗೆ, ಕಚ್ಚಾಪದಾರ್ಥಗಳನ್ನೂ ಯಂತ್ರ ಸಾಮಗ್ರಿಗಳನ್ನೂ ಸಂಘಗಳು ಒಟ್ಟಾಗಿ ಸ್ವರಕ್ಷ್ಯಯಕ್ಕೆ ಕೊಂಡು ಅವುಗಳಿಂದಾಗತಕ್ಕ ಪದಾರ್ಥಗಳನ್ನು ಒಟ್ಟಾಗಿ ಮಾರುವುದರಿಂದ ಬಹಳ ಪ್ರಯೋಜನವುಂಟೆಂದೂ, ಮಧ್ಯಸ್ಥಗಾರರಲ್ಲಿ ಸಾಲಸಾಡಿ ಸಹಕಾರ ಸಂಘದ ಅಡಿಕೆ ವ್ಯವಸಾಯಗಾರರನ್ನು ಬಿಡಿಸಲು ಸಹಕಾರವು ಬಹಳ ಅವಶ್ಯಕವೆಂದೂ ಒತ್ತಿ ಹೇಳಿದ್ದಾರೆ ಈ ಸಂಮೇಳನದ ಅಧಿವೇಶನವು ಕಳೆದ ಶುಕ್ರವಾರ ಮುಕ್ತಾಯಗೊಂಡಿತು. ಪಟ್ಟಣಗಳ ಸಹಕಾರ ಸಂಸ್ಥೆಗಳ ಸಮ್ಮೇಳನವು ಪ್ರತ್ಯೇಕವಾಗಿ ನಡೆಯಬೇಕೆಂಬ ಚರ್ಚೆಯಲ್ಲೇ ಸಭೆಯ ವಿಶೇಷ ಕಾಲವು ಕಳೆದು ಹೋಯಿತು. ರಾಜಧಾನಿಯ ಕೆಲ ಸಹಕಾರ ಸಂಸ್ಥೆಗಳವರು ಪ್ರತ್ಯೇಕ ಸಮ್ಮೇಳನವನ್ನು ಮಾಡಬೇಕೆಂದು ಬಲವಾಗಿ ವಾದಿಸಿದರಾದರೂ ಕಡೆಯಲ್ಲಿ ಮಧ್ಯಸ್ಥಿಕೆಯು ನಡೆದು, ಪ್ರಾಂತಿಕ ಸಂಮೇಳನದ ಉಪಸಭೆಯವರು ಸಮಾವಿಷ್ಟರಾಗಿ ಪಟ್ಟಣಗಳ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸಿ ವಾರ್ಷಿಕಸಭೆಯ ಪರ್ಯಾಲೋಚನೆಗೆ ಕಳುಹಿಸಬೇಕೆಂದು ನಿರ್ಧರಿಸಲ್ಪಟ್ಟಿತು ಸಹಕಾರ ಸಮ್ಮೇಳನವು ವಿಭಿನ್ನವಾಗಿ ನಡೆಯುವ ಪ್ರಯತ್ನವು ಸಿದ್ಧಿಸದಿದ್ದುದು ಸಂತೋಷಪ್ರದವು ಈ ಸಮ್ಮೇಳನವು ಜಯಪ್ರದವಾಗಿ ನೆರವೇರಲು ಕಾರಣಭೂತರಾದವರನ್ನು ಅಭಿನಂದಿಸುತ್ತೇವೆ

ವಿಜಯದಶಮಿ ಉತ್ಸವ

ನವರಾತ್ರಿಯುತ್ಸವವು ಕಳೆದ ಶನಿವಾರ ಪೂರೈಸಿದುದರಿಂದ ಶ್ರೀಮನ್ಮಹಾರಾಜರವರು ಭಾನುವಾರ ಕಂಕಣವಿಸರ್ಜನಾನಂತರ ಮಂಗಳಸ್ನಾನ ದೇವತಾರ್ಚನೆಗಳನ್ನು ಪೂರೈಸಿಕೊಂಡು ವಸ್ತ್ರಾಭರಣಭೂಷಿತರಾಗಿ ಪಟ್ಟದ ಕತ್ತಿ ಪಟ್ಟದಾನೆ ಮತ್ತು ಪಟ್ಟದ ಕುದುರೆಗಳನ್ನು ಆನೆಬಾಗಿಲಿನಲ್ಲಿ ಬೀಳ್ಕೊಟ್ಟು ಸಕಲ ರಾಜಮರ್ಯಾದೆಯಿಂದ ಅವು ಬನ್ನಿಮಂಟಪಕ್ಕೆ ಉತ್ಸವಪೂರ್ವಕವಾಗಿ ಹೊರಟಮೇಲೆ ಜಟ್ಟಿಕಾಳಗವನ್ನು ಪರಾಮರ್ಶಿಸಿ ಸಭೆಯನ್ನು ಮುಕ್ತಾಯಗೊಳಿಸಿ ಅರಮನೆಯೊಳಕ್ಕೆ ಚಿತ್ತೈಸಿದರು. ಮಧ್ಯಾಹ್ನ ಅಮೋಘವಾದ ವಸ್ತ್ರಾಭರಣವಿಭೂಷಿತರಾಗಿ ತಮ್ಮಂತೆಯೇ ಅಲಂಕೃತರಾದ ಶ್ರೀ ಜಯಚಾಮರಾಜ ಒಡೆಯರವರನ್ನು ಅಲಂಕೃತವಾದ ಆನೆಯ ಮೇಲಿನ ಭಂಗಾರದ ಅಂಬಾರಿಯೊಳಗೆ ತಮ್ಮ ಎಡಪಾರ್ಶ್ವದಲ್ಲಿ ಕುಳ್ಳಿರಿಸಿಕೊಂಡು 3 ಘಂಟೆಗೆ ಚತುರಂಗಸೇನಾ ಸಮೇತವಾಗಿಯೂ, ರಾಜಬಂಧುಗಳು, ಸರದಾರರುಗಳು, ಅಧಿಕಾರಿಗಳು, ದೊಡ್ಡಮನುಷ್ಯರುಗಳು ಮೊದಲಾದವರೊಡನೆಯೂ, ಉತ್ಸವ ಹೊರಟು ಬಾರಿಯುದ್ದಕ್ಕೂ ಕಿಕ್ಕಿರಿದು ನಿಂತಿದ್ದ ಪ್ರೇಕ್ಷಕರಿಗೆ ದರ್ಶನವನ್ನಿತ್ತು ಅವರುಗಳು ಮಾಡುವ ಹರ್ಷಧ್ವನಿಪೂರ್ವಕವಾದ ವಂದನೆಗಳನ್ನು ಅಂಗೀಕರಿಸಿ ಪ್ರತಿಯಾಗಿ ವಂದಿಸಿ ಅಲ್ಲಲ್ಲಿಗೆ ವರ್ತಕರುಗಳೊಪ್ಪಿಸುವ ಪುಷ್ಪಹಾರಗುಚ್ಛಗಳನ್ನು ಸ್ವೀಕರಿಸುತ್ತ ಸಾಯಂಕಾಲ ೧-೪೫ ಘಂಟೆಗೆ ಬನ್ನಿ ಮಂಟಪವನ್ನು ತಲುಪಿದರು. ಅಲ್ಲಿ ಶಮೀಪೂಜೆಯನ್ನು ಮಾಡಿ ಕೊಂಚಕಾಲ ವಿಶ್ರಮಿಸಿಕೊಂಡಿದ್ದು ಉಡಪನ್ನು ಬದಲಾಯಿಸಿ ದಿವ್ಯಾಶ್ವಾರೋಹಣಮಾಡಿ ಬೈಲು ಪ್ರದೇಶದಲ್ಲಿ ನಿರೀಕ್ಷಿಸಿಕೊಂಡಿದ್ದ ಚತುರಂಗ ಸೇನಾಪಿನ್ಯಾಸವನ್ನು ಪರಾಮರ್ಶಿಸಿ ರಾತ್ರಿ 8½-9 ಘಂಟೆಗೆ ಅಂಬಾರಿಯಾರೋಹಣಮಾಡಿ ದಿವಾನರನ್ನು ತಮ್ಮ ಹಿಂಗಡೆ ಕುಳ್ಳಿರಿಸಿಕೊಂಡು ಯಥಾ ಮರ್ಯಾದೆಯಿಂದ ವಿದ್ಯುದ್ದೀಪರಾಶಿಯಲ್ಲಿ ಉತ್ಸವಹೊರಟು ಕೈ|| ಚಾಮರಾಜೇಂದ್ರ ಒಡೆಯರವರ ಪ್ರತಿಮೆಯ ಸಮೀಪಕ್ಕೆ ಬರುವಲ್ಲಿ 10½ ಘಂಟೆಯಾಗಿದ್ದಿತು. ಈ ಮಧ್ಯೆ ಜನರ ಗುಂಪನ್ನು ಚದರಿಸುವಲ್ಲಿ ಪೋಲೀಸ್ ಕಾನಸ್ಟೇಬಲಿನ ಲಾಟಿ ಏಟು ಹಿಂದು ಹುಡುಗನಿಗೆ ಬಿದ್ದು ಅಪಾಯವಾಗಿ ಜನರಿಗೂ ಪೋಲೀಸಿನವರಿಗೂ ಹೋರಾಟ ನಡೆದಿತು ಅಪಾಯವನ್ನು ಹೊಂದಿದ ಹುಡುಗನನ್ನು ಜನರು ಶ್ರೀಮನ್ಮಹಾರಾಜರವರ ಸಮೀಪಕ್ಕೆ ತಂದು ತೋರಿಸಲು ಪ್ರಯತ್ನಿಸಿದರು ಆಶ್ವಾರೂಢರಾಗಿ ಮುಂದೆ ಬರುತ್ತಿದ್ದ ಡಿ|| ಮೆಜಿಸ್ಟ್ರೇಟರು ಹುಡುಗನನ್ನು ಹೊಡೆದ ಸಂಗತಿಯನ್ನು ವಿಚಾರಿಸಿ ತಕ್ಕ ಪ್ರತಿಕ್ರಿಯೆಯನ್ನು ಮಾಡುತ್ತೇವೆಂದು ಬಹಳ ವಿಧವಾಗಿ ಸಮಾಧಾನಪಡಿಸಿದಾಗ್ಗ್ಯೂ, ದಿವಾನರು ಸಹ ಹಿತೋಕ್ತಿಯನ್ನು ಹೇಳಿದಾಗ್ಯೂ ಜನರು ಕೇಳದೆ ಮುಂದೆ ನುಗ್ಗಿಬರಲು ಪ್ರಯತ್ನಿಸಿದುದರಮೇಲೆ ಕುದುರೆ ಸ್ವಾರರುಗಳನ್ನು ಬಿಟ್ಟು ಗುಂಪನ್ನು ಚದರಿಸಬೇಕಾಯಿತು. ಈ ಗೊಂದಲದಲ್ಲಿ ಒಂದಾನೆಯು ಬೆದರಿ ದಿಕ್ಕಾಪಾಲಾಗಿ ಓಡಿತಾದರೂ ಯಾರಿಗೂ ಅಪಾಯವಾಗಲಿಲ್ಲ ಶ್ರೀಮನ್ಮಹಾರಾಜರವರು ಕುಳಿತಿದ್ದ ಅಂಬಾರಿಯಾನೆಯು ಉಭಯ ಪಾರ್ಶ್ವದಲ್ಲೂ ಎರಡಾನೆಗಳನ್ನೂ ಸುತ್ತಲೂ ಕುದುರೆ ಸ್ವಾರರುಗಳನ್ನೂ ಇಟ್ಟುಕೊಂಡು ಅರಮನೆಯನ್ನು ತಲುಪುವುದಾಯಿತು. ಕೋಟೆಯೊಳಗೆ ನೆರೆದಿದ್ದ ಜನಸ್ತೋಮವು ಹೊರಕ್ಕೆ ಕಳುಹಲ್ಪಟ್ಟು ಸುತ್ತಲೂ ಸೇನೆಯು ಕಾವಲಿಡಲ್ಪಟ್ಟಿದ್ದಿತು ಆ ಹುಡುಗನ ವಿನಾ ಮತ್ತಾರಿಗೂ ಯಾವ ವಿಧವಾದ ಅಪಾಯವೂ ಸಂಭವಿಸಲಿಲ್ಲ. ಆದರೆ ಜನರು ಹಿತೋಕ್ತಿಯನ್ನು ಸಹ ಕೇಳದೆ ದುರಾಗ್ರಹದಿಂದ ಗಲಭೆಯನ್ನೆಬ್ಬಿಸಲುದ್ಯುಕ್ತರಾಗಿದ್ದುದು ಶ್ರೀಮನ್ಮಹಾರಾಜರವರ ಮನಸ್ಸಿಗೆ ಅಸಮಾಧಾನವನ್ನೂ ಖೇದವನ್ನೂ ಉಂಟುಮಾಡಿದುದು ಅತ್ಯಂತ ವಿಷಾದಕರವಾಗಿದೆ. ಇಂತಹ ಸನ್ನಿವೇಶವು ಹಿಂದೆ ಯಾವಾಗಲೂ ಸಂಭವಿಸಿರಲಿಲ್ಲ.

ದಿವಾನರ ಭಾಷಣ

ಪ್ರಜಾಪ್ರತಿನಿಧಿ ಸಭೆಯು ಈ ದಿವಸ ಮಧ್ಯಾಹ್ನ ರಾಜಧಾನಿಯ ಜಗನ್ಮೋಹನಪ್ರಾಸಾದ ಸಭಾಂಗಣದೊಳಗೆ ದಿವಾನ್

ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ದಿವಾನರ ಸಭಾರಂಭ ಭಾಷಣವು ೧೬ ಪುಟಗಳಷ್ಟು ದೊಡ್ಡದಾಗಿರುತ್ತದೆ. ಇದ ರಲ್ಲಿ ... ಪ್ರಗತಿಗಳು, ಸಂಯುಕ್ತ ರಾಜ್ಯಾಂಗ ... ... ಪೂರಾ ... ... ಕುರಿತು ... ನಿಗಳು ಸವಿಸ್ತಾರವಾಗಿ ಪ್ರಸ್ತಾಪಿಸಲ್ಪಟ್ಟಿವೆ. ... ... ಸ್ಥಳ ... ಇಲ್ಲದಿರುವುದರಿಂದ ಮ|| ಬಿ ... ಮುಯ್ಯನವರ ಮರಣಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿರು ವ ಭಾಗವನ್ನು ಇಲ್ಲಿ ಪ್ರಕಟಿಸಿ ಉಳಿದ ಭಾಗವನ್ನು ಮುಂ ದಿನ ಸಂಚಿಕೆಯಲ್ಲಿ ಪ್ರಕಟಿಸುವೆವು —

ನಂತರ ... ದಿನದ ಸಭಾಕಾರ್ಯವನ್ನು ಪ್ರಾರಂಭಿಸುವು ದಕ್ಕೆ ಮೊದಲು, ಈ ಸಭೆಯ ಸದಸ್ಯರಾಗಿ ನನ್ನೊಡನೆ ಸೇರಿದ ವರಾಗಿದ್ದು ಈಚೆಗೆ ದಿವಂಗತರಾದ ರಾವ್ ಬಹದ್ದೂರ್ ಧರ್ಮಪ್ರಕಾಶ ಬಿ ಬನುಮಯ್ಯನವರನ್ನು ಗೌರವಪುರಸ್ಸರ ವಾಗಿ ಸ್ಮರಿಸಿ, ಅವರ ಮರಣಕ್ಕಾಗಿ ನಮ್ಮ ವಿಷಾದವನ್ನು ವ್ಯಕ್ತಗೊಳಿಸುವುದು ನಮ್ಮ ಅವಶ್ಯ ಕರ್ತವ್ಯವಾಗಿದೆ. ಈ ಕರ್ತವ್ಯದಲ್ಲಿ ತಾವುಗಳೆಲ್ಲರೂ ನನ್ನೊಡನೆ ಭಾಗಿಗಳಾಗಬೇಕೆಂದು ನಾನು ಕೋರುತ್ತೇನೆ. ಅವರು ತಮ್ಮ ಜೀವಮಾನದ ದೀರ್ಘ ಕಾಲದಲ್ಲಿ ಸಂಸ್ಥಾನದ ಸೇವೆಗಾಗಿ ಮಾಡಿದ ಸಹಾಯಗಳ ವಿವರಗಳನ್ನೆಲ್ಲ ನಾನು ತಮಗ ಪ್ರಕಟಪಡಿಸಬೇಕಾದುದು ಅನಾ ವಶ್ಯಕ. ಅವರು ಸ್ವಲ್ಪಮಟ್ಟಿಗೆ ಬಡತನದಿಂದಲೇ ಕೂಡಿದ್ದ ಮನೆತನದಲ್ಲಿ ಹುಟ್ಟಿ, ಬಡವರ ಮಧ್ಯದಲ್ಲೇ ಬೆಳೆದು, ಬಡತನದ ಕಷ್ಟಗಳನ್ನು ಕಣ್ಣಾರ ಕಂಡು ಅನುಭವಿಸಿದ್ದರು. ಆದಕಾರಣ ಬಡವರ ತೊಂದರೆಗಳನ್ನು ಕಡಿಮೆ ಮಾಡಲು ಯಾವ ಯಾವ ಸಹಾಯಗಳಾಗಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತಿದ್ದಿತು. ಮುಂದೆ ಅವರು ತಮ್ಮ ಶಕ್ತಿಸಾಮರ್ಥ್ಯಗಳ ಪ್ರಭಾವದಿಂದ ಶ್ರೀಮಂತರಾಗಿ ಹೇರಳವಾಗಿ ಹಣವನ್ನು ಗಳಿಸಿ ಶೇಖರಿಸಿದರು. ಬಡವರಿಗೆ ಅತ್ಯವಶ್ಯವಾಗಿ ನಡೆಯಬೇಕಾದ ಸಹಾಯಗಳೆಂದು ಅವರ ಮನಸ್ಸಿಗೆ ತೋರಿಬಂದ ನಾನಾ ಧರ್ಮಕಾರ್ಯಗಳಿಗೂ ಅವರು ಔದಾರ್ಯದಿಂದಲೂ ವಿವೇಚನೆಯಿಂದಲೂ ಧನ ಸಹಾಯ ಮಾಡಿದರು. ಹೀಗೆ ಸಹಾಯ ಮಾಡಬೇಕಾದುದು ಅತ್ಯಗತ್ಯವೆಂದು ಅವರು ಭಾವಿಸಿದ್ದ ನಾನಾ ಕಾರ್ಯಗಳಿಗೂ, ಅವರು ತಮ್ಮ ಸಂಪತ್ತಿನ ಹೆಚ್ಚು ಭಾಗವನ್ನೇ ಮುಕ್ತಹಸ್ತ ದಿಂದ ದಾನಮಾಡಿದರು. ಈ ಮೈಸೂರು ನಗರದಲ್ಲಿ ಜನಜೀ ವನದ ಎಲ್ಲಾ ಧರ್ಮ ಕಾರ್ಯಗಳಿಗೂ ಅವರಿಂದ ಧನ ಸಹಾ ಯವು ದೊರೆತಿದೆಯೆನ್ನಬಹುದು. ನಾನಾ ಜೀವನ ದೆಶೆಗಳಲ್ಲಿ ಯಾವುದೊಂದರಲ್ಲಿರುವ ಬಡವರಾದ ಮೈಸೂರು ನಗರ ನಿವಾಸಿ ಗಳಿಗೂ ಅವರ ಧರ್ಮ ಸಹಾಯವು ತಪ್ಪಿಲ್ಲ. ನಾವುಗಳೆಲ್ಲರೂ ಅವರನ್ನು ಮನಸ್ಸಿನಲ್ಲಿ ಸ್ಮರಿಸಿ ಪ್ರೀತಿಗೌರವಗಳನ್ನರ್ಪಿಸುವುದ ರಲ್ಲಿಯೂ, ಇವರ ವಿಯೋಗದಿಂದ ಸಂತಪ್ತರಾದ ಇವರ ಕುಟುಂಬದವರಿಗೆ ನಮ್ಮ ಮನಃಪೂರ್ವಕವಾದ ಸಹಾನುಭೂತಿ ಯನ್ನೂ ಅನುಕಂಪವನ್ನೂ ತಿಳಿಸುವುದರಲ್ಲಿಯೂ, ಈ ಸಭೆಯ ಸದಸ್ಯರೆಲ್ಲರೂ ನನ್ನೊಡನೆ ಭಾಗಿಗಳಾಗುವರೆಂದು ನಾನು ನಂಬಿದ್ದೇನೆ.

— — —

ಬಸ್ಸು ಮುಷ್ಕರಕ್ಕೆ ತಾತ್ಕಾಲಿಕ ಪರಿಹಾರ

ಮೈಸೂರು ಸಂಸ್ಥಾನದಲ್ಲಿ ಓಡಾಡುವ ಬಸ್ಸುಗಳ ಮೇಲೆ ವಿಧಿಸಲ್ಪಟ್ಟಿರುವ ದಾರಿ ತೆರಿಗೆಯು ಭಾರತ ದೇಶದಲ್ಲಿ ಇತರ ಕಡೆಗಳಲ್ಲಿ ವಿಧಿಸಲ್ಪಟ್ಟಿರುವುದಕ್ಕಿಂತಲೂ ಅತ್ಯಧಿಕವಾಗಿರುವುದ ರಿಂದ ಅದನ್ನು ಕಡಿಮೆಮಾಡಿದ ವಿನಾ ಬಸ್ಸುಗಳನ್ನು ಓಡಿಸು ವುದಿಲ್ಲವೆಂದು ಅವುಗಳ ಯಜಮಾನರುಗಳು ಕಳೆದ ತಾ|| ೧ ರ ... ದ್ಯ ಮುಷ್ಕರ ಹಿಡಿದಿದ್ದ ವಿಷಯವನ್ನು ಸಹಿಸಲಶಕ್ಯ ವಾದ ಈ ವಿತಿಮೀರಿದ ತೆರಿಗೆಯನ್ನು ಪೂರ್ವದ ದರಕ್ಕಿಳಿಸ ಬೇಕಾದ ಆಗತ್ಯವನ್ನೂ ಕುರಿತು ಕಳೆದವಾರ ಸ್ಟಾರ್ ಪತ್ರಿಕೆ ಯಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸಿರುವೆವಷ್ಟೆ. ರಾಜಧಾನಿಯ ಬಸ್ಸುಗಳ ಯಜಮಾನರು ಸಂಸ್ಥಾನದ ಇತರ ಕಡೆಯ ಬಸ್ಸು ಗಳ ಯಜಮಾನರ ಸಹಾಯ ಸಹಾನುಭೂತಿಗಳಿಂದ ಅಡ್ವೊ ಕೇಟ್ ಮ|| ಎಸ್ ಸಿ ದಾಸಪ್ಪನವರ ಯಾಜಮಾನ್ಯದಲ್ಲಿ ದಿವಾನರು ಎರಡನೆಯ ಕೌನ್ಸಿಲರು ಮೈಸೂರು ಡೆಪ್ಯುಟಿ ಕಮಿ ಷನರು ಇವರುಗಳಲ್ಲಿಗೆ ನಿಯೋಗ ಹೋಗಿದ್ದು ತಮ್ಮ ಕಷ್ಟ ನಷ್ಟಗಳನ್ನು ತಿಳಿಸಿ ದಾರಿತೆರಿಗೆಯನ್ನು ಕಡಿಮೆಮಾಡಿಕೊಡ ಬೇಕೆಂದು ಬಿನ್ನೈಸಿಕೊಂಡುದರಮೇಲೆ, ಇನ್ನೊಂದು ತಿಂಗಳ ಮುಂಗಡ ತೆರಿಗೆಯ ಡಿಪಾಜಿಟ್ ಹಣವನ್ನು ಕಟ್ಟದೆ ಬಂಡಿಗಳನ್ನು ಓಡಿಸಬಹುದೆಂದೂ, ಅಷ್ಟರೊಳಗೆ ಈ ತೆರಿಗೆಯನ್ನು ತಗ್ಗಿಸು ವುದರ ಸಾಧಕ ಬಾಧಕ ವಿಚಾರವನ್ನು ಪರ್ಯಾಲೋಚಿಸಲೇರ್ಪ ಡಿಸಲ್ಪಟ್ಟಿರುವ ಕಮಿಟಿಯವರ ವರದಿಯು ಬಂದಮೇಲೆ ಆ ತೀರ್ಮಾನವು ಕಾರ್ಯಗತಗೊಳಿಸಲ್ಪಡುವುದೆಂದೂ ಪ್ರಭುತ್ವದವರು ಅಪ್ಪಣೆಮಾಡಿರುವುದಾಗಿ ತಿಳಿಯುತ್ತೇವೆ. ಅಂತು ಕಳೆದ ಶುಕ್ರ ವಾರದಿಂದಲೂ ಬಸ್ಸುಗಳು ಮುಷ್ಕರವನ್ನು ಬಿಟ್ಟು ಓಡಾಡಲುಪ ಕ್ರಮಿಸಿರುತ್ತವೆ. ಈ ಬಸ್ಸುಗಳ ಮುಷ್ಕರದಿಂದ ಈ ಬಾರಿ ದಸರಾಮಹೋತ್ಸವಕ್ಕೆ ಬರತಕ್ಕ ಜನರ ಸಂಖ್ಯೆ ತಕ್ಕಮಟ್ಟಿಗೆ ಕಡಿಮೆಯಾಯಿತೆಂದು ತೋರುತ್ತದೆ. ಈಗೇರ್ಪಟ್ಟಿರುವ ಕಮಿ ಟಿಯವರು ನಮ್ಮ ಸಂಸ್ಥಾನದ ಹೊರಗಡೆ ಯಾವ್ಯಾವ ಪ್ರಭು ತ್ವದವರೆಷ್ಟೆಷ್ಟು ದಾರಿ ತೆರಿಗೆಯನ್ನು ವಿಧಿಸಿದ್ದಾರೆಂಬುದನ್ನು ತಿಳಿದುಕೊಂಡು ದುಬಾರಿ ತೆರಿಗೆಯನ್ನು ತಪ್ಪಿಸಿ ನಮ್ಮ ಸಂಸ್ಥಾ ನದ ಪ್ರಕೃತ ಪರಿಸ್ಥಿತಿಗೆ ಅನುಕೂಲವಾಗಿರುವಂತೆ ದರವನ್ನು ಪ್ರಭುತ್ವದವರಿಗೆ ಸೂಚಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಮಹಾತ್ಮರ ದೇಹಸ್ಥಿತಿ

ಎರವಾಡ ಜೈಲಿನಲ್ಲಿರುವ ಮಹಾತ್ಮರ ದೇಹಸ್ಥಿತಿಯು ತೃಪ್ತಿಕರವಾಗಿರುವುದಾದರೂ ಅವರ ದೇಹದ ತೂಕವು ೧೦೦ ಪೌಂಡಿರುತ್ತಿದ್ದುದು ಈಗ ೭೯ ಪೌಂಡಿಗೆ ತಗ್ಗಿರುತ್ತದೆ. ಗಾಂಧೀ ಜಿಯವರು ಇನ್ನೂ ಮೇಕೆಯ ಹಾಲನ್ನೂ ಹಣ್ಣಿನರಸವನ್ನೂ ಸೇವಿಸುತ್ತಿದ್ದಾರೆ. ಕೊಂಚನೂತನ ನಡೆಯಲು ಪ್ರಯತ್ನಿಸು ತ್ತಿದ್ದಾರೆ ಎಂದು ಅವರ ಕುಮಾರ ದೇವದಾಸ ಗಾಂಧಿಯವರು ಕಳೆದ ಗುರುವಾರ ತಂದೆಯವರ ದರ್ಶನಮಾಡಿಕೊಂಡು ಬಂದು ತಿಳಿಸಿರುತ್ತಾರೆ.

ಪಂಚಮರೊಡನೆ ಪಂಗ್ತಿ ಭೋಜನ

ಬಂಗಾಳಾ ಪ್ರಾಂತಕ್ಕೆ ಸೇರಿದ ಮದನಪುರದಿಂದ ೩ ಮೈಲು ದೂರದಲ್ಲಿರುವ ಕರ್ನಗಢ ಎಂಬೂರಿನ ಮಹರಾಯ ದೇವಸ್ಥಾನ ದೊಳಕ್ಕೆ ಕಳೆದ ಮಂಗಳವಾರ ಪಂಚಮರು ಬರಗೊಡಲ್ಪಟ್ಟದ್ದ ಲ್ಲದೆ ಈ ಸಂದರ್ಭದಲ್ಲೇರ್ಪಡಿಸಲ್ಪಟ್ಟಿದ್ದ ವಿನೋದಕೂಟದಲ್ಲಿ ೩೦ ಸಾವಿರ ಮಂದಿ ಪಂಚಮರು ಸೇರಿದ್ದರು. ಆಚಾರ್ಯರಾಯ ರವರು ಈ ಉತ್ಸವದಲ್ಲಿ ವಿಶೇಷ ಉತ್ಸಾಹವನ್ನು ಪ್ರದರ್ಶಿಸಿ ದರು. ಇವರಿಂದ ಆ ಪ್ರಾಂತ್ಯದಲ್ಲಿ ಅಸ್ಪೃಶ್ಯತಾ ದೋಷವು ಸಂಪೂರ್ಣವಾಗಿ ತೊಲಗಿಹೋಗುತ್ತಿದೆಯೆಂದು ಹೇಳಬಹುದಾಗಿದೆ. ಕಳೆದ ಸೋಮವಾರ ಲಾಹೋರಿನಲ್ಲಿ ಒಬ್ಬ ಗೃಹಸ್ಥನ ಮನೆ ಯೊಳಗೆ ಪಂಚಮರಾದಿಯಾಗಿ ಎಲ್ಲ ವರ್ಣದ ೫೦೦ ಮಂದಿ ಒಂದೇ ಪಙ್ತಿಯಲ್ಲಿ ಭೋಜನಮಾಡಿದರು.

ಪಾರ್ವತೀದೇವಾಲಯ ವಿಗ್ರಹಗಳ ಅಪಹರಣ

ಪೂನಾದಲ್ಲಿ ಪಾರ್ವತೀ ಬೆಟ್ಟದ ಮೇಲಿರುವ ಪಾರ್ವತೀದೇವ ಸ್ಥಾನದೊಳಗೆ ಎರಡು ವಾರಗಳ ಹಿಂದೆ ಕಳ್ಳತನವು ನಡೆಯಿತು. ಶುಕ್ರವಾರ ಬೆಳಗ್ಗೆ ಅರ್ಚಕರು ಎಂದಿನಂತೆ ದೇವಸ್ಥಾನಕ್ಕೆ ಹೋಗಿ ನೋಡುವಲ್ಲಿ ಪಾರ್ವತಿ ಮತ್ತು ವಿಘ್ನೇಶ್ವರ ರಜತವಿಗ್ರ ಹಗಳು ಮಾಯವಾಗಿದ್ದುವು. ಪಾರ್ವತೀ ವಿಗ್ರಹದ ತೂಕವು ೧೨೪೦ ತೊಲ ಮತ್ತು ವಿಘ್ನೇಶ್ವರ ವಿಗ್ರಹದ ತೂಕ ೭೫೦ ತೊಲ ವಿದ್ದು ೩೦,೦೦೦ ರೂ ಬೆಲೆ ಬಾಳತಕ್ಕವಾಗಿದ್ದುವು. ಈಗ್ಗೆ ೮೦ ವರ್ಷಗಳ ಹಿಂದೆ ಇದೇ ರೀತಿ ಕಳುವಾಗಿದ್ದಿತಂತೆ. ಈ ಕಳ್ಳತನವಾದನಂತರ ಒಂದು ದೊಡ್ಡ ಮಳೆಯು ಬಂದು ದೇವ ಸ್ಥಾನದ ಶಿಖರಕ್ಕೆ ಸಿಡಿಲು ಬಡಿದುದರಿಂದ ಆ ಶಿಖರವು ನಾಶ ವಾಯಿತು. ಇದು ವಿನಾ ಮತ್ತಾವ ನಷ್ಟವೂ ಸಂಭವಿಸಲಿಲ್ಲ.

ಎವರೆಸ್ಟ್ ಪರ್ವತಾರೋಹಣ

ಬ್ರಿಟಿಷ್ ಸ್ಕ್ವಾಡರ್ ವೈಮಾನಿಕ ಸಂಘಕ್ಕೆ ದ್ರವ್ಯ ಸಹಾಯ ಮಾಡಿದ ಹೂಸ್ಟನ್‌ರವರ ಪತ್ನಿಯೇ ಈಗ ಎವರೆಸ್ಟ್ ಪರ್ವತಾರೋಹಣ ಖರ್ಚನ್ನೆಲ್ಲಾ ವಹಿಸಿಕೊಂಡಿರುವರಂತೆ. ಈ ಪರ್ವತಾರೋಹಣೋದ್ಯಮಕ್ಕೆ ಯುವರಾಜರವರು ಪ್ರೋ ತ್ಸಾಹಕರಾಗಿರುವುದರಿಂದ ಬ್ರಿಟಿಷ್ ಮಂತ್ರಿವರ್ಗದವರೂ ಇಂಡ್ಯಾ ಕಾರ್ಯಾಲಯದವರೂ ಬಹಳವಾಗಿ ಸಹಾಯ ಮಾಡು ತ್ತಿರುವರು. ಪ್ರಪಂಚದಲ್ಲಿ ಮುಖ್ಯವಾಗಿ ಇಂಡ್ಯಾದಲ್ಲಿ ಬ್ರಿಟಿಷರ ಪ್ರತಿಷ್ಠೆಯನ್ನು ಅಭಿವೃದ್ಧಿಗೊಳಿಸುವುದೂ, ಬ್ರಿಟಿಷ್ ಪ್ರಭುತ್ವದವರು ಎಂತಹ ತೊಂದರೆಗಳು ಸಂಭವಿಸಿದರೂ ಸಹಿಸ ಬಲ್ಲರೆಂಬುದೂ ಬ್ರಿಟಿಷರ ಅಧಿಕಾರಪ್ರತಿಷ್ಠೆಗೆ ಯಾವ ಲೋಪವಿಲ್ಲ ವೆಂದು ಪ್ರಪಂಚಕ್ಕೆಲ್ಲಾ ತೋರಿಸಬೇಕೆಂಬುದೂ ಈ ಪರ್ವತಾ ರೋಹಣಕ್ಕೆ ಸಹಾಯ ಮಾಡುವುದರ ಉದ್ದೇಶವಾಗಿರುತ್ತದೆ.

ಎರಡು ತಲೆಗಳ ಮಗು

ತಿರುವಳ್ಳೂರಿಗೆ ಸೇರಿದಂತಿರುವ ಪನ್ನೀರಕುಪ್ಪಮ್ ಎಂಬ ಗ್ರಾಮದಲ್ಲಿ ಒಬ್ಬ ರೆಡ್ಡಿ ಹೆಂಗುಸು ಒಂದು ವಿಚಿತ್ರ ಗಂಡು ಮಗುವನ್ನು ಹೆತ್ತಿರುವಳು. ಈಕೆಯೂ ಮಗುವೂ ಆರೋಗ್ಯ ವಾಗಿರುತ್ತಾರೆ. ಈ ಮಗುವಿನ ಅವಯವಗಳೆಲ್ಲ ಸಲಕ್ಷಣ ವಾಗಿರುತ್ತವೆ. ಆದರೆ ಅದರ ಹೊಟ್ಟೆಯ ಮೇಲ್ಗಡೆ ಎದೆಯ ಕೆಳಗೆ ಒಂದು ಪುಟ್ಟ ತಲೆಯಿದೆ. ಇದಕ್ಕೆ ೨ ಕಣ್ಣುಗಳಿದ್ದು ವು ಮುಚ್ಚಿಕೊಂಡಿವೆ. ಮೂಗು ಬಾಯಿ ಗಳಿಗೆ ಬದಲಾಗಿ ೨ ರಂಧ್ರ ಗಳಿರುತ್ತವೆ. ಗದ್ದವಿದೆ, ತಲೆಯಮೇಲೆ ಕೂದಲುಗಳಿವೆ. ಭುಜ ಗಳಿಲ್ಲ. ಆದರೆ ತಲೆಯ ಪಕ್ಕದಲ್ಲಿ ೨ ಚಿಕ್ಕ ಕೈಗಳು ನೇತಾಡು ತ್ತಿವೆ. ಆಸಲು ಕೈಗಳೆರಡೂ ಸರಿಯಾಗಿವೆ. ಹೊಟ್ಟೆಯ ಮೇಲಿ ರುವ ತಲೆಯು ಕಂಚಿಕಾಯಿ ಗಾತ್ರವಿದೆ. ಮಗುವು ಸರಿ ಯಾಗಿ ಅಳುತ್ತದೆ ಮತ್ತು ಹಾಲನ್ನು ಕುಡಿಯುತ್ತದೆ ಎಂದು ಹಿಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಭಾರತ ಆರ್ಡಿನೆನ್ಸ್ ಪರಿಪಾಲನವು ತಪ್ಪಬೇಕು

"ಭಾರತದೇಶದಲ್ಲಿ ಆರ್ಡಿನೆನ್ಸು ಪರಿಪಾಲನವು ತೊಲಗ ದಿದ್ದಲ್ಲಿ ಕೂಡಲೆ ನೂತನ ರಾಜ್ಯಾಂಗ ವಿಧಾನವನ್ನು ಸ್ಥಾಪಿ ಸಲು ದೊರೆತನದವರು ಮಾಡುತ್ತಿರುವ ಪ್ರಯತ್ನವು ನಿಷ್ಫಲ ವಾಗುವುದು. ಆರ್ಡಿನೆನ್ಸ್ ಪರಿಪಾಲನದಿಂದ ಭಾರತ ದೇಶದ ಪ್ರಜೆಗಳೆಲ್ಲರಿಗೂ ದೊರೆತನದವರ ಮೇಲಿನ ದ್ವೇಷವು ಅಧಿಕ ವಾಗುತ್ತಿದೆ. ಈವರೆಗೆ ಅನುಕೂಲರಾಗಿದ್ದವರು ಕೂಡ ಈಗ ಪ್ರತಿಕೂಲರಾಗಿರುತ್ತಾರೆ. ದೊರೆತನದವರು ಅನೇಕ ವೇಳೆ ದೌರ್ಜನ್ಯ ತೋರಿಸುತ್ತಾರೆ. ಆದುಕಾರಣ ಈ ನೀತಿಯೂ ಹಾಗೆಯೇ ನಿರಾತ್ಯವನ್ನು ತೋರಿಸುತ್ತಿದೆ. ಇದರಿಂದ ಭಾರ ತೀಯರಿಗೆ ಸಹಭಾವವು ಹುಟ್ಟುವುದೇ ವಿನಾ ವಿಪರೀತ ಭಾವ ವುಂಟಾಗುವುದಿಲ್ಲ. ಆಗ ಭಾರತ ದೇಶದಲ್ಲಿ ಶಾಂತಿಯು ಸ್ಥಾಪಿ ತವಾದಲ್ಲಿ ನೂತನ ರಾಜನೀತಿಯ ವಿಧಾನವು ಜಾರಿಗಾಗು ವುದು. ದೊರೆತನದವರಿಗೂ ಕಾಂಗ್ರೆಸಿನವರಿಗೂ ಸಮಾಧಾನ ವನ್ನುಂಟುಮಾಡಲು ಕಾಂಗ್ರೆಸಿನಿಂದ ಗೌರವಿಸಲ್ಪಡುವವರೆಲ್ಲರೂ ಪ್ರಯತ್ನಿಸಬೇಕು" ಎಂದು ಸ್ಕಾಟ್ಲೆಂಡು ದೇಶದ ಪಾರ್ಲಿ ಮೆಂಟಿನಲ್ಲಿ ಸ್ಕಾಟಿಷ್ ಲೇಬರ್ ಪಕ್ಷದ ಸ್ಕಾಟ್ಲೆಂಡ್, ... ಯವರಿಗೆ ಬರೆದಿರುತ್ತಾರೆ.

ಮಹಾಸಭೆಯ ರಾಜೀನಾಮೆ ಬಗ್ಗೆ ...

... ... ತಿಂಗಳಿನಲ್ಲಿ ಲಂಡನ್ ಪಟ್ಟಣದಲ್ಲಿ ಸೇರ ಬೇಕಿದ್ದ ಮೂರನೆಯ ರೌಂಡ್‌ಟೇಬಲ್ ಸಭೆಗೆ ಇಂಡಿಯಾದೇಶ ದಿಂದ ಆಹ್ವಾನಿಸಲ್ಪಡಬೇಕಾಗಿರುವ ಪ್ರತಿನಿಧಿಗಳ ಹೆಸರನ್ನು ಭಾರತ ದೊರೆತನದವರು ಭಾರತ ಮಂತ್ರಿಯವರಿಗೆ ಬರೆದು ತಿಳಿಸಿರುವರು. ಈ ಹೆಸರುಗಳ ಪಟ್ಟಿಯು ಪ್ರಾಯಶಃ ಈ ದಿವಸ ಪ್ರಕಟಿಸಲ್ಪಡುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಮತ್ತು ತತ್ಸಂಬಂಧವಾಗಿ ಭಾರತ ಮಂತ್ರಿಯವರಿಗೂ ವೈಸ್ರಾಯರಿ ಗೂ ತಂತೀವಾರ್ತೆಯು ನಿರಂತರವೂ ನಡೆಯುತ್ತಲೇ ಇದೆ. ಈಗ ತಿಳಿದಿರುವ ಪಟ್ಟಿಯಲ್ಲಿ ದಿವಾನ್ ಬಹದ್ದೂರ್ ಎ ರಾಮಸ್ವಾಮಿ ಮೊದಲಿಯಾರರ ಮತ್ತು ಸರ್. ಎ ಪಿ ಪತ್ರೊ ಯವರ ಹೆಸರುಗಳು ಸೇರಿಸಲ್ಪಟ್ಟಿರುವುದಾಗಿಯೂ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳ ಹೆಸರು ಬಿಡಲ್ಪಟ್ಟಿರುವು ದಾಗಿಯೂ ಸರ್ ತೇಜ್ ಬಹದ್ದೂರ್ ಸಪ್ರೂ ಮತ್ತು ಎಂ ಆರ್ ಜಯಕರ್‌ರವರ ಪಕ್ಷದವರು ಬಹಳ ಕಡಿಮೆಯಾಗಿರು ವುದಾಗಿಯೂ, ಪ್ರತ್ಯೇಕ ನಿಯೋಜಕವರ್ಗಗಳನ್ನೇ ಕೋರು ವವರ ಸಂಖ್ಯೆಯು ಹೆಚ್ಚಾಗಿರುವುದಾಗಿಯೂ, ರಾಷ್ಟ್ರೀಯ ನಾಯಕರುಗಳು ಮುಖ್ಯವಾಗಿ ರಾಷ್ಟ್ರೀಯ ಮಹಮ್ಮದೀಯ ನಾಯಕರುಗಳು ಬಿಡಲ್ಪಟ್ಟಿರುವುದಾಗಿಯೂ ತಿಳಿಯಬರುತ್ತದೆ. ಮಹಾತ್ಮರೂ, ಅವರ ಪಕ್ಷಕ್ಕೆ ಸೇರಿದ ಹಿಂದು ಮುಸಲ್ಮಾನರ ನಾಯಕರುಗಳೂ ಕಾರಾಗೃಹಗಳಲ್ಲಿರುವಾಗ್ಗೆ ಈ ಸಭೆಯನ್ನು ನಡೆಯಿಸುವುದು ನಿಷ್ಫಲವೆಂದು ಕಳೆದ ಬುಧವಾರ ಲಾಹೋರಿ ನೊಳಗೆ ರಾಜಾ ನರೇಂದ್ರನಾಥ್ ಬಹದ್ದೂರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿತು.

ಕಲಿಯುಗದಲ್ಲಿ ಮಹಾದ್ಭುತಕಾರ್ಯ

ಈಗ ಭಾರತದೇಶದಲ್ಲಿ ಸಂಚರಿಸುತ್ತಿರುವ ಪಾರ್ಲಿಮೆಂಟು ಮೆಂಬರಾದ ಎಚ್ ಕೆ ಹೇಲ್ಸ್‌ರವರು ಈಗ ಭಾರತದೇಶದಲ್ಲಿ ಪರಿವರ್ತನವಾಗುತ್ತಿರುವ ವಿಚಾರವನ್ನು ಕುರಿತು ಹೀಗೆ ಬರೆ ದಿರುತ್ತಾರೆ —ಕಲಿಯುಗದಲ್ಲಿ ನಾಗರಿಕರಾದ ಮನುಷ್ಯರು ಈ ವರೆಗೆ ನೋಡದಿರುವ ಮಹಾದ್ಭುತಕಾರ್ಯಗಳನ್ನು ನಮ್ಮ ಕಾಲದ ವರು ಇಂದು ನೋಡುತ್ತಿರುವರು. ಅನೇಕ ಶತಮಾನಗಳಿಂದ ಹಿಂದುಗಳಿಗುಂಟಾಗಿದ್ದ ನಿರ್ಬಂಧಗಳು ಒಬ್ಬ ಮನುಷ್ಯನ ದೃಢ ಸಂಕಲ್ಪದಿಂದ ಒಂದು ರಾತ್ರಿಯಲ್ಲಿ ಕಣ್ಣುರೆಪ್ಪೆ ಮುಚ್ಚುವುದ ರೊಳಗಾಗಿ ಬಟ್ಟಬಯಲಾಗಿ ಹೋಯಿತು. ದೊರೆತನದವರು ಮಾಡಲಶಕ್ಯವಾದ ಕಾರ್ಯವನ್ನು ಒಬ್ಬ ಹಿಂದು ವ್ಯಕ್ತಿಯು ಸಾಧಿಸಿದನು. ಪೂನಾದಲ್ಲಿ ಈಚೆಗೆ ಮಾಡಲ್ಪಟ್ಟ ಶಪಥದಿಂದ ಭಾರತದೇಶವೆಲ್ಲವೂ ಮೂಲಾಧಾರದಿಂದ ಅದಲಿಹೋಗಿದೆ, ದೇಶ ವು ವಿಭ್ರಾಂತವಾಗಿದೆ. ಆ ಭಯಂಕರ ಶಪಥದಿಂದಲೇ ಈ ಮಹಾ ದ್ಭುತವುಂಟಾಗಿದೆ. ದೇವಾಲಯ ಬಾಗಿಲುಗಳು ಹಿಂದುಗಳೆಲ್ಲ ರಿಗೂ ಸಂಪೂರ್ಣವಾಗಿ ತೆರೆಯಲ್ಪಟ್ಟಿವೆ. ಜಾತಿಭೇದವು ತೊಲ ಗಿತು. ಈವರೆಗೆ ದೇವಾಲಯಗಳೊಳಕ್ಕೆ ಹೋಗಿ ಪೂಜೆಮಾಡ ಲಾರದವರಾಗಿದ್ದವರೆಲ್ಲರೂ ಈಗ ಅಡ್ಡಂತರವಿಲ್ಲದೆಯೇ ಪೂಜೆ ಮಾಡುವಂತಾಗಿರುವುದು ಪ್ರಪಂಚದಿದಿರಿಗೆ ಭಾರತೀಯರೆಲ್ಲರೂ ಒಂದು ಜನಾಂಗವಾಗೇರ್ಪಟ್ಟು ನಿಲ್ಲುವುದಕ್ಕೆ ಮೊದಲು ಅಂದರೆ ಸ್ವಪರಿಪಾಲನಾಧಿಕಾರವು ವಹಿಸಲ್ಪಡುವುದಕ್ಕೆ ಮೊದಲು ಇದ ಕ್ಕಿಂತಲೂ ಪ್ರಬಲವಾದ ಮತ್ತೊಂದು ಮಹಾದ್ಭುತವು ನಡೆಯ ಬೇಕಾಗಿದೆ. ಹಿಂದುಗಳಿಗೂ ಮಹಮ್ಮದೀಯರಿಗೂ ಬಹಳ ಕಾಲ ದಿಂದಿರುವ ವಿವಾದವು ಹೋಗಬೇಕು. ಇದು ನೆರವೇರಲು ಪುನಃ ಇಂತಹ ಮಹಾತ್ಯಾಗವು ನಡೆಯಬೇಕಾಗಿದೆಯೆ ? ಇದನ್ನು ಕೊನೆಮುಟ್ಟಿಸಲು ಮೌಲಾನಾ ಷೌಕತಾಲಿಯವರು ಪುನಃ ಉಪವಾಸ ವ್ರತವನ್ನು ಹಿಡಿಯಬೇಕೆ ? ಇದನ್ನರನೇರಿಸುವುದು ಅಸಾಧ್ಯ ಕಾರ್ಯವಲ್ಲ. ಇದಕ್ಕಾಗಿ ಕೂಡಲೆ ಒಂದು ಸಭೆಯು ನಡೆಯಬೇಕು. ಆ ಸಭೆಯಲ್ಲಿ ಮಹಮ್ಮದೀಯ ನಾಯಕರುಗಳೂ ಹಿಂದು ನಾಯಕರುಗಳೂ ತಮ್ಮ ತೊಂದರೆಗಳನ್ನು ಸ್ಪಷ್ಟವಾಗಿ ತಿಳಿಸಬೇಕು. ಹಿಂದು ಮಹಮ್ಮದೀಯ ಐಕ್ಯವೇರ್ಪಡುವವರೆಗೆ ಸಭೆಯನ್ನು ನಿಲ್ಲಿಸದಿರಲು ನಾಯಕರುಗಳು ಸಂಕಲ್ಪಿಸಬೇಕು. ಆ ಪ್ರಕಾರವಾಗಿ ಈ ಎರಡನೆಯ ಮಹಾದ್ಭುತವನ್ನು ನಾಯ ಕರುಗಳು ಉಂಟುಮಾಡಿದರೆ ದೇಶಕ್ಕೆ ಘನತರವಾದ ಸೇವೆ ಮಾಡಿದವರಾಗುವರು. ಅನೇಕ ಶತಮಾನ ವರ್ಷಗಳಿಂದ ಗೂಢ ವಾಗಿದ್ದ ಆ ಅಮೌಲ್ಯ ಪ್ರಕೃತಿ ರಹಸ್ಯಗಳು ಈ ೨೦ ನೆಯ ಶತಮಾನದಲ್ಲಿ ಪರಿಶೋಧಕರಿಂದಲೇ ಹೊರಪಡಿಸಲ್ಪ ಟ್ಟಿತು. ವಿಮಾನ ಸಂಚಾರವೂ, ವಾಯು ವಾರ್ತೆಯೂ, ದೂರ ದಲ್ಲಿರುವವರನ್ನು ನೋಡುವುದು ಮೊದಲಾದವುಗಳೆಲ್ಲ ಸಾಧಿಸ ಲ್ಪಟ್ಟಿರುತ್ತವೆ. ಹೀಗಿರುವಾಗ್ಗೆ ಒಂದು ದೇಶದಲ್ಲಿರುವ ಎರಡು ಜಾತಿಯವರು ಸಾಮರಸ್ಯ ಸೌಹಾರ್ದಗಳನ್ನು ಹೊಂದಿ ಬಾಳು ವಂತೆ ಜೀವಿಸುವಂತಾಗುವುದು ಯಾತಕ್ಕೆ ಅಸಂಭವವು ? ಓ ಭಾರತೀಯರುಗಳಿರಾ ! ಏಳಿರಿ. ಈ ಮಹಾ ಅವಕಾಶವನ್ನು ಕಳೆ ದುಕೊಳ್ಳಬೇಡಿ. ಭಾರತೀಯರು ನಿದ್ರಾವಸ್ಥೆಯಲ್ಲಿಲ್ಲ. ಪೂರ್ವ ಕಾಲದಲ್ಲಿದ್ದ ನಿಮ್ಮ ಮಹೋನ್ನತ ಪದವಿಯನ್ನು ಸರಿಯಾಗಿ ಗುರ್ತಿಸಿರಿ. ನಿಮ್ಮಲ್ಲಿ ಸಹಜವಾಗಿರುವ ಘನತೆಯನ್ನು ತಿಳಿದು ಕೊಳ್ಳುವವರಾಗಿ. ಅನಂತರ ಮೊದಲಿಗಿಂತಲೂ ಹೆಚ್ಚಾದ ನಿಮ್ಮ ಖ್ಯಾತಿಯನ್ನು ಪಡೆಯಿರಿ. ಅದಕ್ಕೆ ತಕ್ಕ ಸಮಯವು ಈಗ ಪ್ರಾಪ್ತವಾಗಿರುತ್ತದೆ. ಇನ್ನು ಕೈಯಿಂದ ಸ್ಪರ್ಶ ಮಾತ್ರ ವಾಗಬೇಕು. ಅದಕ್ಕೆ ಯಾರೂ ಮುಂದೆ ಹೆಜ್ಜೆಯಿಡರು.

DISTRICT BOARD, TUMKUR DISTRICT.

Notice No. G. 6/41/1930-31 dated 16th Sept. 1932.

It is hereby notified for the information of the public that the undermentioned Musafirkhanas which were under the management of this District Board are closed for the use of the travelling public in pursuance of Government Order No. L. 1312-8/ L. B. 63-31-11 dated 18/22nd August 1932

1. Bellavi, Tumkur Taluk.
2. Baichapur, Koratagere Taluk.
3. Nagalmadike, Pavagada Taluk.
4. Kibbanahalli, Tiptur Taluk.
5. Huliyurdurga, Kunigal Taluk.
6. Yelladabagi, Gubbi Taluk
7. Hagalvadi, Gubbi Taluk.
8. Ankasandra, Gubbi Taluk
9. Nittur, Gubbi Taluk.
10. Gubbi
11. Urdagere, Tumkur Taluk.
12. Turuvekere Only one wing is available.

D. S. MALLAPPA,
President, District Board,
Tumkur District

ನೋಟೀಸು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡು

ತಾ|| 29-9-1932

ಈ ಕೆಳಗೆ ನಮೂದುಮಾಡಿರುವ ಕಾಂಗಾರಿಗಳನ್ನು ನಡೆಸತಕ್ಕ ಬಗ್ಗೆ ಪ್ರೆಸಿಡೆಂಟರವರ ಆಫೀಸಿನಲ್ಲಿ 29-10-32 ನೇ ಮಧ್ಯಾಹ್ನ 2 ಗಂಟೆಯವರೆಗೂ ಸೀಲ್ಡು ಟೆಂಡರುಗಳನ್ನು ಕೊಡಬಹುದು.

ಪ್ಲಾನ್ ವಗ್ಯೆರೆ ಇತರ ವಿಷಯಗಳನ್ನು ಕೆಲಸ ನಡೆಯುತ್ತಾಯಿರುವ ಕಾಲಗಳಲ್ಲಿ ಡಿಸ್ಟ್ರಿಕ್ಟು ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಕಾಂಗಾರಿ ಹೆಸರು	ಡಿಪಾಜಿಟ್ ಮೊಬಲಗು
ಚಿತ್ರದುರ್ಗ ತಾಲ್ಲೂಕು	ರೂ
(1) ವಾಳ್ಯ ಭಾವಿ ಸರಿಪಡಿಸುವುದು	200—0—0
ಚಳ್ಳಕೆರೆ ತಾಲ್ಲೂಕು	
(2) ಹೆಗ್ಗೆರೆ ಭಾವಿಯನ್ನು ಸರಿಪಡಿಸುವುದು	100—0—0
ಹಿರಿಯೂರು ತಾಲ್ಲೂಕು	
(3) ಕೋಡಿಹಳ್ಳಿಯಲ್ಲಿ ಗ್ರಾಮಸ್ಥರಿಗೆ ಹೊಸ ಭಾವಿ ಮಾಡುವುದು	100—0—0
ಮೊಳಕಾಲ್ಮೂರು ತಾಲ್ಲೂಕು	
(4) ಹಿರಿಯಮ್ಮ ಗನಹಿಯ ಭಾವಿ ಸರಿಪಡಿಸುವುದು	100—0—0
(5) ತಾಳ್ಯದ ಭಾವಿ ಸರಿಪಡಿಸುವುದು	100—0—0
(6) ದಾಸಿಕಟ್ಟೆ ಭಾವಿ ಸರಿಪಡಿಸುವುದು	100—0—0

(7) ಹರಿಹರದ ಸಬ್ ತಾಲ್ಲೂಕು ಕೊಂಡಜ್ಜಿ ಆದಿಕರ್ನಾಟಕರ ಭಾವಿ ಕಾಂಗಾರಿಗಳನ್ನು 1933 ನೇ ಏಪ್ರಿಲ್ ಮಾಹೆ ಆಖೈರುವಳಗಾಗಿ ಪೂರೈಸಬೇಕು.

ಜಿ. ಚನ್ನಪ್ಪ,
ಪ್ರೆಸಿಡೆಂಟ್,
2 ಡಿ|| ಬೋ|| ಚಿತ್ರದುರ್ಗ

ಸರ್ಕಾರ ಮತ್ತು ಕಂಪೆನಿಗಳ ಸಾಲ ಮತ್ತು ಷೇರ್ ಮಾರ್ಕೆಟ್ ದರಗಳು

ಇಂಡಿಯಾ ಸರ್ಕಾರವು 1940—43 ರ ಸಾಲವನ್ನು 17—9—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಿದ್ದಾರೆ 100 ರೂ ಗೆ 98 ರೂಪಾಯಿ ಕೊಡಬೇಕು

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ 3½ (..............)		ಪತ್ರದ ಬೆಲೆ	70—15—0
„ „ 4 (1931—30)	....	....	97—1—0
„ „ 4 (1934—37)	....	....	95—15—0
„ „ 4 (1960—70)	....	....	80—10—0
„ „ 4½ (1934)	....	....	99—10—0
„ „ 4½ (1955—60)	....	....	89—14—0
„ „ 5 (1939—47)	....	....	99—1—0
„ „ 5 (1935)	....	....	100—6—0
„ „ 5 (1939—44)	....	....	99—3—0
„ „ 6 (1933—36)	....	....	101—10—0
„ „ 6½ (1935)	....	....	101—9—0
„ „ 6½ (1938—40)	....	....	112—5—0
(ಆದಾಯ ತೆರಿಗೆ ಇಲ್ಲದ್ದು)			
„ „ 5 (1933)	....	....	107—0—0
„ „ 5 (1945—55)	....	....	104—10—0
ಮೈಸೂರು ಸರ್ಕಾರದಲ್ಲಿ			
(ಆದಾಯ ತೆರಿಗೆಯುಳ್ಳದ್ದು)			
ಶೇಕಡ ಬಡ್ಡಿ 5 (1939—44)	....	....	96—3—0
(ಆದಾಯ ತೆರಿಗೆ ಇಲ್ಲದ್ದು)			
„ „ 3½ (1941—51)	....	....	110—0—0
„ „ 5½ (1940)	....	....	107—4—0
„ „ 5½ (1938)	....	....	103—6—0
„ „ 5 (1955)	....	....	101—8—0
ಶಿವಮೊಗ್ಗ ಮ್ಯುನ್ಸಿ	....	....	65—8—0
ಚಿತ್ರದುರ್ಗ ಮ್ಯುನ್ಸಿ	....	...	84—8—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಎಫ್. ಪಿ	500 ರೂ. ಷೇರಿಗೆ	1208—0—0	ರೂ	ಬೆಲೆ
„ ಅಂಟ್.	125 „	280—0—0		„
ಇಂಡಿಯಾ	50 „	93—4—0		„
ಮೈಸೂರು	100 „	193—0—0		„
ಬೆಂಗಳೂರು	10 „	10—2—0		„
ಇಂಡಸ್ಟ್ರಿಯಲ್	25 „	7—1—0		„
ದೇವಾಂಗ	10 „	6—0—0		„
ವೈಶ್ಯ	50 „	50—0—0		„
ಎಸ್ ಎಂ ಎಸ್. ಎ	10 „	10—0—0		„
ವಾದಿರಾಜ		ನಾಮಿನಲ್		

ಇತರ ಬ್ಯಾಂಕುಗಳಲ್ಲಿ

ಬಿ ಸಿ ಮಿಲ್ಸ್	25 ರೂ ಷೇರಿಗೆ, ...	14—4—0	ರೂ	ಬೆಲೆ
ಬೆಂಗಳೂರು ಪ್ರೆಸ್ 100 „	....	78—0—0		„
ಬಾರ್ಟನ್ ಸನ್ (ಆ) 10 „	....	7—10—0		
„ (ಪ್ರಿ) 10	...	6—4—0		„
ಸ್ಪೆನ್ಸರ್ಸ್	....	8—0—0		„
ಬ್ರೂವರೀಸ್ (ಆ) 100 „	....	85—0—0		„
(ಪ್ರಿ) 100 „	....	84—0—0		„
ಟೈಲ್ ಅಂಡ್ ಕ್ಲೇವರ್ಕ್ಸ್		ನಾಮಿನಲ್		
ಪ್ರೀಮಿಯರ್	....	ಡಿಟೋ.		
ಟಾಟಾ ಹೈಡ್ರೋ (ಆ)	...	132—4—0		„
„ (ಪ್ರಿ)	..	106—4—0		„
ಟಾಟಾ ಐರನ್ (ಆ) ..	....	28—0—0		„
„ (ಡಿ) ...	..	216—0—0		„
„ (1) ...	...	121—0—0		„
„ (2) ...	...	46—0—0		„
ಶ್ರೀ ಕೃಷ್ಣ		ನಾಮಿನಲ್		

ಇನ್ಷೂರೆನ್ಸು ಕಂಪೆನಿಯಲ್ಲಿ

ಏಷಿಯಾಟಿಕ್	5 ರೂ ಷೇರಿಗೆ	5—2—0	ರೂ	ಬೆಲೆ
ಓರಿಯಂಟಲ್	500 „	2000—0—0		
ರಿಲೇಯನ್ಸ್	100 „	93—0—0		„

ಡಿಬೆಂಚರುಗಳು

ಕೋಲಾರ	100 ರೂ ಡಿಬೆಂಚರಿಗೆ	89—0—0	ರೂ	ಬೆಲೆ
ಮೈಸೂರು	100 „	101—4—0		„
ತುಮಕೂರು	100 „	104—0—0		„
ಹಾಸನ	100 „ ...	94—0—0		„

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ ಗೆ	65—14—0	ರೂ	ಬೆಲೆ
ಬಂಕಿಂಗ್ಹಾಂ	100 „	114—2—0		„
ಗೋಕಾಕ್	100 „	78—0—0		„
ಕೈಸರ್ ಹಿಂದ್	2½ „	1—5—0		„
ಮಿನರ್ವಾ	100 „	42—0—0		„
ಯುವರಾಜ	100 „ ...	90—6—0		„
ಮಹಾಲಕ್ಷ್ಮಿ		ನಾಮಿನಲ್		
ಕೃಷ್ಣರಾಜೇಂದ್ರ	25 „ ...	5—0—0		„

ಗಣಿಗಳಲ್ಲಿ

ಬಾಲಘಾಟ್ ಷಿಲಿಂಗ್ 10 ಕ್ಕೆ ...	0—12—0		ಬೆಲೆ
ಚಾಂಪಿಯನ್ „ 10 „	1—0—5		„
ಮೈಸೂರು „ 10 „	0—14—0		„
ನಂದೀದ ಗ „ 10 „	1—6—5		„
ಊರಿಗಾಂ „ 10 „	1—6—7		„
ವೆನಿಸ್ಟ್ಲರ್ „ 10 „	ನಾಮಿನಲ್		
ಶಿವಮೊಗ್ಗ „	ನಾಮಿನಲ್		

ಎಂ. ಸಂಜಪ್ಪ, ಜಹಗೀರ್‌ದಾರ್,
ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್,
181, ಕ್ಯಾವಲ್ರಿ ರೋಡು, ಬೆಂಗಳೂರು.

ಪತ್ರವ್ಯವಹಾರ

ಪತ್ರವ್ಯವಹಾರಕರ ಅಭಿಪ್ರಾಯಗಳಿಗೆ ಸಂಪಾದಕರು ಹೊಣೆಗಾರರಲ್ಲವೆಂಬುದನ್ನು ಸಹೃದಯರ ತಿಳಿಯಬೇಕು.—ಸಂಪಾದಕ.

ಕೊಂಬಿಂಜಿಗರ ಹಾಸ್ಟೆಲ್, ಮೈಸೂರು.

ಶಿವ್ ಬಸಪ್ಪನವರ್, ಎಂ ನಿಸ್ಸಾರಿಕೆ, ರಾಜ ರಾವ್, ಲೇಟ್ ಬಸಮಯ್ಯನವರು ತಮ್ಮ ಪೂಜ್ಯ ತಂದೆಯವರ ಲೇಟ್ ದೇವನ್ನು ನವರ ಹೆಸರಿನಲ್ಲಿ ನಡೆಸುತ್ತಿದ್ದ ಮೇಲ್ಕಂಡ ಫ್ರೀ ಹಾಸ್ಟೆಲ್ ಮನೆಯಾರ ಮೇರೆ ತಾ|| 19-9-32 ಅದ್ದು ಮುಚ್ಚಲ್ಪಟ್ಟಿತು ತಾ|| 1ನೇ ಅಕ್ಟೋಬರು ಶರಿಯ ಬೇಕೆಂದು ಅವರ ಧರ್ಮ ಪ್ರಚುರಕರ ಯಾಜಮಾನ, ಡಿ. ಟಿ ಬಸಮಯ್ಯನವರು ತಿಳಿಸಿರುತ್ತಾರಿದ್ದರಿಂದ, ಈ ವಿಷಯವನ್ನು ಈ ಮೂಲಕ ಸರ್ವರ ಅವಗಾಹನೆಗೆ ತರಲು ಸಂತೋಷಿಸುತ್ತೇನೆ ತಮ್ಮ ತಂದೆಯವರ ಧರ್ಮಕಾರ್ಯಗಳಲ್ಲಿ ಇವರಿಗೆ ಆಸಕ್ತಿಯೂ ಪ್ರೀತಿಯೂ ಇರುವುದನ್ನು ನೋಡಿದರೆ ಮೇಲ್ಕಂಡ ಧರ್ಮಪ್ರವೃತ್ತಿಗಳಿಂದ ಲೇಟ್ ಬಸಮಯ್ಯನವರ ಕೀರ್ತಿಯು ಆಚಂದ್ರಾರ್ಕವಾಗಿ ವ್ಯಾಪಕವಾಗುತ್ತದೆಂಬುದಕ್ಕೆ ಸಂದೇಹವಿಲ್ಲ. ಆದರೆ ಇಷ್ಟು ಸಣ್ಣ ವಯಸ್ಸಿನಲ್ಲಿ ಇವರಿಗಿಷ್ಟರಮಟ್ಟಿಗೆ ಧರ್ಮ ಕೆಲಸಗಳಲ್ಲಿ ಮನಸ್ಸುಂಟಾಗಿರುವುದನ್ನು ನೋಡಿದರೆ ಕಲಿಯುಗದ (ದಾನಧೀರ ಕರ್ಣ) ನೆಂಬ ಬಿರುದನ್ನೊಪ್ಪಿದ ತಮ್ಮ ತಂದೆಯವರ ಉದರದಲ್ಲಿ ಜನಿಸಿದುದಕ್ಕೆ ಸಾರ್ಥಕವಾಯಿತೆಂದೇ ಭಾವಿಸಬೇಕು. ಧರ್ಮ ಪುತ್ರರುಗಳಾದ ಇವರಿಗೂ ಇವರ ಸಹೋದರರಿಗೂ ಇವರ ಹಿರಿಯರಿಗೆ ಲಭಿಸಿರುವ ಅಭೂತಪೂರ್ವವಾದ ಶಾಶ್ವತ ಕೀರ್ತಿಯನ್ನು ಸರ್ವಶಕ್ತನಾದ ಪರಮೇಶ್ವರನು ಅನುಗ್ರಹಿಸಲೆಂದು ಈ ಅಲ್ಪನ ಪ್ರಾರ್ಥನೆ ಎಂ ಸಿ ನರಸಿಂಹಯ್ಯ

ಕಲ್ಯಾಣಿಯಲ್ಲಿ ಪಾರ್ಟಿ ಕಲಹ.

ಮಳವಳ್ಳಿ ತಾಲ್ಲೂಕಿಗೆ ಸೇರಿದ ಕಲ್ಯಾಣಿ ಗ್ರಾಮದಲ್ಲಿ ಮುಸಲ್ಮಾನರ ಜನಸಂಖ್ಯೆಯೇ ಹೆಚ್ಚಾಗಿದ್ದು ಸುಮಾರು 200 ವರೆಗೆ ಅವರುಗಳ ಮನೆಗಳಿರುವವು. ಇವರುಗಳಲ್ಲಿ 2 ಪಾರ್ಟಿಗಳೇರ್ಪಟ್ಟು 1 ಪಾರ್ಟಿಯಲ್ಲಿ 15, 20 ಮನೆಗಳು ಮಾತ್ರ ಸೇರಿರುತ್ತವೆ. ಇಲ್ಲಿಯ ಮಸೀದಿ ಪಾಜಿಯು ಚಿಕ್ಕ ಪಾರ್ಟಿಗೆ ಸೇರಿದವರಾಗಿರುತ್ತಾರೆ. ಇವರು ಮಸೀದಿಯಲ್ಲಿ ನಮಾಜು ವಗ್ಯೆರೆ ನಡಿಸಲು ದೊಡ್ಡ ಪಾರ್ಟಿಯವರೊಪ್ಪದೆ ತಮ್ಮ ಕಡೆಯವನೊಬ್ಬನನ್ನು ನೇಮಿಸಿಕೊಂಡು ನಮಾಜನ್ನು ನಡಿಸಲು ಪ್ರಯತ್ನಪಟ್ಟುದರಮೇಲೆ ಸಣ್ಣ ಪಾರ್ಟಿಯವರು ಮಂಡ್ಯದ ಮುನ್ಸೀಫ್ ಕೋರ್ಟಿನಲ್ಲಿ ದಾವಾ ಮಾಡಿ ಇಂಜಂಕ್ಷನ್ ಆರ್ಡರನ್ನು ಪಡೆದಿದ್ದರು ಅದರಮೇಲೆ ಮೈಸೂರು ಸಬ್ ಜಡ್ಜ್ ಕೋರ್ಟಿಗೆ ಅಪೀಲಾಗಿದ್ದು ಮೊದಲಿನ ಪಾಜಿಯಿಂದಲೇ ನಮಾಜು ಕಾರ್ಯ ನಡೆಸಬೇಕೆಂದು ತೀರ್ಮಾನವಾಯಿತು. ಆದರೂ ಕಲಹ ತಪ್ಪದೆ ಇನ್ನೂ ಪ್ರಬಲವಾಗುತ್ತಿದೆ. ಸೋಮವಾರ ಚಿಕ್ಕಪಾರ್ಟಿಗೆ ಸೇರಿದ ಮಹಮದ್ ಸಾಬರೆಂಬ ವೃದ್ಧರು ಸತ್ತುಹೋದರು. ಅವರ ಶವವನ್ನು ಅವರ ಕಡೆಯವರು ಕಬರಸ್ಥಾನಕ್ಕೆ ತೆಗೆದುಕೊಂಡುಹೋಗಲೆತ್ನಿಸಿದಾಗ ದೊಡ್ಡ ಪಾರ್ಟಿಯವರು ಕಬರ್‌ಸ್ಥಾನಕ್ಕೆ ಹೆಣವನ್ನು ತರಕೂಡದೆಂದು ಅಡ್ಡಿಪಡಿಸಿದರು. ಅದರಮೇಲೆ ಅವರ ಕಡೆಯವರು ಮಳವಳ್ಳಿಗೆ ಹೋಗಿ ಅಮಲ್ದಾರರಿಗೂ ಪೊಲೀಸು ಇನ್ಸ್‌ಪೆಕ್ಟರಿಗೂ ವಿದ್ಯಮಾನವನ್ನು ತಿಳಿಸಿ, ನೀವುಗಳು ಬಂದು ದಫನ್ ಮಾಡಿಸಲೇರ್ಪಡಿಸಬೇಕೆಂದು ಹೇಳಿಕೊಂಡು ಮೋಟಾರು ಬಂಡಿಯಲ್ಲಿ ಕಲ್ಯಾಣಿಗೆ ಕರೆದುಕೊಂಡುಬಂದರು ಅಮಲ್ದಾರರೂ ಇನ್ಸ್‌ಪೆಕ್ಟರೂ ದೊಡ್ಡ ಪಾರ್ಟಿಯವರಲ್ಲಿಗೆ ಹೋಗಿ ಹೆಣವನ್ನು ದಫನ್ ಮಾಡಲು ತಡೆಯುವದೇಕೆಂದು ಕೇಳಲಾಗಿ, ನಮ್ಮ ಇದಿರು ಪಾರ್ಟಿಯವರು ಕಬರ್‌ಸ್ಥಾನಕ್ಕೆ ಬರಕೂಡದು ಹೆಣವನ್ನು ನಾವೇ ತೆಗೆದುಕೊಂಡು ಬಂದು ದಫನ್ ಮಾಡುತ್ತೇವೆಂದು ಹೇಳಿದರು ಅದಕ್ಕೆ ಹೆಣದ ಕಡೆಯವರೂ ಬಂಧುಗಳೂ ಒಪ್ಪಲಿಲ್ಲವಾಗಿ ಅಮಲ್ದಾರರೂ ಇನ್ಸ್‌ಪೆಕ್ಟರೂ ಏನನ್ನೂ ಮಾಡದೆ ಮಳವಳ್ಳಿಗೆ ಹೊರಟುಹೋಗಲಾಗಿ ಹೆಣದ ಕಡೆಯವರು ಗಗೇಶ್ವರಿಗೆ ವರ್ತಮಾನಕೊಟ್ಟು ಸು 70 ಜನರನ್ನು ಬರಮಾಡಿಕೊಂಡರು ಅವರು ಬಂದು ದೊಡ್ಡಪಾರ್ಟಿಯವರಿಗೆಷ್ಟು ಸಮಾಧಾನ ಹೇಳಿದಾಗ್ಯೂ ಕೇಳದೆ, ಎದುರು ಕಕ್ಷಿಯವರು ಯಾರೂ ಬಾರದೆ ನೀವುಗಳೇ ದಫನ್ ಮಾಡಲು ಸಮ್ಮತಿಸುವೆವೆಂದು ಹೇಳಿ ಮಾರಾಮಾರಿಗೆ ಸಿದ್ಧವಾಗಿದ್ದುದನ್ನು ನೋಡಿ ಗಗೇಶ್ವರಿಯವರು ತಾವುಗಳೇ ಹೆಣವನ್ನು ತಂದು ದಫನ್ ಮಾಡಿದರು ಆಗ ಕತ್ತಲೆಯಾಗಿದ್ದುದರಿಂದ ಚಿಕ್ಕಪಾರ್ಟಿಯವರೇನಾದರೂ ಕಬರ್‌ಸ್ಥಾನಕ್ಕೆ ಬಂದಿರಬಹುದೆಂದು ದೊಡ್ಡ ಪಾರ್ಟಿಯವರು ಸಾಯುಧರಾಗಿ ದೀಪಗಳನ್ನು ತಂದು ಕಬರಸ್ಥಾನದೊಳಗೆಲ್ಲಾ ಹುಡುಕಿನೋಡಿ ಅವರುಗಳ್ಯಾರೂ ಅಲ್ಲಿರಲಿಲ್ಲವಾಗಿ ಶಟಿಸ್ಥರಾದರು. ಇದರಮೇಲೆ ಉಭಯ ಪಾರ್ಟಿಗಳ ದ್ವೇಷವು ಹೆಚ್ಚುತ್ತಾ ಇರುತ್ತಿದೆ ಚಿಕ್ಕಪಾರ್ಟಿಯವರು ಪ್ರಾಣಭೀತಿಪಟ್ಟುಕೊಂಡು ತಮ್ಮ ರಕ್ಷಣೆಗೆ ತಕ್ಕ ಬಂದೋಬಸ್ತು ಮಾಡಬೇಕೆಂದು ಮೈಸೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ಟೆಲಿಗ್ರಾಮನ್ನು ಕೊಟ್ಟದ್ದಲ್ಲದೆ ಖುದ್ದು ಅರ್ಜಿ ಕೊಟ್ಟು ಹೇಳಿಕೊಂಡುದರಮೇಲೆ ಮಳವಳ್ಳಿ ತಾ|| ಅಮಲ್ದಾರರಿಗೂ ಪೊಲೀಸ್ ಇನ್ಸ್‌ಪೆಕ್ಟರಿಗೂ ತಕ್ಕ ಬಂದೋಬಸ್ತು ಮಾಡುವಂತೆ ಆಜ್ಞೆಮಾಡಿರವುದಾಗಿ ಕೇಳುತ್ತೇನೆ ತಾಲ್ಲೂಕು ಅಧಿಕಾರಿಗಳು ಆ ದಿವಸ ನಿಂತು ದಫನ್ ಕಾರ್ಯಮಾಡಿಸಿದ್ದರೆ ಇಷ್ಟೊಂದು ಮನಸ್ತಾಪ ಬೆಳೆದು ಪ್ರಾಣಭೀತಿಯುಂಟಾಗಲು ಕಾರಣವಾಗುತ್ತಿರಲಿಲ್ಲ ಡಿ|| ಮ್ಯಾಜಿಸ್ಟ್ರೇಟರ ಅಪ್ಪಣೆಯಾಗಿರುವುದರಮೇಲಾದರೂ ಅಧಿಕಾರಿಗಳು ಮುತವರ್ಜಿವಹಿಸಿ ತಕ್ಕ ಬಂದೋಬಸ್ತು ಮಾಡಿ ದುರ್ಬಲಪಕ್ಷದವರಿಗುಂಟಾಗಿರುವ ಪ್ರಾಣಭೀತಿಯನ್ನು ಹೋಗಲಾಡಿಸುವರೆಂದು ನಂಬುತ್ತೇನೆ ಸ್ಥಳದವನು

ಪ್ರೈಮರಿಬಾಯಿಸ್ ಸ್ಕೂಲ್ ವಾರ್ಷಿಕೋತ್ಸವ.

ಚಾಮರಾಜನಗರದ ತಾ|| ಸರ್ವಮಾನ್ಯ ತಮ್ಮಡಹಳ್ಳಿ ಪ್ರೈಮರಿ ಬಾಯಿಸ್ ಸ್ಕೂಲು 6 ನೇ ವಾರ್ಷಿಕೋತ್ಸವವು ಹರವೇ ಹೋ|| ರೇಂಜು ಇನ್ಸ್‌ಪೆಕ್ಟರ್ ಮ|| ಜಿ ಅಶ್ವತ್ಥನಾರಾಯಣಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 20 ರ ಮಧ್ಯಾಹ್ನ 3 ಘಂಟೆಗೆ ಸ್ಕೂಲ್ ಕಟ್ಟಡದೊಳಗೆ ನೆರವೇರಿಸಲ್ಪಟ್ಟಿತು, ಮ|| ಗಳಾದ ಟಿ ಸೀತಾರಾಮಯ್ಯನವರು, ಶ್ರೀನಿವಾಸಮೂರ್ತಿಯವರು, ಉಡಿಗಾಲದ ಭಿಕ್ಷದ ಮಠದ ಪೀ|| ಭಿಕ್ಷದಸ್ವಾಮಿಗಳವರು ತಾಲ್ಲೂಕು ಕೇಂದ್ರ ಸರ್ಕಾರಿ ಉದ್ಯೋಗಸ್ಥರು ಇತರ ಅನೇಕ ದೊಡ್ಡ ಮನುಷ್ಯರು ಸಹ ದಯಮಾಡಿಸಿದ್ದರು. ದೇವರ ಪ್ರಾರ್ಥನೆಯಾದನಂತರ ಸದರಿ ಸ್ಕೂಲ್ ಹೆಡ್ಮಾಸ್ಟರ್ ಮ|| ಚನ್ನಪ್ಪನವರು ಸ್ಕೂಲ್ ರಿಪೋರ್ಟನ್ನು ಓದಿದರು. ಆ|| ಮಾ|| ಎಜ್. ಸಿದ್ದಯ್ಯನವನರು, ಗೋವಿಂದವಾಡಿ ಸ್ಕೂಲ್ ಮಾಸ್ಟರ್ ಹೆಚ್.ಬಿ. ಸಿದ್ದಪ್ಪನವರು, ಹೊಮ್ಮದ ಸ್ಕೂಲ್ ಮಾಸ್ಟರ್ ಎಸ್. ಹೊನ್ನಪ್ಪನವರು, ಹಾರ್ಮೋನಿಯಂ ಮೇಸರ್ಸ್ ಅಣ್ಣಾಸಾಮಯ್ಯನವರು, ಪಟೇಲ್ ಚನ್ನಪ್ಪನವರ ಮಕ್ಕಳು ಗುರುನಂಜಪ್ಪನವರುಗಳ ಉಪನ್ಯಾಸವಾದನಂತರ ಮ|| ಟಿ ಸೀತಾರಾಮಯ್ಯನವರು, ವಿದ್ಯಾಭ್ಯಾಸದ ವಿಷಯದಲ್ಲಿ ಗ್ರಾಮಸ್ಥರಿಗೆ ಅಭಿರುಚಿಹುಟ್ಟುವಂತೆ ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು. ಅಧ್ಯಕ್ಷರಾದ ಮ|| ಜಿ. ಅಶ್ವತ್ಥನಾರಾಯಣಪ್ಪನವರು ಗ್ರಾಮಾಭಿವೃದ್ಧಿ ಮತ್ತು ವಿದ್ಯಾಭಿವೃದ್ಧಿ ವಿಚಾರವಾಗಿಯೂ ವಿದ್ಯಾರ್ಥಿಗಳಿಗೆ

[illegible]

ಮಾಸ್ತಿ ... ಶಾಲೆಯ ಮಾದರಿ ಚರ್ಚಾಸಂಘ

ಕಳೆದ ಸೆಪ್ಟಂಬರ್ ತಾ|| 2೩ ನೇ ಶನಿವಾರ ... [illegible] ... "World Wonders" ... [illegible]

ಪ್ರತ್ಯಕ್ಷದರ್ಶಿ

ವಿನೋದವೂ ದಾನಧರ್ಮದ ಶೀಲವಾಗಿ ಪರಿಣಮಿಸಿತು

[illegible]

ನೂತನ ಮಸೀತಿಯಾರಂಭೋತ್ಸವ

ಕಳೆದ ತಾ|| 2೯ ನೇ ಸೋಮವಾರ ... [illegible]

ಬ್ರಾಹ್ಮಣರಿಗೆ ಮುಡುಪು.

ರಾಜಧಾನಿಯಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರವರಿಂದ ಸ್ಥಾಪಿತವಾದ ಒಂದು ಸಂಸ್ಕೃತ ಮಹಾಪಾಠಶಾಲೆ (ಕಾಲೇಜು) ... [illegible]

[illegible]

ಬೇಡುವವ.

ಬೆಂಗಳೂರು ಕೋಟೆಯಲ್ಲಿ ನಿರ್ಮಿತವಾಗುವ ಸೇಂಟ್ ಜಾನ್ಸ್ ... [illegible] ... ಮಾಡಿದ ಭಾಷಣ.

(1913 ನೇ ಇಸವಿ ಸೆಪ್ಟಂಬರ್ 23 ನೇ ತಾರೀಖು.)

[illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳ ಕ್ಲೇಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸ ಬೇಡಿರಿ

ಗರ್ಭಧಾರಣಾ ಸಂಜೀವಿನಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾತ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಪ್ರಾಪ್ತಿ ಆಗುವುದು ೯ ಗುಳಿಗೆಗಳ ಕಿ. ೩ ರೂಪಾಯಿ. ಪೋ. ಖ. ೫ ಆಣೆ

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜಿ M. C

ಹಾಗಿ ವಂದನೆಗಳನ್ನು ಸಮರ್ಪಿಸುವೆನು. ಬೆಂಗಳೂರಿನಲ್ಲಿರುವ ಕ್ರೈಸ್ತ ಸಂಘದವರೆಲ್ಲರಿಗೂ ಒಂದು ಪಟ್ಟದಂತಿರುವ ಇಸ್ಕೂಲು ಮುಖ್ಯವಾದ ಈ ಉತ್ಸವದಲ್ಲಿ ನಿಮ್ಮೊಡನೆ ಸೇರುವ ಸುಯೋಗವು ಲಭಿಸಿದುದು ನನಗೆ ವಿಶೇಷ ಸಂತೋಷಕರವಾಗಿದೆ.

ಇದೆಲ್ಲವೂ ಕೇವಲ ಲೌಕಿಕ ವ್ಯವಹಾರದ ಸಂಬಂಧವು ಮಾತ್ರವೇ ಆಗಿದ್ದಿತು. ಈಗಲಾದರೋ ಮತಸಂಬಂಧವಾದ ಈ ದಿವಸ ಉತ್ಸವದಲ್ಲಿ ಭಾಗವಹಿಸುವುದಕ್ಕಾಗಿ ನೀವು ಆಹ್ವಾನವನ್ನು ಕಳುಹಿಸಿರುವುದಕ್ಕೆ ನಾನು ಕರೆದೆನಿಸಿ ಮನಮುಟ್ಟುವಂತಿರುವ ಸ್ನೇಹಪೂರ್ವಕವಾದ ಬೇರೆ ವಿಶೇಷತೆಯುಂಟೆಂಬುದು ನನ್ನ ಭಾವನೆಯಾಗಿದೆ. ಅದುದರಿಂದ ಈ ಅವಕಾಶ ಬಂದುದರಿಂದಾಗಿ ಇತರ ಜನಾಂಗಗಳವರೊಡನೆ ಧರ್ಮ ಸ್ವಭಾವವನ್ನೂ ಧರ್ಮ ಸೂಕ್ಷ್ಮವನ್ನೂ ಅರಿತು ಪ್ರೇಮಭಕ್ತಿ ಯಾ ಪರಿಯನ್ನು ಸಂಘಟಿಸಲಾಗುವ ದುದೇ ಮತಾಚರಣೆಯು ಸಾರತರವಾದ ತಿರುಳಾಗಿದೆ. ಆದರೆ ಹಲವು ಸಂದರ್ಭಗಳಲ್ಲಿ ಇದರ ಕಡೆಗೆ ಗಮನವನ್ನೇ ಕೊಡದೆ, ಮತಾಚರಣೆಯ ಹೆಸರಿನಲ್ಲಿ ಸಂಕುಚಿತ ಪರಮತ ದ್ವೇಷಕ್ಕೆ ಅವಕಾಶವನ್ನು ಕಲ್ಪಿಸಿಕೊಂಡು, ಹಾಗೆ ಮಾಡಿದುದೇ ಯುಕ್ತವೆಂದು ಸಮರ್ಥಿಸುವ ಸನ್ನಿವೇಶಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಇದು ತೀರ ಅನುಚಿತವೆಂದು ಹಾಡಲ್ಲದೂ ವಿಷಾದ ಪಡಬೇಕಾಗಿದೆ. ನಾವೆಲ್ಲರೂ ನಮ್ಮ ನಮ್ಮ ಮತಗಳಲ್ಲಿ ಪೂರ್ಣಶ್ರದ್ಧೆಯನ್ನಿಟ್ಟು, ನಮ್ಮ ನಮ್ಮ ಮತಾಚರಣೆಗಳನ್ನು ನೆರವೇರಿಸಬೇಕಾದುದೇನೋ ಯುಕ್ತವೇ ಸರಿ. ಆದರೆ, ನಾವು ಆ ರೀತಿ ಮಾಡುವುದರ ಜೊತೆಗೆ ಇತರ ಮತಗಳವರಿಗೂ ನಮ್ಮಂತೆಯೇ ಮತ ಶ್ರದ್ಧೆಯುಂಟೆಂಬುದನ್ನೂ, ಅವರ ಮತ ತತ್ವಗಳೂ ಸತ್ಯವೆಂಬುದನ್ನೂ, ಅವರ ಮತ ಧರ್ಮಗಳನ್ನು ನಂಬಿ ನಡೆವವರು ನಡೆವವರಿಗೆ ಗಳಲ್ಲಿಯೂ ಸಾವಿರಾರು ಮಂದಿ ಜನರು ಭಗವಂತನ ನೆಲೆಯನ್ನು ಅರಸಿ ಸಿದ್ಧಿಯನ್ನು ಪಡೆದಿದ್ದಾರೆಂಬುದನ್ನೂ, ಅವಶ್ಯವಾಗಿ ಗಮನದಲ್ಲಿಟ್ಟುಕೊಂಡು ಆದರ್ಶಾನುಸಾರವಾಗಿ ವರ್ತಿಸಬೇಕು. ದಾರಿಗಳು ಬೇರೆ ಬೇರೆಯಾಗಿರಬಹುದು. ಆದರೂ ಪ್ರೀತಿಯಿಂದ ಯೋಗಿ ಸೇರಬೇಕೆಂದು ಬಯಸುವ ಪರಮ ಪವಿತ್ರ ಭಗವಂತನ ದಿವ್ಯಧಾಮವು ಒಂದೇ. ಒಂದು ಭಗವಂತನು ಒಬ್ಬನಾದರೂ ಮತಗಳು ಬೇರೆ ಬೇರೆಯಾಗಿರುವುದು ಆದ್ದರಿಂದಲೇ.

ಆರಾಧನೆಯ ವಿಧಾನದಲ್ಲಿಯೂ, ಭಾವನೆಯ ಬಗೆಯಲ್ಲಿಯೂ ಬೇರೆ ಬೇರೆಯಾಗಿರುವ ನಾವುಗಳೆಲ್ಲರೂ ಈ ದಿನ ಇಲ್ಲಿ ಸೇರಿದ್ದೇವೆ. ಕೇವಲ ಅನ್ಯಮತ ಸಹಿಷ್ಣುತೆಯಿಂದ ಮಾತ್ರವೇ ನಾವು ತೃಪ್ತರಾಗದೆ, ಅನ್ಯಮತವೂ ಆದರಕ್ಕೆ ಪಾತ್ರವೆಂಬ ಉಚಿತವಾದ ಅಭಿಪ್ರಾಯದಿಂದ ಇಲ್ಲಿ ಸಭೆ ಸೇರಿದ್ದೇವೆ. ಇದೇ ರೀತಿಯಲ್ಲಿ ಭೇದಭಾವಗಳನ್ನೆಲ್ಲ ಮರೆತು ಅಚಲವಾದ ಪ್ರೀತಿ ಮತ್ತು ಶಾಂತಿ ವರ್ತಿಸುವುದಕ್ಕಿಂತಲೂ ಮುಖ್ಯವಾದುದು ಮತ್ತಾವುದು ತಾನೆ ನಮ್ಮ ಮಾತೃಭೂಮಿಯ ಸೇವೆಗೆ ಆವಶ್ಯಕ? ಮನಸ್ಸಿನಲ್ಲಿ ರೂಢಮೂಲವಾಗಿ ನೆಲೆಗೊಂಡಿರುವ ಸ್ವಾರ್ಥಪರತೆಯ ಫಲವಾಗಿ ಅಥವಾ ಉಪೇಕ್ಷೆಯ ಪರಿಣಾಮವಾಗಿ ದಾರುಣವಾದ ಅನೇಕ ಸಂಕಟಗಳು ನಮ್ಮನ್ನು ಬಾಧಿಸುತ್ತವೆ. ಅವುಗಳಿಂದ ಪಾರಾಗುವುದಕ್ಕಾಗಿ ನಾವುಗಳು ನಿರಂತರವೂ ನಡೆಯಿಸಬೇಕಾದ ಪ್ರಯತ್ನದಲ್ಲಿ ನಮಗೆ ಎಲ್ಲರ ಅವಲಂಬನವೂ ಬೇಕು. ಅಷ್ಟೇ ಅಲ್ಲ. ಆ ಅವಲಂಬನದ ಜೊತೆಗೆ, ಅದಕ್ಕಿಂತ ಹೆಚ್ಚಾಗಿ ಮತಾಚರಣೆಯು ಸಫಲವಾಗಿ ದೊರೆಯುವ ಶೀಲಶುದ್ಧಿಯ ಆತ್ಮಶಕ್ತಿಯ ಬಲವು ಅಗತ್ಯವಾಗಿ ಬೇಕು. ಆದರೆ, ಮತಾಚರಣೆಯ ಸಾತ್ವಿಕ ಬಲವನ್ನು ಪಡೆದು ಸದುಪಯೋಗಪಡಿಸುವ ಯೋಚನೆಯೇ ಇಲ್ಲದೆ ಹಲವು ಸಂದರ್ಭಗಳಲ್ಲಿ ನಡೆಯುವಂತೆ ಮತಧರ್ಮಗಳ ಹೆಸರಿನಲ್ಲಿ ಪರಹಿಂಸೆಯು ನಡೆಯುವುದಾದರೆ, ಒಟ್ಟು ಜನತೆಗೇ ಅದರಿಂದ ವಿಷಮ ಫಲವೊದಗುವುದಾಗಿದೆ. ಅದನ್ನು ಸ್ಮರಿಸಿದರೆ, ಮನುಷ್ಯರು ಕೆಲವರು ಮತವನ್ನು ಎಂತಹ ದುರವಸ್ಥೆಗೆ ಈಡುಮಾಡುತ್ತಾರೆಂದು ವಿಷಾದವಾಗುತ್ತದೆ.

ಈ ದಿನದಂಥ ಉತ್ಸವ ಕಾಲದಲ್ಲಿ, ಕ್ರೈಸ್ತಮತಕ್ಕೆ ಸೇರಿಲ್ಲದವರು ಪರಕೀಯರೆಂಬ ಭಾವನೆಯೇ ಇಲ್ಲದೆ ನೀವು ಅವರನ್ನೂ ಆದರ ವಿಶ್ವಾಸಗಳಿಂದ ಬರಮಾಡಿಕೊಳ್ಳುವುದು ನಿಮ್ಮ ಮತದ ಉತ್ತಮ ಲಕ್ಷಣಗಳಲ್ಲೊಂದಾಗಿದೆ.

ಈ ನಗರದಲ್ಲಿ ನಿಮ್ಮ ಸಂಘದ ಚರ್ಚನ್ನು ಕಟ್ಟಿಸುವ ಘನವಾದ ಉದ್ಯಮದಲ್ಲಿ ಪ್ರವರ್ತಿಸಿರುತ್ತೀರಿ. ಈ ದೊಡ್ಡ ಕೆಲಸವನ್ನು ಆಗಲೇ ಪೂರ್ತಿಗೊಳಿಸುವುದು ಸಾಧ್ಯವಿಲ್ಲವೆಂದು ತೋರಿದ್ದರೂ, ಅದನ್ನು ಆರಂಭಿಸದಿರುವುದು ಯುಕ್ತವಲ್ಲವೆಂದು ಭಾವಿಸಿ ಧೈರ್ಯದಿಂದಲೂ ಸಾಹಸದಿಂದಲೂ ಮುಂದೆ ಬಂದಿದ್ದೀರಿ. ಯಥಾಕಾಲದಲ್ಲಿ ಈ ಕಾರ್ಯವು ಸಮಗ್ರವಾಗಿ ಪೂರ್ತಿಗೊಳ್ಳುವುದೆಂಬ ಭರವಸೆಯಿಂದಲೂ, ಉತ್ಸಾಹದಿಂದಲೂ, ನೀವುಗಳು ಈ ರೀತಿ ಕಾರ್ಯಾರಂಭ ಮಾಡಿರುವುದನ್ನು ನೋಡಿದರೆ, ಈ ನಗರದ ಕ್ರೈಸ್ತ ಮತೀಯರಲ್ಲಿ ಎಷ್ಟುಮಟ್ಟಿನ ಶಕ್ತಿಸಾಮರ್ಥ್ಯಗಳಿವೆಯೆಂಬುದು ವ್ಯಕ್ತವಾಗುತ್ತದೆ.

ಇಲ್ಲಿ ನಿರ್ಮಿತವಾಗುವ ಪವಿತ್ರ ಮಂದಿರದ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸುವುದರಲ್ಲಿ ಮುಂದೆ ಈ ಕಟ್ಟಡಕ್ಕೆ ಬಂದು ಭಗವಂತನನ್ನು ಪ್ರಾರ್ಥಿಸುವವರೆಲ್ಲರೂ ಆತನ ಅನುಗ್ರಹಕ್ಕೆ ಪಾತ್ರರಾಗಲೆಂಬುದೇ ನನ್ನ ಅಂತರವಾದ ಪ್ರಾರ್ಥನೆಯಾಗಿದೆ. ಮುಂದೆ ಅನೇಕಾನೇಕ ತಲೆಮಾರುಗಳಲ್ಲಿ ಜನರಿಗೆ ಪಾರಮಾರ್ಥಿಕ ಬುದ್ಧಿಯುಂಟಾಗುವಂತೆಯೂ, ಅವರು ಉತ್ತಮವಾದ ಸಂಸ್ಕೃತಿಯನ್ನು ಪಡೆಯುವಂತೆಯೂ, ಅವರು ಸನ್ಮಾರ್ಗವನ್ನವಲಂಬಿಸಿ ಧನ್ಯರಾಗುವಂತೆಯೂ ಮಾಡುವುದಕ್ಕಾಗಿಯೂ ಸಹ, ಭಗವಂತನು ಅನುಗ್ರಹಿಸಿ ಅಳವಡಿಸಿದ ಒಂದು ಸಾಧನವೆನಿಸಿ ಈ ಪವಿತ್ರ ಮಂದಿರವು ಚಿರಕಾಲ ಬಾಳಲೆಂಬುದೇ ನನ್ನ ಪ್ರಾರ್ಥನೆಯಾಗಿದೆ.

ಮೈಸೂರಿನಲ್ಲಿ ನಡೆದ ಹತ್ತೊಂಬತ್ತನೆಯ ಪ್ರಾಂತಿಕ ಸಹಕಾರ ಸಮ್ಮೇಳನವನ್ನು ಪ್ರಾರಂಭಗೊಳಿಸುವುದರಲ್ಲಿ ದಿವಾನ್‌ರವರು ಮಾಡಿದ ಭಾಷಣ.

193[illegible] ನೆಯ ಇಸವಿ ಅಕ್ಟೋಬರ್ 6 ನೆಯ ತಾರೀಕು.

ಮಹನೀಯರೆ, ಈ ದಿನ ಇಲ್ಲಿಗೆ ಬಂದು ಈ ಸಮ್ಮೇಳನದಲ್ಲಿ ಭಾಗಿಯಾಗುವುದು ನನಗೆ ವಿಶೇಷ ಸಂತೋಷಕರವಾಗಿದೆ.

ಶ್ರೀಮಾನ್ ವೆಂಕಟಕೃಷ್ಣಯ್ಯನವರು ಈಗ ತಾನೇ ನಮಗೆ ತಿಳಿಸಿದ ಸಂಗತಿಗಳನ್ನು ಪರ್ಯಾಲೋಚಿಸಿ ನೋಡಿದರೆ, ಕಳೆದ 1 ವರ್ಷದ ಅವಧಿಯಲ್ಲಿ ಪರಸ್ಪರ ಸಹಾಯ ಸಂಘಗಳ ಕಾರ್ಯಕಲಾಪಗಳು ಎಷ್ಟುಮಟ್ಟಿಗೆ ನಡೆಯಬೇಕಾಗಿದ್ದಿತೋ ಅಷ್ಟುಮಟ್ಟಿಗೆ ನಡೆಯಲು ಕೊರತೆಯುಂಟಾಗಿರುವಂತೆ ತೋರುತ್ತದೆ. ಆಗಾಗ್ಗೆ ಒಂದೊಂದುವೇಳೆ ಈ ಬಗೆಯ ಮುಗ್ಗಟ್ಟಿನ ಸಮಯವು ಬಂದೊದಗುವುದೂ ಬಹುಶಃ ಒಂದು ವಿಧದಲ್ಲಿ ಅನುಕೂಲವೆಂದು ಹೇಳಿದರೂ ಹೇಳಬಹುದು. ಏಕೆಂದರೆ, ಆಗ್ಗೆ ಎಷ್ಟರಮಟ್ಟಿಗೆ ಕೆಲಸ ನಡೆದಿದೆ ಎಂಬುದನ್ನೂ, ಆಗಿನ ಅವಶ್ಯಕತೆಗಳೇನೆಂಬುದನ್ನೂ ಪರಿಗಣಿಸಿ ಗೊತ್ತು [illegible] ಸಹಕಾರ ವ್ಯವಸ್ಥೆಯ ಮಾಡುವುದಕ್ಕೆ ಇದರಿಂದ ಅವಕಾಶವು ದೊರೆಯುವುದು. ಆಗಾಗ್ಗೆ ಪರೀಕ್ಷಿಸಿನೋಡಿ ಈರೀತಿ ಆವರ್ತದಲ್ಲಿ ಹೀಗೆ ಕಂಡುಬರುವ ಕಾಗದ ಪತ್ರಗಳನ್ನು ಸಂಗಡಿಸುತ್ತ ಬರುವುದಾದರೆ ಸಹಕಾರದ ಪುರೋಭಿವೃದ್ಧಿಯನ್ನು ಮತ್ತಷ್ಟು ಶೀಘ್ರವಾಗಿಯೂ, ಮತ್ತಷ್ಟು ಖಚಿತವಾಗಿಯೂ ಸಾಧಿಸುವುದು ನಮಗೆ ಶಕ್ಯವಾಗುತ್ತದೆ. ನೀವುಗಳು ಚರ್ಚಿಸಿ ಸ್ವೀಕರಿಸಬೇಕಾದ ಕೆಲವು ನಿರ್ಣಯಗಳನ್ನು ಸೂಚಿಸಬೇಕಾದುದು. ಈಗ ತೀರ ಅವಶ್ಯವಾಗಿ ಪರಿಶೀಲಿಸಬೇಕಾದ ವಿಷಯಗಳು ಯಾವುವೆಂಬುದನ್ನು ನಾನು ಸೂಚಿಸುವವನಾಗಿದ್ದೇನೆ. ಅವರ ಅರಿವು ಅಪ್ರಯೋಜನವಾಗದಂತೆ ಸೂಚಿಸುವುದಕ್ಕೆ ಮುಖ್ಯವಾಗಿ ನನ್ನ ಉದ್ದೇಶವಾಗಿ ಕಡದಿಂದ ಒಳ್ಳೆಯ ನಿಮ್ಮೆಲ್ಲರಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಇಂಡಿಯಾ ದೇಶಕ್ಕೆ ಅನೇಕವು ಸೂಚನೆಗಳು ಬರುವಂತೆ ಮಾಡುತ್ತಿರುವ ಕಾಲದಲ್ಲಿ ಮೈಸೂರು ಸಂಸ್ಥಾನವೇ ಸಹಕಾರದ ಕೆಲಸದಲ್ಲಿ ಭಾರತದ ದೇಶೀಯ ಸಂಸ್ಥಾನಗಳಲ್ಲಿ ಇತರ ಭಾಗಗಳಿಗೆ ಮೇಲ್ಪಂಕ್ತಿಯಾಗಿರುವ ಸತ್ಕೀರ್ತಿಯನ್ನು ಪಡೆದಿರುವುದರಲ್ಲಿ ಈಗ ಸಂಶಯವೇ ಇಲ್ಲ. ಮುಂದೆ ಕೂಡ, ಮೈಸೂರು ಸಂಸ್ಥಾನದಿಂದ ಸಾಧ್ಯವಿರುವುದೆಲ್ಲವೂ ತಪ್ಪದೆ ನಡೆದೇ ನಡೆಯುವುದು. ಇದನ್ನು ನಾನು ನಿಮ್ಮೆಲ್ಲರಿಗೂ ಹೊಸದಾಗಿ ತಿಳಿಸಬೇಕಾದ ಆವಶ್ಯಕತೆಯೇ ಇಲ್ಲ.

ಸರ್ಕಾರದವರು ಒಂದೆರಡು ರಿಯಾಯಿತಿಗಳನ್ನು ತೋರಿಸಬೇಕೆಂದು ನೀವುಗಳು ಕೇಳಿದ್ದೀರಿ. ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಇಷ್ಟಪಡುವ ಸದಸ್ಯರುಗಳಿಗೆ ಸಾಲಗಳನ್ನು ಕೊಡಲು ಏರ್ಪಟ್ಟಿರುವ ಸಂಘಗಳಿಗೆ ಹಣವನ್ನು ಒದಗಿಸುವುದಕ್ಕೋಸ್ಕರ ಏಪೆಕ್ಸ್ ಬ್ಯಾಂಕಿಗೆ ಸರ್ಕಾರದವರು ಸಾಲವನ್ನು ಕೊಡಬೇಕೆಂಬುದು ನೀವು ಕೋರಿರುವ ಮೊದಲನೆಯ ಸಹಾಯವಾಗಿದೆ. ಆರೋಗ್ಯಕರವಾಗಿರುವ ಸ್ಥಳಗಳಲ್ಲಿ ಸಿಕ್ಕ ಜನರು ಮನೆಗಳನ್ನು ಕಟ್ಟಿಕೊಂಡು ಸುಖವಾಗಿರುವಂತೆ ಮಾಡುವುದು ಅತಿ ಮುಖ್ಯವಾದ ಕೆಲಸವೆಂಬುದೇ ನನ್ನ ಭಾವನೆ. ಹೀಗಿರುವಲ್ಲಿ ನಿಮ್ಮ ಈ ಕೋರಿಕೆಯ [illegible] ಮನಸ್ಸಿಗೆ ಕೇವಲ ಹಿತಕರವಾಗಿರುವಂತೆ ತೋರುವ ವಿಷಯದಲ್ಲಿ ಸಂಶಯವಿಲ್ಲ. ಆದಾಗ್ಯೂ ಸರ್ಕಾರದವರಿಗೆ ಈಗ ಹಣದ ಅನುಕೂಲವಿಲ್ಲವಾದ ಕಾರಣ, ಏಪೆಕ್ಸ್ ಬ್ಯಾಂಕಿಗೆ ಸಾಲವಾಗಿ ಭಾರಿ ಮೊತ್ತವೇನನ್ನೂ ಕೊಡುವುದು ಸಾಧ್ಯವಿಲ್ಲವೆಂದು ನಾನು ವಿಷಾದಿಸುವೆನು. ಆದರೆ, ಮನೆಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ಸದಸ್ಯರಿಗೆ ಸಹಾಯ ಮಾಡಲು ಏರ್ಪಟ್ಟ ಸಹಕಾರ ಸಂಘಗಳವರೂ ಏಪೆಕ್ಸ್ ಬ್ಯಾಂಕಿನವರೂ ಸಫಲವಾಗಿ ನೆರವೇರುವ ಒಂದು ಉಚಿತವಾದ ಕಾರ್ಯಕ್ರಮವನ್ನು ಯೋಚಿಸಿ ಗೊತ್ತುಮಾಡಲಿ. ಅವರು ಹಾಗೆ ಗೊತ್ತುಮಾಡಿದರೆ, ಅವರ ನಿರ್ಧಾರವು ಫಲಕಾರಿಯಾಗಿ ಪರಿಣಮಿಸುವ ಭಾಗದಲ್ಲಿ ಸರ್ಕಾರದವರು ತಮಗೆ ಸಾಧ್ಯಕಂಡ ಸಹಾಯಗಳನ್ನೆಲ್ಲ ಅವಶ್ಯವಾಗಿ ಮಾಡುವರು.

ಸ್ಟಾಂಪು ದಾಖಲೆಗಳ ವಿಷಯದಲ್ಲಿಯೂ ರಿಜಿಸ್ಟ್ರೇಷನ್ ಫೀಜಿನ ವಿಷಯದಲ್ಲಿಯೂ ಕೆಲವು ರಿಯಾಯಿತಿಗಳನ್ನು ಕೊಡಬೇಕೆಂದು ನೀವುಗಳು ಕೇಳಿದ್ದೀರಿ. ಕೊಡುವುದು ಕಷ್ಟವಾಗಿರುವ ಸಮಯದಲ್ಲಿ ನೀವು ರಿಯಾಯಿತಿಗಳನ್ನು ಬಯಸಿದ್ದೀರಿ. ಅವುಗಳಲ್ಲಿ ಯಾವುದೊಂದನ್ನು ಖಂಡಿತವಾಗಿ ಈಗ ಹೇಳುವುದು ಸಾಧ್ಯವಿಲ್ಲವಾದರೂ, ಈ ಕೋರಿಕೆಯನ್ನು ಯಥೋಚಿತವಾಗಿ ಯುಕ್ತರೀತಿಯಲ್ಲೇನೋ ಪರ್ಯಾಲೋಚಿಸಿ ನೋಡಲಾಗುವುದು. ಅಷ್ಟನ್ನು ಮಾತ್ರ ಈಗ ನಿಮಗೆ ತಿಳಿಸಬಹುದಾಗಿದೆ.

ಸಹಕಾರ ತತ್ವ ಪ್ರಸಾರಣೆಗಾಗಿ ಏರ್ಪಟ್ಟಿರುವ ನಿಮ್ಮ ಈ ಪ್ರೊವಿನ್ಷಿಯಲ್ ಇನ್‌ಸ್ಟಿಟ್ಯೂಟಿನ ಕಾರ್ಯಕಲಾಪಗಳು ನಾನಾ ಭಾಗಗಳಲ್ಲಿ ಮುಂದುವರಿಯುವುವೆಂದು ಭಾವಿಸಿದ್ದೆನು. ಅವುಗಳ ವಿವರಗಳನ್ನು ಕೇಳುವುದಾಗಿಯೂ ನಿರೀಕ್ಷಿಸಿದ್ದೆನು. ಆದರೆ ಇದರಿಂದ ಹೆಚ್ಚು ಕಾರ್ಯಗಳೇನೂ ನಡೆಯುತ್ತಿಲ್ಲ. ಇನ್ನೂ ಸಾಧ್ಯವಿಲ್ಲದಿರುವುದಕ್ಕಾಗಿ ವಿಷಾದಿಸುವೆನು. ತಕ್ಕಷ್ಟು ಹಣವಿಲ್ಲದ ಕೊರತೆಯೇ ಇದಕ್ಕೆ ಮುಖ್ಯ ಕಾರಣವೆಂದು ತೋರುತ್ತದೆ. ಪರಸ್ಪರ ಸಹಾಯ ಸಂಘಗಳಿಂದ ಹಣವನ್ನು ಪಡೆಯಲು ಪ್ರೊವಿನ್ಷಿಯಲ್ ಇನ್‌ಸ್ಟಿಟ್ಯೂಟಿಗೆ ತುಂಬ ಪಕ್ಕಾದ ಪ್ರಶಸ್ತ ಸಂಗತಿಯನ್ನು ನಿಮ್ಮ ಗಮನಕ್ಕೆ ತರಲಿಚ್ಛಿಸುವೆನು. ಇದಕ್ಕೆ ಪ್ರತಿಯೊಂದು ಪರಸ್ಪರ ಸಹಾಯ ಸಂಘದಲ್ಲಿಯೂ ಕೂಡ ನೆಟ್ಟವು ಕಳೆದು ಉಳಿಯತಕ್ಕ ಮೊಬಲಗಿನ ಬಹು ಸ್ವಲ್ಪ ಭಾಗವು ಸಂದಾಯವಾಗುತ್ತ ಬಂದರೂ ಸಾಕು. ಇದರ ಸರ್ಕಾರ ಅನುಕೂಲತೆಯು ಆಗ್ಗೆ ಸ್ಪಷ್ಟವಾಗುವುದು. ಇದರ ಕಾರ್ಯಕಲಾಪಗಳೆಲ್ಲಾ ಸುಗಮವಾಗಿ ನಡೆಯುವುದಕ್ಕೆ ಆಗ್ಗೆ ತಪ್ಪದೆ ಅನುಕೂಲಿಸುವುದು. ಈ ರೀತಿ ಮಾಡಿದಲ್ಲಿ ಸರ್ಕಾರದವರ ಸಹಾಯವೇ ಇಲ್ಲದೆ ಖಾಸಗಿ ಪ್ರಯತ್ನದಿಂದಲೇ ಆಟ್ಟಕಟ್ಟಾಗಿಯೂ, ದಕ್ಷತೆಯಿಂದಲೂ, ಕಾರ್ಯಕಲಾಪಗಳನ್ನು ನಡೆಯಿಸುವ ಸಹಕಾರದ ಸೊಗಸಾದ ಶಿಸ್ತು ಆಶಯವಾದಂತಾಗುವುದು. ಹೀಗಾಗಬೇಕಾದುದೇ, ಈಗ ತೀರ ಅವಶ್ಯವಾಗಿ ನಡೆಯಬೇಕಾದ ಕೆಲಸ. ಈ ಭಾಗದಲ್ಲಿ ಇನ್ನೂ ಉತ್ತಮರೀತಿಯಲ್ಲಿ ಪುರೋಭಿವೃದ್ಧಿಯ ಪ್ರಯತ್ನಗಳು ನಡೆಯುವುದಾದರೆ ನನಗೆ ವಿಶೇಷ ಹರ್ಷವುಂಟಾಗುವುದು.

ಕೆಲವು ಭಾಗಗಳಲ್ಲಿ ತೀವ್ರವಾಗಿ ಕೆಲಸವು ನಡೆಯಬೇಕಾದುದು ಆವಶ್ಯಕವೆಂದೂ ಅವುಗಳನ್ನು ನಾನು ಸೂಚಿಸುವುದಾಗಿಯೂ ಮೊದಲೇ ತಿಳಿಸಿದೆನಷ್ಟೆ. ಇರ್ವಿನ್ ನಾಲೆಯಿಂದ ನೀರಾವರಿಯಾಗುವ ಪ್ರದೇಶದಲ್ಲಿ ಸಹಕಾರಕ್ರಮದ ಶಿಸ್ತನ್ನು ನೆಲೆಗೊಳಿಸಬೇಕಾದುದೇ ಇವುಗಳಲ್ಲಿ ಮೊದಲನೆಯದು. ಭಾರಿ ವಿಸ್ತೀರ್ಣದ ಭೂಪ್ರದೇಶವನ್ನು ನೀರಾವರಿ ಸಾಗುವಳಿಗೆ ತರುವುದಕ್ಕಾಗಿ ಸರ್ಕಾರದವರು ಬಹಳ ಹಣವನ್ನು ವೆಚ್ಚಮಾಡಿಯೂ, ಮಾಡುತ್ತಲೂ, ಇದ್ದಾರೆ. ಈ ಪ್ರದೇಶದಲ್ಲಿ ಶಾಸ್ತ್ರೀಯವಾಗಿ ಉತ್ತಮ ರೀತಿಯಲ್ಲಿ ವ್ಯವಸಾಯವು ನಡೆಯಬೇಕಾದುದು ಆವಶ್ಯಕ. ರೈತರು ಹೀಗೆ ಮಾಡದೇ ಹೋದರೆ, ಸರ್ಕಾರದವರು ಇಷ್ಟು ಭಾರಿ ಮೊಬಲಗನ್ನು ವೆಚ್ಚಮಾಡಿ ಏರ್ಪಡಿಸಿದ ನೀರಾವರಿ ಸೌಕರ್ಯಗಳಿಂದ ಅವರು ಪೂರ್ಣ ಪ್ರಯೋಜನವನ್ನೇ ಪಡೆದಂತಾಗುವುದಿಲ್ಲ. ವ್ಯವಸಾಯ ವಿಚಾರಗಳಲ್ಲಿ ಪರಿಣತರಾಗಿರುವ ವ್ಯವಸಾಯದ ಇಲಾಖೆಯ ಅಧಿಕಾರಿಗಳು ಈ ಪ್ರದೇಶದ ಭೂಗುಣ, ಉತ್ತಮ ರೀತಿಯಲ್ಲಿ ಸಾಗುವಳಿ ಮಾಡುವ ಬಗೆ ಮುಂತಾದುವುಗಳನ್ನು ಪರಿಶೀಲಿಸಿ ಸರ್ವೆ ಮಾಡಿದ್ದಾರೆ. ಈ ಪ್ರದೇಶದಲ್ಲಿ ಜಮೀನುಗಳನ್ನು 3-3 ಖಂಡಗಳಾಗಿ ವಿಂಗಡಿಸಿ ಸರದಿಯ ಮೇಲೆ ಅವುಗಳಲ್ಲಿ ಒಂದೊಂದರಲ್ಲಿಯೂ ಕ್ರಮಪ್ರಕಾರದ ರೀತಿಯಲ್ಲಿ ಬೆಳೆಯನ್ನಿಡುವ ತಾರತಮ್ಯ (ಬ್ಲಾಕ್ ಸಿಸ್ಟಂ) ಶಿಸ್ತನ್ನು ಆಚರಣೆಗೆ ತಂದಿದೆ. ಈ ವಿಚಾರವೆಲ್ಲಾ ನಿಮಗೆ ತಿಳಿದೇ ಇದೆ. ವಿಶೇಷ ವರಮಾನವನ್ನು ಕೊಡುವವಾಗಿ ಈ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ಬೆಳೆಯಬಹುದಾಗಿರುವ ಫಸಲುಗಳಲ್ಲಿ ಕಬ್ಬೇ ಮುಖ್ಯವಾದುದು. ಈ ಪ್ರದೇಶದಲ್ಲಿ ಶೀಘ್ರವಾಗಿಯೇ ಒಂದು ಸಕ್ಕರೆ ಕಾರ್ಖಾನೆಯನ್ನೂ ಏರ್ಪಡಿಸಬೇಕೆಂಬ ಉದ್ದೇಶವಿದೆ. ಕಬ್ಬನ್ನು ಬೆಳೆಯುವುದರಲ್ಲಿಯೂ, ಬೆಳೆದ ಕಬ್ಬಿನಿಂದ ಸಕ್ಕರೆಯನ್ನು ತಯಾರಿಸುವುದರಲ್ಲಿಯೂ ಸಹಕಾರ ವ್ಯವಸ್ಥೆಯಲ್ಲಿ ಕೆಲಸ ನಡೆಯುವಂತೆ ಏರ್ಪಡಿಸಿಕೊಳ್ಳುವುದು ಈ ಪ್ರದೇಶದ ರೈತರಿಂದ ಸಾಧ್ಯವಿದೆಯೆಂದು ನನಗೆ ತೋರುತ್ತದೆ. ಆದರೆ, ಸಕ್ಕರೆಯನ್ನು ತಯಾರಿಸುವ ವಿಷಯದಲ್ಲಿ ಮಾತ್ರ ಸದ್ಯದಲ್ಲೇನೋ ರೈತರು ತಾವೇ ನೇರ್ಪ ಭಾರ ವಹಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಆದರೂ, ನೀವುಗಳೇ ಇದನ್ನು ಕೂಡಲೆ ಕೈಕೊಂಡು ಕೆಲಸ ನಡೆಯಿಸಬೇಕೆಂದೂ ನಾನು ಹೇಳುವವನಾಗಿಲ್ಲ. ಆದಾಗ್ಯೂ, ನೀವುಗಳು ಈ ವಿಚಾರವನ್ನು ಗಮನದಲ್ಲೇನೋ ಇಟ್ಟುಕೊಂಡೇ ಇರುವಿರೆಂಬುದು ಮಾತ್ರ ನಾನು ನಂಬಿರುತ್ತೇನೆ. ಸಕ್ಕರೆ ಕೊಳ್ಳುವುದಕ್ಕೇನೋ ಸದ್ಯದಲ್ಲಿ ರೈತರಿಗೆ ಸಾಧ್ಯವಿಲ್ಲದಿರಬಹುದು. ಆದ್ದರಿಂದ, ಕಬ್ಬನ್ನು ಬೆಳೆಯುವುದಕ್ಕೂ ಮಾತ್ರ ಸಹಕಾರ ಕ್ರಮವನ್ನವಲಂಬಿಸಿ ರೈತರು ಉತ್ತಮವಾದ ವ್ಯವಸ್ಥೆಯಲ್ಲಿ ಏರ್ಪಾಡು ಮಾಡಿಕೊಳ್ಳಬೇಕಾದುದು ಅತ್ಯವಶ್ಯಕ. ಈ ವಿಚಾರದಲ್ಲಿಯೂ, ಹಾಗೆ ನಿರ್ಧರಿಸಿ ಮಾಡಿಕೊಳ್ಳುವುದಕ್ಕೆ ಬೇಕಾದ ಸಾಧ್ಯತೆಯೆಂಬ ವಿಚಾರದಲ್ಲಿಯೂ, ಸಂದೇಹವಾಗಲಿ, ಅನುಮಾನವಾಗಲಿ, ಇರಬಾರದು. [illegible] ಈ ವಿಷಯದಲ್ಲಿ ಮನೆಯಲ್ಲಿಯೇ [illegible] ಸರ್ಕಾರ ನಾಲಾ ಬಯಲಿನಲ್ಲಿ ಬಾರಿ ಬಾರಿ ನಿರ್ದಿಷ್ಟ ಪರಿಮಾಣಗಳನ್ನು ಪಡೆದಿರುವ ಸಹಕಾರದ ತತ್ವದಲ್ಲಿ ನಂಬುಗೆಯುಳ್ಳವರು. ಅವರು ಹೀಗೆ ಏರ್ಪಡಿಸುವ ಸಹಕಾರವ್ಯವಸ್ಥೆಯ ರೈತರು ಉತ್ತಮವಾದ ಕಬ್ಬನ್ನು ಬೆಳೆಯಲು ಆವಶ್ಯಕವಾದ ವ್ಯವಸಾಯದ ಬೀಜ, ಗೊಬ್ಬರ, ಸಾಧನ ಸಲಕರಣೆಗಳು, ಗೊಬ್ಬರ, ಕಬ್ಬಿನ ಬೀಜ, ಮುಂತಾದುವುಗಳನ್ನು ಒದಗಿಸಬೇಕು. ಅಲ್ಲದೆ ಹಾಗೆ ಬೆಳೆದ ಕಬ್ಬನ್ನು ಇರ್ವಿನ್ ನಾಲಾ ಪ್ರದೇಶದಲ್ಲಿ ಏರ್ಪಡಿಸಬೇಕೆಂದಿರುವ ಸಕ್ಕರೆಯ ಕಾರ್ಖಾನೆಗೆ ಯುಕ್ತವಾದ ಲಾಭಕ್ಕೆ ಮಾರುವ ಏರ್ಪಾಡನ್ನು ಮಾಡಬೇಕು. ಈ ಭಾಗದಲ್ಲಿ ನೀವುಗಳು ತಕ್ಕಂತೆ ಒಂದು ಉತ್ತಮವಾದ ಕಾರ್ಯಕ್ರಮವನ್ನು ಅಣಿಮಾಡುವುದು ಮೇಲೆಂದು ತೋರುತ್ತದೆ.

ಪ್ರತಿನಿಧಿಗಳಿಂದ ಪ್ರತಿಪಾದಿಸಲ್ಪಡುವ ವಿಷಯಗಳ ಸಂಖ್ಯೆಯು ಅಧಿಕವಾಗಿರುವುದಾದರೂ ಅವುಗಳ ವಿಮರ್ಶೆಗಾಗಿ ಕೊಡಲ್ಪಡುವ ಕಾಲ ವ್ಯವಧಾನವು ಬಹಳ ಕಡಿಮೆಯಾಗಿರುವುದು ಸಭಾ ನಡವಳಿಕೆಯಲ್ಲಿ ದೊಡ್ಡ ಕೊರತೆಯಾಗಿರುವುದು. ಈ ವೇಳೆ ಪ್ರತಿಪಾದಿಸಲ್ಪಟ್ಟಿದ್ದ 200 ವಿಷಯಗಳಲ್ಲಿ 30-40 ವಿಷಯಗಳು ಸಹ ಚರ್ಚೆಗೆ ಬರಲವಕಾಶವಾಗಲಿಲ್ಲ. ಇವುಗಳ ಚರ್ಚೆಗಾಗಿ ಪ್ರತಿ ದಿವಸವು ಗೊತ್ತುಮಾಡಲ್ಪಟ್ಟಿದ್ದ ಅರ್ಧ ಘಂಟೆಯ ಕಾಲವು ಸುತರಾಂ ಸಾಲದುದಾಗಿದ್ದಿತು. ನಿರ್ಧಾರಗಳನ್ನು ಪರ್ಯಾಲೋಚಿಸಲು 2 ದಿವಸಗಳ ಕಾಲ ವಿನಿಯೋಗಿಸಲ್ಪಟ್ಟಿದ್ದಾಗ್ಯೂ ಕಾಲು ಭಾಗವು ಸಹ ನಡೆಯಲು ವ್ಯವಧಾನವಾಗಲಿಲ್ಲ. ಕೋರಿಕೆಗಳ ವಿಚಾರದಲ್ಲಿ ಗ್ರಾಮಾಂತರಗಳ ಮೆಂಬರುಗಳು ವಿಶೇಷ ಕುತೂಹಲವುಳ್ಳವರಾಗಿದ್ದರೂ ಹತ್ತನೆಯೊಂದು ಭಾಗಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳಲ್ಪಡಲಿಲ್ಲ. ಮೆಂಬರುಗಳಿಂದ ತರಲ್ಪಡುವ ವಿಷಯಗಳ ಚರ್ಚೆಯು ಬಹಳ ಪ್ರಾಮುಖ್ಯವಾಗಿದ್ದರೂ ಮತ್ತು ಆದರಿಂದ ಪ್ರಭುತ್ವಕ್ಕೆ ಸಂಬಂಧಪಟ್ಟ ವಿಷಯಗಳ ಪರ್ಯಾಲೋಚನೆಗೆ ಯಾವುದೂ ಪ್ರತಿಬಂಧಕವಿಲ್ಲದಿದ್ದರೂ, ಅನ್ಯರ ಕೆಗಾಗಿ ಗೊತ್ತುಮಾಡಲ್ಪಟ್ಟಿರುವ ಕಾಲ ವ್ಯವಧಾನವನ್ನು ಪ್ರಭುತ್ವ ವಿಷಯಗಳ ಪರ್ಯಾಲೋಚನೆಗಾಗಿ ಉಪಯೋಗ ಮಾಡುವುದು ಯುಕ್ತವಾಗಿರುವುದಿಲ್ಲವಷ್ಟೆ. ನಿರಂತರವಾಗಿ ಈ ವಿಚಾರದಲ್ಲಿ ದೂರು ಹೇಳುತ್ತಿರುವುದರಿಂದ ಮೆಂಬರುಗಳಿಂದ ತರಲ್ಪಡುವ ವಿಷಯಗಳ ಪರ್ಯಾಲೋಚನೆಗೆ ಸಾಕಷ್ಟು ಕಾಲ ವ್ಯವಧಾನವನ್ನು ಕಲ್ಪಿಸುವ ಬಗ್ಗೆ ಒಂದು ಸ್ಪೆಷಲ್ ಕಮಿಟಿಯನ್ನು ಪ್ರಭುತ್ವದವರು ನೇಮಿಸುವುದು ಯುಕ್ತವೆನ್ನು. ಈ ವೇಳೆ ಪ್ರಭುತ್ವದವರ ಕಾರ್ಯಕಲಾಪವು ವಿಶೇಷವಾಗಿರಲಿಲ್ಲ. ಸಹಕಾರ ಸಂಘಗಳ ಅಕ್ರಮ ಆಡಳಿತ, ಲೆಕ್ಕ ಪರಿಶೋಧನೆ, ಮೇಲ್ವಿಚಾರಣೆ, ಆರ್ಡರಿಗೆ ಮೊದಲು ಜಪ್ತಿ ಮಾಡುವುದು, ಇವುಗಳ ವಿಚಾರವಾಗಿಯೂ, ಜಮೀನುಗಳಭಿವೃದ್ಧಿಗಾಗಿ ಸಾಲವನ್ನು ಕೊಡಲೇರ್ಪಟ್ಟಿರುವ ಅಡಮಾನ ಬ್ಯಾಂಕುಗಳ ಉದ್ದೇಶಗಳನ್ನು ವಿಸ್ತರಿಸುವುದಕ್ಕಾಗಿಯೂ ತರಲ್ಪಟ್ಟಿದ್ದ ಬಿಲ್ಲು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿತು. ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟನ್ನು ತೆಗೆದುಹಾಕಬೇಕೆಂಬ ಬಿಲ್ಲು ಬಹಳ ತೀಕ್ಷ್ಣವಾಗಿ ಚರ್ಚಿಸಲ್ಪಟ್ಟು ಯೂರೋಪಿಯನ್ ಕಾಫಿ ಪ್ಲಾಂಟರುಗಳು ಈ ಆಕ್ಟನ್ನು ತೆಗೆಯಕೂಡದೆಂದು ಬಲವಾಗಿ ವಾದಿಸಿದರಾದರೂ, ದೊಡ್ಡ ಕಾಫಿ ತೋಟಗಾತಿಯರೂ ಅನುಭವಸ್ಥೆಯರೂ ಆದ ಶ್ರೀಮತಿ ಸಾಕಮ್ಮನವರ ಅಭಿಪ್ರಾಯಾನುಸಾರವಾಗಿ ಆಕ್ಟು ತೆಗೆಯಲ್ಪಡಬೇಕೆಂಬ ಬಿಲ್ಲು ಬಹುಮತದಿಂದ ಅನುಮೋದಿತವಾಯಿತು. ಮ|| ಡಿ ಎಸ್ ಮಲ್ಲಪ್ಪನವರಿಂದ ತರಲ್ಪಟ್ಟಿದ್ದ ವ್ಯಭಿಚಾರ ನಿರೋಧಕ ಬಿಲ್ಲಿನ ವಿಚಾರವಾಗಿ ಅನುಕೂಲ ಪ್ರತಿಕೂಲ ಪಕ್ಷದವರ ವಾದವು ಒಂದು ದಿನವೆಲ್ಲ ಬಹಳ ತೀಕ್ಷ್ಣವಾಗಿ ನಡೆದಿತು. ಚಿಕ್ಕ ಹುಡುಗಿಯರು ವ್ಯಭಿಚಾರವೃತ್ತಿಗೆ ಬಿದ್ದು ಅದರಿಂದ ಜೀವನ ಹೊರೆಯುವಂತೆ ಪ್ರಚೋದಿಸಲ್ಪಡುವುದನ್ನು ತಪ್ಪಿಸಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲದಿದ್ದಾಗ್ಯೂ, ಈ ಕೃತ್ಯವನ್ನು ತಡೆಯಲು ಪಿನಲ್ ಕೋಡಿನಲ್ಲೂ, ಮ್ಯುನಿಸಿಪಲ್ ಮತ್ತು ಪೊಲೀಸು ರೆಗ್ಯುಲೇಷನ್ನುಗಳಲ್ಲೂ ಅವಕಾಶವು ಕಲ್ಪಿಸಲ್ಪಟ್ಟಿರುವಾಗ್ಗೆ ಹೊಸದಾಗಿ ಒಂದು ವಿಧಿಯನ್ನು ಮಾಡುವುದರಿಂದ ಪೊಲೀಸಿನವರಿಗೆ ಹೆಚ್ಚು ಅಧಿಕಾರವು ಬಂದು ಜನರಿಗೆ ವಿಶೇಷ ತೊಂದರೆಯನ್ನೂ ಕಿರುಕುಳವನ್ನೂ ಉಂಟುಮಾಡಿದಂತಾಗುವುದಲ್ಲದೆ ಪ್ರಚೋದಕರ ಸೆರೆಯಿಂದ ಬಿಡಿಸಲ್ಪಟ್ಟ ಹುಡುಗಿಯರಿಗೆ ಪ್ರತ್ಯೇಕ ರಕ್ಷಣಾಲಯಗಳಿಲ್ಲದಿರುವ ಪ್ರಯುಕ್ತ ಅನ್ಯಮಾರ್ಗಾವಲಂಬನೆಗೆ ಅವಕಾಶವನ್ನು ಕಲ್ಪಿಸಿದಂತಾಗುವುದರಿಂದ ನೂತನ ಶಾಸನಾವಶ್ಯಕತೆಯಿಲ್ಲವೆಂದು ಬಹುಮತದಿಂದ ಬಿಲ್ಲು ಅನಂಗೀಕೃತವಾಯಿತು. ರಾಜಧಾನಿಯ ಸಂತೇಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರ ದೇವಸ್ಥಾನದಲ್ಲಿ ಬ್ರಾಹ್ಮಣೇತರರು ಪುರಾಣವನ್ನೋದುವುದರ ಮೇಲೆ ಗೊಂದಲವೆದ್ದು ಮುಜರಾಯಿ ದೇವಸ್ಥಾನಗಳಲ್ಲಿ ಬ್ರಾಹ್ಮಣೇತರರು ಪುರಾಣವನ್ನೋದಕೂಡದೆಂದು ಹೊಸದಾಗಿ ಮಾಡಲ್ಪಟ್ಟಿರುವ ಆಜ್ಞೆಯ ವಿಚಾರವಾಗಿ ಸಭೆಯಲ್ಲಿ ಬಹಳ ಖಂಡನೆಯು ನಡೆದಿತಾದರೂ ಪ್ರಭುತ್ವದವರು ತಕ್ಕ ಸಮಾಧಾನವನ್ನು ಕೊಡದೆ, ದೇವಸ್ಥಾನಗಳ ಆಗಮಿಕರ ಅಭಿಪ್ರಾಯವನ್ನನುಸರಿಸಿ ಈ ನಿರ್ಬಂಧ ಕಲ್ಪಿಸಲ್ಪಟ್ಟಿರುವುದಾಗಿ ಹೇಳಿ ಭಾರವನ್ನೆಲ್ಲ ಬ್ರಾಹ್ಮಣ ಆಗಮಿಕರ ತಲೆಯ ಮೇಲೆ ಹೊರಿಸಿಬಿಟ್ಟು ತಾವು ನುಣಿಚಿಕೊಂಡರು. ಈ ನಾಗರಿಕ ಕಾಲದಲ್ಲಿ ಅದರಲ್ಲೂ ಅಸ್ಪೃಶ್ಯರ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಕಲ್ಪಿಸಲ್ಪಡುತ್ತಿರುವ ಕಾಲದಲ್ಲಿ ಈ ರೀತಿ ಬ್ರಾಹ್ಮಣೇತರರ ಪುರಾಣ ಪಠನಕ್ಕೆ ನಿರೋಧವನ್ನು ಕಲ್ಪಿಸಿರುವುದು ಬಹಳ ಸುಧಾರಿಸಿದ ನಮ್ಮ ಪ್ರಭುತ್ವದವರಿಗೆ ಅನುಚಿತವೂ ಲಜ್ಜಾಸ್ಪದವೂ ಆಗಿರುತ್ತದೆ. ಇಂತಹ ನಿರ್ಬಂಧಕ್ಕೆ ತಾವೆಡೆಗೊಡುವುದಿಲ್ಲವೆಂದು ಪ್ರಭುತ್ವದವರು ಸಂಕೋಚವಿಲ್ಲದೆ ಹೇಳಿದ್ದರೆ ಅವರಿಗೆ ಭೂಷಣವಾಗಿರುತ್ತಿದ್ದಿತು. ಈ ನಿರ್ಬಂಧವು ಅನರ್ಥಕ್ಕೆ ಕಾರಣವಾಗಿರುವುದೆಂದು ಹೇಳಬೇಕಾಗಿಲ್ಲ. ಭೂಗಂದಾಯವನ್ನು ವಿಧಿಸುವ ರೀತಿಯನ್ನು ಪುನರ್ವಿಮರ್ಶಿಸುವುದಕ್ಕಾಗಿ ಒಂದು ಕಮಿಟಿಯೇರ್ಪಡಿಸಲ್ಪಡಬೇಕೆಂದು ಮೆಂಬರುಗಳು ತಂದಿದ್ದ ರೆಜ್ಯುಲೇಷನ್ನು ಏಕವಾಕ್ಯದಿಂದ ಅನುಮೋದಿತವಾಯಿತು. ಭೂಗಂದಾಯದ ದರವು ನ್ಯಾಯವಿಧಾಯಕ ಸಭೆಯ ಅನುಮೋದನವಿಲ್ಲದೆ ಹೆಚ್ಚಿಸಲ್ಪಡಕೂಡದೆಂಬುದು ಮುಖ್ಯೋದ್ದೇಶವು. ಇದು ಹಿತಕರವಾದ ಸೂಚನೆಯಾಗಿದ್ದಿತಾದರೂ ನಿರೀಕ್ಷಿಸಿದ್ದಂತೆಯೇ ಪ್ರಭುತ್ವದವರಿಗೆ ಮಾತ್ರ ಸಮ್ಮತವಾಗಿರಲಿಲ್ಲ. ಧಾನ್ಯದ ಬೆಲೆಯು ಅತ್ಯಂತ ಕಡಿಮೆಯಾಗಿರುವ ಪ್ರಯುಕ್ತ ಕಂದಾಯವು ಶೇಕಡ 12½ ರಿಂದ 25 ಕ್ಕಿಳಿಸಲ್ಪಡಬೇಕೆಂಬ ರೆಜ್ಯುಲೇಷನ್ನು ಸರ್ವಾನುಮತದಿಂದ ಪ್ಯಾಸಾಯಿತು. ಭಾರತ ದೇಶದ ಇತರ ಕಡೆಗಳಲ್ಲಿ ಕಂದಾಯವಿಳಿಸಲ್ಪಟ್ಟಿರುವುದಾದರೂ ನಮ್ಮ ಪ್ರಭುತ್ವದವರ ಮನಸ್ಸು ಮಾತ್ರ ಕರಗದೆ ವಜ್ರದಷ್ಟು ಕಠಿಣವಾಗಿದ್ದಿತು. ಇಂತಿಂತಹ ಬೀದಿಗಳಲ್ಲಿ ಇಂತಿಂತಹ ಜಾತಿಯವರು ಉತ್ಸವದಲ್ಲಿ ಹೋಗಬೇಕೆಂಬ ನಿರ್ಬಂಧವಿರುವುದರಿಂದ ಮನುಷ್ಯನ ಸ್ವಭಾವಸಿದ್ಧವಾದ ಹಕ್ಕಿಗೆ ಕುಂದಕವಾಗಿರುವುದಲ್ಲದೆ ಪರಸ್ಪರ ಕಲಹದಿಂದ ಅನರ್ಥಗಳಿಗೆ ಅವಕಾಶವಾಗಿರುತ್ತದೆ. ಆದಪ್ರಯುಕ್ತ ಎಲ್ಲ ರಾಜ ಬೀದಿಗಳಲ್ಲೂ ಸರ್ವಜಾತಿ ಮತಸ್ಥರೂ ಯಾವ ತಾರತಮ್ಯವೂ ಇಲ್ಲದೆ ಉತ್ಸವದಿಂದ ಹೋಗುವಂತೆ ಮಾಡಬೇಕೆಂಬ ಬಗೆಗೆ ತರಲ್ಪಟ್ಟಿದ್ದ ರೆಜ್ಯುಲೇಷನ್ನಿನ ವಿಚಾರವಾಗಿ ಅನುಕೂಲವಾಗಿಯೂ ಪ್ರತಿಕೂಲವಾ

...ಮೂಹ ಚರ್ಚೆಗಳು ನಡೆದು ಪೆಟ್ಟು ಸಂಸ್ಥೆಯ ಮೇಲ್ಮಂಡಳಿಗಳು ...ರಾದರೂ ಸ್ವಪಕ್ಷದವರ ಆಕ್ಷೇಪಣೆಗಳು ಮಾತ್ರ ... ಇದರಿಂದ ಪ್ರಯೋಜನವಿಲ್ಲ. ... ಬರುವ ಪ್ರತಿಯೊಂದು ನಿರ್ಣಯವೂ ... ಆಧಿಕಾರಕ್ಕೆ ... ಅನುಚಿತವೂ ಆಗಿರುವುದು.

ಮೈಸೂರು ವಸ್ತು ಪ್ರದರ್ಶನ

ರಾಜಧಾನಿಯಲ್ಲಿ ದಸರಾಮಹೋತ್ಸವ ಸಂಬಂಧವಾಗಿ ನಡೆಯುವ ಯಾವದ್ಭಾರತವಸ್ತು ಪ್ರದರ್ಶನವು ಈವೇಳೆ ೧೫ ದಿವಸಗಳವರೆಗೆ ನಡೆದಿತು. ಪ್ರೇಕ್ಷಕರ ಸಂಖ್ಯೆಯೂ ಅನುಕೂಲವಾಗಿದ್ದಿತು. ಬಹಳ ಕೈಗಾರಿಕೆಯ ಶಾಲೆಯಲ್ಲಿ ಬಹಳ ರಮಣೀಯವೂ ಕೌಶಲ್ಯಪ್ರದರ್ಶಕವೂ ಆದ ನಾನಾ ಬಣ್ಣದ ಚಿತ್ರಗಳಿಂದ ತಯಾರಿಸಲ್ಪಟ್ಟ ಚಿಟ್ಟಿ, ಲೋಟ, ತಂಬಿಗೆ ಪಾನಪಾತ್ರೆ ಮೊದಲಾದ ಹಿತ್ತಾಳೆಯ ಪದಾರ್ಥಗಳು ... ಯವಾಗಿದ್ದು ಚೆನ್ನಾಗಿ ಮಾರಾಟವಾದುವು. ಸ್ವದೇಶೀ ಸಾಮಾನು, ಸುಗಂಧದ್ರವ್ಯಗಳು, ಬಣ್ಣದ ಸಾಮಾನುಗಳು, ಸ್ತ್ರೀ ಪುರುಷರು ಉಪಯೋಗಿಸುವ ವಸ್ತ್ರಗಳೂ ಒಸ್ತತ್ತು ಮೊದಲಾದ ತಿಂಡಿ ಪದಾರ್ಥಗಳೂ ಇತರ ನಾನಾ ವಿಧ ವಸ್ತುಗಳೂ ಬಂದಿದ್ದುವು. ಇವುಗಳ ಬೆಲೆಯಾಗಲಿ ... ಮಾರಾಟಕ್ಕೆ ಕಾರಣವಾಗಿರದೆ ಒಳ್ಳೆ ಸ್ವದೇಶಾಭಿಮಾನವೇ ಮುಖ್ಯ ಕಾರಣವಾಗಿದ್ದಿತು. ಒಂದೊಂದು ಪದಾರ್ಥಗಳಿಗೆ ಅವುಗಳ ಯೋಗ್ಯತಾನುಸಾರ ಬೆಳ್ಳಿ, ಬಂಗಾರ ಪದಕಗಳೂ ಯೋಗ್ಯತಾ ಪತ್ರಗಳೂ ಎರಡನೆಯ ಕೌನ್ಸಿಲರ್ ಮ|| ಕೆ ... ರವರಿಂದ ಕೊಡಲ್ಪಟ್ಟುವು. ... ಇಂಡಿಯಾ ... ಕಂಪೆನಿಯವರು ಪ್ರದರ್ಶಿಸಿದ ... ಗಳಲ್ಲಿ ವಿಲಾಯಿತಿ ... ಬಂಗಾರದ ಪದಕವು ಕೊಡಲ್ಪಟ್ಟಿತು. ಪ್ರತಿ ವರ್ಷದಲ್ಲೂ ಈ ವಸ್ತುಪ್ರದರ್ಶನವನ್ನು ನಡೆಸುವುದರಿಂದ ನೂತನ ಪದಾರ್ಥಗಳನ್ನು ಮಾಡಲಿಕ್ಕೆ ವ್ಯವಧಾನವೂ ಅನುಕೂಲವೂ ಇರುವುದಿಲ್ಲವಾದುದರಿಂದ ಹಳೆಯ ಪದಾರ್ಥಗಳೇ ಪ್ರತಿವೇಳೆಯೂ ಪ್ರದರ್ಶಿಸಲ್ಪಡುವುವು. ಆದುಕಾರಣ ೩ ವರ್ಷಕ್ಕೊಮ್ಮೆ ಪ್ರದರ್ಶನವು ನಡೆಸಲ್ಪಡುವುದಾದರೆ ಕೈಗಾರಿಕೆಯ ಜನರಿಗೆ ಹೊಸವಸ್ತುಗಳನ್ನು ಮಾಡಲು ಅವಕಾಶವೂ ಅನುಕೂಲವೂ ಉಂಟಾಗುವುದಲ್ಲದೆ ಪ್ರೇಕ್ಷಕರಿಗೆ ನವೀನವಸ್ತುಗಳನ್ನು ನೋಡಲು ಕುತೂಹಲವೂ ಹುಟ್ಟಿ ಪ್ರದರ್ಶಕರಿಗೆ ಆದಾಯವು ಹೆಚ್ಚುವುದು. ಇದನ್ನು ಪ್ರಭುತ್ವದವರು ಪರ್ಯಾಲೋಚಿಸಬೇಕು.

ಅಖಿಲಭಾರತ ವೀರಶೈವ ಮಹಾಸಭೆ

ಈ ಮಹಾಸಭೆಯ ೧೧ ನೇ ಅಧಿವೇಶನವು ... ಡಿಸೆಂಬರ್ ತಾ|| ೨೯ ನೆಯ ಗುರುವಾರ ಮತ್ತು ... ಶುಕ್ರವಾರ ಧಾರವಾಡದಲ್ಲಿರುವ ಲಿಂಗಾಯತ ... ನಲ್ಲಿ ಜರುಗುವಂತೆ ಈ ಮಹಾಸಭಾ ಕಾರ್ಯಕಾರೀ ಮಂಡಲಿಯವರಿಂದ ನಿರ್ಧರಿಸಲ್ಪಟ್ಟಿರುವುದಾಗಿ ಈ ಪತ್ರಿಕೆಯ ... ಪ್ರಕಟವಾಗಿರುವ ಪ್ರಸಿದ್ಧ ಪತ್ರಿಕೆಯಿಂದ ವ್ಯಕ್ತವಾಗುತ್ತದೆ. ಈ ಮಹಾಸಭೆಯ ಅಧ್ಯಕ್ಷತೆಯನ್ನು ... ಯ ಮತ್ತು ಶಿವಾನುಭವ ... ಸಂಪಾದಕರೂ ಕರ್ನಾಟಕ ಭಾಷಾ ... ಸಮಾಜಾಭಿವೃದ್ಧಿಗಾಗಿ ತ್ರಿಕರಣಪೂರ್ವಕ ... ನವರೂ, ಆಗೋಚರವಾಗಿದ್ದ ... ಪ್ರಚುರಪಡಿಸಿಯೂ ... ಮಹೋಪಕಾರವನ್ನು ಮಾಡುತ್ತಿರುವವರೂ ... ಜನನ್ನು ದಹಿಸುತ್ತಿರುವ ಗುರುಬಸವ ... ನಿಷ್ಪಕ್ಷಪಾತದಿಂದ ವರ್ತಿಸುವವರೂ ... ಹಳಕಟ್ಟಿ, ಬಿ. ಎ., ಎಲ್. ಎಲ್. ಬಿ. ಇವರು ವಹಿಸುವುದರಿಂದ ಮಹಾಸಭೆಯು ಸುಲಲಿತವಾಗಿಯೂ ... ನಾಗಿಯೂ ಫಲಪ್ರದವಾಗಿಯೂ ನಡೆಯುವುದೆಂದು ... ಸುತ್ತೇವೆ.

ಅಂಬೇಡ್ಕರು ಮಹಾತ್ಮರ ದರ್ಶನ ಮಾಡಿದರು

ಕಳೆದ ಸೋಮವಾರ ರಾತ್ರಿ ಡಾಕ್ಟರ್ ಅಂಬೇಡ್ಕರವರು ಪೂನಾ ಎರವಾಡಾ ಜೈಲಿಗೆ ಹೋಗಿ ಮಹಾತ್ಮರ ದರ್ಶನವನ್ನು ತೆಗೆದುಕೊಂಡು ಅಸ್ಪೃಶ್ಯತಾ ನಿರ್ಮೂಲನ ವಿಚಾರವಾಗಿ ಸಂಭಾಷಿಸಿ ಬಂದರು. ಅಂಬೇಡ್ಕರು ರೌಂಡುಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿರುವುದರಿಂದ ಕೂಡಲೆ ಲಂಡನ್ನಿಗೆ ಪ್ರಯಾಣ ಮಾಡುವರು. ಇವರು ಮಹಾತ್ಮರ ಸಂದರ್ಶನ ಕಾಲದಲ್ಲಿ ನಡೆದ ವಿಚಾರವನ್ನು ಕುರಿತು ಪತ್ರಿಕಾಪ್ರತಿನಿಧಿಯೊಡನೆ ಪ್ರಸ್ತಾಪಿಸುವಾಗ್ಗೆ "ಒಟ್ಟೇ ಆಡಳಿತದಿಂದ ಪ್ರಯೋಜನವಿಲ್ಲ. ಅಸ್ಪೃಶ್ಯತಾ ನಿವಾರಣ ಸಂಘದವರು ಹರಿಜನರ ಆರ್ಥಿಕಸ್ಥಿತಿಯನ್ನೂ, ವಿದ್ಯಾ ಸೌಕರ್ಯವನ್ನೂ, ಸಾಂಘಿಕ ಮರ್ಯಾದೆಯನ್ನೂ ವೃದ್ಧಿಗೊಳಿಸಲು ಬಲವಾದ ಪ್ರಯತ್ನವನ್ನು ಮಾಡಬೇಕು. ದೇವಾಲಯ ಪ್ರವೇಶವೂ ಸಹಪಂಕ್ತಿ ಭೋಜನವೂ ಒಳ್ಳೇ ಆಸಂಬದ್ಧವಲ್ಲವೆ. ಹರಿಜನರು ಬಾವಿಗಳನ್ನು ಉಪಯೋಗಿಸಲಿಕ್ಕೂ ಅವರ ಮಕ್ಕಳು ಪಾಠಶಾಲೆಗಳಿಗೆ ಹೋಗಲಿಕ್ಕೂ ಇರುವ ಅಭ್ಯಂತರವನ್ನು ತಪ್ಪಿಸಲು ಪ್ರಜೆಗಳಲ್ಲಿ ... ಎಂದು ಹೇಳಿದರು.

ಅಸ್ಪೃಶ್ಯರಿಗೆ ಸಹಪಂಕ್ತಿ ಭೋಜನವು ಬೇಕೆ?

'ಹರಿಜನರ ಸಹಪಂಕ್ತಿಯಲ್ಲಿ ಭೋಜನ ಮಾಡಬೇಕೇನು?'

... ಯರವಾಡಾದಿಂದ ... ಮಹಾತ್ಮರಿಗೆ ಬರೆದಿದ್ದ ... ಈ ಪ್ರಶ್ನೆಯನ್ನು ಕೇಳಿದ್ದರು. ... ಅವರು ... ಗಾಂಧಿಯವರು ... ವ್ಯಕ್ತಿ ಸ್ವಾತಂತ್ರ್ಯ ... ಗೆಳೆಯರೊಡನೆ ಯಾವ ಸಂಬಂಧವಿರುವುದೋ ಹರಿಜನರೊಡನೆ ಅದೇ ಸಂಬಂಧವಿರಬೇಕು. ಹೊರ್ದ್ಯಾದಿಗಳೊಡನೆ ಸಮಾನವಾಗಿ ಹರಿಜನರನ್ನು ಕಾಣಬೇಕು. ಹಿಂದೂಗಳ ದೇವಾಲಯ ದೊಳಕ್ಕೆ ಬರಗೊಡುತ್ತಿರುವಂತೆಯೇ ಹರಿಜನರನ್ನು ದೇವಾಲಯ, ಪಾಠಶಾಲೆ ಮೊದಲಾದ ಎಲ್ಲಾ ಸ್ಥಳಗಳಿಗೆ ಬರಗೊಡಬೇಕು. ಅಸ್ಪೃಶ್ಯರೂ ಹರಿಜನರೂ ಕೂಡಿ ಊಟಮಾಡುವುದು ಅಸ್ಪೃಶ್ಯತಾ ನಿವಾರಣೆಗೆ ಮುಖ್ಯ ವಿಷಯವಲ್ಲ. ಇಷ್ಟಪಟ್ಟವರು ಮಾಡಬಹುದು. ಇಲ್ಲದವರು ಬಿಡಬಹುದು. ... ಸಂಪ್ರದಾಯವನ್ನನುಸರಿಸಿ ... ನಾನು ... ತಿನ್ನುತ್ತಿರುವ ಪದಾರ್ಥವನ್ನು ಇತರರು ... ತಿನ್ನಬಹುದು ... ನಾನು ನಂಬಿರುತ್ತೇನೆ ಎಂದು ... ಯವು.

ಮಿಸ್ ಸ್ಲೇಡ್ ಕನ್ಯೆಯ ಉಪನ್ಯಾಸ

ಈಗ ಭಾರತದೇಶ ಸಂಚಾರಮಾಡುತ್ತಿರುವ ಇಂಡಿಯಾ ಲೀಗು ಪ್ರತಿನಿಧಿಗಳು ದಿಲ್ಲಿಯಲ್ಲಿ ಒಪ್ಪಬ್ಯಾಂಕಿನ ವಿದ್ಯಾರ್ಥಿಗಳ ಸಭೆಗೆ ಹೋಗಿದ್ದ ವೇಳೆಯಲ್ಲಿ ಅಧ್ಯಕ್ಷರ ... ಮಿಸ್ ಸ್ಲೇಡ್ ಕನ್ನೆಯು ಈ ಪ್ರಕಾರ ಉಪನ್ಯಾಸ ಮಾಡಿದರು. 'ನಾನು ನಾರತದೇಶಕ್ಕೆ ಬರುತ್ತಲೆ ... ಭಾರತೀಯರಲ್ಲೂ ಪ್ರಭುತ್ವದವರಲ್ಲಿ ಭಕ್ತಿಯುಳ್ಳವರಾಗಿರುತ್ತಾರೆಂದು ... ಉದ್ಯೋಗಿಯು ಹೇಳಿದರು. ಭಾರತೀಯರೊಳಗೆ ... ಉತ್ತಮರಾದವರನ್ನು ನೋಡುವುದೆಂತು ಎಂದು ನಾನು ಕೇಳಿದೆನು. ನನ್ನ ಪರ್ಯಟನದ ಉದ್ದೇಶವೇನೆಂದರೆ ... ಇಂಗ್ಲೆಂಡ್ ಸಂಬಂಧವಾಗಿ ... ಪರಿಸ್ಥಿತಿಗಳನ್ನು ... ನೋಡಿ ... ತಿಳಿದುಕೊಳ್ಳುವುದಕ್ಕಾಗಿ ಬಂದಿರುತ್ತೇನೆ. ಸ್ವದೇಶಕ್ಕೆ ಹೋದಮೇಲೆ ಇಲ್ಲಿನ ಸ್ಥಿತಿಗತಿಗಳನ್ನು ಅಂಗ್ಲಪ್ರಜೆಗಳಿಗೆ ... ಭಾರತೀಯರು ಸ್ವಾತಂತ್ರ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆಂದು ಅವರ ಮುನ್ನಿಗೆ ಹಿಡಿಯುವಂತೆ ಹೇಳುವೆನು. ... ಭಾರತ ... ಹೊಂದುವುದಕ್ಕೆ ಸಹಾಯಮಾಡಬೇಕೆಂದಿದ್ದೇನೆ. ಉತ್ತಮರಾದ ... ಸಹಾಯ ... ನಮಗೆ ... ಜಾತಿಯು ಮತ್ತೊಂದು ಜಾತಿಯನ್ನು ಹೇಗೆ ಆಗಿಸುವುದೋ ನನಗೆ ... ತಿಳಿಯದು. ಭಾರತ ದೇಶವೂ ಇಂಗ್ಲೆಂಡ್ ವಿಶ್ವಾಸ ... ಯುಂಟಾಗುವಂತೆ ಪ್ರಯತ್ನಿಸುವೆನು.'

ಸರ್ ಇಕ್ಬಾಲರವರ ಅಭಿಪ್ರಾಯ

ಮಹಮ್ಮದ್ ಇಕ್ಬಾಲರವರು ಮೂರನೆಯ ರೌಂಡ ಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿರುವುದರಿಂದ ಕಳೆದ ಗುರುವಾರ ಮೊಂಬಾಯಿನಲ್ಲಿ ಹಡಗನ್ನು ಹತ್ತಿ ಲಂಡನ್ನಿಗೆ ಪ್ರಯಾಣಮಾಡಿದರು. ಸಮಯದಲ್ಲಿ ಹಿಂದು ಮಹಮ್ಮದೀಯ ಸಮಸ್ಯೆಯನ್ನು ... ಈ ಪ್ರಕಾರವಾಗಿ ಹೇಳಿದರು—'ಪ್ರಕೃತ ಸ್ಥಿತಿಯಲ್ಲಿ ... ದೇಶದ ಮಹಮ್ಮದೀಯರು ಪ್ರತ್ಯೇಕ ... ಒನ್ನು ಬಿಡರು ... ನಾಯಕರಿಗೆ ಸಡೆದಿರುವ ... ಯು ಜಯಪ್ರದವಾಗಿ ... ಸಂದೇಹವು ನನಗುಂಟಾಗಿದೆ. ಅಖಿಲ ಭಾರತ ಮಸ್ಲೀಂ ಸಭೆಯವರೂ ಅಖಿಲಭಾರತ ಮುಸ್ಲೀಂ ಸಮಿತಿಯವರೂ ಮಾಡಿರುವ ತೀರ್ಮಾನವನ್ನು ಮಹಮ್ಮದೀಯರು ಒಪ್ಪಲಾರರು ... ನಾನು ನಂಬುತ್ತೇನೆ. ಪ್ರತ್ಯೇಕ ಚುನಾವಣೆಯ ... ಜಾತೀಯತೆಗೆ ಭಂಗಕಾರಕವೆಂದು ಹೇಳುವವರ ವಾದಯುಕ್ತಿಯನ್ನು ನಾನೊಪ್ಪುವುದಿಲ್ಲ. ಭಾರತ ದೇಶದ ಸ್ಥಿತಿಗತಿಗಳೂ ಪಾಶ್ಚಾತ್ಯ ದೇಶಗಳ ಸ್ಥಿತಿಗತಿಗಳೂ ವ್ಯತ್ಯಾಸವಾಗುತ್ತವೆ. ಆದಕಾರಣ ಅಲ್ಲಿಯ ಪ್ರಜಾಪ್ರಭುತ್ವ ... ಇಲ್ಲಿಗೆ ಉಪಯೋಗ ... ಮಹಮ್ಮದೀಯರು ಹೇಳುವ ಮಾತನ್ನು ನಾನು ಅಂಗೀಕರಿಸುತ್ತೇನೆ. ಹಿಂದುಗಳೂ ಮಹಮ್ಮದೀಯರೂ ಪರಸ್ಪರ ಇರುವ ಹಕ್ಕುಗಳನ್ನು ಅಂಗೀಕರಿಸಿದಲ್ಲಿ ಭಾರತ ಜಾತೀಯ ಅಭಿವೃದ್ಧಿಯಾಗುವುದೆಂದು ನಾನು ತಿಳಿದಿರುತ್ತೇನೆ. ಹಿಂದು ಮಹಮ್ಮದೀಯರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಈಗ ತಕ್ಕ ಸಮಯವು ... ನನ್ನ ಅಭಿಪ್ರಾಯ ... ಹಿಂದುಗಳು ನಾನು ... ಅಲ್ಪಸಂಖ್ಯಾತರ ... ನನ್ನಷ್ಟು ... ತೀರ್ಮಾನವು ... ಅವುಗಳ ವಿಚಾರವಾಗಿ ಮೆಜಾರಿಟಿ ಸಂಘದವರು ... ಪಡೆಯುವುದು ... ಹೇಳುವರು.

ಬಹಿರ್ದೇಶ ವೃತ್ತಾಂತಗಳು

ಆಚಾರ್ಯ ಪಿ|| ಮುಕ್ತಿಗಳಿಸಿದ ... ಕೃಷ್ಣಮೂರ್ತಿ ... ಚಾರ್ಯರವರು ಕಳೆದ ೩೦ ವರ್ಷಗಳಿಂದಲೂ ಪ್ರಚಾ...

ಪ್ರತಿನಿಧಿ ಸಭೆಯ ... ಸೆಂಬರಾಗಿರುವವರೊಳಗೆ ... ವಿಚಾರವಿಲ್ಲ ... ಶ್ರೀಮನ್ನ ... ಇದರಿಂದ ... ಪಟ್ಟಿರುತ್ತದೆ.

ರಾಜಧಾನಿಯ ಮೊನ್ನೆ ... ಸೇಟರು ಎಂಬ ... ಜೀನ ... ಯಾಗಿ ಸಿಟಿ ಮೆಜಿಸ್ಟ್ರೇಟರು ವಿಧಿಸಿದ್ದ ... ದಂಡ ... ಯ ಮೇಲೆ ಮೈಸೂರು ಹೈಕೋರ್ಟಿನ ... ಅಪೀಲನ್ನು ಮಾಡಿಕೊಂಡಿದ್ದರು. ... ದರ ಮೇಲೆ ಇದ್ದ ... ಹೊಸದಾಗಿ ಈ ಸಾಕ್ಷಿಗಳನ್ನು ವಿಚಾರಿಸಿ ಆಧ್ಯಕ್ಷ ಅಪರಾಧಿಗಳ ಪರ ವಕೀಲರುಗಳ ಆರ್ಗ್ಯುಮೆಂಟನ್ನು ಕೇಳಿ ಸುಳ್ಳು ಹೇಳಿದ್ದಕ್ಕಾಗಿ ೧೦೦೦ ರೂ. ಜುಲ್ಮಾನೆ ಮತ್ತು ೬ ತಿಂಗಳ ಕಠಿಣ ಸಜಾವೂ ಮೋಸಮಾಡಿದ್ದಕ್ಕಾಗಿ ೧೦೦೦ ರೂ. ಜುಲ್ಮಾನೆ ಮತ್ತು ೬ ತಿಂಗಳ ಕಠಿಣ ಸಜಾವೂ ವಿಧಿಸಲ್ಪಟ್ಟಿದ್ದು ದಂಡವನ್ನು ತೆರದಿದ್ದಲ್ಲಿ ... ಸಜಾವನ್ನು ೩-೩ ತಿಂಗಳುಗಳ ... ಅನುಭವಿಸುವಂತೆ ತೀರ್ಮಾನಿಸಿರುವರು. ಇದರ ಮೇಲೆ ಅಪರಾಧಿ ಸೇಟರು ಹೈ ಕೋರ್ಟಿಗೆ ಅಪೀಲನ್ನು ಮಾಡಿ ಜಾಮೀನುಮೇಲೆ ಬಿಡುಗಡೆಯನ್ನು ಹೊಂದಿರುವರು. ಹೈ ಕೋರ್ಟಿನ ತೀರ್ಮಾನವು ಬಹಳ ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ.

ರಾಜಧಾನಿಯ ದಸರಾಮಹೋತ್ಸವ ಸಂದರ್ಭದಲ್ಲಿ ಈ ವರೆಗೆ ನಡೆಯದಿದ್ದ ... ಆಯುಧಪೂಜೆ ... ಆದ ರಾತ್ರಿ ... ವಿಜಯದಶಮಿ ಉತ್ಸವದಲ್ಲಿ ಯಾವ ದುರದೃಷ್ಟದಿಂದಲೋ ನಡೆದು ಪ್ರಜೆಗಳಿಗೆ ಪೋಲೀಸಿನವರ ಮೇಲೂ, ಅಧಿಕಾರಿಗಳಿಗೆ ಪ್ರಜೆಗಳ ಮೇಲೂ ಅನುಮಾನವುಂಟಾಗಿರುತ್ತದೆ. ಈ ಗಲಭೆಯನ್ನು ವಿಚಾರಿಸಲು ಯಾವ ಕಮಿಟಿಯೂ ನಿಯಮಿಸಲ್ಪಡದೆ ... ಕಮೀಷನರ್ ... ರಾವ್ ... ರವರು ಮಾತ್ರ ನಿಯಮಿಸಲ್ಪಟ್ಟಿರುವರು. ಇವರು ಕೃತ್ಯನಡೆದ ಸ್ಥಳಗಳನ್ನು ... ತಾವೇ ... ಭವನಕ್ಕೆ ಕೆಲ ಕೆಲ ಅಧಿಕಾರಿಗಳನ್ನೂ ... ವಿಚಾರಣೆಯನ್ನು ... ಗುಪ್ತವಾಗಿ ... ನಡೆಸುತ್ತಾರೆ ... ತಿಳಿದುಕೊಂಡು ... ನಡೆದಿಯನ್ನು ಪ್ರಭುತ್ವಕ್ಕೆ ... ಮ|| ... ರು ... ಮೇಲೂ ... ಅಭಿಪ್ರಾಯಗಳನ್ನು ತೋರಿಸದೆ ... ನಿಷ್ಪಕ್ಷಪಾತದಿಂದ ತಿಳಿಸುವರೆಂದು ನಂಬುತ್ತೇವೆ.

... ಅಸ್ಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ... ರವರ ಮದುವೆಯಾದ ಹೆಂಡತಿ ... ಜೀವನಾಂಶಕ್ಕಾಗಿ ಮೈಸೂರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಗಂಡನಮೇಲೆ ಫಿರ್ಯಾದು ಮಾಡಿದ್ದರು. ಈಕೆಯ ಕೇಳಿಕೆಯೇನೆಂದರೆ—"ನಾನು ... ಯಾಗಿದ್ದುದರಿಂದ ಕಾಯಿಲೆಯನ್ನು ಗುಣ ಮಾಡಿಕೊಂಡು ಬರುವಂತೆ ಹೇಳಿ ನನ್ನನ್ನು ... ನನ್ನ ತೌರುಮನೆಗೆ ಕಳುಹಿಸಿಕೊಟ್ಟ ... ನನಗೆ ಕಾಯಿಲೆ ಗುಣವಾಗಿದೆ ಕರೆಸಿಕೊಳ್ಳಬೇಕೆಂದು ಅನೇಕ ಕಾಗದಗಳನ್ನು ಬರೆದಾಗ್ಯೂ ನನ್ನನ್ನು ಕರೆಸಿಕೊಳ್ಳಲಿಲ್ಲ. ಆದಕಾರಣ ನನ್ನ ತಂದೆಯು ಪಂಚಾಯತಿಕೆ ಮಾಡಿದುದರಮೇಲೆ ನನ್ನನ್ನು ಕರೆದುಕೊಂಡು ಬರುವಂತೆ ನನ್ನ ತಂದೆಗೆ ಹೇಳಿದರು. ಆದರಂತೆ ನಾನು ಮನೆಗೆ ಬಂದನಂತರ ನನ್ನನ್ನು ... ನನ್ನ ನಗಗಳನ್ನೆಲ್ಲಾ ಕಿತ್ತುಕೊಂಡು ಪುನಃ ತೌರುಮನೆಗೆ ಕಳುಹಿಸಿಬಿಟ್ಟು ... ಮದುವೆಯಾಗಿ ಆಕೆಯ ಕೂಡ ಸಂಸಾರ ಮಾಡುತ್ತಿರುವರು. ನನ್ನ ಗಂಡನಿಗೆ ಪ್ರತಿ ತಿಂಗಳಲ್ಲೂ ೧೨೦ ರೂ. ಸಂಬಳವು ಬರುತ್ತಿರುವುದಲ್ಲದೆ ... ಸಾವಿರ ರೂಪಾಯಿ ಆಸ್ತಿಯುಮಿರುವುದರಿಂದ ತಿಂಗಳಿಗೆ ೩೦ ರೂ. ನಂತೆ ಜೀವನಾಂಶಕೊಡಿಸಬೇಕು'' ಇದಕ್ಕೆ ಇವರು ಅಪೀನಾರರಾದ ಮ|| ... ಈಕೆಯ ನಡತೆಯು ಚೆನ್ನಾಗಿರಲಿಲ್ಲ. ಮನೆಯಲ್ಲಿ ಕೆಲಸ ಮಾಡುತ್ತಿದ್ದುದರಮೇಲೆ ೧೯-...-೧೯೩೦ ರಲ್ಲಿ ತಲಾಕ್ ಅಂದರೆ ವಿವಾಹವಿಚ್ಛೇದನಮಾಡಿ ೩ ತಿಂಗಳ ವರೆಗೆ ಖರ್ಚಿಗೆ ೩೦ ರೂ. ಗಳನ್ನೂ ದಾಗೀನೆ ... ನ್ನೂ ಕೊಟ್ಟು ... ಕಳುಹಿಸಿದೆನು. ಆಕೆಯನ್ನು ನ್ಯಾಯರೀತಿಯಿಂದ ಬಿಟ್ಟಿರುವುದರಿಂದ ಜೀವನಾಂಶಕ್ಕೆ ಆಕೆಯು ಅರ್ಹಳಲ್ಲವೆಂದು ವಾದಿಸಿದರು. ಅದರ ಮೇಲೆ ಮೆಜಿಸ್ಟ್ರೇಟರು ವಿವಾಹವಿಚ್ಛೇದನವಾಗಿರಬಹುದು ... ಜೀವನಾಂಶ ... ಕೊಡಬೇಕೆಂದು ... ಫಿರ್ಯಾದನ್ನು ... ಮಾಡಿದರು.

೧೧ ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ ಧಾರವಾಡ.

... ೧೯೩೨ ನೇ ಇಸವಿ ... ತಾರೀಖಿನ ... ಯ ... ಶ್ರೀಮದ್ವೀರಶೈವ ಮಹಾಸಭೆಯ ... ಯ ಸಭೆಯಲ್ಲಿ ೧೧ ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯನ್ನು ಡಿಸೆಂಬರ್ ತಾ|| ೨೯ ... ನಿರ್ಧರಿಸಲ್ಪಟ್ಟಿದೆ.

ಅಖಿಲ ಭಾರತ ಶ್ರೀವೀರಶೈವ ಮಹಿಳಾ ಪರಿಷತ್ ಧಾರವಾಡ

... ೧೯೩೨ ನೇ ಇಸವಿ ... ಧಾರವಾಡ ... ಯಲ್ಲಿ ... ಕೂಡಿದ ... ಶ್ರೀಮದ್ವೀರಶೈವ ಮಹಿಳಾ ಪರಿಷತ್ತಿನ ... ಅಖಿಲಭಾರತ ಶ್ರೀವೀರ ಶೈವ ಮಹಿಳಾ ... ಪರಿಷತ್ತಿನ ... ಲಿಂಗಾಯತ ಮಹಿಳೆಯರ ... ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯ ... ಕೂಡಿದ ...

ಮೊಟ್ಟ ಮೊದಲನೆಯ ಸಮಾಜ ಶಿಕ್ಷಣದ ಸಂಸ್ಥೆಯ ಪರೀಕ್ಷೆಯು 1 ವರ್ಷದ ಅವಧಿಗೆ ನಡೆಯುವುದು. ಇದನ್ನು ಜನರು ತಪ್ಪದೆ ಉಪಯೋಗಿಸಿಕೊಳ್ಳಬೇಕೆಂದು ಪ್ರಾರ್ಥಿಸುವವರಾಗಿ ಇರುವೆವೆಂದು ತಿಳಿಸುತ್ತೇವೆ.

ಎಸ್. ಎಸ್. ಶೇಷಗಿರಿ, ಸಿ. ಜಿ ಮುದಿಗೌಡ,
ಎಸ್ ಎಸ್. ಬಸವನಾಳ, (ಸಿಸ್ಟಿಕೇಟ್ಸ್ ಸೆಕ್ರೆಟರಿ.)

ಪತ್ರ ಪ್ರತಿಪಾದನ.

ಈ ಪತ್ರದ ಪ್ರಕಟವಾಗುವ ಅಭಿಪ್ರಾಯಗಳಿಗೆ ಪತ್ರಾಧಿಪತಿ ಜವಾಬ್ದಾರರಲ್ಲ. ಲೇಖನಗಳನ್ನು ಸಂಕ್ಷೇಪಿಸುವ ಹಕ್ಕನ್ನು ಕಾದಿಟ್ಟಿದೆ— ಸಂಪಾದಕ

ಪಂಡಿತ ಭಾಲಚಂದ್ರ ಶಾಸ್ತ್ರಿಗಳ ತ್ಯಾಗ.

ಜ್ಞಾನವಯೋವೃದ್ಧರೂ ಸ್ವಕರ್ತವ್ಯ ನಿಷ್ಠರೂ ನಿರಾಡಂಬರರೂ ಆದ ಪಂ॥ ಭಾಲಚಂದ್ರ ಶಾಸ್ತ್ರಿಗಳವರು ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾ ಸಂಸ್ಥಾನದಲ್ಲಿ ಸುಮಾರು 30-40 ವರ್ಷಗಳಿಂದ ಕಾರ್ಯನಿರ್ವಾಹಕರಾಗಿಯೂ ಆಸ್ಥಾನ ವಿದ್ವಾಂಸರಾಗಿಯೂ ಇದ್ದುದು ವೀರಶೈವ ಸಮಾಜದ ಪಂಡಿತ ವರ್ಗಕ್ಕೂ ಮಹಾಜನಗಳಿಗೂ ಗೊತ್ತಿರುವಷ್ಟೆ! ಅತ್ಯಂತ ಸಂಯಮಿತ ಜೀವನವುಳ್ಳವರಾದುದರಿಂದ ಅವರಿಗೆ ಈಗಿನ ಎಪ್ಪತ್ತು ವರ್ಷದ ವಯಸ್ಸಿನವರೆಗೂ ಅವಿಚ್ಛಿನ್ನವಾದ ಆರೋಗ್ಯಭಾಗ್ಯವು ಲಭಿಸಿದುದು ಪ್ರತ್ಯಕ್ಷವಾಗಿದೆ. ಆದರೆ ಶರೀರ ಧರ್ಮವನ್ನನುಸರಿಸಿ 15 ದಿವಸಗಳ ಹಿಂದೆ ಶ್ರೀ ಶಾಸ್ತ್ರಿಗಳಿಗೆ ಕಾಯಿಲೆಯಾಗಿ ಗೊಂಡ ಕೊಂದರೆಯಾಯಿತು, ಪುನಃ 8-10 ದಿವಸಗಳಲ್ಲಿಯೇ ಚೇತರಿಸಿಕೊಂಡು ಹಿಂದಿನಂತೆ ತಮ್ಮ ಸಮಯವನ್ನೆಲ್ಲ ಶಿವಧ್ಯಾನ ಪೂಜಾದಿಗಳಲ್ಲಿಯೇ ಕಳೆಯುತ್ತಿರುವುದು ನಮ್ಮಗಳಿಗೆ ಅತ್ಯಂತ ಸಂತೋಷಪ್ರದವಾಗಿದೆ. ಕಳೆದ ವಿಜಯದಶಮಿಯ ಮಾರನೇ ದಿನ ಮಧ್ಯಾಹ್ನದಲ್ಲಿ ಶ್ರೀ ವಿಶ್ವಾರಾಧ್ಯ ಗುರುಕುಲದ ಸಮಸ್ತ ವಿದ್ಯಾರ್ಥಿಗಳನ್ನು ಕರೆದು ತಮ್ಮಲ್ಲಿರತಕ್ಕ ಬಹಳ ಬೆಲೆ ಬಾಳುವ ಅನೇಕ ಸ್ವಕೀಯ ಸಾಹಿತ್ಯ ಗ್ರಂಥಗಳನ್ನೆಲ್ಲ ಅವರವರ ಅಪೇಕ್ಷೆಯನ್ನನುಸರಿಸಿ ಶಿವಾರ್ಪಣಬುದ್ಧಿಯಿಂದ ಪ್ರದಾನಿಸಿದರೆಂದು ತಿಳಿಸಲು ಮಹಾನಂದವಾಗುತ್ತದೆ. ಶರೀರ ನಶ್ವರತೆಯನ್ನರಿತವರು ಜಗತ್ತಿನಲ್ಲಿ ಬಹಳರಾಗಿದ್ದರೂ ತಾವು ಸ್ವಸ್ಥರಾಗಿರುವಾಗಲೇ ತಮ್ಮ ಸಮಸ್ತ ಸಂಪತ್ತನ್ನು ಇತರರಿಗೆ ಹಂಚತಕ್ಕವರು ದುರ್ಲಭರಷ್ಟೆ! ಶ್ರೀ ಶಾಸ್ತ್ರಿಗಳು ವಿದ್ಯಾರ್ಥಿಗಳನ್ನೇ ತಮ್ಮ ಉತ್ತರಾಧಿಕಾರಿಗಳನ್ನಾಗಿ ಭಾವಿಸಿ ಗ್ರಂಥ ಸಮೂಹವನ್ನೆಲ್ಲ ಕೊಟ್ಟು ಇತರರಿಗೆ ಉದಾತ್ತ ಮಾರ್ಗವನ್ನು ಸೂಚಿಸಿದರೆಂಬುದರಲ್ಲಿ ಸಂದೇಹವಿಲ್ಲ. ಈ ತ್ಯಾಗವೊಂದಲ್ಲದೆ ಅವರ ಅನೇಕ ಗುಣಗಳು ಸ್ತೋತ್ರಾರ್ಹಗಳಾಗಿದ್ದರೂ ಪೂಜ್ಯ ಶಾಸ್ತ್ರಿಗಳವರ ಆತ್ಮಪ್ರಶಂಸಾವಿಮುಖವಾದ ಸೂಕ್ಷ್ಮ ಸ್ವಭಾವವನ್ನನುಸರಿಸಿ ವಿಸ್ತರಿಸಲು ಶಕ್ತನಲ್ಲನೆಂದು ಗುಣಗ್ರಾಹಿಗಳಲ್ಲಿ ವಿಜ್ಞಾಪಿಸುತ್ತೇನೆ.

ಓರ್ವ ವೀರಶೈವ ವಿದ್ಯಾರ್ಥಿ, ಕಾಶಿ.

ಉಪಕಾರ ಸ್ಮರಣೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾ ಸಂಸ್ಥಾನದ ಆಸ್ಥಾನ ವಿದ್ವಾಂಸರಾದ ಪಂ॥ ಭಾಲಚಂದ್ರ ಶಾಸ್ತ್ರಿಗಳು 10-10-32 ರಲ್ಲಿ ನೂರಾರು ರೂಪಾಯಿ ಬೆಲೆಯುಳ್ಳ ತಮ್ಮ ಗ್ರಂಥರತ್ನಗಳನ್ನು ಸಮಸ್ತ ವಿದ್ಯಾರ್ಥಿಗಳಿಗೆ ಶಿವಾರ್ಪಣ ಬುದ್ಧಿಯಿಂದ ಸಮರ್ಪಿಸಿದ ಸಮಾರಂಭದಲ್ಲಿ ನನ್ನ ಅಪೇಕ್ಷೆಯಂತೆ ಸುಮಾರು 30 ರೂಪಾಯಿ ಬೆಲೆಯಾಗುವ ಅತ್ಯುತ್ತಮಗಳಾದ ಗ್ರಂಥಗಳನ್ನು "ಶೈವ ಭಾರತೀ ಭವನ"ಕ್ಕೆ ಅನುಗ್ರಹಿಸಿ ಮಹೋಪಕಾರಮಾಡಿರುತ್ತಾರೆ. ಇವುಗಳಲ್ಲಿ ಕೆಲವಲಭ್ಯ ಗ್ರಂಥಗಳೂ ಇವೆ. ಶ್ರೀ ಶಾಸ್ತ್ರಿಗಳವರು ನಿರಪೇಕ್ಷಾಬುದ್ಧಿಯಿಂದ ಪ್ರದಾನಿಸಿದ್ದರೂ ಅವರ ಉದಾತ್ತ ವಿಚಾರಗಳಿಂದ ನಮ್ಮಗಾಗಿರುವ ಉಪಕಾರವನ್ನೀ ಮೂಲಕ ಸಮಾಜಕ್ಕೆ ನಿವೇದಿಸುವುದು ಕರ್ತವ್ಯವೆಂದು ಭಾವಿಸುತ್ತೇನೆ—

ಜಿ ಮು ವೀರಭದ್ರಶರ್ಮಾ
ಕಾರ್ಯದರ್ಶಿ, ಶೈವ ಭಾರತೀ ಭವನ.

ಬೃಹನ್ಮಠಕ್ಕೆ ಅಸ್ಪೃಶ್ಯರ ಪ್ರವೇಶ

ಮಹಾತ್ಮನ ಉಪವಾಸ ವ್ರತಕ್ಕೆ ಮಹಾ ಗುರುವಿನ ಆಶೀರ್ವಾದ ಎಂಬ ಹೆಡ್ಡಿಂಗಿನಿಂದ ನಾನು ಪ್ರಕಟಿಸಿದ್ದ ಹಸ್ತಪತ್ರಿಕೆಯಲ್ಲಿ ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ತಮ್ಮ ಬೃಹನ್ಮಠಕ್ಕೆ ಅಸ್ಪೃಶ್ಯರು ಪ್ರವೇಶಿಸಲು ಅವಕಾಶವನ್ನಿತ್ತು ಅವರನ್ನು ಪುನೀತರನ್ನಾಗಿ ಅನುಗ್ರಹಿಸಿದರೆಂದು ತಿಳಿಸಿದ್ದೆನು. ಈ ಮಠ ಪ್ರವೇಶಕ್ಕೆ ಅವಕಾಶಕೊಡಲ್ಪಟ್ಟದ್ದು ಮ ಸುಳ್ಳೆಂದು ಕೆಲರು ವದಂತಿಯನ್ನು ಹುಟ್ಟಿಸಿದ್ದಲ್ಲದೆ ನನಗೂ ಬರೆದಿದ್ದರು. ಅದು ದರಿಂದ ಶ್ರೀ ಜಗದ್ಗುರು ಮಹಾ ಸಂಸ್ಥಾನದ ಏಜಂಟರ ಹೆಸರಿನಿಂದ ಪ್ರಕಟವಾಗಿರುವ ಪ್ರಸಿದ್ಧ ಪತ್ರಿಕೆಯನ್ನು ನನ್ನ ಮಾತಿನ ಸತ್ಯಾಂಶಕ್ಕಾಗಿಯೂ ಸಮಸ್ತರ ತಿಳಿವಳಿಕೆಗಾಗಿಯೂ, ಅನುಮಾನಪರಿಹಾರಕ್ಕಾಗಿಯೂ ಈ ಕೆಳಗೆ ಪ್ರಕಟಿಸುತ್ತೇನೆ.

ಎಸ್ ಪಿ ಹನುಮಂತರಾಜು,
ಸೆಕ್ರೆಟರಿ, ಆದಿಕರ್ನಾಟಕ ಅಸೋಸಿಯೇಷನ್ ಚಿತ್ರದುರ್ಗ ೩॥

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ
ಮುರುಘರಾಜೇಂದ್ರ ಮಹಾಸ್ವಾಮಿನಾಂ

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾ ಸಂಸ್ಥಾನದ ಏಜಂಟರ ಆಫೀಸಿನಿಂದ—ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ, ... ಚಿತ್ರದುರ್ಗದಲ್ಲಿ ತಾ॥ 25-9-1932 ರಲ್ಲಿ ನಡೆದ ವಿಚಾರ ಕುರಿತು ಕೆಲವು ಪತ್ರಿಕೆಗಳಲ್ಲಿ ಸತ್ಯಕ್ಕೆ ದೂರವಾದ ಶ್ರೀ ॥ ಸ್ವಾಮಿಯವರ ಆಶೀರ್ವಾದ ಅಸ್ಪೃಶ್ಯರಿಗೆ ದೊರೆತ ವಿಷಯ ಪ್ರಕಟವಾಗಿರುವುದರಿಂದ ಈ ಖುಲಾಸೆ ಸಂಗತಿ ವಿಷಯಗಳನ್ನು ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಲು ಇಚ್ಛಿಸಿರುತ್ತೇವೆ. ಈ ವಿಚಾರದಲ್ಲಿ ಬಹುಜನರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಪತ್ರ ಬರೆದಿರುತ್ತಾರೆ, ಇನ್ನು ಇಷ್ಟು ಸತ್ಯ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದಕ್ಕೆ ಬೇಕಾಗಿ ವಿಶದೀಕರಿಸಬೇಕಾದ್ದು ಅವಶ್ಯಕವಾಗಿದೆ. ತಾ॥ 25 ರಲ್ಲಿ ಕೆಲವರು ಅಸ್ಪೃಶ್ಯರು ತಮ್ಮ ಸ್ವ ಸ್ಥಳದಿಂದ ಬಂದು ಶಿವಪೂಜಾನಿಮಿತ್ತ ಮಠಕ್ಕೆ ಬಂದರು. ಈ ಜನಗಳು ಪ್ರತಿದಿನವೂ ಭಕ್ತಿಭಾವದಿಂದ ಬರುತ್ತಿದ್ದರು. ಈ ಪ್ರಕಾರ ಶಿವಭಕ್ತರಾಗಿರುವ ಇವರು ಈ ಪದ್ಧತಿ "ಶಿವಾಯ ನಮಃ" ಎಂದು, ಶ್ರದ್ಧೆಯುಳ್ಳ, ಮಹಸ್ಮೃತಿಯಲ್ಲಿ, ಬರುವ ಸ್ಥಾನದ ಜಪದಂತೆ ಇವರನ್ನು ಅವಶ್ಯ ಬರತಕ್ಕದ್ದು ಯುಕ್ತವೆಂದು ತೋರಿ "ಶಿವೇತಿ ಮಂಗಲಂ ನಾಮ | ಯಸ್ಯ ವಾಚಿ ಪ್ರವರ್ತತೇ | ಸಪ್ತಜನ್ಮ ಕೃತಂ ಪಾಪಂ | ಭಸ್ಮೀಭವತಿ ತಸ್ಯವೈ ||" ಎಂಬ ಉಕ್ತಿಯಂತೆ ಸದರಿಯವರನ್ನು ಸಾಮಾನ್ಯ ಜನರು ಬರುವ ಸ್ಥಾನ ಪರ್ಯಂತ ಬಿಡಲು ಸದರಿಯವರು ಅತ್ಯಂತ ಹರ್ಷಮನಸ್ಕರಾಗಿ ಕಾಯನ್ನು ಒಡೆಯುವುದು, ಕರ್ಪೂರ ಹಚ್ಚುವುದು, ವಂದನಾದಿಗಳೊಡನೆ "ಜಯ ನಮಃ ಪಾರ್ವತೀಪತೇ ಹರಹರ ಮಹಾದೇವ" ಎಂದು ಉಚ್ಚಾರಣಮಾಡಿ, ನಮಗೆ ಇಷ್ಟರವರೆಗೆ ಅವಕಾಶಕೊಟ್ಟದ್ದರಿಂದ ನಾವು ಧನ್ಯರಾದೆವೆಂದು ಕೊಂಡಾಡಿ ಪುನಃ ಪುನಃ ಸಾಷ್ಟಾಂಗವೆರಗುತ್ತಿರುವ ಸಮಯದಲ್ಲಿ, ಮಹಾಸ್ವಾಮಿಯವರು ಸದರಿಯವರಿಗೆ ಅಪ್ಪಣೆಕೊಡಿಸಿರುವುದೇನೆಂದರೆ—"ನೀವು ಇನ್ನು ಮೇಲೆ ಮಾರಿ ಮಸಣಿ ಮುಂತಾದ ಜಾತ್ರೆಯ ನೆಪದಿಂದ ಕೋಣ, ಕುರಿಗಳನ್ನು ಕಡಿಯುವ ಹಳ್ಳ್ಯ ನಮಗುಂಟಂತೆ ಸಾಧಿಸುವ ಮಹಾ ತಾಮಸ ಪ್ರವೃತ್ತಿ ಮದ್ಯಪಾನವನ್ನು ಮಾಡಲೇ ಕೂಡದು, ಗೋ ಮಾಂಸವನ್ನು ಹಿಂದೂ ಧರ್ಮದವರು ಯಾರೂ ತಿನ್ನಲೇಕೂಡದು, ವಾರಕ್ಕೆರಡು ಸಾರಿಯಾದರೂ ಸ್ನಾನಮಾಡಬೇಕು ಸ್ವಚ್ಛವಾಗಿರಬೇಕು" ವಗೈರೆ ಅಪ್ಪಣೆಕೊಡಿಸಿದ್ದಕ್ಕೆ ಪ್ರತಿಜ್ಞಾ ಪೂರ್ವಕ ಒಪ್ಪಿ ಸಾಷ್ಟಾಂಗಮಾಡಿ ಹೊರಟುಹೋಗಿರುತ್ತಾರೆ. ಪ್ರಯುಕ್ತ ಧರ್ಮಾಭಿಮಾನಿಗಳಾದ ನೀವುಗಳಾದರೂ ಸಾಧ್ಯವಾದಮಟ್ಟಿಗೆ ಉಪದೇಶಮಾಡಿ "ಸಾಮಾನ್ಯ ಜನರಿಗೆ ಪ್ರವೇಶಕ್ಕೆ ಅವಕಾಶವಿದ್ದಂತೆ ಸದರಿ ಜನಗಳಿಗೂ ಕೊಡತಕ್ಕದ್ದು ಯಾವತ್ತೂ ಹಿಂದು ಧರ್ಮಗಳಿಗೆ ಯುಕ್ತವಾಗಿದೆ" ಎಂದು ಈ ಮೂಲಕ ಪ್ರಸಿದ್ಧಗೊಳಿಸಲ್ಪಟ್ಟಿದೆ.

ಬಿ ಜಿ. ಹೊನ್ನಯ್ಯ, ಸಬ್ ಏಜಂಟ್

ಭಾರತ ರಾಜಕೀಯದೃಶ್ಯ

(ಲೇ—ಕಡಕೊಳ್ಳ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಇಲ್ಲಿಯವರೆಗೂ ಬ್ರಿಟಿಷ ರಾಜ್ಯಾಡಳಿತೆಯ ಪೂರ್ವೋತ್ತರ ಸ್ಥಿತಿಯನ್ನು ಮಾದರಿ ರೂಪವಾಗಿ ಕಾರಕನ್ನು ರೀತಿಯಿಂದ ವಿವರಿಸಿದುದಾಯಿತು. ವಿದೇಶೀ ಪ್ರಭುತ್ವದ ಕೆಡಕುಗಳನ್ನು ಸುಧಾರಿಸಿ ಜನರಲ್ಲಿ ಜಾಗ್ರತೆ ಐಕ್ಯಭಾವ ಅಭಿಮಾನ ಸ್ವಾತಂತ್ರ್ಯಾಭಿಲಾಷೆಗಳನ್ನು ಹುಟ್ಟಿಸುವುದರಲ್ಲಿ ತನುಮನಧನಗಳನ್ನು ಧಾರೆಯೆರೆದ ಸಂಸ್ಥೆಗಳನ್ನು ಮತ್ತು ಪುರುಷ ಸಿಂಹಗಳನ್ನು ಕುರಿತು ಈ ಹಿಂದೆಯೇ ಪ್ರಸ್ತಾವಿಸಿದೆ. ಇವರೆಲ್ಲರ ಕಾರ್ಯಕ್ರಮ ಅಕ್ಷೋತ್ತರಗಳನ್ನು ರಾಜಕೀಯ ಗುರಿಯಲ್ಲಿ ಕೇಂದ್ರೀಕರಿಸಿಕೊಂಡು ದೇಶದ ಸರ್ವತೋಮುಖವಾದ ಅಭಿವೃದ್ಧಿಯ ಮೂಲಕ ಅದನ್ನು ಪಾರತಂತ್ರ್ಯದಿಂದ ಬಿಡುಗಡೆ ಮಾಡಲು ಹೊರಟಿರುವ ರಾಷ್ಟ್ರೀಯ ಸಭೆಯ ಉತ್ಪತ್ತಿ ಚಲನೆ ಚಟುವಟಿಕೆ ಬೆಳವಣಿಗೆಗಳನ್ನು ಈಗ ಪ್ರಸ್ತಾವಿಸಲಾಗುವುದು.

ದಯೆ ದಾಕ್ಷಿಣ್ಯ ಪರೋಪಕಾರ ಬುದ್ಧಿ ದೀನಜನಸೇವೆ ಪರೋತ್ಕರ್ಷದಲ್ಲಿ ಸಾನುಭೂತಿ ಸಂತೋಷಗಳು ಯಾವೊಂದು ಜನಾಂಗಕ್ಕೆ ಅಥವಾ ದೇಶಕ್ಕೆ ಮೀಸಲಾಗಿಟ್ಟ ಸೊತ್ತುಗಳಲ್ಲ. ಇವು ಅಂತರಿಕ್ಷದ ವಾಯುವಿನಂತೆ ಸರ್ವ ಜಗತ್ತಿಗೂ ಸೇರಿದವುಗಳಾಗಿರುತ್ತವೆ, ಆದರೆ ಮಾನವ ಜಾತಿಗೆ ಸಹಜವಾದ ಈ ಗುಣಗಳ ಪ್ರಕಾಶವೂ ಪ್ರಯೋಜನವೂ ದೇಶ ಕಾಲಸ್ಥಿತಿ ಸಂಪ್ರದಾಯಗಳನ್ನನುಸರಿಸಿರುತ್ತವೆ. ಇಂಗ್ಲೆಂಡಿನಲ್ಲಿ ಕಡು ದೇಶಾಭಿಮಾನಿಗಳೂ ಗಹನ ವಿಚಾರಿಗಳೂ ಆದ ಸ್ಯಾಲಿಸ್‌ಬ್ಯಾರಿ, ಲಾರ್ಡ್ ರೋಸಾಬ್ರಿ, ಚರ್ಚಿಲ್ ಲಾರ್ಡ್ ಪೀಲ್, ಸರ್ ಸ್ಯಾಮುಯಲ್ ಹೋರ್ ಮುಂತಾದವರು ಹಿಂದುಸ್ಥಾನದ ವಿಚಾರದಲ್ಲಿ ಕೇವಲ ಸಂಕುಚಿತ ಮತ್ತು ವಿರೋಧ ಭಾವವುಳ್ಳವರು ಫ್ರಾನ್ಸ ದೇಶದ ಉದ್ಧಾರಕ ಕ್ಲೆಮೆನ್ಸೊರವರು ಜರ್ಮನಿಯ ವೈರಿಗಳು ಹಿಂದುಸ್ಥಾನದ ತಿಲಕ ದಾಸ ನೆಹರು ಬೋಸ್ ಪಟೇಲ ಮೊದಲಾದವರ ಉಜ್ವಲದೇಶಾಭಿಮಾನವು ಪರಹಿಂಸಾತ್ಮಕವಿರದೆ ಸ್ವಹಿತಸಾಧಕವಾದುದಾದರೂ ಇವರು ಇಂಗ್ಲೆಂಡಿಗೆ ದ್ರೋಹಿಗಳೆಂದು ಭಾವಿಸಲ್ಪಟ್ಟಿರುವರು. ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಇಡತಕ್ಕ ಈ ಭೇದ ಬುದ್ಧಿಯು ವ್ಯಕ್ತಿ ಇಲ್ಲವೆ ರಾಷ್ಟ್ರ ಎಷ್ಟೇ ನಾಗರಿಕರಿರಲಿ ಅದರಲ್ಲಿ ಬಹು ಸೂಕ್ಷ್ಮ ರೂಪದಲ್ಲಿ ಇದ್ದೇ ಇರುವುದು. ಮನುಷ್ಯನ ಮನ ಮತ್ತು ಮೇದಸ್ಸುಗಳಲ್ಲಿರತಕ್ಕ ವ್ಯತ್ಯಸ್ತವೇ ಇದಕ್ಕೆ ಕಾರಣವು. ಅಂದರೆ ಮೇದಸ್ಸು ಒಪ್ಪಿದುದು ಮನಕೊಪ್ಪಿಗೆಯಾಗದಿರುವುದು ಎಂದು ಭಾವವು. ಮನಸ್ಸಿನಲ್ಲಿರತಕ್ಕ ಪಕ್ಷಪಾತ ದುರಾಗ್ರಹ ದುರಾಸೆ ಪರೋತ್ಕರ್ಷಾಸಹನೆಗಳು ಹೆಚ್ಚಾಗಿ ಪ್ರಾದುರ್ಭವಿಸಿ ಅದರಲ್ಲಿರತಕ್ಕ ಉತ್ತಮ ಗುಣಗಳನ್ನು ಮರೆಮಾಡಿ ಅವುಗಳ ಪ್ರಕಾಶವನ್ನು ಅಡ್ಡಿಮಾಡುತ್ತಿರುವುವೇ ಈ ಪರಿಸ್ಥಿತಿಗೆ ಕಾರಣವು. ಇಂತಹ ವಿಷಮಾವಸ್ಥೆಯ ಸೆಳೆತದಿಂದ ಬಿಡಿಸಿಕೊಂಡು ತನ್ನ ಪರಿಪೂರ್ಣತೆಯನ್ನು ಹೊಂದಲು ಮನುಷ್ಯನಿಗೆ ಪೂರ್ಣ ಮನೋಧೈರ್ಯವೂ ನೈತಿಕ ಬಲವೂ ತ್ಯಾಗಬುದ್ಧಿಯೂ ಜ್ಞಾನಾನುಭವವೂ ಅವಶ್ಯವು. ಕುಟುಂಬ, ಸಮಾಜ ದೇಶ ಜಗತ್ತು ಇವುಗಳ ಉದ್ಧಾರವು ಇಂತಹ ಗುಣಗಳಿಂದಲೇ ಸಾಧ್ಯ.

ಅಮೇರಿಕೆಯ ಸಂಯುಕ್ತ ಸಂಸ್ಥಾನದ ಪ್ರೆಸಿಡೆಂಟ್ ವಿಲ್ಸನ್ ವಾಷಿಂಗ್ಟನ್ ಮತ್ತು ಗಾಂಧಿ ಮುಂತಾದವರು ರಾಜಕೀಯ ಜೀವನದ ಅನೇಕ ಇಂತಹ ಸಂದರ್ಭಗಳಲ್ಲಿ ತೋರಿದಾಗಿದ್ದರೆ ಮಹಾತ್ಮನಿಗೆ ಪ್ರಕಾಶವೇ ಇರುತ್ತಿರಲಿಲ್ಲ ಆ ಗುಣಗಳನ್ನುಳ್ಳವನಾದ ಆಲನ್ ಆಕ್ಟೇವಿಯನ್ ಹ್ಯೂಮ್ ಎಂಬ ಆಂಗ್ಲೇಯ ಪ್ರಭುವು ನಮ್ಮ ರಾಷ್ಟ್ರ ಸಭೆಯ ಜನಕರು ಆದರೇ ಸ್ಥಾಪಕರು.

ಇಂಗ್ಲಿಷರಿಂದ ಭಾರತೀಯರು ಸ್ವರಾಜ್ಯಪಡೆಯಲು ಭಾರತ ರಾಷ್ಟ್ರ ಸಭೆಯನ್ನು ಸ್ಥಾಪಿಸಿದವರು ಆಂಗ್ಲೇಯರೇ ಎಂಬುದು ಈಗಿನ ಪ್ರಕ್ಷುಬ್ಧ ವಾತಾವರಣದಲ್ಲಿ ಬಲು ವಿಲಕ್ಷಣ ವಿಚಿತ್ರವಾಗಿ ಕಾಣಬಹುದು, ಆದಾಗ್ಯೂ ಅದು ಯಥಾರ್ಥವಾದುದೇ ಆಗಿರುವುದು. ಈ ವೈಲಕ್ಷಣ್ಯ ಈ ವೈಚಿತ್ರ್ಯಗಳ ವಿವರಣೆಗಾಗಿಯೇ ಇಂತಹ ಪೀಠಿಕೆಯೊಡನೆ ಈ ಮಹನೀಯರ ಹೆಸರನ್ನು ಎತ್ತಬೇಕಾಯಿತು.

ವಿದುರನು ಓಲಗದಲ್ಲಿ ಅಷ್ಟು ಪ್ರಕಾಶ ಪ್ರಖ್ಯಾತಿಗಳನ್ನು ಪಡೆಯದವನೆಂದು, ಸತ್ಯಸಂಧರಾದ ಸಮರ್ಥರಾದ ಪಾಂಡವರಿಗೆ ಆತನು ಮಾಡಿದ ಸಮಯೋಚಿತ ಹಿತಚಿಂತನೆಯ ಕಾರ್ಯವನ್ನು ಅಲ್ಲಗಳೆಯಾಗಲೀ ಅಸಡ್ಡೆಯಿಂದಲಾಗಲೀ ಎಣಿಸುವುದು ಹೇಗೆ ಅನುಚಿತವೋ ಹೇಗೆ ವಿಶ್ವಾಸಘಾತುಕವೋ ಹಾಗೆಯೇ ಹ್ಯೂಮ್‌ರವರ ಸೇವಾಕಾರ್ಯವನ್ನು ಅಲ್ಲಗಳೆಯುವುದಾಗಲೀ ಅಸಡ್ಡೆಯಿಂದ ಕಾಣುವುದಾಗಲೀ ಅನುಚಿತವು ಮತ್ತು ಅನ್ಯಾಯವು.

ಇವರು ಕಳೆದ ಶತಮಾನದ ಅಂತ್ಯಭಾಗದಲ್ಲಿ ಹಿಂದುಸ್ಥಾನ ಸರಕಾರದ ವ್ಯವಸಾಯ ಶಾಖೆಯ ಕಾರ್ಯದರ್ಶಿಗಳಾಗಿದ್ದರು. ಇದೇ ಮನುಷ್ಯವರ್ಗದ ಹಿತೈಷಿಗಳಾದ ಇವರಿಗೆ ತಮ್ಮ ಅಧಿಕಾರದಲ್ಲಿ ಉದಾಸೀನ ಹುಟ್ಟಿ ಅದಕ್ಕೆ ರಾಜೀನಾಮೆಕೊಟ್ಟರು. ಆಗಿನ ದೇಶದ ಸ್ಥಿತಿಯಿಂದ ಮುಂದೆ ಭಾರತ ಬ್ರಿಟಿಷ್ ರಾಷ್ಟ್ರಗಳಿಗೆ ಬಹು ವೈಷಮ್ಯಭಾವವು ಬೆಳೆದು ಎರಡಕ್ಕೂ ಅಪಾರವಾದ ನಷ್ಟವುಂಟಾಗುವ ಸಂಭವವನ್ನು ತಪ್ಪಿಸಬೇಕೆಂದು ಇವರ ಆಕಾಂಕ್ಷೆ. ದೇಶದ ರಾಜನೀತಿಜ್ಞರೂ ಮುಖಂಡರೂ ವರ್ಷಕ್ಕೊಮ್ಮೆ ಒಂದುಕಡೆ ಅಧಿಕಾರಿಗಳೊಡನೆ ಬೆರೆತು ಪರಸ್ಪರ ವಿಚಾರ ವಿನಿಮಯದಿಂದ ದೇಶಾಭಿವೃದ್ಧಿಗೆ ಸಹಕಾರಿಯಾದೀತೆಂದು ಇವರ ಆಶೆ. ತಮ್ಮ ಈ ವಿಚಾರಗಳನ್ನು 1884 ರಲ್ಲಿ ಈ ದೇಶಕ್ಕೆ ವೈಸರಾಯರಾಗಿ ಬಂದಿದ್ದ ಲಾರ್ಡ್ ಡಫರಿನ್‌ರ ಮುಂದೆ ಇಟ್ಟರು. ಸರಳಭಾವದವರೂ ಜನ ಹಿತಚಿಂತಕರೂ ಆಗಿದ್ದ ಈ ಮಹನೀಯರು ಇವುಗಳನ್ನು ದೀರ್ಘವಾಗಿ ಪರ್ಯಾಲೋಚಿಸಿ ಹ್ಯೂಮರವರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಜನ ಸಾಮಾನ್ಯ ಕಷ್ಟನಷ್ಟ ಅಕ್ಷೋತ್ತರಗಳೇನೆಂಬುದು ಪ್ರಭುತ್ವದವರಿಗೆ ತಿಳಿಯಲು ಮಾರ್ಗವೇ ಇಲ್ಲ. ಇದರಿಂದ ಸುಧಾರಣೆಯು ಕುಂಠಿತವಾಗಿರುವುದು. ಇಂಗ್ಲೆಂಡಿನಲ್ಲಿ ಸರಕಾರಕ್ಕೆ ಎದುರು ಪಕ್ಷವೊಂದಿರುವಂತೆ ಇಲ್ಲಿಯೂ ಸರಕಾರದ ಕಾರ್ಯಕಲಾಪಗಳ ಗುಣದೋಷಗಳನ್ನು ವಿಮರ್ಶಿಸಲೊಂದು ಸಂಸ್ಥೆಯು ಏರ್ಪಡುವುದು ಪ್ರಯೋಜನಕಾರಿ. ಇದಕ್ಕೆ ಗವರ್ನರಾಗಲೀ ಇನ್ನಿತರ ಅಧಿಕಾರಿಗಳಾಗಲಿ ಅಧ್ಯಕ್ಷರಾಗಕೂಡದು. ಏಕೆಂದರೆ ಅವರೆದುರಿಗೆ ನಿರ್ದಾಕ್ಷಿಣ್ಯವಾಗಿ ಸರ್ಕಾರದ ಮತ್ತು ನೌಕರರ ತಪ್ಪುಗಳನ್ನು ಹೊರಗೆಡುವುದಕ್ಕೆ ಅವುಗಳನ್ನು ಖಂಡಿಸುವುದಕ್ಕೂ ಹಿಂಜರಿಯುವರು. ವರ್ಷಕ್ಕೊಮ್ಮೆ ಈ ಸಂಸ್ಥೆಯು ಸೇರಿ ಸರ್ಕಾರಕ್ಕೆ ಟೀಕೆ ವಿಮರ್ಶೆಗಳನ್ನೊಳಗೊಂಡ ಸಲಹೆಗಳನ್ನು ಕಳುಹಿಸಿಕೊಟ್ಟರೆ ದೇಶಾಭಿವೃದ್ಧಿಗೆ ಬಹು ಸಹಾಯಕವಾಗುವುದು.

ಇಂತಹ ಅವರ ಯೋಚನೆಯು ಹ್ಯೂಮ ಮತ್ತು ದೇಶ ಮುಖಂಡರ ಮನಸ್ಸಿಗೆ ಬಂದು ಅದನ್ನು ಕೂಡಲೆ ಆಚರಣೆಗೆ ತರಲಾರಂಭವಾಯಿತು. ನಾನೀದೇಶದಲ್ಲಿರುವವರೆಗೂ ನನ್ನ ಹೆಸರನ್ನು ಈ ಸಂದರ್ಭದಲ್ಲಿ ಎತ್ತಕೂಡದೆಂದು ಲಾರ್ಡ್ ಡಫರಿನ್‌ರವರು ಕಟ್ಟಪ್ಪಣೆಮಾಡಿದ್ದರಿಂದ ಆಗ್ಗೆ ಅವರ ಹೆಸರನ್ನು ಬಚ್ಚಿಟ್ಟರು.

ಮೊದಲು ರಾಷ್ಟ್ರಸಂಘವೆಂದಿದ್ದುದು (National Union) ಆಮೇಲೆ ರಾಷ್ಟ್ರಸಭೆಯೆಂಬ ಹೆಸರನ್ನು ಪಡೆಯಿತು. ಇದು 1885 ನೇ ಡಿಶಂಬರಿನಲ್ಲಿ ಮೊದಲು ಪೂನಾದಲ್ಲಿ ಸೇರಬೇಕೆಂದು ಗೊತ್ತಾಗಿದ್ದುದು ಅಲ್ಲಿ ಮಾರಿಕಾ ಉಪದ್ರವ ದೆಸೆಯಿಂದ ಮುಂಬಯಿಯಲ್ಲಿ ಸೇರಿತು. 72 ಜನ ದೇಶೀಯ ಪ್ರತಿನಿಧಿಗಳು, 30 ಜನ ಸ್ನೇಹಿತರೂ ಹಿತಚಿಂತಕರೂ ಬಂದಿದ್ದರು. ಬಂಗಾಳ ಬಾಬುಗಳಾದ ಉಮೇಶ ಚಂದ್ರ ಬಾನರ್ಜಿಯವರೇ ಅಧ್ಯಕ್ಷರು. ದಾದಾಭಾಯಿ ನೌರೋಜಿ, ಫಿರೋಜಷಹಮೆಥ, ಎದಲ್ಜಿ ವಾಚ, ನಾರಾಯಣಚಂದಾವರಕರ, ಜಿ. ಸುಬ್ರಹ್ಮಣ್ಯ ಅಯ್ಯರ, ಪಿ ಆನಂದಾಚಾರ್ಲು, ಗಂಗಪ್ರಸಾದವರ್ಮ, ನರೇಂದ್ರನಾಥಸೇನ, ಗೋಪಾಲ ಗಣೇಶ ಆಗರ್ಕರ್ ಸೀತಾರಾಂ ಚಿಪ್ಲೂಣಕರ್, ಪಿ ಕೇಶವಪಿಳ್ಳೆ ಇವರೇ ಮೊದಲಾದವರು ಅಧಿಕಾರಿಗಳ ಭಯ ಬೆದರಿಕೆಗಳಿಗೆ ಸೊಪ್ಪುಹಾಕದೆ ದೇಶಕ್ಕಾಗಿ ಸೇವೆಗೈಯ್ಯಲು ಬಂದಿದ್ದರು. ಅನಧಿಕಾರಿ ರೀತಿಯಿಂದ ಹಿತೈಷಿಗಳಾಗಿ ಬಂದವರಲ್ಲಿ ವಿಲಿಯಂ ವೆಡ್ಡರ್ ಬರ್ನ್, ದಿವಾನ ಬಹದ್ದೂರ ರಘುನಾಥರಾವ್ ಮಹದೇವ ಗೋವಿಂದರಾನಡೆ, ರಾಮಕೃಷ್ಣ ಭಂಡಾರಕರ್, ರಾಜೇಂದ್ರನಾಥ ಇವರು ಮುಖ್ಯರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾಧಿವೇಶನದಲ್ಲಿ ದಿವಾನ್‌ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

1932ನೆಯ ಇಸವಿ ಅಕ್ಟೋಬರ್ 10ನೆಯ ತಾರೀಖು.

2 ನೆಯ ಭಾಗ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಬಂಡವಾಳದ ವೆಚ್ಚಕ್ಕಾಗಿ ಬಜೆಟ್ಟಿನಲ್ಲಿ ಒದಗಿಸಿರತಕ್ಕ ಮೊಬಲಗನು ಬಹಳಮಟ್ಟಿಗೆ ಹೆಚ್ಚಿಸಬೇಕಾಗುತ್ತದೆಂಬುದು ಈಗ ಕಂಡುಬಂದಿದೆ, ಏಕೆಂದರೆ ಕೆಲವು ಲಾಭದಾಯಕವಾದ ಮತ್ತು ಅತ್ಯಾವಶ್ಯಕವಾದ ಕಾಮಗಾರಿಗಳನ್ನು ಈ ವರ್ಷ ನಡಸಬೇಕಾಗಿದೆ. ಇವುಗಳನ್ನು ಮುಂದಕ್ಕೆ ತಳ್ಳಿಹಾಕುವ ಹಾಗಿಲ್ಲ. ಬೆಂಗಳೂರು ನೀರು ಸರಬರಾಯಿಯ ಹೊಸ ಕಾಮಗಾರಿಗಳಿಗೆ ಇನ್ನೂ 8.2 ಲಕ್ಷ ರೂ. ಗಳ ಹೆಚ್ಚಿಗೆ ಗ್ರಾಂಟು ಆವಶ್ಯಕವಾಗಿರುವುದಾಗಿ ಕಂಡುಬಂದಿದೆ. ಈ ಪೈಕಿ 8 ಲಕ್ಷ ರೂ. ಗಳು ಹೋದವರ್ಷ ವೆಚ್ಚವಾಗದೆ ವಾಪಸಾಗಿ, ಈ ವರ್ಷ ಪುನಃ ಒದಗಿಸಬೇಕಾಗಿರುವ ಮೊಬಲಗಾಗಿದೆ. ಉಳಿದ 5 ಲಕ್ಷ ರೂ ಜಲಾಶಯದ ಅಡ್ಡವಾಗಿರುವ ಕಟ್ಟೆಯನ್ನು ಎತ್ತರಿಸುವುದಕ್ಕೂ ಈಗ ಕಟ್ಟಿರುವ ಕಟ್ಟೆಯನ್ನು ಅಗಲಮಾಡುವುದಕ್ಕಾಗಿ ಬೇಕಾಗುತ್ತವೆ. ಇಂಜಿನಿಯರುಗಳ ಅಭಿಪ್ರಾಯದಿಂದ ಮಾಡಿದತಕ್ಕ ಸಲಹೆಯಮೇಲೆ ಈ ವಿಚಾರವನ್ನು ಕೈಗೊಳ್ಳಬೇಕಾಗಿ ಬಂದಿತು. ಈ ಕೆಲಸದ ಜೊತೆಗೆ, ಬೆಂಗಳೂರು ನಗರದ ನೀರನ್ನು ಸರಬರಾಯಿ ಮಾಡುವುದಕ್ಕಾಗಿ ಹಳೆಯ ಕೊಳಾಯಿಗಳಿಗೆ ಬದಲು ಹೊಸ ಕೊಳಾಯಿಗಳನ್ನು ಹಾಕಿ ಕೊಳಾಯಿಗಳ ಲೈನನ್ನು ಜಾಸ್ತಿಮಾಡಬೇಕು

ಅಮೇರಿಕೆಯ ಎಣ್ಣೆ ಕಂಪೆನಿ (ಮದ್ರಾಸು)

[4—1]

ನಮ್ಮ ಕಂಪೆನಿಯ ಸೀಮೆಯೆಣ್ಣೆ, ಪೆಟ್ರೋಲು, ಲೂಬ್ರಿಕೇಟಿಂಗ್ ಎಣ್ಣೆ ಮೇಣದ ಬತ್ತಿ ವಗೈರೆ ಕಲ್ಲೆಣ್ಣೆ ಪೆಟ್ರೋಲಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಮಾರಲು ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಮ॥ ಪಿ ವಿ. ಭದ್ರಪ್ಪನವರನ್ನು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಒಟ್ಟು ಏಜಂಟರನ್ನಾಗಿ ನಿಯಮಿಸಿದೆ. ಸಬ್ ಏಜಂಟರಾಗಿರಲಿಷ್ಟಪಡುವವರು ಬೆಂಗಳೂರು ಸಿಟಿ ಶ್ರೀ ನರಸಿಂಹರಾಜ ರೋಡಿನಲ್ಲಿರುವ 170-171 ನೇ ನಂಬರಿನ ನಮ್ಮ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ದಿ ಅಮೇರಿಕನ್ ಆಯಿಲ್ ಕಂಪೆನಿ.

[illegible]

[illegible]

[illegible]

ಮಕ್ಕಳಿಲ್ಲದವರಿಗೆ ಚಂದ.

ಬಂಜೆತನದಿಂದ ಮುಕ್ತರಾಗ ...

ಮಕ್ಕಳಿ ಲ್ಲದವರು

ಗರ್ಭಧಾರಣಾ ಸಂಜೀವಿನೀ

ಬಂತಿಸ ... ೬೩

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗ ಪ್ರತಿ ನಾಲೆ ಮೂರು ಮೂರು ದಿವಸ ತಕ್ಕೊಂಡರೆ ಪ್ರತಿ ಸೀ ಆವಿಗುರಿ ... ಗುಳಿಗೆಗಳ ... ರೂಪಾಯಿ.

ಟ. ಖ. ಇ ಆಣೆ

ಪತ್ರ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M C

ಕೆಲೆಗೆ ಶಿವಗಿ, ಬಾಕಿಸಿದ ಕಾಮಗಾರಿಗಳನ್ನು ಸನೂದಿಸಬಹುದಾಗಿದೆ. ನವೆಮ್ಬರಿನ್ನಲ್ಲಿಯೂ ನಮ್ಮ ವಿದ್ಯುಚ್ಛಕ್ತಿಯ ಸ್ಥಿತಿಯನ್ನು ನಡೆಸುವ ಅಗತ್ಯದಲ್ಲಿ ಶಾಲೆಗಳನ್ನು ಶಿವಮೊಗ್ಗದ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದಕ್ಕಾಗಿ 1931 ನೆಯ ಇಸವಿ ನವೆಂಬರ್ ತಿಂಗಳಿನ ಆರಂಭದಲ್ಲಿ ಕೆಲಸ ಪ್ರಾರಂಭವಾಯಿತು. ಸಮಸ್ತ ಕೆಲಸಗಳ ಹೊರತು ಕಡಿಮೆ ಮಾಡುವ ಜೊತೆಗೆ ಇದಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನು ಕೊಡುವ ಏರ್ಪಾಡನ್ನು ಶಿವಮೊಗ್ಗ ಮತ್ತು ಭದ್ರಾವತಿ ಗ್ರಾಮಗಳಲ್ಲಿ ಬಳಕೆಗೆ ತರುವುದರ ಕಾರ್ಯ ಪ್ರಯೋಜನಕಾರಿಯಾಗಿ ನಡೆಯುತ್ತಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿಕ್ಕಬಳ್ಳಾಪುರ ಮೊದಲಾದ ಕೆಲವು ಸ್ಥಳಗಳಲ್ಲಿ, ದೇವನಹಳ್ಳಿ ತಾಲ್ಲೂಕಿನಲ್ಲಿ ಬೆಂಗಳೂರು ಚಿಕ್ಕಬಳ್ಳಾಪುರ ಮುಂತಾದ ಕಡೆ ಕೈಗಾರಿಕೆ ಮತ್ತು ಕೃಷಿಯನ್ನು ಕಡಿಮೆ ಖರ್ಚಿನಲ್ಲಿ ನಡೆಸುವಂತೆ ಮಾಡುವುದಕ್ಕಾಗಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ. ನೀರಾವರಿ ಕಾಮಗಾರಿಗಳ, ಕೆಲವು ಗಿರಿಪ್ರಾಂತದ ಪ್ರದೇಶಗಳಲ್ಲಿ ಸಣ್ಣ ಸಣ್ಣ ಕಸಬೆಗಳಿಗೆ ನಡೆಸುವ ಕಾಮಗಾರಿಗಳೂ ಪೂರ್ತಿಯಾಗಿ ಬಂದಿವೆ. ಮುಖ್ಯ ಬೀದಿಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವುದಕ್ಕಾಗಿ ತಯಾರಾದ ಅಂದಾಜನ್ನು ಮಂಜೂರು ಮಾಡಿದೆ. ದೇವನಹಳ್ಳಿ, ಚಿಕ್ಕ ಬಾಣಾವರ ಮತ್ತು ಮಾಲೂರು ಪಟ್ಟಣಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಏರ್ಪಾಡು (ಸ್ಕೀಮು) ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ನೀರನ್ನು ಎತ್ತುವುದಕ್ಕಾಗಿ 78 ಪಂಪುಗಳನ್ನು ಹೊಸದಾಗಿ ಸ್ಥಾಪಿಸಿ ಅವಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಲಾಯಿತು. ಗ್ರಾಮಾಂತರದ ಚಿಕ್ಕ ಚಿಕ್ಕ ಊರುಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವುದಕ್ಕಾಗಿ ತಕ್ಕ ಏರ್ಪಾಡನ್ನು 9 ವರ್ಷಗಳ ಹಿಂದೆ ಕೈಕೊಳ್ಳಲಾಯಿತು. ಇದುವರೆಗೆ ಸುಮಾರು 90 ಸ್ಥಳಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲಾಗಿದೆ.

ಈ ಕೆಲಸಗಳಿಗಾಗಿ ವೆಚ್ಚ ಮಾಡಿದ ಒಟ್ಟು ಬಂಡವಾಳವು 1932 ನೆಯ ಇಸವಿಯ ಜೂನ್ ಆಖೈರಿನವರೆಗೆ ಸುಮಾರು 151 ಲಕ್ಷ ರೂ ಗಳವರೆಗೆ ಆಗಿದೆ. ಈ ಬಂಡವಾಳದ ಮೇಲೆ ಬಂದಿರುವ ನಿವ್ವಳ ಉತ್ಪತ್ತಿಯು ಪ್ರತಿಶತ ಸುಮಾರು ... ವರೆಗೆ ... ಆಗಿದ್ದರೂ, ವಿದ್ಯುಚ್ಛಕ್ತಿಗೆ ಗಿರಾಕಿಯು ಹೆಚ್ಚುತ್ತಾ ಬಂದ ಹಾಗೆಲ್ಲಾ ಈ ಸ್ಥಾಪನೆಗಳಿಂದ ಇನ್ನೂ ಕೆಲವು ವರುಷಗಳೊಳಗಾಗಿಯೇ ಸಾಕಾದಷ್ಟು ವರಮಾನವು ಬರಬಹುದೆಂದು ನಿರೀಕ್ಷಿಸಲು ಕಾರಣವಾಗಿದೆ.

ಪ್ರಸಕ್ತ ವರ್ಷದಲ್ಲಿ ಕೆಲವು ಟ್ರಾನ್ಸ್‌ಫಾರ್ಮರುಗಳನ್ನು ಅಜಮಾಯಿಷಿಗಾಗಿ ಮಾಡಿಸಲಾಯಿತು. ಅವು ಸರಿಯಾಗಿಯೂ ಮಜಬೂತಾಗಿಯೂ ಇವೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ನೋಡಲಾಗಿ ಅವು ಚೆನ್ನಾಗಿ ರುವುದಾಗಿ ಕಂಡುಬಂದಿದೆ. ಇದೀಗ ತಕ್ಷ ... ವಿಷಯ ಈ ಟ್ರಾನ್ಸ್‌ಫಾರ್ಮರುಗಳನ್ನು ಇಲಾಖೆಯವರು ಉಪಯೋಗಿಸುವ ದ್ವಾರ.

ರೈಲ್ವೆಗಳು — ಮದ್ರಾಸ್ ಮತ್ತು ಸದರ್ನ್ ಮರಾಠಾ ರೈಲ್ವೆ ಕಂಪನಿಯವರಿಂದ ಕೆಲಸ ನಡೆಸಲ್ಪಡುತ್ತಿರುವ 71.68 ಮೈಲಿಗಳ ಲೈನುಗಳೂ ಸೇರಿ ಎಲ್ಲಾ ಒಟ್ಟು ಎಂದಿನಂತೆಯೇ 722 ಮೈಲಿಗಳ ರೈಲ್ವೆಯೇ ಪ್ರಸಕ್ತ ವರ್ಷದಲ್ಲಿಯೂ ಇದ್ದಿತು.

ರೈಲ್ವೆ ಇಲಾಖೆಯ ಒಟ್ಟು ಸಂಪಾದನೆಯು ಪ್ರಸಕ್ತ ವರ್ಷ ... ಲಕ್ಷ ರೂ ವರೆಗೆ ಬಂದಿತು. ಕೆಲಸ ನಡೆಸಿದ ವೆಚ್ಚವು ಮದ್ರಾಸ್ ಮತ್ತು ಸದರ್ನ್ ಮರಾಠಾ ರೈಲ್ವೆ ಕಂಪನಿಯವರಿಗೂ ಡಿಸ್ಟ್ರಿಕ್ಟ್ ಬೋರ್ಡುಗಳ ವರಿಗೂ ಪಾವತಿ ಮಾಡಿದ ನಿವ್ವಳ ಸಾಲ ವಗೈರೆ ಸೇರಿ 44.47 ಲಕ್ಷ ರೂ ವರೆಗೆ ಆಯಿತು. ... ಖರ್ಚು ಕಳೆದು ... 1.21 ಲಕ್ಷ ರೂ ಕಳೆದನಂತರ ರೈಲ್ವೆ ಬಾಬಿನ ನಿವ್ವಳ ಹುಟ್ಟುವಳಿಯು 28.18 ಲಕ್ಷ ರೂ. ಇದರ ಹಾಗಾಗಿಯೂ ರೈಲ್ವೆಗಳನ್ನು ಹಾಕಿಸುವುದಕ್ಕಾಗಿ 5.88 ಕೋಟಿ ರೂ ಬಂಡವಾಳವನ್ನು ಮುಟ್ಟಿಸಿದ್ದು ... ಈ ಬಂಡವಾಳದ ಮೇಲೆ ... 1.41 ರಷ್ಟು ಬಂದಂತಾಯಿತು.

ಜನಮಾರ್ಗಗಳಿಂದ ಕೆಳ್ಳಿಗಾಂ ... 22.14 ಮೈಲಿಗಳ ... ಮೈಸೂರು ಸಂಸ್ಥಾನದವರು ರೈಲ್ವೆಯನ್ನು ಹಾಕಿಸಬಹುದೆಂದು ಇಂಡಿಯಾ ಸರ್ಕಾರದವರು ಅನುಮತಿಸಿದ ... ಲೈನಿನ ... ಭಾಗದ ... ಮಾಡುವ ಬಂಡವಾಳದ ... ಕೊಟ್ಟರು.

ವಿದ್ಯಾಇಲಾಖೆ — ವಿದ್ಯಾಭ್ಯಾಸದ ... ಕೆಲಸವು ... 1931 ನೆಯ ಇಸವಿ ... ಲಕ್ಷಕ್ಕಿಂತ ಹೆಚ್ಚಾಗಿದೆ. ಬೆಂಗಳೂರಿನಲ್ಲಿರುವ ಅಡಿಷನಲ್ ... ಮತ್ತು ಮಿಡಲ್ ಸ್ಕೂಲುಗಳ ... 1931 ನೆಯ ... ಸ್ಕೂಲುಗಳ ... ಕಡಿಮೆ ಮಾಡುವ ಏರ್ಪಾಡಾಗಿದೆ ... ಇನ್ಸ್‌ಪೆಕ್ಟರುಗಳನ್ನು ನೇಮಿಸಲಾಯಿತು ... ಡಿಸ್ಟ್ರಿಕ್ಟ್ ... ಸರ್ಕಾರಿ ... ಕೆಲಸ ... ಸ್ಪೆಷಲ್ ... ಇಲಾಖೆಗೆ ...

ಪೊಲೀಸು ಇಲಾಖೆ — ಸಂಸ್ಥಾನದಲ್ಲಿರುವ ಪೊಲೀಸು ಸಿಬ್ಬಂದಿಯನ್ನು ಮತ್ತು ಪೊಲೀಸು ಸಿಬ್ಬಂದಿಯ ಸ್ಥಿತಿ ... ಪೊಲೀಸು ... 1931 ನೆಯ ಇಸವಿ ಸೆಪ್ಟೆಂಬರ್ ತಿಂಗಳಿನ ... ಮಂಜೂರು ಮಾಡಲಾಯಿತು. ಈ ಏರ್ಪಾಡಿನ ಫಲವಾಗಿ ... ರೂ ... ಉಳಿತಾಯವಾಗಿದೆ. ಈ ಏರ್ಪಾಡನ್ನನುಸರಿಸಿ ಪೊಲೀಸು ... ಸಂಖ್ಯೆಯನ್ನು ... ಪ್ರಾಂತಕ್ಕ ರಿಜರ್ವ್ ಪೊಲೀಸು ಸಿಬ್ಬಂದಿಯನ್ನು ಹೆಚ್ಚು ಮಾಡಿ, ... ಮತ್ತು ಪೊಲೀಸು ... ಹಂಗಾಮಿಯಾಗಿ ... ನೇಮಿಸಿ

ಕೊಳ್ಳುವ ಪ್ರಾಂತ ... ಇಲಾಖೆಯ ... ಎಲ್ಲಾ ... 1932 ನೆಯ ಇಸವಿ ... ಶಿಕ್ಷಣ ... ತಿಳಿದುಕೊಳ್ಳುವ ...

ಕನ್ನಡ ಇಲಾಖೆ — ... ಇದಕ್ಕೆ ... ಮತ್ತು ... ಸಾಗಿಸುವ ... ಕಡಿಮೆ ... ಶಿಕ್ಷಣ ... ಪ್ರತಿಶತ ... ಕಾರ್ಯಗಳನ್ನು ... ಸ್ವತಂತ್ರವಾಗಿ ... ಪಂಚಾಯತಿ ಮುಂತಾದವುಗಳನ್ನು ... ಪ್ರಕಾರ ... ಪತ್ರಿಕೆ ... ಸರಕಾರದ ... ಕೆಲವು ... ಬೆಂಗಳೂರಿನಲ್ಲಿ ... ತಿಳಿದು ... ಗೊತ್ತು ಮಾಡಿದೆ.

ಮೈಸೂರು ವಿಶ್ವವಿದ್ಯಾನಿಲಯ — ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು 2,821 ಮಂದಿ ವಿದ್ಯಾರ್ಥಿಗಳಿದ್ದರು. 1930-31 ನೆಯ ಸಾಲಿನಲ್ಲಿ 2,8.. ಮಂದಿ ವಿದ್ಯಾರ್ಥಿಗಳಿದ್ದರು. ಇಂಟರ್‌ಮೀಡಿಯೆಟ್ ಪರೀಕ್ಷೆಯ ... ಎಲ್ಲಾ ಪರೀಕ್ಷೆಗಳ ಫಲಿತಾಂಶಗಳು ... ಪರೀಕ್ಷೆಗಳಲ್ಲಿಯೂ ಸೇರಿ 59 ಮಂದಿ ವಿದ್ಯಾರ್ಥಿನಿಯರು ... ಡಿಗ್ರಿಯನ್ನು ಪಡೆದರು.

... ಸಾಲಿನಲ್ಲಿ ... ಪ್ರಕಾರ ... ಸಕಾಲದಲ್ಲಿ ... 1932 ... ಗಳಿಗೆ ...

ಮೈಸೂರು ವಿಶ್ವವಿದ್ಯಾನಿಲಯದ ಬಿ. ಇ. ಡಿಗ್ರಿಯನ್ನು ಮದ್ರಾಸ್ ಸರ್ಕಾರದವರು ... ಇಂಜನಿಯರುಗಳಿಗಾಗಿ ... ಅರ್ಹತೆಯನ್ನಾಗಿ ಅಂಗೀಕರಿಸಿದ್ದಾರೆ. ... ಡಿಗ್ರಿಯೂ ... ಬಂಗಾಳ ... ಅಂಗೀಕರಿಸಿದ್ದಾರೆ ... ಇಂಡಿಯಾ ದೇಶದ ... ಇನ್ಸ್‌ಟಿಟ್ಯೂಟ್ ಆಫ್ ಇಂಜನಿಯರ್ಸ್ ಎಂಬ ಸಂಸ್ಥೆಯವರಿಂದ ಬಿ. ಇ. ಡಿಗ್ರಿಯು ಅಂಗೀಕೃತವಾಗುವಂತೆ ಮಾಡುವ ವಿಷಯದಲ್ಲಿ ಪ್ರಯತ್ನ ನಡೆಯುತ್ತಿದೆ.

ವಿದ್ಯಾಭ್ಯಾಸ ಇಲಾಖೆ ... ಪ್ರಾಥಮಿಕ ... ವಿದ್ಯಾರ್ಥಿಗಳ ... 1931 ನೆಯ ಇಸವಿ ... ಶಾಲೆಗಳ ... ಸಂಖ್ಯೆಯ ... ವಿದ್ಯಾಭ್ಯಾಸ ... ಪ್ರಾಥಮಿಕ ... ಪರೀಕ್ಷೆ ... ಇಲಾಖೆಯ ... ಹೈಸ್ಕೂಲುಗಳು ... ಎಲ್ಲಾ ... ಸ್ಕೂಲುಗಳನ್ನು ... ಮಾಡಲಾಯಿತು.

... ಮತ್ತು ... ಸಂಖ್ಯೆಯು ... ಸಾಲಿನಲ್ಲಿ ... ಸ್ಕೂಲುಗಳ ... ಹೆಚ್ಚು ... ಪ್ರಾಥಮಿಕ ... ನಿರ್ಬಂಧ ... ಸರ್ಕಾರದ ... ಮಾಡಿದೆ.

ವ್ಯವಸಾಯದ ಇಲಾಖೆ — ಡಿಸ್ಟ್ರಿಕ್ಟ್‌ಗಳಲ್ಲಿ ನಿದರ್ಶನ ಕಾರ್ಯಗಳನ್ನು ... ಡಿಸ್ಟ್ರಿಕ್ಟ್ ಬೋರ್ಡುಗಳವರು ವ್ಯವಸಾಯದ ಇಲಾಖೆಯ ... ಪ್ರಸಕ್ತ ಸಾಲಿನಲ್ಲಿ ಕೆಲವು ಡಿಸ್ಟ್ರಿಕ್ಟ್ ಬೋರ್ಡುಗಳವರು ... ಡಿಸ್ಟ್ರಿಕ್ಟ್‌ಗಳಲ್ಲಿನ ನಿದರ್ಶನ ... ನಡೆಯಿತು ... ಬೀಜದ ಧಾನ್ಯಗಳನ್ನೂ, ವ್ಯವಸಾಯದ ಮುಟ್ಟುಗಳನ್ನೂ ... ಕೆಲಸಗಳಲ್ಲಿ ಉಪಯುಕ್ತವಾಗಿದ್ದ ಪರಿಕ್ಕರ ... ಕಡಿಮೆಯಾಯಿತು ... ಅಧಿಕ ... ವ್ಯವಸಾಯದ ಮುಟ್ಟುಗಳಿಗೆ ಹೆಚ್ಚು ಗಿರಾಕಿ ... ಪ್ರಸಕ್ತ ಸಾಲಿನಲ್ಲಿ 45,014 ರೂ. ಬೆಲೆ ಬಾಳುವ ವ್ಯವಸಾಯದ ಮುಟ್ಟುಗಳು ಮಾರಾಟವಾದವು. 1930-31 ನೆಯ ಸಾಲಿನಲ್ಲಿ 33,000 ರೂ. ಬೆಲೆ ಬಾಳುವ ವ್ಯವಸಾಯದ ಮುಟ್ಟುಗಳು ಮಾರಾಟವಾಗಿ

ವ್ಯತ್ಯ ... ಕಾಯಿಲೆಗಳನ್ನು ... ಇದರ ... ಗಳಿಗೆ ... ಆಗಿದ್ದವು.

... ಸಾಲಿನಲ್ಲಿ ... ಪ್ರಕಾರ ... ಉಪಯೋಗ ... ಪ್ರಯೋಗ ... ಕೆಲಸ ... ಸಂಶೋಧನ ... ಕೃಷಿ ... ರಸಗೊಬ್ಬರ ... ಸರ್ಕಾರದ ... ಸಂಸ್ಥಾನದ ... ಸ್ಥಳಗಳಿಗೆ 1930-31 ನೆಯ ಸಾಲಿನಲ್ಲಿ ಸರಬರಾಯಿ ಮಾಡಿದ್ದ ಪ್ರಮಾಣಕ್ಕಿಂತ ಸುಮಾರು 3 ರಷ್ಟು ಹೆಚ್ಚು ಪ್ರಮಾಣದಲ್ಲಿ ... ಪ್ರಸಕ್ತ ಸಾಲಿನಲ್ಲಿ ... ಸರಬರಾಯಿ ಮಾಡಲಾಯಿತು ... ವ್ಯವಸಾಯ ಕ್ಷೇತ್ರದ ... ಸುಮಾರು 250 ಎಕರೆಗಳಷ್ಟು ... ಕಬ್ಬನ್ನು ... ಬೆಳೆಯ ... ವಿಷಯದಲ್ಲಿಯೂ ... ಕೆಲಸವನ್ನು ನಡೆಸಲಾಯಿತು ... ಸಾಲಿನಲ್ಲಿ ... ವಿದ್ಯುಚ್ಛಕ್ತಿಯನ್ನು ... ಯಂತ್ರಗಳ ... ನಡೆಯುತ್ತಿವೆ ... ಸಂಬಂಧದಲ್ಲಿ ಒಂದು ವಿಚಾರಣೆಯೂ ಮತ್ತು ಕೆಲವು ದೇಶೀಯ ವಿಷಗಳಲ್ಲಿರುವ ಕ್ರಿಮಿನಾಶಕ ಸ್ವಭಾವದ ಪರಿಶೋಧನೆಯ ಸಂಬಂಧದಲ್ಲಿ ಒಂದು ವಿಚಾರಣೆಯೂ, “ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್” ಸಂಸ್ಥೆಯವರು ಧನಸಹಾಯ ಮಾಡಿದರೆ ಇಲ್ಲಿ ನಡೆಯಿಸುವುದಾಗಿ ತಿಳಿಸಿ ಅವರಿಗೆ ಬರೆಯಲಾಗಿದೆ. ಸಶೇಷ

ನಾರಿನವಾಲೆ ರಾಮಬಾಣ

ಹುಣ್ಣಿನ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ ... ಆಣೆ

ಪತ್ತಾ—ವೈದ್ಯ ಪಿ. ಎಸ್. ಕಾಪಸೆ, ಮಿರಜ.

26 M C

ಬೇಕಾಗಿದ್ದಾರೆ.

ರಾಯಚೂರು, ಬಳ್ಳಾರಿ, ಹೈದರಾಬಾದ್, ಹುಬ್ಬಳ್ಳಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸ ಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿದ್ದಾರೆ. ಧಾರಾಳವಾದ ಕಮಿಷನ್ ಕೊಡಲಾಗುವುದು.

ಮೆಸರ್ಸ್ ... ಅಂಡ್ ಸನ್,

... ಮತ್ತು ಫೋಟೋ ಬ್ಲಾಕುಗಳನ್ನು ತಯಾರಿಸುವವರು,

1 ... ಪೇಟೆ, ಬೆಂಗಳೂರು ಸಿಟಿ

೧೯೩೨ ನೆಯ ಇಸವಿ ಅಕ್ಟೋಬರ್ ೨೪ ರಿಂದ ಅಕ್ಟೋಬರ್ ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಆಶ್ವಯುಜ ಬಹುಳ ಪಕ್ಷದಿಯಿಂದ ಕಾರ್ತಿಕ ಶುದ್ಧ ಪಾಡ್ಯಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
24	ಸೋಮ	ದಶ	54-53	ಆಶ್ಲೇ	20 0	8
25	ಮಂಗಳ	ಏಕಾ	51 11	ಮಖ	19 47	9
26	[1] ಬುಧ	ದ್ವಾದ	50 38	ಪುಬ್ಬ	18-33	10
27	[2] ಗುರು	ತ್ರಯೋ	46 8	ಉತ್ತ	16-19	11
28	[3] ಶುಕ್ರ	ಚತು	41 2	ಹಸ್ತ	13-22	12
29	[4] ಶನಿ	ಅಮಾ	35-19	ಚಿತ್ತ	9 46	13
30	[5] ಭಾನು	ಪಾಡ್ಯ	29-22	ಸ್ವಾತಿ	5 56	14

(1) ಮಳೆನಕ್ಷತ್ರ-ಸ್ವಾತಿ ೨ ನೆಯ ಪಾದ (2) ಅಭ್ಯಂಗಸ್ನಾನ, (3) ನರಕಚತುರ್ದಶಿ. (4) ಕೇದಾರೇಶ್ವರವ್ರತ. (5) ಕಾಮಧೇನುಪೂಜೆ, ಬಲೀಂದ್ರಪೂಜೆ, ದೀಪಾವಳಿ, ಮಳೆನಕ್ಷತ್ರ-ಸ್ವಾತಿ ೩ ನೆಯ ಪಾದ.

ಮೈಸೂರು: ... ಯವರಿಂದ ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೧-೦] [ಪರಸ್ಥಳದವರಿಗೆ ೩-೮-೦] [ಪ್ರತಿಪ್ರತಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೩೧ ನೆಯ ಸೋಮವಾರ [ಸಂಚಿಕೆ ೪೪

Insurance in the Mysore State Life Insurance, Public Branch.

Life Insurance [illegible] best form of investment and the greatest safeguard against old age and death.

The best, safest, cheapest [illegible] and most convenient place of Insurance is the Public Branch of the Mysore State Life Insurance.

Policies are issued from Rs. [illegible] to Rs. 10,000 and copies of rules and forms of application [illegible] Government Treasuries, Economic Superintendents, [illegible] and the Insurance Office, Public Offices Buildings, Bangalore.

(Sd.) S. SHAMANNA,
Secretary, Insurance Committee.

[60—17

ಲಗ್ನಪತ್ರಿಕೆಗಳ

ಮುದ್ರಣಕ್ರಮ

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹುಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್‌ಆಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಸತ್ಯದ ಜಗತ್ತು] ೧೦೦೦ [illegible] [ಅದೇನು ನೋಡೋಣ

[illegible]

[illegible]	[illegible]	[illegible]

[illegible]

ಸ್ತ್ರೀರೋಗ ನಿವಾರಣೀ ಚೂರ್ಣ

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—41]

[illegible]

ಪತ್ತ್ರ ಮಾಲಿಕ—ವೈದ್ಯ [illegible]

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

(Registerd Trade Mark)



[illegible]

ಏಜಂಟ್ಸ—ಗುರುಬಸವ ಅಂಡ ಕಂಪೆನಿ ಲಿಮಿಟೆಡ್,

[60—1] [illegible]

ಮೈಸೂರು ಸ್ಟಾರ್.

ಗರ್ತಾ ಶ್ವೇ ಇಸವಿ ಅಕ್ಟೋಬರ್ ತಾ|| ೩ನೆಯ ಸೋಮವಾರ.

THE THIRD R. T. C.

It is difficult for any one to hope for any thing much from the Third Round Table Conference. It is very little of the first two R. T. Cs. and in fact it is now popularly called a pocket edition of the earlier ones. From the point of view of the political powers that India is to gain it is certainly less encouraging than its predecessors. For one thing the fact that the Congress is out of it is enough to take away much of its utility and helpfulness. Without Mahatma Gandhi it is practically certain that it will not interest India anything more than what the previous ones have done. But possibly there are other matters which though not directly relating to the transfer of power from Britain to India, are yet of vital concern so far as the Federal units are concerned. The Indian States and Mysore in particular have got to settle certain problems of finance and political relationship with the Federal Government on the one hand and the British Government on the other. The Davidson Committee's findings which the Dewan Saheb referred at considerable length are so reactionery from Mysore point of view that it will tax all the resources of our resourceful Dewan to get a proper and equitable decision at the coming conference. It may be that the British people have already got their bill on their hands and this new Conference is just a formality. But surely there is no room to any bill for archaic anachronisms. First and foremost we hope the Dewan Saheb will succeed in getting the Conference to efface the payments of subsidy by various Indian States to the Central Government. It is not very easy we know but it is just that we trust that will spur our Dewan Saheb to use all his best talent to win over those who may either be opposed which element may be small or be indifferent which element may be large. We are sure that Sir Mirza will also succeed to the question of retrocession of the Civil and Military Station. As regards the setting off the post of immunity enjoyed by Mysore Durbar against any reduction of subsidy as suggested by the Davidson Committee we can fairly be sure that such a suggestion will never commend itself to any but a most calculating man. Of one thing we are certain that if there is any one who can gain the utmost advantage to Mysore at this psychological juncture it is Sir Mirza. We learn he is leaving Bangalore on the 5th morning. We have had occasion to express along with the rest of our countrymen the great contribution Sir Mirza has made to the conception and development of the Federal ideal and to the redress of the disabilities Mysore is suffering under as regards subsidy etc. We do hope that in this last and final act Sir Mirza will make a supreme effort to win as much tangible freedom for India as possible on the one hand and on the other to win for Mysore the advantages we have been striving after for so long.

ಕೆಲ ಮುಜರಾಯಿ ಸತ್ರ ವ್ಯಯಕರ್ತನ

ಸಂಸ್ಥಾನದ ಮುಜರಾಯಿ ಶಾಖಾಡಳಿತಕ್ಕೊಳಪಟ್ಟಿರುವ ಧರ್ಮಸತ್ರಗಳಲ್ಲಿ ಪ್ರಭುತ್ವದ ವೆಚ್ಚದಿಂದ ನಡೆಯುತ್ತಿರುವ ಅನ್ನದಾನವು ಒಂದೇ ವರ್ಗದವರ ಪ್ರಯೋಜನಕ್ಕಾಗಿರುವ ಪ್ರಯುಕ್ತ ಅದು ಸಾರ್ವತ್ರಿಕವಾಗಿ ನಡೆಸಲ್ಪಡಬೇಕು ಅಥವಾ ಸಂಪೂರ್ಣವಾಗಿ ತಪ್ಪಿಸಲ್ಪಡಬೇಕು ಎಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡುತ್ತಿದ್ದಿತು. ಆದರ ಮೇಲೆ ಆ ವಿಚಾರವನ್ನು ಪರ್ಯಾಲೋಚಿಸಿ ತಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕಾಗಿ ಮುಜರಾಯಿ ಕಮಿಷನರ ಅಧ್ಯಕ್ಷತೆಯಲ್ಲಿ ಮ|| ಗಳಾದ ಬೆಂಗಳೂರು ಡಿ|| ಡೆಪ್ಯುಟಿಕಮಿಷನರ್ ಕೆ. ವಿ. ಅನಂತರಾಮಯ್ಯ ರವರು, ಮೈಸೂರು ಡಿ|| ಡೆಪ್ಯುಟಿಕಮಿಷನರ್ ಎಸ್. ಅಬ್ದುಲ್ ವಾಜಿದ್‌ರವರು, ನ್ಯಾಯವಿಧಾಯಕಸಭೆಯ ಮೆಂಬರುಗಳಾದ ಮೈಸೂರು ಅಡ್ವೊಕೇಟ್ ಎಚ್. ಸಿ. ದಾಸಪ್ಪನವರು ಮತ್ತು ಶಿವಮೊಗ್ಗ ಅಡ್ವೊಕೇಟ್ ಎಚ್. ಸಿದ್ದಯ್ಯನವರು ಇವರುಗಳಿಂದ ಕೂಡಿದ ಒಂದು ಕಮಿಟಿಯೇರ್ಪಡಿಸಲ್ಪಟ್ಟಿದ್ದಿತು. ಈ ಕಮಿಟಿಯವರು ಅನೇಕವೇಳೆ ಸಮಾವೇಶವಾಗಿ ಅನ್ನದಾನದ ವಿಚಾರವನ್ನು ಪರ್ಯಾಲೋಚಿಸಿ ಕಟ್ಟಕಡೆಗೆ ಅಭಿಪ್ರಾಯದಾನವನ್ನು ಸರ್ಕಾರಕ್ಕೆ ಸಲ್ಲಿಸಿರುವರು. ಮುಜರಾಯಿ ಶಾಖೆಯವರ ದ್ರವ್ಯಸಹಾಯದಿಂದ ಸಂಸ್ಥಾನದೊಳಗೂ, ಹೊರಗೂ ಇರುವ (೧) ಪಶ್ಚಿಮವಾಹಿನಿಯಲ್ಲಿ ಕುಲಶೇಖರ ಸಂತರ್ಪಣೆ (೨) ಬೆಟ್ಟಪೆಟ್ಟದ ಅನ್ನಸತ್ರ (೩) ಶ್ರೀರಂಗಪಟ್ಟಣದ ರಂಗಸ್ವಾಮಿ ದೇವಸ್ಥಾನದ ದಾಸೋಹ (೪) ಪಿ. ಸುಬ್ರಹ್ಮಣ್ಯದ ಸತ್ರ (೫) ಕಾಶೀಯಲ್ಲಿರುವ ಸತ್ರ (೬) ರಾಮೇಶ್ವರದಲ್ಲಿ ಸತ್ರ (೭) ತಿರುಪತಿ ಸತ್ರ (೮) ರಾಜಧಾನಿಯ ಶ್ರೀಮನ್ಮಹಾರಾಜರವರ ಸತ್ರ ಇವುಗಳಲ್ಲಿ ನಡೆಯುವ ಅನ್ನದಾನದ ವೆಚ್ಚವನ್ನು ಕಡಿಮೆಮಾಡುವ ವಿಚಾರವನ್ನು ಪರ್ಯಾಲೋಚಿಸುವುದಕ್ಕಾಗಿ ೧೯೨೮ ರಲ್ಲಿ ಒಂದು ಕಮಿಟಿಯು ಪ್ರಭುತ್ವದವರಿಂದೇರ್ಪಡಿಸಲ್ಪಟ್ಟಿದ್ದಿತು. ಆ ಕಮಿಟಿಯವರು ಪರ್ಯಾಲೋಚಿಸಿ, ಈ ಅನ್ನ ಸತ್ರಗಳು ಬಹಳ ದೂರದೇಶಗಳಿಂದ ಬರತಕ್ಕ ಯಾತ್ರಾರ್ಥಿಗಳ ಉಪಯೋಗಕ್ಕಾಗಿ ಬಹಳ ವರ್ಷಗಳ ಹಿಂದೆ ಸ್ಥಾಪಿತವಾಗಿ ನಡೆದುಕೊಂಡು ಬರುತ್ತಿವೆ. ಆದರೆ ಈಗಿನ ಸ್ಥಿತಿಯಲ್ಲಿ ಮೋಟಾರು ಬಸ್ಸುಗಳ ಪ್ರಯಾಣದ ಸೌಕರ್ಯವೂ, ಹೋಟೆಲುಗಳ ಊಟದ ಅನುಕೂಲವೂ ಏರ್ಪಟ್ಟಿರುವುದರಿಂದ ಸಂಸ್ಥಾನದೊಳಗಿರುವ ಅನ್ನ ಸತ್ರಗಳೆಲ್ಲ ತಪ್ಪಿಸಲ್ಪಡಬೇಕೆಂದೂ ಕಾಶೀ ಮಹಾಕ್ಷೇತ್ರಕ್ಕೆ ಸಮನಾಗಿ ದಕ್ಷಿಣದಲ್ಲಿ ಸುಪ್ರಸಿದ್ಧವಾಗಿರುವ ತಿರುಪತಿಯಲ್ಲಿ ಕಳೆದ ೧೦೦ ವರ್ಷಗಳಿಂದಲೂ ೨೧,೦೦೦ ರೂ ವೆಚ್ಚದಿಂದ ನಡೆಸಲ್ಪಡುತ್ತಿರುವ ಅನ್ನ ಸತ್ರವೂ, ಭಾರತದೇಶದಲ್ಲೆಲ್ಲ ಸುಪ್ರಸಿದ್ಧವಾದ ಕಾಶೀ ಕ್ಷೇತ್ರದಲ್ಲಿ ಹಿಂದು ರಾಜರುಗಳು ಅನ್ನ ಸತ್ರಗಳನ್ನು ಪ್ರಭುತ್ವದ ಬೊಕ್ಕಸಗಳಿಂದ ನಡೆಸುತ್ತಿರುವಂತೆ ನಮ್ಮ ಪ್ರಭುತ್ವದವರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರವರ ಮಲತಾಯಿಯವರಾದ ಹಲುವಾಜಮ್ಮಣ್ಣಿಯವರ ಶ್ರೇಯಃಪ್ರಾರ್ಥನೆಗಾಗಿ ನಡೆಸಲ್ಪಡುತ್ತಿರುವ ಅನ್ನ ಸತ್ರವೂ, ೧೮೦೧ ರಿಂದ ಸುಬ್ರಹ್ಮಣ್ಯದಲ್ಲಿ ಚಂಪಾಷಷ್ಠಿ ಜಾತ್ರೆಯ ಸಂಬಂಧವಾಗಿ ನಡೆಯುವ ೧೨,೦೦೦ ಮಂದಿ ಬ್ರಾಹ್ಮಣ ಸಂತರ್ಪಣೆಯು ತಪ್ಪಿಸಲ್ಪಡಬಾರದೆಂದೂ ಅಭಿಪ್ರಾಯಪಟ್ಟರು. ೧೯೩೧ ರಲ್ಲಿ ಏರ್ಪಟ್ಟ ಕಮಿಟಿಯವರು ಮೇಲ್ಕಂಡವುಗಳಲ್ಲದೆ ಪರಿಶೀಲಿಸಿ (೧) ಪಶ್ಚಿಮವಾಹಿನಿಯ ಕುಲಶೇಖರ ಸಂತರ್ಪಣೆ (೨) ಬೆಟ್ಟಪೆಟ್ಟದ ಅನ್ನ ಸತ್ರ (೩) ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಸ್ಥಾನದಲ್ಲಿ ನಡೆಯುವ ರಾಮಾನುಜಕೂಟ (೪) ಪಿ. ಸುಬ್ರಹ್ಮಣ್ಯದಲ್ಲಿ ನಡೆಯುವ ಜ್ವರದಾಗಿ ನಡೆಯುತ್ತಿರುವ ಸತ್ರಗಳು ತಪ್ಪಿಸಲ್ಪಡಬೇಕೆಂದೂ, ಏಕಾಭಿಪ್ರಾಯಪಟ್ಟದರಮೇಲೂ ಕಾಶೀ, ತಿರುಪತಿ, ಸುಬ್ರಹ್ಮಣ್ಯ ಮತ್ತು ರಾಜಧಾನಿಯಲ್ಲಿರುವ ಅನ್ನ ಸತ್ರಗಳ ವಿಚಾರವಲ್ಲಿ ಭಿನ್ನಾಭಿಪ್ರಾಯಪಟ್ಟುದರಮೇಲೂ ಪ್ರಭುತ್ವದವರು ೧ ರಿಂದ ೪ ರವರೆಗಿನ ಅನ್ನಸತ್ರಗಳು ತಪ್ಪಿಸಲ್ಪಡಬೇಕೆಂದೂ ಕಾಶೀ ತಿರುಪತಿ, ಸುಬ್ರಹ್ಮಣ್ಯಗಳಲ್ಲಿ ಮಾತ್ರ ನಡೆಸಿಕೊಂಡು ಬರಬೇಕೆಂದೂ, ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಸತ್ರದಲ್ಲಿ ನಡೆಯುವ ಅನ್ನದಾನಕ್ಕಾಗಿ ತಗಲುತ್ತಿರುವ ೧೪,೧೦೦ ರೂ ವೆಚ್ಚವು ೧೦,೭೦೦ ರೂ ಗಳಿಗೆ ಇಳಿಸಿಕೊಂಡೂ ಅಪ್ಪಣೆ ಮಾಡಿರುತ್ತಾರೆ. ಈ ಏರ್ಪಾಟಿನಿಂದ ಒಟ್ಟು ೧೩,೦೬೪ ರೂ ಉಳಿಯುವುದು. "ಉಪಕಾರವಾಗಿ ಅನ್ನದಾನವು ದಾನಗಳಲ್ಲೆಲ್ಲ ಶ್ರೇಷ್ಠವಾಗಿರುವುದರಿಂದ ಅನ್ನಾರ್ಥಿಗಳಿಗೂ ಕಡಕನ್ನು ಮಾಡುವಂತಾಗುವ ಪ್ರಯುಕ್ತ ಇದನ್ನು ತಪ್ಪಿಸದಲ್ಲಿ ನಮ್ಮ ಸಂಸ್ಥಾನವು ಇತರ ಸಂಸ್ಥಾನಗಳಿಗೆ ಮಾದರಿಯಾಗುವುದು ಅಲ್ಲದೆ ಪುಣ್ಯ ಸಂಪಾದನೆಗಾಗಿ ಕ್ಷೇತ್ರಯಾತ್ರೆ ಮಾಡತಕ್ಕವರು ಪರರ ಧರ್ಮದಾನಗಳಿಗೆ ಕಾಯತಕ್ಕದ್ದು. ಶ್ರೇಯಸ್ಕರವಲ್ಲವಾದುದರಿಂದ ಈ ಅನ್ನದಾನವನ್ನು ಸಂಪೂರ್ಣವಾಗಿ ನಿಲ್ಲಿಸಬೇಕು" ಎಂದು ಮ|| ಅಬ್ದುಲ್ ವಾಜಿದ್‌ರವರು ಅಭಿಪ್ರಾಯಪಟ್ಟಿರುತ್ತಾರೆ. ಮ|| ಗಳಾದ ಎಚ್. ಸಿ. ದಾಸಪ್ಪನವರು ಮತ್ತು ಎಚ್. ಸಿದ್ದಯ್ಯನವರು ಕ್ಷೇತ್ರಗಳಲ್ಲಿ ಅನ್ನ ಸತ್ರಗಳನ್ನು ನಡೆಸಿಕೊಂಡು ಬರುವ ವಿಚಾರವಾಗಿ ಭಿನ್ನಾಭಿಪ್ರಾಯ ಪಟ್ಟಿರುವುದರಲ್ಲಿ ಹೀಗೆ ಹೇಳಿರುತ್ತಾರೆ —

ಕಾಲವು ಬದಲಾಯಿಸಿದಂತೆಲ್ಲ ಜನರ ಅಭಿಪ್ರಾಯವೂ ಬದಲಾಯಿಸುತ್ತ ಬರುತ್ತಿದ್ದರೆ ಹಿಂದಿನ ಅಭಿಪ್ರಾಯವು ನಡೆಸಿಕೊಂಡು ಬರುತ್ತಿಲ್ಲ. ಹಿಂದಿನ ಆ ಬೆಳವಣಿಗೆಯ ಅಭಿಪ್ರಾಯವನ್ನು ನಾವು ಅನುಮೋದಿಸುವುದಿಲ್ಲ. ಪ್ರಭುತ್ವದ ವೆಚ್ಚದಿಂದ ಕಾಶೀ, ತಿರುಪತಿ ಮತ್ತು ಸುಬ್ರಹ್ಮಣ್ಯಗಳಲ್ಲಿ ನಡೆಯುವ ಆ ಅನ್ನ ಸತ್ರಗಳಲ್ಲಿ ಒಂದು ಜಾತಿಯವರಿಗೆ ಅನ್ನದಾನ ಮಾಡುವುದನ್ನು ವಿರೋಧಿಸದಿರಲು ಒಪ್ಪರು. ಹೀಗೆ ಒಂದು ಜಾತಿಯವರಿಗೆ ಅನ್ನದಾನವಾದ ಪದರಿಂದ ಪುಣ್ಯ ಪ್ರಾಪ್ತಿಯಾಗುತ್ತದೆಂದು ಒಂದು ಜಾತಿಯವರಿಂದ ಭಾವಿಸಲ್ಪಟ್ಟದ್ದರೂ, ಪ್ರಭುತ್ವದವರು ಪ್ರಜೆಗಳ ಹಣದಿಂದ ಆ ಪುಣ್ಯ ಸಂಪಾದನೆ ಮಾಡತಕ್ಕದ್ದು ಅವರ ಕರ್ತವ್ಯವಲ್ಲವು. ಈ ಸತ್ರಗಳು ಸ್ಥಾಪಿತವಾದ ಕಾಲದಿಂದ ಯಾತ್ರಿಕರಿಗೆ ಪ್ರಯೋಜನಕಾರಿಯಾಗಿದ್ದವು. ಈಗ ಸಾರ್ವಜನಿಕವಾಗಿ ವಿಚಾರದಿಂದ ಬಡ ರೈತರ ಹಣವು ಒಂದು ವರ್ಗದವರ ಪ್ರಯೋಜನಕ್ಕಾಗಿ ವಿನಿಯೋಗವಾಗುತ್ತಿದೆ. ಧರ್ಮಾರ್ಥ ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಸತ್ರದ ವಿಷಯ ಬಂದರೆ ಸತ್ರಗಳು ಬಸ್ಸುಗಳ ಪ್ರಯಾಣದ ಮತ್ತು ಹೋಟೆಲುಗಳ ಊಟದ ಸೌಕರ್ಯಗಳಿರುವುದರಿಂದ ಈ ಕಾಲದಲ್ಲಿ ಪ್ರಯಾಣಿಕರಿಗೆ ಪ್ರಯೋಜನಕಾರಿಯಾಗಿಲ್ಲ ವಾದುದರಿಂದ ತಪ್ಪಿಸಲ್ಪಡಬೇಕೆಂದು ಹಿಂದಿನ ಕಮಿಟಿಯವರು ಅಭಿಪ್ರಾಯಪಟ್ಟಿದ್ದರು. ಆ ಸತ್ರಗಳಿಂದಲೂ ಒಂದು ಜಾತಿಯವರಿಗೆ ಮಾತ್ರವಲ್ಲದೆ ಇತರರಿಗೆ ಪ್ರಯೋಜನಕಾರಿಯಾಗಿಲ್ಲ. ಕಾಶೀ, ತಿರುಪತಿ ಮತ್ತು ಸುಬ್ರಹ್ಮಣ್ಯ ಈ ಮೂರು ಸ್ಥಳಗಳಲ್ಲಿರತಕ್ಕ ಸತ್ರಗಳು ನಮ್ಮ ಶ್ರೀಮನ್ಮಹಾರಾಜರವರ ಪೂರ್ವಿಕರ ಪುಣ್ಯಪ್ರಾಪ್ತಿಗಾಗಿ ಏರ್ಪಡಿಸಿದ ಹಳೆ ಕಾಲ ಸ್ಥಾಪಿಸಲ್ಪಟ್ಟು ನಡೆಸಲ್ಪಡುತ್ತಿರುವುದರಿಂದಲೂ ಇವುಗಳನ್ನು ತಪ್ಪಿಸುವುದರಿಂದ ಅರ್ಧಾಂಗ ನಿಧಾನವಾಗಿ ಕಡಿಮೆಮಾಡಲ್ಪಡುವುದರಿಂದ ಒಂದು ಭಾವದಲ್ಲಿ ಮುಖ್ಯವಾಗಿ ಸಂಸ್ಥಾನದ ಹೊರಗಡೆಯಲ್ಲಿ ನಮ್ಮ ಸಂಸ್ಥಾನದ ಕೀರ್ತಿಗೆ ಕಳಂಕವುಂಟಾಗುವುದರಿಂದಲೂ ಇವುಗಳನ್ನು ನಿಲ್ಲಿಸತಕ್ಕದ್ದಲ್ಲವೆಂದು ಹಿಂದಿನ ಕಮಿಟಿಯವರು, ಅಭಿಪ್ರಾಯಪಟ್ಟಿದ್ದು ಸರಿ. ಶ್ರೀಮನ್ಮಹಾರಾಜರವರ ಪೂರ್ವಿಕರ ಪುಣ್ಯಪ್ರಾಪ್ತಿಗಾಗಿ ಏರ್ಪಡಿಸಿದ ಧರ್ಮಗಳನ್ನು ನಿಲ್ಲಿಸಲು ಸಂಬಂಧಪಟ್ಟವರಿಗೆ ಸಂಕೋಚವಿರುವುದು ಸ್ವಾಭಾವಿಕ. ಆದರೆ ಈಗ ನಮಗೆ ತಿಳಿದುಬಂದಿರುವ ವಿಷಯವೇನೆಂದರೆ ಈ ಸತ್ರಗಳು ಪೂರ್ವಿಕರ ಪುಣ್ಯಕ್ಕಾಗಿಯೆ ಏರ್ಪಟ್ಟವಲ್ಲ. ಇವು ಸಂಸ್ಥಾನದ ಕೀರ್ತಿಗಾಗಿ ನಡೆಯಬೇಕೆಂಬುದು ಸರಿಯಲ್ಲ. ಈ ಪ್ರಾಚೀನ ಸಂಸ್ಥೆಗಳಿಂದಲೇ ಸಂಸ್ಥಾನದ ಗೌರವವು ಅವಲಂಬಿಸಿಲ್ಲ. ಒಂದು ಜನಾಂಗದ ಸಂಸ್ಥಾನದ ಗೌರವಕ್ಕೆ ಕಡಿಮೆಯುಂಟಾಗುವುದೆಂಬುದನ್ನು ನಾವು ಒಪ್ಪುವುದಿಲ್ಲ. ಇಂಥ ಸಂಸ್ಥೆಗಳನ್ನು ನಡೆಸಿಕೊಂಡು ಬರತಕ್ಕ ಸಂಸ್ಥಾನಾಧಿಪತಿಗಳು ನಮ್ಮ ಸಂಸ್ಥಾನದವರನ್ನು ಹಿಂಬಾಲಿಸುವುದರ ಬದಲು ಮಾರ್ಗದರ್ಶಕರನ್ನಾಗಿಟ್ಟುಕೊಳ್ಳಬಹುದು.

ಮ|| ಅನಂತರಾಮಯ್ಯನವರೂ ಕಮಿಟಿಯ ಅಧ್ಯಕ್ಷರೂ ೧೯೨೮ ರ ಕಮಿಟಿಯವರ ಅಭಿಪ್ರಾಯವನ್ನನುಮೋದಿಸಿ ಮೇಲ್ಕಂಡ ಮೂರು ಸ್ಥಳಗಳ ಸತ್ರಗಳನ್ನು ನಡೆಯಿಸಿಕೊಂಡು ಬರಬೇಕೆಂದು ಅಭಿಪ್ರಾಯಪಟ್ಟಿರುವರು. ಮ|| ಗಳಾದ ಅಬ್ದುಲ್ ವಾಜಿದ್‌ರವರು, ಎಚ್. ಸಿ. ದಾಸಪ್ಪನವರು ಮತ್ತು ಎಚ್. ಸಿದ್ದಯ್ಯನವರು ಸೂಚಿಸಿರುವ ಪ್ರಕಾರ ಸತ್ರಗಳೆಲ್ಲ ತಪ್ಪಿಸಲ್ಪಟ್ಟಿದ್ದರೆ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮೇಲೆ ಬೈರಾಗಿಗಳಿಗೆ ಕೊಡಲ್ಪಡುವ ಅಕ್ಕಿಯ ಖರ್ಚು ೧೧೮-೬-೦, ರಾಜಧಾನಿಯಲ್ಲಿರುವ ಮಹಾರಾಜರವರ ಸತ್ರದ ಬಗ್ಗೆ ೧೦,೭೫೦ ರೂ., ಸುಬ್ರಹ್ಮಣ್ಯದಲ್ಲಿ ಕುಲಶೇಖರದ ಖರ್ಚು ೬೫೦೦ ರೂ, ಶ್ರೀರಂಗನಾಥ ದೇವಸ್ಥಾನದ ರಾಮಾನುಜಕೂಟದ ಖರ್ಚು ೬೧೧ ರೂ, ಬೆಟ್ಟದ ಪೆಟ್ಟದಲ್ಲಿ ಚಾರಾಹಜಾರ್ ಸಂತರ್ಪಣೆಯ ಖರ್ಚು ೩೧೦೧ ರೂ. ತಿರುಪತಿ ಸತ್ರದ ಖರ್ಚು ೭೩೫೦ ರೂ, ಕಾಶೀಸತ್ರದ ಖರ್ಚು ೨೦೦೦ ರೂ., ಒಟ್ಟು ೩೬ ಸಾವಿರ ರೂ, ಮ|| ಅನಂತರಾಮಯ್ಯನವರೂ, ಅಧ್ಯಕ್ಷರೂ ಸೂಚಿಸಿರುವ ಪ್ರಕಾರವಾದರೆ ೧೩,೦೦೦-೦-೦ ರೂ ಮಿಗತಾಯವಾಗುತ್ತಿದ್ದಿತು. ಇದೇನಂದರೆ ಪ್ರಭುತ್ವದವರು ಗೊತ್ತುಮಾಡಿರುವ ಪ್ರಕಾರ ೧೩,೦೬೪ ರೂ ಉಳಿಯುವುದು. ಹಣವನ್ನು ಹೂಡದೆ ಪವಿಗ ಹಾಕಬೇಕೆಂಬ ಕಾಲವಿದಾಗಿರದೆ ಪ್ರತಿ ವರ್ಷವೂ ನವ ನವವೂ ಉಚಿತ ಸೇವೆ ಧರ್ಮಾರ್ಥದ ಸರಿಸಮಾನವೆಂದು ಭಾವಿಸಲ್ಪಟ್ಟು ಸ್ವಸ್ತ್ರೀಸ್ವತ್ವ ಶಬ್ದ ನಿಯಮಗಳು ಮಾಡಲ್ಪಡುತ್ತಿರುವ ಕಾಲವನ್ನು ಸಂಸ್ಥಾನದ ರೈತರು ಕಂದಾಯರೂಪಗಳಿಗೆ ರೂಪವಾಗಿ ಪ್ರಭುತ್ವದ ಬೊಕ್ಕಸಕ್ಕೆ ತುಂಬುತ್ತಿರುವ ಹಣದಿಂದ ಒಂದಾನೊಂದು ಜಾತಿಯವರಿಗೆ ಅನ್ನವಸ್ತ್ರಗಳನ್ನು ಅವರ ಬೊಕ್ಕಸನ್ನು ಬೆಳೆಸುವುದು ಸುಧಾರಣೆಯ ತಿಳಿಗಳನ್ನೇರುವದೆಂದು ಖ್ಯಾತಿಗೊಂಡಿರುವ ನಮ್ಮ ಮಾದರಿ ಸಂಸ್ಥಾನದ ಕೀರ್ತಿಗೆ ಕಳಂಕವಾದುದರಿಂದ ಒಂದೇ ವರ್ಗಕ್ಕೆ ಪ್ರಯೋಜನಕಾರಿಯಾಗಿರುವ ಅನ್ನ ಸತ್ರಗಳು ತಪ್ಪಿಸಲ್ಪಡಬೇಕು ಅಥವಾ ಎಲ್ಲ ವರ್ಗದವರಿಗೂ ಪ್ರಯೋಜನವಾಗುವಂತೆ ಮಾಡಲ್ಪಡಬೇಕೆಂದು ಮ|| ಗಳಾದ ದಾಸಪ್ಪನವರೂ ಸಿದ್ದಯ್ಯನವರೂ ವಾಜಿದ್ ರವರ ಸಮಾನದೃಷ್ಟಿಯನ್ನೂ, ಪ್ರಸಿದ್ಧ ಕ್ಷೇತ್ರಗಳಲ್ಲಿರುವ ಸತ್ರಗಳನ್ನು ತಪ್ಪಿಸಿದಲ್ಲಿ ಶ್ರೀಮನ್ಮಹಾರಾಜರವರ ಪೂರ್ವಿಕರ ಸಂಕಲ್ಪಕ್ಕೂ ಸಂಸ್ಥಾನದ ಗೌರವಕ್ಕೂ ಕುಂದಾಗ ಬರುತ್ತದೆಂಬ ಹಿಂದಿನ ಕಮಿಟಿಯವರ ಅಭಿಪ್ರಾಯವನ್ನು ಇನ್ನುಳಿದ ಮೆಂಬರುಗಳು ಅನುಮೋದಿಸಿರುವುದು ಅವರ ಸಹಜಾತ್ಮಾಭಿಮಾನವನ್ನೂ ವ್ಯಕ್ತಗೊಳಿಸುತ್ತವೆ. ಅನ್ನದಾನದಿಂದ ಕ್ಷಣಿಕ ತೃಪ್ತಿಯುಳ್ಳದೆ ಚಿರಂತರ ತೃಪ್ತಿಯಾಗುವುದಿಲ್ಲ. ನಾದಪ್ರಯುಕ್ತ ಇದರಿಂದ ಜನರು ಉಂಡಾಡಿಗಳಾಗಿ ಸೋಮಾರಿಗಳಾಗುತ್ತಾರಾದ ಪ್ರಯುಕ್ತ ಇದನ್ನು ತಪ್ಪಿಸಬೇಕೆಂಬ ವಾಜಿದ್ ರವರ ಅಭಿಪ್ರಾಯವಾದರೂ ಸಮಂಜಸವಾಗಿದೆ. ಆದರೆ ನಮ್ಮ ಪ್ರಭುತ್ವದವರು ಮೂರು ಪರಸ್ಥಳಗಳ ಸತ್ರಗಳನ್ನು ತಪ್ಪಿಸಿದರೆ ಧರ್ಮಕರ್ತರ ಉದ್ದೇಶಕ್ಕೂ ಕೀರ್ತಿಗೂ ಭಂಗಬರುತ್ತದೆಂದು ಹಿಂದಿನ ಕಮಿಟಿಯವರು ಪಟ್ಟಿರುವ ಅಭಿಪ್ರಾಯವನ್ನು ಸಂಕೋಚಗಳವಾಗಿ ಅನುಮೋದಿಸಿ ಅವುಗಳ ಗೋಜಿಗೆ ಹೋಗಲಿಲ್ಲವೆಂದು ತೋರುತ್ತದೆ. ನಮ್ಮ ಸಂಸ್ಥಾನದ ಗೌರವ ಪ್ರತಿಷ್ಠೆಗಳಿಗೆ ಈ ಅನ್ನ ಸತ್ರಗಳೇ ಕಾರಣವಾಗಿರುವ ಪಕ್ಷದಲ್ಲಿ ಪರಿಹಾರದ್ರವ್ಯ ವ್ಯಯದಿಂದ ಕೀರ್ತಿಪ್ರದವಾದ ಸುಧಾರಣಾಕಾರ್ಯಗಳನ್ನು ಮಾಡಬೇಕಾದ ಆವಶ್ಯಕತೆ ಇರಲಿಲ್ಲ. ಅಂತಹ ಅಭಿಪ್ರಾಯವು ನಮ್ಮ ಪ್ರಭುತ್ವದವರಿಗೆ ನಿಜವಾಗಿಯೂ ಇದ್ದ ಪಕ್ಷದಲ್ಲಿ ಅದು ಒಂದು ಭ್ರಮೆಯೆಂದು ಹೇಳಬೇಕಾಗುವುದು.

ಷೌಕತ್‌ಆಲಿಯವರ ಲೇಖನಕ್ಕೆ ಪ್ರತ್ಯುತ್ತರ

"ಹಿಂದು ಮಹಮ್ಮದೀಯ ಸಿಕ್ಕು ಸಮಸ್ಯೆಯನ್ನು ಪರಿಹರಿಸಲು ನಾನು ಮಾಡುತ್ತಿರುವ ಪ್ರಯತ್ನವನ್ನು ತಮಗೆ ಆಗಾಗ್ಗೆ ಕಾಲಿಕ ಪತ್ರಿಕೆ ತಿಳುಹಿಸುತ್ತಿದ್ದೇನೆ. ಪಂಡಿತ ಮದನ ಮೋಹನ ಮಾಳವೀಯರವರು ಅನ್ನತ್ಯಾಗ ಮಾಡಿದ್ದರೂ ಈ ವಿಚಾರದಲ್ಲಿ ಬಹಳ ಪ್ರಯಾಸಪಟ್ಟು ಕೃಷಿಮಾಡುತ್ತಿರುವರು. ಅವರ ಕೂಡ ನಾನು ಆಲೋಚಿಸುತ್ತಿರುವುದರಲ್ಲಿ ನಮ್ಮ ರಾಷ್ಟ್ರ

...ಗಿರುವ ಪಕ್ಷಗಳೊಡನೆ ಅನುಕೂಲ ... ತಮ್ಮ ... ಅಭಿಪ್ರಾಯವನ್ನು ... ಸಂಬಂಧಪಟ್ಟ ... ಮಹಾತ್ಮರ ... ಪ್ರಾಣ ... ಸಮಾಧಾನಕ್ಕೆ ... ಮಹಾತ್ಮರನ್ನು ... ಬಿಡುಗಡೆ ಮಾಡಬೇಕೆಂದು ... ಸಿಕ್ಖರಿಗೂ ಮಹಾತ್ಮರಲ್ಲಿ ವಿಶೇಷ ಗೌರವವಿರುವುದರಿಂದ ಅವರು ಈ ಸಭೆಗೆ ಸೇರಿ ಬಹಳ ಮಟ್ಟಿಗೆ ಅನುಕೂಲವಾಗುತ್ತದೆಂದು ನಾನು ನಂಬಿರುತ್ತೇನೆ. ಈಗ ಮಹಾತ್ಮರನ್ನು ಬಿಡುಗಡೆ ಮಾಡಿದರೆ ವೈಸ್ರಾಯರು ನಮ್ಮ ದೇಶಕ್ಕೆ ಮಹೋಪಕಾರ ಮಾಡಿದಂತಾಗುತ್ತದೆ. ಅದಕ್ಕೆ ನಾವು ಕೃತಜ್ಞತಾಪೂರ್ವಕವಾಗಿ ವಂದಿಸುವೆವು. ಇದರಿಂದ ಹಿಂದುಗಳಿಗೂ ಸಿಕ್ಖರಿಗೂ ಬಹಳ ಸಂತೋಷವಾಗುವುದು. ದೇಶದ ನಾನಾ ಮತದವರಲ್ಲಿ ಸಾಮರಸ್ಯವನ್ನುಂಟುಮಾಡಬೇಕೆಂಬುದು ವೈಸ್ರಾಯರ ಮತ್ತು ಬ್ರಿಟಿಷ್ ಉದ್ಯೋಗಿಗಳ ಕೋರಿಕೆಯಾಗಿರುವುದೆಂಬುದು ಇದರ ಮೂಲಕ ಪ್ರಪಂಚಕ್ಕೆಲ್ಲ ಗೋಚರವಾಗುವುದು. ಸತ್ಯಾಗ್ರಹದಿಂದ ದೇಶದಲ್ಲಿ ಮನಸ್ತಾಪವೂ ಕಷ್ಟಪರಂಪರೆಯೂ ಪ್ರಾಪ್ತವಾಗಿರುವುದರಿಂದ ಅದನ್ನು ಕೊನೆಗಾಣಿಸಬೇಕು. ಇಲ್ಲವೆ ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದು ನಾನು ಮಹಾತ್ಮರನ್ನು ಪ್ರಾರ್ಥಿಸುವೆನು. ನನ್ನ ಮಾತನ್ನು ಅವರು ತಿರಸ್ಕರಿಸುವುದಿಲ್ಲವೆಂಬ ನಂಬಿಕೆಯು ನನಗಿರುತ್ತದೆ. ಅನಂತರ ಕೂಡಲೆ ಬ್ರಿಟಿಷರಿಗೂ ಭಾರತೀಯರಿಗೂ ಗೌರವಪ್ರದವಾದ ಸಮಾಧಾನವು ಕುದುರಿಸಲ್ಪಡಬಹುದು. ಹಾಗೆ ಸಮಾಧಾನವೇರ್ಪಟ್ಟರೆ ಭಾರತದೇಶದಲ್ಲಿ ಶಾಂತಿಯುಂಟಾಗುವುದು ಮತ್ತು ನೂತನ ರಾಜ್ಯಾಂಗ ನಿರ್ಮಾಣ ವಿಚಾರದಲ್ಲಿ ಕೃಷಿಮಾಡಲು ಅವಕಾಶವಾಗುವುದು. ದೇಶದಲ್ಲಿ ಮತಕಲಹವೂ ದ್ವೇಷವೂ ಹೆಚ್ಚುವುವು. ನಾನು ಮಹಮ್ಮದೀಯ ಸಂಘಗಳ ... ಅನುಕೂಲವಾಗಿ ನಿರ್ಮಾಣ ವಿಧಾನವನ್ನು ಕೈಕೊಳ್ಳಲು ಅವಕಾಶ ಕೊಡಬೇಕೆಂಬ ಅಭಿಪ್ರಾಯದಿಂದ ಈ ಸೂಚನೆಯನ್ನು ಮಾಡುತ್ತೇನಲ್ಲದೆ ಬೇರೆ ಯಾವ ಅಭಿಪ್ರಾಯದಿಂದಲೂ ಅಲ್ಲ. ನಾನು ಯಾರೊಡನೆಯೂ ಕಲಹ ಮಾಡಲಿಚ್ಛಿಸುವುದಿಲ್ಲವಲ್ಲದೆ ಏನು ಮಾಡುವಂತೆಯೂ ಕೋರುವುದಿಲ್ಲ. ಈಗ ದೇಶದಲ್ಲಿ ಶಾಂತಿಯುಂಟಾಗಬೇಕೆಂಬುದು ಸಕಲರ ಕೋರಿಕೆಯಾಗಿರುವುದರಿಂದ ಅದಕ್ಕಾಗಿ ಪ್ರಬಲ ಪ್ರಯತ್ನ ಮಾಡಬೇಕಾಗಿದೆ. ನಾನು ವಿನಯದಿಂದ ಮಾಡಿರುವ ಈ ನನ್ನ ಪ್ರಾರ್ಥನೆಯನ್ನು ವೈಸ್ರಾಯರು ಉಚಿತ ರೀತಿಯಲ್ಲಿ ಪರ್ಯಾಲೋಚಿಸುವರೆಂದೂ, ಈ ಮಧ್ಯೆ ಕಾರಾಗೃಹದಲ್ಲಿರುವ ಮಹಾತ್ಮರೊಡನೆ ಸಂಧಾನಿಸಲು ಅನುಮತಿಯನ್ನೀಯಬೇಕೆಂದೂ ಪ್ರಾರ್ಥಿಸುತ್ತೇನೆ. ದೇಶದಲ್ಲಿ ಸಿದ್ಧವಾದ ಶಾಂತಿಯುಂಟಾಗಬೇಕಾದರೆ, ಬ್ರಿಟಿಷ್ ಇಂಡ್ಯಾದವರಿಗೂ ಸಂಸ್ಥಾನಾಧಿಪತಿಗಳಿಗೂ, ಹಿಂದುಗಳಿಗೂ ಮಹಮ್ಮದೀಯರಿಗೂ, ಇತರ ಅಲ್ಪ ಸಂಖ್ಯಾತ ಸಂಘಗಳವರಿಗೂ ಸಮಾಧಾನವುಂಟಾಗಬೇಕು. ಈ ಭಾರತ ದೇಶಾಭಿವೃದ್ಧಿಗಾಗಿ ಸರ್ವರೂ ಕೃಷಿಮಾಡುತ್ತಿರುವರು. ಆದುದರಿಂದ ಈ ನನ್ನ ಟೆಲಿಗ್ರಾಮಿಗೆ ವೈಸ್ರಾಯರು ಉತ್ತರವನ್ನು ಕೊಡುವಂತೆ ವಿನಯದಿಂದ ಬೇಡುತ್ತೇನೆ. ವೈಸ್ರಾಯರು ನನ್ನ ಕೋರಿಕೆಯನ್ನು ಈಡೇರಿಸುವರೆಂದು ನಂಬುತ್ತೇನೆ. ... ಮಹಾತ್ಮರು ಮೊದಲಾದವರೊಡನೆ ಪ್ರಸ್ತಾಪಿಸಲು ಅನುಕೂಲವಾಗುವುದು'' ಎಂದು ಮೌಲಾನಾ ಶೌಕತಾಲಿಯವರು ವೈಸ್ರಾಯರ ಪ್ರೈವೇಟ್ ಸೆಕ್ರೆಟರಿಯವರಿಗೆ ಬರೆದಿದ್ದರು. ಅದಕ್ಕೆ ... ಗಾಂಧಿಯವರು ಸತ್ಯಾಗ್ರಹವನ್ನು ಸಂಪೂರ್ಣವಾಗಿ ವಿರಮಿಸದ ಹೊರತು ನಿಮ್ಮ ಕೋರಿಕೆಯನ್ನು ನೆರವೇರಿಸಲಾಗುವುದಿಲ್ಲ'' ಎಂದು ಸೆಕ್ರೆಟರಿಯವರು ಉತ್ತರವನ್ನು ಕೊಟ್ಟಿರುತ್ತಾರೆ.

ಶೌಕತಾಲಿಯವರ ಆಶಾಭಂಗ

ಮಹಾತ್ಮರನ್ನು ಬಿಟ್ಟುಕೊಡಬೇಕೆಂದು ನಾನು ವಿನಯದಿಂದ ಪ್ರಾರ್ಥಿಸಿದ್ದಾಗ್ಯೂ ವೈಸ್ರಾಯರು ಅಂಗೀಕರಿಸದಿದ್ದುದಕ್ಕಾಗಿ ನಾನು ವಿಷಾದಿಸುತ್ತೇನೆ. ಮಹಾತ್ಮರ ಸಹಕಾರವು ಈಗ ದೇಶಕಲ್ಯಾಣಕ್ಕೆ ಅವಶ್ಯಕವಾದ ರೀತಿಯಲ್ಲಿ ಶಾಂತಿಯನ್ನುಂಟುಮಾಡಲು ನಾನು ಪ್ರಯತ್ನಿಸಿದೆನು. ನನ್ನ ಒಳ್ಳೆ ಅಭಿಪ್ರಾಯದಿಂದ ಮಾಡಿದ ಸೂಚನೆಯನ್ನು ಅಂಗೀಕರಿಸದಿರುವುದು ವೈಸ್ರಾಯರಿಗೆ ಆಲೋಚನೆಯನ್ನು ಮಾಡಲು ಅವಕಾಶವಿಲ್ಲದುದರಿಂದ ಎಂದು ತೋರುತ್ತದೆ. ಆದರೂ ನಾನು ಪ್ರಯತ್ನವನ್ನು ಬಿಡದೆ ಪ್ರಯತ್ನಿಸುವೆನು. ಗೌರವಪ್ರದವಾಗಿ ಸಮಾಧಾನವಾಗಬೇಕೆಂದು ದೇಶೀಯರೆಲ್ಲರೂ ಕೋರುತ್ತಾರೆ. ಇಂತಹ ಸಂದರ್ಭದಲ್ಲಿ ದೊರೆತನದವರು ಪ್ರಜೆಗಳ ಸಹಾನುಭೂತಿಯನ್ನು ಕಳೆದುಕೊಳ್ಳುವುದು ತಪ್ಪು. ನಾನು ಸ್ವಾರ್ಥಪರತ್ವದಿಂದ ಕೆಲಸಮಾಡುತ್ತಿಲ್ಲ. ನಾನೊಬ್ಬ ಅಲ್ಪನಾದ ಸೇವಕನು. ಲಕ್ನೋ ನಗರದಲ್ಲಿ ತಾ|| ೧ ರಲ್ಲಿ ನಡೆಯುವ ಸಭೆಯಿಂದ ಅನುಕೂಲವಾಗುವುದೆಂದು ಕಂಡುಬರುತ್ತದೆ. ಪಂಜಾಬಿನ ಸಿಂಧಿನಲ್ಲಿರುವ ಹಿಂದು ಮತ್ತು ಸಿಕ್ಖರುಗಳ ಅಭಿಪ್ರಾಯದಲ್ಲಿ ನ್ಯಾಯ ಒದಗಿಸಲ್ಪಡುವುದು. ಆದ್ದರಿಂದ ನಿಜವಾಗಿ ... ಉಂಟಾಗಿದ್ದರೆ ಮಹಮ್ಮದೀಯರು ... ಮೂರ್ತಿವಂತರಾದ ಮಹಾತ್ಮರು ... ಹಿಂದೂಗಳಿಗೂ ಮಹಮ್ಮದೀಯ ಸಿಕ್ಖರುಗಳೊಳಗೆ ಸಮಾಧಾನ ಉಂಟಾದರೆ ಅದರಿಂದ ಬ್ರಿಟಿಷರಿಗೆ ವಿಶೇಷ ಲಾಭವಾಗುವುದು. ಆದುದರಿಂದ ಈಗಲಾದರೂ ಮಹಾತ್ಮರನ್ನು ಬಿಟ್ಟುಕೊಟ್ಟರೆ ಬಹಳ ಪ್ರಯೋಜನವುಂಟು. ಸಮಾಧಾನವುಂಟಾಗಲು ಇದು ಸರಿಯಾದ ಕಾಲ. ಇದಕ್ಕೆ ಬ್ರಿಟಿಷ್ ರಾಜನೀತಿಜ್ಞರು ... ಪ್ರತಿಪಕ್ಷಗಳೊಡನೆ ... ಹಿಂದೆ ಮಹಾತ್ಮ ಗಾಂಧಿಯವರೊಡನೆ ಮಾತುಕತೆ ನಡೆಸಿದ ಲಾರ್ಡ್ ಇರ್ವಿನ್ ಅವರು ... ಅಧಿಕಾರಿವರ್ಗದವರೂ ... ಸಮಾಧಾನವಾಗಿ ... "ಗಾಂಧಿಯವರು ಮಹಾತ್ಮರೇ ಸರಿ" ಎಂದು ಶೌಕತಾಲಿಯವರು ಹಿಂದೆ ಹೇಳಿದ್ದರು. ಮಹಾತ್ಮರನ್ನು ಪರಮ ಶತ್ರುಗಳನ್ನಾಗಿ ಪರಿಗಣಿಸಿ ಅವರನ್ನು ವಾಚಾಮಗೋಚರವಾಗಿ ನಿಂದಿಸುತ್ತಿದ್ದ ಶೌಕತಾಲಿಯವರು ಮಹಾತ್ಮರ ಉಪವಾಸದ ಪ್ರಭಾವದಿಂದ ಈಗ ಪರಮಭಕ್ತರಾಗಿ ಅವರ ಕಾರ್ಯದಲ್ಲಿ ಸಹಕರಿಸಲು ಬದ್ಧರಾಗಿ ಪ್ರಯತ್ನಿಸುತ್ತಿರುವುದು ಶುಭಸೂಚಕವಾಗಿದೆ. ಇವರು ಮಹಮ್ಮದೀಯರಲ್ಲಿ ಪ್ರಬಲ ಪಕ್ಷದ ನಾಯಕರಾಗಿರುವುದರಿಂದ ಇವರ ಹಿಂದು ಮಹಮ್ಮದೀಯ ಸಖ್ಯಪ್ರಯತ್ನವು ಕೈಗೂಡುವುದರಲ್ಲಿ ಅತ್ಯಂತರವಿಲ್ಲ. ಇಂತಹ ಪ್ರಯತ್ನಕ್ಕೆ ವೈಸ್ರಾಯರು ತಡೆಯನ್ನು ಒಡ್ಡಿ ಇವರ ಆಶಾಭಂಗವನ್ನುಂಟುಮಾಡುತ್ತಿರುವುದು ಅವರ ಅದೂರದೃಷ್ಟಿಯನ್ನು ವ್ಯಕ್ತಪಡಿಸುತ್ತದೆ. ವಿನಾಶಕಾಲಕ್ಕೆ ವಿಪರೀತಬುದ್ಧಿ ಹುಟ್ಟುವುದೆಂಬ ಲೋಕೋಕ್ತಿಯಿಂದಲೂ ಸುಳ್ಳಾಗುವುದಿಲ್ಲ.

ಅಸ್ಪೃಶ್ಯತಾ ನಿವಾರಣೆಗಾಗಿ ದ್ರವ್ಯ ಸಹಾಯ

ಅಸ್ಪೃಶ್ಯತಾ ನಿವಾರಣೆ ಮಾಡುವುದಕ್ಕಾಗಿ ಉಪಯೋಗಿಸಲು ಬರೋಡದ ಮಹಾರಾಜರು ರಾವ್ ಬಹದ್ದೂರ್ ಎಂ. ಸಿ. ರಾಜಾ ಅವರಿಗೆ ೫೦೦೦ ರೂಪಾಯಿಗಳ ಒಂದು ಚೆಕ್ಕನ್ನು ಕೊಟ್ಟರು. ಅಖಿಲಭಾರತ ಅಸ್ಪೃಶ್ಯತಾ ನಿವಾರಣ ಸಂಘದ ಅಧ್ಯಕ್ಷರಾದ ಜಿ. ಡಿ. ಬಿರ್ಲಾ ಅವರಿಗೆ ಎಂ. ಸಿ. ರಾಜಾ ಅವರು ಆ ಚೆಕ್ಕನ್ನು ಈಗ ಕಳುಹಿಸಿಕೊಟ್ಟಿರುವರು. ಬರೋಡದ ಮಹಾರಾಜರು ಸ್ವೇಚ್ಛೆಯಿಂದ ಉದಾರವಾಗಿ ದ್ರವ್ಯಸಹಾಯ ಮಾಡಿದುದಕ್ಕಾಗಿ ಆ ದೇಶದ ಹರಿಜನರ ಕೃತಜ್ಞತೆಯನ್ನು ಎಂ. ಸಿ. ರಾಜಾರವರು ತಿಳಿಸಿದರು.

ಹರಿಜನರು

ಮಹಾತ್ಮರು ಎಲ್ಲಾ ಜನರನ್ನೂ—ಅಸ್ಪೃಶ್ಯರಿಗೆ ಮಹಾತ್ಮರು ಹರಿಜನರೆಂದು ನಾಮಕರಣ ಮಾಡಿರುವುದರಮೇಲೆ ದಕ್ಷಿಣ ದೇಶದಲ್ಲಿ ಕೆಲವು ಅಸ್ಪೃಶ್ಯರು, ಆ ಹೆಸರು ವೈಷ್ಣವ ಮತವಾಚಕವೆಂದು, ಮಾತ್ರವೇ, ಅರ್ಥಕೊಡುತ್ತದೆಂದು ಆಕ್ಷೇಪಿಸುತ್ತಿರುವರೆಂದು ಮದರಾಸು ಹರಿಜನ ಸಂಘದ ಕಾರ್ಯದರ್ಶಿಯವರು ಮಹಾತ್ಮರಿಗೆ ಬರೆದು ಅವರವಿಪ್ರಾಯವನ್ನು ಕೇಳಿದ್ದರು. ಅದಕ್ಕೆ ಮಹಾತ್ಮರು "ಹರಿಜನರೆಂಬ ಹೆಸರನ್ನಿಟ್ಟಿರುವುದಕ್ಕಾಗಿ ಆಕ್ಷೇಪಿಸುವುದು ಬಹಳ ವಿಷಾದಕರವಾಗಿದೆ. ಹರಿಜನರೆಂದು ನಾಮಕರಣ ಮಾಡುವಾಗ್ಗೆ ನಾನು ವಿಷ್ಣುವನ್ನಾಗಲಿ ಶಿವನನ್ನಾಗಲಿ ನನ್ನ ಮನಸ್ಸಿನಲ್ಲಿ ವ್ಯಾಪಿಸಿರಲಿಲ್ಲವೆಂದು ನಿಜವು ಅವರಿಗೆ ತಿಳಿಯಬೇಕಾಗಿದೆ. ಆ ಹೆಸರು ದೇವರ ಸಂಬಂಧವೆಂದು ಮಾತ್ರ ನಾನು ತಿಳಿಯಬೇಕೆಂದೆ. ವಿಷ್ಣು, ಶಿವ, ಬ್ರಹ್ಮ ಮೊದಲಾದ ಹೆಸರುಗಳೆಲ್ಲ ಅದೇ ಭಾವವುಳ್ಳವು. ಎಲ್ಲ ಹೆಸರುಗಳೂ ಒಬ್ಬ ದೇವರ ನಾಮಗಳೇ" ಎಂದು ಉತ್ತರ ಬರೆದಿರುವರು.

ಇಂಡ್ಯಾದೇಶವು ದಿನಬಳಿ ವಿಹಾರಿಗೆ ... ಲೋಕವು ...

"ಇಂಡ್ಯಾದಲ್ಲಿ ಮುಖ್ಯ ಆಹಾರ ಪದಾರ್ಥಗಳ ಬೆಲೆಯು ಬಹಳ ಕಡಿಮೆಯಾಗಿರುವುದರಿಂದ ಬ್ರಿಟಿಷರ ವ್ಯಾಪಾರಕ್ಕೆ ಬಹಳ ನಷ್ಟ ಉಂಟಾಗುತ್ತಿದೆ. ಈವರೆಗೆ ಇಂಡ್ಯಾ ವೈಸ್ರಾಯ್ ದೇಶಗಳಲ್ಲಿ ಬ್ರಿಟಿಷರ ಸರಕುಗಳು ವಿಶೇಷವಾಗಿ ಮಾರಾಟವಾಗುತ್ತಿದ್ದುವು. ಕೆಲ ವರ್ಷಗಳಿಂದ ಕ್ರಮವಾಗಿ ಕಳೆದೆರಡು ವರ್ಷಗಳಿಂದಲೂ ದೇಶಗಳಲ್ಲಿ ಧಾನ್ಯಗಳ ಬೆಲೆಯು ಬಹಳ ಮಟ್ಟಿಗೆ ಇಳಿದು ಹೋಗಿರುವುದು. ಇದರಿಂದ ಇಂಡ್ಯಾದೇಶದ ರೈತರುಗಳೂ ವರ್ತಕರುಗಳೂ ಧನಹೀನರಾಗಿರುವ ಪ್ರಯುಕ್ತ ಬ್ರಿಟಿಷ್ ವಸ್ತುಗಳನ್ನು ಕೊಳ್ಳಲಾರದವರಾಗಿರುತ್ತಾರೆ. ಇಂಡ್ಯಾದಲ್ಲಿ ದಾರಿದ್ರ್ಯವು ಅತ್ಯಧಿಕವಾಗಿದೆ. ಈ ಕಾರಣದಿಂದಲೇ ರಾಜಕೀಯದಿಂದಲೂ ಜನವು ಬಹಳ ಅಧಿಕವಾಗಿರುವುದು. ಆದುದರಿಂದ ಬ್ರಿಟಿಷ್ ಸರಕುಗಳ ಮಾರಾಟವು ಬಹಳವಾಗಿ ನಿಂತುಹೋಗಿರುವುದು" ಎಂದು ಸರ್ ಸ್ಯಾಮ್ಯುಯೆಲ್ ಹೋರರವರು ಬೆಲ್ಪಾಸ್ಟ್‌ನಲ್ಲಿ ಉಪನ್ಯಾಸ ಮಾಡುವಾಗ್ಗೆ ಹೇಳಿದರು. ಭಾರತೀಯರು ಸ್ವದೇಶವಸ್ತು ಬ್ರಿಟಿಷ್ ಪ್ರಭುತ್ವದವರಿಗೂ, ಅನ್ಯಾಯ ಪ್ರಜೆಗಳಿಗೂ ವಿರೋಧಿಯಾಗಿರುತ್ತದೆ. ಸಂತೋಷಪ್ರದವಾಗಿರುತ್ತದೆ. ಆದರೆ ಈಗ ಭಾರತದೇಶದಲ್ಲಿ ಸ್ವರಾಜ್ಯ ಪ್ರಾಪ್ತಿಗಾಗಿ ನಡೆಯುತ್ತಿರುವ ರಾಜಕೀಯ ಆಂದೋಳನವು ದಾರಿದ್ರ್ಯದೆಸೆಯಿಂದ ನಡೆಯುತ್ತಿರುವುದೆಂದು ಹೇಳುವುದು ಮಾತ್ರ ವಿಷಾದಕರವಾಗಿದೆ.

ಈ ಭಿನ್ನಾಭಿಪ್ರಾಯಗಳನ್ನು ನಾವಿಬ್ಬರೂ ಪ್ರತಿಪಾದಿಸುತ್ತಿದ್ದರೂ, ಇವು ನಮ್ಮ ಸಮಾಜದಲ್ಲಿ ಕೆಲ ಕೆಲವರಿಗೆ ಅವರವರ ರುಚ್ಯನುಸಾರವಾಗಿ ಮಾನ್ಯಾಮಾನ್ಯವಾಗಿವೆ.

ಹೀಗೆ ಸಮಾಜದಲ್ಲಿ ಭಿನ್ನಾಭಿಪ್ರಾಯಗಳಿರುವದು ಯುಕ್ತವಾಯಿತೆಂಬುದಿಲ್ಲ. ಆದ್ದರಿಂದ ಯಾವದಾದರೊಂದು ಅಭಿಪ್ರಾಯವು ಮಾನ್ಯವಾಗಿ ಸಾರ್ವತ್ರಿಕವಾಗುವದು ಇಷ್ಟವಾಗಿದೆ. ಆದ್ದರಿಂದ ಕೆಳಗೆ ಬರೆದಂತೆ ಒಪ್ಪಿರುತ್ತೇವೆ —

(೧) ಈ ಉಭಯ ವಾದವನ್ನು ನಿರೀಕ್ಷಿಸಿ ನಿರ್ಣಯಿಸಲಿಕ್ಕೆ ಈಗ ಪಂಚಾಚಾರ್ಯಪೀಠಸ್ಥರಾಗಿರುವಂಥ ಸ್ವಾಮಿಗಳಲ್ಲಿ ಯಾರೊಬ್ಬರನ್ನಾದರೂ ಆ ಪೀಠಸ್ಥರು ಆರಿಸಿಕೊಟ್ಟಲ್ಲಿ ಅವರು ಅಧ್ಯಕ್ಷರಾಗಲಿಕ್ಕೆ ನಾವು ಉಭಯರೂ ಒಪ್ಪಿಕೊಂಡು ಈ ವಿವಾದ ಅವರನ್ನೇ ಅಧ್ಯಕ್ಷರನ್ನಾಗಿ ನಿಯಮಿಸಿಕೊಂಡಿದ್ದೇವೆ.

(೨) ಈ ವಿಷಯವು ಮೇಲೆ ಬರೆದಂತೆ ವ್ಯಕ್ತಿಮಾತ್ರಗತವಲ್ಲದ್ದರಿಂದ ಆ ಸ್ವಾಮಿಗಳಲ್ಲಿ ನಮ್ಮ ಬಿನ್ನಹವು ಏನೆಂದರೆ — ಆ ಅಧ್ಯಕ್ಷರು ನಿರ್ಣಯಿಸಿದಂತೆ ವ್ಯವಹರಣೆಯಲ್ಲಿ ತರಲಿಕ್ಕೆ ಒಪ್ಪುತ್ತಿದ್ದರೆ ಮಾತ್ರ ಅವರು ಅಧ್ಯಕ್ಷರನ್ನು ಆರಿಸಬೇಕು.

(೩) ಎ ನಮ್ಮ ನಮ್ಮ ಪಕ್ಷಗಳನ್ನು ನಾವು ಉಪನಿಷತ್ತುಗಳಿಂದಲೂ, ವೇದಗಳಿಂದಲೂ, ಆಗಮಗಳಿಂದಲೂ, ಬಿ ನಿರ್ವಿವಾದವಾಗಿ ಕ್ರಿ. ಶ. ೧೯೧೯ ರ ವರೆಗೆ ನಡೆದ ವೀರಶೈವರ ಶಿಷ್ಟಾಚಾರದಿಂದಲೂ, ಸಿ ವಚನ ಗ್ರಂಥಗಳಿಂದಲೂ, ಡಿ. ಅಷ್ಟಾವರಣ ಪಕ್ಷ್ಯವಿಚಾರಗಳಿಂದಲೂ ಸಿದ್ಧ ಮಾಡಲು ಬದ್ಧರಾಗಿರುವೆವು.

(೪) ಈ ವಾದವನ್ನು ಸಮರ್ಥಿಸಲಿಕ್ಕೆ ನಾವು ಉಭಯತರು ನಮ್ಮ ನಮ್ಮ ಪರವಾಗಿ ಬೇಕಾದ ವೀರಶೈವರನ್ನು ತರಲಿಕ್ಕೆ ಅಧಿಕಾರವುಳ್ಳವರಾಗಿದ್ದೇವೆ.

(೫) ಈ ವಿಷಯವು ಮಹತ್ವದ್ದಾಗಿರುವದರಿಂದ ಈ ವಾದವನ್ನು ನೋಡಲಿಕ್ಕೆ ಮತ್ತು ಕೇಳಲಿಕ್ಕೆ ಪರಮತದ ವಿದ್ವಾಂಸರನ್ನು ಕರೆಯಿಸಲಿಕ್ಕೂ ಅಡ್ಡಿಯಿಲ್ಲ. ಹಾಗೆ ಕರೆಯಿಸುವದು ಪ್ರಶಸ್ತವಾಗಿದೆ.

(೬) ಈ ಸಭೆಯು ಸಾಮಾಜಿಕ ವಿಷಯಗಳನ್ನೊಳಕೊಂಡದ್ದರಿಂದ ಯಾವ ವೀರಶೈವ ಸಭ್ಯಗೃಹಸ್ಥನಿಗೂ ಬರಲಿಕ್ಕೆ ಅಡ್ಡಿಯಿಲ್ಲ.

(೭) ಈ ಸಭೆಯಲ್ಲಾದ ನಿರ್ಣಯದಂತೆ ನಾವಿಬ್ಬರೂ ವರ್ತಿಸುತ್ತೇವೆ ಮತ್ತು ಪಂಚಾಚಾರ ಪೀಠಸ್ಥರಿಗೂ ವರ್ತಿಸಬೇಕಾಗಿ ಪ್ರಾರ್ಥಿಸುತ್ತೇವೆ.

(೮) ಮೇಲಿನ ಒಂದು ಮತ್ತು ಎರಡನೇ ನಿಯಮಗಳಂತೆ ಈ ಸಭೆಗೆ ಅಧ್ಯಕ್ಷರನ್ನು ಪೂರೈಯಿಸುವ ಭಾರವನ್ನು ಶ್ರೀ ಹಗಡಿನ್ನಿ ಚಂದ್ರಶೇಖರಶಾಸ್ತ್ರಿಗಳು ವಹಿಸಿಕೊಂಡಿರುತ್ತಾರೆ. ಈ ಕಾರ್ಯವನ್ನು ಇವರು ಇದೇ ನವಂಬರ್ ತಿಂಗಳ ಹದಿನೈದನೆಯ ತಾರೀಖಿನೊಳಗಾಗಿ ಮಾಡಬೇಕು.

ಮುಕ್ಕಾಂ ರಾಯಚೂರು, ತಾ|| ೧೫-೧೦-೧೯೩೨.	}	ಚಂದ್ರಶೇಖರಶಾಸ್ತ್ರೀ, ಹರ್ಡೇಕರ ಮಂಜಪ್ಪ

ಸಾಕ್ಷಿಗಳು —(೧) ಪಾವಟೆ ಸಿದ್ಧರಾಮಪ್ಪ, ಬಿ ಎ , ಎಲ್‌ಎಲ್ ಬಿ ಅಡ್ವೊಕೇಟ್. (೨) ಬಸವಪ್ಪಶಾಸ್ತ್ರೀ ಸಾಲಿಮಠ, ಮಸ್ಕಿ. (೩) ಗುರು ಬಸವಶಾಸ್ತ್ರೀ, ಗಲಗಲಿ. (೪) ಸಿದ್ಧಾಂತಿ ಅಯ್ಯಪ್ಪಶಾಸ್ತ್ರಿ, ದೇವಸೂಗೂರು (೫) ಬಿ. ಅಮರಪ್ಪ, ವಕೀಲ, ಹೈಕೋರ್ಟು. (೬) ಶಂಕರಪ್ಪ, ವಕೀಲು, ಮಾನ್ವಿ. (೭) ಪೋತಿಪುರ, ರಾಚಯ್ಯ. (೮) ರಸ್ತಾಪುರ, ಮುನಿಯಪ್ಪ. (೯) ಎಸ್. ಸಿದ್ಧರಾಮಪ್ಪ, ವಕೀಲ. (೧೦) ಮಲ್ಲನಗೌಡ ಪಾಟೀಲ, ಲಕ್ಕುಂಡಿ. (೧೧) ಅಯ್ಯಪ್ಪಗೌಡ, ತಿಡಕಲ.

ಅಧ್ಯಕ್ಷರು

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯವರ್ಯ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಟ್ಟಾಧ್ಯಕ್ಷ ಶ್ರೀ ಶಿವಾನಂದ ರಾಜ ದೇಶಿಕೇಂದ್ರ ಮಹಾಸ್ವಾಮಿಗಳು, ಪಂಡಿತ ಶ್ರೀ ಚಂದ್ರಶೇಖರಶಾಸ್ತ್ರಿ ಶ್ರೀಯುತ ಹರ್ಡೇಕರ ಮಂಜಪ್ಪ ಈ ಉಭಯರ ಜಾತಿವಿಷಯಕವಾದ ವಾದವಿಮರ್ಶಾ ಸಭೆಗೆ ಅಧ್ಯಕ್ಷಸ್ಥಾನವನ್ನು ವಹಿಸಿರುತ್ತಾರೆ. ಮುಂದೆ ಮಹಾಸನ್ನಿಧಿಯ ಅಪ್ಪಣೆಯಾದ ಕೂಡಲೆ ಸ್ಥಾನ ಮತ್ತು ಕಾಲ ಇವುಗಳನ್ನು ತಿಳಿಸಲಾಗುತ್ತೆ. ಬಸವರಾಜಶಾಸ್ತ್ರಿಗಳು ಹಗಡವಿನ್ನಿ ಬೃಹನ್ಮಠ, ಪ್ರಿನ್ಸಿಪಾಲ ಶಂಕರಕಾಲೇಜು, ಯಾದಗಿರಿ.

ಸ್ಮಾರಕವು.

ಶ್ರೀ|| ಧರ್ಮವೀರ ಶಂಕರಣ್ಣನವರು ಗಚ್ಚಿನಕಟ್ಟಿ ಯಾದಗಿರಿ ಇವರ ಪುಣ್ಯತಿಥಿಯು ೨ನೇ ಕಾರ್ತಿಕ ಶು|| ೭ ಬುಧವಾರ (ತಾ|| ೧೧-೩೨) ಸಾರ್ವಜನಿಕ ಜನಗಳಿಂದ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪ್ರಾತಃಕಾಲದಲ್ಲಿ ಶ್ರೀ ಶಿವಶಂಕರಾಚಾರ್ಯರವರು ಸಿಂಹಾಸನಾಧೀಶ ಶ್ರೀ ಶ್ರೀ ... ಇವರ ಅಧ್ಯಕ್ಷತೆಯಲ್ಲಿ ... ಮಹಾಸ್ವಾಮಿಗಳ ... ಶ್ರೀ ಶಂಕರ ಲಿಂಗದೀಕ್ಷೆಗೆ ಕಾಲೇಜಿನ ವಿದ್ಯಾರ್ಥಿಗಳ ಸಹಾಯದಿಂದ ... ಮಾಡಿಸಲ್ಪಟ್ಟಿತು. ... ತಳಿರುತೋರಣಗಳಿಂದ ... ಬೆಳಗಿನ 1 ಘಂಟೆಯಿಂದ ಕಾಲೇಜಿನ ಪ್ರಿನ್ಸಿಪಾಲರಾದ ... ಬಸವರಾಜಶಾಸ್ತ್ರಿಗಳು ... ವಿದ್ಯಾರ್ಥಿಗಳ ಸ್ವಾಗತ ... ಅನಂತರ ಶಂಕರಲಿಂಗಮೂರ್ತಿಗೆ ಮಂಗಲ ನಡೆದು ಶ್ರೀ|| ಧರ್ಮವೀರ ಶಂಕರಣ್ಣನವರ ಭಾವಚಿತ್ರವು ಉತ್ಸವದೊಡನೆ ಅವರ ಗೃಹಕ್ಕೆ ಜಯಘೋಷದೊಡನೆ ತರಲ್ಪಟ್ಟಿತು. ಬಳಿಕ ಸಾಯಂಕಾಲ 6 ರಿಂದ 8 ಘಂಟೆಯವರೆಗೆ ಶಂಕರಕಾಲೇಜಿನಲ್ಲಿ ಆನಂದಲ್ಲಿ ಶ್ರೀ ... ಮೂರ್ತಪ್ಪನವರಿಂದ ಶಿವಕೀರ್ತನವು ಮಾಡಲ್ಪಟ್ಟಿತು. ತರುವಾಯ ಶಂಕರಣ್ಣ ಮಹಾರಾಜಕೀ ಜೈ ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಸೆಕ್ರೆಟರಿ, ಶಂಕರಕಾಲೇಜು, ಯಾದಗಿರಿ.

ಪ್ರಸಿದ್ಧ ಪತ್ರಿಕೆ.

ತಾ|| ೨-೧೧-೩೨ ರಲ್ಲಿ ನಡೆಯಬೇಕೆಂದು ಪ್ರಕಟಿಸಿದ್ದ ತೊಂಬಟಿಗರ ಸಂಘದ ಜನರಲ್ ಬಾಡಿ ಮೀಟಿಂಗು ಸದರಿ ಸಂಘದ ಅಧ್ಯಕ್ಷರಾಗಿದ್ದ ರಾವ್ ಬಹದ್ದೂರ್ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರು ನಿಧನವಾದ ನಿಮಿತ್ತ, ಮುಂದುವರಿಸಲ್ಪಟ್ಟದ್ದು ಸರಿಯಷ್ಟೆ. ಈಗ ಅದೇ ಮೀಟಿಂಗನ್ನು ತಾ|| 19 11-32 ರ ಶನಿವಾರ ಪ್ರಾತಃಕಾಲ 9 ಘಂಟೆಗೆ ಸರಿಯಾಗಿ, ಮೈಸೂರು ಇಲವಾಲದ ರಸ್ತೆಯಲ್ಲಿರುವ ತೊಂಬಟಿಗರ ಸಂಘದ ಬಿಲ್ಡಿಂಗ್ಸಿನಲ್ಲಿ ನಡೆಯಿಸಬೇಕಾಗಿ ನಿಶ್ಚಯಿಸಿರುತ್ತೆ. ಪ್ರಾರಂಭದಲ್ಲಿ, ನಮ್ಮ ಸಂಘಕ್ಕೆ ಅಪಾರವಾಗಿ ಸಹಾಯ ಸಂಪತ್ತಿಗಳನ್ನು ಉಂಟುಮಾಡಿಕೊಟ್ಟಿರುವ, 'ರಾವ್ ಬಹದ್ದೂರ್' 'ಧರ್ಮಪ್ರಕಾಶ' ಸಾಹುಕಾರ್ ಡಿ. ಬನುಮಯ್ಯನವರ, 'ಧರ್ಮಪರಾಯಣ' ಶ್ರೀ|| ಅಲಮ್ಮನವರ ಮತ್ತು ಶ್ರೀಮತಿ ತಿಮ್ಮಮ್ಮನವರ ಭಾವಚಿತ್ರಗಳ ಅನಾವರಣ ಮಹೋತ್ಸವವೂ, ಶ್ರೀಮತಿ ತಿಮ್ಮಮ್ಮನವರಿಗೆ 1 ಮಾನಪತ್ರನಿವೇದನವೂ, ದಿವಂಗತರಾದ ಶ್ರೀಯುತ ಸಾಹುಕಾರ್ ವಿ ಬಂಡಯ್ಯನವರ ಸ್ಮಾರಕವಾಗಿ 1 ಸಾರ್ವಜನಿಕ ಮುಫತ್ತು ವಾಚನಾಲಯದಾರಂಭವೂ ಸಹ ನಡೆಯಲು ಏರ್ಪಡಿಸಿರುತ್ತೆ. ಅನಂತರ ಸಂಘದ ಲೆಕ್ಕದ ಆಡಿಟ್ ರಿಪೋರ್ಟು ಸಂಘದ ಕಾರ್ಯಕಲಾಪಗಳ ವರದಿ, ಅಧಿಕಾರಿಗಳ ಹೊಸ ಚುನಾವಣೆ, ಕೆಲವು ರೂಲ್ಸುಗಳ ಬದಲಾವಣೆ ಮತ್ತು ಫಂಡು ವಸೂಲಿ ವಿಚಾರಗಳು ಚರ್ಚೆಗೆ ಬರುತ್ತವೆ. ಪರಸ್ಥಳೀಕರಿಗೆ ವಾಸಕ್ಕೂ ಊಟಕ್ಕೂ ಏರ್ಪಡಿಸಿರುತ್ತೆ. ನಮ್ಮ ಜನಸಮುದಾಯದ ಕೀರ್ತಿ ಗೌರವಗಳಿಗೆ ಸಂಬಂಧಿಸಿದ ಹಲವು ಮಹತ್ವದ ಸಂಗತಿಗಳು ತೀರ್ಮಾನವಾಗಬೇಕಾಗಿರುವುದರಿಂದ ಸಮಸ್ತ ಮತಬಾಂಧವರೂ ಮೀಟಿಂಗಿಗೆ ತಪ್ಪದೆ ದಯಮಾಡಿಸಬೇಕಾಗಿ ಪ್ರಾರ್ಥನೆ.

ರಿಪೋರ್ಟು ಇತ್ಯಾದಿಗಳ ಅಚ್ಚಾದ ಕಾಪಿಗಳನ್ನು 1 ದಿವಸ ಮುಂಚಿತವಾಗಿ ಸಂಘದ ಆಫೀಸಿನಲ್ಲಿ ಹಂಚಲಾಗುವುದು.

ಎಂ ಸಿ. ಮಲ್ಲಯ್ಯ ಎಂ ಪುಟ್ಟಯ್ಯ, ಕಾರ್ಯದರ್ಶಿಗಳು,
ತೊಂಬಟಿಗರ ಸಂಘ, ಮೈಸೂರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ ಟ ಖ. ೫ ಆಣೆ

ಪತ್ತಾ—ವೈದ್ಯ ವ್ಹಿ ಎಸ್ ಕಾಪಸೆ, ಮಿರಜ

29 M. C

೧೯೩೨ ನೆಯ ಇಸವಿ ನವಂಬರ್ ತಾ|| ೧೪ ರಿಂದ ನವಂಬರ್ ತಾ|| ೨೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಕಾರ್ತಿಕ ಬಹುಳ ಪಾಡ್ಯಮಿ ಯಿಂದ ಕಾರ್ತಿಕ ಬಹುಳ ಸಪ್ತಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ವೃಶ್ಚಿ
14	[1]ಸೋಮ	ಪಾಡ್ಯ	16-13	ಕೃತ್ತಿ	14-15	29
15	[2]ಮಂಗಳ	ಬಿದಿ	21 65	ರೋಹಿ	20-31	1
16	ಬುಧ	ತದಿ	26 33	ಮೃಗ	26-25	2
17	ಗುರು	ಚೌತಿ	30 4	ಆರ್ದ್ರಾ	31-15	3
18	ಶುಕ್ರ	ಪಂಚ	32-48	ಪುನ	35-14	4
19	[3]ಶನಿ	ಷಷ್ಠಿ	33-47	ಪುಷ್ಯ	37-37	5
20	ಭಾನು	ಸಪ್ತ	33-51	ಆಶ್ಲೇ	39-9	6

(೧) ಕಾರ್ತಿಕ ಸೋಮವಾರ. (೨) ಸಂಜನಗೂಡಿನಲ್ಲಿ ಅಷ್ಟತೀರ್ಥೋತ್ಸವ, ಮಳೆನಕ್ಷತ್ರ-ವಿಶಾಖೆ ೪ ನೆಯಪಾದ. (೩) ಮಳೆನಕ್ಷತ್ರ-ಅನೂರಾಧ ೧ ನೆಯಪಾದ.

ಮೈಸೂರು, ವ್ಹಿ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGD. NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಶ್ರೀಮಂತರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೭ ನೆಯ ಇಸವಿ ನವೆಂಬರ್ ತಾರೀಖು ೨೧ ನೆಯ ಸೋಮವಾರ [ಸಂಚಿಕೆ ೪೭

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd) S SHAMANNA,
Secretary, Insurance Committee

[60—20]



[60—3]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸಂ.
[illegible]	೦—೧೨—೦	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	೦—೧—೦	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ

ವಿರಚೆಯಲ್ಲಿಯ ಪ್ರಸಿದ್ಧ ವೈದ್ಯ ರಾವಸ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣಬಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ [ಸ್ವರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—47]

ಪತ್ರ ವ್ಯವಹಾರ:—ವೈದ್ಯ ಪ್ಪಿ. ಎಸ್ ರಾವಸ ಮು. ಪೋ. ಮಿರಜ ಎಂ. ಎಸ್. ಎಂ

ಡಾಕ್ಟರ್ ಜೀ. ಡೀ. ಯವರ

ಸುಗಂಧ ನಶ್ಯದ ಪುಡಿ.

[illegible]

[illegible]

[60—12] ಪೋ. ಬಾ. ೫೧, ಮದರಾಸು

ಮೈಸೂರು ಸ್ಟಾರ್.

೧೯೩೨ ನೆ ಇಸವಿ ನವಂಬರ್ ತಾ|| ೨೧ ನೆಯ ಸೋಮವಾರ

THE ALLAHABAD SETTLEMENT

The situation in which the Unity Conference was convened under the presidency of that veteran statesman Mr Vijiyaraghavachariar of South India, at Allahabad was not very hopeful. Every one had misgivings about the turn it may take at any time during the progress of the conference. The unavoidable departure of Maulana Shaukat Ali from the conference and the refusal of Sir Mohamed Yakub and his adherents to attend, rendered the situation critical. Under such auspices the conference began to work out an agreement satisfactory to the Hindus, Muslims and the Sikhs. It will be remembered that all previous attempts at Hindu—Muslim rapproachment had failed and obstacles in the way of amicable settlement were not few, especially in view of some of the leaders of both the communities having departed to attend the third R. T. C. The old adage " darkest hour is before the dawn " was true of the atmosphere in which the conference began to evolve a formula acceptable to the Hindus, Muslims and the Sikhs alike. There gathered threatening clouds of dead-lock, failure and disagreement during the discussion of some of the ticklish questions in the Committee of the Unity Conference. Thanks, to the patriotic efforts and untiring zeal of the aged President Mr Vijayaraghavachariar Pandit Malaviyaji, Abdul Kalam Azad and others, a satisfactory settlement has been reached on all the points affecting the relationship between the two communities on 17th evening, the full text of which is released to the press. It is most gratifying that the agreement is unanimous and the feelings of the leaders throughout this momentous session of eighteen days, have been cordial. It is really very happy that success has at last attended the strenuous efforts of the Unity Committee and this, we believe, will ensure permanent cordiality mutual good will and trust between the two great communities, thus laying a surer foundation for the growth of United India. This ensured other minor questions solve themselves and pave the way for the speedy emancipation of Indian Nation from the thraldom of foreign bureacracy. In this connection we are compelled to observe that immediate steps should be taken to get the agreement ratified by every section of the Nation. If it is adopted whole heartedly by All India, the Communal Award which had become an inevitable alternative in the absence of an agreement, will have to be modified in the light of the memorable agreement now reached. It is also necessary that the R. T. C. delegates of both the communities should take their stand on the agreement and fight out the salvation of their motherland. Coming now to the details of the settlement, the main provisions are.—firstly that adequate protection is guaranteed to the culture, language, script, education and the practice and personal laws of the communities in the constitution, secondly that provincial autonomy and responsibility in the centre—with safeguards for a period of ten years shown to be demonstrably in the interest of India, thirdly the powers of Provincial Governments being scheduled exhaustively, questions of doubt to be settled by the Supreme Court; fourthly that the Army and the Judiciary to be open to all the communities selection being made on merit alone; fifthly that Judiciary must be separated from the Executive and the recruitment to the service being made by a Public Service Commission creating equal opportunities to all. Other important items of the decisions are the separation of Sind as a Governor's province with safeguards for the Hindus in that province, reservation of 51 percent of seats to the Muslims both in Bengal and Punjab and 32% in the Central Legislature. It is also agreed that the method of election should be through joint electorates, but for the next ten years the method of election being the modified form of Mohamed Ali's formula. All this, which had hitherto baffled the efforts of so many, is no small achievement of the Conference. In conclusion we heartily congratulate all those patriotic men who laboured hard in the cause of Unity, on the successful consummation of their efforts in solving India's most difficult and knotty problem.

CONGRATULATIONS

We offer our hearty and sincere congratulations to Mr Justice P. Mahadeviah on his elevation as Chief Justice of the High Court of Mysore and to Mr. K. Shankaranarayana Rao on his being raised to the High Court as Puisne Judge. Mr. P. Mahadeviah has by dint of honest, conscientious and able work proved himself worthy of the high trust now reposed in him by His Highness the Maharaja of Mysore. It is not often that the highest Judicial office in the land is secured to a member of the unprivileged communities and we think that it is a matter in which the country as a whole feels justly proud. We have no doubt that Mr Mahadeviah will prove a great success in the high office even as many of his predecessors have been. Mr K. Shankaranarayana Rao, in fact deserved the present elevation much earlier. His bright academic career, his long experience at the Bar and his success as a District and Sessions Judge along with his innate courtesy all fit him supremely for the task he is called upon to discharge. We wish both these officers every success.

ಅಲಹಾಬಾದು ತೀರ್ಮಾನ

ಹಿಂದು ಮಹಮ್ಮದೀಯ ಮತ್ತು ಸಿಕ್ಕರುಗಳಲ್ಲಿ ಐಕಮತ್ಯವನ್ನುಂಟುಮಾಡಬೇಕೆಂಬುದ್ದೇಶದಿಂದ ಮೌಲಾನಾ ಶೌಕತಾಲಿಯವರೂ ಪಂಡಿತ ಮದನಮೋಹನ ಮಾಳವೀಯವರೂ ಬಹಳ ಪ್ರಯಾಸಪಟ್ಟು ಮೂರು ಮತದವರ ನಾಯಕರುಗಳ ಸಭೆಯನ್ನು ವಯೋವೃದ್ಧರೂ, ರಾಜಕೀಯ ವಿಚಾರದಲ್ಲಿ ನುರಿಗಿದವರೂ ಆದ ಶ್ರೀಯುತ ಮ|| ವಿಜಯರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಅಲಹಾಬಾದಿನೊಳಗೆ ಇದೇ ತಾ|| ೩ ರಲ್ಲಿ ಕೂಡಿಸಿದರು. ಹಿಂದು ಮಹಮ್ಮದೀಯರ ಐಕಮತ್ಯವೂ ಸಂಯುಕ್ತ ನಿಯೋಜಕ ವರ್ಗದೇರ್ಪಾಟೂ ಭಾರತ ಸ್ವರಾಜ್ಯಸಾಧನೆಗೆ ಮುಖ್ಯವೆಂದು ಮನಗೊಂಡು ಈ ಸಖ್ಯ ಸಮ್ಮೇಳನಕ್ಕೆ ಪ್ರಯತ್ನಿಸಿದ ಮೌಲಾನಾ ಶೌಕತಾಲಿಯವರು ಪರದೇಶ ಪ್ರಯಾಣಮಾಡಿದುದರಿಂದಲೂ ಸರ್ ಮಹಮ್ಮದ್ ಯಾಕೂಬ್‌ರವರೂ ಅವರ ಅನುಯಾಯಿಗಳೂ ಆಹ್ವಾನವನ್ನು ತಿರಸ್ಕರಿಸಿದುದರಿಂದಲೂ, ಕೆಲ ನಾಯಕರುಗಳು ಬಿಗಿಪಟ್ಟಿನಲ್ಲಿದ್ದುದರಿಂದಲೂ ಸಭೆಯ ಸದುದ್ದೇಶವು ನೆರವೇರಲಾರದೆಂಬ ಶಂಕೆಯುಂಟಾಗಿದ್ದಿತು. ಆದರೆ ಪಂಡಿತ ಮಾಳವ್ಯರವರು ಅಬ್ದುಲ್ ಕಾಲಂ ಅಜದ್ ಮೊದಲಾದ ಪ್ರಮುಖರ ಮತ್ತು ಅಧ್ಯಕ್ಷರ ಕಾಲೋಚಿತವಾದ ಸಲಹೆಯಿಂದಲೂ ಪ್ರಯತ್ನವಿಶೇಷದಿಂದಲೂ ನಾಯಕ ಸಭಿಕರುಗಳು ಭಿನ್ನಾಭಿಪ್ರಾಯಗಳನ್ನು ಬಿಟ್ಟು ಏಕಮತ್ಯ ಪ್ರಯತ್ನ ಕೈಕೊಂಡುದರಮೇಲೆ ಪರಸ್ಪರ ಸಮಾಧಾನ ಕ್ರಮಗಳನ್ನು ಆಲೋಚಿಸಿ ನಿರ್ಧರಿಸಲು ಒಂದು ಕಮಿಟಿಯೇರ್ಪಡಿಸಲ್ಪಟ್ಟಿತು. ಈ ಕಮಿಟಿಯವರು 18 ದಿವಸಗಳವರೆಗೆ ಸಮಾವಿಷ್ಟರಾಗಿ ಸಮಸ್ತ ವಿಷಯಗಳನ್ನೂ ಚರ್ಚಿಸಿ ಹಿಂದು ಮಹಮ್ಮದೀಯ ಸಿಕ್ಕರುಗಳಿಗೆ ಒಪ್ಪಿತವಾಗಿರುವ ರೀತಿಯಲ್ಲಿ ತೀರ್ಮಾನಿಸಿ ತಮ್ಮ ಕಾರ್ಯವನ್ನು ತಾ|| 17 ರ ಸಾಯಂಕಾಲದಲ್ಲಿ ಮುಗಿಸಿದರು. ಈ ಕಮಿಟಿಯ ಸೆಕ್ರೆಟರಿಯವರಾದ ಪಂಡಿತ ಗೋವಿಂದ ಮಾಳವ್ಯರವರು "ಭಾರತದೇಶದಲ್ಲಿ ನಾನಾ ಮತದವರೊಳಗೆ ಕೆಲ ವರ್ಷಗಳಿಂದಲೂ ಭೇದಭಾವವು ಹುಟ್ಟಲು ಕಾರಣವಾಗಿದ್ದ ಎಲ್ಲ ವಿಷಯಗಳಲ್ಲೂ, ಏಕಮತ್ಯ ಕಮಿಟಿ ನ. 17 ದಿನಗಳವರೆಗೆ ಚರ್ಚೆ ನಡೆಸಿದಮೇಲೆ ಏಕಾಭಿಪ್ರಾಯವುಂಟಾದುದು ಮಹಾಸಂತೋಷಪ್ರದವು. ಈ ಸಂತೋಷಕ್ಕೆ ಪಾರವೇ ಇಲ್ಲ. ಏಕಮತ್ಯ ಕುರಿತು 150 ಘಂಟೆಗಳಕಾಲ ಚರ್ಚೆ ನಡೆದುದರ ಮೇಲಿಂದ ವಿಷಯಗಳು ಎಷ್ಟು ಕ್ಲಿಷ್ಟವಾಗಿದ್ದುವೆಂಬುದು ವ್ಯಕ್ತವಾಗುತ್ತದೆ. ಪಂಜಾಬು, ಬಂಗಾಳ, ಸಿಂಧು ರಾಷ್ಟ್ರಗಳ ವಿಷಯದಲ್ಲೂ, ಸಂಯುಕ್ತ ನಿಯೋಜಕವರ್ಗದ ವಿಷಯದಲ್ಲೂ ಸಭಿಕರು ಏಕಾಭಿಪ್ರಾಯಕ್ಕೆ ಬಂದರು. ತಮಗೆ ಕೊಡಲ್ಪಟ್ಟ ರಕ್ಷಣೆಗಳಿಂದ ಮೈನಾರಟಿಯವರು ತೃಪ್ತಿಪಟ್ಟುಕೊಂಡರು. ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದುದರಿಂದ ಮೆಜಾರಿಟಿಯವರಿಗೂ ಸಂತೋಷವಾಯಿತು" ಎಂದು ಪ್ರಕಟಿಸಿರುವರು. ಇದುವರೆಗೆ ಮಾಡಲ್ಪಟ್ಟ ಪ್ರಯತ್ನಗಳಿಂದ ಸಾಧ್ಯವಾಗದಿದ್ದ ಹಿಂದು ಮಹಮ್ಮದೀಯರ ಐಕಮತ್ಯವು ಕುದುರಿರುವುದೂ, ಇದರಿಂದ ಭಾರತ ಮಂತ್ರಿಗಳ ಪ್ರಿಯಮಾನಿಯ ಪ್ರಶ್ನೆಗೆ [illegible] ಜಕ ವರ್ಗದೇರ್ಪಾಟು ಮನ್ನಣೆ [illegible] ಭಿನ್ನಮತದವರ ಭಿನ್ನಭಾವಗಳನ್ನು ಬ್ರಿಟಿಷರು ತಮ್ಮ [illegible] ತೊಳ್ಳುತ್ತಿದ್ದ ಬ್ರಿಟಿಷ್ ಪ್ರತಿಪಕ್ಷಗಳ [illegible] ಹಾಗೆಯೇ [illegible] ವೃದ್ಧರಾಗಿ [illegible] ದುದೂ ಮಹಾನಂದದಾಯಕವಾಗುತ್ತದೆ. ಇಂತಹ ಸಂತೋಷಕ ಪ್ರದವಾದ ಐಕಮತ್ಯ ಸಮ್ಮೇಳನವನ್ನು ಕೂಡಿಸಿ ಜಯಪ್ರದವಾಗಿ ನಡೆಸಿದ ಮ|| ವಿಜಯ ರಾಘವಾಚಾರ್ಯ, ಮಾಳವ್ಯ ಪ್ರಭೃತಿಗಳನ್ನು ಅಭಿನಂದಿಸುತ್ತೇವೆ ಮತ್ತು ಈ ತೀರ್ಮಾನವು ಭಾರತೀಯರೆಲ್ಲರಿಂದಲೂ ಅನುಮೋದಿತವಾಗಿ ಬ್ರಿಟಿಷರಿಗೆ ವಿಸ್ಮಯವನ್ನೂ ಕಳವಳವನ್ನೂ ಉಂಟುಮಾಡುವುದೆಂದು ನಿರೀಕ್ಷಿಸುತ್ತೇವೆ.

ರೌಂಡುಟೇಬಲು ಸಭಾರಂಭ

ಮೂರನೆಯ ರೌಂಡುಟೇಬಲು ಸಭೆಯು ಕಳೆದ ಗುರುವಾರ ಲಂಡನ್ ಪಟ್ಟಣದ ಪಾರ್ಲಿಮೆಂಟು ಭವನದೊಳಗೆ ಪ್ರಧಾನಮಂತ್ರಿಗಳಾದ ಮೆಕ್ಡೊನಾಲ್ಡ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಆ ದಿವಸ ಅಧ್ಯಕ್ಷರು ಉಪಚಾರೋಕ್ತಿಯಿಂದ ಪ್ರತಿನಿಧಿಗಳನ್ನು ಸುಸ್ವಾಗತಿಸಿ " ಸಭೆಯಲ್ಲಿ ಜರುಗುವ ಕಾರ್ಯಗಳಿಂದ ಎಲ್ಲರಿಗೂ ಸಂತೃಪ್ತಿಯುಂಟಾಗುವುದೆಂದು ನಾನು ನಂಬುತ್ತೇನೆ. ನಮ್ಮಗಳ ಪರಸ್ಪರಾಭಿಪ್ರಾಯಗಳೆಲ್ಲ ನಮ್ಮೆಲ್ಲರಿಗೂ ಚೆನ್ನಾಗಿ ತಿಳಿದಿರುವುದರಿಂದ ಕಾಲಹರಣವಾಗದಂತೆ ಮುಖ್ಯ ವಿಚಾರಗಳನ್ನು ಕುರಿತು ಮಾತ್ರ ನಾವು ಚರ್ಚಿಸಬೇಕಾಗಿದೆ. ಕ್ರಿಸ್ತಮಸ್ ಹಬ್ಬದೊಳಗೆ ಈ ಸಭೆಯನ್ನು ಮುಗಿಸಲು ಬೇಕಾದಷ್ಟು ಅವಕಾಶವಿರುವುದು. ನಾನು ಪ್ರತಿದಿವಸವೂ ಸಭೆಗೆ ಬರಲವಕಾಶವಿಲ್ಲದಿರುವುದರಿಂದ ಪ್ರಭುತ್ವ ಪ್ರತಿನಿಧಿಗಳು ಈ ಸಭೆಯಲ್ಲಿ ತಿಳಿಸುವ ಅಭಿಪ್ರಾಯಗಳನ್ನೆಲ್ಲ ನಾನೂ ಮಂತ್ರಿವರ್ಗದವರೂ ಸೇರಿ ನಿರ್ಣಯಿಸದೆವೆಂದೇ ನೀವು ನಂಬತಕ್ಕದು. ಇದು ನೆರವೇರಲು ದೊರೆತನದವರು ಸರ್ವವಿಧದಲ್ಲೂ ಸಹಾಯಮಾಡುವರು " ಎಂದು ಭಾಷಣ ಮಾಡಿದರು. ಅನಂತರ ಹಿಜ್‌ಹೈನೆಸ್ ಆಗಾಖಾನ್‌ರವರು ಪ್ರತಿನಿಧಿಗಳ ಪರವಾಗಿ ಅಧ್ಯಕ್ಷ ಮಂತ್ರಿಗಳನ್ನು ವಂದಿಸಿ "ಹೇಗಾದರೂ ವಿಜಯವನ್ನು ಹೊಂದಬೇಕೆಂಬ ದೃಢಸಂಕಲ್ಪದಿಂದ ಈ ಸಭೆಗೆ ಬಂದಿರುತ್ತೇನೆ. ಈ ಸಭಾಕಾರ್ಯವು ಕ್ರಿಸ್ತಮಸ್ ಹಬ್ಬದೊಳಗೆ ಪೂರೈಸಿ ಭಾರತೀಯರಲ್ಲಿ ನ್ಯಾಯವಾದ ಕೋರಿಕೆಯುಳ್ಳವರಿಗೆ ಸಂತೃಪ್ತಿಕರವಾಗಿ ರಾಜ್ಯಾಂಗವಿಧಾನವು ನಿರ್ಮಿಸಲ್ಪಡುವುದೆಂದು ನಂಬುತ್ತೇನೆ " ಎಂದು ಹೇಳಿದರು. ಈವರೆಗೆ ಸಂಪೂರ್ಣವಾಗಿ ಚರ್ಚಿಸಲ್ಪಡದ ವಿಷಯಗಳುಮಾತ್ರ ಚರ್ಚಿಸಲ್ಪಡುವವು. ಡಿಸಂಬರ್ ತಾ|| 20 ರೊಳಗೆ ಮುಗಿದರೆ ರಾಜ್ಯಾಂಗ ವಿಧಾನವನ್ನು ದೊರೆತನದವರು ಸಿದ್ಧಪಡಿಸುವರು. ಇದನ್ನು ಪಾರ್ಲಿಮೆಂಟಿನಲ್ಲಿ ಪರ್ಯಾಲೋಚಿಸಲನುಕೂಲವಾಗುವುದು. ಒಂದೊಂದು ವಿಷಯವನ್ನು ಒಂದೊಂದು ದಿವಸ ಚರ್ಚಿಸಲು ಏರ್ಪಡಿಸಬೇಕು. ಇತ್ಯಾದಿಯಾಗಿ ಭಾರತ ಮಂತ್ರಿಯವರು ಉಪನ್ಯಾಸಮಾಡಿದರು. ಕಾರ್ಯಕ್ರಮವು —(1) ಲೋಥಿಯನ್ ಕಮಿಟಿ ವರದಿ, ಚುನಾವಣೆಯ ಪದ್ಧತಿ, ಎರಡು ಫೆಡರಲ್ ಶಾಸನಸಭೆಗಳ ಮೆಂಬರುಗಳ ಸಂಖ್ಯೆ (2) ಫೆಡರಲ್ ಪ್ರಭುತ್ವಕ್ಕೂ ರಾಷ್ಟ್ರೀಯ ಪ್ರಭುತ್ವಕ್ಕೂ ಪರಿಪಾಲನ ವಿಚಾರದಲ್ಲಿರಬೇಕಾದ ಸಂಬಂಧ. (3) ಗವರ್ನರ್ ಜನರಲ್ಲಿಗೂ ಗವರ್ನರುಗಳಿಗೂ ಪ್ರತ್ಯೇಕಾಧಿಕಾರ (4) ಆರ್ಥಿಕ ಮತ್ತು ವಾಣಿಜ್ಯ ವಿಷಯಗಳಲ್ಲಿ ರಕ್ಷಣೆ (5) ದೇಶರಕ್ಷಣೆಗೆ ಸಂಬಂಧಪಟ್ಟ ಆರ್ಥಿಕ ವಿಚಾರ. (6) ಫೆಡರಲ್ ಆರ್ಥಿಕ ಸಂಸ್ಥಾನಗಳ ಸಂಘದ ವರದಿ, ಫೆಡರಲ್ ಆರ್ಥಿಕ ಸಂಘದ ವರದಿ. (7) ಮುಖ್ಯ ಹಕ್ಕುಗಳು (8) ಭಾರತ ಶಾಸನ ಸಭೆಗಳಿಗೂ ಪಾರ್ಲಿಮೆಂಟಿಗೂ ಇರುವ ಅಧಿಕಾರಗಳು (9) ಸಂಸ್ಥಾನಾಧಿಪತಿಗಳ ರಾಜ್ಯಾಧಿಕಾರ. ಈ ವಿಚಾರಗಳು ಪರ್ಯಾಲೋಚಿಸಲ್ಪಟ್ಟು ಕಡೆಯಲ್ಲಿ ಅಂಗೀಕರಿಸಲ್ಪಡುವುವು.

ಅಭಿನಂದನ

ಮೈಸೂರು ಹೈಕೋರ್ಟ್ ಜಡ್ಜಿಯವರಾದ ಮ|| ಪಿ. ಮಹಾದೇವಯ್ಯ, ಬಿ ಎ , ಬಿ ಎಲ್., ರವರು ಅಫಿಸಿಯೇಟಿಂಗ್ ಚೀಫ್ ಜಡ್ಜಿಯವರಾಗಿಯೂ, ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಾಗಿದ್ದ ಮ|| ಕೆ ಶಂಕರನಾರಾಯಣರಾವ್, ಬಿ.ಎ, ಬಿ.ಎಲ್ , ರವರು ಚೀಫ್ ಕೋರ್ಟಿನ ಆಕ್ಟಿಂಗ್ ಜಡ್ಜಿಯವರಾಗಿಯೂ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುವುದಕ್ಕಾಗಿ ಈ ಉಭಯ ನ್ಯಾಯಾಧೀಶರುಗಳನ್ನು ನಾವು ಪ್ರೀತಿಪೂರ್ವಕವಾಗಿ ಅಭಿನಂದಿಸುತ್ತೇವೆ ಮತ್ತು ಹಿಂದುಳಿದ ವರ್ಗದವರಿಗೆ ಅಲಭ್ಯವಾಗಿದ್ದ ಪ್ರಧಾನ ನ್ಯಾಯಮೂರ್ತಿ ಸ್ಥಾನವನ್ನು ಈಗ ಅನುಗ್ರಹಿಸಿದುದಕ್ಕಾಗಿ ಪ್ರಭುವರ್ಯರನ್ನು ವಂದಿಸುತ್ತೇವೆ. ಈ ನ್ಯಾಯಮೂರ್ತಿಗಳ ನ್ಯಾಯಶಾಸ್ತ್ರ ನಿಪುಣತೆಯೂ, ಕಾರ್ಯಾಸಕ್ತಿಯೂ, ನಿಸ್ಪೃಹತೆಯೂ ನಿಷ್ಪಕ್ಷಪಾತತೆಯೂ ಉನ್ನತಿಗೆ ಕಾರಣಗಳಾಗಿರುತ್ತವೆ. ಈ ಉಭಯರಿಗೂ ದೀರ್ಘಾಯುರಾರೋಗ್ಯಾಭಿವೃದ್ಧಿಯನ್ನು ಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಮೊಹಮ್ಮದೀಯರ ಅಭಿಪ್ರಾಯ

[illegible] ಭಾರತವನ್ನು [illegible] ಮಾಡಿದರೆ [illegible] ಒಂದು ಪತ್ರಿಕೆಯಲ್ಲಿ [illegible] ಮಾಡಿದ್ದಾರೆ ...

ಶ್ರೀಮತಿ ದೇವಿಯವರ ಮರಣ

ಕೀರ್ತಿಶೇಷರಾದ ಬಾಲಾಜಿ ಪಂತರಾಯರವರ ಧರ್ಮಪತ್ನಿ ಶ್ರೀಮತಿ ರಾಧಾದೇವಿಯವರು ಜ್ವರರೋಗ ಪೀಡಿತರಾಗಿದ್ದು ಕಳೆದ ಗುರುವಾರ ಪರಲೋಕಯಾತ್ರೆ ಯನ್ನು ಮಾಡಿದರು ಇವರಿಗೆ 64 ವರ್ಷವಯಸ್ಸಾಗಿದ್ದಿತು ಇವರು ತಮ್ಮ ಪತಿಯವರ ವಾರ್ಷಿಕ ಸ್ಮರಣೋತ್ಸವ ದಿನದ ಪತಿ ಸಾನ್ನಿಧ್ಯವನ್ನು ಹೊಂದಿದುದು ಜನರಿಗೆ ಆಶ್ಚರ್ಯವನ್ನುಂಟುಮಾಡಿರುತ್ತದೆ ಇವರ ಶವಸಂಸ್ಕಾರವನ್ನು ಊರ ಜನರು ಬಹಳ ಭಕ್ತಿ ವೈಭವಗಳಿಂದ ನಡಿಸಿದರು

ಲಾರ್ಡ್ ಲಾಯಿಡ್‌ರವರ ಶಂಕೆ

ಭಾರತ ದೇಶಕ್ಕೆ ಸ್ವಾತಂತ್ರ್ಯವು ಕೊಡಲ್ಪಟ್ಟಲ್ಲಿ ಪ್ರಜೆಗಳು ದುಃಖಸಾಗರದಲ್ಲಿ ಮುಳುಗಬೇಕಾಗುತ್ತದೆಂದೂ ಫೆಡರೇಷನ್ನಿನಿಂದ ಕೆಲ ದೇಶೀಯ ಸಂಸ್ಥಾನಾಧಿಪತಿಗಳ ನಡವಳಿಕೆಯು ಮತ್ತಷ್ಟು ಕಠಿಣವಾಗುತ್ತದೆಂದೂ ಆಹೋರಾತ್ರಿ ಭಾರತೀಯರ ಅಶ್ರೇಯಸ್ಸನ್ನೇ ಕೋರುತ್ತಿರುವ ಚರ್ಚಿಲ್‌ರವರ ಪಕ್ಷಕ್ಕೆ ಸೇರಿದ ಲಾಯಿಡ್‌ರವರು ಶಂಕಿಸುತ್ತಾರೆ ಇಂತಹ ಹಿತ ಶತ್ರುಗಳ ಸಂಖ್ಯೆಯು ಹೆಚ್ಚಾಗಿರುವರೆಗ್ಗೆ ಭಾರತೀಯರ ಇಷ್ಟಾರ್ಥಸಿದ್ಧಿಯು ಎಷ್ಟರಮಟ್ಟಿಗಾಗಬಹುದು !

ವಾಟ್ಸನ್‌ರವರನ್ನು ಕೊಲ್ಲಲೆತ್ನಿಸಿದವರಿಗೆ ಶಿಕ್ಷೆ

ಸರ್ ವಾಟ್ಸನ್‌ರವರನ್ನು ಕೊಲ್ಲಲು ಪ್ರಯತ್ನಿಸಿದ್ದ 6 ಮಂದಿಗಳ ಪೈಕಿ ರಣೆಪುಲ್ಲಿ ಸುಸೀಲ್ ಚಟರ್ಜೀಗೆ ದ್ವೀಪಾಂತರ ವಾಸ ಶಿಕ್ಷೆಯೂ ನೋದರಂಜನ ಬೋಸನಿಗೆ 10 ವರ್ಷ ಅಮರಚಂದ್ರ ಘೋಷ್‌ಗೆ 4 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯೂ ಆಲಿಪುರದ ಪ್ರತ್ಯೇಕ ಜಡ್ಜಿ ಟಿ ಎಚ್ ಎಲ್ಲಿಸ್‌ರವರಿಂದ ವಿಧಿಸಲ್ಪಟ್ಟು ಅನಿಲದತ್ತ, ಪರ್ನಕುಮಾರದಾಸ, ವಿನಾಕ್ಷ ಭಕ್ಷಿ ಇವರುಗಳು ಬಿಡಲ್ಪಟ್ಟರು ಅಪರಾಧಿಗಳು ಶಿಕ್ಷೆಯನ್ನು ಬಹಳ ಉಲ್ಲಾಸದಿಂದ ಅಂಗೀಕರಿಸಿದರು

ಸೌ॥ ಕಮಲಾ ನೆಹರುರವರ ಅಸ್ವಸ್ಥತೆ

ಪಂಡಿತ ಜವಹಾರಲಾಲರ ಪತ್ನಿ ಸೌ॥ ಕಮಲ ನೆಹರುರವರಿಗೆ ಹೃದ್ರೋಗವು ಪ್ರಬಲವಾಗಿರುವುದರಿಂದ ಕಳೆದ ಮಂಗಳವಾರ ಅವರು ಬಹಳವಾಗಿ ಬಾಧೆಪಟ್ಟರು ಅದರಮೇಲೆ ಡಾಕ್ಟರುಗಳಾದ ಅಟಲ್, ಬಿ ಸಿ ರಾಯಿ, ಜೋರಜನಿಸಾರಿ ಇವರುಗಳು ಆಕೆಯವರನ್ನು ಕಲಕತ್ತಾಕ್ಕೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಬೇಕೆಂದು ಅಭಿಪ್ರಾಯಪಟ್ಟುದರ ಮೇಲೆ ಆಕೆಯವರು ತಮ್ಮ ತಾಯಿ ಮತ್ತು ಡಾಕ್ಟರ್ ಅಟಲ್‌ರವರೊಡನೆ ಕಲಕತ್ತಾಕ್ಕೆ ಹೋಗಿರುವರು ಕಲಕತ್ತಾದಲ್ಲೂ ಹೃದ್ರೋಗವನ್ನು ಪರೀಕ್ಷಿಸಲು ತಕ್ಕ ಸಲಕರಣೆಗಳಿಲ್ಲವಂತೆ

ತುಫಾನಿನಿಂದ ಪಟ್ಟಣ ನಾಶವಾಯಿತು

ದಕ್ಷಿಣ ಅಮೇರಿಕೆಯ ಪಶ್ಚಿಮಕ್ಕೆ ಪೆಸಿಫಿಕ್ ಸಾಗರದಲ್ಲಿರುವ ಸಾಂತಕ್ರೂಜ್ ದ್ವೀಪದಲ್ಲಿ ತುಫಾನೆದ್ದು 2500 ಜನರು ಹತರಾದರು ಮತ್ತು ಪಟ್ಟಣವು ನಾಶವಾಗಿ ವಾಸಕ್ಕೆ ಯೋಗ್ಯವಾಗಿಲ್ಲದಿರುವುದರಿಂದ ಪುನಃ ನಿರ್ಮಿಸಲ್ಪಡಬೇಕಾಗಿದೆ ಉಳಿದಿರುವವರ ಆರೋಗ್ಯರಕ್ಷಣೆಗಾಗಿ ಸತ್ತವರನ್ನು ಸುಡಬೇಕಾಗಿಬಂದಿತು ಜಮೈಕಾದಿಂದ 100 ಮೈಲುಗಳ ದೂರದಲ್ಲಿರುವ ಪ್ರಿಟಿಸರ ಲಿಟ್ಲ್ ಕೇಮನ್ ದ್ವೀಪವು ಬಿರುಗಾಳಿಯಿಂದ ನಾಶವಾಗಿ 40 ಮಂದಿ ಸತ್ತರು ಅನೇಕರು ಅಪಾಯವನ್ನು ಹೊಂದಿರುವರು ಈ ಬಿರುಗಾಳಿಯಿಂದಲೂ ತುಫಾನಿನಿಂದಲೂ ಕಬ್ಬಿನ ಬೆಳೆಯು ಶೇಕಡ 90 ರಂತೆ ನಾಶವಾಗಿ 60 ಲಕ್ಷ ಡಾಲರ್ ಹಣವು ನಷ್ಟವಾಗಿರುತ್ತದೆ

ಐರ್ಲೆಂಡು ರೈತರಿಗೆ ಡಿವೆಲೆರಾರವರ ವಾಗ್ದಾನ

ಭೂಗಂಡಾಯವನ್ನು ಇಂಗ್ಲೆಂಡು ಕೊಡುವುದು ನ್ಯಾಯವಲ್ಲವೆಂದೂ, ಈ ವಿಚಾರವನ್ನು ನಿರ್ಣಯಿಸಲಿಕ್ಕಾಗಿ ಒಂದು ನಿಷ್ಪಕ್ಷಪಾತವಾದ ಕಮಿಟಿಯೇರ್ಪಡಿಸಬೇಕೆಂದೂ ಡಿವೆಲೆರಾರವರು ಹಟಹಿಡಿದು ಹೋರಾಡುತ್ತಿರುವುದರಮೇಲೆ, ಬ್ರಿಟಿಷರವರು ಆಗ್ರಹಗೊಂಡು ಐರ್ಲೆಂಡಿನಿಂದ ತಮ್ಮಲ್ಲಿಗೆ ಬರುವ ಪದಾರ್ಥಗಳ ಮೇಲೆ ಪ್ರತ್ಯೇಕ ಸುಂಕವನ್ನು ವಿಧಿಸುತ್ತಾರೆ ಇದರಿಂದ ಐರ್ಲೆಂಡಿನ ರೈತರುಗಳಿಗೆ ಬಹಳ ಕಷ್ಟಪ್ರಾಪ್ತವಾದುದರಮೇಲೆ ಗಂಡಾಯವನ್ನು ಕೊಡಲಾಗುವುದಿಲ್ಲವೆಂದು ರೈತರು ಮೊರೆಯಿಟ್ಟುಕೊಳ್ಳಲಾಗಿ, ಡಿವೆಲೆರಾರವರು ಕನಿಕರಪಟ್ಟು ರೈತರು ಕೊಡಬೇಕಾದ ಗಂಡಾಯದಲ್ಲಿ ಬಹುಭಾಗವನ್ನು ಬಿಟ್ಟುಕೊಡುವುದಾಗಿ ವಾಗ್ದಾನ ಮಾಡಿದರು ಇದರಿಂದ ರೈತರುಗಳಿಗೆ ಉಪಶಾಂತಿಯೂ ಸಂತೋಷವುಂಟಾಗಿರುವುದು

ಚಂಡಾಲರಾರು ?

" ನಿಮ್ಮ ಜಾತಿಯವರು ದೇವಾಲಯದೊಳಕ್ಕೆ ಬರಲು ನೀನು ಸೂತ್ರಗಳು ಅಂಗೀಕರಿಸುವುದಿಲ್ಲವೆಂಬ ವಿಷಯವನ್ನು ಇಡಿಸಿ ಪೂರ್ವ ಪಕ್ಷವನ್ನು ಮಾಡಲು ಇಲ್ಲಿಯ ಸಾಧಾರಣ ಸಭೆ ಸದಸ್ಯರ ಪರವಾಗಿ ನಾನು ವಾದಿಸುವೆನು ಈಗಿರುವ ನಿಮ್ಮ ಜಾತಿಯವರು ನಮ್ಮ ಶಾಸ್ತ್ರಗಳ ಪ್ರಕಾರ ಹೇಳಲ್ಪಟ್ಟಿರುವ ಚಂಡಾಲರಲ್ಲವೆಂದೂ, ಆವರೆಲ್ಲರೂ ನಾವು ಸ್ಪೃಶ್ಯ [illegible] ... ಎಂದು ನಾನು ಸಿದ್ಧಾಂತಪಡಿಸುತ್ತೇನೆ ಏಕೆಂದರೆ [illegible] ... ಪ್ರತಿಪಾದಿಸಿ ವಾದಮಾಡುತ್ತೇನೆ ಎಂದು [illegible] ಸಭೆಯಲ್ಲಿ ವಾದಿಸಿದ ಶ್ರೀ ... ಎಂದು ಹೇಳಿದ್ದನ್ನು ಕೇಳಿಕೊಂಡಿರುವ ಬ್ರಾಹ್ಮಣರು ಕೃಷ್ಣರಾವ್ ಬಿ ಎ, ಬಿ ಎಲ್, ರವರು ತಳ್ಳಿಕೋಟೆಯ ಪಾಂಡುರಂಗರಾವರಿಗೆ ತಂತಿ ಮೂಲಕ ತಿಳಿಸಿರುತ್ತಾರೆ

ಬೊಂಬಾಯಿನಲ್ಲಿ ಬೆಂಕಿಯ ಅನಾಹುತ

ಬೊಂಬಾಯಿ ಪಟ್ಟಣದ ಕಾಳ್ಬಾದೇವಿ ರೋಡಿನಲ್ಲಿ ಎರಡಂತಸ್ತಿನ ಒಂದು ಮನೆಯ ಕೆಳಗಡೆಯಂಗಡಿಗೆ ಬೆಂಕಿಬಿದ್ದು ಮನೆಯು ಹೊತ್ತಿಕೊಂಡಿತು ಒಳಗಿದ್ದ ಜನರು ಹೊಗೆಯನ್ನು ಕಂಡಕೂಡಲೆ ಹೊರಕ್ಕೆ ಓಡಿಹೋದರು ಆದರೆ ಒಬ್ಬ ಹೆಂಗುಸು ಮಾತ್ರ ಸಾವಕಾಶಮಾಡಲಾಗಿ ನಾಲ್ಕು ದಿಕ್ಕಿನಿಂದಲೂ ಜ್ವಾಲೆಯು ವ್ಯಾಪಿಸಿಕೊಂಡು ಒಂದುದರ ಮೇಲೆ ತಪ್ಪಿಸಿಕೊಂಡು ಹೋಗಲೆತ್ನಿಸಿ ಓಡಿ ಜ್ವಾಲೆಗೆ ಸಿಕ್ಕಿ ಮೃತಳಾದಳು ... ಗಳು ಒಂದು ಅರ್ಧ ಘಂಟೆಯವರೆಗೆ ನೀರನ್ನು ಹುಯ್ದು ಮನೆಯ ಮೇಲೆ ಜ್ವಾಲೆಯು ಶಮನವಾಯಿತು ಮನೆಯ ಕೆಲಭಾಗವು ಸುಟ್ಟುಹೋಯಿತು ಇದರಿಂದ 1,000 ರೂ ವರೆಗೆ ನಷ್ಟವಾಗಿರಬೇಕೆಂದೂಹಿಸಲ್ಪಟ್ಟಿದೆ ಬೆಂಕಿಯನ್ನಾರಿಸುವ ಯಂತ್ರದ ಕೆಲಸಗಾರರಲ್ಲೊಬ್ಬನು ಪ್ರಮಾದದಿಂದ ಸತ್ತುಹೋದನು ಮನೆಯಲ್ಲಿದ್ದವರನ್ನು ಸಾಗಿಸಲಿಕ್ಕೆ ಬರುತ್ತಿದ್ದ ಬಂಡಿಯು ನೀರನ್ನಾರಿಸುವ ಯಂತ್ರಕ್ಕೆ ತಾಕಿ ಬಿದ್ದುದರಿಂದ ಒಬ್ಬ ಯಂತ್ರದವನು ಸತ್ತನು ಒಟ್ಟು 3 ಮರಣಗಳಾದವು

ಜಪಾನಿನಲ್ಲಿ ಜಲಪ್ರಳಯ

ಜಪಾನ್ ದೇಶದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ವಿಪರೀತ ಮಳೆಸುರಿದು ಸಮುದ್ರವು ಉಕ್ಕಿ 100 ಮಂದಿ ಸತ್ತರು ಮತ್ತು 40,000 ಮನೆಗಳು ನಷ್ಟವಾದುವು ಅನೇಕ ಕಡೆ ಬೆಟ್ಟಗಳ ಮೇಲಿಂದ ಪಾಷಾಣಗಳು ಜಾರಿಬಿದ್ದಿರುತ್ತವೆ ಸಮುದ್ರ ತೀರದಲ್ಲಿರುವ ಎಲ್ಲಾ ಗ್ರಾಮಗಳಲ್ಲೂ ಬಹಳ ನಷ್ಟ ಸಂಭವಿಸಿರುವುದರಿಂದ ಜನರು ಭಯಗ್ರಸ್ತರಾಗಿರುತ್ತಾರೆ ಈ ಪ್ರಳಯವು ಟೋಕಿಯೋದಲ್ಲಿ ಮಾತ್ರವಲ್ಲದೆ ಸಮುದ್ರ ತೀರದಲ್ಲೆಲ್ಲ ಸಂಭವಿಸಿರುವುದು ತಂತಿಯ ಕಂಬಗಳು ಬಿದ್ದುಹೋಗಿರುತ್ತವೆ 2000 ಟನ್ನು ತೂಕವಿರುವ ಸ್ಟೀಮರು ತುಫಾನಿನ ಹೊಡೆತದಿಂದ ಒಂದು ಬಂಡೆಗೆ ತಾಕಲಾಗಿ ಅದರೊಳಗಿದ್ದ 30 ಮಂದಿ ನಾವಿಕರಲ್ಲಿ 21 ಮಂದಿ ಮೃತರಾದರು, ಉಳಿದ 9 ಮಂದಿ ಸಂರಕ್ಷಿಸಲ್ಪಟ್ಟರು ಟೋಕಿಯೊ ಪಟ್ಟಣಕ್ಕೆ ಸೇರಿದ ಒಂದು ಗ್ರಾಮವು ಬೆಂಕಿಯಿಂದ ಹೊತ್ತಿಕೊಳ್ಳಲಾಗಿ ಅದರಲ್ಲಿದ್ದ 400 ಮನೆಗಳು ನಾಶವಾದುವು ಟೋಕಿಯೋದಲ್ಲಿ ಜಲಪ್ರಳಯವಾಗಿರಲಿಲ್ಲವೆಂದೂ, ಇಂತಹ ಪ್ರಳಯವು ಜಪಾನಿನಲ್ಲೇ 1917 ರಿಂದೀಚೆಗೆ ಆಗಿರಲಿಲ್ಲವೆಂದೂ ಯಾಕೋಹಾಮಕ್ಕೆ ಬಹಳ ನಷ್ಟ ಸಂಭವಿಸಿರುವುದೆಂದೂ 36 000 ಜನರು ವಾಸಕ್ಕೆ ಮನೆಯಿಲ್ಲದೆ ತಪ್ಪಿಸುತ್ತಿರುವರೆಂದೂ, ಒಟ್ಟಿನಲ್ಲಿ ದೇಶಕ್ಕೆ ವಿಶೇಷ ನಷ್ಟವಾಗಿರಬೇಕೆಂದೂ ತಿಳಿಯಬರುತ್ತದೆ

ಶ್ರೀ॥ ದೊರಸ್ವಾಮಿ ಅಯ್ಯರವರ ಪ್ರಶಂಸೆ

ಮೈಸೂರು ಹೈಕೋರ್ಟ್ ಪ್ರಧಾನ ನ್ಯಾಯಮೂರ್ತಿ ರಾಜಧರ್ಮಪ್ರವೀಣ ಮ॥ ಸಿ ಎಸ್ ದೊರೆಸ್ವಾಮಿ ಅಯ್ಯರ್ ಎಂ ಎ ಬಿ ಎಲ್ ರವರು 1937ನೇಯ ನವೆಂಬರ್ 30 ॥ 12 ನೇ ಶನಿವಾರ ಸಾಯಂಕಾಲ ಅಕಸ್ಮಾತ್ ವಿಧಿವಶರಾದುದರಿಂದುಂಟಾದ ನಷ್ಟವು ಪ್ರಮುಖದ ಕಡತದಲ್ಲಿ ಈ ಪ್ರಕಾರವಾಗಿ ಉಲ್ಲೇಖಿಸಲ್ಪಡಬೇಕೆಂದು ಶ್ರೀಮನ್ಮಹಾರಾಜರವರ ಅಭಿಮತವಾಗಿರುತ್ತದೆ

ಶ್ರೀ॥ ಮ॥ ದೊರಸ್ವಾಮಿ ಅಯ್ಯರ್‌ರವರು ಮೈಸೂರು ಚೀಫ್ ಕೋರ್ಟು ಅಡ್ವೊಕೇಟರಾಗಿದ್ದು ಕೆಲ ವರ್ಷಗಳವರೆಗೆ ವಕೀಲಿಯನ್ನು ಸಫಲವಾಗಿ ನಡೆಸಿದುದರಮೇಲೆ 1910 ನೇಯ ಫೆಬ್ರವರಿಯಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಪಬ್ಲಿಕ್ ಪ್ರಾಸಿಕ್ಯೂಟರಾಗಿಯೂ, 1 ವರ್ಷಕಾಲಾನಂತರ ಗೌರ್ನಮೆಂಟ್ ಅಡ್ವೊಕೇಟರಾಗಿಯೂ ನಿಯಮಿಸಲ್ಪಟ್ಟು ಆ ಉದ್ಯೋಗವನ್ನು 9 ವರ್ಷಗಳವರೆಗೆ ಬಹಳ ಸಮರ್ಥತೆಯಿಂದ ನಿರ್ವಹಿಸಿದರು 1919 ನೇಯ ಜನವರಿಯಲ್ಲಿ ಚೀಫ್ ಕೋರ್ಟಿನಲ್ಲಿ 1 ವಷ ದವರೆಗೆ ಆಕ್ಟಿಂಗ್ ಜಡ್ಜಿಯರಾಗಿದ್ದು 1926 ನೇಯ ಜುಲೈ ತಿಂಗಳಲ್ಲಿ ಚೀಫ್ ಕೋರ್ಟಿನ ಜಡ್ಜಿಯರಾಗಿ ನಿಯಮಿಸಲ್ಪಟ್ಟು 2 ವರ್ಷಗಳ ಅನಂತರ ಚೀಫ್ ಜಡ್ಜಿಯವರಾಗಿ ಮಾಡಲ್ಪಟ್ಟರು ಇವರು ತಮ್ಮ ನ್ಯಾಯ ವ್ಯವಹಾರದ ಜ್ಞಾನ ... ವ್ಯಾಯನಿಷ್ಠೆ ಸ್ವತಂತ್ರಾಭಿಪ್ರಾಯ ಸ್ವಾತಂತ್ರ್ಯ ಸುಜನತ್ವ ... ಯನ್ನೂ ವ್ಯಕ್ತಪಡಿಸಿದರು ... ಇವರ ಪ್ರಸಿದ್ಧಿಯು ಜನಾದರಣೀಯವಾಗಿದ್ದಿತು ಇವರು ನ್ಯಾಯಶಾಖೆಯಲ್ಲಿ ಮಾಡಿದ ಉತ್ಕೃಷ್ಟ ಸೇವೆಗೆ ಮೆಚ್ಚಿ ಶ್ರೀಮನ್ಮಹಾರಾಜರವರು ಇವರಿಗೆ 1928 ನೇಯ ದಸರಾ ದರ್ಬಾರಿನಲ್ಲಿ ' ರಾಜಧರ್ಮಪ್ರವೀಣ ' ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು ಶ್ರೀ ಮನ್ಮಹಾರಾಜರವರು ತಮ್ಮ ನಂಬಿಕಸ್ತರೂ ಪ್ರೀತಿಪಾತ್ರರೂ ಆದ ಶ್ರೀ॥ ದೊರಸ್ವಾಮಿ ಅಯ್ಯರ್‌ರವರ ವಿಯೋಗದಿಂದುಂಟಾದ ದುಃಖದಲ್ಲಿ ಅವರ ಕುಟುಂಬಕ್ಕೆ ಸಹಾನುಭೂತಿ ತೋರಿಸುತ್ತಾರೆ

ಒಳದೇಶದ ವೃತ್ತಾಂತಗಳು

ಕಳೆದ ತಾ॥ 10 ರಲ್ಲಿ ಬೊಂಬಾಯಿನ ಸ್ಟೀಮರಿನಲ್ಲಿ ದಯಪಾಲಿಸಿದ ಶ್ರೀಮದ್ಯುವರಾಜರವರು ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯನ್ನು ಸುರಕ್ಷಿತವಾಗಿ ಸೇರಿರುವರು

ರಾಜಧಾನಿಯ ವೈಶ್ಯಮಂಡಲಿಯವರು ಪದ್ಧತಿಯ ಪ್ರಕಾರದ ಭಾರತಿ ಹವನವನ್ನು ನೆನ್ನೆಯದಿವಸ ಕಾರಂಜಿಕೆರೆಯ ರಿಯ ಕಳೆಗಿರುವ ವಾಸವಿ ದೇವಸ್ಥಾನದ ಉದ್ಯಾನದಲ್ಲಿ ಬಹಳ ವೈಭವದಿಂದಲೂ ಉತ್ಸಾಹದಿಂದಲೂ ದಿವ್ಯಭಕ್ಷ್ಯ ಭೋಜ್ಯಾದಿಗಳಿಂದಲೂ ನೆರವೇರಿಸಿದರು

ರಾಜಧಾನಿಯ ದೇವರಾಜ ಮೊಹಲ್ಲ ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಬಿಡುವಾಗಿರುವ ಒಂದು ಸ್ಥಾನದ ಚುನಾವಣೆಗೆ ಮ॥ ಗಳಾದ ಚಿಕ್ಕವೀರಣ್ಣನವರ ರೈಸ್‌ಮಿಲ್ಲಿನ ಎಂ ಸಿ ತಮ್ಮಯ್ಯನವರೂ, ರಾಜರಾಜೇಶ್ವರೀ ಹಾಲಿನ ಯಜಮಾನರಾದ ಮ॥ ಯು ಎಲ್ ರಾಮಚಂದ್ರರಾಯರೂ ಉಮೇದುವಾರರುಗಳಾಗಿ ನಿಂತಿರುತ್ತಾರೆ

ಕಳೆದ ಶನಿವಾರ ರಾಜಧಾನಿಯ ಕುಂಚಿಟಿಗರ ಸಂಘದ ನಿಲಯದಲ್ಲಿ ಶ್ರೀ॥ ರಾವ್‌ಬಹದ್ದೂರ್ ಧರ್ಮಪ್ರಕಾಶ ಡಿ ಬನುಮಯ್ಯನವರ, ಧರ್ಮಪರಾಯಣೆ ಶ್ರೀಮತಿ ಅಲಮ್ಮನವರ ಮತ್ತು ನಂಜನಗೂಡಿನ ಶ್ರೀಮತಿ ತಿಮ್ಮಮ್ಮನವರ ಛಾಯಾಚಿತ್ರಗಳ ಅನಾವರಣಮಹೋತ್ಸವವು ಡೆಪ್ಯೂಟಿಕಮಿಷನರ್ ಮ॥ ಸಿ ಎಸ್ ಕುಪ್ಪಸ್ವಾಮಯ್ಯಂಗಾರ್ಯರಿಂದ ನಡೆಸಲ್ಪಟ್ಟಿತು

ಯಡತೊರೆಯ ಸಾಹುಕಾರ್ ಮ॥ ಜಿ ಸಿದ್ದಲಿಂಗಶೆಟ್ಟರು ಆಚೆ ವಾರದಲ್ಲಿ ಖಾಸಬಂಗಲೆಯೊಳಗೆ ಶ್ರೀಮನ್ಮಹಾರಾಜರವರ ದರ್ಶನಕ್ಕೆ ಅಪ್ಪಣೆಯನ್ನು ಪಡೆದು ಹೋಗಿದ್ದು ಹೊಸ ಯಡತೊರೆ ಪಟ್ಟಣದ ಆರಂಭೋತ್ಸವವನ್ನು ಮಹಾಸ್ವಾಮಿಯವರ ಅಮೃತ ಹಸ್ತದಿಂದ ನೆರವೇರಿಸಬೇಕೆಂದು ಪುರವಾಸಿಗಳ ಪರವಾಗಿ ಬೇಡಿಕೊಂಡುದರ ಮೇಲೆ ಬರುವ ಡಿಸಂಬರ್ ತಿಂಗಳಲ್ಲಿ ನೆರವೇರಿಸಲು ಪ್ರಭುಗಳು ಸಮ್ಮತಿಸಿರುತ್ತಾರೆಂದು ಕೇಳುತ್ತೇವೆ

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಈ ವರ್ಷ ಕೊಡಗು ಪ್ರಾಂತದವರು ತಮ್ಮ ರಾಜಧಾನಿಯಾದ ಮಡಕೇರಿಯಲ್ಲಿ ನಡೆಯಿಸಬೇಕೆಂದು ಸಂಕಲ್ಪಿಸಿ ಅದಕ್ಕಾಗಿ ಒಂದು ಸ್ವಾಗತ ಮಂಡಲಿಯನ್ನು ನಿಯಮಿಸಿಕೊಂಡು ಕನ್ನಡ ಪಂಡಿತರುಗಳ ಮತ್ತು ಅಭಿಮಾನಿಗಳ ಸಹಾಯಸಹಾನುಭೂತಿಗಳನ್ನು ಕೋರಿರುತ್ತಾರೆ ಈ ನಮ್ಮ ನೆರೆನಾಡಿನ ಕನ್ನಡ ಬಾಷಾಭಿಮಾನಿಗಳ ಪ್ರಯತ್ನವು ಯಶಸ್ವಿಯಾಗಿ ನಡೆದು ಅವರುಗಳು ಕೃತಕೃತ್ಯರಾಗುವಂತೆ ಸಾಹಿತ್ಯಸಮ್ಮೇಳನಾಭಿಮಾನಿಗಳು ಸಹಕರಿಸುವರೆಂದು ನಿರೀಕ್ಷಿಸುತ್ತೇವೆ

ರಾಜಧಾನಿಯ ಲಾಯರುಗಳ ಸಂಘದವರು ಮ॥ ಕೆ ಶಂಕರನಾರಾಯಣರಾಯರನ್ನು ಬರಮಾಡಿಕೊಂಡು ನೆನ್ನೆಯ ದಿವಸ ಶ್ರೀ ಚಾಮುಂಡೇಶ್ವರೀ ಬೆಟ್ಟದ ಮೇಲೆ ದಿವ್ಯವಾದ ಔತಣದಿಂದಲೂ ಸಂಗೀತ ಶ್ರವಣದಿಂದಲೂ ಸತ್ಕರಿಸಿ ಅವರಿಗೆ ಮೈಸೂರು ಚೀಫ್ ಕೋರ್ಟು ಜಡ್ಜಿಯ ಪದವಿಯು ಲಭ್ಯವಾದುದರಿಂದ ತಮಗುಂಟಾದ ಆನಂದಾತಿಶಯವನ್ನು ಪ್ರದರ್ಶಿಸಿ ಅವರ ಗುಣಪ್ರಸಂಶೆ ಮಾಡಿದರು ಅತಿಥಿಗಳಾದ ಮ॥ ಶಂಕರನಾರಾಯಣರಾಯರು ತಮಗಾದ ಸತ್ಕಾರಕ್ಕಾಗಿ ಕಾಲೋಚಿತವಾದ ಭಾಷಣದಿಂದ ಲಾಯರು ಸಂಘದವರನ್ನು ವಂದಿಸಿದರು

ಅಖಿಲಭಾರತ ತತ್ತ್ವವಿಚಾರ ಮಹಾಸಭೆಯ 3 ನೇಯ ಅಧಿವೇಶನವು ಬರುವ ಡಿಸೆಂಬರು ತಾ॥ 19 ನೇಯ ಸೋಮವಾರ ರಾಜಧಾನಿಯ ಜಗನ್ಮೋಹನ ಪ್ರಾಸಾದದ ಸಭಾಂಗಣದೊಳಗೆ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಟ್ಟು 3 ದಿವಸಗಳವರೆಗೆ ನಡೆಯುವುದು ಈ ಮಹಾಸಭೆಗೆ ಭಾರತ ದೇಶದ ಎಲ್ಲ ಕಡೆಯಿಂದಲೂ ಪ್ರತಿನಿಧಿಗಳೂ ಪ್ರೇಕ್ಷಕರೂ ಬರುವರು ಇವರ ಸ್ವಾಗತಕ್ಕಾಗಿ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಾದ ರಾ॥ ಮೆಟ್ಕಾಫ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಂಘ ಏರ್ಪಟ್ಟಿರುತ್ತದೆ ಇದಕ್ಕೆ ಮ॥ ವಿ ಸುಬ್ರಹ್ಮಣ್ಯಯ್ಯರ್ ರವರು ಮತ್ತು ಪ್ರೊಫೆಸರ್ ಮ॥ ಎ ಆರ್. ವಾಡಿಯಾರವರು ಕಾರ್ಯದರ್ಶಿಗಳಾಗಿರುತ್ತಾರೆ

ರಾಜಧಾನಿಯ ರೈಲ್ವೆ ವರ್ಕ್‌ಷಾಪಿನಲ್ಲಿ ಕೆಲಸ ಮಾಡುತ್ತಿದ್ದ ಮಧ್ಯ ವಯಸ್ಸಿನ ಒಬ್ಬ ಹೆಂಗುಸು ಕಳೆದವಾರ ದೊಡ್ಡ ಕೆರೆಯೇರಿಯ ಮೇಲಿರುವ ಕಲ್ಲಿನ ಮಂಟಪದಲ್ಲಿ ಸತ್ತು ಬಿದ್ದಿದ್ದನು ಈ ಸಂಗತಿಯನ್ನು ಪೋಲೀಸಿನವರು ಕೇಳಿ ಸ್ಥಳಕ್ಕೆ ಹೋಗಿ ಶವದ ಮುಖ ಮೊದಲಾದ ಭಾಗಗಳು ಮುಚ್ಚಲ್ಪಟ್ಟಿದ್ದುದನ್ನು ನೋಡಿ ಅನುಮಾನಪಟ್ಟುಕೊಂಡು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಶವವನ್ನು ಸಾಗಿಸಿದರು ಅಲ್ಲಿ ಡಾಕ್ಟರು ಪರೀಕ್ಷಿಸಿ, ವಿಷ ಪ್ರಯೋಗದಿಂದ ಮರಣವಾಗಿರುವುದಾಗಿ ಅಭಿಪ್ರಾಯಪಟ್ಟಿರುವರೆಂದೂ ಪೋಲೀಸಿನವರು ವಿಚಾರಿಸಿದುದರಲ್ಲಿ ಸತ್ತವನಿಗೆ ಜೀವವಿಮೆ ಬಾಬತು 2000 ರೂ. ಬಂದಿದ್ದುದನ್ನು ಅಪಹರಿಸುವುದಕ್ಕಾಗಿ ಅವನ ಜತೆಗಾರರಲ್ಲಾರೋ ಅವನಿಗೆ ವಿಷಪ್ರಯೋಗ ಮಾಡಿ ಅವನು ಸತ್ತುಹೋದಮೇಲೆ ಅವನ ಶವವನ್ನು ಕೆರೆಯೇರಿಯ ಮೇಲಿನ ಮಂಟಪಕ್ಕೆ ತಂದು ಮುಚ್ಚಿ ಮಲಗಿಸಿ ಪರಾರಿಯಾಗಿರಬಹುದೆಂದು ತಿಳಿದು ಬಂದಿರುತ್ತದೆಂದೂ, ಪೋಲೀಸರು ಆ ಅನುಮಾನದ ಮೇಲೆ ಕೆಲವರನ್ನು ಹಿಡಿದಿರುವರೆಂದೂ ಕೇಳುತ್ತೇವೆ

ಅಸ್ಪೃಶ್ಯರ ವಿಚಾರದಲ್ಲಿ ಸನಾತನಧರ್ಮಪರರ ಸಂಕಲ್ಪ

ಪಂಚಮರು ಹಿಂದೂಸಮಾಜದ ಒಂದು ಭಾಗ ಹೌದು. ಸನಾತನ ಧರ್ಮಪರರಿಗೆಲ್ಲ [illegible] ನಮ್ಮ ದೇಶದವರೇ ಆದುದರಿಂದ ನಮ್ಮ ಮತದವರೇ ಬಹಳ ವಿಭಾಗ ಕಾಲದಿಂದಲೂ [illegible] ರುವ ಪಂಚಮರುಗಳ [illegible] ನ್ಯಾಯವಾದ ಅಭಿವೃದ್ಧಿಯೂ ಇರುವುದಿಲ್ಲ. ಸನಾತನಿಗಳಿಗೆ ಪಂಚಮರ [illegible] ದುಃಖ ನಿವಾರಣೆಯನ್ನು [illegible] ಇಂಗ್ಲೀಷರು ಪಾದ್ರಿಗಳು, ಆರ್ಯಸಮಾಜದವರು, ಬ್ರಾಹ್ಮಣೇತರ [illegible] ಸ್ವರಾಜ್ಯ ಸಾಧಕರ [illegible] ಅವರುಗಳೆಲ್ಲ [illegible] ಅಭಿವೃದ್ಧಿ ಅಂಗೀಕರಿಸುತ್ತದೆ. ಇದು ರಾಜನೀತಿಯೊಳಗೆ ಭೇದೋಪಾಯವು ಅದನ್ನು ಅವರವಲಂಬಿಸಿರುತ್ತಾರೆ ಅವರನ್ನು ನಾವು ಆಕ್ಷೇಪಿಸಲು ಕಾರಣವಿಲ್ಲ. ನಾವು ಮಾತ್ರ ಜಾಗರೂಕರಾಗಿರಬೇಕು ಸನಾತನ ಧರ್ಮಿಗಳು ದ್ವೇಷಭಾವದಿಂದ ಪಂಚಮರನ್ನು ದೂರವಾಗಿಟ್ಟಿರುವುದು ನ್ಯಾಯವಲ್ಲವೆಂದು ಸುಧಾರಕರು ಹೇಳಬಹುದು ಪಂಚಮಾದಿಗಳು ನಮ್ಮ ಮತದವರೇ ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರನಿಗೆ ಹುಟ್ಟಿದವರು ಚಂಡಾಲರೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ, ಪ್ರತಿಲೋಮರು ಸಂಕರಜಾತಿಗಳೊಳಗೆ ಕಡೇ ಜಾತಿಯವರು ಇವರು ಅವರನ್ನು [illegible], ಇವರು ಪ್ರತಿಲೋಮಜಾತಿಗಳೊಳಗೆ ಕಡೇ ಜಾತಿಯವರೆಂದೂ ಅವರನ್ನು ಸ್ಪರ್ಶಿಸಿದುದಾದರೆ, ಸ್ನಾನಮಾಡಿ ಹೊಸದಾಗಿ ಯಜ್ಞೋಪವೀತ ಹಾಕಿಕೊಂಡು ಗಾಯತ್ರೀ ಜಪಾದಿಗಳನ್ನು ಮಾಡಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ ಮನು|| ಅ|| ೧೦ « ಶೂದ್ರಾದಾಯೋಗವಃ ಕ್ಷತ್ತಾ ಚಂಡಾಲಶ್ಚಾಧಮೋನೃಣಾಂ ಚಂಡಾಲಶ್ವಪಚಾನಾಂತು ಬಹಿರ್ಗ್ರಾಮಾತ್ಪ್ರತಿಶ್ರಯಃ ಅಪಪಾತ್ರಾಶ್ಚ ಕರ್ತವ್ಯಾ ಧನಮೇಷಾಂ ಶ್ವಗರ್ದಭಂ » ಇತ್ಯಾದಿ ಧರ್ಮಶಾಸ್ತ್ರಗಳು ಹೇಳುತ್ತಲಿವೆ

ತಮಗೆ ಅತ್ಯಂತ ಪ್ರಿಯರಾದ ತಾಯಿ ತಂದೆ ಮೊದಲಾದವರು ಬಹಿಷ್ಠೆಯರಾದಾಗ್ಗೆ ಶಾಸ್ತ್ರ ಬದ್ಧರಾದವರು ಅವರನ್ನು ದೂರವಾಗಿಡುವರು ಮರಣದಿಂದುಂಟಾಗುವ ಆಶೌಚಾದಿ ಸಮಯದಲ್ಲಿ ತಮ್ಮ ಸಮೀಪ ಬಂಧುಗಳನ್ನಾದರೂ ಮುಟ್ಟಕೂಡದು ಒಂದುವೇಳೆ ಮುಟ್ಟಿದಲ್ಲಿ ಸ್ನಾನಾದಿಗಳನ್ನು ಮಾಡಬೇಕಾದುದು ಶಾಸ್ತ್ರರೀತಿಯಾಗಿ ಬ್ರಾಹ್ಮಣಾದಿಗಳ ಆಚರಣೆಯಾಗಿರುತ್ತದೆ ಯಾವ ಶಾಸ್ತ್ರಾಧಾರದ ಮೇಲೆ ಹಿಂದುಗಳು ದಾಯಭಾಗವನ್ನು ಅನುಭವಿಸುತ್ತಿರುವರಲ್ಲಿ ಯಾವ ಶಾಸ್ತ್ರದ ಬ್ರಹ್ಮಚರ್ಯವನ್ನು ಅಂಗೀಕರಿಸಿ ಸಗೋತ್ರ ಕನ್ಯೆಯನ್ನು ಮದುವೆಮಾಡಿಕೊಳ್ಳುವುದಿಲ್ಲವೊ ಯಾವ ಶಾಸ್ತ್ರದಲ್ಲಿ ನಂಬಿಕೆಯನ್ನಿಟ್ಟುಕೊಂಡು ಪಿತೃದೇವತೆಗಳಿಗೆ ಶ್ರಾದ್ಧ ಪಿಂಡ ದಾನಾದಿಗಳನ್ನು ಅನುಸರಿಸುತ್ತಿದ್ದಾರೋ ಆ ಶಾಸ್ತ್ರಗಳಲ್ಲೇ ಪಂಚಮಾದಿಗಳ ಸ್ಪರ್ಶವು ಪಾಪಕ್ಕೆ ಕಾರಣವೆಂದು ನಿಷೇಧಿಸಲ್ಪಟ್ಟಿರುವುದರಿಂದ ಇಂತಹ ಶಾಸ್ತ್ರಗಳಲ್ಲಿ ಕೆಲವು ಪ್ರಮಾಣವೆಂದೂ ಮತ್ತೆ ಕೆಲವು ಅಪ್ರಮಾಣವೆಂದೂ ಹೇಳುವುದು ಯುಕ್ತವಲ್ಲವಾದುದರಿಂದ ಎಂತಹ ಇಕ್ಕಟ್ಟು ಪ್ರಾಪ್ತವಾದರೂ ವೇದಶಾಸ್ತ್ರಗಳ ಪ್ರಮಾಣಗಳನ್ನು ಅಂಗೀಕರಿಸಿ ಆಸ್ತಿಕರಾದರೂ ಅಸ್ಪೃಶ್ಯರ ಸ್ಪರ್ಶವನ್ನು ಪುನಃಪೂರ್ವಕವಾಗಿ ಅಂಗೀಕರಿಸುವುದಿಲ್ಲ ಬದಲು ರಕ್ತವಲ್ಲದೆ ಸಂಬಂಧಗಳಿಂದಲೂ, ದೌರ್ಜನ್ಯಗಳಿಂದಲೂ ಅಂತಹ ಸಂದರ್ಭ ಒದಗಿದಲ್ಲಿ ಕಾಲಗತಿಗಾಗಿ ಪಶ್ಚಾತ್ತಾಪಪಟ್ಟು ತಮಗೆ ಸಾಧ್ಯವಾದ ಪ್ರಾಯಶ್ಚಿತ್ತದಿಂದ ಶುದ್ಧಿಮಾಡಿಕೊಳ್ಳುವುದು ಇದನ್ನು ದೃಷ್ಟಾಂತವಾಗಿಟ್ಟುಕೊಂಡು ಚಂಡಾಲಸ್ಪರ್ಶಮಾಡಬಹುದೆಂದು ಹೇಳುವುದು ಬುದ್ಧಿವಂತರ ಲಕ್ಷಣವಲ್ಲ. ಪಂಚಮರು ಮೊದಲಿನಿಂದಲೂ ಈ ದೇಶದಲ್ಲಿಯೇ ಇರುವವರೆಂದೂ, ಆರ್ಯರು ಎಲ್ಲಿಂದಲೋ ಬಂದು ಇವರನ್ನು ನೀಚರನ್ನಾಗಿ ಭಾವಿಸಿದರೆಂದೂ ಬರೆದಿರುವ ಆಧುನಿಕ ಚರಿತ್ರಕಾರರ ವಾದವೆಲ್ಲವೂ ವೇದ ಮೂಲಕವಾದ ಅಸತ್ಯವು. ಮನುಷ್ಯರ ಸೃಷ್ಟಿಕರ್ತನಾದ ಮನು ಈ ಭರತಖಂಡದಲ್ಲಿ ಹುಟ್ಟಿದವನು ಆತನ ಮಗನಾದ ಪ್ರಿಯವ್ರತೋತ್ತಾನಪಾದರು ಇಲ್ಲಿಯವನೇ [illegible] ಎಂದು [illegible] ಪುರಾತನವಾದ ಮನುಸ್ಮೃತಿಯಲ್ಲಿ ಈ ಬ್ರಾಹ್ಮಣಾದಿಗಳು ಇಲ್ಲಿಯವರೆಂದೇ ಹೇಳಲ್ಪಟ್ಟಿದೆ ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನು ದಕ್ಷಿಣದೇಶ ಸಂಚಾರಮಾಡಿದಾಗ್ಗೆ ಈ ದೇಶದಲ್ಲಿದ್ದ ಮಹರ್ಷಿಗಳ ಆಶ್ರಮಗಳು ವರ್ಣಿಸಲ್ಪಟ್ಟಿವೆ ಈ ಗ್ರಂಥಗಳೆಲ್ಲ ಸುಳ್ಳೆಂದು ಇವರು ಹೇಳುವ ಮಾತನ್ನು ಬುದ್ಧಿಶಾಲಿಗಳಂತೂ ನಂಬುವುದಿಲ್ಲ ಲೋಕ ಸೃಷ್ಟಿಯೇ ನಾಲ್ಕು ಸಾವಿರ ವರ್ಷಗಳಲ್ಲಿ ಆಯಿತೆಂದು ಹೇಳುವವರ ವಿಜ್ಞಾನಕ್ಕೂ ಜ್ಯೋತಿಶ್ಶಾಸ್ತ್ರದ ಮೇರೆಗೆ ಅನೇಕ ಕೋಟಿ ವರ್ಷಗಳ ಹಿಂದೆ ಆಯಿತೆಂದು ಹೇಳುವವರ ವಿಜ್ಞಾನಕ್ಕೂ ಬಹಳ ವ್ಯತ್ಯಾಸವಿರುತ್ತದೆ ಪಂಚಮರು ದೇವಾಲಯಗಳ ಪ್ರವೇಶಗೊಳಿಸಲ್ಪಡದಿರುವುದರಿಂದ ಅವರು ನಮ್ಮನ್ನು ಬಿಟ್ಟು ಹೋಗುವರು, ಅವರ ಜನಸಂಖ್ಯೆಯು 7 ಕೋಟಿಯಿರುತ್ತದೆ, ಇಂತಹವರು ನಮ್ಮನ್ನು ಬಿಟ್ಟು ಹೋಗುವುದರಿಂದ ನಮ್ಮ ಮತವು ಬಲಹೀನವಾಗುವುದು ಆದುದರಿಂದ ನಾವು ಅವರನ್ನು ದೇವಾಲಯಗಳಿಗೂ ಮನೆಗಳಿಗೂ ಬರಗೊಡಬೇಕೆಂದು ನಾಗರಿಕರು ಬೋಧಿಸುತ್ತಿರುವರು ಈ ಕಾರ್ಯವಾದ ಮೇಲೆ ನಮಗಿಷ್ಟು ಸಾಲದು ನಮ್ಮ ಸಹ ಭೋಜನವಾಗಬೇಕೆಂದೂ ಹೆಣ್ಣು ಕೊಟ್ಟು ತರಬೇಕೆಂದೂ ಅವರೇಕೆ ಕೋರಬಾರದು? ಅದಕ್ಕೆ ನಾವು ಸಮ್ಮತಿಸದಿದ್ದರೆ ಅವರು ನಮ್ಮನ್ನು ಬಿಟ್ಟು ಹೋಗುವರು ನಮ್ಮ ಮತದ ಸಂಖ್ಯಾಬಲವು ಆಗ ಕಡಿಮೆಯಾಗುವುದು ಈ ರೀತಿಯಾಗಿ ಮಕ್ಕಳನ್ನು ಕೊಟ್ಟು ತರುವವರೆಗೂ ನಾವು ಅಂಗೀಕರಿಸುವುದಿಲ್ಲವೆಂದು ವೇದಶಾಸ್ತ್ರಗಳನ್ನು ನಿರಾಕರಿಸಿ ಅನ್ನಬಟ್ಟೆಗಾಗಿ ಮತವನ್ನು ಬಿಡುವ ನಾವು ಚಂಡಾಲರಿಗಿಂತ ನಿಕೃಷ್ಟರಾಗಿವೆವಲ್ಲದೆ ನಾವು ಹಿಂದುಗಳೆಂದ ಹೇಳಿಕೊಳ್ಳಲು ಸಹ ಅವಕಾಶವಿಲ್ಲದಿರುವ ದುಸ್ಥಿತಿಯು ನಮ್ಮ ಮತಕ್ಕುಂಟಾಗುವುದು ಆಗ ಈ ಮತದವರೆಲ್ಲ ವೇದಶಾಸ್ತ್ರಗಳನ್ನು ತ್ಯಜಿಸಿದ ನಾಸ್ತಿಕರೆಂದು ಕರೆಯಲ್ಪಡುವರು « ನಾಸ್ತಿ ವೇದ ಪ್ರಾಮಾಣ್ಯಮಿತಿ ಬ್ರುವಾಣಾ ನಾಸ್ತಿಕಾಃ » ಎಂದು ಶ್ರೀ ವಿದ್ಯಾರಣ್ಯರು ವೇದಭಾಷ್ಯದಲ್ಲಿ ಬರೆದಿರುವರು ಹಿಂದುಗಳ ಸಂಖ್ಯೆಯು ಕಡಿಮೆಯಾಗುವುದೆಂದು ಶಂಕಿಸುವ ರಿಫಾರ್ಮರುಗಳು ಸ್ವಧರ್ಮತ್ಯಾಗದಿಂದ ಹಿಂದುಮತವನ್ನು ನಿರ್ಮೂಲನಗೊಳಿಸುವುದು ಎಷ್ಟು ಹಾಸ್ಯಕರವೆಂಬುದನ್ನು ಗಮನಿಸಬೇಕು ಮಹಾತ್ಮ ಗಾಂಧಿಯವರ ಪಂಚಮರನ್ನು ಹಿಂದು ಮತದಿಂದ ದೂರಮಾಡತಕ್ಕದ್ದೆಂದ [illegible] ನಮಗೂ ಸಮ್ಮತವೇ ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಬೇಕೆಂದೂ ಪಂಚಮರನ್ನು ದೇವಸ್ಥಾನಗಳಿಗೆ ಬರಗೊಡಬೇಕೆಂದೂ ಅವರು ಅಭಿಪ್ರಾಯಪಟ್ಟಿರುವುದರಿಂದ ಅವರೆಷ್ಟು ಘನವಂತರಾದಾಗ್ಯೂ ವೇದಶಾಸ್ತ್ರಗಳನ್ನುಲ್ಲಂಘಿಸಿ ಮತವನ್ನು ಭ್ರಷ್ಟಗೊಳಿಸಿದವರಾಗುವರು ಮನು|| « [illegible] | [illegible] | ಯೋಽವಮನ್ಯೇತ ತೇ ಮೂಲೇ | ಹೇತುಶಾಸ್ತ್ರಾಶ್ರಯಾದ್ದ್ವಿಜಃ | ಸಸಾಧುಭಿರ್ಬಹಿಷ್ಕಾರ್ಯೋ ನಾಸ್ತಿಕೋ ವೇದನಿಂದಕಃ » ಎಂದು ಮನುಸ್ಮೃತಿಪ್ರಕಾರ ಹಿಂದುಗಳ ಸಂಖ್ಯೆಯು ತಗ್ಗುವುದೆಂಬ ಕಾರಣದಿಂದ ಶ್ರುತಿಸ್ಮೃತಿಗಳನ್ನು ಅವಮಾನಪಡಿಸಿದವರು ನಾಸ್ತಿಕರಾಗುವುದರಿಂದ ಇವರ ವಾದವನ್ನು ಸಾಧುಗಳು ಸರ್ವಸ್ವಕಾರವಾಗಿ ಬಹಿಷ್ಕರಿಸಬೇಕೆ ಹೊರತು ಇಷ್ಟರಿಂದ ಈ ವಿಷಯದಲ್ಲಿ ಎಂದಿಗೂ ಪ್ರತಿಭಟಿಸಕೂಡದು ಹಾಗೆ ಇವರೊಡನೆ ವಿರೋಧಪಡಿಸುವುದಕ್ಕಿಂತ ಬೇರೆ ಪಾಪಕೃತ್ಯ ಸನಾತನಧರ್ಮಪರರಿಗೆ ತೋರುವುದಿಲ್ಲ.

ಇವರು ಪಂಚಮರನ್ನು ಹಿಂದೂಮತದಿಂದ ಹೊರಗೆ ತಳ್ಳಿದಲ್ಲಿ ಸ್ವರಾಜ್ಯವನ್ನು ಪಡೆಯುವೆನೆಂದು ಹಠಹಿಡಿದಿರುವರು? ಇವರಿಗೆ ಅವರ ಸ್ವಾತಂತ್ರ್ಯಕ್ಕಾಗಿ [illegible] ಕೆಂದು ಸಮಾಜ ಸುಧಾರಕರು [illegible] ದ್ದಾರೆ ಇವರು [illegible] ಬಿಡಬೇಕೆಂದು [illegible] ಇದೇನೋ ಬುದ್ಧಿ [illegible] ಅನೇಕ ಹಿಂದೂಗಳ [illegible] ನಮ್ಮ ಪ್ರಾಚೀನ [illegible] ಅವರು ಸಾವಿರಾರು [illegible] ಅವರ [illegible] ವೇದಶಾಸ್ತ್ರ ಸಿದ್ಧಾಂತ [illegible] ಪರಮೇಶ್ವರನು ಕಾಪಾಡಬೇಕಲ್ಲದೆ ನಾವು ಅವರಿಗೆ ಮಾಡತಕ್ಕ ಸಹಾಯವೇನೂ ಇಲ್ಲ ನಮಗೆ ನಮ್ಮ ಪ್ರಾಣಕ್ಕಿಂತ ಧರ್ಮವು ಪ್ರಿಯವಾಗಿರುತ್ತದೆ ಆದುದರಿಂದಲೇ ಧರ್ಮಕ್ಕಾಗಿ [illegible] ಗುರು ಗೋವಿಂದಸಿಂಗರ ಮಕ್ಕಳು ಪ್ರಾಣವನ್ನರ್ಪಿಸಿರುತ್ತಾರೆ ಇಂತಹವರನೇಕರಿರುವರು ಧರ್ಮಕ್ಕಾಗಿ ತಮ್ಮ ಪ್ರಾಣವನ್ನು ಬಲಿಕೊಟ್ಟವರಿಗೆ ಇತರರ ಪ್ರಾಣವೇನು ಗಣನೆ? ಪಂಚಮರೊಡನೆ ಕಲೆತು ಊಟಮಾಡುವುದೂ ಅವರ ದೇವಾಲಯ ಪ್ರವೇಶವೂ ನಮಗೆ ಸಮ್ಮತವೆಂದು ಕೆಲ ಬ್ರಾಹ್ಮಣ ಕುಟುಂಬಗಳಲ್ಲಿ ಹುಟ್ಟಿದ ಇಂಗ್ಲೀಷ್ ವಿದ್ಯಾವಂತರು [illegible] ವನ್ನು [illegible] ಒಂದು ಭಾಗವನ್ನು [illegible] ಈ [illegible] ಧರ್ಮಶಾಸ್ತ್ರದ [illegible] ಅರಿಯರು ಅದರಲ್ಲಿ ಇವರಿಗೆ ನಂಬಿಕೆಯಿಲ್ಲವು ಹುಟ್ಟಿದಾರಭ್ಯ ಇಂಗ್ಲೀಷ್ ಭಾಷೆಯನ್ನೆ ಅಭ್ಯಾಸಮಾಡಿ ಆ ಚರಿತ್ರೆಗಳನ್ನೇ ಓದಿ ಅದೇ ನಿಜವೆಂದು ನಂಬಿರುವ ಇವರು ನಮ್ಮ ಮನೆಯಲ್ಲಿ ಹುಟ್ಟಿದುದರ ವಿನಾ [illegible] ರೆಂದೇ ಭಾವಿಸಬೇಕಾಗಿದೆ. ಇಂತಹವರುಗಳನ್ನು « ಸಹಸ್ರಶಸ್ತು ಮೋಹಾನಾ ಪರಿಷತ್ತ್ವಂ ನ ವಿದ್ಯತೇ » ಎಂದು ಪರಾಶರ ಮಹರ್ಷಿಯು ಸಾವಿರಾರು ಮಂದಿ ಒಂದಾದರೂ ಧರ್ಮನಿರ್ಣಯಕ್ಕೆ ಸಭ್ಯರನ್ನಾಗಿ ಸೇರಿಸಿಕೊಳ್ಳಲಾಗದೆಂದು ಹೇಳಿರುವನು ಇವರು ಇಂತಹ ಭ್ರಷ್ಟ ಕಾರ್ಯಗಳನ್ನು ಈವರೆಗೆ ಮಾಡಿರುವುದರಿಂದ ಅವರಂತೆಯೇ ಎಲ್ಲರೂ ಮಾಡಬೇಕೆಂದು ಬೋಧಿಸುತ್ತಿರುವರು ವೇಶ್ಯೆಯನ್ನು ಕೇಳಿದಲ್ಲಿ ಅವಳು ಪತಿವ್ರತಾಧರ್ಮವನ್ನು ಬೋಧಿಸಬಲ್ಲಳೆ? ತನ್ನಂತೆಯೇ ಇರಬೇಕೆಂದು ಹೇಳುವಳು ಅದೇನೂ ಆಶ್ಚರ್ಯವಲ್ಲ. ಒಬ್ಬರಿಬ್ಬರು ಶಾಸ್ತ್ರಿಗಳೆಂದು ಹೆಸರಿಟ್ಟುಕೊಂಡವರೂ, ನವನಾಗರಿಕ ವಾದವು ಶಾಸ್ತ್ರೀಯವೆಂದು ಹೇಳುವವರೂ ಇರುತ್ತಾರೆ ಅವರ ವಾದಗಳೆಲ್ಲ ಅಖಿಲ ಭಾರತ ವರ್ಣೀಯ ಬ್ರಾಹ್ಮಣ ಮಹಾಸಭೆಯಲ್ಲಿ ವಾದ ಪ್ರತಿವಾದಗಳಿಂದ ವಿಮರ್ಶಿಸಿ ಖಂಡಿಸಲ್ಪಟ್ಟು ಧರ್ಮಾಚಾರ್ಯರುಗಳಿಂದ ನಿಷೇಧಿಸಲ್ಪಟ್ಟಿರುವುದರಿಂದ ಅವನ್ನು ಖಂಡಿಸುವುದು ನಿಷ್ಪ್ರಯೋಜನವಾದುದರಿಂದ ಬಿಡಲಾಗಿದೆ.

ನಾಲ್ಕು ವರ್ಷಗಳ ಹಿಂದ ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಅಖಿಲ ಭಾರತ ವರ್ಣೀಯ ಬ್ರಾಹ್ಮಣ ಮಹಾಸಭೆಯು ದರ್ಭಾಂಗ ಮಹಾರಾಜರ ಅಧ್ಯಕ್ಷತೆಯಲ್ಲಿ ನೆರೆದಿದ್ದಾಗ್ಗೆ ಎಲ್ಲ ದೇಶಗಳಿಂದಲೂ ಮಠಾಚಾರ್ಯರುಗಳು, ಮಹಾಪಂಡಿತರುಗಳು ಹತ್ತು ಸಾವಿರ ಮಂದಿಗಳವರೆಗೆ ಬಂದಿದ್ದು ಸ್ಪೃಶ್ಯಾಸ್ಪೃಶ್ಯ ಬಾಲ್ಯವಿವಾಹಾದಿ ವಿಚಾರಗಳು ಚೆನ್ನಾಗಿ ವಾದ ಪ್ರತಿವಾದಗಳಿಂದ ಚರ್ಚಿಸಲ್ಪಟ್ಟು ಚಂಡಾಲ ಸ್ಪರ್ಶ ಕೂಡದೆಂದೂ, ಬಾಲ್ಯವಿವಾಹವನ್ನು ಮಾಡಬೇಕೆಂದೂ ತೀರ್ಮಾನಿಸಿದರು ಅವು ನಮಗೆ ಆದರ್ಶಗಳು ಈ ತೀರ್ಮಾನಗಳು ದೊರೆತನದವರಿಗೆ ಕಳುಹಲ್ಪಟ್ಟಿದ್ದುವಾದರೂ ಅವರು ಸನಾತನಧರ್ಮಪರರಿಗೂ ರಿಫಾರ್ಮರುಗಳಿಗೂ ಕಲಹವನ್ನುಂಟುಮಾಡುವುದಕ್ಕಾಗಿಯೇ ನಮಗೆ ವಿರುದ್ಧವಾಗಿ ಶಾರದಾ ಆಕ್ಟನ್ನು ಪಾಸುಮಾಡಿದರು ಆದಾಗ್ಯೂ ಸನಾತನಧರ್ಮನಿರತರು ಎಲ್ಲ ದೇಶಗಳಲ್ಲೂ ಸಜವನ್ನೂ ಜುಲ್ಮಾನೆಯನ್ನೂ ಅನುಭವಿಸುತ ಬಾಲ್ಯವಿವಾಹಗಳನ್ನೇ ಮಾಡುತ್ತಿರುವರು ಶಾಸ್ತ್ರ ಪ್ರಾಮಾಣ್ಯಾವಲಂಬನದಿಂದ ಪ್ರಾಪ್ತವಾಗುವ ಕಷ್ಟಗಳನ್ನನುಭವಿಸುವುದು ಪರಮೇಶ್ವರನಿಗೆ ಪ್ರೀತಿಕರವಾದ ತಪಸ್ಸೇ ಆಗುವುದು ಯಾರ ಗೋಜಿಗೂ ಹೋಗದೆ ತಮ್ಮಷ್ಟಕ್ಕೆ ತಾವು ದೊರಕಷ್ಟು ಲಾಭದಿಂದ ಸಂತುಷ್ಟರಾಗಿ ಮತಧರ್ಮಗಳನ್ನಾಚರಿಸುವವರಿಗೆ ನಾನಾ ವಿಧ ಕೆಟ್ಟ ಶಾಸನಗಳು ದೊರೆತನದವರಿಂದ ಮಾಡಲ್ಪಟ್ಟು ಶಿಕ್ಷಿಸಲ್ಪಡಲು ಪ್ರಯತ್ನಿಸುತ್ತಿರುವ ಸಂಘಸಂಸ್ಕರ್ತರು ಧರ್ಮಧ್ವಂಸ ಮಾಡತಕ್ಕ ರಾಕ್ಷಸರ ಅವತಾರವನ್ನು ತಾಳಿರುತ್ತಾರೆಂದು ಸನಾತನಧರ್ಮಪರರು ತಿಳಿದಿರುತ್ತಾರೆ

ಚಂಡಾಲ ಸ್ಪರ್ಶ ಶಾರದಾ ಶಾಸನಾದಿಗಳಿಂದ ಮತವನ್ನೂ, ಸ್ತ್ರೀ ಸ್ವಾತಂತ್ರ್ಯ ನೆಪದಿಂದ ಸ್ತ್ರೀಯರನ್ನು ಬೀದಿಗೆಳೆದು ಮಾನವನ್ನೂ, ರೈತರಿಗೂ ರಾಜನಿಗೂ ಮಧ್ಯೆ ಬೇರೊಬ್ಬನಿರಕೂಡದೆಂದು ಭೂಸ್ವಾಮಿಗಳ ಮತ್ತು ಧನಿಕರುಗಳ ಧನವನ್ನೂ, ಇವುಗಳ ಮೂಲಕ ಸಮಾಜದಲ್ಲಿ ಸಂಭವಿಸುವ ವಿಪ್ಲವದಿಂದ ಪ್ರಾಣವನ್ನೂ ನಾಶಪಡಿಸುತ್ತಿರುವ ನವನಾಗರಿಕರು ಕೋರುತ್ತಿರುವ ದೌರ್ಭಾಗ್ಯದ ಸ್ವರಾಜ್ಯವು ನಮಗೆ ಮಾತ್ರವಲ್ಲದೆ ನಮ್ಮ ಶತ್ರುಗಳಿಗೂ ಕೂಡ ಪ್ರಾಪ್ತವಾಗದಿರಲಿ ಸ್ವಾತಂತ್ರ್ಯವು ಪ್ರತಿಯೊಬ್ಬ ಮನುಷ್ಯನಿಂದಲೂ ಕೋರಲ್ಪಡತಕ್ಕದಾಗಿದೆ ಅದು ನಮಗೂ ಸಮ್ಮತವಾಗಿರುವುದು ಸ್ವರಾಜ್ಯದ ಹೆಸರಿನಿಂದ ಸ್ವಾತಂತ್ರ್ಯವನ್ನು ಕೋರುವುದಕ್ಕೆ ಮೊದಲು ಮತಸ್ವಾತಂತ್ರ್ಯವನ್ನೂ ವಿವಾಹಸ್ವಾತಂತ್ರ್ಯವನ್ನೂ ಹೊಂದಲು ಯತ್ನಿಸುವುದು ವಿವಾಹಕ್ಕೆ ಮೊದಲೇ ಸಂಸಾರ ವಿಧಾನವನ್ನು ಗೊತ್ತುಮಾಡಲೆತ್ನಿಸಿದಂತಿರುವುದು ಈ ಪ್ರಯತ್ನವು ಸ್ವರಾಜ್ಯ ಧ್ವಂಸಕವಲ್ಲದೆ ಪೋಷಕವಲ್ಲವು

ಎಲ್ಲ ಮತದವರಿಗೂ ತಂತಮ್ಮ ಧರ್ಮವನ್ನು ನಂಬಿ ಆಚರಿಸುವ ಪದ್ಧತಿಗೆ ಯಾವ ಬಾಧೆಯುಂಟಾಗದಂತೆ ಜನರ ಸೌಖ್ಯಕ್ಕೆ ತಕ್ಕ ಆಧಿಕ ಸೌಕರ್ಯವನ್ನುಂಟುಮಾಡುವಂತಹ ಭಾವಿ ಕಾಲ ಸ್ವರಾಜ್ಯವು ನಮಗಿಷ್ಟವಾದುದು ಪಂಚಮರಿಗೆ ತಕ್ಕ ವಿದ್ಯೆಯನ್ನು ಕಲಿಸುವುದೂ, ಅವರಿಗೆ ವಾಸಸ್ಥಳಗಳನ್ನೂ, ಬಾವಿಗಳನ್ನೂ ಅವರಿಗಾಗಿ ಪ್ರತ್ಯೇಕ ದೇವಾಲಯಗಳನ್ನು ಕಟ್ಟಿಸಿಕೊಡುವುದೂ, ಅವರಿಗೆ ಮಂದಿರವನ್ನೇರ್ಪಡಿಸಿ ರಾಮಕೃಷ್ಣಾದಿಗಳನ್ನು ಭಜಿಸುವುದನ್ನು ಹೇಳಿಕೊಡುವುದೂ, ಇವುಗಳಿಗಾಗಿ ಚಂದಾಹಣವನ್ನು ಕೊಡುವುದೂ ನಮ್ಮೆಲ್ಲರಿಗೂ ಬಹಳ ಇಷ್ಟವಾಗಿರುತ್ತವೆ. ಅವರಿಗೆ ಬೇಕಾದುದೂ ಇಷ್ಟೇ ವ್ಯವಸಾಯ ಕೆಲಸಕ್ಕೆ ಅವರುಗಳನ್ನು ನಿಯಮಿಸಿಕೊಳ್ಳುತ್ತಿದ್ದೇವೆ ಗೃಹಕೃತ್ಯಗಳಿಗೆ ಅವರನ್ನು ಸೇವಕರುಗಳನ್ನಾಗಿ ನಿಯಮಿಸಿಕೊಳ್ಳಲು ಶಾಸ್ತ್ರಾಧಾರವಿರುತ್ತದೆ. ಅನಾದಿ ಕಾಲದಿಂದಲೂ ಜನಗಳು ಸತ್ತುಹೋದರೆ ಅವುಗಳ ಚರ್ಮವನ್ನು ಸುಲಿದು ಮಾರುವುದು ಭರತಖಂಡದಲ್ಲಿ ಬಹಳ ಅಪರಾಧವಾಗಿ ಎಣಿಸಲ್ಪಟ್ಟಿರುವುದಾದರೂ ಆ ಚರ್ಮವು ತಮ್ಮ ಮನೆಗಳಲ್ಲಿ ಚಿಕಿತ್ಸೆಯಿರುವ ಪಂಚಮರಿಗೆ ಉಚಿತವಾಗಿ ಕೊಡಲ್ಪಡುವುದು ಹೀಗೆ ಕೊಡಲ್ಪಡುವ ಚರ್ಮಗಳನ್ನು ಹದಮಾಡಿ ಮಾರಿಕೊಳ್ಳುವುದರಿಂದ ಅವರ ಜೀವನಕ್ಕೆ ಸಹಾಯವಾಗುವುದು.

ಬಹಳ ನಾಗರಿಕರಾಗಿರುವವರು ತಮ್ಮ ಸಕಲ ದೇಹಗಳನ್ನು ತಾವೇ ಮಾಡಿಕೊಳ್ಳುವುದರಿಂದ ಪಂಚಮರ ಜೀವನಕ್ಕೆ [illegible] ಗೊಳ್ಳದೆ [illegible] ಪಂಚಮರ ಪಾಡು ಎನ್ನಾದರೂ [illegible] ಈಗ ಇಂಗ್ಲೀಷು ನಾಗರಿಕತೆಯು ಹೆಚ್ಚಿದ [illegible] ಬ್ರಾಹ್ಮಣಾದಿಗಳ [illegible] ಕೆಲವಸ್ತ್ರಗಳು [illegible] ಬಟ್ಟೆಗೆ [illegible] ನಮ್ಮ ದೇಶ [illegible] ಹಿಂದೆ [illegible] ಮಾಡುವ [illegible] ಮಾತ್ರವಲ್ಲದೆ [illegible] ಜೀವನಕ್ಕೆ [illegible] ವಿನಾ ಕಾರಣವಿಲ್ಲದ [illegible] ಈ ಮಂತ್ರಿ [illegible] ಇಂಗ್ಲೀಷರು [illegible] ಸ್ವದೇಶೀ ಸಂಘ [illegible] ಗಳನ್ನು ಪರಿಶೀಲಿಸುವುದರಿಂದ ಬೀಳಕ್ಕೆ ಕ್ಷೇಮವಾಗುವುದೆಂಬುದನ್ನು ನಾವೂ ಒಪ್ಪುತ್ತೇವೆ ಈ ಲೋಪಗಳನ್ನೆಲ್ಲ ಸ್ವಾಭಿಮಾನವನ್ನನುಸರಿಸಿ ಬೋಧಿಸಿ ಸಂಪಾದಿಸಿಕೊಳ್ಳುವುದು ಬಹಳ ಅವಶ್ಯವು ನಮ್ಮ ಮತವು ಸ್ಪೃಶ್ಯಾಸ್ಪೃಶ್ಯ ನಿಯಮಗಳೂ, ನಮ್ಮ ದೇವಸ್ಥಾನ ನಿಯಮಗಳೂ ಪೂರ್ವ ಕಾಲದಿಂದಲೂ ನಡೆದುಬರುತ್ತಿವೆ ಕೋಲ್ಲ|| ವಿನಾಯಜ್ಞೋಪವೀತೇನ ವಿನಾಚ ಶಿಖಯಾತ್ಪತಂ | [illegible] ಎಂದು ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುವ ಶಿಖಾಯಜ್ಞೋಪವೀತಗಳನ್ನು ತ್ಯಜಿಸಿ ಹಗಲು ವೇಷಧಾರಿಗಳಂತೆ ಇಂಗ್ಲೀಷರನ್ನನುಕರಿಸಬೇಕೆಂದು ಕಚ್ಚೆಯನ್ನು ಬಿಟ್ಟು ಪಟ್ಟೆಯನ್ನು ಕತ್ತರಿಸಿ ಹಗಗೇನನ್ನೂ ಧರಿಸದೆ ಇರುವವರ ಮುಖವನ್ನು ನೋಡುವುದೂ ಪಾಪವೆಂದು ಶಾಸ್ತ್ರವು ಹೇಳುತ್ತಿರುವುದನ್ನು ನಂಬದೆ ತಮ್ಮ ತಂದೆ ತಾತಂದಿರ ಆಚರಣೆಯನ್ನೂ ಲಕ್ಷಿಸದೆ ಮನಸ್ಸಿಗೆ ಬಂದಂತೆ ವಿಕಾರ ವೇಷವನ್ನು ಧರಿಸುವುದು ದೇಶದ ಗೌರವಕ್ಕೂ ತಮ್ಮ ಗೌರವಕ್ಕೂ [illegible] ಕಾಂಗ್ರೆಸು ನಾಯಕರಾಗಲಿ ಸಂಘ ಸಂಸ್ಕರ್ತರೆಂದು ಹೇಳಿಕೊಳ್ಳುವವರಾಗಲಿ ಈ ದುರಾಚಾರಗಳನ್ನು ಬಿಟ್ಟು ತಮ್ಮ ಪೂರ್ವಿಕರ ದೇಶ ಮತ ವೇಷ ಗೌರವಗಳನ್ನು ಕಾಪಾಡಬೇಕೆಂದು ಅವರುಗಳನ್ನು ವಿನಯದಿಂದ ಪ್ರಾರ್ಥಿಸುವುದಾಗಿದೆ

ಆಂಗ್ಲೇಯರು ಅನೇಕ ದೇಶಗಳಲ್ಲಿ ವಾಸಿಸುತ್ತಿರುವರು ನಮ್ಮ ದೇಶದಲ್ಲಿ ನಮ್ಮ ಮತವು ಬಹಳ ದೊಡ್ಡದು ಅವರು ಬಹಳ ಸ್ವಲ್ಪ ಸಂಖ್ಯೆಯುಂದಿರುವರು. ಆದರೂ ಅವರು ನಮ್ಮ ಸಹವಾಸದಲ್ಲಿ ಎಷ್ಟು ಕಾಲವಿದ್ದರೂ ತಮ್ಮ ಆಚಾರವನ್ನಾಗಲಿ ಮತ ನಿಯಮಗಳನ್ನಾಗಲಿ ವೇಷ ಭಾಷೆಗಳನ್ನಾಗಲಿ ಎಷ್ಟು ಮಾತ್ರಕ್ಕೂ ಬದಲಾಯಿಸಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ ನಾವು ಅ [illegible] ಜೀವನಕ್ಕಾಗಿ ಇತರ ವಿದ್ಯೆಗಳನ್ನು ಕಲಿತರೂ ನಮ್ಮ ಧರ್ಮಶಾಸ್ತ್ರವನ್ನೂ ವೇಷ ಭಾಷೆಗಳನ್ನೂ ಬದಲಾಯಿಸಕೂಡದೆಂಬ ಉಪದೇಶವನ್ನು ಕೇಳದೆ ಅಲ್ಪಬುದ್ಧಿಯಿಂದ ನಾಟಕ ವೇಷಧಾರಿಗಳಂತೆ ವರ್ತಿಸುವುದು ದೇಶಕ್ಕೂ ಮತಕ್ಕೂ ಎಷ್ಟು ಲಜ್ಜಾಸ್ಪದವೂ ಪಾಪಕರವೂ ಎಂಬುದನ್ನು ಸಾವಧಾನ ಮನಸ್ಸಿನಿಂದ ನವನಾಗರಿಕರು ಗ್ರಹಿಸಿ ಇನ್ನುಮೇಲಾದರೂ ತಮ್ಮ ಸ್ವರೂಪವನ್ನು ಸಂಸ್ಕರಿಸಿಕೊಳ್ಳುವವರಾಗಲಿ

ಮಡಿ ಮೈಲಿಗೆ ಎಂಬ ವಿಷಯವನ್ನು ಗಮನಿಸದೆ ಕ್ಲಬ್ಬುಗಳಲ್ಲಿ ವರ್ಣಸಂಕರವಾದ ತಿಂಡಿಯನ್ನೂ ಹೊಟೇಲುಗಳಲ್ಲಿ ಅನ್ನವನ್ನೂ ತಿಂದು ಆರೋಗ್ಯವನ್ನು ಕೆಡಿಸಿಕೊಂಡು ಜೇಬುಗಳಲ್ಲಿ ಯಾವಾಗಲೂ ಔಷಧಿಯ ಸೀಸೆಗಳನ್ನಿಟ್ಟುಕೊಂಡಿರುವ ದುಸ್ಥಿತಿಯು ಪ್ರಾಪ್ತವಾಗಿರುತ್ತದೆ. ಇಂತಹ ದುರ್ಭೋಜನವನ್ನು ಬಿಟ್ಟು ನಿಯಮಾನುಸಾರವಾಗಿ ಊಟಮಾಡುವವರ ಆರೋಗ್ಯ ಬಹಳ ಚೆನ್ನಾಗಿರುವುದೆಂಬುದು ಲೋಕ ವಿದಿತವಾಗಿರುವುದು

ನಾವು ಎಲ್ಲ ವಿಧದಲ್ಲೂ ಪಂಚಮರಿಗೆ ಸಹಾಯ ಮಾಡಿದಾಗ್ಯೂ ಅವರು ನಮ್ಮನ್ನು ಬಿಟ್ಟು ಬೇರೆಹೋದರೂ ನಮಗೆ ನಷ್ಟವಿಲ್ಲ ನಮ್ಮವರಿಗಿಂತ ಸ್ವಲ್ಪ ಸಂಖ್ಯಾಕರಾದ ಮಹಮ್ಮದೀಯರಿಗೂ ಪಾರ್ಸೀಯವರಿಗೂ ಪೃಥುತ್ವದವರಿಂದ ರಕ್ಷಣೆಯು ಉಂಟಾಗಿಲ್ಲವೆ? ಆ ಭಯದಿಂದ ಅವರು ತಮ್ಮ ಮತಧರ್ಮವನ್ನು ಬಿಟ್ಟು ನಮ್ಮೊಡನೆ ಸೇರಿರುವರೆ? ಹಾಗೆಯೇ ನಮ್ಮ ಸನಾತನ ಧರ್ಮಪರರ ಮತದವರು ಕೂಡ ದೊರೆತನದವರಿಂದ ಮತ ಮಾನ ಧನ ಪ್ರಾಣಸಂರಕ್ಷಣೆಯನ್ನು ಕೋರಬೇಕು ಹಾಗೆ ಅವರ ನಿರ್ದಯೆಯಿಂದ ಅಂತಹ ರಕ್ಷಣವನ್ನು ಕೊಡದಿದ್ದಲ್ಲಿ « ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ » ಎಂದು ಪ್ರತಿಜ್ಞೆ ಮಾಡಿರುವ ಲೋಕನಿಯಾಮಕನಾದ ಪರಮೇಶ್ವರನನ್ನು ಪ್ರಾರ್ಥಿಸುವೆವು ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ » ಎಂದು [illegible] ಮಾಡಿರುವ ಪರಮೇಶ್ವರನ ಆಜ್ಞೆಯನ್ನು ಮೀರಿ ಭ್ರಷ್ಟರಾದ ಮೇಲೆ ಪರಮೇಶ್ವರನನ್ನು ಪ್ರಾರ್ಥಿಸಿ ಪ್ರಯೋಜನವಿಲ್ಲ ಆದುದರಿಂದ ವೇದ ಶಾಸ್ತ್ರಗಳ ಅಂಗೀಕಾರವಿಲ್ಲದ ಯಾವ ಸೌಕರ್ಯಗಳನ್ನೂ ಪಂಚಮರಿಗೆ ನಾವು ಸನಾತನ ಧರ್ಮಪರರು ಮಾಡಲಾರೆವು

ಶಾಸ್ತ್ರ ವಿರೋಧವಲ್ಲದ ಎಲ್ಲ ಸೌಕರ್ಯಗಳನ್ನು ಈ ವರೆಗೆ ನಮ್ಮವರು ಮಾಡಿರುತ್ತಾರೆ ಈಗ ನಾವು ಕೂಡ ಮಾಡಲು ಸಿದ್ಧರಾಗಿರುತ್ತೇವೆ ನಾವು ನಮ್ಮ [illegible] ಧರ್ಮಗಳಲ್ಲಿ ಕೈ ಹಾಕಕೂಡದೆಂದೂ, [illegible] ಮಾಡಲು ಯಾವ ಪ್ರಭುತ್ವಕ್ಕೂ ನ್ಯಾಯವಾದ ಅಧಿಕಾರವಿಲ್ಲವೆಂದೂ ದೊರೆತನದವರಲ್ಲಿ ಬಿನ್ನೈಸುತ್ತೇವೆ ಮತ್ತು ನಮ್ಮ ನವನಾಗರಿಕರಿಗೆ ಸ್ವರಾಜ್ಯ ಪ್ರಾಪ್ತವಾದರೂ ಅವರನ್ನು ಸಹ ಹೀಗೆಯೇ ಕೇಳಿಕೊಳ್ಳುತ್ತೇವೆ

3೭ ಕೋಟಿ ಭಾರತೀಯರಲ್ಲಿ ಪಾಶ್ಚಾತ್ಯ ವಾಸನೆಯುಳ್ಳ ಕೆಲವು ಜನರ ಹೊರತಾಗಿ ಉಳಿದವರೆಲ್ಲರೂ ಶ್ರುತಿ ಸ್ಮೃತಿಗಳನ್ನು ನಂಬಿ ಭಕ್ತಿಯಿಂದ ತಂತಮ್ಮ ಕುಲಧರ್ಮಗಳನ್ನು ಆಚರಿಸುವವರೇ ಆಗಿರುವರು ಉತ್ಸವ ದಿನಗಳಲ್ಲೂ ಪುಣ್ಯದಿನಗಳಲ್ಲೂ ಕೆಲ ನಾಸ್ತಿಕರ ವಿನಾ ಎಲ್ಲರೂ ಸ್ನಾನದಾನಾದಿಗಳನ್ನೂ ದೇವರ ದರ್ಶನವನ್ನೂ ಮಾಡಿ ತಮ್ಮ ಕೃತಕೃತ್ಯರನ್ನಾಗಿ ಮಾಡಬೇಕೆನ್ನುವವರೇ ನೂರಕ್ಕೆ 90 ಮಂದಿಯವರು ಆದರೆ ಈಗ ಅವರು ತಮಗೆ ಪ್ರಾಪ್ತವಾಗುತ್ತಿರುವ ಮತವಿಪ್ಲವದ ಅನರ್ಥವನ್ನು ಚೆನ್ನಾಗಿ ತಿಳಿಯದಿರುವುದರಿಂದ ಅವರು ಉದಾಸೀನರಾಗಿದ್ದಾರೆ ನವನಾಗರಿಕರು ರಾಜಕೀಯ ವಿಚಾರದಲ್ಲಿ ಬಹಳ ಕಾಲದಿಂದಲೂ ಪ್ರವೇಶಿಸಿರುವುದರಿಂದ ಅವರೇ ಹಿಂದು ಪ್ರತಿನಿಧಿಗಳೆಂದೂ, ಅವರಭಿಪ್ರಾಯವೇ ಹಿಂದುಗಳ ಅಭಿಪ್ರಾಯವೆಂದೂ ಪ್ರಭುತ್ವದವರು ತಿಳಿದುಕೊಂಡಿರುತ್ತಾರೆ ಆಂಗ್ಲೇಯ ಭಾಷಾ ಪಾಂಡಿತ್ಯವನ್ನೂ ಅವರ ಆಚರಣೆಯನ್ನೂ ಅವಲಂಬಿಸಿಕೊಂಡಿರುವವರು ಪ್ರಜಾಪ್ರತಿನಿಧಿಗಳಾಗಿ ಅಸೆಂಬ್ಲಿ ಸೇರಿ ಮತ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಶಾಸನಗಳನ್ನು ಮಾಡುವರು. ಇವರ ಮೂಲಕ ಎಂತಹ ಅನರ್ಥಗಳು ಪ್ರಾಪ್ತವಾಗಲಿಕ್ಕಿವೆ ಯಾರಿಗೆ ಗೊತ್ತು? ಸನಾತನ ಧರ್ಮನಿರತರು ಅಖಿಲ ಭಾರತ ವರ್ಣೀಯ ವರ್ಣಾಶ್ರಮ ಸ್ವರಾಜ್ಯ ಸಂಘಕ್ಕೆ ಉಪ ಸಂಘಗಳನ್ನಾಗಿ ಪಟ್ಟಣಗಳ ಹಳ್ಳಿಗಳಲ್ಲೂ ಸಭೆಗಳನ್ನೇರ್ಪಡಿಸಿ ಅಧ್ಯಕ್ಷರನ್ನೂ, ಕಾರ್ಯದರ್ಶಿಗಳ ಸಭಿಕರನ್ನೂ ಗೊತ್ತುಮಾಡಿಕೊಂಡು ತಮ್ಮ ಸಹಾಯಗಳನ್ನು [illegible] ಭಾರತ ವರ್ಣೀಯ ವರ್ಣಾಶ್ರಮ ಸ್ವರಾಜ್ಯ ಸಂಘದ ಸೆಕ್ರೆಟರಿ ಕಾಶೀಬಾಬಾ(?) ನಾಲಾ(?) ಎಂದು ಇಂಗ್ಲೀಷಿನಲ್ಲಾಗಲಿ ಹಿಂದಿಯಲ್ಲಾ

ಬರದು ತಿಳಿಸುವುದು. ಕಾಂಗ್ರೆಸ್ಸಿನವರಾಗಲಿ ಅಸೆಂಬ್ಲಿಯವರಾಗಲಿ ವರ್ಣ ಧರ್ಮನಾಶಕ ಕ್ರಿಯೆಗಳಲ್ಲಿ ಬಿಟ್ಟಿರುವ ಪ್ರಯೋಗಗಳು ನಾಡಿನಲ್ಲಿ ಎದ್ದು ಕಾಣುತ್ತಿರುವ ಈ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಆಗಿನವರಾದ ರಾಜಪ್ರತಿನಿಧಿ ಅಗತ್ಯವೆಂದು ತಿಳಿದು ... ಧರ್ಮವನ್ನು ... ಇದು ಬುದ್ಧಿ ಶಕ್ತಿ ... ಬಲಾತ್ಕಾರ ... ದೀರ್ಘ ... ಎಂದು ಧರ್ಮಶಾಸ್ತ್ರ ಮತಗಳ ಅರ್ಥ ಶಾಸ್ತ್ರವಿಶಾರದರೆಲ್ಲರ ರಾಜಕೀಯ ಪ್ರಧಾನವಾದ ಧರ್ಮವಿಷಯವೇ ಪ್ರಬಲವೆಂದು ಹೇಳಲ್ಪಟ್ಟಿವೆ ... ಧರ್ಮವನ್ನು ರಕ್ಷಿಸುವ ... ಅರ್ಥವನ್ನು ಬಲಪಡಿಸುತ್ತದೆ ... ಮಹಮ್ಮದೀಯರೂ ಪರಮತದವರಿಂದ ಸಂರಕ್ಷಿತ ನಾನಾವಿಧ ಕಷ್ಟಗಳನ್ನು ಅನುಭವಿಸಿ ತಂತಮ್ಮ ಮತಗಳನ್ನು ಕಾಪಾಡಿರುವ ಸಂಗತಿಯು ಚರಿತ್ರೆಯಿಂದ ವಿಶದವಾಗುವುದರಿಂದ ಮನುಷ್ಯರಿಗೆ ಸ್ವಭಾವಸಿದ್ಧವಾದ ಧರ್ಮಶ್ರದ್ಧೆಯನ್ನು ಬಿಟ್ಟು ದಂಡಾಲಯದಲ್ಲಿ ಸೇರುತ್ತಿರುವವರಿಗೆ ಮಹಾಪಾತಕರಪ್ಪ ಕ್ರೈಸ್ತರೂ ಮಹಮ್ಮದೀಯರೂ ತಂತಮ್ಮ ಮತ ಗ್ರಂಥಗಳಲ್ಲಿ ಇತರ ಜಾತಿಯವರನ್ನು ತಮ್ಮೊಳಗೆ ಸೇರಿಸಿಕೊಳ್ಳುವುದು ನಿಷೇಧಿಸಲ್ಪಡದಿರುವುದರಿಂದ ಹಾಗೆ ಮಾಡುವರು. ಆದರೆ ಅವರೂ ಹಾಗೆ ಸೇರಿದವರಿಗೆ ಎಲ್ಲ ವಿಷಯದಲ್ಲೂ ಸಮಾನ ಗೌರವವನ್ನು ಸಂಕೀರ್ಣರಿಗೆ ಕೊಡುವುದಿಲ್ಲ. ಇಷ್ಟು ಮಾತ್ರವಲ್ಲ ನಿಜವಾದ ಆಂಗ್ಲೇಯರು ತಮ್ಮೊಡನೆ ಸಮನಾಗಿ ಗೌರವಿಸದಿರುವುದು ನಮಗೆ ತಿಳಿದ ವಿಚಾರವಾಗಿದೆ. ಬ್ರಿಟಿಷ್‌ನವರ ಸಾಮ್ರಾಜ್ಯದಲ್ಲಿ ಸನಾತನ ಧರ್ಮನಿರತರಾಗಿರುವ ನಮ್ಮಗಳಿಗೆ ಯಾವ ದ್ವೇಷಭಾವವೂ ಇಲ್ಲ. ಆದರಾಗಲಿ ಸಂಪೂರ್ಣ ಸ್ವರಾಜ್ಯ ವಾದಿಗಳಾಗಲಿ ನಮ್ಮ ವೇದಶಾಸ್ತ್ರ ಸಿದ್ಧವಾದ ಮತ ಕಟ್ಟಳೆಗಳನ್ನು ಉಲ್ಲಂಘಿಸಿ ಪರಿಪಾಲಿಸುವರೆಂದು ಹೇಗಾಗಿ ತಿಳಿದು ಈ ಅಭಿಪ್ರಾಯವನ್ನು ಮಂಡಿಸ ಬೇಡಿಲ್ಲ. ಅವರು ಆ ಅಭಿಪ್ರಾಯವನ್ನು ಬದಲಾಯಿಸುವವರೆಗೂ ನಾವು ಪ್ರತಿಭಟಿಸುವೆವು. ನಮ್ಮ ಈ ಧರ್ಮವನ್ನು ಕಾಪಾಡುವವರೆಗೂ ರಾಜನನ್ನು ಪರಮೇಶ್ವರನೆಂದು ಭಾವಿಸುವೆವು. ಕಾಂಗ್ರೆಸ್ಸಿನವರಿಂದ ನಮಗೆ ಸಂಭವಿಸುತ್ತಿರುವ ಅನರ್ಥಗಳನ್ನು ತೊಲಗಿಸಬೇಕೆಂದು ದೊರೆತನದವರನ್ನು ಸಹಸ್ರ ಪರಿಗಳಿಂದ ಪ್ರಾರ್ಥಿಸುತ್ತೇವೆ. ನಮಗೆ ಯಾರ ಮೇಲೂ ದ್ವೇಷವಿಲ್ಲ. ನಮ್ಮ ಧರ್ಮವನ್ನು ನಾವು ಬಿಡ್ಡಿ ಘೋಷಣೆಯಾಗಿ ಎದುರಿಸಲಿಲ್ಲ. ನಿರ್ಬಂಧದಿಂದ ಧರ್ಮನಷ್ಟವಾದಲ್ಲಿ ಅದಕ್ಕೆ ಸ್ವರಾಜ್ಯ ವಾದಿಗಳೇ ಜವಾಬ್ದಾರರಾಗುವರು. ಇಂತಹ ತೊಂದರೆಗಳುಂಟಾಗದ ಹಾಗೆ ಧರ್ಮ ರಕ್ಷಕರಾದ ಪರಮೇಶ್ವರನೂ ಅವರ ಸ್ಥಾನಾದ ದೊರೆತನದವರೂ ಸನಾತನ ಧರ್ಮಪರರನ್ನು ರಕ್ಷಿಸಬೇಕೆಂದು ೬೦ ಸನಾತನ ಧರ್ಮಿಗಳ ಅಭಿಪ್ರಾಯವು.

ಭಾರತ ರಾಜಕೀಯ ದೃಶ್ಯ

(ಲೇ—ಕಡಕೊಪ್ಪ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈ ಸಂಸ್ಥೆಯು ಆರಂಭ ದೆಸೆಯಲ್ಲಿ ಸ್ವಲ್ಪವರೆಗೆ ಕಾರ್ಯದರ್ಶಿಗಳಾಗಿದ್ದು ವರ್ಷ ವರ್ಷವೂ ಇದು ನಡೆದ ಸೇರುವಂತೆ ಏರ್ಪಡಿಸುವುದರಲ್ಲಿ ಹ್ಯೂಮ್ ಅದಕ್ಕೊಂದು ನೂತನ ಸ್ವರೂಪವನ್ನು ತಂದರು. ಸುಮಾರು ೩೦ ವರ್ಷಗಳವರೆಗೆ ಆಡಳಿತ ಸುಧಾರಣೆಗಳನ್ನು ವಿಮರ್ಶಿಸಿ ಪ್ರಭುತ್ವದವರಿಗೆ ಸಲಹೆಗಳನ್ನು ಕೊಡುವುದರಲ್ಲಿಯೇ ಇದು ತೊಡಗಿತು. ನ್ಯಾಯಶಾಖೆಯ ಮತ್ತು ಕಾರ್ಯನಿರ್ವಾಹಕ ಕರ್ತವ್ಯಗಳನ್ನು ವಿಭಾಗಿಸುವುದು, ಸೈನ್ಯದ ಖರ್ಚನ್ನು ಕಡಿಮೆಮಾಡುವುದು, ಶಾಸನ ಸಭೆಗಳ ಸುಧಾರಣೆ, ಪಂಚಾಯತರ ಮೂಲಕ ವಿಚಾರಣೆ, ಇಂಗ್ಲೆಂಡಿನಲ್ಲಿರುವ ಇಂಡಿಯಾ ಕಛೇರಿಯ ರದ್ಧಿ, ಐ. ಸಿ. ಎಸ್. ಪರೀಕ್ಷೆಯನ್ನು ಇಂಗ್ಲೆಂಡು ಮತ್ತು ಇಂಡಿಯಾಗಳಲ್ಲಿ ಏಕಕಾಲದಲ್ಲಿಯೇ ನಡೆಸುವ ಏರ್ಪಾಡು, ಸೈನ್ಯ ಶಾಖೆಗೆ ದೇಶೀಯರನ್ನು ಸೇರಿಸುವುದು ಮತ್ತು ಅವರನ್ನು ತರಬೇತು ಮಾಡಲು ಸೈನ್ಯ ವಿದ್ಯಾಲಯಗಳನ್ನು ಸ್ಥಾಪಿಸುವುದು, ಆಯುಧ ಶಾಸನ ರದ್ದಿಪಡಿಸುವುದು, ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ಕಷ್ಟನಿವಾರಣೆ, ನಾಟು ಉಪ್ಪಿನ ಸುಂಕ, ಪ್ರೌಢ ಮತ್ತು ಪ್ರಾಥಮಿಕ ವಿದ್ಯಾಪ್ರೋತ್ಸಾಹ, ನಾಟು ಸ್ವಾದೇಶಿಕ ಗಡಿಪಾರು ಮುಂದೆ ಭರತಖಂಡದ ಬಡತನ ನಿವಾರಣೋಪಾಯ, ಪ್ರತ್ಯೇಕ ಚುನಾವಣೆ ಇವೇ ಮೊದಲಾದ ಅಂಶಗಳ ಬಗ್ಗೆ ಪ್ರಭುತ್ವದವರಿಗೆ ಸ್ವಾಭಿಪ್ರಾಯ ಮೂಲಕ ಸೂಚನೆಕೊಡುವುದೇ ಇದರ ಕಾರ್ಯವಾಗಿದ್ದಿತು. ಇವುಗಳಲ್ಲಿ ಕೆಲವನ್ನು ಕುರಿತು ಸಂದರ್ಭಾನುಸಾರ ಈ ಹಿಂದೆಯೇ ಪ್ರಸ್ತಾಪಿಸಿದೆ. ಉಳಿದವುಗಳ ವಿಚಾರದಲ್ಲಿ ಕೆಲವಷ್ಟನ್ನು ಇಲ್ಲಿ ವಿಶದಪಡಿಸಲಾಗುವುದು.

ನ್ಯಾಯ ಶಾಖೆ ಮತ್ತು ಕಾರ್ಯನಿರ್ವಾಹಕ ಕರ್ತವ್ಯಗಳನ್ನು ನಿರ್ವಹಿಸಲು ಒಬ್ಬ ಅಧಿಕಾರಿಯೇ ಇರುತ್ತಾನೆ. ಉದಾಹರಣೆಗಾಗಿ ಜಿಲ್ಲಾಧಿಕಾರಿಗಳನ್ನು ತೆಗೆದುಕೊಳ್ಳೋಣ. ಇವರು ಏಕಕಾಲದಲ್ಲಿಯೇ ಪೊಲೀಸ್ ಅಧಿಕಾರಿಗಳೂ ದಂಡಾಧಿಕಾರಿಗಳೂ ಆಗಿರುತ್ತಾರೆ. ಒಬ್ಬರೇ ಒಂದು ಕಡೆ ಪೊಲೀಸು ಅಧಿಕಾರಿಗಳಾಗಿ ಅಪರಾಧ ಶೋಧನೆ ನಡೆಸುವುದಕ್ಕೆ ಏರ್ಪಡಿಸುವುದು ಇನ್ನೊಂದು ಕಡೆ ಅವನ ವಿಚಾರಣೆ ತೀರ್ಪುಗಳಿಗಾಗಿ ನ್ಯಾಯಾಧೀಶನಾಗಿ ಕುಳಿತುಕೊಳ್ಳುವುದು ಇದರಿಂದ ಅಪರಾಧಿಗೆ ನ್ಯಾಯ ದೊರೆಯುವುದು ಹೇಗೆ ಸಾಧ್ಯವಾದೀತು? ಫಿರ್ಯಾದಿಯೇ ನ್ಯಾಯಾಧೀಶನಾಗಿ ಅಪರಾಧಿಗೆ ನಿಷ್ಪಕ್ಷಪಾತ ಮನಸ್ಸಿನಿಂದ ತೀರ್ಪುಕೊಡುವುದು ಅಸಂಭವ. ಇದರಿಂದ ಅಪರಾಧಿಗೆ ಬಹು ಅನ್ಯಾಯ ಮಾಡಿದಂತಾಗುತ್ತದೆಯಾದುದರಿಂದ ಮೇಲೆ ಹೇಳಿದ ಎರಡು ಕರ್ತವ್ಯಗಳಿಗೂ ಬೇರೆ ಬೇರೆ ಅಧಿಕಾರಿಗಳನ್ನು ನಿಯಮಿಸಬೇಕೆಂದು ರಾಷ್ಟ್ರೀಯ ಸಭೆಯು ಬಹುಕಾಲದಿಂದಲೂ ವಿಜ್ಞಾಪಿಸಿಕೊಳ್ಳುತ್ತ ಬಂದಿರುವುದು. ಈ ಏರ್ಪಾಡಿನಿಂದ ದುಷ್ಪಟ್ಟು ಖರ್ಚು ಬರುತ್ತದೆಂದು ಪ್ರಭುತ್ವದವರು ಹೇಳುತ್ತ ಬಂದಿರುತ್ತಾರೆ. ಇಂಡಿಯಾ ಸರಕಾರದ ಸೇವೆಯಲ್ಲಿ

ದೊಡ್ಡ ಅಧಿಕಾರಿಗಳಾಗಿದ್ದು ಅನುಭವಹೊಂದಿದ್ದ ಲಾರ್ಡ್ ಹೋಬ್‌ಹೌಸ್ ಮೊದಲಾದವರು ಈ ಸಿದ್ಧಾಂತವನ್ನು ... ಒಂದು ಮೆಮೋರಿಯಲ್ಲನ್ನು ಸಿದ್ಧಪಡಿಸಿದವರ ಮುಂದೆ ಇಟ್ಟರು ... ನಮ್ಮ ನ್ಯಾಯದ ಆಸೆಕ ... ಈ ವಿಷಯದಲ್ಲಿ ಬ್ರಿಟಿಷ್ ಶಾಸನಸಭೆಯ ಗಮನವನ್ನು ... ಸೆಳೆದಿರುವರು.

... ನ್ಯಾಯ ... (Special Magistrates) ... ನಿಯಮಿಸಲ್ಪಟ್ಟದ್ದಾರೆ.

ಪಂಚಾಯತರ ಮೂಲಕ ವಿಚಾರಣೆ (Trial by Jury) ಬಗ್ಗೆ ಪ್ರಜೆಗಳಲ್ಲಿ ಬಹು ಅಸಮಾಧಾನವಿದ್ದು ಅದರ ಸುಧಾರಣೆಗಾಗಿ ರಾಷ್ಟ್ರೀಯ ಸಭೆಯು ಬಹುವಾಗಿ ಹಾಟುಪಡುತ್ತ ಬಂದಿರುವುದು. ನ್ಯಾಯಾಸ್ಥಾನಗಳಲ್ಲಿ ನ್ಯಾಯಾಧೀಶರು ತೀರ್ಪುಕೊಡಲು ತಮ್ಮ ಸಲಹೆಗಳಿಂದ ಸಹಾಯವಾಗುವಂತೆ ಪಂಚಾಯತರೆಂಬವರು ಇರುವರು. ಈ ಪಂಚಾಯತರ ಜಿಲ್ಲೆಯು ಯುರೋಪ್ಯ ಅಪರಾಧಿಗೆ ಬೇರೆ ತೆರನಾಗಿರುವುದು, ಭಾರತೀಯ ಅಪರಾಧಿಗೆ ಬೇರೆ ತೆರನಾದುದು. ಯುರೋಪ್ಯನು ಆತನು ಬ್ರಿಟಿಷ್ ಪ್ರಜೆಯಿರಲಿ ಇಲ್ಲದಿರಲಿ ತನ್ನ ಪರ ಅರ್ಧ ಭಾಗದಷ್ಟು ಮಂದಿ ಪಂಚಾಯತರು ಯುರೋಪ್ಯರೇ ಇರಬೇಕೆಂದು ಕೇಳಿಕೊಳ್ಳುವ ಹಕ್ಕು ಆತನಿಗಿರುವುದು. ಅಧಿಕಾರಿಗಳ ದೆಸೆಯಿಂದ ಸಂಭವಿಸುವ ಅಪಾಯಕ್ಕೆದುರಾಗಿ ರಕ್ಷಿತನಾಗಿರುವುದಷ್ಟೇ ಅಲ್ಲ. ಇತರ ಉದ್ವೇಗದಿಂದೊದಗುವ ಅಪಾಯಕ್ಕೂ ಒಂದು ರಕ್ಷಣೆಯಾಗಿ ಇರುವುದು. ಭಾರತೀಯನ ವಿಚಾರದಲ್ಲಿ ಈ ದೇಶದಲ್ಲಿರುವ ಯುರೋಪ್ಯರಲ್ಲದ ಬೇರೆ ವಿದೇಶಿಯರಿಗಾಗಲಿ ಸಾಧಾರಣವಾಗಿ ಯೂರೋಪಿಯನ್ನರಿಗಿರುವ ದ್ವೇಷಭಾವವಿರುವುದರಿಂದ ಇತರ ಜನಾಂಗಗಳ ಕೋರಿಕೆಯನ್ನು ಪರಿಶೀಲಿಸಿ ಅದಾಗ್ಯೂ ಆ ದೇಶೀಯ ರಂಗ ಈ ಕಡೆಗೆ ಯೋಗ್ಯ ವಿಚಾರಣಾ ಪ್ರಯೋಜನವು ದೊರೆಯಬೇಕೆಂದು ಆತನ ಕೇಳಿಕೊಳ್ಳಲಾಗದು. ವಿಚಾರಣೆಯಿಂದ ನಡೆಸಿದ ಮೂಲಕ ಆತನ ತಪ್ಪಿಗೆ ಶಿಕ್ಷೆಗೊಳಗಾಗಬೇಕು. ಏತಕ್ಕೆಂದರೆ ಯುರೋಪ್ಯ ವಿಚಾರಕರ್ತೃಗಳಾದವರನ್ನು ವಿಚಾರಣೆಯು ಹತೋಟಿಯಲ್ಲಿರುವುದು. ಅದರಿಂದ ಇಂತಹ ಸಂದರ್ಭಗಳಲ್ಲಿ ಅಪರಾಧಿಯು ರಕ್ಷಿಸಲ್ಪಡಲು ಏರ್ಪಟ್ಟ ... ಪಂಚಾಯತ ಮೂಲಕವಾದ ವಿಚಾರಣೆಯು ನಿಷ್ಪಕ್ಷಪಾತವಾದ ಪಂಚಾಯತರಿದ್ದರೆ ಮಾತ್ರ ಅಪೀಲ್ ಹಕ್ಕು ಇದ್ದರೆ ಒಂದು ನ್ಯಾಯ ಲಭಿಸಬಹುದಾಗುತ್ತದೆ.

1897 ರಲ್ಲಿ ಪೂನಾದಲ್ಲಾದ ಪ್ಲೇಗಿನ ಗಲಭೆಗಳ ದೆಸೆಯಿಂದ ಬಾಲಗಂಗಾಧರ ಟಿಳಕರು ರಾಜದ್ರೋಹಕ್ಕಾಗಿ ನ್ಯಾಯಾಸ್ಥಾನಕ್ಕೆ ವಿಚಾರಣೆಗೆ ಎಳೆಯಲ್ಪಟ್ಟರು. ಈ ಬಗೆಯ ಘಟನಾವಳಿಯಲ್ಲಿ ಯುರೋಪ್ಯರಿಗಿರುವಂತೆ ಭಾರತೀಯರಿಗೂ ಶಾಸನವು ಒಂದೇ ಸಮನಾದ ರಕ್ಷಣೆಯನ್ನು ಕೊಡುವಂತಿದ್ದರೆ ಅರ್ಧ ಜನ ಪಂಚಾಯತರು ಭಾರತೀಯರೇ ಇರಬೇಕೆಂದು ಕೇಳಿಕೊಳ್ಳುವ ಹಕ್ಕು ಆತನಿಗಿರುತ್ತಿತ್ತು. ದೇಶೀಯ ಪಂಚಾಯತರಿಂದಲೇ ವಿಚಾರಣೆ ನಡೆಸುತ್ತಿದ್ದಲ್ಲಿ ಅಪರಾಧವಾದವರೂ ಈ ದೇಶದವರಾಗಿದ್ದರೂ ರಾಜದ್ರೋಹ ಸಂಬಂಧವಾದ ಅಪರಾಧ ಆದಾಗಿರುವುದು. ದೇಶೀಯರೇ ಪಂಚಾಯತರಾಗಿದ್ದರೆ ಭಾವಿ ಪರಿಣಾಮ ಚೆನ್ನಾಗಿರುತ್ತಿತ್ತು ಮತ್ತು ಟಿಳಕರ ಬಿಡುಗಡೆಯಾಗುತ್ತಿತ್ತು. ಒಂದೇ ದೇಶದವರು ಉದ್ರೇಕ ಮತ್ತು ಜನರ ಮನಸ್ಸಿನ ಮೇಲೆ ಉಂಟಾಗಬಹುದಾದ ಪರಿಣಾಮ ಇವುಗಳನ್ನು ಚೆನ್ನಾಗಿ ಆಲೋಚಿಸಲು ಶಕ್ತರಾಗುತ್ತಿದ್ದರು. ನ್ಯಾಯಕ್ಕೆ ಇಂತಹ ಸಂದರ್ಭಗಳಲ್ಲಿ ಟಿಳಕರಿಗೆ ಶಿಕ್ಷೆಗೆ ಗುರಿಮಾಡುವುದಕ್ಕೂ ಒಪ್ಪಿರಲಿಲ್ಲ. ಯುರೋಪ್ಯರು ಮನೋಧರ್ಮದ ಅಗಿನ ಸಂದರ್ಭದಲ್ಲಿ ಇದರನ್ನು ಶಿಕ್ಷೆಗೆ ಗುರಿಮಾಡಬೇಕೆಂದೇ ಅಧಿಕಾರವರ್ಗ ಚಾಪಲರಾದ ಯುರೋಪ್ಯರು ಕಾವೇರಿದ ಹೆಚ್ಚು ಸಂಖ್ಯೆಯುಳ್ಳ ಪಂಚಾಯತರನ್ನು ಏರ್ಪಡಿಸಿದ್ದರು. ಸಾಧಿಸಿಕೊಂಡರು. 6 ಜನ ಯುರೋಪ್ಯರೂ 3 ಜನ ದೇಶೀಯರೂ ಉಳ್ಳ ಪಂಚಾಯತರು ಟಿಳಕರನ್ನು ವಿಚಾರಣೆಮಾಡಿ ಬಹುಮತದಿಂದ ಅಂದರೆ 3 ಜನ ದೇಶೀಯರು ವಿರುದ್ಧವಾಗಿ 6 ಜನ ಯುರೋಪ್ಯರು ಅವರನ್ನು ಶಿಕ್ಷೆಗೆ ಗುರಿಮಾಡಿದರು. ಇದಕ್ಕೂ ಬಲವಾದ ಇನ್ನೊಂದು ಪಕ್ಷದ ನ್ಯೂನತೆಯಲ್ಲಿ ಅಂಗ್ಲೇಯ ನ್ಯಾಯಾಸ್ಥಾನಗಳಲ್ಲಿ ಕರೆಸಬೇಕು ಹೊಂದಿ ಅನುಭವಿಸಲಾಗಿದೆ. ಒಪ್ಪೋಣ ಕೊಟ್ಟ ಮುಖ್ಯ ನ್ಯಾಯಾಧೀಶರು ಒಬ್ಬರೇ ದೇಶೀಯರಿಂದಾದ 9 ಜನ ಪಂಚಾಯತಿಯವರು ಇಬ್ಬರ ವಿರುದ್ಧವಾಗಿ 7 ಜನರು ಕೊಟ್ಟ ತೀರ್ಮಾನವನ್ನು ತಿರಸ್ಕರಿಸಿದ್ದರು. ಇದಕ್ಕೂ ಮೇಲೆ ಹೇಳಿದ ಟಿಳಕರ ಮೊಕದ್ದಮೆಗೂ ಇರತಕ್ಕ ವ್ಯತ್ಯಾಸವನ್ನು ನೋಡಿರಿ.

ಶಾಸನ ಸಭೆಗಳ ಉದಯ

ಈ ದೇಶದ ಪ್ರಭುತ್ವಾಧಿಕಾರವನ್ನು ಈಸ್ಟ್ ಇಂಡಿಯಾ ಕಂಪೆನಿಯವರಿಂದ ವಿಕ್ಟೋರಿಯಾ ಚಕ್ರವರ್ತಿನಿಯವರು 1858 ರಲ್ಲಿ ವಹಿಸಿಕೊಂಡಾಗ ಲಾರ್ಡ್ ಪಾಮರ್‌ಸ್ಟನ್‌ರವರು ಇಂಗ್ಲೆಂಡಿನಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ಇಲ್ಲಿನ ಆಳ್ವಿಕೆಗಾಗಿ ಒಂದು ಮಸೂದೆಯನ್ನು ರಚಿಸಿ ಪಾರ್ಲಿಮೆಂಟ್ ಮುಂದೆ ಇಟ್ಟರು. ಭಾರತ ಪ್ರಭುತ್ವಾಧಿಕಾರವು ಭಾರತಮಂತ್ರಿಯವರಲ್ಲಿ ಒಬ್ಬ ಕೈಸರರು ಮತ್ತು ಮಂತ್ರಾಲೋಚನಾ ಸಭೆಗಳಲ್ಲಿಯೂ ಒಂದುಗೂಡಿ ಸ್ವತಂತ್ರ ಮಂತ್ರಿಗಳ (Secretary of State) ಅಧ್ಯಕ್ಷತೆಯಲ್ಲಿ ನಿಯಮಿತ ಹೊಂದಿದ 8 ಜನ ಭಾರತ ಸೌಕರರ ಮಂತ್ರಾಲೋಚನಾ ಸಭೆಯಲ್ಲಿಯೂ ಇರತಕ್ಕದ್ದು. ಈ ಎರಡು ಪ್ರತ್ಯೇಕ ಸಂಸ್ಥೆಗಳ ಕಾರ್ಯಕಲಾಪಗಳು, ಸಾಮಾನ್ಯರ ಸಭೆಯ ಪುನರ್ವಿಮರ್ಶೆಗೂ ಕಟ್ಟಕಡೆಯ ತೀರ್ಮಾನಕ್ಕೂ ಒಳಪಟ್ಟಿರತಕ್ಕದ್ದು. ಈ ವಿಷಯಗಳನ್ನೊಳಗೊಂಡು ಆ ಮಸೂದೆಯು ಏರ್ಪಟ್ಟಿತು. ಇದಕ್ಕೆ ಮುಖ್ಯವಾದ ಆಕ್ಷೇಪಣೆಯೆಂದರೆ ನಮ್ಮ ದೇಶೀಯರ ಪ್ರಾತಿನಿಧ್ಯಕ್ಕೆ ಎಳ್ಳಷ್ಟೂ ಅವಕಾಶವಿಲ್ಲದಿರುವುದೇ ಆಗಿರುತ್ತದೆ. ಇದೇ ಅಭಿಪ್ರಾಯವನ್ನೇ ಎದುರು ಪಕ್ಷದ ಮುಖಂಡರಾಗಿದ್ದ ಡಿಸ್ರೇಲಿಯವರು ವ್ಯಕ್ತಪಡಿಸಿ ಜನರ ಕಷ್ಟನಷ್ಟಗಳ ಪರಿಹಾರಕ್ಕೆ ಸಾಧನೋಪಾಯವೇ ಇಲ್ಲವಾದುದರಿಂದ ಆಂಗ್ಲೇಯರ ರಕ್ಷಣೆಯು ಇದನ್ನು ಒದಗಿಸಿಕೊಡಬೇಕೆಂದು ಆದರು ಹೇಳಿದರು. ಇದೇ

ಹಿಂದೂಸ್ಥಾನ ... ಇಂಗ್ಲೆಂಡಿನಲ್ಲಿ ಮುಖ್ಯ ಸ್ಥಾನ ... ಸಾಮಾನ್ಯರ ಸಭೆ (House of Commons) ... ೧೮ ಕ್ಕೆ ... ಅಂತಹ ಶಕ್ತಿ ಮಂತ್ರಾಲೋಚನಾ ಸಭೆಯು ಸ್ಥಾಪಿತ ... ಆದರೆ ಭಾಗದ ಸದಸ್ಯರಲ್ಲಿ ನಾಲ್ವರು ಭಾರತೀಯರು ಸಾಮಾನ್ಯ ಮತ್ತು ಸೈನ್ಯ ಶಾಖೆಗಳಲ್ಲಿ 10 ವರ್ಷಗಳ ವರೆಗೆ ಸೇವೆ ಮಾಡಿದವರಾಗಿರಬೇಕು. ಉಳಿದ ಜನರು ಹಿಂದೂಸ್ಥಾನದಿಂದ ೫ ವರ್ಷಗಳಿಂತ ... ನಗರಗಳಲ್ಲಿ ಕೇಂದ್ರಿತರಾಗಿರಬೇಕು ಎಂಬ ವ್ಯವಸ್ಥೆ ನಡೆಯಿತು. ಭಾರತ ದೇಶದ ಸಾಮಾನ್ಯ ಮತ್ತು ಸೈನ್ಯ ಶಾಖೆಗಳ ಎಲ್ಲ ನೌಕರರೂ ಒಂದು ಸ್ಥಾನದ ಪಟ್ಟಿಯಲ್ಲಿ 38000 ರೂ ಗಳನ್ನು ದಾಟಿರುವ ಮತ್ತು 10000 ರೂ ದಾಟುವ ಸರ್ಕಾರದ ಸಾಲ ಪತ್ರಗಳನ್ನುಳ್ಳ ಹಿಂದುಸ್ಥಾನದಲ್ಲಿ ವಾಸಿಗಳಾಗಿದ್ದವರೂ ಮೊದಲನೆಯ ನಾಲ್ವರನ್ನು ಚುನಾಯಿಸತಕ್ಕದ್ದು. ಉಳಿದವರನ್ನು ಲಂಡನ್ ಲಿವರ್‌ಪೂಲ್, ಮ್ಯಾಂಚೆಸ್ಟರ್ ಗ್ಲಾಸ್ಗೋ ಇವುಗಳಲ್ಲಿನ ಪಾರ್ಲಿಮೆಂಟಿನ ಪ್ರತಿನಿಧಿಗಳೇ ಚುನಾಯಿಸತಕ್ಕದ್ದು. ಈ ಮಸೂದೆಯು ಅತೃಪ್ತಿಕರವೆಂದು ತಿಳಿಯಲ್ಪಟ್ಟಿತು. ಎರಡು ಬಗೆಯ ಪಕ್ಷಗಳ ಹಿತಗಳು ... ವಿರುದ್ಧವಾಗಿದ್ದವು ... ಅದರ ... ಹೆಚ್ಚಿನ ... ಪ್ರಸಿದ್ಧರಾದ ... ಬಿಲ್ ...

ಹಿಂದುಸ್ಥಾನ ನ್ಯಾಯಾಧಿಪತ್ಯ ಮತ್ತು ಆಡಳಿತ ಕಾರ್ಯಗಳು ಹಿಂದುಸ್ಥಾನದಲ್ಲಿ ಒಬ್ಬ ಗೈಸರಾಯ ಮತ್ತು ಒಂದು ಮಂತ್ರಾಲೋಚನ ಸಭೆಗೆ ವಹಿಸಲ್ಪಟ್ಟಿತು. ಇದರ ಮೇಲೆ ಇಂಗ್ಲೆಂಡಿನಲ್ಲಿ ಒಂದನ್ನಲ್ಲಿ 15 ಸದಸ್ಯರ ಸಭೆಯೊಂದು ಈ ಸಭೆಯ ಒಬ್ಬ ಸಾಮ್ರಾಜ್ಯ ಮಂತ್ರಿಯ ಮೂಲಕ (Secretary of State) ಬ್ರಿಟಿಷ್ ಮಂತ್ರಿ ಮಂಡಳಿಗೆ ಉತ್ತರವಾದಿಯಾಗಿರಬೇಕು. ಇದರ ಮೇಲೆ ಕೊನೆಯ ಅಧಿಕಾರವುಂಟು ಸಾಮಾನ್ಯರ ಸಭೆಯೇ (House of commons) ಇಷ್ಟಲ್ಲ ಪ್ರತಿಪಾದನೆ ಮಾಡುತ್ತ ಬಂದುದರ ಉದ್ದೇಶವೆಂದರೆ ಆಡಳಿತಗಾರರಂತೆ ಅವರು ಜನರೇ ಇರಲಿ ಒಂದು ಮೇಲ್ಪಟ್ಟ ಒಂದು ಬಗೆಯ ಅಂಕುಶವೆಂಬುದು ಇರುವುದು ಅಗತ್ಯವೆಂದು ನಮ್ಮ ದೇಶೀಯರು ಹೇಳುತ್ತ ಬಂದಿರುವಂತೆ ಇಂಗ್ಲೆಂಡಿನಲ್ಲಿ ಜನರು ತಿಳಿದಿದ್ದರೆಂದು ತೋರಿಸುವುದೇ ಆಗಿರುವುದು. ಆದಾಗ್ಯೂ ಆದರ ಈ ಸದುದ್ದೇಶವು ಸರಿಯಾಗಿ ನೆರವೇರುತ್ತದೋ ಇಲ್ಲವೋ ಎಂಬುದನ್ನು ಎದುರಿಸಿ ನೋಡಿಕೊಳ್ಳುವ ಕಷ್ಟವನ್ನು ಅವರು ವಹಿಸಲಿಲ್ಲ. ಹಿಂದುಸ್ಥಾನ ಪ್ರಭುತ್ವವು ನಿರಂಕುಶವಾಗಿ ನಡೆಯುತ್ತ ಹೋಯಿತು. ಇಂತಹ ಅನ್ಯಾಯ ಸ್ಥಿತಿಯನ್ನು ಸುಧಾರಿಸಲು ದೇಶಹಿತೈಷಿಗಳು ನ್ಯಾಯಯುತವಾದ ಆಂದೋಲನ ಪದೇಪದೇ ಆಂದೋಲನ ನಡೆಸುತ್ತ ಬಂದರು.

ಭಾರತ ಪ್ರಭುತ್ವವು ಆಡಳಿತಕ್ಕೆ ಬೇಕಾದ ಕಾರ್ಯಗಳನ್ನು ಆರಂಭಿಸುವ ಅಧಿಕಾರವುಳ್ಳ ಒಂದನ್ನಿನ ಮಂತ್ರಾಲೋಚನಾ ಸಭೆಯು ಈ ಕಾರ್ಯಗಳನ್ನು ನಿಯರ್ಮಿಸುವ ಅಧಿಕಾರವುಳ್ಳದ್ದು. ಸಾಮಾನ್ಯರ ಸಭೆಯು ಕಟ್ಟಕಡೆಯ ತೀರ್ಮಾನವನ್ನು ಕೊಡುವ ಅಧಿಕಾರವುಳ್ಳದ್ದು. ಮೇಲೆ ಹೇಳಿದ ಶಾಸನವು ಭರತಖಂಡದ ಮೇಲೆ ಈ ಬಗೆಯ ಮೂವರು ಅಧಿಕಾರಿಗಳನ್ನು ನಿರ್ಮಿಸಿತು. ಒಬ್ಬರ ಮೇಲೆ ಒಬ್ಬರು ಅಂಕುಶ ರೂಪವಾಗಿರಲಿ. ಇದರಿಂದ ಆಡಳಿತವು ಜನರಿಗೆ ಹಿತಕರವಾದೀತೆಂಬುದೇ ಆದರ ಉದ್ದೇಶ. ಆದರೆ ರೂಢಿಯಲ್ಲಿ ಇದು ವಿರೋಧವಾಗಿ ಪರಿಣಮಿಸಿತು. ಭರತಖಂಡದಲ್ಲಿ ಅಧಿಕಾರಮಾಡಿ ನಿವೃತ್ತರಾದವರು ಲಂಡನ್ನಿನ ಸಭೆಗೆ ಸದಸ್ಯರಾಗುತ್ತಿದ್ದರು. ಭರತಖಂಡದ ಬಗ್ಗೆ ಇವರಿಗೆ ತಕ್ಕಷ್ಟು ತಿಳಿವಳಿಕೆ ಇರುವುದರಿಂದ ಇವರಿಂದ ಪ್ರಯೋಜನವಾದೀತೆಂದು ನಿಯಮಿಸಲ್ಪಡುತ್ತಿದ್ದರು. ಆದರೆ ಇಲ್ಲಿನ ನಿರಂಕುಶಾಡಳಿತದಲ್ಲಿ ಸ್ವೇಚ್ಛಾವಿಹಾರಿಗಳಾಗಿ ಬೆಳೆದ ಇವರು ಆಡಳಿತಕ್ಕೆ ಒತ್ತುಕೊಡದೆ ನಡೆಯುತ್ತಿದ್ದರು.

ಪಿ. ಆರ್. ಕಾಶಾದಿಯವರ ವೀರಶೈವ ವಿದ್ಯಾರ್ಥಿ ನಿಲಯದ ಸಂಸ್ಥಾಪನೋತ್ಸವ

ಸೊಲ್ಲಾಪುರದ ವೀರಶೈವರಲ್ಲಿ ಗಣ್ಯರೂ ಒಬ್ಬ ಶ್ರೀಮಂತರೂ ವೀರಶೈವ ವಿದ್ಯಾರ್ಥಿಗಳ ಸಹಾಯಕರೂ ಆಗಿದ್ದ ಶ್ರೀ ಬಂಡಪ್ಪ ನಾಗಪ್ಪ ಕಾಶಾದಿಯವರ ಸಂಕಲ್ಪದಂತೆ ಅವರ ಮಕ್ಕಳಾದ ಮ|| ನಾಗಪ್ಪ ಬಂಡಪ್ಪ ಕಾಶಾದಿ ಸಹೋದರರು ತಮ್ಮ ತಂದೆಯವರ ಸ್ಮಾರಕವಾಗಿ ಅವರ ಹೆಸರಿನ ಮೇಲೆ ವೀರಶೈವ ವಿದ್ಯಾರ್ಥಿ ನಿಲಯವನ್ನು ಕಟ್ಟಿಸುವುದಕ್ಕಾಗಿ ಸರ್ಕಾರದವರಿಂದ ಪಡೆದುಕೊಂಡಿರುವ ನಿವೇಶನದಲ್ಲಿ ಶಂಕುಸ್ಥಾಪನೆಯನ್ನು ಕಳೆದ ತಾ|| 7 ನೆಯ ಸೋಮವಾರ ಮುಂಬಾಯಿ ಗೌರ್ನರಾದ ಮಹಾಶ್ರೀ ಸರ್ ಫ್ರೆಡರಿಕ್ ಸೈಕ್ಸ್‌ರವರಿಂದ ಮಾಡಿಸಿದರು. ಈ ಸಮಾರಂಭಕ್ಕೆ ಸ್ಥಳ ಪರಸ್ಥಳಗಳ ಸರ್ಕಾರಿಯಧಿಕಾರಿಗಳು, ವಕೀಲರುಗಳು, ವರ್ತಕರುಗಳು ಮೊದಲಾದವರು ಸುಮಾರು ಮಂದಿಯು ಬರಲು ದಯಮಾಡಿಸಿದ್ದರು. ಆ ಕಾಲದಲ್ಲಿ ಮ|| ನಾಗಪ್ಪ ಬಂಡಪ್ಪ ಕಾಶಾದಿಯವರು ಗೌರ್ನರವರಿಗೆ ಒಪ್ಪಿಸಿದ ವಿನಂತಿ ಪತ್ರಿಕೆಯೂ, ಅದಕ್ಕೆ ಗೌರ್ನರರ ಉತ್ತರವೂ ಈ ಕೆಳಗೆ ಕೊಡಲ್ಪಟ್ಟಿವೆ.

ಗೌರ್ನರಿಗೊಪ್ಪಿಸಲ್ಪಟ್ಟ ವಿನಂತಿ ಪತ್ರಿಕೆ.

ಮಹಾಶ್ರೀ ಗೌರ್ನರ್ ಸಾಹೇಬರೆ,

ನಮ್ಮ ತಂದೆಯವರ ಸ್ಮಾರಕವಾಗಿ ಕಟ್ಟಲ್ಪಡುವ ಬಿ. ಎನ್. ಕಾಶಾದಿ ವೀರಶೈವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆ ಮಹೋತ್ಸವದ ಸುಸಮಯದಲ್ಲಿ ನಾವು ಆತ್ಯಾನಂದದಿಂದ ತಮ್ಮ ಸುಸ್ವಾಗತವನ್ನು ಬಯಸುತ್ತೇವೆ. ತಮ್ಮ ಕಾರ್ಯ ಬಾಹುಳ್ಯದಲ್ಲಿಯೂ ಅವಕಾಶ ಮಾಡಿಕೊಂಡು ಇಲ್ಲಿಗೆ ದಯಮಾಡಿಸಿ ನಮ್ಮ ಆಹ್ವಾನವನ್ನು ಅಂಗೀಕರಿಸಿ ದಯಮಾಡಿಸಿದುದಕ್ಕಾಗಿ ತಮ್ಮನ್ನು ವಂದಿಸುತ್ತೇವೆ.

ಮುಂಬಾಯಿ ಪ್ರಾಂತ್ಯದಲ್ಲಿರುವ ನಮ್ಮ ವೀರಶೈವ ಸಮಾಜವು ವಿದ್ಯೆಯಲ್ಲಿ ಹಿಂದುಳಿದಿರುವ ವಿಷಯವು ತಮಗೆ ಚೆನ್ನಾಗಿ ಗೊತ್ತಿದೆ. ಈ ಜಿಲ್ಲೆಯ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಹೊರಗೆ ಹೋಗಬೇಕಾಗಿರುವುದು ... ವ್ಯಾಪಾರದಲ್ಲಿ ತೊಡಗಿರುವ ನಮ್ಮ ... ಈ ನಗರದಲ್ಲಿ ... ಶಿಕ್ಷಣಕ್ಕೆ ... ಉಚಿತ ... ನಮ್ಮ ತಂದೆಯವರಾದ ಶ್ರೀ ಕಾಶಾದಿಯವರು ... ಬಯಸುತ್ತಿದ್ದರು ... ವಿದ್ಯಾರ್ಥಿಗಳಿಗೆ ... ವಸತಿ ... ಬಹಳ ... ವಿದ್ಯಾಭ್ಯಾಸವನ್ನು ... ಪೂರೈಸಲು ...

ಮೆಕ್ಕಳಿದ್ದರೆ ಮನೆ ಚಂದ.

ಮಕ್ಕಳಿಗ್ಲೆಂದು

ಬಂಜೆತನದಿಂದ ಮುಕ್ತರಾಗುವಿರಿ

ಬಂಜೆತನ ಬೇಡ

ಗರ್ಭಧಾರಣಾ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪ್ರತ್ಯಕ್ಷ ಅವಿಗುರಿ ೯ ಗುಳಿಗೆಗಳ ಕಿ. ೩ ರೂಪಾಯಿ ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M C

ಜೋಡಿಸ್ತ್ರ ಭರತದಲ್ಲಿ ಇನ್ನು ಎಷ್ಟೋ ಜನರಿಗೆ ಶೋಭೆಯುಂಟಾಗುವಂತೆ ಅಂಕುರಿಸುತ್ತಿರುವ ತಂದೆ ತಾಯಿಗಳು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಲಿಷ್ಟಪಟ್ಟರೂ ಆಗದಿರುವ ಬಡ ಜನರಿಗೆ ಉಪಕಾರವಾಗುವಂತೆ [illegible] ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದೀರಿ. ಅದರ ಸಂಬಂಧವಾಗಿ ತಾವು ತಮ್ಮ ಬಳಗದವರನ್ನು ಸ್ವಂತ ಪರವೀರಿಸಿ ಶ್ರೀಯುತರು ಎಂದು ನಮ್ಮ ಹೃದಯ ಪೂರ್ವಕವಾಗಿ ವಂದನೆಯನ್ನು ಅರ್ಪಿಸುತ್ತೇವೆ. [illegible] ವಿದ್ಯಾರ್ಥಿ ನಿಲಯವನ್ನು ಸ್ವಂತ ಖರ್ಚಿನಿಂದ ಕಟ್ಟಿಸಿಕೊಟ್ಟಿರುವ ಈ ಕಟ್ಟಡದ ಕೆಲಸವು ಬಹಳ ಶ್ರದ್ಧೆಯಿಂದ ಜರುಗಿಸಲ್ಪಟ್ಟು ಅದನ್ನು ಬಡ ವಿದ್ಯಾರ್ಥಿಗಳ ವಾಸಕ್ಕೆ ಒಪ್ಪಿಸಿಕೊಡುವುದೆಂದು ನಾನು ಧೈರ್ಯದಿಂದ ಹೇಳುತ್ತೇನೆ.

ಈ ಊರಿನಲ್ಲಿರುವ ಅನೇಕ ಸ್ಕೂಲುಗಳಲ್ಲಿ ವ್ಯಾಸಂಗ ಮಾಡುವ ಬಡ ವಿದ್ಯಾರ್ಥಿಗಳಿಗಿರುವ ಕೊರತೆಯು ಈ ನಿಲಯ ನಿರ್ಮಾಣದಿಂದ ನಿವಾರಣೆಯಾಗುವುದೆಂದು ತಮಗೆ ವೇದ್ಯವಾಗುವುದು. ಬಡವರಾದ ವಿದ್ಯಾರ್ಥಿಗಳಿಗೆ [illegible] ಅನುಕೂಲ ಕಲ್ಪಿಸಿಕೊಡುವುದು ಅಲ್ಲದೆ ನಮ್ಮ ತಂದೆಯವರ ಸಂಕಲ್ಪವು ಸಾರ್ಥಕವಾಗುವಂತೆ ನಡೆಯಲಿ. ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬಿ. ಎನ್. ಕಾಡಾದಿಯವರ ವೀರಶೈವ ವಿದ್ಯಾರ್ಥಿ ನಿಲಯದ ಪೋಷಣೆಗಾಗಿ ೫೦೦೦ ರೂಪಾಯಿಗಳನ್ನು ಇಟ್ಟು [illegible] ೩೦,೦೦೦ ರೂಪಾಯಿಗಳನ್ನು ಕೊಡಲು ನಿರ್ಧರಿಸುತ್ತೇವೆ.

ಮಹಾಸ್ವಾಮಿ, ರಾಜ್ಯಾಡಳಿತದಲ್ಲಿ ಪತ್ತನವರ್ತನವಾಗುತ್ತಿರುವ ದಿನ್ನ ನಾವೆಲ್ಲರೂ ಬಲ್ಲವರಾಗಿರುತ್ತೇವೆ. ಇಂತಹ ಕಷ್ಟಕಾಲದಲ್ಲಿ ಪ್ರಭುತ್ವದವರಿಗೆ ನಮ್ಮ ವೀರಶೈವ ಸಮಾಜವು ಮನಃಪೂರ್ವಕವಾಗಿ ಸಹಾಯ ಮಾಡಲು ಸಿದ್ಧವಾಗಿರುವುದೆಂದು ನಾನು ಧೈರ್ಯದಿಂದ ಬಿನ್ನೈಸುತ್ತೇನೆ.

ನಮ್ಮ ತಂದೆಯವರ ಅಪೇಕ್ಷೆಯನ್ನು ನೆರವೇರಿಸಲು ಉತ್ತೇಜನವನ್ನು ಕೊಟ್ಟು ಸಹಾಯ ಮಾಡಿರುವುದಕ್ಕಾಗಿ ಶಿಲ್ಪಿಗಳಾದ ವಿ. ಜಿ. ಎ. ಬಿ. [illegible] ಸರದಾರ್, ಬಾರ್ ಅಟ್ ಲಾ ಇವರಿಗೂ, ನಮ್ಮ ಇತರ ಮಿತ್ರರುಗಳಿಗೂ ನಾವು ಸಹೋದರರುಗಳು ನಮ್ಮ ಕೃತಜ್ಞತೆಯನ್ನು ತಿಳಿಸುತ್ತಲ್ಲದೆ ತಮ್ಮ ಈ ದಿವಸದಾಗಮನವು ನಮಗೆ ಮುಂದೆ ಉತ್ತೇಜನಕರವಾಗಿರುವುದರಿಂದ ತಮ್ಮನ್ನು ವಂದಿಸುತ್ತೇವೆ.

ಬಿ. ಎನ್. ಕಾಡಾದಿಯವರ ವೀರಶೈವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯನ್ನು ತಮ್ಮ ಅಮೃತ ಹಸ್ತದಿಂದ ಮಾಡಬೇಕೆಂದು ಬೇಡುತ್ತೇನೆ ಮಹಾಸ್ವಾಮಿ.

ಗೌರ್ನರವರ ಉತ್ತರ.

ಶ್ರೀಯುತ ಕಾಡಾದಿ ಮತ್ತು ಸಭ್ಯ ಸ್ತ್ರೀಪುರುಷರೇ ಹಾಗೂ ಸಭ್ಯ ಗೃಹಸ್ಥರೇ,

ಏನೆಲ್ಲರೂ ಈ ಉತ್ಸಾಹಜನಕವಾದ ಸಮಾರಂಭವನ್ನು ನೆರವೇರಿಸುವುದಕ್ಕೆ ನಮ್ಮನ್ನು ಇಲ್ಲಿಗೆ ಬರಮಾಡಿಕೊಂಡದ್ದಕ್ಕೂ ಮತ್ತು ನಮ್ಮ ಭಾಷಣದಲ್ಲಿ ನಮ್ಮ ವಿಷಯವಾಗಿ ತೋರಿಸಿದ ಆದರಭಾವಕ್ಕೂ ನಾವು ನಿಮ್ಮೆಲ್ಲರಿಗೆ ಆಭಾರಿಯಾಗಿದ್ದೇವೆ. ಶಿಕ್ಷಣ ಪ್ರಗತಿಗಾಗಿ ವಸತಿ ಗೃಹಗಳ ಅವಶ್ಯಕತೆಯ ಮಹತ್ವವನ್ನು ನಮ್ಮ ಸರ್ಕಾರವು ಕಂಡುಹಿಡಿದು ಯಾವಾಗಲೂ ಇಂತಹ ಕೆಲಸಗಳಿಗೆ ಉತ್ತೇಜನವನ್ನು ಕೊಡುತ್ತಲಿರುವರು. ಆದರೆ, ಅವಶ್ಯವಿದ್ದ ಸ್ಥಳಗಳಲ್ಲಿ ಇಂಥ ಸಂಸ್ಥೆಗಳನ್ನು ಸ್ಥಾಪಿಸಲು ನಮ್ಮ ಸರಕಾರವು [illegible] ಈ ಕೊರತೆಯನ್ನು ದೂರಮಾಡಲು ಅಸಮರ್ಥವಾಗಿದೆ. ಆದಕಾರಣ ಇಂಥ ಸಂಸ್ಥೆಗಳನ್ನು ತಮ್ಮ ಸ್ವಂತ ಪ್ರಯತ್ನದಿಂದಲೇ ಸ್ಥಾಪಿಸಲಿಚ್ಛಿಸುವ ಜನರಿಗೆ ನಮ್ಮ ಸರಕಾರವು ವಿಶೇಷ ಸಹಾನುಭೂತಿಯನ್ನು ತೋರಿಸುವರು. ನೀವು ನಿಮ್ಮ ಭಾಷಣದಲ್ಲಿ ಹೇಳಿದಂತೆ ಇಲ್ಲಿ ನಿಮ್ಮ ಸಮಾಜದ ಹುಡುಗರಿಗೆ ವಸತಿ ಗೃಹದ ಅವಶ್ಯಕತೆಯು ವಿಶೇಷವಾಗಿದ್ದು ನಿಮ್ಮ ತಂದೆಯವರ ಇಚ್ಛೆಯನ್ನು ಪೂರ್ತಿ ಮಾಡಬೇಕೆಂದು ನೀವು ಈ ಮಹತ್ವವಾದ ಕೆಲಸವನ್ನು ಕೈಕೊಂಡದ್ದಕ್ಕಾಗಿ ನಾವು ನಿಮ್ಮನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ.

ಈ ಪಟ್ಟಣದ ವಾಣಿಜ್ಯವೃತ್ತಿಯಲ್ಲಿ ಲಿಂಗಾಯತ ಸಮಾಜವು ಬಹುತರವಾಗಿ ಮುಂದಾದದ್ದು ಮತ್ತು ಅದು ನಿಮ್ಮ ಪ್ರತಿನಿಧಿಗಳಷ್ಟು ಶಿಕ್ಷಣದಲ್ಲಿ ನಿಮ್ಮ ಸಮಾಜವು ಸಾಕಷ್ಟು ಪ್ರಗತಿಯನ್ನು ಹೊಂದಲಿಲ್ಲವೆಂಬುದರಿಂದ ಶಿಕ್ಷಣದ ಸಂಪೂರ್ಣವಾಗಿ ಬೆಳಸಲು ಅವರು ಧನವಾಗಿರುತ್ತದೆಂದು ನಮಗೆ ತಿಳಿದು ಬಂದಿದೆ. ಈ ಕಾರಣದ ಮೂಲಕ ಸಮಾಜದ ಮುಂದಾಳುಗಳು ಶಿಕ್ಷಣದ ಪ್ರಗತಿಗೆ ಹಾಗೂ ಅಭಿವೃದ್ಧಿಗೆ ಬೇಕಾದಷ್ಟು ಉದಾತ್ತವಾದ ಸಹಾಯವನ್ನು ಮಾಡಿದ್ದು ಮತ್ತು ಸಾಕಷ್ಟು ಶಿಕ್ಷಣವಿಲ್ಲದ ಮೂಲಕ ಸಮಾಜದ ಕೆಲವು ಬಡಜನರು ಕಳೆದ ೬ ವರ್ಷಗಳಲ್ಲಿ ಸೊಲ್ಲಾಪುರದ ಇತಿಹಾಸಕ್ಕೆ ಶೋಭೆ ತಂದಂಥ ನಾನಾ ಪದದ ಅಧಿಕಾರಗಳನ್ನು ಪಡೆದಿದ್ದಾರೆ. [illegible] ಆದಕಾರಣ ಈ ವಿದ್ಯಾರ್ಥಿ ವಸತಿ ಗೃಹದ ಪೂರ್ಣತೆಯು, ನಿಮ್ಮ ಸಮಾಜದವರು ಶಿಕ್ಷಣದ ಅತಿ ಶ್ರೇಷ್ಠತೆಯನ್ನು ಕಂಡುಹಿಡಿದದ್ದರ ಫಲವೆಂದು ನಾವು ನಂಬುತ್ತೇವೆ. ಇದು ಮುಂದೆ ಶಿಕ್ಷಣವಿಲ್ಲದೆ ಬಳಲುವ ಲಿಂಗಾಯತರ ಸಂಸ್ಥೆಯ ಸ್ವಾತಂತ್ರ್ಯ ಬೆಳಸಲು ಕಾರಣವಾಗುವುದೆಂದು ನಂಬಿದ್ದೇವೆ. ಈ ವಸತಿಗೃಹವು ತಯಾರಾದನಂತರ ಅದರ ಸಲುವಾಗಿ ಒಂದು ಸಾಕಷ್ಟು ನಿಧಿಯನ್ನು ಕೂಡಿಸುವ ವಿಚಾರದಲ್ಲಿರುವಿರೆಂಬುದನ್ನು ನೋಡಿ ನಮಗೆ ವಿಶೇಷ ಆನಂದವಾಗುತ್ತದೆ. ಇಂತಹ ಉತ್ತಮವಾದ ಇಮಾರತಿಗಳನ್ನು ಕಟ್ಟಿಸಿ ಅವುಗಳಲ್ಲಿ ನಡೆಯುವ ಸಂಸ್ಥೆಗಳ ಖರ್ಚನ್ನು ಸಾಗಿಸಲು ಬೇಕಾದ ಸಾಧನಗಳನ್ನು ಒದಗಿಸಿಕೊಡದಿದ್ದರೆ ಹಿಂದುಸ್ತಾನದಲ್ಲಿಯ ಅತಿಶಯವಾದ ಧಾರ್ಮಿಕ ಯತ್ನವು ಒಂದು ಅನಿಷ್ಟ ಲಕ್ಷಣವಿರುತ್ತದೆ. ನೀವು ಈ ಅಂಚಿನೆಯ ಬಗ್ಗೆ ಜಾಗರೂಕರೆಂದು ನೋಡಿ ನಮಗೆ ಆನಂದವಾಗುತ್ತದೆ ಮತ್ತು ಉತ್ತಮ ರೀತಿಯಿಂದ ಈ ಸಂಸ್ಥೆಯನ್ನು ನಡೆಯಿಸಲಿಕ್ಕೆ ಅವಶ್ಯವಾದ ಧನದ ನಿಧಿಯನ್ನು ಕೂಡಿಸಿಕೊಳ್ಳುವದಕ್ಕೆ ನಿಮ್ಮ ಸಮಾಜದವರು ಸಹಾಯ ಮಾಡಬೇಕೆಂದು ನಾವು ಆಶಿಸುತ್ತೇವೆ. ಈ ವಸತಿಗೃಹವು ವಿಶೇಷವಾಗಿ ಮುನ್ನಿಸಲ್ಲಡುವದೆಂದು ನಮಗೆ ಖಾತ್ರಿಯಿರುತ್ತದೆ. ನೀವು ನಿಮ್ಮ ಪಟ್ಟಣದ ಹಾಗೂ ಸಮಾಜದ ಏಳ್ಗೆಗೆ ಇಂಥ ದೇಣಿಗೆಯನ್ನು ಕೊಟ್ಟ ಬಗ್ಗೆ ನಿಮ್ಮನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ನಮ್ಮ ಸ್ವಾಗತದ ಬಗ್ಗೆ ತೋರಿಸಿದ ಪ್ರೇಮಕ್ಕಾಗಿ ನಾವು ಪುನಃ ನಿಮ್ಮ ಅಭಿನಂದಿಸುತ್ತೇವೆ. ಈಗ ಶ್ರೀಯುತ ಬಿ. ಎನ್. ಕಾಡಾದಿ ಇವರ ವೀರಶೈವ ವಸತಿಗೃಹದ ಕಲ್ಲನ್ನು ಇಡುತ್ತೇವೆ ಮತ್ತು ಆದೇ ಕಾಲಕ್ಕೆ ನಿಮಗೂ ಹಾಗೂ ವಸತಿಗೃಹಕ್ಕೆ ಸಂಬಂಧಿಸಿದ ಯಾವತ್ತಿನವರ ಭಾಗ್ಯವು ಮತ್ತು ಉತ್ಕರ್ಷವು ಬೆಳೆಯಲಿ ವೃದ್ಧಿಯಾಗಲೆಂದು ಆಶಿಸುತ್ತೇವೆ.

ಪತ್ರವ್ಯವಹಾರ

ಪತ್ರವ್ಯವಹಾರಕರ ಅಭಿಪ್ರಾಯಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು — ಸಂಪಾದಕ

ಶ್ರೀಮಾನ್ ಕೆ. ಪಿ. ಶಾಂತಪ್ಪಶೆಟ್ಟರ ಧರ್ಮಪ್ರಶಂಸನಾ ಮತ್ತು ೮೦ ನೆಯ ವರ್ಷದ ಶಾಂತಿ ಮಹೋತ್ಸವ

ಕೊಡು ಮರಿಕಿತಿಗೆ ಜನಗಣನೆ ಮಾದ ಸಂದರ್ಭಗಳು, ಪರೋಪಕಾರ [illegible] ಮೈಸೂರು ಪ್ರಾಂತದ ಪ್ರಸಿದ್ಧ [illegible] ಕಲಿಯುಗದಲ್ಲಿ [illegible] ಕರ್ನಾಟಕ ಅನ್ನ ದಾತ ಮತ್ತು ೮೦ ವರ್ಷದ ವರ್ಧಂತ್ಯುತ್ಸವವನ್ನು ಪೀಠದಲ್ಲಿ ಶ್ರೀ ಗುರುಪಾದಪೂಜಾ ಶ್ರೀ ರುದ್ರಾಭಿಷೇಕ ಮುಂತಾದವುಗಳೊಡನೆ ವಿಧ್ಯುಕ್ತವಾಗಿ ನಡೆಯಿಸಿ ಶ್ರೀ ಗುರುಪಾದಾರಾಧನ ಸಮಯದಲ್ಲಿ ಶ್ರೀಪಟ್ಟ ಚರಾಧಿಕಾರಿಗಳನ್ನು ಶ್ರೀಮನ್ನ ರಂಜನದ ಪೀಠಾಧಿಪತಿಗಳನ್ನೂ ಸ್ಥಳ ಪರಸ್ಥಳಗಳಿಂದ ಬಂದಿದ್ದ ಅನೇಕ ಭಕ್ತ ಮಹೇಶ್ವರರುಗಳನ್ನೂ ವಿವಿಧ ಭಕ್ಷ್ಯಭೋಜ್ಯಾದಿಗಳಿಂದಲೂ ಭೂರಿ ದಕ್ಷಿಣೆಗಳಿಂದಲೂ ತೃಪ್ತಿಗೊಳಿಸಿ ಗೋದಾನ ಭೂದಾನ ಹಿರಣ್ಯದಾನ ವಸ್ತ್ರದಾನ ಮೊದಲಾದ ದಾನಗಳನ್ನು ತಮ್ಮ ಗೌರವಕ್ಕೂ ತಮ್ಮ ಉದಾರ ಮನೋಭಾವಕ್ಕೂ ಅನುಗುಣವಾಗಿ ನಡೆಯಿಸಿದರು. ತಮ್ಮ ತೀ. ಕೈ॥ ನರ್ಸಾಪುರದ ಶೆಟ್ಟರವರ ಅಸ್ತಿಯನ್ನುಳ್ಳ ಬೆಂಗಳೂರಿನಲ್ಲಿ ೬ ಧರ್ಮ ಸತ್ರವನ್ನು ಕಟ್ಟಿಸಿ ಮೈಸೂರು ಸಂಸ್ಥಾನದ ಮಹಾರಾಜರವರ ಕೈ॥ ಸರದಾರ್ ಕಾಂತರಾಜ ಅರಸಿನವರಿಂದ ಪ್ರವೇಶಮಹೋತ್ಸವವನ್ನು ನೆರವೇರಿಸಿ ಶ್ರೀಮದ್ರಂಭಾಪುರೀ ಸಂಸ್ಥಾನದ ಈಗಿನ ಶ್ರೀ ಜಗದ್ಗುರುಗಳವರು ದಯಮಾಡಿಸಿದ ಕಾಲಕ್ಕೆ ಸದರಿ ಧರ್ಮ ಸಂಸ್ಥೆಯಲ್ಲಿ ಶ್ರೀ ಮಹಾಸನ್ನಿಧಿಯವರ ಪೂಜಾಮಹೋತ್ಸವಗಳನ್ನು ನಡೆಯಿಸಿ ಆದೇ ಕಾಲಕ್ಕೆ ಮೇಲ್ಕಂಡ ಧರ್ಮ ಸತ್ರಕ್ಕೆ ಜಗದ್ಗುರುಗಳವರ ಹೆಸರಿನಮೇಲೆ “ಶಿವಾನಂದಾಶ್ರಮ” ಎಂಬ ಅಂಕಿತವನ್ನಿಟ್ಟು ಶೆಟ್ಟರವರು ತಮ್ಮ ತೀರ್ಥರೂಪರುಗಳವರ ಸತ್ಕೀರ್ತಿಯನ್ನು ನೆರವೇರಿಸುವದಾಗಿ ಮಹಾಸನ್ನಿಧಿಯಲ್ಲಿ ಅಂಕಿತಮಾಡಿಕೊಂಡು ಆ ಕೂಡಲೆ ರೂಪಾಯಿ ಒಂದು ಸಂಸ್ಕೃತಪಾಠಶಾಲೆಯನ್ನು ಏರ್ಪಡಿಸಿದರು. ಈ ವಿಷಯದಲ್ಲಿ ಶ್ರೀ ಜಗದ್ಗುರುಗಳವರು ಆನಂದಪಟ್ಟುಕೊಂಡು ಮ॥ ಶಾಂತಪ್ಪಶೆಟ್ಟರವರ ಪಿತೃಭಕ್ತಿ ಗುರುಭಕ್ತಿಯನ್ನು ಪ್ರತ್ಯಕ್ಷ ಪರಾಂಬರಿಸಿ ಆಶ್ಚರ್ಯಯುತರಾಗಿ ಶ್ರೀಗುರುವಿನ ರೇಣುಕಾಚಾರ್ಯ ವಿಷಯದಲ್ಲಿ ತಮ್ಮ ತನು ಮನ ಧನಗಳನ್ನು ಅರ್ಪಿಸಿ ಸೇವೆಮಾಡಿದ ಇವರಿಗೂ ಇವರ ವಂಶೀಯರಿಗೂ ಶ್ರೀ ರೇಣುಕನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದು ಆಜ್ಞೆ ಕೊಡಿಸಿ ಈ ಪಾಠಶಾಲೆಯನ್ನು “ಶಾಂತೇಶಪಾಠಶಾಲೆ” ಎಂದು ಕರೆಯಬೇಕಾಗಿ ಅನುಗ್ರಹಿಸಿ ಬೀರೂರಿನಲ್ಲಿ ನಡೆದ ಗಣರಾದ ಪೋತ್ಸವದ ದರ್ಬಾರಿನಲ್ಲಿ ಇವರಿಗೆ “ಆಚಾರ್ಯಸೇವಾಧರ್ಮ ಧುರಂಧರ” ಎಂಬ ಪ್ರಶಸ್ತಿಯನ್ನೂ ಕಿರೀಟ ಪದಕವನ್ನೂ ಪಾಲಿಸಿ ಶುಭ ಆಶೀರ್ವದಿಸಿದರು. ಅಂದಿನಿಂದಲೂ ಈ ಶಾಂತೇಶಪಾಠಶಾಲೆಯು ನಿರ್ವಿಘ್ನವಾಗಿ ನಡೆಯುತ್ತಾ ಬಂದಿದೆ. ಈ ಪಾಠಶಾಲೆಗೆ ದೊಡ್ಡಗುಣೀ ಮಠದ ಶ್ರೀ ಪಟ್ಟಾಧ್ಯಕ್ಷರವರು ಅಧ್ಯಾಪಕರಾಗಿರುವರು. ಕೆಲವು ವಿದ್ಯಾರ್ಥಿಗಳು ಸಂಸ್ಕೃತ ಕನ್ನಡ ಹಿಂದಿ ಮತ್ತು ವೇದ ಜ್ಯೋತಿಷ ಮುಂತಾದವುಗಳನ್ನು ಅಧ್ಯಯನ ಮಾಡುತ್ತಿರುವ ಈ ಪಾಠಶಾಲೆಗೆ ಯಜಮಾನರ ಶೆಟ್ಟರವರು ೧೦,೦೦೦ ರೂ ಗಳನ್ನು ಮೂಲಧನವಾಗಿ ಗವರ್ನಮೆಂಟ್ ಬ್ಯಾಂಕಿನಲ್ಲಿಟ್ಟು ಇದರ ಬಡ್ಡಿಯಿಂದ ಸದರಿ ಪಾಠಶಾಲೆಯು ಅಚಂದ್ರಾರ್ಕವಾಗಿ ನಡೆಯಬೇಕಾಗಿ ಸ್ಥಿರಪಡಿಸಿ ಆಗಲೇ ೩ ಸಾವಿರ ರೂ ಗಳನ್ನು ಬ್ಯಾಂಕಿನಲ್ಲಿಟ್ಟಿರುವರು. ಇದಲ್ಲದೆ ಹಿಂದೆ ನರಸಿಂಹರಾಜಪುರದಲ್ಲಿ ಶ್ರೀ ಸೂಗಪ್ಪನವರ ಮಠಕ್ಕೆ ನಿತ್ಯ ದಾಸೋಹ ದೀಪಾರಾಧನ ಸೇವಾದಿಗಳಿಗೋಸ್ಕರ ಯೋಗ್ಯವಾದ ಬೆಲೆ ಬಾಳುವ ೩೦ ಎಕರೆ ತರೀ ಜಮೀನನ್ನು ದಾನಶಾಸನಪೂರ್ವಕ ಕೊಟ್ಟಿದ್ದಲ್ಲದೆ ೬ ರಿಪೇರಿಗ್ ರೂಮನ್ನೂ [illegible] ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು ಮಹಾನಾಡು ಪ್ರಾಂತ ಸಂಚರಿಸಿ ಬಿಡಿಸುವಾಗ ದಯಮಾಡಿಸಿದ ಕಾಲದಲ್ಲಿ ಅವರ ಅಪ್ಪಣೆಯಂತೆ ಶೆಟ್ಟರವರು ಸಾರ್ವಜನಿಕ ಉಪಯೋಗಕ್ಕೋಸ್ಕರ ನಿರ್ಮಾಣ ಕಟ್ಟಿಸಿಕೊಟ್ಟ ರಿಪೇರಿಗ್ ರೂಮನ್ನು ಓಪನ್ ಮಾಡಿಸಿ ಯದೇಚ್ಛೆಗೆ ಬಡವರಿಗೆ ಯುವರಾಜರವರ ಆಗಮನದ ಜ್ಞಾಪಕಾರ್ಥವಾಗಿ ನರಸಿಂಹರಾಜಪುರ ಎಂಬ ಹೆಸರಿನ ಅಂಕಿತವನ್ನಿಡಲು ಸರ್ವರಿಂದಲೂ ಪ್ರಾರ್ಥಿಸಿಕೊಂಡು ನಾಮಕರಣ ಮಾಡಿ ಶ್ರೀಮನ್ಮಹಾರಾಜರವರ ಕಟಾಕ್ಷಕ್ಕೆ ಪಾತ್ರರಾಗಿರುವರು. ಈ ರೀತಿ ವಿಶೇಷ ಜನೋಪಕಾರವಾದ ಕಾರ್ಯಗಳನ್ನು ನಡೆಯಿಸುತ್ತಿರುವ ಸಂಗತಿಯು ಧನವನ್ನೈವಿದ ನಮ್ಮ ಶ್ರೀಮನ್ಮಹಾರಾಜರವರ ದಿವ್ಯಚಿತ್ತಕ್ಕೆ ವೇದ್ಯವಾಗಿ ಶ್ರೀ ಸನ್ನಿಧಾನದಿಂದ ಸನ್ನಾಹಪತ್ರಿಕೆಯನ್ನು ಪಾಲಿಸಿ ಸವಿನಯ ಆದರಿಸಿ ಅನುಗ್ರಹಿಸಿರುವರು. ಅಂದಮೇಲೆ ಇವರಲ್ಲಿ ತೋರುತ್ತಿರುವ ಸತ್ಯಾತ್ಮದಾನಧರ್ಮ ಸದ್ಗುಣಗಳು ಇವರ ವಿಷಯದಲ್ಲಿ ಅಪರಮಿತವಾಗಿ ಪ್ರಸರಿಸಿದ ಭಗವದನುಗ್ರಹದ ಸೂಚನೆಯಾಗಿರುವುದು ಇದಲ್ಲದೆ ಇವರು ತಮ್ಮ ೮೦ ನೇ ವರುಷದ ವರ್ಧಂತ್ಯುತ್ಸವದ ಸಮಯದಲ್ಲಿ ಶ್ರೀ ಜಗದ್ಗುರು ಪಂಚಪೀಠದ ಮಹಾಸ್ವಾಮಿಗಳವರಿಗೂ ಶ್ರೀ ಚಿತ್ರಕಲ್ಲು ದುರ್ಗದ ಜಗದ್ಗುರು ಮಹಾಸ್ವಾಮಿಗಳವರಿಗೂ ತಮ್ಮ ಮನೆದೇವರಾದ ನಿರಂಜನಸ್ವಾಮಿಗಳಿಗೂ ತಮ್ಮ ಯಥೋಚಿತವಾದ ಕಾಣಿಕೆಗಳನ್ನರ್ಪಿಸಿ ವೀರಶೈವ ವಿದ್ಯಾವರ್ಧಕ ಫಂಡಿಗೂ ಮೈಸೂರ್ ಸ್ಟಾರ್ ಮತ್ತು ಪಂಚಾಚಾರ್ಯ ಪ್ರಭಾ ಪತ್ರಿಕೆಗಳ ಪೋಷಣೆಗೂ ಮೊಬಲಗನ್ನು ಕಳುಹಿಸಿರುವರು. ಇವರ ಸವಿಯಕ್ಕೆ ಸರಿಯಾಗಿ ತಮ್ಮ ಧರ್ಮಪತ್ನಿ ಕೈ॥ ಚನ್ನವೀರಮ್ಮನವರ ವರ್ಷಾಂತ್ಯದ ಕಾರ್ಯವೂ ಆಗಿದ್ದುದರಿಂದ ತಮ್ಮ ಗುರುಗಳವರಾದ ಹಂಪಿ ಭಾವಿ ಮಠದ ವೇ॥ ಗುರುಬಸವಾರ್ಯರನ್ನು ಕರೆಯಿಸಿ ಅವರ ಮುಖಾಂತರ ವೇ॥ ಗುರುಜಂಗಮ ಬಂದು ಧರ್ಮಪತ್ನಿಯವರ ಹೆಸರಿನಮೇಲೆ ದಂಪತಿಪೂಜಾ ನಡೆಯಿಸಿ ಗುರುಗಳಿಗೆ ಕಾಣಿಕೆ ವಸ್ತ್ರಗಳನ್ನು ದಾನಮಾಡಿ ಸತ್ಕರಿಸಿದರು. ಆ ದಿವಸ ಶ್ರೀ ಭೂಮ್ಯಾಧಾರವರ ಅಧ್ಯಕ್ಷತೆಯಲ್ಲಿ ಸಭೆಯನ್ನೇರ್ಪಡಿಸಿ ಪ್ರಸಿದ್ಧ ಶಿವಕೀರ್ತನಕಾರರಿಂದ ಸತ್ಕಥಾಕಾಲಕ್ಷೇಪವನ್ನು ನಡೆಯಿಸಿ ಶ್ರೀ ಜಿಲ್ಲಾಧ್ಯಾಯರ ಮಂಗಳಪೂರ್ವಕ ೮೦ ನೆಯ ವರ್ಷದ ಶಾಂತಿಕಾರ್ಯವು ಸಮಾಪ್ತಗೊಳಿಸಲ್ಪಟ್ಟಿತು. ಮಹಾಶಯರೇ, ಮ॥ ಶೆಟ್ಟರವರ, ಕೇವಲ ಗುರುಜಂಗಮಭಕ್ತರಾಗಿ ಲೌಕಿಕ ವಿಷಯದಲ್ಲಿ ವ್ಯಾಪೃತರಾಗದೆ ಧರ್ಮಕಾರ್ಯಗಳನ್ನು ತಮ್ಮ ಜೀವನವನ್ನಾಗಿಯೇ ನಡೆಯಿಸಿ ಅದರ ಫಲಗಳನ್ನು ಪ್ರತ್ಯಕ್ಷ ಅನುಭವಿಸುತ್ತಲಿರುವ ಇವರಲ್ಲಿ ನಿಜವಾದ ವೀರಶೈವ ಸದ್ಗುಣಗಳು ತೋರುತ್ತಿದ್ದು ಸತ್ಪುರುಷರು ನಮ್ಮ ಜೀವಿತಕಾಲದಲ್ಲಿಯೇ ಬಹು ಜನರಿಗೆ ಉಪಕೃತಿಯನ್ನೆಸಗಿ ದೇಶಾಂತರದಲ್ಲಿಯೂ ಲೋಕೋಪಕಾರವನ್ನೇ ಬಯಸುತ್ತಿರುವುದರಿಂದಲೇ ಸರ್ವರಿಂದಲೂ ಮನ್ನಣೆಗೊಳಿಸಿಕೊಂಡಿರುವರು. ಆದರಿಂದ ಮಾರ್ಗದರ್ಶಕರಾಗಿರುವ ಮ॥ ಯಜಮಾನ ಶಾಂತಪ್ಪಶೆಟ್ಟರವರ ಸತ್ಕೀರ್ತಿಯನ್ನು ದಿನದಿನಕ್ಕೂ ಭೂಲೋಕದಲ್ಲಿ ಶಾಶ್ವತಗೊಳಿಸುತ್ತಿರಲಿ ಅವರ ಧರ್ಮಪತ್ನಿ ಕೈ॥ ಚನ್ನವೀರಮ್ಮನವರಿಗೆ ಸದ್ಗತಿಯನ್ನು ಕೊಡಲೆಂದು ಪ್ರಾರ್ಥಿಸುವ ವೀರವಾಣಿ ಪ್ರಿಯರ ಜನ ವಿಧೇಯ,

ಶಿವಕಥಾಪಂಡಿತ ಹೆಚ್. ಹೆಚ್. ಜಿ ವೇ॥ ನಂಜುಂಡಾರಾಧ್ಯ,

ಮೆ॥ ಬೀರೂರು.

ಆದರ್ಶಪ್ರಾಯರಾದ ಜಗದ್ಗುರುಗಳು.

ಅಸ್ಪೃಶ್ಯತಾನಿವಾರಣೆ ಮತ್ತು ಪ್ರಾಣಿದಯೆಯ ವಿಷಯವಾಗಿ ಉಪದೇಶ

ಮಾತೃಭೂಮಿಯಾದ ನಮ್ಮ ಭರತ ಖಂಡದಲ್ಲಿ ದಿನ ದಿನಕ್ಕೂ ಗೋವುಗಳ ಹತ್ಯೆ ಹೆಚ್ಚಾಗುತ್ತಾ ನಡೆಯುತ್ತಿರುವುದು ಅತ್ಯಂತ ದುಃಖದ ಸಂಗತಿಯು. ಈ ಗೋವಧೆಯನ್ನು ನಿಲ್ಲಿಸಲು ಅನೇಕ ನಾಗರಿಕರ ಪ್ರಯತ್ನವು ಸಾಗದಲ್ಲಿ [illegible] ಅಸ್ಪೃಶ್ಯರನ್ನು ಕೀಳಾಗಿ ಕಾಣುವವರು ಸ್ವಧರ್ಮ ಭಾವನೆಯಿಂದ ಕೆಲವರಲ್ಲಿ ಅವರು ನಮ್ಮ ಗುರುಗಳ ಮನೆಗಳಲ್ಲಿ ಬಿಟ್ಟು ಬಿಡುವುದರಲ್ಲಿ ಸಂದೇಹವಿಲ್ಲ. ಹಾಗೆಯೇ ಈ ನಾವು ಕಾಣುವುದರಿಂದ ಅವರು ಗೋವಧೆಯಂತಹ ಪಾತಕವನ್ನು ನಿಲ್ಲಿಸಿ ನಮ್ಮಂತೆಯೇ ಗೋರಕ್ಷಕರಾದ ಯಲ್ಲರವರಾಗುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಆದುದರಿಂದ ಅಸ್ಪೃಶ್ಯತಾ ನಿವಾರಣೆಯು ದೇಶದ ಹಿತದೃಷ್ಟಿಯಿಂದಲೇ ಅಲ್ಲದೆ ಗೋರಕ್ಷಣಾ ದೃಷ್ಟಿಯಿಂದಲೂ ಬಹು ಮಹತ್ವದ್ದಾಗಿದೆ.

ಮಹಾತ್ಮಾ ಗಾಂಧಿಯವರಂತಹ ಜಗದ್ವಂದ್ಯರು ಅಸ್ಪೃಶ್ಯತಾ ನಿವಾರಣೆಗಾಗಿ ತಮ್ಮ ಪ್ರಾಣವನ್ನೇ ತ್ಯಜಿಸಲು ತಯಾರಾಗಿರುವರು. ಇದೇ ಭರತಖಂಡದಲ್ಲಿಯೂ ಅತ್ಯಂತ ಆಚಾರವಂತರೆಂಬುದಾಗಿ ಹೇಳಿಸಿಕೊಳ್ಳುವ ಸನಾತನ ಧರ್ಮಾಭಿಮಾನಿಗಳಾದ ಪಂಡಿತ ಮದನ ಮೋಹನ ಮಾಲವೀಯರವರು ಕೂಡ ಅಸ್ಪೃಶ್ಯತಾನಿವಾರಣೆಗೆ ತಮ್ಮ ಒಪ್ಪಿಗೆಯನ್ನಿತ್ತು ಅಸ್ಪೃಶ್ಯತಾ ನಿವಾರಣೋಪಾಯವನ್ನು ಕೈಗೊಂಡು ಕೆಲಸಮಾಡುತ್ತಿರುವರು. ಭರತ ಖಂಡದ ಬಹುಭಾಗದಲ್ಲಿ ಅಸ್ಪೃಶ್ಯತಾನಿವಾರಣ ಕೆಲಸವು ಬಹು ಜೋರಿನಿಂದ ನಡೆಯುತ್ತಿರುವುದಲ್ಲದೆ ಉತ್ತಮ ವರ್ಗದವರಾದ ಎಲ್ಲಾ ಮತದವರ ಅಭಿಪ್ರಾಯವೂ ದೇವಾಲಯಗಳಲ್ಲಿ ಅಸ್ಪೃಶ್ಯರ ಪ್ರವೇಶ ಮತ್ತು ದರ್ಶನಕ್ಕೆ ಅವಕಾಶವನ್ನು ಕೊಡಬೇಕೆಂದು ಇದ್ದು ಹಲವು ಧರ್ಮಗುರುಗಳ ಒಪ್ಪಿಗೆಯು ಸಹ ದೊರೆತಿರುವುದು ಅತ್ಯಂತ ಮಹತ್ವದ ವಿಷಯವಾಗಿದೆ.

ನಮ್ಮ ದೇಶದಲ್ಲಿ ಧರ್ಮಗುರುಗಳಿಗೆ ಕೊರತೆ ಇಲ್ಲ. ಆದರೆ ಇಂತಹ ಆವಶ್ಯಕವಾದ ವಿಷಯಗಳ ಕಡೆಗೆ ಅವರ ದೃಷ್ಟಿಯು ಹೋಗುವುದು ಅಪೂರ್ವ. ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ನ್ಯಾಯವಾದುದನ್ನು ಧೈರ್ಯದಿಂದ ಹೇಳಿ ಅದರಂತೆ ಅನುಸರಿಸಲು ಉಪದೇಶಿಸುವುದಕ್ಕೂ ಸಹ ಭಯಪಡುವ ಸ್ವಾಮಿಗಳು ಅನೇಕರಿರುತ್ತಾರೆ. ಆದರೆ ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ತಾ॥ ೨೬-೯-೩೨ ರಲ್ಲಿ ಶ್ರೀ ಬ್ರಹ್ಮನಕಟ್ಟೆ ಅನ್ನಪೂರ್ಣರವರು ಬರುವ ಸ್ಥಾನದವರನ್ನು ಹರಿಜನರು ಬರಲು ಅವಕಾಶವನ್ನು ಕಲ್ಪಿಸಿ ಮೆಟ್ಟಲುಗಳನ್ನು ಹಾಕಿಕೊಟ್ಟುದಲ್ಲದೆ ಉತ್ತಮ ವರ್ಗದವರಿಗೆ ಅಸ್ಪೃಶ್ಯತೆಯನ್ನು ತೊಲಗಿಸಬೇಕೆಂದೂ ದೇವಾಲಯಗಳ ಪ್ರವೇಶ ಮತ್ತು ದೇವರ ದರ್ಶನಕ್ಕೆ ಅವಕಾಶ ಕೊಡಬೇಕೆಂದೂ ಬೋಧಿಸಿದುದಲ್ಲದೆ ಅಸ್ಪೃಶ್ಯರಿಗೂ ಮಾಂಸಭಕ್ಷಣೆಗಳನ್ನು ಬಿಟ್ಟು ಸದ್ವರ್ತನದಿಂದ ನಡೆಯಬೇಕೆಂದೂ ಮಾಂಸ, ಮಸಣಿ ಮುಂತಾದ ಜಾತ್ಯಗಳ ನೆಪದಿಂದ ಕುರಿ, ಕೋಣಗಳನ್ನು ಕಡಿಯಕೂಡದೆಂದೂ ಮದ್ಯ, ಮಾಂಸ ಸೇವನೆಯನ್ನು ಮಾಡಬಾರದೆಂದೂ ಗೋವಾಂಸ ನನ್ನಂತೂ ತಿನ್ನಲೇ ಬಾರದೆಂದೂ ನಿತ್ಯವೂ ಸ್ನಾನಮಾಡಿ ಸ್ವಚ್ಛವಾಗಿರಬೇಕೆಂದೂ ಉಪದೇಶಿಸಿರುವರು. ಈ ವಿಷಯವಾಗಿ ಇತರ ಧರ್ಮಗುರುಗಳು ಏನನ್ನೂ ಆಡದೆ ಸುಮ್ಮನಿರುವಾಗ ಮೇಲ್ಕಂಡ ಮಹಾಸ್ವಾಮಿಗಳವರು ಮುಂದಾಳುಗಳಾಗಿ ನಿಂತು, ಇತರರಿಗೆ ಮಾರ್ಗದರ್ಶಕರಾಗಿ ಅಸ್ಪೃಶ್ಯತೆಯನ್ನು ತೊಲಗಿಸಬೇಕೆಂದು ಉಪದೇಶಿಸಿ ಮಠದೊಳಗೆ ಪ್ರವೇಶಕ್ಕೆ ಅವಕಾಶವನ್ನು ಕೊಟ್ಟದ್ದರಿಂದ ಅಭಿನಂದನೀಯರಾಗಿದೆ. ಈ ಪ್ರಶಸ್ತಕಾರ್ಯಕ್ಕಾಗಿ ಸಂತೋಷಿಸುತ್ತಾ ಅನೇಕರೊಡನೆ ನಾವೂ ಸೇರಿ ನಮ್ಮ ಅಭಿನಂದನೆಯನ್ನು ಮಹಾಸ್ವಾಮಿಯವರಿಗೆ ಅರ್ಪಿಸುವೆವು.

ಉತ್ತಮ ವರ್ಗದ ಹಿಂದುಗಳು ಇನ್ನಾದರೂ ಅಸ್ಪೃಶ್ಯರನ್ನು ಸಹೋದರ ಭಾವದಿಂದ ಕಾಣಬೇಕೆಂದೂ, ಅಸ್ಪೃಶ್ಯರು ತಮ್ಮಲ್ಲಿರುವ ದುರಭ್ಯಾಸಗಳನ್ನೆಲ್ಲಾ ಬಿಟ್ಟು ಅಭಿವೃದ್ಧಿಗೆ ಬರಬೇಕೆಂದೂ, ಇತರ ಧರ್ಮಗುರುಗಳೂ ಮೇಲ್ಕಂಡ ಮಹಾಸ್ವಾಮಿಗಳ ಮಾರ್ಗವನ್ನು ಅನುಸರಿಸಿ ಈ ಮೂಲಕ ಗೋರಕ್ಷಣಾಕಾರ್ಯವು ಸಫಲವಾಗಿ ನಡೆಯುವಂತೆ ಪ್ರೋತ್ಸಾಹಿಸಲೆಂದು ಪ್ರಾರ್ಥಿಸುವೆವು.

ದಾವಣಗೆರೆ, ತಾ. ೧೦-೧೧-೩೨ — ಕಾರ್ಯದರ್ಶಿ, ಪ್ರಾಣಿದಯಾ ಜ್ಞಾನಪ್ರಸಾರಕ ಸಂಘ.

ನಾರಿಸವಾಲೇ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವುದಿಲ್ಲ ನಾರಿಸವರು ಜರೂರಾಗಿ ತರಿಸಿ ಕೊಳ್ಳಿರಿ. ಕ. ೧ ರೂ ೮ ಆ. ೩ ಆಣೆ.

ಪತ್ತಾ—ವೈದ್ಯ ಪ್ಪಿ. ಎಸ್ ಕೊಪಸೆ, ಮಿರಜ

29 M. C

೧೯೩೨ ನೆಯ ಇಸವಿ ನವಂಬರ್ ತಾ॥ ೧೨ ರಿಂದ ನವಂಬರ್ ತಾ॥ ೨೭ ರ ವರೆ. ನಡೆಯುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಕಾರ್ತಿಕ ಬಹುಳ ಅಷ್ಟಮಿಯಿಂದ ಕಾರ್ತಿಕ ಬಹುಳ ಚತುರ್ದಶಿ ವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ
21	[1] ಸೋಮ	ಅಷ್ಟ	32-26	ಮಖ	39-7	7
22	[2] ಮಂಗಳ	ನವ	30 0	ಪುಬ್ಬ	38-10	8
23	ಬುಧ	ದಶ	26-21	ಉತ್ತ	36 1	9
24	ಗುರು	ಏಕಾ	22-4	ಹಸ್ತ	33-18	10
25	[3] ಶುಕ್ರ	ದ್ವಾದ	16-56	ಚಿತ್ತ	35-14	11
62	ಶನಿ	ತ್ರಯೋ	11-26	ಸ್ವಾತಿ	26-52	12
27	ಭಾನು	ಚತು	5-34-54-5	ವಿಶಾ	21-40	13

(1) ಕಾರ್ತಿಕ ಸೋಮವಾರ (2) ಮಳೆನಕ್ಷತ್ರ-ಅನೂರಾಧ ೨ ನೆಯ ಪಾದ (3) ಮಳೆನಕ್ಷತ್ರ-ಅನೂರಾಧ ೪ ನೆಯಪಾದ.

ಮೈಸೂರು; ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ರಿಜಿ. ನಂ. ೧೨೪.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು

[ಸ್ಥಳದವರಿಗೆ ವಾರ್ಷಿಕಸಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಬಿಡಿಪ್ರತಿಗೆ ೩-೬-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯[illegible] ನೆಯ ಇಸವಿ ನವಂಬರ್ ತಾರೀಖು [illegible] ನೆಯ ಸೋಮವಾರ [ಸಂಚಿಕೆ ೪೮

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death

The best, safest, cheapest most profitable and most convenient place of Insurance is the Public Branch of the Mysore State Life Insurance

Policies are issued from Rs 100 to Rs 10,000 and copies of rules and forms of application can be had from all Government Treasuries Economic Superintendents, Helpers and the Insurance Office, Public Office Buildings Bangalore

(Sd) S SHAMANNA,
Secretary Insurance Committee

[60—21]



[60—4]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	ಅ. ವೆ. ಸೇ
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ

ವಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸಿದರೆ ಕ್ಷೀಣರಾಗಿ ಸಾಯ್ತು ಕೊಳ್ಳುವಿರಿ

ರಜಿ] ವಜ್ರಾಂಗ ಸುಂದರಪಾಕದ [ಪ್ರವ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[60—46]

ಪತ್ರಾ ಮಾಲಕ:—ವೈದ್ಯ ವ್ಹಿ. ಎಸ್ ಕಾಪಸೆ. ಮು. ಪೋ. ವಿರಜಿ ಎಂ. ಎಸ್ ಎಂ

ಡಾಕ್ಟರ್ ಬೇ ಬೀ. ಯವರ

ಸುಗಂಧ ನಶ್ಯದ ಪುಡಿ.



[illegible]

ವಿಳಾಸ—[illegible] ಕಂಪೆನಿ ಲಿಮಿಟೆಡ್,

[60—13] ಪೋ. ಬಾ. ೩೧೧, ಮದರಾಸು.

ಮೈಸೂರು ಸ್ಟಾರ್.

೧೯೩೨ನೇ ಇಸವಿ ನವೆಂಬರ್ ತಾ|| ೨೮ ನೆಯ ಸೋಮವಾರ

ALLAHABAD CONFERENCE AND AFTER

We had referred to, in our last issue, to the agreement reached at by the Unity Conference and its acceptance by the leaders of the Hindus, Muslims and the Sikhs. It is gratifying also to note that Moulana Shaukat Ali and Dr. Ansari representing two schools of thought among the Muslims, have given their hearty approval to the settlement. It is true that the reported agreement has yet to be endorsed in a plenary session of both the Hindus, Muslims and the Sikhs. It is most unwise and unpatriotic that efforts should be made at this critical juncture in the history of India to repudiate such an agreement without giving a chance of its acceptance at the hands of the proposed All-parties Conference. One such wrong step is that of the meeting convened by Sir Mahomed Yakub and others of his out-look. Hasty resolutions have been passed repudiating the agreement as being injurious to the Muslim interests. If the press reports are correct we gather that others of different thinking were given no chance whatever to place their views in support of the Allahabad agreement. Thus one need not attach much importance to those out-bursts of communal rancour and attempts at mischievous propoganda. We also smell that some unseen hand is at the back of this move to widen the gulf that had been so wisely bridged at Allahabad. It is regrettable also that the R T C delegates are reticent over the agreement and have not taken this opportunity to support the agreement and get it endorsed by the Cabinet. It requires all the resources of statesman-ship when the constitution making is on the anvil, to get the conclusions of the Unity Conference, embodied in the constitution. We earnestly hope that the R. T. C. delegates will rise to the occasion and save the country from the throes of communal upheaval.

ಅಲಹಾಬಾದು ತೀರ್ಮಾನಾನಂತರ

ಅಲಹಾಬಾದಿನಲ್ಲಿ ನೆರೆದಿದ್ದ ಹಿಂದು ಮಹಮ್ಮದೀಯ ಸಿಕ್ಕರುಗಳ ಸಖ್ಯ ಸಮ್ಮೇಳನದಲ್ಲಾದ ತೀರ್ಮಾನವು ಸರ್ವಸಮ್ಮತವೂ ಆಹ್ಲಾದಕರವೂ ಆಗಿರುವುದರಿಂದ ಆ ಸಮ್ಮೇಳನವನ್ನು ಸೇರಿಸಲು ಪ್ರಯತ್ನಪಟ್ಟ ಮೌಲಾನಾ ಶೌಕತಾಲಿಯವರಿಗೂ, ಪಂಡಿತ ಮದನಮೋಹನ ಮಾಳವೀಯರವರಿಗೂ, ಭಿನ್ನಮತದವರ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ ಸರ್ವಸಮ್ಮತವಾದ ತೀರ್ಮಾನವನ್ನು ಮಾಡಲು ತಮ್ಮ ದೀರ್ಘರಾಜಕೀಯಾನುಭವವನ್ನೂ, ಚಾತುರ್ಯವನ್ನೂ ವ್ಯಕ್ತಪಡಿಸಿದ ಮ|| ವಿಜಯರಾಘವಾಚಾರ್ಯ ಪ್ರಭೃತಿಗಳಿಗೂ ಎಲ್ಲ ವರ್ಗಗಳ ನಾಯಕರುಗಳಿಂದಲೂ, ಸಂಘಗಳವರಿಂದಲೂ, ಭಾರತ ಹಿತಚಿಂತಕರ ಪಿರೋಪ್ಯರುಗಳಿಂದಲೂ ಧನ್ಯವಾದಗಳು ಅರ್ಪಿಸಲ್ಪಟ್ಟವು. ಸಮ್ಮೇಳನವು ನಡೆಯುತ್ತಿರುವ ವೇಳೆಯಲ್ಲಿ ಅನಿವಾರ್ಯ ಕಾರ್ಯ ಗೌರವದಿಂದ ಸೀಮೆಗೆ ಪ್ರಯಾಣಮಾಡಿದ ಶೌಕತಾಲಿಯವರು ತಾವು ಸಾಹಸಪಟ್ಟು ಏರ್ಪಡಿಸಿದ ಸಖ್ಯ ಸಮ್ಮೇಳನವು ಜಯಪ್ರದವಾಗಿ ನಡೆದು ಅನುಕೂಲವಾದ ತೀರ್ಮಾನವಾಗಿರುವುದು ತಮಗೂ ತಮ್ಮ ಪಕ್ಷಕ್ಕೆ ಸೇರಿದ ಬಹು ಸಂಖ್ಯಾಕ ಮಹಮ್ಮದೀಯರಿಗೂ ಮಹಾ ಸಂತೋಷ ಪ್ರದವಾಗಿರುವದೆಂದೂ, ಭಾರತೀಯರ ಸ್ವರಾಜ್ಯಸಾಧನ ಪ್ರಯತ್ನಕ್ಕೆ ಅನುಕೂಲವಾಗಿರುವುದೆಂದೂ ತಿಳಿಸಿರುವರಲ್ಲದೆ ಡಾಕ್ಟರ್ ಅನ್ಸಾರಿಯವರೂ ಈ ತೀರ್ಮಾನದಿಂದ ತಮಗೆ ಆಗಿರುವ ಸಂತೋಷವನ್ನು ಸೂಚಿಸಿರುವರು. ಈ ಉಭಯರೂ ಈ ತೀರ್ಮಾನವು ಭಾರತೀಯರೆಲ್ಲರಿಂದಲೂ ಅನುಮೋದಿಸಲ್ಪಡುವುದೆಂದು ಆಶಿಸುತ್ತಾರೆ. ಆದರೆ ಸರ್ ಮಹಮದ್ ಯಾಕೂಬ್ ರವರೂ ಅವರ ಅಭಿಪ್ರಾಯಾನುಮೋದಕರೂ ಬೇರೊಂದು ಸಭೆಯನ್ನು ನಡೆಯಿಸಿ ಅಲಹಾಬಾದು ತೀರ್ಮಾನವನ್ನು ಸಮರ್ಥಿಸಿ ಮಾತನಾಡುವವರಿಗೆ ಅವಕಾಶವನ್ನು ಕೊಡದೆ ಅದನ್ನು ಖಂಡಿಸಿದುದಲ್ಲದೆ ತಾವು ಸಮ್ಮತಿಸುವುದಿಲ್ಲವೆಂದು ನಿರ್ಧಾರಮಾಡಿ ಆ ತೀರ್ಮಾನವು ಬರುವ ಡಿಸೆಂಬರು ತಿಂಗಳಲ್ಲಿ ನಡೆಯುವ ಸರ್ವಪಕ್ಷ ಸಮ್ಮೇಳನದಲ್ಲಿ ಅನುಮೋದಿತವಾಗದಂತೆ ಮಾಡಲು ಸಾಹಸಪಡುತ್ತಿರುವುದು ಬಹಳ ಶೋಚನೀಯವಾಗಿರುತ್ತದೆ. ಇಂತಹ ವಿಘ್ನಸಂತೋಷಿಗಳ ಮತವೈಷಮ್ಯನಾಶನ ಪ್ರಯತ್ನಕ್ಕೆ ವಿವೇಕಿಗಳಾರೂ ಗಮನಕೊಡುವುದಿಲ್ಲ. ಈ ದುಷ್ಪ್ರಯತ್ನವನ್ನು ಕೆಲ ಸ್ವಾರ್ಥಪರರು ಪ್ರೋತ್ಸಾಹಿಸಿ ಹಿಂದು ಮಹಮ್ಮದೀಯರ ಸಖ್ಯಪ್ರಯತ್ನವು ನಿರರ್ಥಕವಾಗಿ ಮುನಿಸ್ವಾಸ್ಥ್ಯ ಪ್ರಬಲಿಸುವಂತೆ ಮಾಡುತ್ತಿರುವುದಾಗಿ ತಿಳಿಯಬರುತ್ತದೆ. ರೌಂಡ್‌ಟೇಬಲು ಸಭೆಗೆ ಹೋಗಿರತಕ್ಕ ಪ್ರತಿನಿಧಿಗಳು ಅಲಹಾಬಾದು ತೀರ್ಮಾನದ ವಿಚಾರದಲ್ಲಿ ಚಕಾರಶಬ್ದವನ್ನು ಸಹ ಮಾಡದೆ ಸುಮ್ಮನಿರುವುದು ಮಂತ್ರಿಮಂಡಲದವರು ಅನುಮೋದಿಸುವಂತೆ ಮಾಡಲು ಯಾವ ಪ್ರಯತ್ನವನ್ನೂ ಮಾಡದೆ ಮೌನವಾಗಿರುವುದು ಬಹು ಶೋಚನೀಯವಾಗಿದೆ. ರಾಜ್ಯಾಂಗರಚನೆಯಲ್ಲಿ ಅಲಹಾಬಾದು ಸಖ್ಯಸಮ್ಮೇಳನದಲ್ಲಾದ ತೀರ್ಮಾನಾಂಶಗಳು ಗರ್ಭಿತವಾಗುವಂತೆ ರಾಜ್ಯಾಂಗರಚನೆಯ ವೇಳೆಯಲ್ಲಿ ಮಂತ್ರಿಮಂಡಲದವರನ್ನೊಪ್ಪಿಸಲು ರಾಜನೀತಿ ಪ್ರೌಢಿಮೆಗೆ ತಕ್ಕ ಉಪಾಯಗಳನ್ನೆಲ್ಲ ವಿನಿಯೋಗಿಸಬೇಕಾಗಿರುವುದು. ಆದುದರಿಂದ ರೌಂಡುಟೇಬಲು ಸಭೆಯ ಭಾರತ ಪ್ರತಿನಿಧಿಗಳು ಎಚ್ಚೆತ್ತುಕೊಂಡು ಭಾರತದೇಶವನ್ನು ಮತವೈಷಮ್ಯದಿಂದುಂಟಾಗಿರುವ ಆನೈಕ್ಯ ಸಂಕಟದಿಂದ ಪಾರುಮಾಡಲು ಸಾಹಸಪಡುವರೆಂದು ನಿರೀಕ್ಷಿಸುತ್ತೇವೆ. ಅಲಹಾಬಾದು ತೀರ್ಮಾನಾನುಮೋದನಕ್ಕಾಗಿ ಸರ್ವಪಕ್ಷ ಸಮ್ಮೇಳನವು ಬರುವ ಡಿಸೆಂಬರು ತಾ|| 3ರಲ್ಲಿ ನಡೆಯಬೇಕೆಂದಿದ್ದುದು, ತಪ್ಪು ಕೆಲವು ಕೆಲಸಗಳ ಪ್ರಕಾರ ಡಿಸೆಂಬರು ತಾ|| 13 ರಲ್ಲಿ ನಡೆಯಲು ಗೊತ್ತಾಗಿರುವುದು.

ಜಗದ್ಗುರು ಶಂಕರಾಚಾರ್ಯರೂ ಅಸ್ಪೃಶ್ಯತೆಯೂ

ಕುಂಭಕೋಣದ ಶ್ರೀ ಜಗದ್ಗುರು ಶಂಕರಾಚಾರ್ಯರು ಅಸ್ಪೃಶ್ಯತೆಯು ಇದ್ದೇ ತೀರಬೇಕೆಂಬ ಬಗೆಗೆ ಶಾಸ್ತ್ರಾಧಾರವನ್ನು ಉದಹರಿಸಿ ಒಂದು ದೀರ್ಘವಾದ ಲೇಖನವನ್ನು ಮಹಾತ್ಮರಿಗೆ ಬರೆದಿರುವುದಾಗಿ ತಿಳಿಯಬರುತ್ತದೆ.

ಬಿಳೀ ಆನೆ

ತಿರುವಾಂಕೂರು ಸಂಸ್ಥಾನದ ಕಾಡುಗಳೊಂದರಲ್ಲಿ ಬಿಳೀ ಆನೆಯು ಕಾಣಿಸಿಕೊಂಡಿತೆಂದು ಅರಣ್ಯ ಶಾಖೆಯವರು ಪ್ರಭುತ್ವದವರಿಗೆ ತಿಳಿಸಿದುದರ ಮೇಲೆ ಅದನ್ನು ಕೊಲ್ಲದೆ ಸಾಹಸಪಟ್ಟು ಅದನ್ನು ಹಿಡಿಯಬೇಕೆಂದು ಅಪ್ಪಣೆಮಾಡಿರುವುದಾಗಿ ಪ್ರಕಟವಾಗಿದೆ.

ಸಂಸ್ಥಾನಾಧೀಶರಿಗೆ ಬ್ರಿಟಿಷರ ಸಂಬಂಧವು ಮುಖ್ಯ

ಕಳೆದ ತಾ|| 14ರಲ್ಲಿ ಲಂಡನ್ನಿನ ಪಾರ್ಲಿಮೆಂಟು ಭವನದಲ್ಲಿ ನೆರೆದಿದ್ದ ಕನ್ಸರ್ವೆಟಿವ್ ಇಂಡಿಯಾ ಕಮಿಟಿಯವರ ಸಭೆಯಲ್ಲಿ ನವನಗರದ ಮಹಾರಾಜರು ಫೆಡರೇಷನ್ ಕುರಿತು ಭಾಷಣ ಮಾಡುವಾಗ್ಗೆ "ಭಾರತದೇಶೀಯ ಸಂಸ್ಥಾನಾಧಿಪತಿಗಳಿಗೆ ಸಮುಚಿತವಾದ ರಕ್ಷಣೆಗಳು ಶಾಸನದಲ್ಲಿ ಸೇರಿಸಲ್ಪಟ್ಟರೆ ಮಾತ್ರ ಅವರುಗಳು ಫೆಡರೇಷನ್ನಿಗೆ ಅಂಗೀಕರಿಸುವರು" ಎಂದು ಹೇಳಿದರು.

ರೈಲ್ವೆ ಅನಾಹುತ

ಗ್ರೇಟ್ ಪ್ರಿಟನ್ನಿಗೆ ಸೇರಿದ ಪಾಟ್‌ಫೋರ್ಡ್ ಎಂಬಲ್ಲಿ ಕೂಲಿ ಆಳುಗಳು ರೈಲು ಮಾರ್ಗವನ್ನು ಸರಿಪಡಿಸುತ್ತಿರುವಾಗ್ಗೆ ಇಂಜನ್ನಿನ ಹೊಗೆಯು ಟ್ರೈಲಿನಲ್ಲಿ ಆವರಿಸಿಕೊಂಡಿದ್ದುದರಿಂದ ಇನ್ನೊಂದು ಬಂಡಿಯು ರಭಸವಾಗಿ ಬರುತಿದ್ದುದು ಕೆಲಸಗಾರರಿಗೆ ಕಾಣಿಸಲಿಲ್ಲವಾಗಿ ಅವರುಗಳಲ್ಲಿ ಕೆಲರು ಬಂಡಿಗೆ ಸಿಕ್ಕಿ 5 ಮಂದಿ ತುಂಡುತುಂಡಾಗಿ ಕತ್ತರಿಸಿ ಹೋದರು. ಉಳಿದವರು ಪ್ರಾಣಾಪಾಯವನ್ನು ಹೊಂದಿದರು.

ಆರ್ ಟಿ ಸಭಿಕರಿಗೆ ಔತಣ

ರೌಂಡುಟೇಬಲು ಸಭಿಕರುಗಳಿಗೆ ಲಂಕಾಸ್ಟರು ಭವನದಲ್ಲಿ ಪ್ರಭುತ್ವದವರಿಂದ ಔತಣವು ಮಾಡಿಸಲ್ಪಟ್ಟಿತು. ಈ ಔತಣಕ್ಕೆ ಮಂತ್ರಿಮಂಡಲದವರು ರಾಜನೀತಿ ವಿಶಾರದರು, ನಾನಾ ಸಂಘಗಳ ನಾಯಕರು, ವಿದ್ಯಾ ಪಂಡಿತರು, ಮತ ಗುರುಗಳು ಮೊದಲಾದವರು 1000 ಮಂದಿ ವರೆಗೆ ಆಹ್ವಾನಿಸಲ್ಪಟ್ಟಿದ್ದರು. ಈ ಅತಿಥಿಗಳನ್ನೆಲ್ಲ ಮುಖ್ಯ ಮಂತ್ರಿ ಮೆಕ್ಡೊನಾಲ್ಡ್‌ರವರು ಸ್ವಯಮಾಗಿ ಸನ್ಮಾನಿಸಿ ಮಾತನಾಡಿಸಿದರು.

ಅಸ್ಪೃಶ್ಯರ ದೇವಾಲಯ ಪ್ರವೇಶ

ಚಂಡಾಲರೆಂದು ಕರೆಯಲ್ಪಡುತ್ತಿರುವ ಜಾತಿಯವರು ಅಸ್ಪೃಶ್ಯರೆಂಬುದು ಅಶಾಸ್ತ್ರೀಯವೆಂದೂ, ಅವರು ದೇವಾಲಯಗಳಿಗೆ ಬರುವುದು ಶಾಸ್ತ್ರಸಮ್ಮತವೆಂದೂ ಒಂಕುಪಲ್ಲಿ ಮಲ್ಲಿಯ ಶಾಸ್ತ್ರಿಗಳು ಪ್ರಕಟಿಸಿರುವರು. ಈ ವಿಷಯವನ್ನು ಸಿದ್ಧಾಂತಪಡಿಸಲು ಪಂಡಿತರ ಸಭೆಯನ್ನು ಸೇರಿಸಬೇಕೆಂದು ಅವರೂ ಮತ್ತೆ ಬೇರೆಯವರೂ ಕೋರುತ್ತಿದ್ದಾರೆ. ಈ ಸಭೆಯನ್ನು ಸೇರಿಸಿ ಚರ್ಚಿಸಲು ನಿಬಂಧನೆಗಳೇನೆಂಬುದನ್ನು ದಯೆಯಿಟ್ಟು ಶಾಸ್ತ್ರಿಗಳು ತಿಳಿಸಬೇಕೆಂದು ಸ್ವಧರ್ಮ ಸ್ವರಾಜ್ಯ ಸಭೆಯ ಸೆಕ್ರೆಟರಿ ಮಾರ್ಕಂಡೇಯ ಶರ್ಮರವರು ಬರೆದಿರುತ್ತಾರೆ.

ಮಹಾತ್ಮರ ಆಹಾರ

"ನಾನು ಈಗ ಕಂಡವನ್ನು ಬೇಯಿಸತಕ್ಕ ಪದಾರ್ಥಗಳನ್ನೂ ತೃಪ್ತಿಯನ್ನುಂಟುಮಾಡತಕ್ಕ ಪದಾರ್ಥ (ಟಾನಿಕ್ಸ್) ಗಳನ್ನೂ ಸೇವಿಸುವುದಿಲ್ಲ. ಮೇಕೆ ಹಾಲು, ಹೊಟ್ಟುಸಮೇತವಾದ ಗೋಧಿರೊಟ್ಟಿ, ನೀರಿನಲ್ಲಿ ನೆನೆ ಹಾಕಿದ ಖರ್ಜೂರ, ಬೇಯಿಸಿದ ಟೊಮಾಟೊ, ಕಿತ್ತಳೆಹಣ್ಣು ಇವುಗಳನ್ನು ಮಾತ್ರ ಸೇವಿಸುತ್ತಿದ್ದೇನೆ. ರೊಟ್ಟಿಯಿಂದಲೂ ಹಾಲಿನಿಂದಲೂ ಕೊಂಚ ಮಾಂಸವರ್ಧಕ ಪದಾರ್ಥವು ನನಗೆ ಲಭಿಸುತ್ತಿದೆ" ಎಂದು ಮಹಾತ್ಮರು ಒಬ್ಬ ಸ್ನೇಹಿತರಿಗೆ ಬರೆದಿದ್ದಾರೆ.

ತೆಂಗಲೆ ವಡಗಲೆಯವರ ವಿವಾದ

ಪಿಠಾಪುರದ ಶ್ರೀಕೃಷ್ಣಸ್ವಾಮಿ ದೇವಸ್ಥಾನದಲ್ಲಿ ದೇವರ ಮುಂದೆ ಪಾರಾಯಣವನ್ನು ಯಾರು ಹೇಳಬೇಕು (ತೆಂಗಲೆಯವರು) ಹೇಳುವವರ ಬದಲಾಗಿ ಬೇರೆ ಪ್ರಬಂಧವನ್ನು ಹೇಳಿ ಶ್ಲೋಕಗಳನ್ನು ಹೇಳಬೇಕೆಂದು (ವಡಗಲೆಯವರು) ವಾದಿಸಿ ಅದ್ಯಾಪಕರು ಅಲ್ಲಿ ನಡೆದಂತೆ ತಾತ್ಕಾಲಿಕ ತಡೆಯಾಜ್ಞೆಯನ್ನು ನಾರಾಯಣ ಸ್ವಾಮಿ ಐಯಂಗಾರ ತಿರುವೈಷ್ಣವರು ಕಂಟಿಯ ಸಬ್‌ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಪಡೆದರು ಹೂಡಿರುವುದರ ಮೇಲೆ ವಡಗಲೆಯವರು ತೆಂಗಲೆಯವರನ್ನು ಅಡ್ಡಿಪಡಿಸಕೂಡದೆಂದೂ, ಪೋಲೀಸಿನವರು ತೆಂಗಲೆಯವರಿಗೆ ಅಡಚಣೆಯಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದೂ ಮೆಜಿಸ್ಟ್ರೇಟರು ಅಪ್ಪಣೆ ಮಾಡಿರುತ್ತಾರೆ.

ಅಸ್ಪೃಶ್ಯರಿಗೆ ಕಾಫಿ ಹೋಟಲು

ತುತ್ತುಕುಡಿ ಮ್ಯುನಿಸಿಪಾಲಿಟಿಗೆ ಸೇರಿದ ಯಾವ ಕಾಫಿ ಕ್ಲಬ್ಬಿನಲ್ಲಾಗಲಿ ಕ್ಷೌರದಂಗಡಿಗಳಲ್ಲಾಗಲಿ ಅಸ್ಪೃಶ್ಯರಿಗೆ ಪೃಥಕ್ಕಾಗಿ ಪ್ರತ್ಯೇಕ ಏರ್ಪಾಟನ್ನು ಮಾಡಿದಲ್ಲಿ ಆ ಕಾಫಿ ಹೋಟಲುಗಳಿಗೂ ಕ್ಷೌರದಂಗಡಿಗಳಿಗೂ ಮ್ಯುನಿಸಿಪಾಲಿಟಿಯವರು ಲೈಸೆನ್ಸು ಕೊಡಲಾಗದೆಂದು ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ನಿಮ್ನ ಜಾತಿಯವರ ಪ್ರತಿನಿಧಿಯಾಗಿರುವ ಎಲ್ ದೊರೆಸ್ವಾಮಿಯವರು ಒಂದು ತೀರ್ಮಾನವನ್ನು ಪ್ರತಿಪಾದಿಸಬೇಕೆಂದು ಕೋರಿದುದರ ಮೇಲೆ ಅವರ ಪರವಾಗಿ ಮತ್ತೊಬ್ಬ ಕೌನ್ಸಿಲರು ಅದನ್ನು ಪ್ರತಿಪಾದಿಸಿದರು. ಈ ಭೇದವು ಮ್ಯುನಿಸಿಪಾಲಿಟಿಗೆ ಸೇರಿದ ಯಾವ ಹೋಟಲಿನಲ್ಲೂ ನಡೆಯುತ್ತಿಲ್ಲವೆಂದು ಒಬ್ಬ ಮೆಂಬರು ಹೇಳಿದ ಮೇಲೆ ಆ ತೀರ್ಮಾನವು ಅನುಮೋದಿತವಾಯಿತು.

ಮಹಾತ್ಮ ಗಾಂಧಿಯವರ ಜಾತಕ ಫಲ

ಶುಕ್ಲ ಸಂವತ್ಸರದ ಭಾದ್ರಪದ ಬಹುಳ ದ್ವಾದಶಿ ಶನಿವಾರ ಸೂರ್ಯೋದಯಾದಿ ಘಟಿಕಾ 51-0 ಗೆ ಸಲ್ಲುವ ಮಘಾ ನಕ್ಷತ್ರ 4 ನೆಯ ಪಾದ ಸಿಂಹ ಲಗ್ನದಲ್ಲಿ ಮಹಾತ್ಮರ ಜನನ ಕಾಲವೆಂದು ನಿರ್ಧರಿಸಿ ಸೀತಾಪುರದ ಭಾರತಿ ತೀರ್ಥೋಪಾಧ್ಯಾಯ ವಡಲಿ ಸೀತಾರಾಮಯ್ಯನವರು ಜನನ ಕುಂಡಲಿಯನ್ನು ಹಾಕಿ ತಾತ್ಕಾಲಿಕ ಗ್ರಹಚಾರವನ್ನು ಗುಣಿಸಿ ಫಲವನ್ನು ಪ್ರಕಟಿಸಿರುವುದರಲ್ಲಿ, 1932 ನೆಯ ಡಿಸೆಂಬರು ತಾ|| 11 ರ ಮೇಲೆ ಮಹಾತ್ಮರ ಆರೋಗ್ಯ ವೃದ್ಧಿಯಾಗಿ ಸಂಕಲ್ಪವು ಸಿದ್ಧಿಸುವುದು, 1933 ನೆಯ ಜನವರಿ ತಿಂಗಳು ಕಳೆದ ಮೇಲೆ ರಾಜಕೀಯ ವಿಚಾರದಲ್ಲಿ ಜಯವಾಗಲು ತಕ್ಕೇರ್ಪಾಟು ನಡೆಯುವುದು ಎಂದು ತಿಳಿಸಿರುತ್ತಾರೆ. ಈ ಭವಿಷ್ಯದ ಸತ್ಯಾಂಶವು ಮುಂದೆ ವ್ಯಕ್ತವಾಗಬೇಕಾಗಿದೆ.

ರೌಂಡುಟೇಬಲು ಸಭೆ

ರೌಂಡುಟೇಬಲು ಸಭೆಯು ಕಳೆದ ತಾ|| 23 ರಲ್ಲಿ ಸಮಾವಿಷ್ಟವಾಗಿದ್ದು ರಾಷ್ಟ್ರಗಳಿಗೂ ಕೇಂದ್ರಸ್ಥಾನಕ್ಕೂ ಇರಬೇಕಾದ ಪರಸ್ಪರ ಸಂಬಂಧದ ವಿಚಾರವಾಗಿ ದೀರ್ಘ ಚರ್ಚೆಯು ನಡೆದು ಭಿನ್ನಾಭಿಪ್ರಾಯಗಳು ಉಂಟಾದುದರ ಮೇಲೆ ಈ ವಿಚಾರವನ್ನು ಚೆನ್ನಾಗಿ ಪರಿಷ್ಕರಿಸಿ ತಮ್ಮ ಭಿಪ್ರಾಯದೊಡನೆ ನಿವೇದಿಕೆಯನ್ನು ಸಮರ್ಪಿಸುವುದಕ್ಕಾಗಿ ಲಾರ್ಡ್ ಶಾಂಕೀಯವರ ಅಧ್ಯಕ್ಷತೆಯಲ್ಲಿ ಒಂದು ಉಪಸಂಘವೇರ್ಪಡಿಸಲ್ಪಟ್ಟು ಸಪ್ರೂ, ಜಾಫರುಲ್ಲಾ, ಪಾತ್ರೊ, ಹೈದರಿ, ಮನೂಬಾಯಿ ಮೆಹತ ಮತ್ತು ಬಟ್ಲರ್ ಇವರುಗಳು ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುವರು. ಇವರು ತಮ್ಮ ವರದಿಯನ್ನು ನಾಳೆಯ ದಿವಸ ಸಮರ್ಪಿಸಿದ ಮೇಲೆ ರೌಂಡುಟೇಬಲು ಸಭೆಗೂಡುವುದು. ಸಂಸ್ಥಾನಾಧಿಪತಿಗಳಿಗೆ ಸಂಬಂಧಪಟ್ಟ ಮತ್ತು ಬೇರೆ ಕೆಲ ವಿಚಾರಗಳಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಪರ್ಯಾಲೋಚಿಸಿ ವರದಿ ಮಾಡಲು ಬೇರೆ ಕೆಲ ಉಪ ಸಭೆಗಳೇರ್ಪಟ್ಟಿರುವುವು.

ಶಾರದಾ ಶಾಸನೋಲ್ಲಂಘನಕ್ಕಾಗಿ ಶಿಕ್ಷೆ

ಶಾರದಾ ಶಾಸನ ನಿರ್ಬಂಧಕ್ಕೆ ಸಿಕ್ಕಿರಬಾರದೆಂದು 17 ವರ್ಷದ ಹುಡುಗಿಗೆ ಟಾನಾ ಎಂಬುವನ ನಾಲಸ್ಯನೊಬ್ಬನು ಪೋರ್ಚುಗೀಸು ರಾಜ್ಯಕ್ಕೆ ಸೇರಿದ ಸಿಲ್ವಾಸ ಎಂಬ ಗ್ರಾಮಕ್ಕೆ ಹೋಗಿ ಮದುವೆ ಮಾಡಿಕೊಂಡು ಬಂದನು. ಇದಕ್ಕಾಗಿ ತಂದೆ ಮತ್ತು ಮಗನ ಮೇಲೆ ಟಾನಾ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರಲ್ಲಿ ವಿವಾದವು ನಡೆದು, ಪೋರ್ಚುಗೀಸು ರಾಜ್ಯದಲ್ಲಿ ವಿವಾಹ ನಡೆದಿದ್ದರೂ ಅಪರಾಧಿಗಳು ಬ್ರಿಟಿಷ್ ಪ್ರಜೆಗಳಾದುದರಿಂದ ತಪ್ಪಿತಸ್ಥರೆಂದು ನಿರ್ಧರಿಸಲ್ಪಟ್ಟು ತಲಾ 200 ರೂಪಾಯಿಗಳ ದಂಡ ವಿಧಿಸಲ್ಪಟ್ಟರು. ಇದರ ಮೇಲೆ ಅಪರಾಧಿಗಳು ಟಾನಾ ಸೆಷನ್ಸು ಜಡ್ಜಿಯವರಲ್ಲಿ ಅಪೀಲನ್ನು ಮಾಡಿಕೊಂಡಿರಲಾಗಿ ಅಪರಾಧಿಗಳು ದೋಷಿಗಳಾಗಿರುತ್ತಾರೆಂದು ಆ ಜಡ್ಜಿಯು ಅಭಿಪ್ರಾಯಪಟ್ಟು ತಂದೆಯ ದಂಡವನ್ನು 50 ರೂ ಗೂ ಮಗನ ದಂಡವನ್ನು 25 ರೂ ಗೂ ಇಳಿಸಿದರು. ರಾಮೇಶ್ವರಕ್ಕೆ ಹೋದರೂ ಶನಿಕಾಟ ತಪ್ಪದು!

ಪರ್ವತವು ಯಾವಾಗ ಕದಲುವುದು ?

ಕಾರ್ತಿಕ ಬಹುಳ 30 ಅಮಾವಾಸ್ಯೆ ಭಾನುವಾರ ದೊಡ್ಡ ಬಿರುಗಾಳಿ ಮಳೆ ಬಂದು ಪರ್ವತಗಳು ಕದಲುವುವೆಂದೂ, ಭೂಮಿಯೆಲ್ಲ ಸಮುದ್ರಮಯವಾಗುವುದೆಂದೂ, ಭೂಕಂಪಗಳಾಗುವುವೆಂದೂ, ಅನೇಕ ಉಪದ್ರವಗಳುಂಟಾಗುವುವೆಂದೂ, ಭೂಮಿಯಲ್ಲಿ ಅಡಗಿಕೊಂಡು ಪ್ರಾಣಗಳನ್ನುಳಿಸಿಕೊಳ್ಳಬೇಕೆಂದೂ ಕೆಲ ಸಿದ್ಧಾಂತಿಗಳು ಬರೆದಿರುವುದರಿಂದ ಪ್ರಳಯವಾಗು

ಕ್ಕವೆಂದು ಪ್ರಜೆಗಳು ಭಯಗ್ರಸ್ತರಾಗಿದ್ದರು 29-10-32ರಲ್ಲಿ ಗುರುಸುಕಮ್ಯಂಡಳಿಯ ಸಂಧಿ ಗುರು ಪಕ್ಷ ... ಪ್ರವುಂದ ... ಕೈಲೋಂ ... ನಿಲೋಟ್ಟ ವೆಂಟ್ಸ್ ಎಸ್ಕ್ ... ಈ ... ತಮ್ಮವರೊಬ್ಬರಿಗೆ ... ... ಕರು ಅನೇಕ ಮಂದಿ ನೋಡಹೋಗಿರುತ್ತಾರೆ ಅವರು ... ಡವ ... ಸ್ಪರ್ಶ ಪ್ರವೇಶದ ... ಬಾಧ ಉಪದ್ರವಗಳಾಗುತ್ತಿಲ್ಲವೆಂದೂ ... ಸಮಾನವಾಗಿ ... ಮತ್ತು ಧ್ವಜ ... ಕಾರ್ಯಕ್ರಮಗಳು ನಡೆಯುತ್ತಿರುವುವೆಂದು ಬರೆದಿರುವ ಸಂಗತಿಯು 'ಟ್ರಿಬ್ಯೂನ್' ಎಂಬ ಪತ್ರಿಕೆಯ ಪ್ರೊ. ಕೆ. ಎಸ್. ಸಿಂಗ್ ರಾಥೋಡ್ ಎಂಬವರು ಪ್ರಕಟಿಸಿದ್ದರು.

ಅಸ್ಪೃಶ್ಯರಿಗೆ ಗುರುವಯ್ಯೂರು ದೇವಾಲಯ ಪ್ರವೇಶ

ಸವರ್ಣ ಹಿಂದುಗಳೇ ಗುರುವಯ್ಯೂರು ದೇವಾಲಯವನ್ನು ಪ್ರವೇಶಿಸಲು ಅರ್ಹರೆಂಬುದೂ, ಅವರಿಗಾಗಿಯೇ ಜಾಮುರಿನ್‌ರವರು ದೇವಾಲಯದ ಧರ್ಮಕರ್ತರಾಗಿರುವರೆಂಬುದೂ ಜಾಮುರಿನ್ನರವರ ವಾದವಾಗಿರುತ್ತದೆ ಹಾಗಿದ್ದರೆ ಸವರ್ಣದವರಾದ ಹಿಂದುಗಳ ಇಷ್ಟ ಪ್ರಕಾರವೇ ಅವರು ಧರ್ಮಾಧಿಕಾರವನ್ನು ನಡೆಯಿಸಬೇಕು ಆದುದರಿಂದ ಸವರ್ಣದ ಹಿಂದುಗಳೆಲ್ಲರ ಅಭಿಪ್ರಾಯವನ್ನು ತಿಳಿಯಲು ಒಂದು ಪಂಚಾಯತಿಯೇರ್ಪಾಟಾಗಬೇಕಾಗಿದೆ ಹಾಗಲ್ಲದೆ ಸವರ್ಣದವರಾದ ಹಿಂದುಗಳಿಗೆ ಜವಾಬುದಾರಿಯನ್ನು ವಹಿಸಬೇಕಾದ ಆವಶ್ಯಕತೆಯಿಲ್ಲದೆ ಜಾಮುರಿನ್ನರ ಇಚ್ಛಾನುಸಾರ ಅಧಿಕಾರವನ್ನು ನಡೆಯಿಸಬಹುದೆಂದೂ, ಆ ದೇವಸ್ಥಾನವು ಅವರ ಸ್ವಂತ ಸ್ವತ್ತೆಂದೂ, ಅವರ ಅನುಮತಿಯಿಲ್ಲದೆ ಸವರ್ಣದ ಹಿಂದುಗಳು ಸಹ ದೇವಾಲಯವನ್ನು ಪ್ರವೇಶಿಸಕೂಡದೆಂದೂ ನಿರ್ಧರವಾದರೆ ನಾವು ಆ ಪ್ರವೇಶ ಕಾರ್ಯವನ್ನು ಬಿಟ್ಟುಬಿಡಬೇಕು ನಾವು ಅಪಮಾನಿತರಾದವೆಂದು ಭಾವಿಸದೆ ಒಪ್ಪಿಕೊಳ್ಳಬೇಕು ಅಲ್ಲಿನ ಸಂಗತಿ ಸಂದರ್ಭಗಳೆಲ್ಲ ಹೇಗಿವೆ ಎಂದು ಗೊತ್ತುಮಾಡಿ ತಿಳಿಸುವುದು ಎಂದು ಮಹಾತ್ಮರು ಕಲ್ಲಿಕೋಟೆಯಲ್ಲಿರುವ ಪತ್ರಿಕಾ ಸುದ್ದಿಗಾರರಿಗೆ ಬರೆದಿರುತ್ತಾರೆ.

ಮಹಾತ್ಮರು ಶಾಂತಿಯವರಿಗೆ ಬರೆದುತ್ತರ

"ನಾನು ಸ್ವಭಾವವಾಗಿ ಸಹಕಾರಕ್ಕೋಸ್ಕರ ಹೋರಾಡುತ್ತಿದ್ದೇನೆ ಪ್ರಜೆಗಳಿಗಿಷ್ಟವಿಲ್ಲದಿದ್ದರೂ ಅವರು ಆಟೋಪ ಒಡಂಬಡಿಕೆಯನ್ನು ಅನುಮೋದಿಸುವಂತೆ ದೊರೆತನದವರು ಬಲವಂತ ಪಡಿಸುವುದು, ಪ್ರಜೆಗಳ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಅಣಗಿಸುವುದು, ನ್ಯಾಯಸಮ್ಮತವಾಗಿ ಮಾಡಲ್ಪಟ್ಟ ನಿಯಂತ್ರಣ ವಿಧಾನಗಳನ್ನು ಸ್ಥಿರಪಡಿಸುವುದು ಮೊದಲಾದ ಕಾರ್ಯಗಳನ್ನು ನೋಡಿದರೆ ರಾಜ್ಯಾಧಿಕಾರವನ್ನು ನಿಜವಾಗಿ ಪ್ರಜೆಗಳಿಗೆ ದೊರೆತನದವರು ಕೊಡಲಿಷ್ಟಪಟ್ಟವರಾಗಿರುವರೆಂದು ನಂಬಲು ಯಾವ ಕಾರಣವೂ ತೋರುವುದಿಲ್ಲ. ದೊರೆತನದವರು ನಿರ್ಬಂಧ ವಿಧಾನವನ್ನು ಅವಲಂಬಿಸುವುದರಿಂದ ಪ್ರಜೆಗಳ ನೀತಿಯನ್ನು ಸಂಪೂರ್ಣವಾಗಿ ಹಾಳುಮಾಡುವರು ನನಗೆ ಸತ್ಯಾಗ್ರಹದಲ್ಲಿ ಪೂರ್ಣ ನಂಬಿಕೆ ಇರುತ್ತದೆ. ನಾನು ಅದನ್ನು ನಿಲ್ಲಿಸಿ ಬಿಟ್ಟರೂ ದೊರೆತನದವರು ಪ್ರಜೆಗಳನ್ನು ಭಯಗೊಳಿಸುವ ಪಥ್ಯವನ್ನವಲಂಬಿಸಲು ಯಾವ ನಿರೋಧವೂ ಉಂಟಾಗುವುದಿಲ್ಲ ಶಾಂತಿಯವರ ಧೈರ್ಯಕ್ಕಾಗಿಯೂ ಕಾರ್ಯದೀಕ್ಷೆಗಾಗಿಯೂ ಅವರಲ್ಲಿ ನನಗೆ ಬಹಳ ಗೌರವವಿರುತ್ತದೆ ದೊರೆತನದವರು ಮನಸ್ಸು ನಿಶ್ಚಯವಾಗಿ ಬದಲಾಯಿಸಿರುವುದೆಂದು ಅವರು ಸ್ಪಷ್ಟಪಡಿಸುವುದಾದರೆ ನಾನು ಅವರ ಜೇಬಿನಲ್ಲೇ ಇರುವೆನು" ಎಂದು ಮಹಾತ್ಮರು ಶಾಂತಿಯವರಿಗೆ ಕೊಟ್ಟುತ್ತರದಲ್ಲಿ ತಿಳಿಸಿರುತ್ತಾರೆ

ಮಹಾತ್ಮರಿಗೆ ಸ್ವಧರ್ಮ ಸ್ವರಾಜ್ಯ ಸಂಘದವರ ಲೇಖನ

ಅಸ್ಪೃಶ್ಯತಾನಿವಾರಣೆಯ ವಿಚಾರವಾಗಿ ನೀವು ಮಾಡುತ್ತಿರುವ ಪ್ರಕಟಣೆಗಳಲ್ಲೆಲ್ಲ ಅಸ್ಪೃಶ್ಯತೆಯನ್ನು ಪುರಸ್ಕರಿಸುವುದು ಭಗವದ್ಗೀತೆಗೆ ವಿರುದ್ಧವೆಂದು ಹೇಳುತ್ತಿರುವಿರಿ ಅಸ್ಪೃಶ್ಯತೆಯು ಭಗವದ್ಗೀತೆಗೆ ವಿರುದ್ಧವೆಂದು ನೀವು ನಿಮ್ಮ ಕಡೆಯ ವಿದ್ವಾಂಸರುಗಳನ್ನು ಕಳುಹಿಸಿ ಸಭೆಯಲ್ಲಿ ಅಸ್ಪೃಶ್ಯತೆಯು ಭಗವದ್ಗೀತೆಗೆ ವಿರುದ್ಧವೆಂದು ಸಾಧಿಸಿ ಸನಾತನ ಧರ್ಮಪರರನ್ನು ಒಡಂಬಡಿಸಿದಲ್ಲಿ ನಿಮ್ಮ ಪ್ರಚಾರಕ್ಕೆ ನಮ್ಮ ಸಂಘವು ಅಡ್ಡಿ ಬರುವುದಿಲ್ಲ ಹಾಗಲ್ಲಗೆ ನಿಮ್ಮ ಪಂಡಿತರುಗಳು ಸಿದ್ಧಾಂತ ಪಡಿಸದೆಹೋದಲ್ಲಿ ಸನಾತನ ಧರ್ಮಕ್ಕೆ ವಿರೋಧವಿಲ್ಲದಂತೆ ನಿಮ್ಮ ಪ್ರಚಾರ ಕಾರ್ಯವನ್ನು ಸರಿಪಡಿಸಿಕೊಳ್ಳಬೇಕು ಅಂತಹ ಸಭೆಯನ್ನು ಮಾಡಲಿಕ್ಕೆ ತಕ್ಕ ವಿಶ್ವಾಸವಿಲ್ಲವಾದರೆ ನಿಮ್ಮಲ್ಲಿಗೆ ಬಂದು ನಿಮ್ಮೊಡನೆ ಮಾತನಾಡಲಿಕ್ಕೆ ನಮಗವಕಾಶವನ್ನು ಕೊಡಬೇಕು ನಿಮ್ಮ ಸಿದ್ಧಾಂತ ಭಗವದ್ಗೀತೆಗೆ ಸಮ್ಮತವೆಂದು ನೀವು ಒಡಂಬಡಿಸಿದಲ್ಲಿ ನಾವು ನಿಮಗೆ ವಿರುದ್ಧವಾಗಿ ಯಾವ ಪ್ರಚಾರವನ್ನೂ ಮಾಡುವುದಿಲ್ಲ ಉಭಯರ ಚರ್ಚೆಯನ್ನು ಸಮಗ್ರವಾಗಿ ಪ್ರಕಟಿಸಲು ಏರ್ಪಾಟು ಮಾಡಬೇಕೆಂದು ಮಹಾತ್ಮರನ್ನು ಕೇಳಿಕೊಂಡಿದ್ದುದಕ್ಕೆ ಆ ವಿಚಾರವಾಗಿ ಸಂಪೂರ್ಣವಾಗಿ ಉತ್ತರವನ್ನು ಕೊಡದೆ ಸನಾತನರು ಬಂದಲ್ಲಿ ಅವರ ಕೂಡ ಮಾತನಾಡಲು ನಾನು ಸಂತೋಷಿಸುತ್ತೇನೆ ಎಂದು ಮಹಾತ್ಮರು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ನಾವು ಕೋರಿರುವ ವಿಷಯವನ್ನು ಮಹಾತ್ಮರು ಅಂಗೀಕರಿಸದಲ್ಲಿ ಅವರೊಡನೆ ಮಾಡುವ ಸಂಭಾಷಣವು ಉಭಯ ಪಕ್ಷದವರಿಗೂ ಅನುಕೂಲವಾಗಿರುವುದೇ ಎನಾ ಸುಮ್ಮನೆ ಹೇಳಿಗೆ ಮಾತನಾಡಿಕೊಂಡು ಬರುವುದರಿಂದ ಲಾಭ ಪ್ರಯೋಜನವೂ ಇರುವುದಿಲ್ಲ' ಎಂದು ಸ್ವಧರ್ಮ ಸ್ವರಾಜ್ಯ ಸಂಘದವರು ಮಹಾತ್ಮರಿಗೆ ಬರೆದಿರುತ್ತಾರೆ

ಇಂಡಿಯ ಇಂಗ್ಲೆಂಡ್ ಸಖ್ಯ

ಪಾರ್ಲಿಮೆಂಟಿನಲ್ಲಿ ಕನ್ಸರ್ವೆಟಿವ್ ಪಕ್ಷದ ಮೆಂಬರಾಗಿರುವ ಮುಕ್ತ ಮನಸ್ಸುಳ್ಳ ಕರ್ತವ್ಯವುಳ್ಳವರೆಂದು ಭಾವಿಸಲ್ಪಟ್ಟಿರುವ ಎಚ್ ಕೆ ಹೆನ್ಲೆರವರು ಭಾರತದೇಶಕ್ಕೆ ಬಂದು ಸ್ವಲ್ಪ ಕಾಲವಿದ್ದು ಸಂಚರಿಸಿ ಇಲ್ಲಿನ ಜನರ ಸ್ಥಿತಿಗತಿಗಳನ್ನೂ ಅಭಿಪ್ರಾಯವನ್ನೂ ಪ್ರತ್ಯಕ್ಷವಾಗಿ ನೋಡಿ ಕೇಳಿ ತಿಳಿದುಕೊಂಡು ಮರಳಿ ಸ್ವದೇಶಕ್ಕೆ ಈ ವಾರದಲ್ಲಿ ಹೊರಡುವವರಾಗಿರುತ್ತಾರೆ ಇವರು ಈ ಮಧ್ಯೆ ಮಹಾತ್ಮರಿಗೆ ಒಂದು ಲೇಖನವನ್ನು ಬರೆದು ಅದರಲ್ಲಿ "ಭಾರತ ಸಮಸ್ಯಾ ಪರಿಹಾರ ವಿಚಾರವಾಗಿ ನೀವು ಪಾರ್ಲಿಮೆಂಟಿನವರಿಗೇನಾದರೂ ಸಂದೇಶವನ್ನು ಕಳುಹುವುದಾದರೆ ನಾನು ಅದನ್ನು ಸಂತೋಷದಿಂದೊಪ್ಪಿಸುವೆನು ಈಗುಂಟಾಗಿರುವ ಭೇದವನ್ನು ಯೋಗಗೊಳಿಸಿ ಪುನಃ ತೃಪ್ತಿಕರವಾದ ಸಮಾಧಾನವನ್ನುಂಟುಮಾಡಬಲ್ಲವರು ನಿಮ್ಮ ವಿನಾ ಮತ್ತೊಬ್ಬರಿಲ್ಲವು ಅಂತಹ ಸಮಾಧಾನವು ಕುದುರಿದರೆ ಭಾರತ ದೇಶದಲ್ಲಿ ಸಂಪದ್ಯುಕ್ತವಾದ ನೂತನ ಶಕವಾರಂಭವಾಗುವುದು ಕಾಂಗ್ರೆಸಿನವರಾರೂ ಮೂರನೆ ರೌಂಡು ಟೇಬಲು ಸಭೆಯಲ್ಲಿ ಭಾಗಿಗಳಾಗದಿರುವುದು ಬಹಳ ಸಂತಾಪಕರವು ಅಂತಹ ಸಭೆಯ ಸಮಾಧಾನವನ್ನು ಒಪ್ಪುವುದಕ್ಕೆ ಅವರಿಗೆ ಅವಕಾಶವಿಲ್ಲದೆಹೋಗಿ ಅವರಾದರೂ ಒಡಂಬಡಿಕೆಯು ಕುದುರಿದರೂ ಕಾಂಗ್ರೆಸಿನವರ ಸಹಕಾರವು ದೊರಕದ ಹೊರತು ಅದು ಸರಿಯಾಗಿ ನೆರವೇರುವುದಿಲ್ಲ ನೀವು ಭಾರತ ದೇಶದ ಮುಂದಣ ಕಲ್ಯಾಣವನ್ನು ಮನಃಪೂರ್ವಕವಾಗಿ ಕೋರುತ್ತಿರುವರೆಂಬುದರಲ್ಲಿ ತಿಲಾಂಶವೂ ಸಂಶಯವಿಲ್ಲ ಆದುದರಿಂದ ಅಂತಹ ಅನುಕೂಲ ಫಲವನ್ನುಂಟುಮಾಡಲು ನೀವು ಇನ್ನೂ ಹೆಚ್ಚಾಗಿ ಸ್ವಾರ್ಥತ್ಯಾಗಮಾಡುತ್ತೀರೆಂದು ನಾನು ನಂಬಿರುತ್ತೇನೆ ನಾನು ಪ್ರತ್ಯಕ್ಷವಾಗಿ ತಮ್ಮನ್ನು ಸಂದರ್ಶಿಸಿದ್ದರೆ ನನಗೆ ಮಹಾನಂದವಾಗುತ್ತಿದ್ದಿತು ಆದರೆ ನನಗಂತಹ ಪುಣ್ಯಪ್ರಾಪ್ತಿಯಿಲ್ಲವು ನೀವು ರೌಂಡು ಟೇಬಲು ಸಭೆಯಲ್ಲಿ ಭಾಗಿಗಳಾಗಿದ್ದ ಹೊರತು ಈ ಸಮಸ್ಯಾ ಪರಿಷ್ಕಾರವೆಂದಿಗೂ ಆಗುವುದಿಲ್ಲ ಭಾರತದೇಶ ಚರಿತ್ರೆಯಲ್ಲಿ ಮುಖ್ಯತಮವಾದ ಈ ಘಟ್ಟದಲ್ಲಿ ಅಪಾರವಾದ ನಿಮ್ಮ ಧೀಶಕ್ತಿಯನ್ನು ಪ್ರಯೋಗಪಡಿಸಲಿಕ್ಕಿಲ್ಲವಾಗಿರುವುದಕ್ಕಾಗಿ ನಾನೂ ಬಹಳವಾಗಿ ಚಿಂತಿಸುತ್ತೇನೆ ನನ್ನಂತೆಯೇ ಅನೇಕ ಕೋಟಿ ಪ್ರಜೆಗಳು ಕೂಡ ಚಿಂತಿಸುತ್ತಿದ್ದಾರೆ ಎಂದು ತಿಳಿಸಿರುವರು

ಗುಲಾಬ್ ಚಂದ್‌ರವರ ದೋಷವಿಮುಕ್ತಿ

ವಾಲ್‌ಚಂದ್ ಹೀರಾಚಂದ್‌ರವರ ಸಹೋದರ ಗುಲಾಬ್ ಚಂದ್ ಹೀರಾಚಂದರವರು ಕಳೆದ ಜನವರಿ ತಿಂಗಳಿನಲ್ಲಿ ಆರ್ಡಿನೆನ್ಸು ಪ್ರಕಾರ ಸೆರೆಹಿಡಿಯಲ್ಪಟ್ಟು ಪಚಾಪುರದ ಜೈಲಿನಲ್ಲಿಡಲ್ಪಟ್ಟಿದ್ದರು ಇವರು ಬಂಧನದಿಂದ ಬಿಡಲ್ಪಡಬೇಕೆಂದೂ, ಬಿಡಲ್ಪಟ್ಟ 18 ಘಂಟೆಯೊಳಗ ಪೂರ್ಣಾ-ನವರಲ್ಲಿಗೆ ಒಂದು ಕಾಣಿಸಿಕೊಳ್ಳಬೇಕೆಂದೂ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಸೊಲ್ಲಾಪುರವನ್ನು ಪ್ರವೇಶಿಸ ಕೂಡದೆಂದೂ ಸೊಲ್ಲಾಪುರದ ಡಿ|| ಮೆಜಿಸ್ಟ್ರೇಟರು ಫೆಬ್ರವರಿ ತಾ|| 26 ರಲ್ಲಿ ಅಪ್ಪಣೆ ಮಾಡಿದರು ಬಿಡಾದ ಒಂದು ವಾರದಲ್ಲಿ ಗುಲಾಬ್ ಚಂದರವರು ಬಿಡಲ್ಪಟ್ಟರು ಇದಕ್ಕೆ ಮೊದಲೇ ಅಪರಾಧಿಯು ಡಿ|| ಮೆಜಿಸ್ಟ್ರೇಟರ ಅನುಮತಿಯನ್ನು ಪಡೆದು ಬೊಂಬಾಯಿಗೆ ಹೋಗಿ ಅಸ್ವಸ್ಥಳಾಗಿದ್ದ ತಮ್ಮ ಮಗಳನ್ನು ನೋಡಿಕೊಂಡು ಹಿಂದಿರುಗಿ ಬರುವಾಗ್ಗೆ ಮಾರ್ಗದಲ್ಲಿ ಸೊಲ್ಲಾಪುರದ ಸ್ಟೇಷನ್ನಿನ ಹತ್ತಿರ, ಅಪರಾಧಿಯು ತಮ್ಮ ಬಂಗಲೆಗೆ ಬಂದು ತಮ್ಮನ್ನು ಕಾಣಬೇಕೆಂದು ಡಿ|| ಮೆಜಿಸ್ಟ್ರೇಟರು ಮಾಡಿದ್ದ ಅಪ್ಪಣೆಯು ತಿಳಿಸಲ್ಪಟ್ಟುದರ ಮೇಲೆ ಅಪರಾಧಿಯು ಡಿ|| ಮೆಜಿಸ್ಟ್ರೇಟರ ಬಂಗಲೆಗೆ ಹೋಗಿ ಅವರನ್ನು ನೋಡಿದರು ಅಷ್ಟರಲ್ಲಿ ಇವರನ್ನು ಪೋಲೀಸರು ಸೆರೆ ಹಿಡಿದು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಪಡಿಸಲು ಆರ್ಡಿನೆನ್ಸು 21 ನೆಯ ಸೆಕ್ಷನ್ ಪ್ರಕಾರ 18 ತಿಂಗಳ ಕಠಿಣ ಸಜ ಮತ್ತು 2,000 ರೂ ಜುಲ್ಮಾನೆ ವಿಧಿಸಲ್ಪಟ್ಟರು ಅದರ ಮೇಲೆ ಅಪರಾಧಿಯು ಸೆಷನ್ಸ್ ಕೋರ್ಟಿಗೆ ಅಪೀಲು ಮಾಡಿಕೊಳ್ಳಲಾಗಿ ಜುಲ್ಮಾನೆಯು 1,000 ಕ್ಕಿಳಿಸಲ್ಪಟ್ಟಿತು ಇದರ ಮೇಲೆ ಬೊಂಬಾಯಿ ಹೈಕೋರ್ಟಿಗೆ ಅಪೀಲುಮಾಡಿದರಾಗಿ ಇಬ್ಬರು ನ್ಯಾಯಮೂರ್ತಿಗಳು ಅಪರಾಧಿ ಕಡೆಯ ವಕೀಲರ ವಾದವನ್ನು ಕೇಳಿ ಅಪರಾಧಿಯು ಡಿ|| ಮೆಜಿಸ್ಟ್ರೇಟರ ಅಪ್ಪಣೆಯ ಪ್ರಕಾರ ಸೊಲ್ಲಾಪುರವನ್ನು ಪ್ರವೇಶಿಸಿದುದು ತಪ್ಪಲ್ಲವೆಂದು ನಿರ್ಧರಿಸಿ ದೋಷಮುಕ್ತರನ್ನಾಗಿ ಮಾಡಿದರು

ಒಳದೇಶದ ವೃತ್ತಾಂತಗಳು

ಒಂದನೆಯ ಕೌನ್ಸಿಲರಾದ ರಾಜಮಂತ್ರಪ್ರವೀಣ ಮ|| ಕೆ ಮಾಧವರಾವ್‌ರವರ ಪುತ್ರಿ ಮಿಸ್ ಎಂ. ಬೇಬಾಯ್. ಬಿ.ಎ., ಬಿ.ಎಸ್‌ಸಿ., (ಲಂಡನ್) ರವರು 1 ವರ್ಷ ಕಾಲ ಪ್ರೊಬೇಷನ್ನಿನ ಮೇಲೆ ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರಾಗಿ ನಿಯಮಿಸಲ್ಪಟ್ಟಿರುತ್ತಾರೆ

ಬರುವ ಡಿಸೆಂಬರು ತಾ|| 1 ನೆಯ ಭಾನುವಾರ ಸಾಯಂಕಾಲ ಅರಕಲಗೂಡಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಪ್ರೋತ್ಸಾಹದಿಂದ ನಡೆಯುವ ದನಗಳ ಪ್ರದರ್ಶನದಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನಗಳು ಹಾಸನ ಡಿ|| ಡೆಪ್ಯುಟಿ ಕಮಿಷನರ್ ಮ|| ಟಿ. ಜಿ ರಾಮಯ್ಯರ್‌ರವರಿಂದ ಹಂಚಲ್ಪಡುವುವು

ಬೆಂಗಳೂರು ಸ್ಟಾಲ್‌ಜಾಜ್ ಕೋ-ಟಿ ಸಬ್ ಸ್ಟ್ಯಾಫ ವರಾಗಿದ್ದ ಮ|| ... ನಾರಾಯಣಸ್ವಾಮಿ ನಾಯುಡು, ... ಬಿ ಎ ... ಇತ್ತೀಚಿನ ... ಮೆಡಿಕಲ್ ... ಸೆಷನ್ನು ಜಾರಿ ಗೆ ಹೋಗಿಯೂ, ಥರ್ಡ್ ಗ್ರೇಡ್ ಮುನ್ಸಿಫರಾಗಿ ... ಮೂರ್ತಿ. ಬಿ.ಎ. ಎಲ್.ಎಲ್.ಬಿ ಯವರು ಬೆಂಗಳೂರು ಸ್ಟಾಲ್‌ಜಾಜ್ ಕೋರ್ಟಿನ ಆಫೀಸ್ ... ಮುನಸಿಫರಾಗಿಯೂ ನಿಯಮಿಸಲ್ಪಟ್ಟಿರುವರು

ಮೈಸೂರು ಸಂಸ್ಥಾನದ ಪ್ರಾಥಮಿಕ ಪಾಠಶಾಲೆಗಳ ಉಪಾಧ್ಯಾಯರ ಸಮ್ಮೇಳನವು ಬೆಂಗಳೂರು ನಗರದೊಳಗೆ ಬರುವ ಡಿಸೆಂಬರ್ ತಾ|| 20-21 ಮತ್ತು 22 ರ ಬದಲು ತಾ|| 21, 22 ಮತ್ತು 23 ರಲ್ಲಿ ನಡೆಯಲು ಗೊತ್ತಾಗಿರುತ್ತದೆಂದೂ ಶೃಂಗೇರಿ ಜಗದ್ಗುರುಗಳು ಈ ಸಮ್ಮೇಳನವು ಜಯಪ್ರದವಾಗಿ ನಡೆಯಬೇಕೆಂದು ಆಶೀರ್ವದಿಸಿ ಇದರ ವೆಚ್ಚಕ್ಕಾಗಿ ದ್ರವ್ಯ ಸಹಾಯವನ್ನು ಅನುಗ್ರಹಿಸಿರುತ್ತಾರೆಂದೂ ಸಮ್ಮೇಳನದ ಸೆಕ್ರೆಟರಿಯವರು ತಿಳಿಸಿರುತ್ತಾರೆ

ಟಿ ನರಸೀಪುರ ತಾ|| ಬನ್ನೂರು ಸಮೀಪದಲ್ಲಿರುವ ರಂಗಸಮುದ್ರದಲ್ಲಿ ಒಂದು ಭೂಮಿಯ ಸ್ವಾಧೀನದ ವಿಚಾರವಾಗಿ ಹಿಂದೂಗಳೂ ಮಹಮ್ಮದೀಯರೂ ಪರಸ್ಪರ ಜಗಳ ಮಾಡಿ ಗುದ್ದು ಕುಡುಗೋಲುಗಳಿಂದ ಹೊಡೆದಾಡಿದರು ಇದರಿಂದ 5-6 ಮಹಮ್ಮದೀಯರಿಗೂ 2-3 ಹಿಂದೂಗಳಿಗೂ ಪೆಟ್ಟುಗಳಾಗಿ ಅವರೆಲ್ಲರೂ ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಹೊಂದುತ್ತಿರುವರಾಗಿಯೂ ಈ ಕಲಹಕ್ಕೆ ಸೇರಿದ್ದವರಲ್ಲಿ ಕೆಲವರು ಬಂಧಿಸಲ್ಪಟ್ಟಿರುವುದಾಗಿಯೂ ಕೇಳುತ್ತೇವೆ

ಹಾಸನ ಡಿ|| ಅರಕಲಗೂಡು ತಾ|| ರಾಮನಾಥಪುರದಲ್ಲಿ ಪದ್ಧತಿಯ ಪ್ರಕಾರ ಸುಬ್ರಾಯನ ಷಷ್ಠಿ ದಿವಸ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ರಥೋತ್ಸವ ನಡೆಯುವಾಗ್ಗೆ ಆರ್ಯ ವೈಶ್ಯಮಹಾಜನರ ಅಭಿವೃದ್ಧಿಗಾಗಿ ವೈಶ್ಯಾ ಕಾನ್ಫರೆನ್ಸು ಬರುವ ಡಿಸೆಂಬರು ತಾ|| 2 ರಿಂದ 6 ರ ವರೆಗೆ ಶ್ರೀ ಬ್ರಹ್ಮತಂತ್ರ ಪರಕಾಲ ಸ್ವಾಮಿಯವರ ಸನ್ನಿಧಾನದಲ್ಲಿ ನಡೆಯುವುದು ... ಬಿಟ್ಟುಕೊಟ್ಟಿರುವ ಸತ್ರವು ... ರುವುದರಿಂದ ವೈಶ್ಯ ಕುಲಾಭಿಮಾನಿಗಳು ಆ ಕಾಲಕ್ಕೆ ದಯಮಾಡಿಸಬೇಕೆಂದೂ, ಬರತಕ್ಕವರ ವಾಸಕ್ಕೂ ಊಟಕ್ಕೂ ಉಚಿತವಾದೇರ್ಪಾಟು ಮಾಡಲ್ಪಟ್ಟಿರುವುದೆಂದೂ ಅರಕಲಗೂಡಿನ ಮ|| ಎಸ್ ಕೃಷ್ಣಸ್ವಾಮಿಯವರು ತಿಳಿಸಿರುತ್ತಾರೆ.

ರಾಜಧಾನಿಯ ಕ್ಷಯರೋಗದ ಆಸ್ಪತ್ರೆಯಲ್ಲಿ ಜನರಲ್ ವಾರ್ಡಿನಲ್ಲಿರಲು ಪ್ರತಿ ರೋಗಿಯೂ ದಿನವೊಂದಕ್ಕೆ 2 ರೂ ಸಂತೆಯೂ, ಪ್ರತ್ಯೇಕ ವಾರ್ಡಿನಲ್ಲಿರಲು 4 ರೂ ಸಂತೆಯೂ ಕೊಡಬೇಕಾಗಿದ್ದಿತು. ಈಗ ಜನರಲ್ ವಾರ್ಡಿಗೆ 1 ರೂ ಸಂತೆಯೂ ಪ್ರತ್ಯೇಕ ವಾರ್ಡಿಗೆ 2 ರೂ ಸಂತೆಯೂ ಕೊಡಬೇಕೆಂದು ಪ್ರಭುತ್ವದವರಿಂದ ವಿಧಾಯಕ ಮಾಡಲ್ಪಟ್ಟಿದೆ ಇದರಿಂದ ಮಧ್ಯ ತರಗತಿಯ ರೋಗಿಗಳಿಗೆ ತಕ್ಕಮಟ್ಟಿಗೆ ಉಪಕಾರವಾಯಿತೆಂದು ಹೇಳಬಹುದು. ಆದರೆ ಈ ಆಸ್ಪತ್ರೆಯ ಯಾವ ವಾರ್ಡಿನಲ್ಲೂ ಸ್ಥಳ ಸಿಕ್ಕುವುದು ಬಹಳ ಪ್ರಯಾಸವಾಗಿದೆ, ಇದು ನಿವಾರಣೆಯಾದಲ್ಲಿ ರೋಗಿಗಳಿಗೆ ಮಹೋಪಕಾರವೂ, ಆಸ್ಪತ್ರೆಯ ಸ್ಥಾಪನೋದ್ದೇಶ ಸಾರ್ಥಕವೂ ಆಗುವುದರಲ್ಲಿ ಅನ್ಯಂತವಿಲ್ಲ

ವಿದ್ಯಾಭೂಷಣ ಮ|| ವಿ ಎಸ್ ಸಂಜೀವರಾಯರು ಬೆಂಗಳೂರು ಸೆಷನ್ಸ್ ಜಡ್ಜಿಯವರ ಅಪೀಲು ತೀರ್ಮಾನದ ಮೇಲೆ ಹೈಕೋರ್ಟಿಗೆ ಅಪೀಲು ಮಾಡಿಕೊಂಡಿದ್ದ ಅಪೀಲಿನಲ್ಲಿ ಕಾರಾಗೃಹವಾಸ ಶಿಕ್ಷೆಯು ತಪ್ಪಿಸಲ್ಪಟ್ಟು 300 ರೂ ಅರ್ಥದಂಡವು ಸ್ಥಿರಗೊಳಿಸಲ್ಪಟ್ಟಿದ್ದಿತು ಈ ಅರ್ಥ ದಂಡವನ್ನು ಮನ್ನಿಸಬೇಕೆಂದೂ ಒಂದುವೇಳೆ ಇದು ಸಾಧ್ಯವಾಗದಿದ್ದಲ್ಲಿ ಹಾಗೆ ಮಾಡಲು ಪ್ರಭುತ್ವದವರಿಗೆ ಶಿಫಾರಸನ್ನು ಮಾಡಬೇಕೆಂದೂ ಮ|| ಸಂಜೀವರಾಯರು ಹೈಕೋರ್ಟಿಗೆ ಬಿನ್ನೈಸಿಕೊಂಡಿದ್ದುದರ ಮೇಲೆ ಮೊದಲು ಈ ಅಪೀಲು ವಿವಾದವನ್ನು ತೀರ್ಮಾನಿಸಿದ ಜಸ್ಟಿಸ್ ಮ|| ರಾಮಚಂದ್ರರಾಯರು ತಾವು ಮೊದಲು ಮಾಡಿರುವ ತೀರ್ಮಾನವನ್ನು ಬದಲಾಯಿಸಲು ಅವಕಾಶವಿಲ್ಲವೆಂದು ಅರ್ಜಿಯನ್ನು ತಿರಸ್ಕರಿಸಿಬಿಟ್ಟರು.

ಅರಮನೆಯ ಇಂಗ್ಲೀಷು ಬ್ಯಾಂಡು ಮಾಸ್ಟರಾಗಿದ್ದ ಹೆನ್ರಿಸ್ ಎಂಬವರು ಹರ್ಬರ್ ರೋಡಿನ ಮೇಲ್ಗಡೆ ಅಮಲ್ದಾರ್ ದಾವೂದ್ ಖಾನ್ ರೋಡು, ಬೆಂಗಳೂರು-ನೀಲಗಿರಿ ರೋಡು ಮತ್ತು ಹರ್ಬರ್ ರೋಡುಗಳು ಕೂಡುವ ಸ್ಥಳದಲ್ಲಿ ಮಿ|| ಡೆಪ್ರೆಷರವರ ಬಂಗಲೆಗೆ ಒತ್ತಾಗಿರುವ ಸರ್ಕಲ್ಲಿಗೆ, ಇಂಗ್ಲಿಷ್ ಮತ್ತು ಇಂಡ್ಯಾ ಸಂಗೀತಗಳನ್ನು ಮಿಶ್ರಮಾಡಿ ಬಹಳ ಹೆಸರು ವಾಸಿಯನ್ನು ಹೆನ್ರಿಸ್‌ರವರು ಪಡೆದಿದ್ದುದರಿಂದ ಅವರ ಹೆಸರನ್ನಿಡಬೇಕೆಂದು ಮುನ್ಸಿ|| ಕೌನ್ಸಿಲರು ಮಿ|| ಡಬ್ಲ್ಯು. ಎಚ್. ಬಿಯೋಬಾಲ್ಡ್‌ರವರು ಒಂದು ಸೂಚನೆಯನ್ನು ತಂದು ಬಹಳ ಸಾಹಸಪಡುತ್ತಿದ್ದರು ಇವರು ಅಂಥಾ ಪ್ರಖ್ಯಾತ ಪುರುಷರಾಗಿರದೆ ಅರಮನೆಯಲ್ಲಿ ಸಾಮಾನ್ಯ ನೌಕರರಾಗಿದ್ದುದರಿಂದ ಸರ್ಕಲ್ಲಿಗೆ ಅವರ ಹೆಸರನ್ನಿಡಕೂಡದೆಂದು ಚರ್ಚೆಯು ನಡೆಯುತ್ತಿದ್ದು ಇದೇ ತಾ|| 26 ನೆಯ ಶನಿವಾರ ನಡೆದ ಕೌನ್ಸಿಲ್ ಮೀಟಿಂಗಿನಲ್ಲಿ ಸರ್ಕಲ್ಲಿಗೆ ಹೆನ್ರಿಸ್‌ರವರ ಹೆಸರನ್ನಿಡುವಷ್ಟು ಪ್ರಖ್ಯಾತ ಪುರುಷರಾಗಿ ಹೆನ್ರಿಸ್‌ರವರಿರದೆ ಸಾಮಾನ್ಯರಾಗಿದ್ದರೆಂದು ಅರಮನೆಯ ಪರವಾಗಿ ಪ್ರತಿನಿಧಿಗಳಾಗಿರುವ ಮ|| ಎಂ. ರಾಮರಾಯರು ವಾದಿಸಿದುದರ ಮೇಲೆ ಮಿ|| ಥಿಯೋಬಾಲ್ಡ್‌ರವರು ತಮ್ಮ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡರು.

ಗತ ವ್ಯವಹಾರ

ಪ್ರತ್ಯೇಕ ಪತ್ರವ್ಯವಹಾರಗಳ ಅಭಿಪ್ರಾಯಗಳಿಗೆ ಸಂಪಾದಕರು ಜವಾಬ್ದಾರರಲ್ಲ. ತಿಳಿಯಬೇಕಾದವರು ಸಂಪಾದಕರು

ಬೊಂಬಾಯಿಯ ವಿದ್ಯಾರ್ಥಿಸಮೂಹ.

ಈ ತಿಂ 17 ನೇ ತಾರೀಖಿನಲ್ಲಿ ಬೊಂಬಾಯಿಯ ವೀರಶೈವ ಸಮಾಜದವರ ವತಿಯಿಂದ ನೆರವೇರಿದ ಛಾತ್ರಾಲಯಕ್ಕೆ ಸಹಾಯಾರ್ಥ ವಿದ್ಯಾರ್ಥಿಗಳ ಉತ್ಸಾಹದ ಸಮಾರಂಭ ಜರುಗಿತು. ಸ್ಥಳದಲ್ಲಿ ಎಲ್ಲರಿಗೂ ಸ್ವಾಗತ ಕೋರಿ ಸಭೆಯಲ್ಲಿ ವೀರಶೈವ ಛಾತ್ರಾಲಯವನ್ನು ಸ್ಥಾಪಿಸಬೇಕೆಂದು ಅನೇಕರು ಸೂಚಿಸಿದರು. ಸಭೆಗೆ ಶ್ರೀಮಂತರು ಸಹಾಯ ಮಾಡುವುದಾಗಿ ಹೇಳಿದರು. ಇದರ ಪೋಷಣೆಗಾಗಿಯೂ 60,000 ರೂ ಗಳನ್ನು ಕೊಟ್ಟರು. ವೀರಶೈವ ಸಮಾಜದ ಜಾಗೃತಿ ಮಾಡಲೇಬೇಕೆಂದು ಅನೇಕರು ಮಾತನಾಡಿದರು, ಜೀರಿಗೆಯವರು, ಅಂದಕೋಳರು, ಸಾಹುಕಾರರು, ಭೂಸ್ವಾಮಿಗಳು, ವೊದಲಾದವರು ಭಾಷಣ ಮಾಡಿ ಇತರರು ಈ ವಿದ್ಯಾಭಿಮಾನಿಗಳ ಆಸಕ್ತಿಯ ಮಾಡಬೇಕೆಂದು ಭಾಷಣಗಳನ್ನು ಮಾಡಿ ಧರ್ಮ ಕಾರ್ಯವನ್ನು ಅಭಿನಂದಿಸಿದರು.

ಪ್ರತ್ಯಕ್ಷದರ್ಶಿ.

ಕರ್ನಾಟಕ ಸಾಹಿತ್ಯ ಸಮ್ಮೇಳನವು.

ಈ ವರ್ಷದ ಕನ್ನಡ ಸಾಹಿತ್ಯ ಸಮ್ಮೇಳನವು ಧಾರವಾಡದಲ್ಲಿ ಕೂಡುವ ವೀರಶೈವ ಮಹಾಸಭೆಯ ಜೊತೆ ನಡೆಯಬೇಕೆಂದು ಕೆಲವರು ಸೂಚನೆಯನ್ನು ಮಾಡಿರುತ್ತಾರೆ. ಇದು ಬಹಳ ಯೋಗ್ಯವಾದ ಸೂಚನೆಯು. ಮಹಾಸಭೆಯ ಜೊತೆ ಸಾಹಿತ್ಯ ಪರಿಷತ್, ಮಹಿಳಾ ಪರಿಷತ್, ಪತ್ರಿಕೋದ್ಯಮಿಗಳ ಸಭೆ, ವೀರಶೈವ ಪಂಡಿತರ ಸಭೆ, ಕರುಣ ಸಮ್ಮೇಳನ ಮೊದಲಾದವು ಆಸಕ್ತಿಯಿಂದ ನಡೆಯುತ್ತವೆ. ವೀರಶೈವರು ಕನ್ನಡಿಗರು, ಕನ್ನಡವೆಂದರೆ ವೀರಶೈವರು, ವೀರಶೈವರೆಂದರೆ ಕನ್ನಡಿಗರು ಎಂದು ನಾವು ಅಭಿಮಾನ ಪಡುತ್ತೇವೆ. ಅಭಿಮಾನಕ್ಕೆ ಸರಿಯಾಗಿ ಕಾರ್ಯವನ್ನು ಮಾಡಬೇಕಾಗುತ್ತದೆ. ಸಾಹಿತ್ಯ ಸಮ್ಮೇಳನದಲ್ಲಿ ಭಾಗವನ್ನು ತೆಗೆದುಕೊಂಡ ವೀರಶೈವರು ಬಹಳ ಕಡಿಮೆಯೆಂದು ಹೇಳಬೇಕಾಗುತ್ತದೆ. ವೀರಶೈವ ಸಾಹಿತ್ಯವು ಕನ್ನಡದಲ್ಲಿ ಅತಿ ಶ್ರೇಷ್ಠವಾದುದು. ಈ ಭಾವನೆಯು ಸಲುವಾಗಿ ಪ್ರಯತ್ನವನ್ನು ಮಾಡಬೇಕು. ಆದ್ದರಿಂದ ಮಹಾಸಭೆಯ ಜೊತೆಗೆ ಸಾಹಿತ್ಯ ಸಮ್ಮೇಳನವನ್ನು ಮಾಡಿದರೆ ಎಲ್ಲಾ ಪ್ರಾಂತದ ಸಾಹಿತ್ಯ ಪಂಡಿತರೂ ಸಭೆಗೆ ಬಂದ ವೀರಶೈವ ಪ್ರಮುಖರಿಗೂ ಪರಸ್ಪರ ವಿಚಾರವಿನಿಮಯವಾಗಿ ಒಳ್ಳೇ ಲಾಭವಾಗುವ ದರಲ್ಲಿ ಸಂದೇಹವಿಲ್ಲ. ಹೆಚ್ಚು ಸಭೆಗಳಾದಷ್ಟು ಮಹಾಸಭೆಗೆ ಗೌರವವೇ ಇರುತ್ತದೆ. ಯಾರು ಮಾಡತಕ್ಕವರೆಂದು ಉದಾಸೀನತೆಯನ್ನು ಕಾಣಿದರೆ ಆವರಿಂದ ಯಾವ ಕೆಲಸವಾಗುವುದಿಲ್ಲ. ಆದ್ದರಿಂದ ಮಹಾಸಭೆಯ ಮುಖಂಡರು ವಿಚಾರಮಾಡಿ ಬೇಗನೆ ಸಾಹಿತ್ಯ ಸಮ್ಮೇಳನವನ್ನು ಮಾಡಬೇಕೆಂದು ನನ್ನ ಸೂಚನೆಯು.

ಚಂದ್ರಶೇಖರಶಾಸ್ತ್ರಿ,

ವ್ಯಾಕರಣತೀರ್ಥ ಗಂಗಾಧರಕಾಲೇಜು

ವೀರಶೈವ ಮಹಾಸಭೆಯು.

(ಶೇ. ಚಂದ್ರಶೇಖರ ಶಾಸ್ತ್ರೀ ವ್ಯಾಕರಣತೀರ್ಥ, ಪ್ರಿನ್ಸಿಪಾಲ ಗಂಗಾಧರ ಸಂಸ್ಕೃತ ಕಾಲೇಜು, ಹುಬ್ಬಳ್ಳಿ)

ವೀರಶೈವ ಮಹಾಸಭೆಯು ನಿರೆಯುವಕಾಲಾವಧಿಯು ಒಂದೇ ತಿಂಗಳ ಉಳಿದರೂ ಇನ್ನೂ ಅಧ್ಯಕ್ಷರ ಚರ್ಚೆಯೇ ನಡೆದಿರುವದು ವೀರಶೈವರ ಪತ್ರಿಕೆಯ ವಿಚಾರದಿಂದ ತಿಳಿದುಬರುತ್ತದೆ. ಯಾವ ಕಾರ್ಯದಲ್ಲಿಯೂ ಆಗಲಿ ಇನ್ನರಲ್ಲಿಯ ಮುಕ್ತಿ ಶಕ್ತಿಯೇ ಇಲ್ಲವೆಂದವಳೆ. ಇದರಿಂದ ಮಹಾಸಭೆಯ ಕಾರ್ಯಗಳಾಗುವದೊಂದಕ್ಕೆ ಗಿರಣಿ ಸಮಾಜಕ್ಕೆ ಹಾನಿಯೇ ಆಗುವುದು. 31 ಒಳ್ಳೆ ವರುಷ ಕಾಲದಲ್ಲಿ ಮೊನ್ನೆ ಆಂತರಿಕದಲ್ಲಿ ನಡೆದ ಅನೇಕ ಪರಿಷತ್ತಲ್ಲಿ ದಿಲ್ಲಿಯ ಅಸೆಂಬ್ಲಿಯೊಳಗೆ 14 ಜನ ವೀರಶೈವ ಸದಸ್ಯರು ಇರಬೇಕೆಂದು ನಿಶ್ಚಯಿಸಿದೆ. ಅಸ್ಸೆಂಬ್ಲಿಯಲ್ಲಿ ವೀರಶೈವರ ಹಕ್ಕು ಸ್ಥಾನಗಳ ಬಗ್ಗೆ ವಾದ ನಡೆಯುತ್ತಿದೆ. ಇದು ಯಾವದರ ಫಲವೆ? ಸ್ವಾರ್ಥ ಸಾಧಕರು ಸಮಾಜದಲ್ಲಿ ಕಲಹ ಗಲಭೆಗಳನ್ನೆಬ್ಬಿಸಿ ಅನೈಕ್ಯದ ದಾರಿಯನ್ನು ಹಿಡಿದುದರ ಫಲವು. ಇದರಿಂದ ವೀರಶೈವ ಮಹಾಸಭೆಯನ್ನು ಕೂಡಿಸಿ ಸ್ವಲ್ಪವಾದರೂ ಸಮಾಜದ ಕಾರ್ಯಗಳನ್ನು ಮಾಡಿ ಮಹಾಸಭೆಯ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವದು ಪ್ರತಿಯೊಬ್ಬ ಲಿಂಗಾಯತರ ಕರ್ತವ್ಯವಾಗಿದೆ. ವೀರಶೈವ ಮಹಾಸಭೆಯ ಸ್ಥಾಪಕರಾದ ಶ್ರೀ ಹಳಕಟ್ಟಿಯವರು ಅಧ್ಯಕ್ಷರಾಗಿ ಆರಿಸಿರುವರು. ಅವರ ಕೆಲವರು ಇದರ ಮೇಲೆ ಟೀಕೆಯನ್ನು ಮಾಡಿ ಸುಮ್ಮನೆ ಗೊಂದಲವನ್ನೆಬ್ಬಿಸಲಿಕ್ಕೆ ಹವಣಿಸುವರು. ೨೦ ವರ್ಷಗಳಿಂದ ಮಹಾಸಭೆಯು ಮೂಲೆಗೆ ಬಿದ್ದಿದೆ. ಅದನ್ನು ಹೇಗಾದರೂ ಮಾಡಿ ಪುನಃ ಪ್ರಾರಂಭಮಾಡುವುದು ಯೋಗ್ಯವಿರುತ್ತದೆ. ಪ್ರತಿವರ್ಷ ಮಹಾಸಭೆಯು ನಡೆಯಲಿಕ್ಕೆ ಉತ್ತರದ ಮಹಾಜನಾದಿ ಪ್ರಾಂತದವರಾಗಲೇ ತೆಕ್ಕಣ ಚೀಲ ದವರಾಗಲಿ ಅಧ್ಯಕ್ಷರಾಗಲಿಕ್ಕೆ ಸಮಯವು ಸಿಗುತ್ತದೆ. ಲೀಮಿತ ಸರ್ಕಾರಿ ಮತ್ತು ಉದಾಹರಣಮಾಡಿದೆ. ಈ ವರ್ಷ ಹಳಕಟ್ಟಿಯವರೇ ಯೋಗ್ಯರಿರುತ್ತಾರೆ. ಸಮಾಜದಲ್ಲಿ ಅವರು ಅನೇಕ ಕಾರ್ಯಗಳನ್ನು ಮಾಡಿಯ ಪಾಸುತ್ತಲೇ ಇರುತ್ತಾರೆ. ಗುಣ್ಯಳೆ ಏಕಪ್ರಕಾಶಿಯಿಂದ ನೋಡಿದರೆ ನನ್ನ ಕೈ ಸಮಾಜದಲ್ಲಿ ಅವರನ್ನು ಕೇಳನ್ನು ಮಾಡಿದವರು ಒಬ್ಬರೂ ಇಲ್ಲ. ದೊಡ್ಡವರನ್ನು ಬಿಟ್ಟು ನಾಲ್ಕು ಜನ ಕೇವಲ ಶ್ರೀಮಂತರೂ ದೊಡ್ಡ ಅಧಿಕಾರಿಗಳೂ ಆಗಿದ್ದ ಮಾತ್ರಕ್ಕೆ ಮಹಾಸಭೆಯ ಅಧ್ಯಕ್ಷತೆಯು ಸಿಕ್ಕತಕ್ಕವರೂ ಯಾರು ಸಮಾಜ ಸೇವೆಯನ್ನು ಮಾಡುತ್ತಾರೆಯೋ ಅವರಿಗೆ ಮಾತ್ರ ಆ ಸ್ಥಾನವು ದೊರೆಯಬೇಕು. ಅಧ್ಯಕ್ಷ ಪದವಿಯು ಗೌರವದ ಸ್ಥಾನವೆಂಬ ಭಾವನೆಯನ್ನು ಬಿಡಬೇಕು. ಆದ ಒಂದ ರಸ್ತೆ ಸರಿ ಒಂದು ವರ್ಷದ ವರೆಗೆ ಅಧ್ಯಕ್ಷರಾದವರು ಸಮಾಜ ಸೇವೆಯನ್ನು ಮಾಡಬೇಕಾಗುತ್ತದೆ. ಆಗಾಗ ಸಭೆಯಲ್ಲಾದ ವಿಷಯಗಳನ್ನು ಆನುಸರಿಸಿ ತಂದುಕೊಂಡು ಪ್ರಯತ್ನ ಮಾಡಬೇಕಾಗುತ್ತದೆ. ಅಧ್ಯಕ್ಷರಾಗದೆ ಸಭೆಯೊಳಗೆ ಬಂದು ಕುಳಿತ ಮಾತ್ರಕ್ಕೆ ಮಹಾಸಭೆಯು ಸಫಲವಾಗದು. ಅಧ್ಯಕ್ಷರು ಬೇರೆ ಈ ವರ್ಷ ಯೋಗ ಕಲ್ಪಿಸಿದಂತೆ ಸಮಾಜವನ್ನು ಯೋಗ್ಯ ಮಾರ್ಗಕ್ಕೆ ಹಚ್ಚುವಂತಹ ಮುಖಂಡರು ನಮ್ಮ ಸಮಾಜಕ್ಕೆ ಬೇಕಾಗಿರುತ್ತದೆ. ಆದ್ದರಿಂದ ಸ್ವಾಗತ ಸಮಿತಿಯವರು ಪೂರಾ ಆಲೋಚಿಸಿ ಹಳಕಟ್ಟಿಯವರನ್ನೇ ಆರಿಸುವರೆಂದು ನಂಬುತ್ತೇನೆ. ಮಹಾಸಭೆಯಿಂದ ಏನೂ ಆಗಿಲ್ಲವೆಂದು ಹೊಲಿಯನ್ನು ಹೊರಡಿಸುತ್ತಿರುವವರು ಮುಂದೆ ಬಂದು ಕಾರ್ಯಮಾಡುವವರು ಮೊದಲಾದ ಕೆಲಸವು ಕೈಕೊಳ್ಳುವುದು. ಕೆಲವು ದಿವಸಗಳಲ್ಲಿಂದಲೂ ಮಹಾಸಭೆಯ ಬಾಲಕರು ಬಾಹಾರಿಷ್ಟ್ರ್ಯ ಉದ್ಯೋಗದ ಮೊದಲಾದ ದ್ಯಾನಗಳ ಜನಗಳಿಗೆ ಹಾಯಿಂತ ಭಾಷೆಗಳಲ್ಲಿ ಹಸ್ತಪತ್ರಗಳ ಮುಖಾಂತರವಾಗಿಯೂ ಪ್ರಸಿದ್ಧಿಪಡಿಸಬೇಕಲ್ಲದೆ ಮಹಾಸಭೆಯು ಒಳ್ಳೇ ಯಶಸ್ವಿಯಾಗುವಂತೆ ಮಾಡಬೇಕಾಗಿದೆ. ಇಲ್ಲವಿದ್ದರೆ ವೀರಶೈವ ಸಮಾಜದ ಅವನತಿಯು ಹೆಚ್ಚಾಗಿ ಸಮಾಜವು ನಾಶವಾಗ

ಛಿತ್ತವು ಚಕ್ರವು ಮತ್ತು ಪ್ರತಿಯೊಬ್ಬ ಲಿಂಗಾಯತರು ಸಮಾಜಾಭಿಮಾನವನ್ನು ತಾಳಿ ಕಾರ್ಯವನ್ನು ವಿಶಾಲದೃಷ್ಟಿಯಿಂದ ಸ್ಥಿರವಾದ ಕಡೆಗೆ ಲಕ್ಷ್ಯವನ್ನು ಕೊಟ್ಟು ಮಹಾಸಭೆಯ ಕಾರ್ಯಗಳನ್ನು ಮಾಡಬೇಕು. ಹೆಚ್ಚಾಗಿಯೂ ವೀರಶೈವರೆಲ್ಲರೂ ಒಂದೇ ಎಂಬುವ ಭಾವನೆಯು ಬಾರದ ಹೊರತು ಉಳಿದ ಸಮಾಜಗಳ ಸೂಚಕೆಯಲ್ಲಿ ನಮ್ಮ ಸಮಾಜವು ಏರಲಾರದು. ಆದ್ದರಿಂದ ಪ್ರತಿಯೊಬ್ಬನೂ ಈ ವರ್ಷದ ಮಹಾಸಭೆಯು ಯಶಸ್ವಿಯಾಗಲಿಕ್ಕೆ ಸ್ವಯ ಸ್ಫೂರ್ತಿಯನ್ನು ತೋರಬೇಕು.

ಅಸ್ಪೃಶ್ಯೋದ್ಧಾರ

(ಶ್ರೀ ಗಣಪತಿಶಾಸ್ತ್ರಿ ಪ್ರೊಫೆಸರು, ಹುಬ್ಬಳ್ಳಿ)

ಮಹಾತ್ಮರ ವೆಲ್ಲನ ಉಪವಾಸ ವ್ರತವ ಫಲಕಾರಿಯಾಗಿ ಪೂರೈಸಿದ ನಂತರ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಅಸ್ಪೃಶ್ಯರ ಸುಧಾರಣೆಯ ಕಾರ್ಯಕ್ಕೆ ಒಳ್ಳೇ ಒತ್ತಡವಿದ ಸಂಗರುವ ಸಂಗತಿಯು ಸ್ಪಷ್ಟವೇ. ಈ ಜಗತ್ತಿನಲ್ಲಿ ಮುಸಲ್ಮಾನರ ಕರೆದ ಸದರತಕ್ಕೆ ಏರುತ್ತಿರುವುದು ಸರಿಯಷ್ಟೆ. ಇಂಥ ಯುಗಪರಿವರ್ತನೆಯ ಕಾಲದಲ್ಲಿ ಸಹ ನಾವು ಶ್ರೇಷ್ಠ ವರ್ಣದವರು, ಸನಾತನ ಧರ್ಮ ಪರಾಯಣರು ಎಂದು ಡಂಭವನ್ನು ಕೊಚ್ಚಿಕೊಳ್ಳುವ, ಹಲ ಕೆಲವು ಪಂಡಿತಮನ್ಯರ ಸಂಕುಚಿತ ಹೃದಯದ ಜನರು ಪಟ್ಟಣಗಳಲ್ಲಿ ಇನ್ನೂ ಅನಾಚಾರ, ಅನ್ಯಾಚಾರ, ಧರ್ಮಸಾಂಕರ್ಯ ವೆಂಬುದಾಗಿ ಮನಬಂದಂತೆ ಗುರುಗುಟ್ಟುತ್ತ ಮುಗ್ಧರೂ, ಸರಳಹೃದಯರೂ ಆದ ಅಲ್ಪ ಜನರ ಮನಸ್ಸಿನಲ್ಲಿ ಬೇರೆ ಬೇರೆ ಪ್ರಕಾರದ ಬುಧ್ಧಿಭ್ರಮೆ ಹುಟ್ಟಿಸುತ್ತಿರುವರಾದ್ದರಿಂದ ತಿಳಿದುಬರುತ್ತದೆ. ಕೇವಲ ಸ್ವಪ್ರಯೋಜನಪ್ರಿಯರು ಅನುಯಾಯಿಗಳಿಂದ ಬಳಲುವ ಮಹಾತ್ಮರ ಈ ಪತಿತೋದ್ಧಾರ ಕಾರ್ಯದಲ್ಲಿ ಅವರ ಶಾಸ್ತ್ರಗಳ ಹೇತುಕತೊಳ್ಳತಕ್ಕವರು ಇದರ ಪುರಾವೆಗಳನ್ನು ತಿಳಿಯುವ. ಈ ಧರ್ಮ ಆಚಾರಕ್ಕೆ ಗುರಿಯಾಗುವುದು ಮಾತ್ರ ಖಂಡಿತವು.

ಹಿಂದುಗಳಲ್ಲಿ ಒಳ್ಳೇ ಶ್ರೇಷ್ಠ ವರ್ಗದವರೂ ಪರಮಪವಿತ್ರರೆಂದವರೂ ಸುಸ್ವಭಿಷ್ಠ ಮನೆತನದವರೂ ಹಿಂದು ಮುಖಂಡರೂ ಸನಾತನ ಧರ್ಮ ಪರಾಯಣರೂ ಆದ ಪಂ. ಮದನಮೋಹನ ಮಾಲವಿಯರೇ ಮೊದಲಾಗಿ ಮಹಾವಿದ್ವಾಂಸರು ಶೂದ್ರ ಅಸ್ಪೃಶ್ಯರಿಗಾಗಿ ದೇವಾಲಯಕ್ಕೆ ಹೋಗಲು ಅಸ್ಪೃಶ್ಯತೆಯ ನಿವಾರಣೆಯೇ ಪ್ರತಿಪಾದಿತವಾದ ಈ ಪವಿತ್ರ ಪತಿತೋದ್ಧಾರ ಕಾರ್ಯವನ್ನು ಕೈಕೊಂಡಿರುವ ಸನಾತನ ಸಂಗೆ ಇದನ್ನು ವಿರೋಧಿಸುವ ಕೆಲವು ಮಂಡಲಗಳು ಮನುಷ್ಯರಾಗೆನೇ ಸಂಬಂಧಿಸಿದವರಲ್ಲವೆಂದು ಹೇಳಬೇಕು. ಇಂಥವರಿಗೆ ಉಚ್ಚ ವರ್ಣದವರೆಂಬ ಹಕ್ಕು ಮಾತ್ರ ಒಳ್ಳೇ ಹುಚ್ಚುತನವು ಕರ್ಮಕ್ಕೆ ಹೊರೆಯವರಿಗಿಂತ ಹುಟ್ಟು ಹೊರೆಯನ್ನು ಮನು ಎಂಬಂತೆ ಎಲ್ಲ ಉಚ್ಚನೀಚ ಸಮಾಜಗಳಲ್ಲಿಯೂ ಪ್ರತ್ಯೇಕ ಸ್ಪೃಶ್ಯತೆಯ ಆಚಾರ, ವಿಚಾರ, ವ್ಯವಹಾರ ಮಂತ್ರಾದುಗಳಲ್ಲಿ ಕೆಟ್ಟ ಹೊರತನದಿಂದ ಸಾಧಿಸುವನ್ನು ಸಾಗಿಸುವ ಎಷ್ಟೋ ಜನರಿಗೆ ಸಮಾಜವು ಯಾವ ನಿಯಮ ನಿರ್ಬಂಧಗಳನ್ನು ಹಾಕಿಸದೇ ಇರುವಾಗ ಹುಟ್ಟು ಹೊರೆಯಿರಾಗಿದ್ದರೂ ಹಗಲಿರುಳು ಹಿಂದು ದೇವತೆಗಳನ್ನು ನೆನೆಯುತ್ತ ಹಿಂದುಗಳ ಸೇವೆಯನ್ನೇ ಮಾಡುತ್ತ ಹಿಂದು ಸಮಾಜಕ್ಕೆ ನೀಲಿನಂತೆ ಬೆನ್ನಟ್ಟಿ ಬಂಡಕ್ಕೆ ಜನಾಂಗವನ್ನು ಕನಿಕರವಿಲ್ಲದೆ ಹಿಂಡಿ ಆಹಾರಕ್ಕಾಗಿ ಕಕ್ಕರಿಕ ಬಿಸುಡುವದು ಎಂಥ ಕೃತಘ್ನತನವು!

ವಾಪನಗಳನ್ನು ತಿರಸ್ಕರಿಸಿ, ಪರಂತು ಪಾಪಿಗಳನ್ನು ಮಾತ್ರ ಕರುಣೆಯಿಂದ ರಕ್ಷಿಸು ಎಂಬ ಅಭಿಪ್ರಾಯದ ಅನೇಕ ಶ್ರುತಿ, ಸ್ಮೃತಿ ವಚನ ಪುರಾಣಾದಿ ಪ್ರಮಾಣಗಳು ದೊರೆಯುವವು. ನಾವು ದೇವ ಮಂದಿರಗಳಲ್ಲಿ ಮೂರ್ತಿ ಪರಮಾತ್ಮನನ್ನು (ಪತಿತಪಾವನ) ದೀನದಯಾಳು (ಪತಿತ ಪಾವನ) ಪತಿತೋದ್ಧಾರಕ ಮುಂತಾಗಿ ಅನೇಕ ವಿಶೇಷಣಗಳಿಂದ ಸ್ತುತಿಸುವ ಹರಿಯುವಂತೆ ತೋರುತ್ತಿರುವೆವು. ಪರಂತು ಆಯಾ ವಿಶೇಷಣಗಳನ್ನು ಸಾರ್ಥಕಗೊಳಿಸುವ ಕಾರ್ಯಧುರಂಧರರಾದ ಮಹಾತ್ಮರ ವಿಷಯದಲ್ಲಿ ಮಾತ್ರ ಆಕ್ಷೇಪಣೆಗಳು ಬರುವುದೆಂದರೆ ಎಂಥ ಅವಿವೇಕತನವು ಸಂಗತಿಯು. ಇದೆಲ್ಲವನ್ನು ಬಹುಸೂಕ್ಷ್ಮವಾಗಿ ಪರಿಶೀಲಿಸಿ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರು ಕಾಲಚಕ್ರಕ್ಕೆ ಸರಿಯಾಗಿ ನ್ಯಾಯವೂ ಶಾಸ್ತ್ರಸಮ್ಮತವೂ ಆದ ಈ ಅಧಿಕಾರೋದ್ಧಾರ ಮಹಾ ಕಾರ್ಯ ವಿಷಯವನ್ನು ಮುಂಚಾಗ್ರತೆಯಾಗಿ ಕೈಕೊಂಡರೆ ಒಳ್ಳೆ ಸುತ್ತವೂ ಅನುಕರಣೀಯವೂ ಹೌದು. ಸಮಾಜಕ್ಕೆ ಸಂತೋಷದಾಯಕವೂ ಆಗುತ್ತದೆ. ಸದರಿ ಜಗದ್ಗುರುಗಳು, ಆಗಾಗಲೆ ಬಹುಭಾಗದ ನನ್ನ ಪ್ರಾರ್ಥನೆಯ ಮೇರೆಗೆ ಅಲ್ಪಸಮಯದಿಂದ ಈ ಪವಿತ್ರ ಕಾರ್ಯವನ್ನು ಕೈಕೊಂಡಿರುವ ಸಂಗತಿಯು ವರ್ತಮಾನ ಪತ್ರಿಕೆಗಳ ಮುಖಾಂತರ ನಿರರ್ಗಳಕ್ಕೆ ಬಂದಿರುವದು. ಇನ್ನು ಮೇಲೆ ಇದಕ್ಕೆ ಸಂಬಂಧಪಟ್ಟ ಈ ವಿಷಯದ ಕಡೆಗೆ ಗಮನಕೊಡತಕ್ಕವರು ಮಹಾ ಸನ್ನಿಧಾನದವರಿಲ್ಲಿ ಪ್ರಾರ್ಥಿಸಿಕೊಳ್ಳುವ ಇರಬಹುದು. ಆದರಂತೆ ಶ್ರೀ ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದ ಪ್ರತಿಷ್ಠಿತ ಮಠಾಧಿಪತಿಗಳು, ಸನಾತನ ಧರ್ಮಪ್ರವರ್ತಕರೂ ಪರಮ ಪವಿತ್ರವೂ ಅವಶ್ಯಕವೂ ಆದ ಈ ಕಾರ್ಯವನ್ನು ಶೀಘ್ರವಾಗಿ ಕೈಕೊಂಡು ಹಿಂದು ಧರ್ಮ ಸಂರಕ್ಷಣೆಯ ಕೀರ್ತಿಗೆ ಪಾತ್ರರಾಗಬೇಕೆಂಬುದಾಗಿ ಸೂಚಿಸುವೆನು. ಸಂಕುಚಿತ ಹೃದಯರಾದ ಹಿಂದುಗಳೇ! ಇನ್ನಾದರೂ ಎಚ್ಚರಗೊಂಡು ಗಾಂಧಿ ಮಹಾತ್ಮರು ಮಾಡಿದ ಉಪದೇಶವನ್ನು ಬಿಟ್ಟು ಪ್ರಕಾಶದಲ್ಲಿ ನಿಮ್ಮ ನಿಮ್ಮ ಕಾರ್ಯಗಳನ್ನು ಸಾಧಿಸಿರಿ. “ಯತ್ರ ವಿಶ್ವಂ ಭವತ್ಯೇಕನೀಡಂ” ಎಂಬ ನೀತಿವಾಕ್ಯವನ್ನಾದರೂ ಮನದಲ್ಲಿ ಧರಿಸಿ ಅಸ್ಪೃಶ್ಯೋದ್ಧಾರ ಕಾರ್ಯದಲ್ಲಿ ಮುಂದಾಗಿ ಧಾವಿಸಿರಿ. ಇದೇ ನನ್ನ ಕೊನೆಯ ವಿನಯದ ಸೂಚನೆಯು.

ಓಂ, ಶಾಂತಿಃ, ಶಾಂತಿಃ, ಶಾಂತಿಃ

ಶ್ರೀಮನ್ಮಹಾರಾಜರವರ ಸಂಸ್ಕೃತಪಾಠಶಾಲೆಯ ಪಾಂಚರಾತ್ರಾಗಮ ತರಗತಿ

ಸ್ವಾಮಿ, ಸುಮಾರು ಹತ್ತು ವರುಷಗಳ ಹಿಂದೆ ಮೇಲ್ಕಂಡ ಆಗಮ ತರಗತಿ ಏರ್ಪಾಡಾಯಿತು. ಇದರ ಉದ್ದೇಶವೇನೆಂದರೆ —ಮೈಸೂರು ದೇಶದ ದೇವಾಲಯಗಳಲ್ಲಿ ಅರ್ಚಕರ ಕೆಲಸವನ್ನು ಮಾಡುವವರಿಗೆ ಇಷ್ಟು ರಾಜ್ಯಕ್ಕೆ ಅನುಕೂಲವಾಗುವಂತೆ ನಡೆಸುತ್ತ ಸರ್ಕಾರದ ಪ್ರಜಾಹಿತಕ್ಕೆ ಸೈಬರುವ ಹೆಚ್ಚು ಆದರ ಸಂಗವರ ಸ್ವಸ್ಥ ಉಂಟಾಗಲಿ ಎಂಬುವದಾಗಿಯೂ, ಈ ಫಲವು “ಅರ್ಚಕಸ್ಯ ಪ್ರಭಾವೇಣ ಅರ್ಚನಸ್ಯಾತಿಶಾಯಿನಾತ್” (ಅರ್ಚಕನ ಪ್ರಭಾವದಿಂದ ದೇವಸನ್ನಿಧ್ಯವು ಹೆಚ್ಚು) ಎಂಬ ವಾಕ್ಯವನ್ನು ಅನುಸರಿಸಿ ಪೂಜಕರ ತನ್ನೊಳಗೂ ಹಿತವಾಯಿಂದರೇ ಉಂಟಾಗಬೇಕಾಗಿರುವದರಿಂದ ಇವರ ಸಂತತಿಯವರನ್ನು ಸಂಪೂರ್ಣ ವಿದ್ಯಾವಂತರನ್ನಾಗಿ ಮಾಡಿ ನಡುವೆ ಆದಿಂದಲೇ ಈ ತರಗತಿ ಏರ್ಪಡಿಸಲ್ಪಟ್ಟಿತು. ಆದರೆ ಯಾವ ಉದ್ದೇಶದಿಂದ ಈ ತರಗತಿ ಏರ್ಪಟ್ಟಿತೋ ಅದಕ್ಕೆ ವಿರುದ್ಧವಾಗಿ ಅರ್ಚಕಸಂತತಿಯವರಲ್ಲದೆ ಬೇರೆ ವರ್ಗದವರು, ಕೋಲೀಯ ಶ್ರೀವೈಷ್ಣವರು, ಮಾಧ್ವಬ್ರಾಹ್ಮಣರು, ಸರಿ ಬಾಲಕರು ಸಂಕೇತಯನರು ಮೊದಲಾದ ಕೇವಲ ಹೊಟ್ಟೆಪಾಡಿನವರಿಷ್ಟೆ ಗೋಸ್ಕರವೇ ಓದತಕ್ಕವರಿಗೆ ಅನುಕೂಲವಾಯಿತೇ ವಿನಾ ಮೈಸೂರು ದೇಶದಲ್ಲಿ ಪ್ರಸಿದ್ಧವಾದ ಬೇಲೂರು, ಮೇಲುಕೋಟೆ, ಶ್ರೀರಂಗಪಟ್ಟಣ, ಮೈಸೂರು

ಮೊದಲಾದ ದೇವಸ್ಥಾನಗಳ ಅರ್ಚಕಬಾಲಕರಿಗೆ ವಿದ್ಯಾಪ್ರಯೋಜನವಾಗಲು ಯುಕ್ತವಾಗಲಿಲ್ಲ. ಅವರು ವಿದ್ಯಾಭ್ಯಾಸಮಾಡಿರುವಂತೆ ಆಗಿಲ್ಲ. ಹೀಗೆ ಇಂದ ಆಗುವವರಿಗೆ ಸಾಹಿತ್ಯ ರಚನೆ ಮಾಡುವವರು ವಿರಳ. ಇನ್ನು ಸಾವಿರಾರು ರೂಪಾಯಿಗಳ ಖರ್ಚು ಮಾಡಿದ್ದರೂ ಪ್ರಯೋಜನವಾಗಲಿಲ್ಲ. ಅಲ್ಲದ ವಿದ್ಯಾರ್ಥಿಗಳು ಅಂದರೆ ಪ್ರಸ್ತುತ ಪ್ರತ್ಯಕ್ಷ ಉದ್ಯೋಗ ಸ್ಥಳಗಳಿಗೆ ಹೋಗಿ ಅವರಿಗೆ ಪ್ರಧಾನ ನೈವೇದ್ಯ ಆಗುವಷ್ಟು ಕಲಿತುಕೊಳ್ಳುವ ಭಾಗ್ಯ ಸಿದ್ಧಾಂತಗಳ ಪಾಂಚರಾತ್ರಾಗಮ ದೊರೆತ ಕಾಲಗಳಿಲ್ಲ. ಅವರಿಗೆ ನಿತ್ಯ ಶಾಸ್ತ್ರಗಳನ್ನು ಕಲಿಸುವುದು ಅಗತ್ಯವಿಲ್ಲ. ಅವರು ಕೈಸೇರಿದ ಈ ಶಾಸ್ತ್ರಗ್ರಂಥಗಳನ್ನು ಅನೇಕರು ನೋಡಿಯೇ ಇಲ್ಲ. ಮತ್ತೆ ಅವರಿಗೆ ಸೂಚನೆ ಎಷ್ಟು ಆದರೂ ಅನೇಕರಿಗೆ ಅದರ ಸಾಂಪ್ರದಾಯಿಕ ಜ್ಞಾನವೂ ಇಲ್ಲ. ನಾನು ಇದನ್ನು ಹೇಳಿದರೆ ಸಮಯ ಬಂದಾಗ ರುಜುವಾತುಮಾಡಿಕೊಡುತ್ತೇನೆ. ಕೆಲವು ದಿವಸಗಳಲ್ಲಿ ಆಯುರ್ವೇದ ಸಭೆಯವರು ಟೌನ್‌ಹಾಲಿನಲ್ಲಿ ಪಬ್ಲಿಕ್ ಲೆಕ್ಚರ್ ಕೊಡುವಾಗ್ಗೆ ಪ್ರಪಂಚದ ಧರ್ಮರಾಜ್ಯಗಳಲ್ಲಿ ಒಂದಾದ ಈ ಗೋಪಾಲ ಭೂಪಾಲರ ಪರ್ಯಂತವಾಗಿ ಅನುಷ್ಠಿಸಲ್ಪಡುತ್ತಿರುವ ಪುರಾತನಕಾಲದಿಂದಲೂ ನಡೆದು ಬಂದಿರುವ ಶ್ರೇಷ್ಠವಾದ ವಿಗ್ರಹಪೂಜೆಯ ಧರ್ಮವನ್ನು ಶುದ್ಧವಾಗಿ ಕಾಪಾಡಿ ಕಲ್ಯಾಣ ಮಾಡ್ದ ಪೂಜೆಗೊಳ್ಳಲು ಕೆಟ್ಟುಹೋಗಬೇಡಿರಿಯೆಂದು ಹೇಳುತ್ತಿರುವದನ್ನು ಪಾಠಶಾಲೆಯ ಆಗಮ ಪಂಡಿತರು ಕೇಳಿ ಹಟಕ್ಕೆ ಬಗಿರುವದು ಅಷ್ಟೇ ಅಲ್ಲದೆ ಈ ಆಗಮಶಾಸ್ತ್ರಾಧ್ಯಯನದಿಂದ ಪ್ರಕೃತ ಸರ್ಕಾರದಲ್ಲಿ ಹುದ್ದೆ ದೊರೆಯುವದೆಂದು ಆಸೆಗಳು ಹುಟ್ಟಿದ್ದರೂ ಇದರಿಂದ ಸಾಧ್ಯವಾಗುವುದಿಲ್ಲ. ಕೇವಲ ಪಾಠಶಾಲೆಯ ವ್ಯಾಪ್ತಿಗೆ ಮಾತ್ರವೇ ಸಹಕಾರಿಯಾದ ಅರ್ಚಕ ಹೆಸರು ಇಟ್ಟು ಪ್ರಾಚೀನ ಪಾಂಚರಾತ್ರಾಗಮವನ್ನು ಮಾರುವವರಿಗೆ ಯಾವ ಪ್ರಯೋಜನವೂ ಆಗಿಲ್ಲದ ಈ ದುಂದುವೆಚ್ಚವನ್ನು ಮಾಡುವುದು ಕ್ಷೇಮವಲ್ಲ. ಈ ತರಗತಿಯ ಉಪಾಧ್ಯಾಯರುಗಳಿಗೆ ಪಾಂಚರಾತ್ರಾಗಮ ಪರಿಗತಿಗೆ ಸಂಪೂರ್ಣವಾದದ್ದನ್ನು ಹೇಳುವಷ್ಟು ಆಗಮಶಾಸ್ತ್ರಪರಿಶ್ರಮವಿಲ್ಲ. ಇವರನ್ನು ಪರೀಕ್ಷೆಗೆ ಕಳುಹಿಸಿ ಪ್ರಾಕ್ಟಿಕಲ್ ಟ್ರೈನಿಂಗ್ ಮಾಡಿಸಿದ್ದರೆ ಆಗುತ್ತಿತ್ತು. ಇವರು ಹೋಗಿದ್ದ ಸ್ಥಳಗಳಲ್ಲಿ ಅರ್ಚಕರನ್ನು ವಿಚಾರಿಸುವಲ್ಲಿ ಇವರಿಗೆ ಯಾವ ಪ್ರಯೋಜನವೂ ಆಗಲಿಲ್ಲವೆಂದು ತಿಳಿದು ಬಂದಿದೆ. ಅಲ್ಲದೆ ಇವರಿಗೆ ತಕ್ಕ ಉಪದೇಶವನ್ನು ಕೊಡುವ ಅರ್ಚಕಪಂಡಿತರು ಅಲ್ಲಲ್ಲಿ ದೊರೆಯಲಿಲ್ಲವೆಂದು ತಿಳಿದುಬಂದಿದೆ. ಇವರ ಪರೀಕ್ಷೆಯ ರಿಪೋರ್ಟು ರಹಸ್ಯವಾಗಿರುವುದು, ಇವರಿಗೆ ತಿಳಿಯುವಂತೆ ಇಲ್ಲ. ಇವರಿಗೂ ಇವರನ್ನು ಕರವೇತು ಮಾಡುವವರಿಗೂ ದುಡ್ಡಿನ ಸಂಬಳ ಸಲ್ಲುತ್ತಿದೆ. ಇದು ಹೇಗಾದರೂ ಇರಲಿ, ಈಗ ಪಾಠಶಾಲೆಯ ಪ್ರವಚನಗಳಾದರೂ ಸರಿಯಾಗಿ ನಡೆಯುತ್ತಿವೆಯೇ ಎಂದರೆ ಹಿಂದಿನ ಕರ್ತೃಗಳಿಂದಲ್ಲಿ ಇದ್ದ ಗ್ರಂಥಗಳನ್ನು ತೆಗೆದು ನಿಷ್ಪ್ರಯೋಜನವಾದ ಅಲ್ವಾರ್ ಮೊದಲಾದ ಆಧುನಿಕರ ವ್ಯಾಖ್ಯಾನವನ್ನು ಒಳಗೊಂಡು ಅಲ್ಪಸ್ವಲ್ಪ ಸಮಯಾಚಾರಗಳಾದವನ್ನು ಮಾತ್ರ ಪ್ರತಿಪಾದಿಸುವ ವಿಚಾರಸಾರವಿಹೀನವಾದ ಟೆಕ್ಸ್ಟ್ ಆಗಿ ಇಟ್ಟು ಕಾಲಹರಣ ಮಾಡುತ್ತಿದ್ದಾರೆ. ಪಾಂಚರಾತ್ರಶಾಸ್ತ್ರವು ಒಂದುವರೆ ಕೋಟಿ ಗ್ರಂಥವುಳ್ಳದ್ದಾಗಿ 220 ಸಂಹಿತೆಯನ್ನು ಒಳಗೊಂಡಿದೆ. ಇದರಲ್ಲಿ ಯಾವದಾದರೂ ಎರಡು ವಿದ್ಯಾರ್ಥಿಗಳಿಗೂ ಪ್ರಯೋಜನಕರವಾದ ಸಂಹಿತೆಗಳನ್ನು ಅವುಗಳ ವ್ಯಾಖ್ಯಾನಗಳನ್ನು ಪಾಠ ಹೇಳದೆ ಒಂದೆರಡು ಆಗಮಪ್ರಾಮಾಣ್ಯ ರಕ್ಷೆಗ್ರಂಥಗಳನ್ನು ಪರ್ಯಾಲೋಚನೆ ವರೆಗೂ ಪಾಠ ಹೇಳುವುದರಿಂದ ಕಾಲಕಳೆಯುವರೇ ವಿನಾ ವಿದ್ಯಾರ್ಥಿಗಳಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಹಿಂದಿನ ಕರ್ತೃಗಳಿಂದಲೇ ವ್ಯಾಖ್ಯಾ ನಸಮೇತವಾದ ಸಂಹಿತೆಯಾಗಲೀ ಭೂತಪಾಲಕ್ಷಣ ವಿಗ್ರಹಕಲ್ಪಾದಿ ಗ್ರಂಥ ವಾಗಲೀ ಪಾಠವೇಳದೆ ಇದ್ದುದು ಪಾಠಪ್ರವಚನ ತೋರಿಕೆಯ ವಿಚಾರವಾಗಿ ಸ್ಪಷ್ಟವಾಗಿ ತೋರಿಬರುವದು. ಇದರ ಅರ್ಚಕರಾಗಲು ಯಾವ ವ್ಯವಸ್ಥೆ ಇಲ್ಲದ ಇದ ಹೊಂದು ವರ್ತಮಾನ ವಿಚಾರವಾದಲ್ಲಿ ಈಗ ಪರೀಕ್ಷೆಗೆ ಕೊಟ್ಟಿರುವದರಲ್ಲಿ ಕೂಡ ಆಗಮಶಾಸ್ತ್ರದ ಒಂದು ಅಧ್ಯಾಯಕ್ಕಾದರೂ ಅರ್ಥಮಾಡುವಷ್ಟು ಪಾಂಡಿತ್ಯ ಇರುವುದಿಲ್ಲವೆಂದು ಕೋರುತ್ತೇನೆ. ಅಂಥಾ ಪಂಡಿತರಿಗೆ ಹೇಗೋ ಕೊಟ್ಟದ್ದಾರೆ. ಶಾಸ್ತ್ರೀಯವಾದ ಪೂಜಾವಿಧಾನ ಪೂಜ್ಯರ ಅಗ್ನಿಕಾರ್ಯ ತಿಳಿದಿರುವಂತೆ ಕಾಣುವದಿಲ್ಲ. ಹಿಂದೊಂದು ವೇಳೆ ಪರೀಕ್ಷೆ ನಡೆಯುವ ಕಾಲದಲ್ಲಿ ಒಬ್ಬ ಪರೀಕ್ಷಕರು ಇದೇ ಅಭಿಪ್ರಾಯಪಟ್ಟಿದ್ದಾರೆ. ಮುಂದೆ ಹೀಗೆಯೇ ನಿಷ್ಪ್ರಯೋಜನವಾಗಿ ನಡೆಯುತ್ತಿದ್ದರೆ ಸರ್ಕಾರದ ಹಣವು ವ್ಯರ್ಥವಾಗುವುದರಿಂದ ಶೀಘ್ರದಲ್ಲೇ ಶ್ರೀ ಕೌನ್ಸಿಲ್ ಮೆಂಬರುಗಳೂ, ಪ್ರಜಾ ಪ್ರತಿನಿಧಿ ಸಭೆಯವರೂ ಇದನ್ನು ತಮ್ಮ ತಮ್ಮ ಸಭೆಯಲ್ಲಿ ವಿಚಾರಕ್ಕೆ ತಂದು ಈ ನಿಷ್ಪ್ರಯೋಜನವಾದ ದುಂದುವೆಚ್ಚನ್ನು ವಜಾಮಾಡಿಸಿ ಈ ವೆಚ್ಚವನ್ನು ಬೇರೆ ಯಾವದಾದರೂ ಪ್ರಜೆಗಳ ಉಪಯೋಗಕಾರ್ಯಕ್ಕೆ ಉಪಯೋಗಿಸುವಂತೆ ಮಾಡುವರೆಂದು ನಂಬಿದ್ದೇನೆ.

ಸರ್ಕಾರದ ಹಿತಚಿಂತಕ

ವೀರಶೈವ ಮಹಾಸಭೆ

ಹುಬ್ಬಳ್ಳಿಯ “ಲೋಕಮತ” ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಗುಂಡಪ್ಪಾ ಸಿದ್ಧರಾಮಪ್ಪಾ ರಾವಾಡಿ, ವೊರಟಗಿಯವರು ಮಹಾಸಭೆಯ ಅಧ್ಯಕ್ಷಸ್ಥಾನವನ್ನು ಈ ಸಾರಿ ಯಾರಿಗೆ ಕೊಡಬೇಕೆಂಬ ವಿಷಯವಾಗಿ ಒಂದು ಲೇಖನವನ್ನು ಬರೆದು ತಮ್ಮ ಅಭಿಪ್ರಾಯವನ್ನು ಹೊರಗೆಡಹಿರುವರು. ಈ ಲೇಖನದಲ್ಲಿ ಮೊದಲು ಅವರು ಇಂದಿನ “ಇಕ್ಕಟ್ಟಿನ ಬಿಕ್ಕಟ್ಟಿನ” ಪರಿಸ್ಥಿತಿಯನ್ನು ಕುರಿತು ವಿವರಿಸಿ, ಪ್ರಕೃತದ ಮಹಾಸಭೆಯ ಅಧ್ಯಕ್ಷರು ಎಂಥವರಿರಬೇಕೆಂಬುದನ್ನು ತಿಳಿಸಿರುವರು. ವಿಜಾಪುರದ ರಾವ್‌ಸಾಹೇಬ ಪಿ. ಜಿ. ಹಳಕಟ್ಟಿಯವರ ಹೆಸರನ್ನು ಸೂಚಿಸಿರುತ್ತಾರಲ್ಲದೆ ಈ ಮಹನೀಯರು ಇದುವರೆಗೆ ಮಾಡಿರುವ ಸಮಾಜಸೇವೆಯನ್ನು ಹದಿನಾರು ಅಂಕೆಗಳನ್ನು ಹಾಕಿ ಬೇರೆ ಬೇರೆಯಾಗಿ ವಿವರಿಸಿರುತ್ತಾರೆ. ಅವುಗಳೆಲ್ಲವನ್ನು ಇಲ್ಲಿಯೂ ವಿವರಿಸುತ್ತ ಕೊಡುವುದು ಅನವಶ್ಯಕವಾಗುವುದು.

ಮೇಲ್ಕಂಡ ಲೇಖದೊಳಗೆ 1 ರಿಂದ 12 ರ ವರೆಗಿನ ಅಂಕೆಗಳಲ್ಲಿ ಕಾಣಿಸಿರುವ ವಿಷಯಗಳು ಸಮಾಜ ಮುಖಂಡರೆನಿಸಿಕೊಂಡಿರುವ ಯಾವ ನಾಸವರೊಬ್ಬ ವ್ಯಕ್ತಿಯು ಮಾಡತಕ್ಕ ಕಾರ್ಯಗಳಾಗಿರುವವೇ ವಿನಃ, ಅವುಗಳಲ್ಲಿ ಅಂತಹ ವಿಶೇಷವೇನೂ ತೋರುವುದಿಲ್ಲ. ಅನಿಲ ವೀರಶೈವ ಸಮಾಜದ ಪ್ರತಿನಿಧಿ ಸಂಸ್ಥೆಯಾದ ವೀರಶೈವ ಮಹಾಸಭೆಯ ಅಧ್ಯಕ್ಷಪದವಿಯ ಸನ್ಮಾನವು ದೊರೆಯಬೇಕಾದರೆ ಆ ವ್ಯಕ್ತಿಯಲ್ಲಿ ಏನಾದರೊಂದು ವೈಶಿಷ್ಟ್ಯ ಗುಣವಿರಬೇಕು, ಅಕಾಂಡ ವಿಶಿಷ್ಟವಾದ ಸಮಾಜಸೇವೆಯೊಂದು ನಿರ್ದಿಷ್ಟ ರವಾಗಿರಬೇಕು. ಹಾಗಿದ್ದರೆ ಮಾತ್ರ ಆ ವ್ಯಕ್ತಿಗೊಂದು ಸನ್ಮಾನ, ಮಹಾಸಭೆ ಗೊಂದು ಭೂಷಣ, ಸಮಾಜಕ್ಕೊಂದು ಕಲ್ಯಾಣ, ಶ್ರೀಯುತ ಹಳಕಟ್ಟಿಯವರ ಇಂತಹ ವೈಶಿಷ್ಟ್ಯಯುಕ್ತವಾದ ಕಾರ್ಯಗಳನ್ನು ಆ ಲೇಖಕರು ಈ ಕೆಳಗೆ ಅಂಕಿತ ನಮೂದಿಸಿರುವ ——

